॥ ಶ್ರೀಮದ್ಧನುಮದ್ಭೀಮಮಧ್ವಾಂತರ್ಗತ ಶ್ರೀರಾಮಕೃಷ್ಣವೇದವ್ಯಾಸಾತ್ಮಕ
ಶ್ರೀಲಕ್ಷ್ಮೀಹಯಗ್ರೀವಾಯ ನಮಃ ॥

ಭಾವಿಸಮೀರ ಶ್ರೀವಾದಿರಾಜತೀರ್ಥ ವಿರಚಿತ ಕನ್ನಡ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯ

ಸಂಪುಟ ೨

ಅಧ್ಯಾಯ ೧೧

ಶ್ರೀಕೃಷ್ಣಚರಿತೇ ಅಂಶಾವತರಣಃ

ಈ ಹನ್ನೊಂದನೇ ಅಧ್ಯಾಯದಲ್ಲಿ ವಂಶಾವಳಿ ಹೇಳತದೆ. ಬ್ರಹ್ಮದೇವರಿಗೆ ಮರೀಚಿ, ಅತ್ರಿ, ಅಂಗೀರಸ, ಪುಲಸ್ತ್ಯ, ಪುಲಹ, ಕ್ರತು, ವಸಿಷ್ಠ ಇವರೇ ಏಳು ಮಂದಿ ಮಕ್ಕಳು. ಇವರೊಳಗೆ ಮರೀಚಿ ದೆಸಿಯಿಂದ ಸೂರ್ಯನ ವಂಶಾವಳಿ ನಡದದೆ. ಮರೀಚಿಗೆ ಕಶ್ಯಪ, ಕಶ್ಯಪಗೆ ವಿವಸ್ವತ ಎಂಬ ಸೂರ್ಯ, ವಿವಸ್ವತಗೆ ವೈವಸ್ವತ, ವೈವಸ್ವತಗೆ ಇಕ್ಷ್ವಾಕುರಾಯ, ಆತನ ವಂಶದಲ್ಲಿ ದಶರಥರಾಯ, ಅಲ್ಲಿ ಸಾಕ್ಷಾತ್ ನಾರಾಯಣನೇ ರಾಮನಾಗಿ ಅವತರಿಸಿದ್ದಾನೆ. ಈ ಪ್ರಕಾರ ಸೂರ್ಯ ವಂಶ ನಡದದೆ.

ಇನ್ನು ಚಂದ್ರವಂಶ—ಚಂದ್ರನು ಅತ್ರಿಋಷಿಯ ಕಣ್ಣಿನಿಂದ ಹುಟ್ಟಿದ್ದಾನೆ. ಚಂದ್ರಗೆ ಬುಧ, ಬುಧನು ಇಳೇ ಎಂಬ ಹೆಂಗಸಿನ ಭೋಗ ಮಾಡಲಿಕ್ಕೆ, ಅಲ್ಲಿ ಪುರೂರವ ಹುಟ್ಯಾನೆ. ಪುರೂರವ ಊರ್ವಶಿ ಎಂಬ ಅಪ್ಸರಸ್ತ್ರೀ ಭೋಗ ಮಾಡಲಿಕ್ಕೆ ಆಯುರಾಯ ಹುಟ್ಟಿದ. ಆಯುರಾಯಗೆ ನಹುಷರಾಯ, ನಹುಷಗೆ ಯಯಾತಿರಾಯ, ಯಯಾತಿಗೆ ಇಬ್ಬರು ಹೆಂಡರು. ಅವರಲ್ಲಿ ನಾರಾಯಣನ ಪಾದದಲ್ಲಿ ಮುಖ್ಯ ಭಕ್ತಿಯುಳ್ಳಂಥ ಐದು ಮಂದಿ ಮಕ್ಕಳು ಹುಟ್ಟಿದರು. ಹ್ಯಾಂಗಂದರೆ, ಶುಕ್ರಾಚಾರ್ಯರ ಮಗಳು ದೇವಯಾನೀ ಒಬ್ಬ ಹೆಂಡತಿ, ವೃಷಪರ್ವನೆಂಬ ದಾನವನ ಮಗಳು ಶರ್ಮಿಷ್ಠಾ ಎಂಬಾಕಿ ಒಬ್ಬ ಹೆಂಡತಿ, ಈ ಪ್ರಕಾರ ಇಬ್ಬರು ಹೆಂಡರು. ದೇವಯಾನಿಯಲ್ಲಿ ಯದುರಾಯ, ತುರ್ವಸುರಾಯ, ಶರ್ಮಿಷ್ಠೆಯಲ್ಲಿ ದ್ರುಹ್ಯರಾಯ, ಅನುರಾಯ, ಪುರುರಾಯ ಈ ಪ್ರಕಾರ ಐದು ಮಂದಿ ಮಕ್ಕಳು ಹುಟ್ಟಿದರು. ದೇವಯಾನಿಯ ಜ್ಯೇಷ್ಠಪುತ್ರ ಯದುರಾಯನ ವಂಶದಲ್ಲಿ, ಕಾರ್ತವೀರ್ಯಾರ್ಜುನ ದೊಡ್ಡ ಚಕ್ರವರ್ತಿ, ಪ್ರಿಯವ್ರತರಾಯನೇ ಮೊದಲಾದ ಚಕ್ರವರ್ತಿಗಳೊಳಗೆ ಎಣಿಕಿಗೆ ಬಂದಾನೆ. ದತ್ತಾತ್ರೇಯನಾಮಕ

ನಾರಾಯಣನ ಪ್ರಸಾದದಿಂದ ಅಣಿಮಾದಿ ಸಾಮರ್ಥಿಯುಳ್ಳಾತ. ಅಂಥ ಕಾರ್ತವೀರ್ಯಾರ್ಜುನನ ವಂಶದಲ್ಲಿ, ನಾರಾಯಣನನ್ನೇ ಆಶ್ರಯವಾಗಿ ಉಳ್ಳಂಥ ಯಾದವರು ಹುಟ್ಯಾರೆ. ಅಲ್ಲಿ ಸಾಕ್ಷಾತ್ ಪರದೇವತಿ ಕೃಷ್ಣಾವತಾರವಾಗೇದೆ.

ಇನ್ನು ಪಾಂಡವರ ಉತ್ಪತ್ತಿ ಹೇಳಬೇಕಾಗಿ ಶರ್ಮಿಷ್ಠಳ ಕನಿಷ್ಠಪುತ್ರನಾದಂಥ ಪುರುರಾಯನ ವಂಶದಲ್ಲಿ, ಕಾರ್ತವೀರ್ಯಾರ್ಜುನನಿಗೆ ಸದೃಶರಾದಂಥ, ಹರಿಪ್ರಿಯರಾದಂಥ, ದುಷ್ಮಂತ ಭರತಚಕ್ರವರ್ತಿ ಹುಟ್ಟಿದರು. ದುಷ್ಮಂತ ಭರತರ ವಂಶದಲ್ಲಿ ಕುರುರಾಯ ಹುಟ್ಟಿದನು. ಕುರುರಾಯನ ವಂಶದಲ್ಲಿ ಪ್ರತೀಪರಾಯ, ಪ್ರತೀಪರಾಯಗೆ ಅಗ್ನಿತ್ರಯಸದೃಶಕಾಂತಿಯುಳ್ಳ ಮೂರು ಮಂದಿ ಮಕ್ಕಳು ಹುಟ್ಟಿದರು. (ಅವರು ದಾರು ಎಂದರೆ, ಆವಹನೀಯ, ಗಾರ್ಹಪತ್ಯ, ದಾಕ್ಷಿಣಾಗ್ನಿ ಎಂದು ಹೆಸರುಳ್ಳವರು ಮೂರು ಮಂದಿ) ಅವರ ಹೆಸರೇನೆಂದರೆ, ಹಿರೇಮಗ ದೇವಾಪಿ, ಮಧ್ಯಮಮಗ ಬಾಹ್ಲೀಕ, ಕನಿಷ್ಠಮಗ ಶಂತನುಚಕ್ರವರ್ತಿ. ಈ ಮೂರು ಮಂದಿಯೊಳಗೆ ಶಂತನುಚಕ್ರವರ್ತಿ, ಗುಣದಿಂದ ಜ್ಯೇಷ್ಠ. ದೇವಾಪಿ, ಹಿರೇಮಗನಾದರೂ ತ್ವಗ್ದೋಷದಿಂದ ರಾಜ್ಯಕ್ಕೆ ಅರ್ಹನಾಗಲಿಲ್ಲ. ಆ ವ್ಯಾಳ್ಯಾದಲ್ಲಿ ಸಂತಾನವು ಇದ್ದಿಲ್ಲ. ತ್ವಗ್ದೋಷದಿಂದ ಯುಕ್ತನಾದ ಕಾರಣ ಬದರಿಕಾಶ್ರಮದಲ್ಲಿ ಕಲಾಪ ಗ್ರಾಮದಲ್ಲಿ ಅದ್ಯಾಪಿ ತಪಸ್ಸು ಮಾಡತಾ ಇದ್ದಾನೆ. ನಾರಾಯಣನ ಪ್ರಸಾದದಿಂದ ತ್ವಗ್ದೋಷ ಹೋಗಿ, ಕಲಿಯುಗ ಹೋದಮ್ಯಾಲೆ, ಕೃತಯುಗದಲ್ಲಿ ಅರಸಾಗಿ ಸಾಮ್ರಾಜ್ಯ ಆಳ್ತಾನು. ಮಧ್ಯಮಮಗ ಬಾಹ್ಲೀಕರಾಯ, ಪುತ್ರಿಕಾಪುತ್ರನ್ಯಾಯದಿಂದ ಮಾತಾಮಹನ ಪುತ್ರತ್ವ ಐದಿದನು. ಇತರ ಅರಸರುಗಳ ನೋಡಲಿಕ್ಕಾಗಿ, ದೊಡ್ಡಾತ. ಏನು ಕಾರಣವೆಂದರೆ, ಹಿರಣ್ಯಕಶಿಪುವಿನ ಮಗನಾದಂಥ ಪ್ರಹ್ಲಾದನ ಅವತಾರ. ಆದ್ದರಿಂದ ರಾಯರ ನೋಡಲಿಕ್ಕೆ ಉತ್ತವನಾದಂಥಾತ. ವಾಯುದೇವರ ಆವೇಶ ಇದ್ದ ಕಾರಣದಿಂದ ಮಹಾಬಲಿಷ್ಠನಾಗಿದ್ದಂಥಾತ. ಆದ್ದರಿಂದ ಬಾಹ್ಲೀಕರಾಯ ಹುಟ್ಟೋ ಸಮಯದಲ್ಲಿ, ಶೀಘ್ರದಿಂದ ಭೂಮಿಯು ಎರಡು ಹೋಳಾಯಿತು. ಪ್ರಹ್ಲಾದ ಇಲ್ಲಿ ಏನುಕಾರಣ ಹುಟ್ಟಿದ ಎಂದರೆ, ಭೂಭಾರರಾದಂಥಾವರ ಸಂಹಾರ ಮಾಡುವ ಕರ್ತವ್ಯದಲ್ಲಿ ನಾರಾಯಣನ ಅಂಗಭೂತತ್ವ ಐದಿ, ಪ್ರತೀಪರಾಯನ ಮಗನಾಗಿ ಹುಟ್ಟಿ, ಬಾಹ್ಲೀದೇಶಕ್ಕೆ ಅರಸಾದನು. ಬಾಹ್ಲೀಕರಾಯನ ಹೊಟ್ಟೀಲಿ ಸೋಮದತ್ತ ಹುಟ್ಟಿದನು. ಆತ ದಾರು ಎಂದರೆ, ಹನ್ನೊಂದುಮಂದಿ ರುದ್ರರ ಮಧ್ಯದಲ್ಲಿ ಪತ್ರತಾಪನೆಂಬ ರುದ್ರನು, ಸೋಮದತ್ತನಾಗಿ ಹುಟ್ಟಿದನು. ಸೋಮದತ್ತಗೆ ಮೂರು ಮಂದಿ ಮಕ್ಕಳು ಹುಟ್ಟಿದರು. ಪೂರ್ವದಲ್ಲಿ ಅವರು ದಾರು ಎಂದರೆ, ಹನ್ನೊಂದು ಮಂದಿ ರುದ್ರರೊಳಗೆ ಅಜೈಕಪಾತ್, ಅಹಿರ್ಬುಧ್ನ್ಯ, ವಿರೂಪಾಕ್ಷ ಹೀಂಗೆ ಮೂರು ಮಂದಿ ರುದ್ರರು. ಏನುಕಾರಣ ಹುಟ್ಟಿದರು ಎಂದರೆ, ಭೂಭಾರಸಂಹಾರಕಾಲದಲ್ಲಿ ನಾರಾಯಣನ

ಅಂಗಭೂತತ್ವ ಐದೋದರಗೋಸ್ಕರ ಹುಟ್ಟಿದರು. ಅವರ ಹೆಸರೇನೆಂದರೆ ಭೂರಿ, ಭೂರಿಶ್ರವ, ಶಲ. ಈ ಮೂರು ಮುಂದಿಯಲ್ಲಿ ರುದ್ರನ ಆವೇಶವು. ಹಾಂಗಾದರೆ ಮೂರು ಮುಂದಿಯಲ್ಲಿ ರುದ್ರನ ಆವೇಶ ಇರಲಿಕ್ಕೆ, ಭೂರಿಶ್ರವಗೆ ಭಾರತಯುದ್ಧದಲ್ಲಿ ಅತಿಬಲತ್ವ ಏನುಕಾರಣ ಹೇಳಿತು ಎಂದಲ್ಲಿ, ಕಡಿಮಿ ಇಬ್ಬರಲ್ಲಿ ಮೂಲರುದ್ರನ ಹೊರ್ತು, ಕಡಿಮಿ ರುದ್ರರ ಆವೇಶ ಇದ್ದಿಲ್ಲ. ಭೂರಿಶ್ರವನಲ್ಲಿ, ಮೂಲರುದ್ರನ ಸಹವಾಗಿ ಸರ್ವರುದ್ರರ ಆವೇಶ ಇತ್ತು. ಇದರ ಹೊರ್ತು ವರವೂ ಇತ್ತು. ಆದ್ದರಿಂದ ಅವರ ಮಧ್ಯದಲ್ಲಿ ಅತಿ ಬಲಿಷ್ಠನಾಗಿ ಹುಟ್ಟಿದ. ಆಸ್ತ್ರಜ್ಞರೊಳಗಾಗಿ ಶ್ರೇಷ್ಠತ್ವ, ವರವು ಕೊಟ್ಟ ಪ್ರಕಾರ ಹೇಳಥಾರೆ. ಸೋಮದತ್ತ, ತನಗೆ ಅತಿ ಬಲಿಷ್ಠ ಮಗನಾಗಬೇಕೆಂದು, ಮಹಾರುದ್ರನ ಕುರಿತು ತಪಸ್ಸು ಮಾಡಿದನು. ಮಹಾರುದ್ರನಿಂದ ಸೋಮದತ್ತಗೆ ವರವು ಕೊಡಲ್ಪಟ್ಟಿತು. 'ನಿನ್ನ ಮಗ ನಿನ್ನ ಶತ್ರುಗಳ ಗೆಲ್ಲೋವಲ್ಲಿ ಸಮರ್ಥನಾಗಲಿ. ಇದರ ಹೊರ್ತು, ನನ್ನ ಆವೇಶವೂ ಆಗಲಿ.' ಈ ಪ್ರಕಾರ ವರವು ಕೊಟ್ಟನು. ಅದರಿಂದ ಭೂರಿಶ್ರವ ಅತಿ ಬಲಿಷ್ಠನಾದ. ಸೋಮದತ್ತಗೆ ವರಬಲದಿಂದ ಬಲಿಷ್ಠ ಮಗ ಭೂರಿಶ್ರವನಾದನು. ಈ ಪ್ರಕಾರ ಬಾಹ್ಲೀಕರಾಯನ ವಂಶಾವಳಿ ಹೇಳಿ, ಇನ್ನು ಶಂತನುಚಕ್ರವರ್ತಿಯ ವಂಶ ಹೇಳಥಾರೆ.

ಶಂತನುಚಕ್ರವರ್ತಿ ಪೂರ್ವದಲ್ಲಿ ತಾ ದಾರೆಂದರೆ, ಲೋಕಪಾಲಕ ವರುಣ. ಬ್ರಹ್ಮದೇವರು ಪೂರ್ವದಿಕ್ಕಿನಲ್ಲಿದ್ದಂಥ ಸಮುದ್ರತೀರಕ್ಕೆ ಸೋಮವಾರ ಅಮಾವಾಸ್ಯೆ ದಿನ ಸ್ನಾನಕ್ಕೆ ಹೋಗಿದ್ದ; ಅಲ್ಲಿ ಭಾಗೀರಥೀ ತನ್ನ ಗಂಡನ ಕೂಡ್ಯಾಳೆ. ತನ್ನ ಹೆಂಡತಿಗೆ ಅಪ್ಪಿಕೋಬೇಕಾಗಿ, ದೃಢಧ್ವನಿಯಿಂದ ಯುಕ್ತನಾಗಿ ರಭಸದಿಂದ ಥೆರೆಗಳಿಂದ ಅಪ್ಪಿಕೊಂಬ. ಬ್ರಹ್ಮರಾಯನ ದೇಹದಮ್ಯಾಲಿ ಉದಕಬಿಂದುಗಳು ಬಿದ್ದವು. ಜಗತ್ತಿಗೆ ಗುರು, ಬ್ರಹ್ಮರಾಯ ಬಂದಾನೆಂದು ಗಂಡಹೆಂಡಿರು ನಾಚದೇಕು. ಕಾಮಾತುರವುಳ್ಳವರಾಗಿ, ಬ್ರಹ್ಮರಾಯಗೆ ನಾಚಲಿಲ್ಲ. ಆದಕಾರಣ ತನ್ನ ಮ್ಯಾಲೆಲ್ಲ ಮಹಾಭಿಷೇಕವಾಯಿತೆಂದು ಸಮುದ್ರಗೆ ಶಾಪ ಕೊಟ್ಟನು. 'ಮನುಷ್ಯರಲ್ಲಿ ಮಹಾಭಿಷಕ್‌ರಾಯ ಎಂದು ನಾಮದಿಂದ ಅರಸಾಗಿ ಹುಟ್ಟಿ, ಎರಡನೇ ಜನ್ಮದಲ್ಲಿ ಶಂತನುಚಕ್ರವರ್ತಿಯಾಗಿ ಹುಟ್ಟು. ಹೆಂಡತಿ ಆದಾಕಿ, ತನ್ನ ಗಂಡ ದುರ್ಮಾರ್ಗದಲ್ಲಿ ಪ್ರವರ್ತಿಸಿದರೆ ಬುದ್ಧಿ ಹೇಳಬೇಕು. ಏನುಕಾರಣ ಹೇಳಲಿಲ್ಲ? ಆದಕಾರಣ ಭಾಗೀರಥೀಯು ಎರಡನೇ ಜನ್ಮದಲ್ಲಿ ನಿನಗೆ ಹೆಂಡತಿಯಾಗಲಿ' ಎಂದು ಶಾಪ ಕೊಟ್ಟನು. ಎರಡನೇ ಜನ್ಮದಲ್ಲಿ ಶಂತನುಚಕ್ರವರ್ತಿ ಎಂದು ಏನುಕಾರಣ ನಾಮ ಬಂತು ಎಂದಲ್ಲಿ, 'ನನಗೆ ಶಾಂತವಾದ ಕಾರಣ ನೀನು ಶಾಂತದೇಹ ಐದು' ಎಂದು ಶಾಪ ಕೊಟ್ಟನು. ಆದ್ದರಿಂದ ಶಂತನು ಎಂದು ನಾಮ ಬಂತು.

ಬ್ರಹ್ಮದೇವರ ಶಾಪದಿಂದ ವರುಣನು ಮಹಾಭಿಷಕ್‌ರಾಯನಾಗಿ ಹುಟ್ಟಿ, ಬಹುಕಾಲ ರಾಜ್ಯ ಅನುಭೋಗಿಸಿ ದೇಹ ಬಿಟ್ಟುಕೊಟ್ಟು, ಬ್ರಹ್ಮದೇವರ ಸಭಿಗೆ ಹೋದನು. ಸಭಿಯಲ್ಲಿ ಸರ್ವದೇವತಿಗಳು ಬ್ರಹ್ಮರಾಯನ ವಾಲ್ಗೈಸತಿಹೋರು. ತಾನೂ ಅವರ ಸವೀಪದಲ್ಲಿ ಕುಳಿತನು. ಆ ಸಮಯದಲ್ಲಿ ಕಿಂಚಿತ್‌ಮಾತ್ರ ಉಟ್ಟ ವಸ್ತ್ರ ಜಿಗಳಿದಂಥ ತನ್ನ ಹೆಂಡತೀನ್ನ ಕಂಡನು. ಸಭಿಯಲ್ಲಿ ಕುಳಿತಂಥ ಸಮಸ್ತ ದೇವತಿಗಳು, ನಗ್ನಸ್ತ್ರೀಯಳ ನೋಡೋದು ಅನುಚಿತವೆಂಬ ಬುದ್ಧಿಯಿಂವ ಮಾರಿ ತಗ್ಗಿಸಿದರು. ವರುಣ, ತನ್ನ ಹೆಂಡತಿಯೆಂದು ಸ್ನೇಹಾತಿಶಯದಿಂದ ನೋಡ-ತಿರಲಿಕ್ಕೆ, ಜಗತ್ತಿಗೆ ಗುರುವಾದಂಥ ಬ್ರಹ್ಮದೇವರು ಪುನಃ ಮಾತನಾಡಥಾನೆ. ' ಪೂರ್ವದಲ್ಲಿ ನಿನಗೆ ದಾವ ಪ್ರಕಾರ ಶಾಪ ಕೊಡಲ್ಪಟ್ಟಿತು, ಅದೇ ಪ್ರಕಾರ ಆಲಸ್ಯ ಮಾಡದೆ ಭೂಮೀವ್ಯಾಲೆ ಅರಸಾಗಿ ಹುಟ್ಟು. ಈ ಅಪರಾಧದಲ್ಲಿ ಪೂರ್ವದಲ್ಲಿ ಕೊಟ್ಟಂಥ ಶಾಪವು ಫಲವಾಗಲಿ ' ಎಂದು ಬ್ರಹ್ಮದೇವರು ಮಾತನಾಡತಿರಲಿಕ್ಕೆ, ಅದೇ ಕ್ಷಣದಲ್ಲಿ ಶಂತನುಚಕ್ರವರ್ತಿ ಎಂಬ ಅಭಿಧಾನದಿಂದ ಅರಸಾಗಿ ಹುಟ್ಟಿದನು. ಆತಗೆ ಭಾಗೀರಥೀ ಹೆಂಡತಿಯಾದಳು. ಆಕಿ ಕಡಿಯಿಂದ ಕೂಡಿ ಬಹುಕಾಲ ಸಂತೋಷಬಡಹೊಕ್ಕನು. ಇನ್ನು ಮಕ್ಕಳ ಉತ್ಪತ್ತಿಪ್ರಕಾರ ಹೇಳಥಾರೆ.

ಅಷ್ಟವಸುಗಳಿಗೆ 'ದ್ಯು'ನಾಮಕ ವಸು, ಆ ವಸುವಿಗೆ ವರಾಂಗಿ ಎಂಬ ಹೆಂಡತಿ ಇದ್ದಳು. ಆಕಿಗೆ ವರಾಂಗಿ ಎಂಬ ಗೆಳತಿ ಇದ್ದಳು. ಆ ಗೆಳತಿ ದಾರು ಎಂದರೆ, ಸುವಿಂದರಾಯನೆಂಬ ಅರಸಿನ ಹೆಂಡತಿ. ಆಕೀ ಹೆಸರೂ ವರಾಂಗಿಯೇನೆ. ಇಬ್ಬರೂ ಗೆಳಿತನ ಕಟ್ಟಿದರು. ತನ್ನ ಗೆಳತೀನ್ನ ಜರಾಮರಣರಹಿತಳ ಮಾಡಬೇಕೆಂದು ತನ್ನಿಮಿತ್ತದಿಂದ ತನ್ನ ಗಂಡಗೆ ಪ್ರೇರಿಸಿದಳು. ' ನನ್ನ ಗೆಳತಿ ಸತ್ತುಹೋದಾಳು. ಆದಕಾರಣ ಮರಣವನ್ನು ಕೆಡಿಸುವಂಥ ಧೇನು, ವಸಿಷ್ಠನ ಮನಿಯಲ್ಲದೆ. ಅದರ ಸಾಮರ್ಥ್ಯವೇನು, ಅದರ ನಾಮವೇನು ಎಂದಲ್ಲಿ, ಮುಪ್ಪು ಕೆಡಿಸುವಂಥ ಕಾಮ್ಯ ಧೇನುವಿನ ಮಗಳು, ನಂದಿನಿ ಎಂಬ ನಾಮವುಳ್ಳಂಥಾದ್ದು. ಇಂಥಾ ಧೇನುವಿನ್ ತಂದುಕೊಟ್ಟರೆ, ನನ್ನ ಗೆಳತಿಗೆ ಹಾಲು ಕುಡಿಸಿ ಮರಣರಹಿತಳ ಮಾಡೇನು ' ಎಂದು ಪ್ರೇರಿಸಲಿಕ್ಕೆ, ದ್ಯುನಾಮಕ ವಸು ಸ್ತ್ರೀಜಿತ, ಕಾಮುದಲ್ಲಿ ಭಗ್ನಭಕ್ತಿ-ಯುಳ್ಳಾತ ಹೆಂಡತಿ ಮಾತು ಕೇಳದಿದ್ದರೆ, ಧರ್ಮಕ್ಕೆ ಹಾಂಗೆ ಭೋಗಕ್ಕೆ ಅನುಕೂಲಳಾಗದೆ ಹೋಗಥಾಳಿಂದು ಹೆಂಡತೀ ಮಾತು ಕೇಳಿ, ತನ್ನ ಕೈಯ ಕಾರ್ಯ ಆಗದೆಂದು, ತನ್ನ ಅಣ್ಣಂದಿರು ಏಳುಮಂದಿ ಕೂಡಿಕೊಂಡು ಹೋದನು. ಅವಠು ಏಳುಮಂದಿ ತಮ್ಮನ ಮ್ಯಾಲೆ ಸ್ನೇಹವುಳ್ಳವರಾಗಿ, ಈ ಪ್ರಕಾರ ಅಷ್ಟ ವಸುಗಳೂ ಆಕಳು ಬಿಟ್ಟುಕೊಂಡು ಬಾಹೋಂಗೆ, ಹಂಬಾರವದಿಂದ ಒದರ-ತಿಹೋರು. ಆ ಕಾಲದಲ್ಲಿ ವಸಿಷ್ಠ ಶಾಪ ಕೊಟ್ಟನಂತ ಕೆಲವು ಕಡೀಲಿ ಹೇಳತದೆ, ಹಾಂಗಲ್ಲ. ವಸಿಷ್ಠನಲ್ಲಿದ್ದಂಥ ಬ್ರಹ್ಮದೇವರು ಸಮರ್ಥನಾದಕಾರಣ ಶಾಪಕೊಟ್ಟನು.

'ಆಕಳು ಕದ್ದುಕೊಂಡುಹೋಗೋಣ ಅಧರ್ವ. ಇಂಥಾ ಅಧರ್ವದಲ್ಲಿ ಪ್ರವೃತ್ತರಾದ್ದರಿಂದ ಶೀಘ್ರ ಮನುಷ್ಯಯೋನಿಯನ್ನು ಐದರಿ. ಇದಿಷ್ಟು ಕಾರ್ಯ ಕನಿಷ್ಠ ವಸುವಿನಿಂದ ಮಾಡಲ್ಪಟ್ಟಿತು. ಇದರಿಂದ ನೀವು ಸರ್ವರೂ ಧರ್ಮಚ್ಯುತರಾಗಿರಿ. ಆದಕಾರಣದಿಂದ ಕನಿಷ್ಠವಸು ದ್ಯುನಾಮಕ, ನಿಮ್ಮ ಏಳು ಮಂದಿ ಆಯುಷ್ಯ ಏಳುನೂರು ಸಹವಾಗಿ ಎಂಟುನೂರು ವರುಷ ಆಯುಷ್ಯವನ್ನು ಐದಲಿ. ಕಡಿಮಿ ಏಳುಮಂದಿ ಹುಟ್ಟಿದ ತರುವಾಯ, ಶೀಘ್ರದಿಂದ ಶಾಪದ ದೆಸಿಯಿಂದ ಮುಕ್ತರಾಗಲಿ. ದಾವ ವರಾಂಗಿಯು ಗಂಡನಾದಂಥ ದ್ಯುನಾಮಕ ವಸುವಿಗೆ ಅಧರ್ಮ-ಮಾರ್ಗದಲ್ಲಿ ಪ್ರೇರಣೆ ಮಾಡಿದಳು, ಆಕಾರಣ ವರಾಂಗಿಯು ಮತ್ತೆ ಒಬ್ಬ ಪುರುಷನಲ್ಲಿ ಅಂಬಾ ಎಂಬ ನಾಮದಿಂದ ಹುಟ್ಟಿ ಗಂಡನಿಲ್ಲದಾಕಿ ಆಗಲಿ. ಹಾಂಗೇ ತನ್ನ ಗಂಡನ ಮರಣಕ್ಕೂ ಕಾರಣಳಾಗಲಿ. ಹಾಂಗಾದರೆ ಸ್ತ್ರೀಯಳು ಪುರುಷ-ಮರಣಕ್ಕೆ ಹ್ಯಾಂಗೆ ಕಾರಣಳಾದಾಳು ಎಂದಲ್ಲಿ, ಗಂಧರ್ವದೆಸಿಯಿಂದ ಪ್ರಾಪ್ತವಾದ ಪುರುಷತ್ವಬಲದಿಂದ ಸಮರ್ಥಳಾದಾಳು. ಕನಿಷ್ಠನಾದಂಥ ದ್ಯುನಾಮಕ ವಸು, ನೈಷ್ಠಿಕ ಬ್ರಹ್ಮಚರ್ಯವ್ರತವುಳ್ಳವನಾಗಲಿ. ಗಂಡಹೆಂಡಂದಿರಿಗೂ ಮರಣ-ಪರಿಯಂತರ ವಿರೋಧವಾಗಲಿ. ಭೀಷ್ಮ ಎಂಟುನೂರು ವರುಷ ಬದುಕಿ, ರಣರಂಗದಲ್ಲಿ ಬಿದ್ದು, ಐವತ್ತೆರಡು ದಿವಸ ಶರಪಂಜರದಮ್ಯಾಲೆ ಮಲಗಿಕೊಂಡು, ಎಂಟು ಮಂದಿಯ ಗರ್ಭವಾಸದುಃಖ ಎಂಥಾದ್ದು, ಆ ದುಃಖ ಒಬ್ಬನೇ ಅನುಭೋಗಿಸಲಿ. ಮುಂದೆ ಭಾರತಯುದ್ಧದಲ್ಲಿ ಹತ್ತು ದಿವಸ ಯುದ್ಧ ಮಾಡುವಾಗ್ಯೆ, ಶಿಖಂಡಿ ಮುಂದೆಮಾಡಿಕೊಂಡು ಅರ್ಜುನ ಬಾಣ ಹೊಡೀಲಿಕ್ಕೆ, ಎದೀಗೆ ಗರ್ಭಧಾರಣದುಃಖ ಹ್ಯಾಂಗೆ ಬಾಧಿಸತದೆ, ಹಾಂಗೆ ಮರ್ಮಸ್ಥಳ ಭೇದಿಸುವಂಥ ಆಯುಧಗಳಿಂದ ಹೊಡಿಸಿಕೊಂಡು, ಬಹಳ ಪೀಡಿತನಾಗಿ ಎಂಟು ಮಂದಿಯ ದುಃಖ ಎಂಥಾದ್ದೋ ಆ ದುಃಖವನ್ನು ಅನುಭೋಗಿಸಲಿ' ಎಂದು ಮಾತನಾಡುತ್ತಿರಲಾಗಿ, ಶಾಪ ಕೊಡುತ್ತಿರುವಂಥ ಬ್ರಹ್ಮದೇವರನ್ನ ಅಷ್ಟವಸುಗಳು ತಿಳಿದು, ಶೀಘ್ರದಿಂದ ಆಕಳು ಬಿಟ್ಟುಕೊಟ್ಟು, ನಮಸ್ಕಾರ ಮಾಡಿ ನಮ್ರಭಾವದಿಂದ ವಿಜ್ಞಾಪನೆ ಮಾಡಿದರು. 'ನಾವು ಎಂಟು ಮಂದಿ ಬಹಳ ಅನ್ಯಾಯ ಮಾಡಿದ್ದೇವೆ. ಆಕಳು ಕಟ್ಟಬಾರದೆ ಕಟ್ಟಿದೆವು. ಮನುಷ್ಯಯೋನಿ ಐದವಲ್ಲೆವು. ನಾವು ನೂತ್ರ ಗರ್ಭತ್ವ ಐದೋಣದರಿಂದಲೇವೆ ನಿನ್ನ ಶಾಪಕ್ಕೆ ಸಾರ್ಥಕವಾಗಲಿ. ಈ ದ್ಯುನಾಮಕ ವಸು ಸರ್ವಜ್ಞನಾಗಲಿ, ಬಹಳ ಕೀರ್ತಿವಂತನಾಗಲಿ, ನಿನ್ನ ಅಂಶದಿಂದ ಯುಕ್ತನಾಗಲಿ, ನಮ್ಮ ಸರ್ವಬಲವೂ ಈತಗೆ ಬರಲಿ.' ಈ ಪ್ರಕಾರ ವಸುಗಳು ಮಾತನಾಡಿ ಬೇಡಿಕೊಳ್ಳಲಿಕ್ಕೆ, ವಸಿಷ್ಠನಲ್ಲಿದ್ದಂಥ ಬ್ರಹ್ಮದೇವರು 'ಹಾಂಗೆ ಆಗಲಿ' ಎಂದು ಮಾತನಾಡಿದನು.

ತರುವಾಯ ದೇವತಾಸ್ತ್ರೀಯಳ ಹುಡಕತ ಬರಲಿಕ್ಕೆ, ಭಾಗೀರಥಿಗೆ ಶಾಪ ವಾಗೇದೆಂದು ಕೇಳಿ, ಭಾಗೀರಥೀ ಸಮೀಪಕ್ಕೆ ಹೋಗಿ ಮಾತನಾಡಿದರು.' ' ನಾವು ನಿನ್ನ ಉದರದಲ್ಲಿ ಹುಟ್ಟೇವು. ಹುಟ್ಟಿದಾಕ್ಷಣವೇ ನಮ್ಮಗಳ ಶೀಘ್ರದಿಂದ ಕೊಂದು-ಬಿಡು ' ಎನಲಿಕ್ಕೆ ವಸುಗಳ ಕಂಡು ಭಾಗೀರಥೀ ಮಾತನಾಡುವಂಥಾವಳಾದಳು. ' ದೋಷ ಬರತದೆ, ಆದಕಾರಣ ಶಿಶುಹತ್ಯ ದೋಷ ಬರಬ್ಯಾಡ. ಕೊಂದದ್ದರಿಂದ ಪ್ರೀತಿ ಕೆಟ್ಟು ವೈರತ್ವ ಬೀಳತದೆ, ಎಂದೆಂದಿಗೂ ಪ್ರೀತಿಯು ಕೆಡಬ್ಯಾಡ. ನಿವ್ಮೊಳಗಾಗಿ ಒಬ್ಬ ಮಾತ್ರ ದೀರ್ಘಾಯುಷ್ಯವಂತನಾಗಲಿ ' ಎಂದು ವರವು ಬೇಡಿಕೊಂಡಳು. ಎಂಟು ಮಂದಿ ವಸುಗಳೂ ಅದೇ ಪ್ರಕಾರ ವರವು ಕೊಟ್ಟು, ಶಂತನುಚಕ್ರವರ್ತಿ ದೆಸಿಯಿಂದ ಹುಟ್ಟಿದರು. ಹಾಂಗಾದರೆ ಈ ಶಿಶುಗಳ ಕೊಂದು-ಕೊಂದು ಬಿಷ್ಟತ್ತಾ ಇರಲಿಕ್ಕೆ, ಶಂತನುಚಕ್ರವರ್ತಿ ಏನುಕಾರಣ ನಿವಾರಿಸಲಿಲ್ಲ ಎಂದಲ್ಲಿ, ಶಂತನುಚಕ್ರವರ್ತಿಯನ್ನು ಗಂಡನ ಮಾಡಿಕೊಳ್ಳದಕಿಂತ ಪೂರ್ವದಲ್ಲಿ, ಶಂತನುಚಕ್ರವರ್ತಿ ತಂದಿ ಪ್ರತೀಪರಾಯನ ಕೈಯಿಂದ, ವಿಘ್ನ ಮಾಡದಹಾಂಗೆ ವಾತು ತೆಗೆದುಕೊಂಡಿದ್ದಳು. ಅದು ಹ್ಯಾಂಗೆಂದಲ್ಲಿ, ಭಾಗೀರಥೀ ಈ ಶಿಶುಗಳ ಕೊಲ್ಲೋ ನಿಮಿತ್ತವೇ ಕನ್ಯಾರೂಪಳಾಗಿ, ಅಂಗೋಟಚಲ್ವಿಕೆಯಿಂದ ದಿಕ್ಕುಗಳನ್ನೆಲ್ಲ ಪ್ರಕಾಶಿಸತ, ತನ್ನ ತೀರದಲ್ಲಿ ಸ್ನಾನಮಾಡಿ ಕುಳಿತುಕೊಂಡಂಥ ಪ್ರತೀಪರಾಯನ ಬಲದೊಡೀವ್ಯಾಲೆ ಕುಳಿತಳಲ್ಲದೆ, ಮತ್ತೆ ಒಂದು ಅನ್ಯಥಾ ಬುದ್ಧಿಯಿಂದ ಕುಳಿತಾಕಿ ಅಲ್ಲ. ಏನುಕಾರಣ ಅನ್ಯಥಾಬುದ್ಧಿಯಿಂದ ಕುಳಿತಳೆನಬಾರದೆಂದರೆ, ಅಕಾಮುಕಳಾದಂಥಾಕೆಯಾದರೂ ಸರಿಯೆ, ವಿಡಂಬನಾರ್ಥವಾಗಿ ಕಾಮುಕಸ್ತ್ರೀಯಳೋಪಾದಿ ಬಲತೊಡೀವ್ಯಾಲೆ ಕುಳಿತಳು. ಏನು ಪ್ರಯೋಜನ ಎಂದಲ್ಲಿ, ಪ್ರತೀಪರಾಯನ ಮಗನಾದಂಥ ಶಂತನುಚಕ್ರವರ್ತಿಯು ಹೆಂಡತಿ ಆದೇನೆಂದು ಬಲದ ತೊಡಿಯ ಮ್ಯಾಲೆ ಕುಳಿತಳು. ತೊಡೀವ್ಯಾಲೆ ಕುಳಿತಂಥ ಭಾಗೀರಥೀಗೆ ' ನನ್ನ ಮಗನ ಹೆಂಡತಿ ಆಗು ' ಎಂದು ಮಾತನಾಡಿದನು. ಅದಕ್ಕೆ ನಿಮಿತ್ತ ಹೇಳಥಾರೆ. ಬಲದೊಡೀವ್ಯಾಲೆ ಕುಳಿತಂಥ ಸ್ತ್ರೀಯಳಿಗೆ, ತನ್ನ ಮಗಗೆ ಹೆಂಡತಿ ಆಗು ಎಂದು ದಾವ ನಿಮಿತ್ತದಿಂದ ಅಂದನು ಎಂದರೆ, ಬಲಭಾಗದಲ್ಲಿ ಮಗಳು ಕೂಡ್ರಬೇಕು ಅಥವಾ ಸೂಸಿ ಕೂಡ್ರಬೇಕು. ಎಡಭಾಗದಲ್ಲಿ ಹೆಂಡತಿ ಕೂಡ್ರಬೇಕು. ಈ ಪ್ರಕಾರ ಶಾಸ್ತ್ರದಲ್ಲಿ ಪ್ರಸಿದ್ಧವಾಗೇದೆ. ಆದಕಾರಣದಿಂದ ತನ್ನ ಹೊಟ್ಟೀಲಿ ಹುಟ್ಟಿದ ಮಗಳಲ್ಲ ಎಂಬೋದು ನೋಡಿಕೊಂಡು, ಸೊಸೀನ ಮಾಡಿಕೋಬೇಕು ಎಂದು, ' ನನ್ನ ಮಗಗೆ ಹೆಂಡತಿ ಆಗು ' ಎಂದು ಮಾತನಾಡಿದನು. ಅದಕ್ಕೆ ಭಾಗೀರಥೀ ಪುನಃ ಮಾತನಾಡಿದಳು. ' ಅವಶ್ಯ ನಿನ್ನ ಮಗಗೆ ಹೆಂಡತಿ ಆದೇನು. ನಿನ್ನ ಮಗ ನನಗೆ ನೀ ದಾರು, ಎಂದು ಕೇಳಬಾರದು. ನಾನು ಅಯೋಗ್ಯಕರ್ಮ ಮಾಡಿದರೂ ಕಾರಣ ಕೇಳಬಾರದು, ಮಾಡಬ್ಯಾಡವೆಂದು

ನಿವಾರಿಸಬಾರದು. ಈ ಪ್ರಕಾರ ಮೂರು ಸಂಕಲ್ಪ ನಿನ್ನ ಮಗ ನಡಸಬೇಕು. ಇದರೊಳಗೆ ಒಂದಾದರೂ ಕೇಳಿದ ಪಕ್ಷವೇ ನಿನ್ನ ಮಗನನ್ನ ಬಿಟ್ಟುಕೊಟ್ಟು ಹೋಗಥೀನಿ. ಮೂರು ಸಂಕಲ್ಪ ನಿನ್ನ ಮಗ ನಡಿಸೋಹಾಂಗಿನ್ದರೆ, ನಿನ್ನ ಮಗನ್ನ ವರಿಸೇನು, ಇಲ್ಲವೇ, ಹೋದೇನು. ನನ್ನಿಂದ ಮಾಡಲ್ಪಟ್ಟ ಅಕರ್ಮಕ್ಕೆ ಕಾರಣ ಕೇಳಬಾರದು.' ಹೀಂಗಂತ ಪ್ರತೀಪರಾಯನ ಕೂಡ ಮಾತನಾಡಲಿಕ್ಕೆ, ಅರಸಾದಂಥ ಪ್ರತೀಪರಾಯನು ಹಾಂಗೆ ಆಗಲಿ ಎಂದು ಮಾತನಾಡಿದನು.

ಪ್ರತೀಪರಾಯ ಕನಿಷ್ಠಮಗನಾದಂಥ ಶಂತನುಚಕ್ರವರ್ತಿಗೆ, 'ವಧುರೂಪಳಾದಂಥ ಭಾಗೀರಥೀಯ, ಹೆಂಡತಿ ಮಾಡಿಕೊ' ಎಂದು ಮಾತನಾಡಿದನು. ಭಾಗೀರಥೀ ತನ್ನ ಮುಂದೆ ದಾವ ಪ್ರಕಾರ ಮಾತನಾಡಿದ್ದಳು, ಅದನ್ನೆಲ್ಲ ಮಗನ ಮುಂದೆ ಹೇಳಿ, ಅದೇ ಪ್ರಕಾರ ಅಂಗೀಕಾರ ಮಾಡಿಸಿದನು. ಕಡಿಮಿ ಮಕ್ಕಳ ಬಿಟ್ಟುಕೊಟ್ಟು, ಕನಿಷ್ಠಮಗನ ಮುಂದೆ ಏನುಕಾರಣ ಹೇಳಬೇಕು ಎಂದಲ್ಲಿ, 'ನನ್ನ ಮಗ ಶಂತನುಚಕ್ರವರ್ತಿ ನನ್ನ ಗಂಡನೆಂದು ಅಂಗೀಕರಿಸಿದ್ದೀನೆ ಹೊರ್ತು, ಉಳಿದ ಬಾಹ್ಲೀಕಾದಿ ಮಕ್ಕಳ ಅಂಗೀಕಾರ ಮಾಡಿಲ್ಲ' ಎಂದು ಭಾಗೀರಥಿ ಮಾತನಾಡಿದ್ದಳು. ಆದ್ದರಿಂದ ಕನಿಷ್ಠಮಗನ ಮುಂದೆ ಹೇಳಿದನು. ಗಂಡ ಮಾಡಿಕೊಂಡ ತರುವಾಯ, ಭಾಗೀರಥೀಯು ಶಂತನುಚಕ್ರವರ್ತಿ ದೆಸಿಯಿಂದ ವರುಷಾ ಒಬ್ಬ ಗಂಡಸುಮಗನ್ನ ಹಡದು, ಸಂಗಡಲೇ ಕುತ್ತಿಗಿ ಹಿಸಿಗಿ ಹಚ್ಚಿನಾವತಿಯೆಲ್ಲಿ ಕೆಡಹೋಳು. ಈ ಪ್ರಕಾರ ಏಳು ಮಂದಿ ಗಂಡಸುಮಕ್ಕಳನ್ನ ಹಡದು, ಭಾಗೀರಥೀ ನದಿಯೊಳಗೆ ಕೊಂದುಬಿಷ್ಟಳು. ತರುವಾಯ ಎಂಟನೇ ಮಗ ಹುಟ್ಟಿದನು. ಆ ಮಗನ್ನ ಕೊಲ್ಲಲಿಕ್ಕೆ ಉದ್ಯೋಗಮಾಡಿದಳು. ಹಾಂಗಾದರೆ, ಒಬ್ಬ ಮಗನು ದೀರ್ಘಾಯುಷ್ಯವುಳ್ಳಾತನಾಗಲಿ ಎಂದು ಬೇಡಿಕೊಂಡು ವರವು ಪಡೆದಿದ್ದಳು, ಎಂಟನೇ ಮಗನ ಕೊಲ್ಲಲಿಕ್ಕೆ ಹ್ಯಾಂಗೆ ಉದ್ಯುಕ್ತಳಾದಳು ಎಂದಲ್ಲಿ, ಶಂತನುಚಕ್ರವರ್ತಿಯ ಬಿಟ್ಟುಹೋಗೋ ನಿಮಿತ್ತವಾಗಿ ನಿಶ್ಚಯಮಾಡಿ, ಭಾಗೀರಥೀಯು ಮೃಷದಿಂದ ಕೊಲ್ಲಲಿಕ್ಕೆ ಉದ್ಯೋಗ ಮಾಡಿದಳು. ಆದಕಾರಣ ಬೇಡಿಕೊಂಡ ವರವು ಸತ್ಯವೇವೆ, ಗಂಡನ ಬಿಡಲಿಕ್ಕೆ ನಿಮಿತ್ತವೇನು ಎಂದಲ್ಲಿ, ದೇವತಾದೇಹದಿಂದ ಯುಕ್ತವಾದಂಥ ಸಜ್ಜನರಿಗೆ, ಮನುಷ್ಯರ ಸಮೀಪದಲ್ಲಿ ಇಹೋದರಿಂದ ಅತಿ ಸುಖವು ಆಗೋದಿಲ್ಲ. ಆದಕಾರಣದಿಂದ, ಶಂತನುಚಕ್ರವರ್ತಿಯ ತಂದಿ ಪ್ರತೀಪರ್ಷಾಯನ ಕುರಿತು ಹೇಳಿಹೋಗಬೇಕೆಂದು ಇಚ್ಛಾ ಮಾಡಿದಳು. ಭಾಗೀರಥೀಯು ಮನುಷ್ಯದೇಹವುಳ್ಳಾಕಿಯಲ್ಲ. ಮೂಲರೂಪದಿಂದಲೇವೇ ಶಂತನುಚಕ್ರವರ್ತಿಯ ಸಮೀಪದಲ್ಲಿದ್ದಳು. ಶಂತನುಚಕ್ರವರ್ತಿಯು ಪ್ರತೀಪರಾಯನಲ್ಲಿ ಹುಟ್ಟಿದ ಕಾರಣ, ಮನುಷ್ಯದೇಹ ಐದಿದನು. ಆದಕಾರಣದಿಂದ ಬಿಟ್ಟುಹೋಗೋದು ನಿಶ್ಚಯ ಮಾಡಿದಳು. ಹುಟ್ಟಿದ ಎಂಟನೇ ಮಗನ್ನ ಮೃಷದಿಂದ ಕೊಲ್ಲಲಿಕ್ಕೆ ಉದ್ಯುಕ್ತ

ಳಾಗಲಿಕ್ಕೆ, ಶಂತನುಚಕ್ರವರ್ತಿ, ಕೂಸಿನ್ನ ಕೊಲ್ಲಬ್ಯಾಡವೆಂದು ನಿವಾರಣ ಮಾಡಿದನು. ತಾನು ಮಾಡುವ ಕಾರ್ಯಕ್ಕೆ ನಿವಾರಣ ಮಾಡಬಾರದೆಂಬ ಒಂದು ಸಂಕಲ್ಪ ಭಂಗವಾಯಿತು. 'ನೀ ದಾರು?' ಎಂದು ಕೇಳಲಿಕ್ಕೆ, ಎರಡನೇ ಸಂಕಲ್ಪ ಭಂಗವಾಯಿತು. 'ಹಿಂಸಕಳೋಪಾದಿ ಮಕ್ಕಳನ್ನ ಏನುಕಾರಣ ಕೊಲ್ಲತಿದ್ದಿ?' ಎಂದು ಕೇಳೋಣದರಿಂದ, ಮೂರನೇ ಸಂಕಲ್ಪ ಭಂಗವಾಯಿತು.

ಹಾಂಗಾದರೆ ಶಿಶುಗಳ ಸಂಹಾರ ಮಾಡುವಂಥ ಹೆಂಡತಿ, ರಾಕ್ಷಸಿ ಎಂದು ಸಿದ್ಧವಾಗಿಹೋಯಿತು. 'ನೀ ದಾರು?' ಎಂದು ಸಂಶಯಮೂಲಪ್ರಶ್ನ ಏತಕ್ಕಾಗಿ ಮಾಡಿದ ಎಂದಲ್ಲಿ, 'ನಿನ್ನ ಸುಂದರ ರೂಪ, ಅಂಗೋಟಚಲ್ವಿಕಿ, ಲಾವಣ್ಯ ನೋಡುವಾಗ್ಗೆ, ಉತ್ತಮಳಾದ ದೇವತಾಸ್ತ್ರೀಯಳೋಪಾದಿ ಕಾಣಸ್ತಿದ್ದಿ. ಆದ-ಕಾರಣದಿಂದ ಈ ಶಿಶುಹತ್ಯದೋಷವೂ ನಿನಗೆ ಆಗದು. ಆದಕಾರಣ ಈ ಶಿಶುಗಳ ಕೊಲ್ಲೋ ಕರ್ಮದಲ್ಲಿ ಏನು ಮಹತ್ಕಾರಣವಿದ್ದೀತು?' ಎಂದು ಮಾತನಾಡಿದನು. ಶಂತನುಚಕ್ರವರ್ತಿ ಕೇಳಿದ ಪ್ರಶ್ನವು ಯುಕ್ತವೇವೆ. ಮತ್ತೂ ಮಾತನಾಡಥಾನೆ. 'ಈ ಕಾರಣ ಸಾಮಾನ್ಯದಿಂದ ತಿಳಿದಿದ್ದೀನಿ. ಈ ಶಿಶುಗಳ ಕೊಲ್ಲೋಕಾರಣ, ನಿಶ್ಚಯವಾಗಿ ನನ್ನ ಶ್ರೋತ್ರೇಂದ್ರಿಯದಿಂದ ಕೇಳಲಿಕ್ಕೆ ಅರ್ಹನಾಗಿದ್ದೀನಿ. ನಿನ್ನ ಚಿತ್ತಕ್ಕೆ ಬಂದರೆ ಈ ಕಾರ್ಯ ಹೇಳಿಕೊಡು. ಹೇ ಪರಮಮಂಗಳೇ! ಈ ಶಿಶುಹತ್ಯ ಪಾಪವು ನಿನಗೆ ಬಾರದೆಂದು ನಿಶ್ಚಯದಿಂದ ಸೂಚಿಸುತ್ತದೆ.' ಹೀಂಗೆ ಮಾತನಾಡತ ಇರಲಾಗಿ, ಭಾಗೀರಥೀಯು ಮೂಲಾರಂಭ ಕಥಿ ಹೇಳಿದಳು. 'ನೀ ವರುಣ, ಬ್ರಹ್ಮದೇವರು ಪೂರ್ವಸಮುದ್ರದಲ್ಲಿ ಸ್ನಾನಮಾಡಿ ಕುಳಿತಿರಲಿಕ್ಕೆ, ಥೆರಿಗಳಿಂದ ಮಹಾಭಿಷೇಕ ಮಾಡಿದ ಕಾರಣದಿಂದ, ಒಂದು ಜನ್ಮದಲ್ಲಿ ಮಹಾ-ಭಿಷಕ್‌ರಾಯನಾಗಿ ಹುಟ್ಟಿದ್ದಿ. ಶಾಂತ ಮಾಡಿದ ಕಾರಣದಿಂದ, ಎರಡನೇ ಜನ್ಮದಲ್ಲಿ ಶಂತನುಚಕ್ರವರ್ತಿ ಆಗಿ ಹುಟ್ಟಿದಿ. ಜಗತ್ತಿಗೆ ಗುರುವು ಬ್ರಹ್ಮರಾಯ ಕುಳಿತಿರಲಿಕ್ಕೆ, ನಾವು ಗಂಡಹೆಂಡಿರು ನಾಚಲಿಲ್ಲಾದ ಕಾರಣ, ಗಂಡಗೆ ಏನುಕಾರಣ ಹೇಳಲಿಲ್ಲವೆಂದು, ನನಗೆ ಮನುಷ್ಯನ ಭೋಗಿಸು ಎಂದು ಶಾಪ ಕೊಟ್ಟನು.' ಅಷ್ಟವಸುಗಳು ವಸಿಷ್ಠನ ಆಕಳು ಕದ್ದುಕೊಂಡು ಹೋಗಲಿಕ್ಕೆ, ವಸಿಷ್ಠ ಶಾಪ ಕೊಟ್ಟದ್ದು, ತಾನು ಪ್ರತೀಪರಾಯಗೆ ಬೇಡಿಕೊಂಡಿದ್ದು, ಆದ್ಯಂತ ವರ್ತಮಾನ ಗಂಡಗೆ ಹೇಳಿಹೋಗುವಂಥಾಕಯಾದಳು. ಹಾಂಗಾದರೆ ಸರ್ವ ವರ್ತಮಾನ ಗಂಡಗೆ ಹೇಳಿದ ತರುವಾಯ, ಏನುಕಾರಣ ಹೋಗಬೇಕೆಂದರೆ, <u>ದೇವತಾದೇಹದಿಂದ ಇದ್ದಂಥವರು, ಮನುಷ್ಯದೇಹ ಪ್ರಾಪ್ತವಾದಂಥವರಲ್ಲಿ</u> ಬಹುಕಾಲ ತಮ್ಮ ಸ್ವರೂಪ ಪ್ರಕಟವಾದವ್ಯಾಲೆ, ವಾಸಮಾಡಿಕೊಂಡು ಇಹೋದು ಧರ್ಮವಲ್ಲ. ಆದಕಾರಣ ಭಾಗೀರಥೀಯು ಹೋದಳು. ಹಾಂಗಾದರೆ ಪೂರ್ವದಲ್ಲಿ ವಾಸ ಏನುಕಾರಣ ಮಾಡಿದ್ದಳು ಎಂದಲ್ಲಿ, ಒಂದಾನೊಂದು ಕಾರ್ಯಾರ್ಥವಾಗಿ ದೇವತಿಗಳು, ತಮ್ಮ

ದೇವತಾದೇಹದಿಂದಲೇವೇ ಮನುಷ್ಯರಲ್ಲಿ ವಾಸ ಮಾಡಥಾರೆ. ಬಂದ ಕಾರ್ಯ ವಾಗಲಿಕ್ಕೆ, ತಮ್ಮ ಲೋಕಕ್ಕೆ ಹೋಗಥಾರೆ. ಕೆಂ ನಿಮಿತ್ತವೆಂದರೆ, ತಮ್ಮ ಕಾರ್ಯ ವಾದಬಳಿಕ ದೇವತಿಗಳು ಮನುಷ್ಯರಲ್ಲಿರಬಾರದೆಂಬೋದು ಧರ್ಮ. ಅದು ಹ್ಯಾಂಗೆಂದರೆ, ತಮ್ಮ ಕಾರ್ಯ ಆಗೋತನಕ ಇರೋಣವೇ ಧರ್ಮ, ಆದಮ್ಯಾಲೆ ಹೋಗೋಣವೇ ಧರ್ಮ. ಇದೆಲ್ಲ ದೇವತಿಗಳಿಗೆ ಸ್ವಾಭಾವಿಕ ಧರ್ಮವು. ಇದರ ಹೊರ್ತು, ದೇವತಿಗಳಿಗೆ ಗೌಪ್ಯಧರ್ಮವು ಅದೆಂದು ಹೇಳಥಾರೆ. ಅದು ಹ್ಯಾಂಗೆಂದರೆ, ದೇವತಿಗಳಿಗೆ ಮನುಷ್ಯಜಾತಿಯಲ್ಲಿ ಹುಟ್ಟಿ, ಮನುಷ್ಯದೇಹ ಧರಿಸಿ ಕಾಣಿಸಿಕೊಳ್ಳದೆ ಇಹೋಣ, ಸ್ಪರ್ಶ ಮಾಡದಲೆ ಇಹೋಣ, ಮಾತನಾಡದಲೆ ಇಹೋಣ ಇವೆಲ್ಲ ಗೌಪ್ಯಧರ್ಮ. ಅದಕಾರಣದಿಂದ ಭಾಗೀರಥೀಯು ತಾ ಬಂದ ಪ್ರಯೋಜನವು ತೀರಿಸಿಕೊಂಡು, ತನ್ನ ಗಂಡ ಸ್ವರೂಪೋತ್ತಮನಾದ ಕಾಲಕ್ಕೂ, ಮನುಷ್ಯ-ಯೋನಿಯಿಂದ ಬಂದಕಾರಣ, ಮನುಷ್ಯತ್ವ ಐದಿ ಅದೃಶ್ಯಳಾಗಿ, ವರುಣದೇಹ ಉಳ್ಳಂಥ ಪೂರ್ವದ ಗುಡನ ಐದಿದಳು. ಈ ಮನುಷ್ಯಜಾತಿಯಲ್ಲಿ ಹುಟ್ಟಿದಂಥ ಶಂತನುಚಕ್ರವರ್ತಿನ್ನ ಬಿಟ್ಟುಕೊಟ್ಟು, ವರುಣಲೋಕಕ್ಕೆ ಹೋದಳು. ತಾನು ಒಬ್ಬಳೇ ಮಾತ್ರ ಹೋಗಲಿಲ್ಲ. ಗಂಡನ ಆಜ್ಞೆಯಿಂದ, ಮಗನ ಕೊಲ್ಲೋ ಯತ್ನ ದಿಂದ ನಿವೃತ್ತಳಾಗಿ 'ನಿನ್ನ ಮಗನ ನೀ ಸಾಕಿಕೋ' ಎಂದು ಬಿಟ್ಟುಕೊಟ್ಟಳು. ಶಂತನು 'ನನ್ನಿಂದ ಸಾಕೋಣವಾಗದು' ಎನಲಿಕ್ಕೆ, ಉಳಿದ ಎಂಟನೇ ಮಗನ್ನ ತೆಗೆದುಕೊಂಡು, ತನ್ನ ಸ್ಥಳಕ್ಕೆ ಹೋದಳು. ಕೊಂಡುಹೋಗಿ ಏನು ಮಾಡಿದಳು ಎಂದಲ್ಲಿ, ಹೆಂಗಸಿನ ಸಮೀಪ ಗಂಡಸುಮಕ್ಕಳು ಇದ್ದಲ್ಲಿ ದಡ್ಡರಾಗಿ ಕೆಟ್ಟುಹೋಗ-ಥಾರೆಂದು, ತಾಯಿಯಾದಂಥ ಸುರನದಿಯು, ದೇವವ್ರತನೆಂದು ಹೆಸರುಳ್ಳಂಥ ಮಗನ ಶಿಕ್ಷಣಾರ್ಥವಾಗಿ, ದೇವತಿಗಳಿಗೆ ಗುರುವಾದಂಥ ಬೃಹಸ್ಪತಿಯ ಬಳಿಯಲ್ಲಿಟ್ಟಳು.

ದೇವವ್ರತನು ತನಗೆ ಯೋಗ್ಯವಾದ ಸಕಲ ವೇದಗಳನ್ನೂ ಕಲಿತನು. ದಾವ ಪ್ರಕಾರ ಅಭ್ಯಾಸ ಮಾಡಿದನು ಎಂದಲ್ಲಿ, ಗುರುವಿನ ಅನುಸರಿಸಿಕೊಂಡು ಅಂತಃ-ಶುದ್ಧಿಯುಳ್ಳವನಾಗಿ, ನಮ್ರಭಾವದಿಂದ ಯುಕ್ತನಾಗಿ ಚೆನ್ನಾಗಿ ವೇದಾಭ್ಯಾಸ ಮಾಡಿದನು. ಐವತ್ತು ವರ್ಷ ವೇದಾಭ್ಯಾಸ ಮುಗಿದಮ್ಯಾಲೆ, ಬೃಹಸ್ಪತಿ ಆಜ್ಞೆ ದಿಂದ, ತಾಯಿ ಜಾನ್ಹವಿ ಕರಕೊಂಡು ಬಂದು ತನ್ನ ಮಗನ್ನ, ಜಗತ್ತಿಗೆ ಶ್ರೇಷ್ಠ ನಾದಂಥ, ದೋಷರಹಿತ, ಸಮಸ್ತ ಗುಣಗಳಿಂದ ಸಮುದ್ರಸದೃಶನಾದಂಥ, ಭೃಗುಕುಲಕ್ಕೆ ಸ್ವಾಮಿಯಾದಂಥ ಪರಶುರಾಮದೇವರಲ್ಲಿಟ್ಟಳು. ಐವತ್ತು ವರ್ಷ ಪರಿಯಂತ ಪರಮಾತ್ಮಾದಿ ಪರತತ್ತ್ವವನ್ನು ಕೇಳಿದನು. ದೇವವ್ರತನು ತತ್ತ್ವ-ಶ್ರವಣಾನಂತರದಲ್ಲಿ ತನ್ನ ಕುಲವಿದ್ಯ ಸಂಪಾದಿಸಬೇಕಾಗಿ, ಅದೇ ಪರಶುರಾಮ-ದೇವರಲ್ಲಿ ಇಪ್ಪತ್ತೈದು ವರುಷಪರಿಯಂತ ಅಸ್ತ್ರವಿದ್ಯಾಭ್ಯಾಸ ಮಾಡಿದನು. ಈ

ಪ್ರಕಾರ ನೂರಾಇಪ್ಪತ್ತೈದು ವರುಷ ವಿದ್ಯಾಭ್ಯಾಸ ಮಾಡಿದಂಥ ದೇವವ್ರತನ್ನ, ತಾಯಿಯಾದಂಥ ಸುರನದಿಯು ಪರಶುರಾಮದೇವರ ಸಮೀಪದಿಂದ ಕೊಂಡು-ಬಂದು, ತನ್ನ ಸಮೀಪದಲ್ಲಿಟ್ಟುಕೊಂಡಳು. ಏನುಕಾರಣ ಇಟ್ಟುಕೊಂಡಳು ಎಂದೆಲ್ಲಿ, ತಂದಿಯಾದ ಶಂತನುಚಕ್ರವರ್ತಿಗೆ ಕೊಡೋದರಗೋಸ್ಕರ ತನ್ನ ತೀರ ದಲ್ಲಿಟ್ಟುಕೊಂಡಳು.

ದೇವವ್ರತನು ತಾಯೀ ಸಮೀಪದಲ್ಲಿ ಶಸ್ತ್ರವಿದ್ಯಾ ತೋರಿಸತಾ, ಗುರಿಗಳ ಒಡ್ಡಿ ಬಾಣ ಎಸೀಥಾನೆ. ಭಾಗೀರಥೀ ಪ್ರವಾಹ ಹರೀಗೊಡಪೆ, ಬಾಣನ ಪಂಜರ ದಿಂದ ಹರಿಗಟ್ಟಿ ಜಲಕ್ರೀಡಿ ಮಾಡಥಾನೆ. ಆದೇ ಸಮಯದಲ್ಲಿ ದೇವವ್ರತನ ತಂದಿಯಾದಂಥ ಶಂತನುಚಕ್ರವರ್ತಿ, ಸೇನಿಯಿಂದ ಯುಕ್ತನಾಗಿ ಮೃಗಾರ್ಥಿಯಾಗಿ ಬ್ಯಾಟಿಗೆ ಬಂದಿದ್ದ. ಮೃಗನ ಬೆನ್ನಟ್ಟಿ ಬಹಳ ನೀರಡಿಸಿ, ಸುರನದೀತೀರಕ್ಕೆ ಬರಥಾನೆ. ಪಾತ್ರದೊಳಗೆ ಉದಕವಿಲ್ಲದ್ದು ಕಂಡು, ಬಹಳ ಆಶ್ಚರ್ಯ ಉಳ್ಳಾತನಾಗಿ, ಇಲ್ಲಿ ಉದಕವಿಲ್ಲದ್ದಕ್ಕೆ ನಿಮಿತ್ತವೇನು ಚೆನ್ನಾಗಿ ವಿಚಾರ ಮಾಡಬೇಕೆಂದು, ಮೇಲುಭಾಗಕ್ಕೆ ನೀರು ಇದ್ದಾವೆಂದು ತೀರ ಹಿಡದು ನೋಡತಾ ಬರಥಾನೆ. ಆ ವ್ಯಾಳ್ಯಾದಲ್ಲಿ ಶರಪಂಜರ ಕಟ್ಟಿ, ಅಸ್ತ್ರಗಳಿಂದ ಕ್ರೀಡಿಸುವಂಥ ತನ್ನ ಮಗನ್ನ ನೋಡಿದ. ದೇವವ್ರತನು ತನ್ನ ತಂದಿಯಾದಂಥ ಶಂತನುಚಕ್ರವರ್ತಿಯ ಕಂಡು, ಆದೇ ಕ್ಷಣದಲ್ಲಿ ಜಲದಲ್ಲಿ ಅದೃಶ್ಯನಾದನು. ಒಮ್ಮಿಂದೊಮ್ಮಿಗೇ ಕಾಣಬಾರದ ಹಾಂಗೆ ಆದನೆಂದು ಭ್ರಾಂತಿಯುಳ್ಳವನಾಗಿ, ಈ ಪುರುಷ ದಾವನಾದಾನು ಎಂದು ವಿಚಾರಮಾಡತ ನಿಂದಿರಲಿಕ್ಕೆ, ಭಾಗೀರಥೀಯು ಮೊದಲಪ್ಪಂದೆ ಸ್ತ್ರೀರೂಪ ಧರಿಸಿ, ಮಗನ್ನ ಕೈಲಿ ಹಿಡಕೊಂಡು, ಗಂಡನ ಸಮೀಪಕ್ಕೆ ಬಂದು ಮಾತನಾಡ್ಯಾಳೆ. 'ಈ ಬಾಲಕ ನಿನ್ನ ಮಗನಿದ್ದಾನೆ. ಅಸ್ತ್ರವಿದ್ಯದಲ್ಲಿ ನಿಪುಣನಾಗ್ಯಾನೆ. ಸಕಲ ವೇದಗಳು, ಶಾಸ್ತ್ರಗಳು ಓದ್ಯಾನೆ. ಈತಗಿಂತ ಹಿರೇರು ಏಳು ಮಂದಿಯು ಸತ್ತರೆಂದು ಕ್ಲೇಶ ಹಚ್ಚಿಕೋಬ್ಯಾಡ. ಅವರು ಏಳು ಮಂದಿ ವಸುಗಳು ನಾರಾಯಣನ ಪಾದ ಸ್ಪರ್ಶದಿಂದ ಪವಿತ್ರವಾದಂಥ ನನ್ನ ಉದಕದೊಳಗೆ, ದೇಹಗಳ ಬಿಟ್ಟು ತಮ್ಮ ಮೂಲರೂಪ ಐದಿದರು. ಈ ಮಗನಿಂದ ಬಹಳ ಸುಖಬಡತಿ' ಎಂದು ಮಾತನಾಡಿ, ದೇವವ್ರತನ ಶಂತನುಚಕ್ರವರ್ತಿ ಕೈಯ ಕೊಟ್ಟು ಅದೃಶ್ಯಳಾದಳು.

ಅರಸಾದಂಥ ಶಂತನುಚಕ್ರವರ್ತಿಯು, ದೇವವ್ರತನ ಕೂಡಿಕೊಂಡು ತನ್ನ ಮನಿಗೆ ಬಂದನು. ತರುವಾಯದಲ್ಲಿ ಯುವರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ, ಮಗನ ಸದ್ಗುಣಗಳ ಕಂಡು ಬಹಳ ಸಂತೋಷಬಟ್ಟನು. ದೇವವ್ರತನು ಕೆಲವು ಕಾಲ ಪ್ರಧಾನಿಪಟ್ಟ ಆಳಿದನು. ಬಹುಕಾಲ ಪ್ರಧಾನಿಪಟ್ಟ ಮಾಡಲಿಕ್ಕೆ ಮನಸ್ಸು ಬಾರದ ಪ್ರಯುಕ್ತ, ತಮ್ಮ ತಂದೀ ಸಮೀಪಕ್ಕೆ ಬಂದು, 'ರಾಯಾ ನೀ ಅರಸತ್ವ ಆಳತಿದ್ದಿ. ಪ್ರಧಾನಿಯ ಕೊಂಡು ಏನು ಮಾಡತಿದ್ದಿ. ನಾನು ಕಲಿತಂಥ ಅಸ್ತ್ರವಿದ್ಯ

ಮುಸಳಿಸಿ ಹೋಗೇದೆ. ಪುನಃ ವಿಷ್ಣ ಕಲೀಲಿಕ್ಕೆ ಹೋದೇನು' ಎಂದು ಶಂತನು ಚಕ್ರವರ್ತಿಯು ಆಜ್ಞೆ ತೆಗೆದುಕೊಂಡು, ಬೃಹಸ್ಪತಿಯ ಸಮೀಪಕ್ಕೆ ಹೋಗಿ, ಐನತ್ತು ವರುಷ ಪರಿಯಂತ ವೇದಾಭ್ಯಾಸ ಮಾಡಿದನು. ತದನಂತರ ಮತ್ತೆ ಪರಶುರಾವ:ದೇವರ ಸಮೀಪಕ್ಕೆ ಹೋಗಿ ಶಸ್ತ್ರಾಭ್ಯಾಸ ಮಾಡಿದನು. ಇದರ ಹೊರ್ತು, ಮುನ್ನೂರು ವರುಷ ಪರಮಾತ್ಮವಿಷಯಕವಾವ ತತ್ತ್ವವನ್ನು ಉಪದೇಶ ಮಾಡಿಸಿಕೊಂಡು ದೇವವ್ರತ, ಪರಶುರಾಮದೇವರ ದೆಸೆಯಿಂದ ಸರ್ವಜ್ಞತ್ವ ಐದಿದನು. ಪರಶುರಾಮದೇವರು ಎಂಥಾತ ಎಂದರೆ, ಸಮಸ್ತ ವಿದ್ಯಗಳಿಗೆ ಅಧಿಪತಿ ಯಾದಂಥಾತ, ಸಕಲ ಗುಣಗಳಿಂದ ಪರಿಪೂರ್ಣನಾದಂಥಾತ. ಇಂಥಾ ಪರಶು-ರಾಮದೇವರಲ್ಲಿ ಓದಿಕೊಂಡು, ದೇವವ್ರತನು ಸರ್ವಜ್ಞನಾಗೋದು ಏನು ಆಶ್ಚರ್ಯ. ಆರಬ್ಹಾಂತಗಾಮಿಯೂದ ದೇವವ್ರತನು, ತಂದಿಯಾದ ಶಂತನುಚಕ್ರವರ್ತಿಯ ಸೇವಿ ಮಾಡಿಕೋತಾ ಸಂತೋಷದಿಂದ ಇರಹೊಕ್ಕನು.

ದೇವವ್ರತನ ವಾರಗಿಯವರಾದ ಕೃಪ, ಕೃಪೀ, ದ್ರೋಣ, ದ್ರುಪದ, ವಿರಾಟ, ಸತ್ಯವತೀ ಇವರ ಉತ್ಪತ್ತಿಪ್ರಕಾರ ಹೇಳಥಾರೆ. ದಾವ ಸಮುಯದಲ್ಲಿ ಸುರನದಿಯು ಎಂಟನೇ ಮಗನ್ನ ಹಡದಳೋ, ಅದೇ ಸಮುಯದಲ್ಲಿ ಶಂತನು-ಚಕ್ರವರ್ತಿ ಮೃಗಬ್ಯಾಟಿಗೆ ಹೋಗಿದ್ದ. ಶರದ್ವತಋಷಿಯಲ್ಲಿ ಹುಟ್ಟಿ, ವನದಲ್ಲಿದ್ದಂಥ ಎರಡು ಶಿಶುಗಳನ್ನು ಕಂಡನು ಅವಳೀಜವಳೀ ಒಂದು ಹೆಣ್ಣು, ಒಂದು ಗಂಡು, ಪುರುಷನಿಂದಲೇವೇ ಹುಟ್ಟಿದವು. ಇತರ ಅವಳೀಜವಳೀ ನೋಡಲಾಗಿ ಉತ್ತಮ ವಾದಂಥಾವು. ಏನುಕಾರಣ ಎಂದಲ್ಲಿ, ಅಯೋನಿಜವಾದ ಕಾರಣ ಉತ್ತಮವೆಂದು ಹೇಳಿಧಾಂಗಾಯಿತು. ಶರದ್ವತಋಷಿಯಿಂದ ಹುಟ್ಟಿದ ಭಾವ ವಿಸ್ತಾರ ಮಾಡಿ ಹೇಳಥಾರೆ. ಶರದ್ವತಋಷಿಯು ತಪಸ್ಸು ಮಾಡತಿರಲಾಗಿ, ದೈವಾನುವಶದಿಂದ ಏಚಾರಮಾರ್ಗದಲ್ಲಿ ಹೋಗುವಂಥ, ಊರ್ವಶೀ ಎಂಬ ಅಪ್ಸರಸ್ತ್ರೀಯಳ ಕಂಡ ಮಾತ್ರದಿಂದ ಮನಸ್ಸು ವಿಕಾರವಾಗಿ, ಯಾವತ್ತೂ ವೀರ್ಯ ಜಿಗಳಿ ಗಲಗಿನ ಪೊದರೊಳಗೆ ಬಿತ್ತು. ಆ ವೀರ್ಯದಿಂದ ಅವಳೀಜವಳೀ ಆದವು. ಈ ಪುರುಷನು, ಈ ಸ್ತ್ರೀಯಳು ಪೂರ್ವದಲ್ಲಿ ದಾರು ಎಂದರೆ, ಏಕಾದಶರುದ್ರರೊಳಗೆ ವಿಷ್ಣುಭನೆಂಬ ರುದ್ರ. ಇಲ್ಲಿ ಏನುಕಾರಣ ಹುಟ್ಟಿದ ಎಂದರೆ, ನಾರಾಯಣನು ಭೂಭಾರ ಸಂಹಾರ ಮಾಡುವಾಗ ಸಹಕಾರಿಯಾಗಿ, ದೇವರ ಸೇವಿ ಮಾಡಬೇಕೆಂದು ಹುಟ್ಟಿದನು. ಹಾಂಗೆ ಬೃಹಸ್ಪತಿಸತಿಯಾದ ತಾರಾದೇವಿಯು ಹುಟ್ಟಿದಳು. ಈ ಎರಡು ಶಿಶುಗಳನ್ನು ಶಂತನುಚಕ್ರವರ್ತಿಯು ನೋಡಿ, ಬಹಳ ಕೃಪಾದಿಂದ ಯುಕ್ತನಾಗಿ ತನ್ನ ಮನಿಗೆ ತೆಗೆದುಕೊಂಡು ಬಂದನು. ತದನಂತರದಲ್ಲಿ ಕೃಪ, ಕೃಪೀ, ಎಂದು ನಾಮಕರಣ ಮಾಡಿದನು. ತರುವಾಯ ಶರದ್ವತ ಹಸ್ತಿನಾವತಿಗೆ ಬಂದು, ತನ್ನ ಮಕ್ಕಳೆಂದು ಬ್ರಾಹ್ಮಣರ ಸಂಸ್ಕಾರ ಮಾಡಿಸಿ ಹೋದನು. ಆ ಕೃಪಾಚಾರ್ಯ ವಿಷ್ಣುಸಂಬಂಧಿ

ಯಾದಂಥ ತಪಸ್ಸು ಮಾಡಿದನು. ಕೃಪಾಚಾರ್ಯನು ಮಾಡಿದಂಥ ತಪಸ್ಸಿಗೆ ಸ್ವಾಮಿ ಬಹಳೇ ಮೆಚ್ಚಿ, ಆ ವ್ಯಾಳ್ಯಾದಲ್ಲಿ ಬ್ರಹ್ಮಾದಿಗಳಿಗೆ ಈಶನಾದಂಥ ನಾರಾಯಣನು, ಮನುಕಲ್ಪ ಪರಿಯಂತ ಆಯುಷ್ಯ ಕೊಟ್ಟನು. ಹಾಂಗೆ 'ಮುಂದೆ ಆಗೋ ಅಂಥಾ ಸಪ್ತಋಷಿಗಳೊಳಗೆ ಒಬ್ಬ ಆಗು' ಎಂದು ವರವು ಕೊಟ್ಟನು. ತರುವಾಯ ಕೃಪಾಚಾರ್ಯನು ಶಂತನು ಚಕ್ರವರ್ತಿಯ ಮಗನು ಆಗಿದ್ದನು. ದೇವವ್ರತ, ವಿದ್ಯ ಸಂಪಾದಿಸಿ ಬಂದ ತರುವಾಯ, ಕೃಪಾಚಾರ್ಯ ದೇವವ್ರತನ ಸಂಗಡ ಗೆಳಿತನ ಕಟ್ಟಿ, ಅಣ್ಣತಮ್ಮಂದಿರೋಪಾದಿ ಮನೆಯೊಳಗಿದ್ದರು. ರಾಯು ತನ್ನ ಮಕ್ಕಳೋಪಾದಿ ಸಾಕಿದನು. ಕೃಪನು ತನ್ನ ತಂದಿಯಾದ ಶಂತನುಚಕ್ರವರ್ತಿ ದೆಸಿಯಿಂದ ಶಸ್ತ್ರವಿದ್ಯಾಭ್ಯಾಸ ಮಾಡಿದನು. ವಿಶ್ವಾಮಿತ್ರನ ಗುರುವನ್ನ ಮಾಡಿಕೊಂಡು ಸಮಸ್ತ ವೇದಶಾಸ್ತ್ರ ಅಭ್ಯಾಸ ಮಾಡಿದನು. ವೇದವ್ಯಾಸದೇವರ ದೆಸಿಯಿಂದ ತತ್ತ್ವಜ್ಞಾನವನ್ನು ಐದಿ ಸರ್ವಜ್ಞನಾದನು. ದ್ರೋಣ, ಕೃಪಾಚಾರ್ಯರು ಸಮವಯಸ್ಕರೆಂದು ಹೇಳಥಾರೆ.

ಬೃಹಸ್ಪತಿಯ ಮಗನಾದಂಥ ಭಾರದ್ವಾಜಋಷಿಯು ಗಂಗಾಸ್ನಾನಕ್ಕೆ ಹೋಗಿದ್ದ. ಆ ವ್ಯಾಳ್ಯಾದಲ್ಲಿ ದೇವತೋಪಯೋಗ್ಯಳಾದಂಥ 'ಘೃತಾಚೀ' ಎಂಬ ಅಪ್ಸರಸ್ತ್ರೀಯಳ ಕಂಡನು. ಬತ್ತಲೆ ಸ್ನಾನ ಮಾಡತಿದ್ದಳು. ಕಂಡಮಾತ್ರದಿಂದ ಭಾರದ್ವಾಜಋಷಿಯ ವೀರ್ಯ ಜಿಗಳಿತು. ಅಮೋಘ ವೀರ್ಯ ವ್ಯರ್ಥವಾಗಬಾರದೆಂದು ದೊನ್ನಿಯೊಳಗೆ ಇಟ್ಟನು. ಆ ದೊನ್ನಿ ತನ್ನ ಕಮಂಡಲದೊಳಗೆ ಇಟ್ಟುಕೊಂಡನು. ಆ ರೇತಸ್ಸಿನಿಂದ ಸಾಕ್ಷಾತ್ ಬೃಹಸ್ಪತಿ, ಬ್ರಹ್ಮದೇವರ ಅಂಶದಿಂದ ಯುಕ್ತನಾಗಿ ಹುಟ್ಟಿದನು. ಏನುಕಾರಣವೆಂದಲ್ಲಿ, ನಾರಾಯಣ ಭೂಭಾರ ಸಂಹಾರ ಮಾತೋ ವ್ಯಾಳ್ಯಾದಲ್ಲಿ, ತಾನೂ ದೇವರ ಅನುಸರಿಸಿ ಕೆಲವು ಕಾರ್ಯಗಳ ಮಾಡಬೇಕೆಂದು, ಸ್ವಾಮೀ ಸೇವೀ ಸಿವಿತ್ತ ಹುಟ್ಟಿದನು. ಹುಟ್ಟಿದಂಥ ಮಗಗೆ, ತಂದಿಯಾದಂಥ ಭಾರದ್ವಾಜಋಷಿ 'ದ್ರೋಣ'ನೆಂದು ನಾಮಕರಣ ಮಾಡಿದನು. ಅನಂತರದಲ್ಲಿ ಶಾಸ್ತ್ರಗಳಿಂದ ಸಹಿತವಾದಂಥ ಸಮಸ್ತ ವೇದಗಳೂ ಅಭ್ಯಾಸ ಮಾಡಿಸಿದನು. ದ್ರೋಣನು ಆಲಸ್ಯವಿಲ್ಲದಲೆ ಭಾರದ್ವಾಜನ ದೆಸಿಯಿಂದ ಸರ್ವಜ್ಞತ್ವವನ್ನು ಐದಿದನು.

ದ್ರುಪದರಾಯನು ದ್ರೋಣನ ಸಮೀಪಿಯನೆಂದು ಹೇಳಥಾರೆ. ದ್ರೋಣ ಹುಟ್ಟಿದ ಸಮಯದಲ್ಲೇ ಪೆ ಹುಟ್ಟಿದನು. ಪಾಂಚಾಲದೇಶಕ್ಕೆ ಅಧಿಪತಿಯಾದಂಥ ಪ್ರಷತರಾಯ, ತನಗೆ ಮಕ್ಕಳಿಲ್ಲವೆಂದು ವನಕ್ಕೆ ಹೋಗಿ, ನಾರಾಯಣನ ಕುರಿತು ಮಹತ್ತಾದಂಥ ತಪಸ್ಸು ಮಾಡತಿದ್ದ. ಅದೇ ಸಮಯದಲ್ಲಿ ಉತ್ತಮಳಾದಂಥ ಅಪ್ಸರಸ್ತ್ರೀಯಳು ಸುಳಿದಳು. ಕಂಡಮಾತ್ರದಿಂದ ಶೀಘ್ರ ರಾಯನ ವೀರ್ಯ ಜಿಗಳಿತು. ಜಿತೇಂದ್ರಿಯನಲ್ಲ ಧೈರ್ಯಭ್ರಷ್ಟನೆಂದು ತನಗೆ ಅಪ್ಸರಸ್ತ್ರೀಯಳು ನಕ್ಕಾಳೆಂದು, ಲಜ್ಜೆಯಿಂದ ಯುಕ್ತನಾಗಿ ಶೀಘ್ರದಿಂದ, ವೀರ್ಯವನ್ನು ಪಾದಗಳಿಂದ

ಮಣ್ಣು ಮುಚ್ಚಿದನು. ಆ ರೇತಸ್ಸಿನ ದೆಸಿಯಿಂದ ಪೃಷತರಾಯಗೆ ಮಗನು ಆದನು. ಪೂರ್ವದಲ್ಲಿ ಆತ ದಾರು ಎಂದರೆ, 'ಹೂಹೂ' ಎಂಬ ನಾಮವುಳ್ಳಂಥ ಗಂಧರ್ವನು. ಆತ ಆವಹನಾಮಕ ಮರುತಾಂಶದಿಂದ ಹುಟ್ಟಿದನು. ದ್ರೋಣನ ತಂದಿಯಾದಂಥ ಭಾರದ್ವಾಜಋಷಿಯಲ್ಲಿ, ಈ ಕುಮಾರನು ದ್ರೋಣನಿಂದ ಸಹಿತನಾಗಿ, ವೇದಗಳೇ ಮೊದಲಾದ ಸಕಲ ಶಾಸ್ತ್ರಗಳ ಒದಿಕೊಂಡನು. ದ್ರೋಣಗೂ ಈ ಕುಮಾರಗೂ ಬಹಳ ಗೆಳಿತನ ಬಿತ್ತು. ಅದರಿಂಥ ದ್ರೋಣನ ಸಂಗಡ ವೇದಾಭ್ಯಾಸ ಮಾಡುವ ಸಮಯದಲ್ಲಿ ಮಾತನಾಡಿದನು. 'ನಮ್ಮ ತಂದೀ ರಾಜ್ಯ ನನಗೆ ಬಂದೀತು, ರಾಜ್ಯಾಧಿಪತ್ಯ ನಾವಿಬ್ಬರೂ ಕೂಡಿ ಅನುಭವಿಸೋಣಂತೆ' ಎಂದು ಗುರು-ಪುತ್ರನಾದಂಥ ದ್ರೋಣನ ಕೂಡ ಮಾತನಾಡಿದನು. ಆ ಕುಮಾರನ ಹೆಸರು ಏನಂದರೆ ಹೇಳಥಾರೆ. ಶೀಘ್ರ ಪಾದಗಳಿಂದ ರೇತಸ್ಸು ಮುಚ್ಚಿದ್ದರಿಂದ ದ್ರುಪದ ಎಂಬೋ ನಾಮಕರಣವಾಯಿತು. ದ್ರುಪದರಾಯ ಪಾಂಚಾಲದೇಶಾಧಿಪತ್ಯವನ್ನು ಐದಿದನು.

ಅನಂತರದಲ್ಲಿ ದ್ರೋಣನು <u>ನಿಯತಪತ್ನಿಯಾದಂಥ</u> ಕೃಪಿಯನ್ನು ಮದುವಿ ಮಾಡಿಕೊಂಡು, ಸರ್ವಪ್ರತಿಗ್ರಹದಿಂದ ರಹಿತನಾಗಿ ಪಟ್ಟಣದಲ್ಲಿರತಿದ್ದನು. ಸರ್ವ-ಪ್ರತಿಗ್ರಹ ಬಿಟ್ಟು ದ್ರೋಣಗೆ ಜೀವನೋಪಾಯ ಹೇಳಥಾರೆ. ಶಿಲೋಂಚ್ಛವೃತ್ತಿಯಿಂದ ದೇಹಧಾರಣ ಮಾಡಿಕೊಂಡು, ಬಂದಂಥ ಅತಿಥಿಗಳಿಗೆ ಅನ್ನ ಕೊಡತಾ, ಯಜ್ಞಾದಿ ಕರ್ಮಗಳ ಮಾಡತಾ, ಶುದ್ಧವಾದಂಥ ವೈಷ್ಣವಶ್ರೇಷ್ಠಧರ್ಮದಿಂದ ಯುಕ್ತನಾಗಿ, ಹಸ್ತಿನಾವತಿಯಲ್ಲಿ ದೇವವ್ರತನ ಸಂಗಡ ಗೆಳಿತನ ಕಟ್ಟಿ, ತನ್ನ ಮೈದುನನಾದಂಥ ಕೃಪಾಚಾರ್ಯರ ಬಳಿಯಲ್ಲಿ ಇರಹೊಕ್ಕನು. <u>ವಿರಾಟರಾಯನೂ</u> ಇವರ <u>ಸಮವಯಸ್ಕನೆಂದು</u> ಹೇಳಥಾರೆ.

ದೇವವ್ರತ, ಕೃಪ, ದ್ರೋಣ, ದ್ರುಪದ ಇವರು ಹುಟ್ಟಿದ ಸಮಯದಲ್ಲೇವೆ ವಿರಾಟರಾಯನು ಹುಟ್ಟಿದನು. ಇವನು ಪೂರ್ವದಲ್ಲಿ ದಾರು ಎಂದರೆ, 'ಹಾಹಾ' ಎಂಬ ನಾಮದಿಂದ ಪ್ರಸಿದ್ಧನಾದಂಥ ಗಂಧರ್ವಶ್ರೇಷ್ಠ ಬ್ರಹ್ಮದೇವರ ಗಾಯಕ. ವಿವಹ ಎಂಬ ಮರುತನ ಅಂಶದಿಂದ ಹುಟ್ಟಿದನು. ಆ ವಿರಾಟರಾಯನು ಪ್ರಜಾ-ಪಾಲನಾದಿ ಧರ್ಮಗಳಿಂದ ರಾಜ್ಯಭಾರ ಮಾಡತ ಇರಹೊಕ್ಕನು. ಶಂತನುಚಕ್ರವರ್ತಿ, ಭಾಗೀರಥೀ ದೇವವ್ರತನ ಹಡದು ಹೋದಮ್ಯಾಲೆ, ಪುನಃ ಮದುವಿ ಮಾಡಿ-ಕೊಂಡಿದ್ದಿಲ್ಲ. ಒಂದಾನೊಂದು ದಿವಸ ಶಂತನುಚಕ್ರವರ್ತಿ ಮೃಗಬ್ಯಾಟಿಗೋಸ್ಕರ ಹೋಗಿರಲಿಕ್ಕೆ, ಯೋಜನಗಂಧಿಯ ಸುವಾಸನಿ ಬಂತು. ಗಂಧಪರಿಮಳ ಆಸ್ವಾದಸ್ತ ಹೋಗಲಿಕ್ಕೆ, ಯಮುನಾದೇವಿಯ ತೀರದಲ್ಲಿ ಧರ್ಮನಾವಿ ದಾಟಸ್ತಾಳೆ. ರೂಪ ಲಾವಣ್ಯದಿಂದ ಬಹು ಚಲುವಿ. ಕಂಡಮಾತ್ರದಿಂದ ಪುರುಷಗೆ ಕಾಮೋದ್ರೇಕ ಹಚ್ಚತಿಹೋದು. ಇಂಥಾ ಅಂಗೋಟಚಲ್ವಿಕೆಯುಳ್ಳಂಥ ಕನ್ನಿಕೇಶ್ರೇಷ್ಠಳನ್ನು

ಕಂಡನು. ಈಕೆ ಪೂರ್ವದಲ್ಲಿ ದಾರು ಎಂದರೆ, ಚಿರಪಿತೃವಿನ ಮಗಳು ಸತೀ ಎಂದು ನಾಮವುಳ್ಳಾಕೆ. ನಾರಾಯಣನೇ ತನ್ನ ಮಗನಾಗಬೇಕೆಂದು ತಪಸ್ಸು ಮಾಡಿದ್ದಳು. ಚಿರಪಿತೃಪುತ್ರಿಯ ತಪಸ್ಸಿನಿಂದ ಪ್ರೀತನಾಗಿ ನಾರಾಯಣನು ವರ ಕೊಟ್ಟನು. 'ನಾನು ನಿನ್ನ ಮಗನಾಗಥೀನಿ' ಎಂದು ಆಕೆ ಬೇಡಿದ ವರವನ್ನು ಕೊಟ್ಟನು. ಆದಕಾರಣ ವಸುರಾಯನ ಮಗಳಾಗಿ ಹುಟ್ಟಿದಳು. ಅನಂತರದಲ್ಲಿ ಅಂಬಿಗೇರಿಗೆ ಅಧಿಪತಿಯಾದಂಥ ದಾಶರಾಯನ ಮನಿಯೊಳಗೆ ಬೆಳೆದಳು. ಆಕೆಯಲ್ಲಿ ಸಾಕ್ಷಾತ್ ನಾರಾಯಣ ವ್ಯಾಸರೂಪದಿಂದ ಆವಿರ್ಭೂತನಾದನು. ಶಂತನುಚಕ್ರವರ್ತಿಯು ಆ ಕನ್ನಿಕೀ ಕಂಡಮಾತ್ರದಿಂದ ಕಾಮೋದ್ರೇಕವುಳ್ಳವನಾದನು. ಪ್ರತ್ಯಕ್ಷ ಹೆಂಗಸಿನ್ನ ಹ್ಯಾಂಗೆ ಕೇಳಬೇಕು, ಕೇಳಲಿಕ್ಕೆ ಬಾರದು. ಆದಕಾರಣ ಆಕೆಯ ತಂದಿಯಾದಂಥ ದಾಶರಾಯನ ಸವೀಪಕ್ಕೆ ಹೋಗಿ, 'ನಿನ್ನ ಮಗಳನ್ನ ನನಗೆ ಮದುವಿ ಮಾಡಿಕೊಡು' ಎನಲಿಕ್ಕೆ ದಾಶರಾಯ ಮಾತನಾಡಿದ. 'ಅವಶ್ಯ ಕೊಟ್ಟೀನು, ನೀವು ಕುರುಕುಲೋತ್ಪನ್ನರಿದ್ದೀರಿ, ನಿನ್ನಲ್ಲಿ ದಾರು ದಾರು ಮಕ್ಕಳಿದ್ದಾರೆ?' ಎಂದು ಕೇಳಲಾಗಿ, 'ನನಗೆ ದೇವವ್ರತನೆಂಬ ಒಬ್ಬ ಮಗನಿದ್ದಾನೆ' ಎಂದು ಹೇಳಿದನು. ದಾಶರಾಯ ಈ ಮಾತು ಕೇಳಿ 'ದೇವವ್ರತ ಮಹಾಪ್ರಬಲನಿದ್ದಾನೆ. ಮಲಮಗನ ಮ್ಯಾಲೆ ನನ್ನ ಮಗಳ ಹ್ಯಾಂಗೆ ಕೊಡಲಿ? ನಿನ್ನ ಮಗ ದೇವವ್ರತ ಬಲಿಷ್ಠತನದಿಂದ ರಾಜ್ಯವಾಳ್ಯಾನು. ನನ್ನ ಮಗಳ ಮಕ್ಕಳಿಗೆ ರಾಜ್ಯ ಇಲ್ಲದೇಹೋದೀತು. ನನ್ನ ಮಗಳ ಮಕ್ಕಳಿಗೆ ರಾಜ್ಯ ಕೊಡತೀನಂತ ಮಾತು ಕೊಟ್ಟರೆ, ಅವಶ್ಯ ನನ್ನ ಮಗಳ ನಿನಗೆ ಕೊಟ್ಟೀನು' ಎಂದು ಮಾತನಾಡಲಿಕ್ಕೆ, 'ಇಂಥಾ ಪ್ರಬುದ್ಧ ಮಗಗೆ ಚಿತ್ತಕ್ಷೋಭ ಮಾಡಿ, ಈ ಸ್ತ್ರೀಯಳ ಕೊಂಡು ಏನು ಮಾಡ್ಯೀನು!' ಎಂದು ಬಹಳ ವಿಮನಸ್ಕನಾಗಿ ಮಾತು ಕೊಡದೆ, ತನ್ನ ಹಸ್ತಿನಾವತಿಗೆ ತಿರಿಗಿ ಬಂದು, ಇಂಥಾ ಚಲೋ ಸ್ತ್ರೀಯಳು ತನಗೆ ಆಗಲಿಲ್ಲವೆಂದು, ಚಿಂತಿಯಿಂದ ಮಾರಿ ಬಾಡಿಸಿಕೊಂಡು ಕುಳಿತಿದ್ದ ತಂದಿಯನ್ನು ನೋಡಿ, ದೇವವ್ರತನು ಶೀಘ್ರದಿಂದ ಸಾರಥಿಯನ್ನು ಕೇಳಿದನು. ಆದ್ಯಂತ ವರ್ತಮಾನ ಸಾರಥಿ ಹೇಳಿದನು.

ತಂದೀ ಅಭಿಪ್ರಾಯ ಮಾಡಬೇಕಾಗಿ, ಉತ್ತಮ ಮಗನಾದಂಥ ದೇವವ್ರತನು ದಾಶರಾಯನ ಸವೀಪಕ್ಕೆ ಹೋಗಿ, 'ನಿನ್ನ ಮಗಳ ನಮ್ಮ ತಂದಿಗೆ ಮದುವಿ ಮಾಡಿಕೊಡು' ಎನಲಿಕ್ಕೆ 'ಬಲಿಷ್ಠ ಮಗ ಇರಲಿಕ್ಕೆ ನನ್ನ ಮಗಳ ಮಗಗೆ ರಾಜ್ಯ ಇಲ್ಲದೆ ಹೋದೀತಲ್ಲ' ಎನ್ನಲು, ದಾಶರಾಯಗೆ ವಿಶ್ವಾಸಾರ್ಥವಾಗಿ ದೇವವ್ರತನು ಮಾತನಾಡಿದನು. ಪ್ರತಿಜ್ಞೆ ಮಾಡಥಾನೆ. "ಸರ್ವಥಾ ರಾಜ್ಯಪ್ರತಿಪಾಲನಿ ಮಾಡೋಹಾಂಗೆ ಇಲ್ಲ. 'ನೀನು ಆಳದಿದ್ದರೇನಾಯಿತು ನಿನ್ನ ಹೊಟ್ಟೀಲಿ ಹುಟ್ಟಿದಂಥ ಮಕ್ಕಳೂ ಕೂಡ ಕದನ ತೆಗೆದಾರು' ಅಂದಿ. ನಿನ್ನಿಂದ ಹ್ಯಾಂಗೆ ಭಯವಿಲ್ಲವೋ, ಹಾಂಗೆ ನನ್ನ ಸಂತಾನದಲ್ಲಿ ಕೂಡ ಸರ್ವಥಾ ಭಯ

ಬ್ಯಾಡ. ಏನುಕಾರಣವೆಂದಲ್ಲಿ ನಾನಾದರೂ ವಿವಾಹ ಮಾಡಿಕೊಂಬೋ ಹಾಂಗೆ ಇಲ್ಲ. ಮಕ್ಕಳು ಎಲ್ಲಿಂದ ಆದಾರು! ನನ್ನ ಜೀವಮಾನ ಇರೋತನಕ ಊರ್ಧ್ವ-ರೇತಸ್ಸುಳ್ಳವನಾಗಥೀನಿ!" ಎಂದು ಪ್ರತಿಜ್ಞೆ ಮಾಡಿದ. ಈ ಪ್ರಕಾರ ಊರ್ಧ್ವ-ರೇತಸ್ಕವ್ರತ-ಪ್ರತಿಜ್ಞೆ ಮಾಡಲಿಕ್ಕೆ, ದೇವತೆಗಳು, ಭಯಂಕರವಾದಂಥ ವ್ರತದ ದೆಸೆಯಿಂದ ದೇವವ್ರತಗೆ ಭೀಷ್ಮ ಎಂದು ನಾಮಕರಣ ಮಾಡಿ, ದೇವದುಂದುಭಿ ವಾದ್ಯಗೈದು ಹೂವಿನ ಮಳಿಗರೆದರು. ಇದನ್ನೆಲ್ಲ ದಾಶರಾಯ ಕಂಡು ತನ್ನ ಮಗಳಾದಂಥ ಕಾಳೀದೇವಿಯ, ಭೀಷ್ಮನ ಕೈಯ ಕೊಟ್ಟನು. ದಾಶರಾಯ ಕೊಟ್ಟ ಕನ್ಯಾ ಕೊಂಡುಬಂದು ತಂದಿಗೆ ಸಮರ್ಪಿಸಿದನು. ತಂದಿ ಅಭಿಪ್ರಾಯ ತಿಳದು ಆತನ ಮನಸ್ಸಿನಂತೆ ದಾರು ಕಾರ್ಯ ಮಾಡಥಾನೆ, ಅವನು ಉತ್ತಮ ಮಗ; ಹೇಳಿಸಿಕೊಂಡು ಕೆಲಸ ಮಾಡುವವ ಮಧ್ಯಮ ಮಗ; ಒಂದು ಕಾರ್ಯ ಹೇಳಿದರೆ ಧೂಮಕೇತುನೋಪಾದಿ ಮಾಡಥಾನೆ ಅವ ಅಧಮ ಮಗ; ಹೇಳಿದರೂ ಮಾಡ-ವಲ್ಲವೇ ಇರಥಾನೆ ಅವ ಅಧಮ ಮಗನಾದರೂ ಮಗನಲ್ಲ; ರೇತೋದ್ವಾರದಿಂದ ಮೂತ್ರ ಅಶುದ್ಧ ಹೋದಹಾಂಗೆ, ಸರ್ವಥಾ ಅವ ಮಗನಲ್ಲ.

ಭೀಷ್ಮನಾದರೋ ಅಂಬಿಗೇರ ಮನಿಯಲ್ಲಿ ಬೆಳೆದಂಥ, ಕ್ಷತ್ರಿಯರಿಗೆ ಸ್ವೀಕಾರ ಮಾಡಲಿಕ್ಕೆ ಯೋಗ್ಯಳಲ್ಲದೆ ಇದ್ದಂಥ ಕನ್ನಿಕೆಯ, ತಂದಿಗೆ ಸಮರ್ಪಿಸಿ ಹ್ಯಾಂಗೆ ಮದುವಿ ಮಾಡಿದನು ಎಂದಲ್ಲಿ, ಈ ಕಾಳೀದೇವಿಯು ಅರಸಾದಂಥ ವಸುರಾಯನ ವೀರ್ಯದಿಂದ ಹುಟ್ಯಾಳೆ. ಆದ್ದರಿಂದ ಗುಣಾಢ್ಯಳಾದಂಥಾಕೆ, ಶೀಲಾಧಿಗುಣಗಳಿಂದ ಉತ್ಕೃಷ್ಟಳಾದಂಥಾಕೆ ಎಂದು ತಿಳದು ಶಂತನುಚಕ್ರವರ್ತಿಗೆ ಈ ಸತ್ಯವತೀಯನ್ನು ಮದುವಿ ಮಾಡಿದನು. ಇದರ ಹೊರ್ತು, ಸತ್ಯವಾಚ್ಯಶಬ್ದನಾದಂಥ ನಾರಾಯಣಗೆ ತಾಯಿಯಾದ ಕಾರಣದಿಂದ 'ಸತ್ಯವತೀ' ಎಂಬ ನಾಮದಿಂದ ಪ್ರಸಿದ್ಧಳಾದಂಥಾಕೆ ಎಂದು ತಿಳದು, ಶಂತನುಚಕ್ರವರ್ತಿಗೆ ಸತ್ಯವತೀಯನ್ನು ತಂದು ಮದುವಿ ಮಾಡಿದನು. ಮೊದಲೇ ಮೀನಿನ ಹೊಟ್ಟೆಯಲ್ಲಿ ಹುಟ್ಟಿದಕಾರಣ ಮತ್ಸ್ಯಗಂಧಿ ಯಾಗಿದ್ದಳು. ದಾಶರಾಯ ತನ್ನ ಸುನಿಗೆ ತಂದವ್ಯಾಲೆ ಕಾಳೀ ಎಂದು ನಾಮವಿಟ್ಟ ತರುವಾಯ, ಸಾಕ್ಷಾತ್ ನಾರಾಯಣ ವ್ಯಾಸರೂಪದಿಂದ ಅವತಾರವಾಡಿದ್ದರಿಂದ, ಸತ್ಯವತೀ ಎಂಬ ನಾಮದಿಂದ ಲೋಕದಲ್ಲಿ ಪ್ರಸಿದ್ಧಳಾದಳು. ಶಂತನುಚಕ್ರವರ್ತಿ ಯೋಗ್ಯಳಲ್ಲದೇ ಇದ್ದಂಥಾಕೆಯನ್ನು ಹ್ಯಾಂಗೆ ಮದುವಿ ಮಾಡಿಕೊಂಡ ಎಂದಲ್ಲಿ, ಪ್ರಾಯಃ, ಸಜ್ಜನರುಗಳ ಮನಸ್ಸು ಪಾಪವಾರ್ಗದಲ್ಲಿ ಪ್ರವರ್ತಿಸೋದಿಲ್ಲ. ಆದ-ಕಾರಣ ತನ್ನ ಮನಸ್ಸಾದರೂ ಈ ಸ್ತ್ರೀಯಳಲ್ಲಿ ಆಸಕ್ತವಾಯಿತು. ಇದು ಒಂದು ಕಾರಣ. ಕ್ಷತ್ರಿಯರಲ್ಲಿ ಹುಟ್ಟಿ ಅಂಬಿಗರವನ ಮನಿಯಲ್ಲಿ ಬೆಳೆದಾಳೆ ಎಂದು ತಿಳದು, ಈ ಕನ್ನಿಕೆ ಮದುವಿ ಮಾಡಿಕೊಂಡರೆ ತನಗೆ ಧರ್ಮವೆಂದು, ಧರ್ಮದಲ್ಲಿ ರತ-ನಾದಂಥ ಶಂತನುಚಕ್ರವರ್ತಿಯು ಮದುವಿ ಮಾಡಿಕೊಂಡನು. ಪ್ರಾಯಃ ಶಬ್ದ

ಏನುಕಾರಣ ಬಂತು ಎಂದಲ್ಲಿ ಚಂದ್ರ ಗುರುವಿನ ಹೆಂಡತಿಯನ್ನು ಹಿಡಕೊಂಡು ಬುಧನೆಂಬೋ ಮಗನ್ನ ಹಡದಿದ್ದಾನೆ. ಇಂದ್ರ ಅಹಲ್ಯಾದೇವಿ ಸಂಪರ್ಕ ಮಾಡಿದ್ದಾನೆ. ಆದ್ದರಿಂದ ಪ್ರಾಯಃ ಎಂದು ಹೇಳಿದರು. ಸತ್ಯವತೀಗೆ ಬಹುವರ್ಷ ಹೋಗಿದ್ದರೂ ಕನ್ಯಾವಸ್ಥೆ ಕೆಟ್ಟಿರಲಿಲ್ಲ. ಪರಾಶರಋಷಿಯು ವರವು ಕೊಟ್ಟಿದ್ದ, ಆದಕಾರಣದಿಂದ ಕನ್ಯಾವಸ್ಥೇಲೆ ಇದ್ದಳು. ತರುವಾಯ ಶಂತನುಚಕ್ರವರ್ತಿಯು, ಭೀಷ್ಮ ತನ್ನ ಮನೋಬಯಕೆ ಪೂರ್ಣಮಾಡಿಕೊಟ್ಟನೆಂದು ಬಹಳ ಪ್ರೀತನಾಗಿ, ತನ್ನ ಮಗ ಭೀಷ್ಮಗೆ 'ಸ್ವೇಚ್ಛಾಮರಣನಾಗು' ಎಂದು ವರವು ಕೊಟ್ಟಿದ್ದ. ಆದ್ದರಿಂದ ಉತ್ತರಾಯಣಮಾರ್ಗ ನೋಡತಾ, ಗಾಯದಿಂದ ಯುಕ್ತನಾಗಿ ರಣರಂಗದಲ್ಲಿ ಬದುಕಿದ್ದನು. ಇದರ ಹೊರ್ತು 'ರಣರಂಗದಲ್ಲಿ ಒಬ್ಬರಿಗೆ ಸೋಲ-ಬ್ಯಾಡ. ದಾವ ಪ್ರಕಾರದಿಂದಲೂ ಒಬ್ಬಾನೊಬ್ಬ ಪುರುಷನಿಂದಲೂ ಸೆಳೆಸಿಕೊಳ್ಳಲಿಕ್ಕೆ ಅರ್ಹನಾಗಬ್ಯಾಡ' ಎಂದು, ಈ ಪ್ರಕಾರ ವರಗಳು ಕೊಟ್ಟು, ಸತ್ಯವತೀ ಕೂಡ ಬಹುಕಾಲ ಭೋಗಿಸಿ, ಅನೇಕ ಪ್ರಕಾರ ಕ್ರೀಡಾ ಮಾಡಿ ಚಿತ್ರಾಂಗದ, ವಿಚಿತ್ರ-ವೀರ್ಯ ಎಂಬ ಇಬ್ಬರು ಮಕ್ಕಳನ್ನ ಹಡದನು. ತರುವಾಯ ಇಬ್ಬರು ಮಕ್ಕಳೂ ಬಾಲತ್ವದಲ್ಲಿರಲಿಕ್ಕೆ, ಶಂತನುಚಕ್ರವರ್ತಿ ವೈರಾಗ್ಯವುಳ್ಳವನಾಗಿ, ಈ ಜೀರ್ಣವಾದ ದೇಹ ಏನು ಪ್ರಯೋಜನ? ಅಗ್ನಿಯೊಳಗೆ ತುಪ್ಪ ಹಾಕಿದರೆ ಜ್ವಾಲಿ ಮತ್ತಿಷ್ಟು ಹ್ಯಾಂಗಾಗತ ಹೋಗತದೆ, ವಿಷಯಾಸಕ್ತಿಯೂ ಅದೇ ಪ್ರಕಾರ ಎಂದು ತಿಳದು, ಪರತತ್ತ್ವವಿಚಾರ ಮಾಡಿ, ಯೋಗಧ್ಯಾನಕ್ಕೆ ಕುಳಿತು ಲಯಚಿಂತನಿ ಮಾಡತ, ಸ್ವೇಚ್ಛೆಯಿಂದ ಮರಣ ಐದಿದನು. ಶಂತನು ಚಕ್ರವರ್ತಿ ತನ್ನ ಮೂಲರೂಪ ವರುಣನ್ನ ಕೂಡಿದನು.

ಸ್ವೇಚ್ಛಾಮರಣದ ಪ್ರಕಾರ ಹೇಳಥಾರೆ. ದಾವ ವ್ಯಾಳ್ಯಾದಲ್ಲಿ ಶರೀರ ಬಿಡಬೇಕೆಂಬ ಇಚ್ಛೆ ಆಗತದೆ, ಅದೇ ವ್ಯಾಳ್ಯಾದಲ್ಲಿ ಶರೀರ ಬಿಡಬೇಕು. ದಾವ ವ್ಯಾಳ್ಯಾದಲ್ಲಿ ಇಚ್ಛೆ ಆಗಲಿಲ್ಲ, ಆ ವ್ಯಾಳ್ಯದಲ್ಲಿ ಶರೀರ ಬಿಡಲಿಕ್ಕಿಲ್ಲ. ಸ್ವೇಚ್ಛಾ-ಮರಣವು ಶಾಶ್ವತವೆಂದು ತಿಳಿಯಬ್ಯಾಡಿ. ತನಗಿಂತ ಬಲವಂತ ಬಂದು ಯುದ್ಧದಲ್ಲಿ ಕೊಂದರೆ ಸ್ವೇಚ್ಛಾಮರಣ ನಿಯಮತ್ವವು ಕೆಡತದೆ. ಅದು ಹ್ಯಾಂಗೆಂದರೆ, ಚಿತ್ರಾಂಗದನು ಬಲವಂತನಾದ ಗಂಧರ್ವನಿಂದ ಸತ್ತುಹೋಗ್ಯಾನೆ. ಸ್ವೇಚ್ಛಾ-ಮರಣ ಕೆಟ್ಟುಹೋಗಲಿಕ್ಕೆ ಇನ್ನೊಂದು ನಿಮಿತ್ತ ಹೇಳಥಾರೆ. ದಾವ ಪುರುಷನು ವಿಷಯಭೋಗದಲ್ಲಿ ಅತ್ಯಾಸಕ್ತನಾಗಥಾನೆ, ಆದ್ದರಿಂದ ತಪೋಹೀನನಾಗಿ ಕ್ಷಯ-ರೋಗದಿಂದ ಸತ್ತೇನಂತ ಇಚ್ಛೆ ಮಾಡದಿದ್ದರೂ, ಸತ್ತುಹೋಗಥಾನೆ. ಅದು ಹ್ಯಾಂಗೆಂದರೆ, ಚಿತ್ರಾಂಗದನ ತಮ್ಮ ವಿಚಿತ್ರವೀರ್ಯ, ವಿಷಯಾಸಕ್ತಿಯಿಂದ ಕ್ಷಯರೋಗ ಹತ್ತಿ ಸತ್ತುಹೋಗಿದ್ದಾನೆ. ಅದು ಹ್ಯಾಂಗೆಂದರೆ ಮುಂದಿನ ಕಥಾ-ಸಂಗತಿ ಹೇಳಥಾರೆ.

(1) ಏಕ ಸಿಹಿಗಿಮನ ಮಾಡಲಿಲ್ಲ! ಪ್ರತಿಬಂಧಕ ಧರ್ಮಸೂಕ್ಷ್ಮ ಏನಿತ್ತು?
(2) ಭಿಷ್ಮ ಚಾಯಿಯಕು ಏನು ಪ್ರತಿಕ್ರಿಯೆ ಮಾಡಿದರು ಧ್ರುವಕಾಲಕಂತೆ?

ಶಂತನುಚಕ್ರವರ್ತಿ ಮರಣದ ತರುವಾಯ, ಜ್ಯೇಷ್ಠಮಗನಾದಂಥ ಭೀಷ್ಮ, (1) ಸತ್ಯವತೀಗೆ ಸಮಾಧಾನ ಮಾಡಿ ತಂದಿಗೆ ಊರ್ಧ್ವದೈಹಿಕ ಕರ್ಮವನ್ನು ಮಾಡಿ, ಅನಂತರದಲ್ಲಿ ಚಿತ್ರಾಂಗದಗೆ ಕುರುರಾಜ್ಯದಲ್ಲಿ ಅಭಿಷೇಕ ಮಾಡಿದನು. ಆತನ ತಮ್ಮನಾದಂಥ ವಿಚಿತ್ರವೀರ್ಯ ರಾಜ್ಯಪರಿಪಾಲನಿ ಮಾಡತಿರಲಾಗಿ, ಸ್ವರ್ಗದಿಂದ ಚಿತ್ರಾಂಗದನೆಂಬ ಗಂಧರ್ವ ಬಂದು, 'ನೀನು ಶೂರನಾದ ಪಕ್ಷವೇ ನನ್ನ ಸಂಗಡ ಯುದ್ಧ ಮಾಡು ಇಲ್ಲವೇ ನನ್ನ ಹೆಸರು ಬಿಟ್ಟುಕೊಡು' ಎನಲಿಕ್ಕೆ, ಚಿತ್ರಾಂಗದಗೆ ಇನ್ನೂ ಮದುವಿ ಇದ್ದಿಲ್ಲ, ಮ್ಯಾಲೆ ಪ್ರಾಯಸಮರ್ಥ, ಇದರ ಹೊರ್ತು ಕ್ಷತ್ರಿಯನಾದ ಕಾರಣ, ಕುರುಕ್ಷೇತ್ರದಲ್ಲಿ ಗಂಧರ್ವನ ಕೂಡ ಏಕಪ್ರಕಾರ ಮೂರು ವರುಷ ಯುದ್ಧ ಮಾಡಿ, ಚಿತ್ರಾಂಗದನ ಕೈಯಿಂದ ಹೊಡೆಸಿಕೊಂಡು ಸತ್ತುಹೋದನು. (2) ತರುವಾಯ ಪೂರ್ವದಲ್ಲಿ ಪ್ರಧಾನಪಟ್ಟ ಆಳಿದಂಥ ವಿಚಿತ್ರವೀರ್ಯಗೆ, ಭೀಷ್ಮನು ಪಟ್ಟಾಭಿಷೇಕ ಮಾಡಿ ರಾಜ್ಯಪ್ರತಿಪಾಲನಿ ಮಾಡಿಸಿದನು.

ಭೀಷ್ಮನು ತನ್ನ ತಮ್ಮಗೆ ಮದುವಿ ಮಾಡಬೇಕೆಂದು, ಕಾಶಿರಾಯ ಮಾಡಿಸಿದಂಥ ಸ್ವಯಂವರದಲ್ಲಿ ಹೋಗಿ, ಶೀಘ್ರದಿಂದ ಅಂಬಾ, ಅಂಬಿಕಾ, ಅಂಬಾಲಿಕಾ ಎಂಬ ನಾಮವುಳ್ಳ ಮೂರು ಮಂದಿ ಹೆಣ್ಣುಮಕ್ಕಳನ್ನ ಕಸಕೊಂಡು ಬಂದನು. ದಾವ ಸಮಯದಲ್ಲಿ ಕಸಕೊಂಡನು ಎಂದಲ್ಲಿ, ಸಾಲ್ವನ ತಂದಿಯಾದ ಬೃಹದ್ರಥ (ಬ್ರಹ್ಮದತ್ತ) ಕನ್ನಿಕಿಯರ ಪಾಣಿಗ್ರಹಣ ಮಾಡತಿರಲಾಗಿ, ಸಾಲ್ವ ಮೊದಲಾದ ಕ್ಷತ್ರಿಯರ ಗೆದ್ದು ಮೂರು ಮಂದಿ ಸ್ತ್ರೀಯರ ಗೆದ್ದುಕೊಂಡು, ರಥದ ಮ್ಯಾಲೆ ಕೂಡ್ರಿಸಿಕೊಂಡು ಹಸ್ತಿನಾವತಿಗೆ ಬಂದ. ಮೂರು ಮಂದಿಯೊಳಗೆ ಅಂಬಿಕಾ, ಅಂಬಾಲಿಕಾ ಎಂಬ ಇಬ್ಬರು ಸ್ತ್ರೀಯರು, ಚಲೋ ಗಂಡನಿದ್ದಾನೆ ಪ್ರಾಯದ ಪುರುಷ, ಮನೋಭೋಗ ಕೊಟ್ಟಾನೆಂದು ವಿಚಿತ್ರವೀರ್ಯಗೆ ಸಮ್ಮತಪಟ್ಟರು. ಅಂಬಾ ಎಂಬೋ ಸ್ತ್ರೀಯು, ಪೂರ್ವದಲ್ಲಿ ಭೀಷ್ಮಗೆ ವರಾಂಗೀ ಎಂಬ ನಾಮದಿಂದ ಹೆಂಡತಿಯಾಗಿದ್ದಳು. ಮನುಷ್ಯಜನ್ಮದಲ್ಲಿ ನಿನಗೆ ಗಂಡನಾಗಬ್ಯಾಡ ಎಂದು ಬ್ರಹ್ಮದೇವರು ಶಾಪ ಕೊಟ್ಟಿದ್ದನು. ಆದ್ದರಿಂದ ಅಂಬಾ ಎಂಬಾಕಿ ಭೀಷ್ಮನ ಕೂಡ ಮಾತನಾಡಿದಳು. 'ನಾನು ಸಾಲ್ವರಾಯನ ಬಯಸಿದ್ದೀನಿ, ನನ್ನ ಬಿಟ್ಟುಕೊಡು' ಎನಲಿಕ್ಕೆ, ಪರಪುರುಷನ ಬಯಸಿದ ಸ್ತ್ರೀಯಳನ್ನು, ರಾಣಿವಾಸದೊಳಗೆ ಇಡಬಾರದು ಎಂದು ಕಳುಹಿಕೊಟ್ಟನು.

ಅಂಬಾ ಎಂಬಾಕಿ ಬೃಹದ್ರಥನ ಸಮೀಪ ಐದಿ 'ನಾನು ನಿನ್ನ ಮನಿ ಬಯಸಿ ಬಂದೀನಿ. ನನ್ನ ಪಾಣಿಗ್ರಹಣ ಮಾಡು' ಎಂದು ಸಾಲ್ವರಾಯಗೆ ಎನಲಿಕ್ಕೆ, 'ಪರಪುರುಷ ಮುಟ್ಟಿದ ಸ್ತ್ರೀಯಳಿಗೆ ನಾನು ಹ್ಯಾಂಗೆ ಸ್ವೀಕಾರ ಮಾಡೇನು! ಅದೂ ಅಲ್ಲದೆ ಭೀಷ್ಮ ಬಲಿಷ್ಠ. ನಾನು ಮುಟ್ಟಿದ ಸ್ತ್ರೀಯಳಿಗೆ ಹ್ಯಾಂಗೆ ಪಾಣಿಗ್ರಹಣ ಮಾಡಿದಿ, ಎಂದು ನನಗೆ ದಂಡಿಸ್ಯಾನು. ನಾನು ನಿನ್ನ ಆಳಲಿಕ್ಕೆ

ಸಮರ್ಥನಾಗೋದಿಲ್ಲ' ಎಂದನು. ಈ ಮಾತು ಕೇಳಿ ಪುನಃ ಭೀಷ್ಮನ ಹತ್ತಿರಕ್ಕೆ ಬಂದಳು. 'ಸಾಲ್ವದೇಶಾಧಿಪ ನನ್ನ ಅಂಗೀಕಾರ ಮಾಡೋಹಾಂಗೆ ಇಲ್ಲ. ನನ್ನ ನೀನು ಮದುವಿ ಆಗು' ಎಂದಳು. 'ಇಂಥಾ ಮನೋವ್ಯಭಿಚಾರಿ ಹೆಣ್ಣಿನ ನಾನು ಮದುವಿ ಆಗೋಹಾಂಗೆ ಇಲ್ಲ' ಎಂದು ಮಾತನಾಡಿದನು. ಭೀಷ್ಮನಿಂದ ನಿವಾರಿತ ಳಾಗಿ, ಪರಶುರಾಮದೇವರ ಬಳಿಗೆ ಹೋದಳು. ಪರಶುರಾಮದೇವರ ಸಂಗಡ ಮಾತನಾಡಥಾಳೆ. 'ನಾನೂ ಸಹ ಮೂರು ಮಂದಿ ಸ್ತ್ರೀಯರನ್ನ ಭೀಷ್ಮ ತಂದು, ತನ್ನ ತಮ್ಮ ವಿಚಿತ್ರವೀರ್ಯಗೆ ಅಂಬಿಕಾ, ಅಂಬಾಲಿಕಾ ಇಬ್ಬರನ್ನು ಮದುವಿ ಮಾಡಿದ. ನಿನ್ನ ಶಿಷ್ಯ ನನ್ನ ಮ್ಯಾಲೆ ಬಹಳ ಅಗ್ಗಳಿಕೆ ಮಾಡಿದ. ನನಗೆ ಗಂಡನಿಲ್ಲ ಧಾಂಗಾಯಿತು. ನಿನ್ನ ಶಿಷ್ಯ ನನ್ನ ಸ್ವೀಕಾರ ಮಾಡುವಹಾಂಗೆ ಮಾಡು' ಎನಲಿಕ್ಕೆ, ಅಂಬಾಳಿಂದ ಪ್ರಾರ್ಥಿತನಾಗಿ ಆಕೆಯನ್ನು ವಹಿಸಿಕೊಂಡು, ತನ್ನ ಭಕ್ತ ಭೀಷ್ಮಗೆ ಯಶಸ್ಸು ತಂದುಕೊಡಬೇಕಾಗಿ ಅತ್ಯಂತ ಯುದ್ಧ ಮಾಡಿದನೇ ಹೊರ್ತು, ಭೀಷ್ಮನ ಕೊಲ್ಲಲಿಲ್ಲ. ಏನು ಕಾರಣವೆಂದಲ್ಲಿ, ತನ್ನ ಮಾತು ಕೇಳಿ, ಅಂಬಾ ಎಂಬಾಕೆಯನ್ನು ಮದುವಿ ಮಾಡಿಕೊಳ್ಳದೆ ಇದ್ದಂಥ ಭೀಷ್ಮನ್ನ, ಪರಮ ದಯಾಳುವಾದ ಕಾರಣ ಸಂಹರಿಸಲಿಲ್ಲ. ಇಷ್ಟು ಏನುಕಾರಣ ಹೇಳಬೇಕು, ಅಶಕ್ತನಾದ ಪ್ರಯುಕ್ತ ಕೊಲ್ಲಲಿಲ್ಲ ಎನಬಾರದೆ ಎಂದಲ್ಲಿ, ಅನಂತಪರಾಕ್ರಮವುಳ್ಳ ಸಕಲ ಜೀತನ ಸಮುದಾಯಕ್ಕೆ ಅಂತರ್ನಿಯಾಮಕ ಸರ್ವಜ್ಞನಾದಂಥಾತ, ಸರ್ವವನ್ನೂ ತನ್ನ ವಶದಲ್ಲಿಟ್ಟುಕೊಂಡು ಸರ್ವದಾ ಶೀಲತ್ವದಿಂದ ಸಮಾಧಿಕಶೂನ್ಯನಾದಂಥ ಪರಶುರಾಮದೇವರಿಗೆ, ಭೀಷ್ಮನ್ನ ಗೆಲ್ಲೋದು ಆಶ್ಚರ್ಯವೇ! ಒಂದಾನೊಂದು ದೇಶದಲ್ಲಿ ಒಂದಾನೊಂದು ಕಾಲದಲ್ಲಿ ಅಶಕ್ತಿಯು ಒಬ್ಬಿಗೂ ಇಲ್ಲ. ಸರ್ವಸಮರ್ಥ, ತನ್ನ ಭಕ್ತ ಭೀಷ್ಮಗೆ ಯಶಸ್ಸು ತಂದುಕೊಡಬೇಕಾಗಿ, ಅಸುರಜನ ಮೋಹನಾರ್ಥವಾಗಿ, ಭೀಷ್ಮನಿಂದ ಸೋತವನೋಪಾದಿ, ಅಸ್ತ್ರಗಳಿಂದ ಹೊಡಿಸಿಕೊಂಡನೆಂಬೋಪರಿ ತೋರಿಸಿದನು. ಇದಲ್ಲದೆ ತನ್ನ ಭಕ್ತ, ಅಂಬಾನ ಒಲ್ಲೆನೆಂದದ್ದಕ್ಕೆ ಭಕ್ತನ ಮಾತು ಬಾಲಿಸೋ ನಿಮಿತ್ತ, ಅಜ್ಞಾನಿವತ್ ತಾನೇ ವೇದನೆಬಟ್ಟನಲ್ಲದೆ ಹೊರ್ತು, ನಾರಾಯಣಗೆ ಸರ್ವಥಾ ಸೋಲೋಣವೆಂಬುದಿಲ್ಲ. ಇವಕ್ಕೆ ನಿದರ್ಶನವೇನು ಎಂದಲ್ಲಿ, 'ಕೇಶವ' ಎಂಬ ಶಬ್ದಕ್ಕೆ ನಿರ್ವಚನ ಮಾಡಥಾರೆ. 'ಕ' ಎಂದರೆ ಬ್ರಹ್ಮ, 'ಈಶ' ಎಂದರೆ ರುದ್ರ, ಬ್ರಹ್ಮರುದ್ರಾದಿಗಳ ಸೃಷ್ಟಿಮಾಡೋವಲ್ಲಿ, 'ವ' ಎಂದರೆ ಪ್ರವರ್ತಕನಾದಂಥಾತ. ಇವೇ ಮೊದಲಾದ ಪುರಾಣಗಳ ವಾಕ್ಯಗಳ ದೆಸೆಯಿಂದ, ಭಾರ್ಗವನು ಸದಾ ಜಯಶೀಲನಾಗಿದ್ದಾನೆ. ಅಂಬಾ ಎಂಬಾಕೆ ನಿಮಿತ್ತ ಸಾಹಸ ಮಾಡಿದನೆಂಬೋಪರಿ, ಭೀಷ್ಮ ತನ್ನ ಗುರುವಿನ ಕೂಡ ಯುದ್ಧ ಮಾಡಿ ತೋರಿದನು. ಹಾಂಗಾದರೆ ಶರಣಾಗತಳಾದಾಕೆಯನ್ನು ಉಪೇಕ್ಷಿ ಮಾಡೋಣ ಯುಕ್ತವಲ್ಲ ಎಂದಲ್ಲಿ, ಗಂಡನಾದಂಥ ಭೀಷ್ಮನ ದ್ವೇಷದಿಂದ ಬಂದಂಥ ಪಾಪದಿಂದ

ಯುಕ್ತಳಾಗಿ ಗಂಡನ ಕೂಡು ಎಂದು ವರವು ಕೊಟ್ಟನು. ಹಾಂಗಾದರೆ ಅಂಬಾ ಎಂಬಾಕೆ ಬಂದಾಗ ಪರಶುರಾಮ, ಭೀಷ್ಮನ ಕೂಡಿಸೇನು ಎಂದು ಹೇಳಿದ ಮಾತಿಗೆ ಅಸತ್ಯತ್ವ ಬಂತಲ್ಲ ಎಂದಲ್ಲಿ, ಸ್ವಾಮಿ ಮಾಡಿದಂಥ ಪ್ರತಿಜ್ಞಕ್ಕೆ ಅಭಿಪ್ರಾಯ ಹೇಳಥಾರೆ. ಭೀಷ್ಮಗೆ ವಸುತ್ವವು ಪ್ರಾಪ್ತವಾಗುತ್ತಿರಲಾಗಿ ಹಾಂಗೆ ಮಾಡೇನೆಂದು ಪ್ರತಿಜ್ಞ ಮಾಡಿದನು. ಆದ್ದರಿಂದ ಭಾರ್ಗವ ಮಾಡಿದ್ದ ಪ್ರತಿಜ್ಞ ಸತ್ಯವೇವೆ.

ತರುವಾಯ ಅಂಬಾ ಎಂಬಾಕೆ, ರುದ್ರಸಂಬಂಧವಾದ ತಪಸ್ಸು ಮಾಡಿ ಶಿಖಂಡಿತ್ವವನ್ನು ಐದಿದಳು. ಏನುಕಾರಣ ತಪಸ್ಸು ಮಾಡಿದಳು ಎಂದಲ್ಲಿ, ಅಂಬಾ ತನ್ನೊಳಗೆ ತಾನೇ ವಿಚಾರ ಮಾಡಿದಳು. 'ನನಗೆ ಭೀಷ್ಮನ್ನ ಗಂಡನ ಮಾಡ-ಬೇಕೆಂದು ಪರಶುರಾಮ ಬಹಳ ಸಾಹಸ ಮಾಡಿದ. ನನ್ನ ಅದೃಷ್ಟದಿಂದ ಗಂಡನ ಐದ್ಲೋಣ ಆಗಲಿಲ್ಲ. ಇಷ್ಟು ಅನರ್ಥಕ್ಕೆ ಭೀಷ್ಮ ನನ್ನ ಏನುಕಾರಣ ಕೊಂಡು-ಬರಬೇಕಾಗಿತ್ತು. ತಾನು ಮದುವಿ ಮಾಡಿಕೋವಲ್ಲ. ಪುಂಸತ್ವ ಸಂಪಾದಿಸಿ ಭೀಷ್ಮನ ಮರಣಕ್ಕೆ ಕಾರಣಳಾದೇನು' ಎಂದು ತಪಸ್ಸು ಮಾಡಿದಳು. ಮಹಾ-ರುದ್ರ ತಪಸ್ಸಿನಿಂದ ಪ್ರೀತನಾಗಿ ಎರಡು ವರವು ಕೊಟ್ಟನು. 'ಈ ಜನ್ಮ ಹೋದ-ಮ್ಯಾಲೆ ಎರಡನೇ ಜನ್ಮದಲ್ಲಿ ಸ್ತ್ರೀತ್ವದಿಂದ ಹುಟ್ಟಿ, ಅನಂತರದಲ್ಲಿ ಪುರುಷದೇಹ ಪ್ರಾಪ್ತವಾಗಿ, ಭೀಷ್ಮನ ಮರಣಕ್ಕೆ ಕಾರಣಳಾದಿ' ಎಂದು ವರಗಳ ಕೊಟ್ಟನು. ಶೀಘ್ರ ಪುರುಷತ್ವದಿಂದ ಹುಟ್ಟೋಣ ಆಗಲಿಲ್ಲ. ವರಗಳ ಕೊಟ್ಟ ತರುವಾಯ ಒಂದು ಮಾಲಿಕಿ ಕೊಟ್ಟನು. ಆ ಮಾಲಿಕಿ ತೆಗೆದುಕೊಂಡುಹೋಗಿ, ಸಮಸ್ತ ರಾಯರ ಸಮೀಪದಲ್ಲಿ 'ಈ ಮಾಲಿಕಿ ತೆಗೆದುಕೊಂಡು ನನ್ನ ಸ್ವೀಕಾರ ಮಾಡಿ ಭೀಷ್ಮನ ಕೊಲ್ಲಿರಿ' ಎಂದು ಮಾತನಾಡಿದಳು. ಭೀಷ್ಮ ಬಹಳ ಸಮರ್ಥನೆಂದು ದಾರೂ ವೈರತ್ವ ಕಟ್ಟಿಕೊಳ್ಳದೆ ಹೋದರು. ಮಾಲಿಕಿ ತೆಗೆದುಕೊಳ್ಳದೆ, ಈಕಿಯ ಉಪದ್ರವದಿಂದ ರಾಯರು ಮಾರಿ ತೋರಿಸದೆ ಅಡಗಿಕೊಂಡರು. ದಾರೂ ತನ್ನ ಸಮಾಧಾನ ಮಾಡರು ಎಂದು ಬ್ಯಾಸತ್ತು, ಕಟ್ಟಕಡಿಗೆ ರುದ್ರ ಕೊಟ್ಟಂಥ ಮಾಲಿಕಿ, ದ್ರುಪದರಾಯನ ಮನೀಬಾಗಿಲ ಕುದರೀ ಮುಖಕ್ಕೆ ಹಾಕಿ, ಯೋಗಧ್ಯಾನ ಮಾಡಿ ಶರೀರ ಬಿಟ್ಟುಕೊಟ್ಟಳು. ಆದಕಾರಣ ಆ ಮಾಲಿಕಿ ದ್ರುಪದರಾಯನ ಭಂಡಾರ-ದೊಳಗೆ ಬಿದ್ದಿತ್ತು. ದ್ರೌಪದೀ ಸ್ವಯಂವರಕಾಲದಲ್ಲಿ ಲಕ್ಷ್ಯ ಎಚ್ಚಿದ ಕಾರಣ ದ್ರೌಪದೀ ಮದುವಿ ಮಾಡಿಕೊಡುವಾಗ, ಅರ್ಜುನಗೆ ಮಾಲಿಕಿ ಕೊಟ್ಟಿದ್ದರು. ಆ ಮಾಲಿಕಿ ಧರಿಸಿದ್ದರಿಂದ ಅರ್ಜುನ ಭೀಷ್ಮನ ಕೊಂದಾನೆ.

ದಾವ ವ್ಯಾಳ್ಯಾದಲ್ಲಿ ಅಂಬಾ ಶರೀರ ಬಿಟ್ಟಳು, ಅದೇ ವ್ಯಾಳ್ಯಾದಲ್ಲಿ ದ್ರುಪದ-ರಾಯ, ತನಗೆ ಗಂಡುಮಕ್ಕಳು ಇಲ್ಲವೆಂದು ರುದ್ರಸಂಬಂಧಿಯಾದ ತಪಸ್ಸು ಮಾಡಿದನು. ರುದ್ರ ತಪಸ್ಸಿನಿಂದ ಪ್ರೀತನಾಗಿ ದ್ರುಪದರಾಯನ ಕೂಡ ಮಾತ ನಾಡಿದನು. 'ನಿನಗೆ ಹೆಣ್ಣುಮಗಳು ಹುಟ್ಟಿ, ಅನಂತರದಲ್ಲಿ ಅದೇ ಹೆಣ್ಣುಮಗಳು

ಗಂಡಸುಮಗನಾದಾನು ' ಎಂದು ಮಾತಾಡಿದನು. ಅಂಬಾನೇ ದ್ರುಪದರಾಯನ ಮಗಳಾಗಿ, ' ಶಿಖಂಡಿ ' ಎಂಬ ನಾಮವುಳ್ಳಾಕೆಯಾದಳು. ರಾಯ ತನಗೆ ಹೆಣ್ಣುಮಗಳು ಹುಟ್ಟಿದ ಕಾಲಕ್ಕೂ, ರುದ್ರದೇವರ ವರದಲ್ಲಿ ವಿಶ್ವಾಸ ಮಾಡಿ, ಪುತ್ರೋತ್ಸವವಾಯ್ತೆಂದು ಸುದ್ದಿ ಹುಟ್ಟಿಸಿ, ಬ್ರಾಹ್ಮಣರಿಗೆ ಉಡುಗೊರಿ, ಉತ್ಸಾಹ, ದಕ್ಷಿಣೆಗಳ ಕೊಟ್ಟನು. ಹಾಂಗೇ ಜಾತಕರ್ಮ, ಉಪನಯನ ಮಾಡಿದನು. ದ್ರುಪದರಾಯಗೆ ಗಂಡಸುಮಗನಾದನೆಂದು ದೇಶದೇಶಕ್ಕೆ ವಾರ್ತೆ ಹೋಯಿತು. ಚಿಕ್ಕತನದಲ್ಲಿ ಮದುವಿ ಮಾಡಬೇಕೆಂದು, ದಕ್ಷಿಣದೇಶಕ್ಕೆ ಅಧಿಪತಿಯಾದಂಥ ಸುವರ್ಣವರ್ಮನ (ಹಿರಣ್ಯವರ್ಮ) ಮಗಳನ್ನು ತೆಗೆದುಕೊಂಡು ಶಿಖಂಡಿಗೆ ಮದುವಿ ಮಾಡಿದನು. ಆ ಶಿಖಂಡಿಯು ಪುರುಷವೇಷದಿಂದ ಆಚ್ಛಾದಿತಳಾಗಿಹೋಳು. ತಂದಿ ತಾಯಿ ಇಬ್ಬರ ಹೊರ್ತು, ಹೆಣ್ಣುಮಗಳೆಂದು ಒಬ್ಬಾನೊಬ್ಬರು ಗುರ್ತು ಆರಿಯರು. ಸೊಸಿ ಪ್ರಾಯಸಮರ್ಥಿಯಾದಳು. ತನ್ನ ಪಟ್ಟಣಕ್ಕೆ ಕರೆಕಳುಹಿದನು. ಗಂಡನ ಸಂಗಡ ಭೋಗಾರ್ಥವಾಗಿ ಏಕಾಂತಸ್ಥಳಕ್ಕೆ ಹೋಗಿ ನೋಡಥಾಳಿ ತನ್ನಪ್ಪಂದೆ ಹೆಂಗಸು! ಪುರುಷನಲ್ಲ! ಈ ಮಾತು ತನ್ನ ದಾಸೀ ಮುಂದೆ ಹೇಳಿದಳು. ಆ ದಾಸಿಯು ಅರಸಾದಂಥ ಸುವರ್ಣವರ್ಮಗೆ ಹೇಳಿಕಳುಹಿಸಿದಳು. ' ನಿನ್ನ ಮಗಳ ಪ್ರಾಯ ವ್ಯರ್ಥ ಕೆಟ್ಟುಹೋಯಿತು. ಹೆಂಗಸಿಗೆ ಮದುವಿ ಮಾಡಿಕೊಟ್ಟೆ ' ಎಂದು ಹೇಳಿಕಳುಹಿಸಿದ ವರ್ತಮಾನ ಕೇಳತಲೆ, ಮಹಾ ಕ್ರೋಧದಿಂದ ದ್ರುಪದರಾಯ ಮಹಾ ಕಪಟಿ ಇದ್ದಾನೆಂದು ' ವ್ಯರ್ಥ ನನ್ನ ಮಗಳ ಕೆಡಿಸಿದನು ' ಎಂದು ಅದೇ ಕ್ಷಣದಲ್ಲಿ ದೂತನ ಸಂಗಡ ' ಛದ್ಮದಿಂದ ನನ್ನ ಮಗಳ ಮದುವಿ ಮಾಡಿಕೊಂಡಿ. ಬಾಂಧವರಿಂದ ಸಹಿತನಾಗಿ ನಿನ್ನನ್ನು ಕೊಲ್ಲ್ಲೋದರಗೋಸ್ಕರ ಬರಥೀನಿ, ಶೀಘ್ರ ಸನ್ನದ್ಧನಾಗಿರು ' ಎಂದು ಹೇಳಿಕಳುಹಿಸಿ ತಾನು ಚತುರಂಗಸೇನಿ ಸಹಿತ ತೆರಳಿದನು.

ದೂತನ ಮುಖದಿಂದ ಈ ವರ್ತಮಾನ ದ್ರುಪದರಾಯ ಕೇಳಿ, ತನ್ನ ಅಂಜಿಕೆ ಹೊರಚೆಲ್ಲದೆ ರುದ್ರವಚನವಿಶ್ವಾಸದಿಂದ, ಗಂಡಸುಮಗನಾದಾನೆಂದು ನಿಶ್ಚಯ ಮಾಡಿ, ಸಂಗಡಲೇ ದಶಾರ್ಣಾಧಿಪತಿಗೆ ದೂತನ ಸಂಗಡ, ' ದಾವದಾದರೂ ಪರೀಕ್ಷ ಮುಂದಾಗಿ ಮಾಡಿ, ಹಿಂದಾಗಿ ಕಾರ್ಯ ಮಾಡಬೇಕು. ಪರೀಕ್ಷ ಮಾಡದಲೆ ಬಾಲವಾಕ್ಯದಿಂದ ನನ್ನ ವ್ಯಾಲೆ ಸೈನ್ಯ ತೆಗೆದುಕೊಂಡು ಬರತಿದ್ದಿ. ನಿನ್ನ ಬುದ್ಧಿ ಸುಡಲಿ! ರಾಜ್ಯದ ಪಾರುಪತ್ಯ ಹ್ಯಾಂಗೆ ಮಾಡತಿದ್ದಿ! ಪರಿವಾರವಾದರೂ ನಿನ್ನ ಅಧೀನದಲ್ಲಿ ಹ್ಯಾಂಗೆ ಆವೆ! ಅರಸತ್ವ ಹ್ಯಾಂಗೆ ಆಳತಿದ್ದಿ! ' ಎಂದು ಪರಿಹಾಸ ಮಾಡುವಂಥಾತನಾಗಿ, ತಾನು ಅಂಜಿಕೊಂಡರೂ ದಿಟ್ಟತನದಿಂದಲೇ ಹೇಳಿಕಳುಹಿಸಿದನು.

ಆನಂತರದಲ್ಲಿ ಹೆಂಡತಿಯಿಂದ ಕೂಡ ಚಿಂತಿಸುವಂಥ ತಂದೀನ, ಚಿಕ್ಕಾಕಿ ಶಿಖಂಡಿ ಕಂಡು, 'ನಾ ಒಬ್ಬಳು ಸತ್ತರೆ ಸಾಯಥೀನಿ, ನನ್ನ ನಿಮಿತ್ತದಿಂದ ತಂದಿ-ತಾಯಿಗಳು ದುಃಖಿಷ್ಟರಾಗಬ್ಯಾಡಿರಿ' ಎಂದು ಅರಣ್ಯಕ್ಕೆ ಹೋದಳು. ದ್ರುಪದ-ರಾಯನ ಸೊಸಿ ಗಂಡನ ಸಮೀಪಕ್ಕೆ ಅರಣ್ಯಕ್ಕೆ ಹೋದಳು. ಪಟ್ಟಣಸ್ಥರು, ಹೆಣ್ಣುರೂಪ ಇದ್ದ ಪ್ರಯುಕ್ತ ಮಾರಿ ತೋರಿಸಲಾರದೆ ಹೋದಳೆಂದು ಆಡಿ-ಕೊಂಡರು. ಶಿಖಂಡಿ ವನದಲ್ಲಿ ತುಂಬುರುನೆಂಬೋ ಗಂಧರ್ವನ ಕಂಡಳು. ಹಾಂಗಾದರೆ ಭಾರತದಲ್ಲಿ ಸ್ಥೂಣಾಕರ್ಣನ್ನ ಕಂಡಳೆಂದು ಹೇಳತದಲ್ಲ ಎಂದಲ್ಲಿ, ತುಂಬುರುನೆಂಬೋ ಗಂಧರ್ವಗೆ ದೃಢಕರ್ಣಗಳು ಇದ್ದ ನಿಮಿತ್ತ ಸ್ಥೂಣಾಕರ್ಣ ಎಂಬೋ ನಾಮವದೆ. ಶಿಖಂಡಿ ತುಂಬುರುನೆಂಬೋ ಗಂಧರ್ವಗೆ ನಮಸ್ಕಾರ ಮಾಡಲಿಕ್ಕೆ 'ನೀನು ದಾರು ಚಿಕ್ಕಾಕಿ, ಪ್ರಾಯಸಮರ್ಥಳು, ಇಂಥಾ ಅಡವಿಗೆ ಏನು ಕಾರಣ ಬಂದಿ?' ಎಂದು ಕೇಳಲಾಗಿ, ತನ್ನ ಪೂರ್ವವೃತ್ತಾಂತ ಯಾವತ್ತೂ ಹೇಳಿಕೊಂಡಳು. ತುಂಬುರುನು ಯಾವತ್ತೂ ವೃತ್ತಾಂತ ಕೇಳಿ, ದೊಡ್ಡ ಮನಸ್ಸುಳ್ಳವನಾದ ಕಾರಣ ಕೃಪೆಮಾಡಿ, ತನ್ನ ಪುರುಷಶರೀರ ಶಿಖಂಡಿಗೆ ಕೊಟ್ಟು, ಆಕಿ ಶರೀರ ತಾನು ತೆಗೆದುಕೊಂಡನು. ಗಂಧರ್ವ ತನ್ನ ಶರೀರ ಕೊಟ್ಟದ್ದಕ್ಕೆ ವಿಶೇಷ ಹೇಳಥಾರೆ. ಶಿಖಂಡಿಗೆ ಪುರುಷತ್ವ ಬರಬೇಕಾಗಿ, ತನ್ನ ಶರೀರದಲ್ಲಿ ಒಂದು ಅಂಶದಿಂದ ಶಿಖಂಡಿಯಲ್ಲಿ ಪ್ರವೇಶ ಮಾಡಿದನು. ತಾನು ಶಿಖಂಡಿನಿಯ ಅನಧಿಷ್ಠಿತ-ವಾದ ಶರೀರ ತೆಗೆದುಕೊಂಡನೇ ಹೊರ್ತು, ಅಧಿಷ್ಠಿತವಾದ ಶರೀರ ಸರ್ವಥಾ ತೆಗೆದುಕೊಳ್ಳಲಿಲ್ಲ. ಏನುಕಾರಣ ವಿಶೇಷ ಕಲ್ಪಿಸಿದ್ದೀರಿ ಎಂದಲ್ಲಿ, ಇದೇ ಪ್ರಕಾರ ಅನಾದಿಕಾಲತೊಟ್ಟು ನಿಯಮವೆಂದು ಹೇಳಥಾರೆ. ಅದೇನು ಎಂದಲ್ಲಿ, ಪುರುಷರಿಗೆ ಒಂದಾನೊಂದು ನಿಮಿತ್ತದಿಂದ ಕಿಂಚಿತ್ ಅನಧಿಷ್ಠಿತ ದೇಹವು ಪ್ರಾಪ್ತವಾಗತದೆ. ನಿಮಿತ್ತಾಂತದಲ್ಲಿ ಪುರುಷರುಗಳೇ ಆಗಥಾರೆ. ಆದಕಾರಣದಿಂದ ಗಂಧರ್ವಗೆ ಶಿಖಂಡಿನಿಯ ಅನಧಿಷ್ಠಿತದೇಹಪ್ರಾಪ್ತಿ ಕಲ್ಪಿಸಲ್ಪಟ್ಟಿತು. ಸ್ವಾಭಾವಿಕ ಸ್ತ್ರೀಯರು ಗಳಿಗೆ, ಪುರುಷಾಧಿಷ್ಠಿತದೇಹಪ್ರಾಪ್ತಿಯು ದೇವತಾವರಾದಿ ರೂಪಸಾಮರ್ಥ್ಯ-ದಿಂದಲೂ ಆಗೋದಿಲ್ಲ. ಈ ನಿಯಮಕ್ಕೆ ಇದೇವೆ ಜ್ಞಾಪನವೆಂದು ಹೇಳಥಾರೆ. ನಿಯಮವಿದ್ದಕಾರಣದಿಂದ ಪುಹಾರುದ್ರನ ವರವಿದ್ದರೂ ಸರಿಯೇ, ಈ ಅಂಬಾ ಎಂಬೋ ಸ್ತ್ರೀಯು ಸ್ತ್ರೀದೇಹದಿಂದ ಯುಕ್ತಳಾಗಿ ಹುಟ್ಟಿದಳೇ ಹೊರ್ತು, ಪುರುಷನ ದೇಹದಿಂದ ಯುಕ್ತಳಾಗಿ ಹುಟ್ಟಲಿಲ್ಲ. ಹಾಂಗಾದರೆ ಹಿಂದುಗಡಿಯಾದರೂ ಏನು-ಕಾರಣ ಪುರುಷರೂಪವಾದಳು ಎಂದಲ್ಲಿ, ಪುರುಷನಾದಂಥ ಗಂಧರ್ವನ ಅಂಶದಿಂದ ಯುಕ್ತವಾದಂಥ ಪುರುಷಶರೀರದಲ್ಲಿ ಪ್ರವೇಶ ಮಾಡಿದಳೇ ಹೊರ್ತು, ಪುರುಷನಾಗಿ ಹುಟ್ಟಲಿಲ್ಲ. ಶಿಖಂಡಿನಿಗೆ ಪುರುಷತ್ವದಿಂದ ಹುಟ್ಟೋಣ ಇಲ್ಲದಿದ್ದರೂ ಹೋಗಲಿ, ಪರಂತು ಗಂಧರ್ವನಿಂದ ಅಧಿಷ್ಠಿತವಾದಂಥ ಶಿಖಂಡಿನಿಯ ದೇಹಕ್ಕೆ ಪುರುಷತ್ವ

ಪ್ರಾಪ್ತಿ ಬಂತಲ್ಲ ಎಂದಲ್ಲಿ, ಶಿಖಂಡಿನಿಯ ದೇಹವು ಪುಂಸತ್ವ ಐದಲಿಲ್ಲ ಎಂತ ಹೇಳಥ್ಹಾರೆ. ಏನುಕಾರಣವೆಂದಲ್ಲಿ, ಸ್ತನ ಕೇಶಾದಿ ಲಕ್ಷಣಗಳಿಂದ ಯುಕ್ತವಾದಂಥ ಶಿಖಂಡಿನಿಯ ದೇಹದಲ್ಲಿ, ಗಂಧರ್ವಗೆ ಅವಸ್ಥಾನ ಮಾತ್ರವಾಯಿತು. ಸ್ವಾಭಾವಿಕ ಸ್ತ್ರೀಯರುಗಳ ದೇಹವು ಪುಂಸತ್ವ ಐದೋದಿಲ್ಲ. ಆದಕಾರಣ ಶಿಖಂಡಿನಿಯು ಪುರುಷತ್ವದೇಹದಲ್ಲಿ ವಾಸಮಾಡಲಿಲ್ಲ. ಗಂಧರ್ವನಿಂದ ಅಧಿಷ್ಠಿತವಾದ ದೇಹದಲ್ಲಿ ಪ್ರವಿಷ್ಟಳಾಗಿ, ತನ್ನ ಮನಿಗೆ ಹೋದಳು. ಹಾಂಗಾದರೆ ಗಂಧರ್ವನ ಶರೀರದೊಳಗೆ ಇದ್ದಂಥ ಶಿಖಂಡಿನಿ ಎಂಬ ಜ್ಞಾನ, ಪ್ರಜರುಗಳಿಗೆ ಹ್ಯಾಂಗಾಯಿತು ಎಂದಲ್ಲಿ, ಶಿಖಂಡಿನಿಯಿಂದ ಅಧಿಷ್ಠಿತವಾದ ಗಂಧರ್ವನ ದೇಹಕ್ಕೆ, ತುಂಬುರುನ ವರಪ್ರಸಾದ ದಿಂದ ಶಿಖಂಡಿಯ ಸಾದೃಶ್ಯವು ಬಂತು. ಸಾದೃಶ್ಯ ಬಂದ ತರುವಾಯ, ತನ್ನ ಪಟ್ಟಣಕ್ಕೆ ಹೋದಳು. ಆದಕಾರಣ ಸರ್ವರೂ ಶಿಖಂಡಿನಿ ಎಂದೇ ತಿಳಿದರು.

ಗಂಧರ್ವ ಶಿಖಂಡಿನಿಯಲ್ಲಿ ಪ್ರವೇಶವಾಗೋವಾಗ್ಗೆ ಮಾತನಾಡಿದ್ದ, ' ಈ ಹೊತ್ತು ನಿನ್ನ ಪ್ರಯೋಜನ ತೀರಿಸಿಕೊಂಡ ಬಳಿಕ, ನಾಳಿನ ದಿನ ಇಲ್ಲಿಗೆ ಬಂದು, ನನ್ನ ಶರೀರ ನನಗೆ ಕೊಟ್ಟು, ನಿನ್ನ ಶರೀರದೊಳಗೆ ನೀನು ಪ್ರವೇಶಮಾಡುವಿಯಂತಿ' ಎಂದು ಮಾತನಾಡಿ ಶಿಖಂಡಿನೀ ಶರೀರದೊಳಗೆ ಪ್ರವೇಶ ಮಾಡಿದ. ಆದೇ ವನ ದೊಳಗೆ ವಾಸ ಮಾಡಿದಾಗ್ಗೆ ಕುಬೇರ ಅಲ್ಲಿಗೆ ಬಂದಿದ್ದ. ಕುಬೇರಗೆ, ಗಂಧರ್ವ ತಾ ಹೆಣ್ಣುದೇಹ ಧರಿಸಿದ ಪ್ರಯುಕ್ತ, ನಾಚಿಕೊಂಡು ಪ್ರತ್ಯುತ್ಥಾನ ಮಾಡಲಿಲ್ಲ. ಬಳ್ಳಿಗಳೊಳಗೆ ಅಡಗಿಕೊಂಡಿದ್ದ. ಅದರಿಂದ ಕುಬೇರ, ಗಂಧರ್ವ ಬರಲಿಲ್ಲವೆಂದು ಕುಪಿತನಾದ. ಕುಬೇರನ ಪರಿಚಾರಕರು ' ಸ್ತನ ಕೇಶದಿಂದ ಯುಕ್ತವಾದ ಶರೀರ ದೊಳಗೆ ಪ್ರವೇಶಿಸಿದ್ದರಿಂದ ನಿನ್ನ ಭೆಟ್ಟಿಗೆ ಬರಲಿಲ್ಲ' ಎಂದು ಹೇಳಿದರು. ಈ ವರ್ತಮಾನ ಕೇಳಿ ಕುಬೇರ, ' ಬಹುಕಾಲ ಇದೇ ಶರೀರದಿಂದ ಇರಲಿ ' ಎಂದು ಶಾಪ ಕೊಟ್ಟನು. ಇಷ್ಟಾಗಲಿಕ್ಕೆ ಪರಿಚಾರಕರು ಬೇಡಿಕೊಂಡರು. ಆದಕಾರಣ ' ಶಿಖಂಡಿನಿಯು ಪುರುಷದೇಹದಿಂದ ಯುಕ್ತಳಾಗಿ ಯುದ್ಧಕಾಲದಲ್ಲಿ ಅಶ್ವತ್ಥಾಮ ನಿಂದ ಮರಣ ಐದ್ಯಾಳು. ಆ ಸಮಯದಲ್ಲಿ ಪುರುಷಶರೀರ ಗಂಧರ್ವ ಐದ್ಯಾನು ' ಎಂದು ವಿಶಾಪ ಕೊಟ್ಟನು. ಕುಬೇರನಾದರೂ ಏನುಕಾರಣ ಶಾಪ ಕೊಡಬೇಕೆಂದಲ್ಲಿ, ಚಪಲತ್ವ ದೆಸೆಯಿಂದ ತನ್ನ ಸಂಗಡ ವಿಚಾರ ಮಾಡದೆ, ತನ್ನ ಅಧಿಪತಿತ್ವ ನೋಡದೆ, ಸ್ವತಂತ್ರದಿಂದ ಈ ಪ್ರಯೋಜನ ಗಂಧರ್ವ ಮಾಡಿದನೆಂದು, ಕೋಪಾ-ವಿಷ್ಟನಾಗಿ ಶಾಪ ಕೊಟ್ಟನು. ಈ ಪ್ರಕಾರ ತುಂಬುರು ಗಂಧರ್ವ, ಕುಬೇರನಿಂದ ನುಡಿಸಿಕೊಂಡು, ಸ್ತ್ರೀದೇಹದಿಂದ ವನದಲ್ಲಿ ವಾಸ ಮಾಡಿದನು.

ಶಿಖಂಡಿನಿಯು ಪಟ್ಟಣಕ್ಕೆ ಬಂದು, ತನ್ನ ಆದ್ಯಂತ ವರ್ತಮಾನ ತನ್ನ ತಾಯಿ ತಂದಿಯ ಮುಂದೆ ಹೇಳಿದನು. ಈ ವರ್ತಮಾನ ಉಭಯರೂ ಕೇಳಿ ಬಹಳ ಸಂತೋಷಬಟ್ಟರು. ತನ್ನ ಪುಂಸತ್ವ ಪರೀಕ್ಷ ಮಾಡಲು ತನ್ನ ಮಾವನಿಗೆ ಹೇಳಿ-

ಕಳುಹಿಸಿದನು. ಅಳಿಯನ ಪರೀಕ್ಷಕ್ಕಾಗಿ ಇಪ್ಪತ್ತೈದು ಮಂದಿ ಜಾರಸ್ತ್ರೀಯರನ್ನು ಸಂಭೋಗಕ್ಕೆ ಕಳುಹಿಸಿದನು. ಬಂದ ಜಾರಸ್ತ್ರೀಯರಿಗೆ ಮನೋಹರವಾದಂಥ ಭೋಗ ಕೊಡಲು, ಬಂದಂಥಾ ಸ್ತ್ರೀಯರು ಭೋಗದಿಂದ ಬಹಳ ಪ್ರೀತರಾಗಿ, ರಾಯನ ಸಮೀಪಕ್ಕೆ ಹೋಗಿ 'ನಿನ್ನ ಅಳಿಯ ಸಂಭೋಗವಿಷಯಕ್ಕೆ ಮಹಾ ವೀರನಿದ್ದಾನೆ' ಎಂದು ಹೇಳಿದರು. ಈ ವರ್ತಮಾನ ಸುವರ್ಣವರ್ಮನು ಕೇಳಿ, ಲೋಕದೊಳಗೆ ತನಗೆ ಅಪ್ರತಿಷ್ಠ ಆಯಿತೆಂದು ಮಗಳನ್ನ ಜಬರಿಸಿಕೊಂಡು, ಬಹಳ ಲಜ್ಜಾಯುಕ್ತನಾಗಿ ತನ್ನ ನಗರಕ್ಕೆ ಹೋದನು. ಬೀಗನಾದಂಥ ದ್ರುಪದರಾಯ, ಉಡುಗೊರಿ ಉತ್ಸಾಹ ಮಾಡಿ ಕಳುಹಿದನು. ಬೆಳಗಾದಮ್ಯಾಲೆ ಶಿಖಂಡಿನಿಯು ಗಂಧರ್ವನ ಸಮೀಪಕ್ಕೆ ಹೋಗಿ, 'ನಿನ್ನ ಶರೀರ ನೀನು ತೆಗೆದುಕೋ' ಎಂದು ಮಾತನಾಡಲಿಕ್ಕೆ, ಗಂಧರ್ವನು ತನಗೆ ಶಾಪವಾದ ಪ್ರಕಾರ ಹೇಳಿ, 'ನೀನು ಪುರುಷದೇಹದಿಂದ ಬಹಳ ಮಂದಿ ಮಕ್ಕಳ ಹಡದು ಸುಖದಿಂದಿರಹೋಗು' ಎಂದು ಮಾತನಾಡಿದನು. ಈ ರೀತಿ ನುಡಿಸಿಕೊಂಡು ಗಂಧರ್ವದೇಹದಿಂದ ಯುಕ್ತನಾಗಿ ಪಟ್ಟಣಕ್ಕೆ ಬಂದನು. ಶಿಖಂಡಿ ಎಂಬ ನಾಮವು ಪ್ರಸಿದ್ಧವಾಯಿತು, ಶಸ್ತ್ರಾಸ್ತ್ರದಿಂದ ಪ್ರತಾಪವುಳ್ಳವನಾದನು. ಈ ಪ್ರಕಾರ ಅಂಬಾನ ವೃತ್ತಾಂತ ಹೇಳಿ ಇನ್ನು ಅಂಬಿಕಾ ಅಂಬಾಲಿಕಾ ಇವರ ವೃತ್ತಾಂತ ಹೇಳಥಾರೆ.

ವಿಚಿತ್ರವೀರ್ಯರಾಯ, ಪಾರುಪತ್ಯ ಮಾಡದಲೆ ಉಭಯ ಸ್ತ್ರೀಯರಲ್ಲಿ ವಿಷಯಾಸಕ್ತನಾಗಿ, ಬಹುವರ್ಷ ಕ್ರೀಡಿಸಲಿಕ್ಕೆ, ಕ್ಷಯರೋಗ ಪ್ರಾಪ್ತವಾಗಿ ಸತ್ತುಹೋದನು. ಇದರಿಂದ ಪೂರ್ವದಲ್ಲಿ ಹೇಳಿದಂತೆ ವಿಷಯಾಸಕ್ತರಾದವರೂ, ತಪೋಹೀನರಾದಂಥಾವರೂ, ಸ್ವೇಚ್ಛಾಮರಣ ಐದೋದಿಲ್ಲಾದಕಾರಣ, ವಿಚಿತ್ರವೀರ್ಯರಾಯ ಸಂತಾನ ಪಡೆಯದೆ ಕ್ಲೇಶದಿಂದ ಸತ್ತುಹೋದ. ಅದರಿಂದ ಸತ್ಯವತೀ, ಪುತ್ರಶೋಕದಿಂದ ಬಹಳ ಪ್ರಲಾಪ ಮಾಡಿ, ಭೀಷ್ಮನ ಕರೆದು 'ರಾಜ್ಯದ ಪಾರುಪತ್ಯಕ್ಕೆ ದಾರೂ ಇಲ್ಲ. ನೀನು ಮದುವಿ ಆಗಿ ರಾಜ್ಯ ಆಳು' ಎನಲಿಕ್ಕೆ 'ನಾನಾದರೂ ರಾಜ್ಯ ಆಳೇನು, ಸರ್ವಥಾ ಮದುವಿ ಮಾಡಿಕೊಂಬೋಹಾಂಗೆ ಇಲ್ಲ. ಊರ್ಧ್ವರೇತಸ್ಸ ವ್ರತ ಮಾಡಿದ್ದೀನಿ' ಎಂದು ದುರಾಗ್ರಹ ಮಾತನಾಡಲಿಕ್ಕೆ, ಭೀಷ್ಮಗೆ ತನ್ನ ಕನ್ಯಾವಸ್ಥೀಲಿ ವ್ಯಾಸೋತ್ಪತ್ತಿ ಆದ ವರ್ತಮಾನ ಹೇಳಿ ಈಗ ಆಪತ್ಕಾಲವದೆಂದು ವ್ಯಾಸನ ಸ್ಮರಣೆ ಮಾಡಲಾಗಿ, ಸ್ವಾಮಿ ಎಂಥಾತ, ಬ್ರಹ್ಮಾದಿ ಜಗತ್ತು ಪರಿಪಾಲನಿ ಮಾಡೋಣವೇ ಶೀಲಸ್ವಭಾವ ಉಳ್ಳಂಥ, ಸಂಪೂರ್ಣ ವಿಜ್ಞಾನವೇ ಶರೀರ ಉಳ್ಳಂಥಾತ, ದುಷ್ಟಜನಮರ್ದಕನಾದ ವೇದವ್ಯಾಸದೇವರು ಬದರಿಕಾಶ್ರಮದಲ್ಲಿದ್ದರೂ, ಸ್ಮರಣಮಾತ್ರದಿಂದ ಸರ್ವತ್ರ ವ್ಯಾಪ್ತನಾದಕಾರಣ ಸತ್ಯವತೀಗೆ ಪ್ರತ್ಯಕ್ಷನಾದನು. ವೇದವ್ಯಾಸಾವತಾರ ಮಾಡಿದ್ದಕ್ಕೆ ತಪೋನಾಮ ಮುನೀಶ್ವರನೇ ವ್ಯಾಸಾವತಾರವೆಂದು, ಅದು ಪರಂಪರಾ ಹೇಳಥಾರೆಂದು ನೋಡಿ-

ಕೊಂಡು ವೇದವ್ಯಾಸದೇವರಿಗೆ ಈ ಪ್ರಕಾರ ವಿಶೇಷಣ ತೋರಿಸಿದರು. ಹೆಂಗಸರಿಗೆ ಮಕ್ಕಳಾಗಧಾಂಗೆ ಪ್ರತಿಕೂಲವಿರತದೆ. ಸ್ವಾಮಿ ಜಗಜ್ಜನ್ಮಾದಿಕಾರಣ, ಬ್ರಹ್ಮಾದಿ ಜಗತ್ತು ಸ್ವಾಮೀ ಮಕ್ಕಳು—ಪ್ರತಿಕೂಲವಿದ್ದರೂ, ಸ್ವಾಮಿ ಪ್ರತಿಕೂಲ ಪರಿಹರಿಸಿ ಮಕ್ಕಳು ಕೊಡಲಾಪ. ಹಾಂಗಾದರೆ ಪರಸ್ತ್ರೀಯರಲ್ಲಿ ವೀರ್ಯ ಇಟ್ಟರೆ, ಕೋಟಿ-ಜನ್ಮ ಪುಣ್ಯ ಕೆಡತದೆ ಎಂದು ಹೇಳಥಾರೆ. ವೀರ್ಯ ಹ್ಯಾಂಗೆ ಇಟ್ಟ ಎಂದಲ್ಲಿ, ಸ್ವಾಮಿ ಅಪ್ರಾಕೃತ ನಿರ್ದೋಷ, ದೇವರಿಗೆ ಪಾಪದ ಲೇಪವಿಲ್ಲ. ಅಂಥಾ ಸ್ವಾಮಿ ಪ್ರತ್ಯಕ್ಷನಾಗಲಿಕ್ಕೆ, ಸರ್ವೋತ್ತಮದೇವತಿ ಬಂದಾನೆಂದು ತನ್ನ ಮಗನಿಗೆ ಸತ್ಯವತೀ ನಮಸ್ಕಾರ ಮಾಡಿ, ಭೀಷ್ಮನೇವೇ ಮೊದಲಾಗಿ ಉಳ್ಳವರ ಕಡಿಯಿಂದ ಅರ್ಘ್ಯಾದಿ ಷೋಡಶೋಪಚಾರ ಪೂಜಿ ಮಾಡಿಸಿಕೊಂಡು ಕುಳಿತಂಥ ವೇದವ್ಯಾಸದೇವರಲ್ಲಿ, ತಾಯೀ ಸತ್ಯವತೀ ಯಾವತ್ತೂ ವೃತ್ತಾಂತ ಹೇಳಿಕೊಂಡಳು.

ಸತ್ಯವತೀ ಸ್ವಾಮಿಯನ್ನು ಕುರಿತು 'ನನಗೆ ಚಿತ್ರಾಂಗದ, ವಿಚಿತ್ರವೀರ್ಯ, ಎಂತೆಂದು ಇಬ್ಬರು ಮಕ್ಕಳು ಇದ್ದರು. ಅವರಿಬ್ಬರೂ ಸತ್ತುಹೋದರು. ರಾಜ್ಯಕ್ಕೆ ದಾರೂ ಇಲ್ಲ. ಭೀಷ್ಮನಾದರೂ ವಿವಾಹ ಮಾಡಿಕೊಂಡು ರಾಜ್ಯ ಆಳೋಹಾಂಗೆ ಇಲ್ಲ. ಊರ್ಧ್ವರೇತಸ್ಕ ವ್ರತ ಮಾಡಿಕೊಂಡಿದ್ದಾನೆ. ನನ್ನಿಂದ ಅತ್ಯಂತ ಪ್ರಾರ್ಥಿತನಾದ ಕಾಲಕ್ಕೂ, ರಾಜ್ಯ ಆಳೋದಿಕ್ಕೆ ಇಚ್ಛೆ ಮಾಡವಲ್ಲ. ಆದಕಾರಣ ನಿನ್ನ ತಮ್ಮನ ಹೆಂಡತಿಯಲ್ಲಿ ಗುಣಾಧಿಕನಾದಂಥ ಗಂಡಸುಮಗನ್ನ ಹಡದುಕೊಡು' ಎನಲಿಕ್ಕೆ, ಪರಮ ಆದರದಿಂದ, ಈ ಪ್ರಾರ್ಥನಿ ಭೀಷ್ಮಾದಿಗಳಿಂದ ನಮಸ್ಕಾರ-ಪೂರ್ವಕ ಸ್ತೋತ್ರ ಮಾಡಿಸಿಕೊಂಡು, ಜಗದ್ಗುರುವಾದಂಥ ವೇದವ್ಯಾಸದೇವರು ಮಾತನಾಡಿದನು. 'ಲಕ್ಷ್ಮೀದೇವಿ ಹೊರ್ತಾಗಿ, ನನ್ನ ಅಂಗಸಂಗಕ್ಕೆ ಯೋಗ್ಯ-ರಾದಂಥ ಸ್ತ್ರೀಯರು ದೇವತಾಲೋಕದಲ್ಲಿ ಸಹವಾಗಿ ಇಲ್ಲ. ಇನ್ನು ಭೂಮೀ-ವ್ಯಾಲಿಹಾರೆಂದು ಏನು ಹೇಳಬೇಕು! ಹಾಂಗಾದರೂ ನಿನ್ನ ಸೊಸಿಯಲ್ಲಿ ಮಕ್ಕಳಾಗಬೇಕೆಂದು ಬೇಡಿಕೊಂಡಿ, ನಿನ್ನ ವಾಕ್ಯ ಅವಶ್ಯ ಅಂಗೀಕಾರ ಮಾಡೇನು. ನಿನ್ನ ಸೊಸಿಯಾದಂಥ ಅಂಬಿಕಾ ಎಂಬ ಸ್ತ್ರೀಯನ್ನ, ನನ್ನ ಅಂಗಸಂಗಕ್ಕೆ ಸಿದ್ಧಳಿರ್ಥ, ಒಂದು ವರುಷ ಮುಗಿಯೋಪರಿಯಂತ ವೈಷ್ಣವವ್ರತ ಮಾಡಿದರೆ, ಆಕೀ ದೇಹ ಪವಿತ್ರವಾದೀತು. ಅನಂತರದಲ್ಲಿ ನನ್ನಂಗಸಂಗದ್ದಸಿಯಿಂದ ಅಂಬಿಕೆಯು ಉತ್ತಮ ನಾದಂಥ ಗಂಡಸುಮಗನ್ನ ಐದಾಳು' ಎಂದು ಈ ಪ್ರಕಾರ ಮಾತನಾಡಲಿಕ್ಕೆ, ಸತ್ಯವತೀ ಪುನಃ ಮಾತನಾಡಥಾಳೆ. 'ವರ್ಷಪರಿಯೆಂತ ರಾಜ್ಯ ಆಳೋರು ಇಲ್ಲದೇ ಹೋದರೆ, ಅರಾಜಕವಾಗಿ ರಾಜ್ಯ ಕೆಟ್ಟುಹೋದೀತು. ತತ್ಕಾಲಕ್ಕೇ ಮಗನ್ನ ಹಡದುಕೊಡು' ಎನಲಿಕ್ಕೆ, ವೇದವ್ಯಾಸದೇವರು ಮಾತನಾಡಥಾನೆ. 'ನಿನ್ನ ಸೊಸಿಗೆ ಹೇಳು. ನಾನು ಸೌಮ್ಯರೂಪನಾದರೂ ಅಂಬಿಕಾ ದೃಷ್ಟಿಗೆ ಅತ್ಯಂತ ಭಯಂಕರ ರೂಪ ತೋರಿಸಿಸೇನು. ಅಂಥಾ ರೂಪವನ್ನು ನೋಡಿ ಶಂಕಿಸದೆ

ನೋಡುವಂಥಾಕಿಯಾದರೆ, ನಿನ್ನ ಸೊಸಿಗೆ ಗುಣಶ್ರೇಷ್ಠನಾದಂಥ ಬಲವಂತ ಮಗ ಹುಟ್ಯಾನು' ಎಂದು ಮಾತನಾಡಲಿಕ್ಕೆ. 'ಬಹಳ ಒಳ್ಳೇದು' ಎಂದು ತನ್ನ ಸೊಸಿಗೆ ಕರದು, 'ವೇದವ್ಯಾಸ ನಿನ್ನ ಭಾವನಿದ್ದಾನೆ. ಭೋಗಕ್ಕೆ ಹೋಗು. ಭಯಂಕರ ರೂಪ ತೋರಿಸಿದರೂ ಸರಿಯೆ, ಅಂಜಬ್ಯಾಡ. ಸರ್ವೋತ್ತಮ ದೇವತೆ ಎಂದು ತಿಳಿದು, ಅತ್ಯಂತ ಭಕ್ತಿಯುಳ್ಳಾಕಿಯಾಗಿ ಭಾವನ ಕೂಡ ಭೋಗ ಮಾಡು. ನಿನಗೆ ಛಲೋ ಮಗ ಹುಟ್ಯಾನು', ಎಂದು ಬುದ್ಧಿ ಹೇಳಿ ವೇದವ್ಯಾಸದೇವರ ಸಮೀಪಕ್ಕೆ ಕಳುಹಿಡಲು. ಅತ್ಯಂತ ಭಯಂಕರ ರೂಪ ನೋಡಲಾರದೆ ಕಣ್ಣು ಮುಚ್ಚಿಕೊಂಡು ರಮಿಸಿದಳು. ಆದೇ ಸಮಯದಲ್ಲಿ ಗಂಧರ್ವಶ್ರೇಷ್ಠನಾದಂಥ ಧೃತರಾಷ್ಟ್ರನಾಮಕ* ಗಂಧರ್ವ, ಮುಖ್ಯಪ್ರಾಣನ ಆವೇಶದಿಂದ ಹುಟ್ಟಿದನು.

---

*ಮೂಲ ಶ್ಲೋಕ—

'ಇತರೀತೇಽಸ್ತ್ವಿತ್ಯುದಿತಸ್ತಯಾಗಮತ್ ಕೃಷ್ಣೋಽಂಬಿಕಾಂ
ಸಾ ತು ಭಯಾನ್ನ್ಯಮೀಲಯತ್ |
ಅಭೂಚ್ಚ ತಸ್ಯಾಂ ಧೃತರಾಷ್ಟ್ರನಾಮಕೋ
ಗಂಧರ್ವರಾಟ್ ಪವನಾವೇಶಯುಕ್ತಃ ||'

—ಶ್ರೀ.ಮ.ಭಾ.ತಾ.ನಿ. ಅ. ೧೦೨ ಶ್ಲೋ. ೧೩೧

'ಧೃತರಾಷ್ಟ್ರಃ ಪುರಾ ಪ್ರೋಕ್ತೌ ಗಂಧರ್ವಸ್ತ್ರ ಸನಾಮಕಃ ||'

—ಅಂಶನಿರ್ಣಯ, ಶ್ಲೋ. ೪೩, ಶ್ರೀ ನಾರಾಯಣಪಂಡಿತಾಚಾರ್ಯರು

'.....ವ್ಯಾಸೇನ ಇತರೀತೇ ಸತಿ ತಯಾ ಸತ್ಯವತ್ಯಾ
ತಥಾಸ್ತ್ವಿತ್ಯುದಿತಃ ಕೃಷ್ಣಃ ಅಂಬಿಕಾಮಗತ್ |
ಸಾ ಅಂಬಿಕಾ ಭಯಾದವಿದ್ಯಮಾನ ಭಯಂಕರರೂಪದರ್ಶನ
ಭಯಾನ್ನ್ಯಮೀಲಯತ್ ನಯನ ಇತಿ ಶೇಷಃ |
.....ತಸ್ಯಾಂಬಿಕಾಯಾಮಮ್ ಪೂರ್ವಧೃತರಾಷ್ಟ್ರನಾವ-ಕೋ ಗಂಧರ್ವರಾಟ್ |
ಗಂಧರ್ವಶ್ರೇಷ್ಠಃ ಅತ್ರಾಪಿ ಧೃತರಾಷ್ಟ್ರನಾಮಾ ಬಭೂವ'

ಶ್ರೀ.ಮ.ಭಾ.ತಾ.ನಿ. ವ್ಯಾಖ್ಯಾ—ಜನಾರ್ದನ ಭಟ್ಟೀಯ

'ಅರಿಷ್ಟಾಯಾಸ್ತು ಯಃ ಪುತ್ರೋಽಯಂ ಹಂಸ ಇತ್ಯಭಿವಿಶ್ರುತಃ |
ಸ ಗಂಧರ್ವಪತಿರ್ಜಜ್ಞೇ ಕುರುವಂಶವಿವರ್ಧನಃ |
ಧೃತರಾಷ್ಟ್ರ ಇತಿ ಖ್ಯಾತಃ ಕೃಷ್ಣದ್ವೈಪಾಯನಾತ್ಮಜಃ |'

ಅರಿಷ್ಟಾದೇವಿಯ ಮಗನು ಹಂಸನೆಂದು ಪ್ರಸಿದ್ಧನಾದವನು ಗಂಧರ್ವರಿಗೆ ರಾಜನಾದನು. ಆ ಹಂಸನು ಅಂಬಿಕೆಯಲ್ಲಿ ವೇದವ್ಯಾಸರಿಂದ ಕುರುವಂಶವನ್ನು ಅಭಿವೃದ್ಧಿಪಡಿಸತಕ್ಕ ಧೃತರಾಷ್ಟ್ರನೆಂದು ಪ್ರಸಿದ್ಧನಾಗಿ ಹುಟ್ಟಿದನು.—ಶ್ರೀ.ಮ.ಭಾ.ತಾ.ನಿ. ವ್ಯಾಖ್ಯಾ ಶ್ರೀ ವಾದಿರಾಜರು

ಮೇಲಿನ ವ್ಯಾಖ್ಯಾನಗಳನ್ನು ಗಮನಿಸಿದಾಗ ಧೃತರಾಷ್ಟ್ರನು ಮೂಲರೂಪದಲ್ಲಿ ಗಂಧರ್ವಶ್ರೇಷ್ಠನೆಂಬುದು ಸುಸ್ಪಷ್ಟ. ಆ ಗಂಧರ್ವಶ್ರೇಷ್ಠನೇ ಧೃತರಾಷ್ಟ್ರನೆಂದೂ, ಹಂಸನೆಂದೂ ಕರೆಯಿಸಿಕೊಂಡಿದ್ದಾನೆ. ಈ ವಿಷಯವನ್ನು ಸುಜ್ಞರು ವಿಚಾರಮಾಡಿ ನಿರ್ಣಯಿಸಿಕೊಳ್ಳಬೇಕು. —ಪ್ರಕಾಶಕರು

ಪವನಾವೇಶ ಇದ್ದದ್ದಕ್ಕೆ ಫಲ ಹೇಳಥಾರೆ. ಮರುತಾಂಶನಿಮಿತ್ತದಿಂದ ಬಲಾಧಿಕನಾಗಿ, ಈ ಜನ್ಮದಲ್ಲಿ ಧೃತರಾಷ್ಟ್ರನೆಂಬೋ ಹೆಸರುಳ್ಳವನಾದನು. ವೇದವ್ಯಾಸ ಬಲಾಧಿಕನಾಗೆಂದು ವರವು ಕೊಟ್ಟನು. ತಾಯಿಯಾದ ಅಂಬಿಕೆಯು ಕಣ್ಣುಮುಚ್ಚಿ ಭೋಗ ಮಾಡಿದ ಪ್ರಯುಕ್ತ, ಆ ಮಗ ಕುರುಡನಾಗಿ ಹುಟ್ಟಿದನು.

ವೇದವ್ಯಾಸದೇವರ ತಾಯಿ ಸತ್ಯವತೀ, ಮಗ ಕುರುಡನಾದನೆಂದು ತಿಳಿದು, ಪುನಃ ವೇದವ್ಯಾಸದೇವರ ಕೂಡ ಮಾತನಾಡಥಾಳೆ. 'ಕುರುಡಮಗನ್ನ ಹಡದು ಕೊಟ್ಟೆ. ರಾಜ್ಯಕ್ಕೆ ಅಧಿಕಾರಿ ಆಲ್ಲ. ನಿನ್ನ ನಾದಿನಿ ಅಂಬಾಲಿಕಾ, ಮತ್ತೊಬ್ಬಾಕಿ ಇದ್ದಾಳೆ. ಆಕಿಯಲ್ಲಿ ಗುಣಶ್ರೇಷ್ಠನಾದಂಥ ರಾಜ್ಯಕ್ಕೆ ತಕ್ಕ ಇನ್ನೊಬ್ಬ ಮಗನ್ನ ಹಡದುಕೊಡು' ಎಂದಲ್ಲಿ, ವೇದವ್ಯಾಸದೇವರು ಪೂರ್ವದೋಪಾದಿ ಮಾತನಾಡಿದ. ತದನಂತರದಲ್ಲಿ ಸೊಸೀನ್ನ ಕರದು, 'ವೇದವ್ಯಾಸನ ರೂಪ ನೋಡಿ ಅಂಜಬ್ಯಾಡ. ಕಣ್ಣು ಮುಚ್ಚಿಕೊಂಡು ಭೋಗ ಮಾಡಬ್ಯಾಡ. ಕಣ್ಣು ತೆರೆದುಕೊಂಡು ಭಾವನ ಸಂಗಡ ಸಂಭೋಗ ಮಾಡು. ಥಲೋ ಮಗನಾಗಲಿ' ಎಂದು, ಸೊಸಿಗೆ ಬಹಳ ಪ್ರಕಾರ ಬುದ್ಧಿ ಹೇಳಿ ಭೋಗಕ್ಕೆ ಕಳುಹಿಸಿದಳು. ಅಂಬಾಲಿಕಾ ವೇದವ್ಯಾಸನ ಅದ್ಭುತ ರೂಪ ಕಂಡು ಬಹಳ ಅಂಜಿಕೆಯುಳ್ಳಾಕಿಯಾಗಿ ಬಿಳೀ ಗುಡ್ಡಿ ವ್ಯಾಲೆ ಮಾಡಿಕೊಂಡು, ಕಣ್ಣು ತೆರೆದುಕೊಂಡು ಭೋಗ ಮಾಡಿದಳು. ಅಂಬಾಲಿಕಾ ಸಿಸಿಯಿಂದ ಪರಾವಹನೆಂಬ ಮರುತ, ಮುಖ್ಯವಾಯುದೇವರ ಅಂಶದಿಂದ ಯುಕ್ತನಾಗಿ ಹುಟ್ಟಿದನು. ಶುಭ್ರವರ್ಣ ಉಳ್ಳಾತನಾದನು. ಅದರಿಂದ ಪಾಂಡು ಎಂಬ ನಾಮವುಳ್ಳಾತನಾದನು. ಮುಖ್ಯವಾಯುದೇವರ ಆವೇಶ ಇದ್ದಕಾರಣ, ಮಹಾ-ಬಲಿಷ್ಠ ಸರ್ವಶಾಸ್ತ್ರವಿದ್ಯಗಳೆಲ್ಲಿ ನಿಪುಣನಾದನು. ಇಂಥಾ ಪಾಂಡುಚಕ್ರವರ್ತಿಗೆ ವೇದವ್ಯಾಸದೇವರು ಬಲವೀರ್ಯಾಧಿಕತ್ವವನ್ನು ಕೊಟ್ಟನು.

ಅನಂತರದಲ್ಲಿ ವೇದವ್ಯಾಸದೇವರ ತಾಯಿ ಸತ್ಯವತೀ, ತಾಯೀ ದೋಷದಿಂದ ಶುಭ್ರವರ್ಣವುಳ್ಳಾತನಾದ, ಮಂದೀಕಣ್ಣಿಗೆ ಛಂದವಾಗಿ ತೋರೋದಿಲ್ಲ ಎಂದು ತಿಳಿದು, ಪುನಃ ವೇದವ್ಯಾಸದೇವರ ಕೂಡ ಮಾತನಾಡಿದಳು. 'ಅಂಬಿಕಾ ಎಂಬಾಕಿನ್ನ ಸಂಗಡ ಒಂದು ಸಲ ಭೋಗ ಮಾಡ್ಯಾಳೆ. ಇನ್ನೊಂದಾವರ್ತಿ ಆಕೀ ಸಂಗಡ ಭೋಗ ಮಾಡಿ, ದೋಷರಹಿತನಾದಂಥ ಉತ್ತಮ ಗುಣ ಉಳ್ಳಂಥ ಮೂರನೇ ಮಗನ್ನ ಹುಟ್ಟಿಸಿಕೊಡು' ಎಂದು ಬೇಡಿಕೊಂಡಳು. ತನ್ನ ಸೊಸಿಯಾದಂಥ ಅಂಬಿಕೆಯ ಕೂಡ ಮಾತನಾಡಿದಳು, 'ಪೂರ್ವದಲ್ಲಿ ಕಣ್ಣು ಮುಚ್ಚಿಕೊಂಡು ಭೋಗ ಮಾಡಿದಿ, ಆದಕಾರಣ ಕುರುಡಮಗ ಹುಟ್ಟಿದ. ಇನ್ನಾದರೂ ಚೆನ್ನಾಗಿ ಭಕ್ತಿಯಿಂದ ವೇದವ್ಯಾಸದೇವರ ಉಪಾಸನ ಮಾಡು' ಎಂದು ಬಹುಪ್ರಕಾರ ಬುದ್ಧಿ ಹೇಳಿದಳು. ಅತ್ತಿಯಿಂದ ಈ ಪ್ರಕಾರ ನುಡಿಸಿಕೊಂಡು, ಅಂಬಿಕಾ ಕಪಟತನ ಮಾಡಿ, ವೇದವ್ಯಾಸರ ಭಯಂಕರರೂಪ ನೋಡಲಾರದೆ, ಭೋಗ ತಾಳಲಾರದೆ,

ವೇದವ್ಯಾಸದೇವರ ಮೋಹಕಶಕ್ತಿಯಿಂದ ದುರ್ಬುದ್ಧಿಯುಳ್ಳಾಕೆಯಾಗಿ ಭಯದ ದೆಸೆಯಿಂದ, ತನ್ನ ಪರಿಚಾರಕಳಾದಂಥ ಶೂದ್ರಸ್ತ್ರೀಯಳಿಗೆ ತನ್ನ ಆಭರಣಗಳನ್ನಿಟ್ಟು, ವೇದವ್ಯಾಸರ ಭೋಗಕ್ಕೆ 'ನೀನು ಹೋಗು' ಎಂದು ಕಳುಹಿಸಿಕೊಟ್ಟಳು. ದಾಸಿ ಯೋಗ್ಯಜೀವಳು. ಸರ್ವೋತ್ತಮ ದೇವತಿಯೆಂದು ತಿಳಿದು, ಸರ್ವೇಶ್ವರನ ಅಂಗಸಂಗ ಆಗತವೆಂದು ಭಕ್ತಿಯಿಂದ, ಪರಾನಂದವೇ ಶರೀರವಾಗಿ ಉಳ್ಳಂಥ, ಗುಣಸಮುದ್ರನಾದ ಪರಮಾತ್ಮನ ಐದಿ, ಸ್ವಾಮೀ ಕೂಡ ರಮಿಸಿದಳು. ಆ ಶೂದ್ರಸ್ತ್ರೀಯಲ್ಲಿ ಪ್ರಸಿದ್ಧನಾದಂಥ ಯುಮಧರ್ಮರಾಯ ಹುಟ್ಟಿದನು.

ಯುಮಧರ್ಮ, ಶೂದ್ರಸ್ತ್ರೀಯಲ್ಲಿ ಹುಟ್ಟಲಿಕ್ಕೆ ನಿಮಿತ್ತವೇನೆಂದರೆ, ಮಾಂಡವ್ಯಋಷಿಯ ಶಾಪದ ದೆಸೆಯಿಂದ ಶೂದ್ರಸ್ತ್ರೀಯಲ್ಲಿ ಜನ್ಮವನ್ನು ಅಂಗೀಕರಿಸಿದನು. ಹಾಂಗಾದರೆ ದೇವತಿಗಳಿಗೆ ಋಷಿಶಾಸ ಹ್ಯಾಂಗೆ ಬಂತು ಎಂದು ಶಂಕ ಬಂದತೆ, ಹೇಳಥಾರೆ. ಮಾಂಡವ್ಯಋಷಿ ವಸಿಷ್ಠನ ಸರಿ ಆದೇನೆಂದು ಇಚ್ಛೆಯುಳ್ಳಾತನಾಗಿ ತಪಸ್ಸು ಮಾಡತಿದ್ದ. ಆ ತಪಸ್ಸು ಹ್ರಾಸ ಮಾಡುವಂಘಾತನಾಗಿ ಸ್ವೇಚ್ಛೆಯಿಂದಲೇವೆ ಶಾಪವನ್ನು ಐದಿದನು. ತಪಸ್ಸು ಹ್ರಾಸವಾಗದು. ಮಾಂಡವ್ಯಋಷಿಯು ತಪಸ್ಸು ಮಾಡತಾ ಕುಳಿತಿರಲಿಕ್ಕೆ, ಕಳ್ಳರು ದ್ರವ್ಯ ಕದ್ದುಕೊಂಡುಬಂದು ಋಷಿಯ ಬೆನ್ನಹಿಂದೆ ಅಡಗಿಕೊಂಡರು. ರಾಜದೂತರು ಹೋಗಿ ಈ ಋಷಿಗೆ ಚೋರತ್ವ ಆರೋಪಿಸಿ, ಋಷಿಸಹಿತ ಕಳ್ಳರನ್ನು ಕೈಸೆರಿ ಹಿಡತಂದು ಶೂಲಕ್ಕೆ ಹಾಕಿದರು. ಕಳ್ಳರು ಸತ್ತರು. ಋಷಿ ಜೀವಂತನಾಗಿರಲಿಕ್ಕೆ, ನಾಯಿ ನರಿ ಮುಟ್ಯಾವೆಂದು ಋಷಿಗಳು ಕಾಯುತಿಹೋರು. ಅರಸಗೆ ಮಾಂಡವ್ಯಋಷಿ ಬದುಕಿದ್ದಾನೆಂದು ಹೇಳಿಕಳುಹಲಿಕ್ಕೆ, 'ಶೂಲ ತೆಗೆದು ಬಿಟ್ಟುಕೊಡಿರಿ' ಎಂದು ಅರಸನ ಅಪ್ಪಣೆ ಆಯಿತು. ಶೂಲ ಕಿತ್ತಲಿಕ್ಕೆ ವಶವಲ್ಲ, ಮುತ್ತಷ್ಟು ದುಃಖವಾಗತದೆಂದು ಶೂಲ ಕೊರೆದತು. ಆದಕಾರಣದಿಂದ 'ಅಣಿಮಾಂಡವ್ಯ'ನೆಂದು ನಾಮ ಬಂತು. ಮಾಂಡವ್ಯಗೆ ಇಲ್ಲದೇ ಇದ್ದ ದೋಷ ಆರೋಪಿಸಿ ಶೂಲಕ್ಕೆ ಹಾಕಿಸಿದ್ದರಿಂದ ಪ್ರತ್ಯವಾಯ ಬಂತಲ್ಲ ಎಂದಲ್ಲಿ, ನಿಶ್ಚಯ ದೋಷವವೆಂದು ಹೇಳಥಾರೆ. ತನಗೆ ಯೋಗ್ಯವಲ್ಲದೇ ಇದ್ದ ತಪಸ್ಸು ಮಾಡಿ, ವಸಿಷ್ಠನ ಸರಿ ಆದಾನೆಂದು ಇಚ್ಛೆ ಮಾಡಿದ. ಆದಕಾರಣದಿಂದ ಯೋಗ್ಯವಲ್ಲದ ಆ ತಪದ್ದೆಸೆಯಿಂದ ಶೂಲ ಪ್ರಾಪ್ತವಾಯಿತು. ಅಣಿಮಾಂಡವ್ಯಋಷಿಯು ಯುಮಧರ್ಮನ ಸಮೀಪಕ್ಕೆ ಹೋಗಿ 'ನನ್ನ ಶೂಲಕ್ಕೆ ಹಾಕಲಿಕ್ಕೆ ಕಾರಣವೇನು? ನನ್ನ ಕರ್ಮಗಳೆಲ್ಲ ನಿನ್ನ ಹಸ್ತಕರಾದಂಥ ಚಿತ್ರಗುಪ್ತರ ಕೈಯ ಬರಸಿದ್ದಿ. ನನ್ನ ದುಷ್ಕರ್ಮವೇನು? ಹೇಳು' ಎಂದು ಕೇಳಲಾಗಿ, 'ನೀನು ಚಿಕ್ಕಂದಿನಲ್ಲಿ ಹದಿನಾಲ್ಕು ವರ್ಷ ಮೀರದಕಿಂತ ಮೊದಲಿ, ಒಂದು ಸೊಣ ಶೂಲಕ್ಕೆ ಹಾಕಿ ಕೊಂದಿದ್ದಿ. ಆದಕಾರಣದಿಂದ ನಿನಗೆ ಶೂಲ ಪ್ರಾಪ್ತವಾಯಿತು'.ಎಂದು ಯುಮಧರ್ಮರಾಯ ಹೇಳಿದನು. ಹಾಂಗಾದರೆ

ನೊಣ ಶೂಲಕ್ಕೆ ಹಾಕಿದ್ದರಿಂದ ಈ ಶೂಲ ಪ್ರಾಪ್ತವಾಯಿತೆಂದು, ಯಮಧರ್ಮ ಸುಳ್ಳಾಡಿದನಲ್ಲ ಎಂದಲ್ಲಿ, ಯಮಧರ್ಮನಲ್ಲಿ ಸರ್ವಥಾ ಅನೃತಭಾಷಣವಿಲ್ಲ ಎಂತ ಹೇಳಥಾರೆ. ಏನುಕಾರಣ ಎಂದಲ್ಲಿ, ಶೂಲ ಪ್ರಾಪ್ತವಾಗೋದರಲ್ಲಿ ಮಕ್ಷಿಕವಧಾ ದೋಷಪ್ರಾಪ್ತಿಯು ಕಾರಣವಾಯಿತು. ತಪಸ್ಸೂ ಒಂದು ಹೀಂಗಿದ್ದ ಪ್ರಯುಕ್ತ, ಯಮನ ಭಾಷಣಕ್ಕೆ ಅನೃತತ್ವ ಬರಲಿಲ್ಲವೆಂದು ಹೇಳಥಾರೆ. ಹಾಂಗಾದರೆ ಬಲವತ್ಕಾರಣ ಬಿಟ್ಟು ಅಲ್ಪದೋಷ ಹೇಳಿದ್ದರಿಂದ, ಯಮನ ಭಾಷಣಕ್ಕೆ ನ್ಯೂನತ್ವ ಬಂದ ಪ್ರಯುಕ್ತ, ಮಾಂಡವ್ಯನು ಕೋಪಾವಿಷ್ಟನಾಗಿ 'ಇಂಥಾ ಕ್ಷುದ್ರ ಪಾಪದ ಲೇಪ ಎನಗುಂಟೇ! ನೀನು ಹುಸಿ ಆಡಿದ್ದರಿಂದ ಶೂದ್ರನಾಗು' ಎಂದನು. ಮಾಂಡವ್ಯ ವಸಿಷ್ಠನ ಸರಿ ಆದೇನೆಂದು ತಪಸ್ಸು ಮಾಡಿದ್ದ. ಉತ್ತಮರಿಗೆ ಶಾಪ ಕೊಟ್ಟ ಕಾರಣ ತಪಸ್ಸು ಹ್ರಾಸವಾಗಿ ಕೆಟ್ಟುಹೋಯಿತು.

ಆ ನಂತರದಲ್ಲಿ ವೇದವ್ಯಾಸದೇವರು, ಶೂದ್ರಸ್ತ್ರೀಯಲ್ಲಿ ಹುಟ್ಟಿದ ಕೂಸಿಗೆ ನಾಮಕರಣ ಮಾಡಿ, 'ಸರ್ವಜ್ಞತ್ವವನ್ನು ಕೊಟ್ಟನು. ನಾಮಕರಣ ಏನಂತ ಮಾಡಿದ ಎಂದಲ್ಲಿ, ವಿದ್ಯದಲ್ಲಿ ರತಿಯುಳ್ಳವನಾದಾನು ಎಂದು ವಿದುರನೆಂದು ಹೆಸರಿಟ್ಟನು. ಜ್ಞಾನವಂತ ಬಲವಂತ ನೀತಿವಂತ ಧನುರ್ವಿದ್ಯಾದಲ್ಲಿ ಬಲಾಧಿಕನಾದಾನೆಂದು ಈ ಪ್ರಕಾರ ಮಾತನಾಡಿದನು. ತದನಂತರ ಸತ್ಯವತೀ ವಿದುರನ ಶೂದ್ರತ್ವವನ್ನು ತಿಳಿದು, ರಾಜ್ಯಕ್ಕೆ ತಕ್ಕವನಲ್ಲವೆಂದು ಪುನಃ ನಮಸ್ಕಾರ ಮಾಡಿ ಬೇಡಿಕೊಳ್ಳಥಾಳೆ. 'ಧೃತರಾಷ್ಟ್ರ ಹುಟ್ಟುಕುರುಡ, ಪಾಂಡುಚಕ್ರವರ್ತಿ ಕುಭ್ರ-ವರ್ಣ, ವಿದುರ ಶೂದ್ರ, ಅರಸತ್ವ ಮಾಡಲಿಕ್ಕೆ ಇನ್ನೊಬ್ಬ ಮಗನ್ನ ಹಡದುಕೊಡು' ಎಂದು ವೇದವ್ಯಾಸಗೆ ಬೇಡಿಕೊಂಡಳು. ಸತ್ಯವತೀ ಲೋಭ ಮತ್ತಷ್ಟು ಹೆಚ್ಚಾಗತ ಹೋಗತದೆ. ಲೋಭ ಪರಿಪೂರ್ತಿ ಆಗೋದಿಲ್ಲ ಎಂದು ಆಲೋಚಿಸಿ, ಮತ್ತೊ ಒಬ್ಬ ಮಗ ಹುಟ್ಟೋದರಲ್ಲಿ ಇಚ್ಛೆ ಮಾಡದಲೇವೆ, ವೇದವ್ಯಾಸ ಅಸ್ಪೃಷ್ಟನಾದನು.

ಧೃತರಾಷ್ಟ್ರಾದಿಗಳಿಗೆ ಕ್ಷತ್ರಿಯಯೋಗ್ಯ ಜಾತಕರ್ಮ ಮೊದಲಾದದ್ದು ಭೀಷ್ಮ, ಮುನಿಗಳಿಂದ ಸಹಿತನಾಗಿ ವಿಧ್ಯುಕ್ತಪ್ರಕಾರದಿಂದ ಮಾಡಿದನು. ತರುವಾಯ ವೇದವ್ಯಾಸ ಸಮಸ್ತ ಋಗಾದಿ ವೇದಗಳನ್ನು ಹೇಳಿದನು. ಅದರೊಳಗೆ ಭೀಷ್ಮ ಪಾಂಡುಚಕ್ರವರ್ತಿಗೆ ಶಸ್ತ್ರಾಸ್ತ್ರವಿದ್ಯಗಳನ್ನು ಕಲಿಸಿದನು. ಆ ಮೂರು ಮಂದಿ ಸಕಲವಿದ್ಯಾ ಪ್ರವೀಣರಾದರು. ಅದರೊಳಗೆ ವಿದುರ ವಿಶೇಷಾಕಾರದಿಂದ ಪ್ರವೀಣನಾದನು. ವಿದುರ ಶೂದ್ರ, ಋಗಾದಿ ವೇದಗಳು ಹ್ಯಾಂಗೆ ಸಂಪಾದಿಸಿದ ಎಂದಲ್ಲಿ, ವಿದುರ ಕರ್ಣಾದಿಗಳಿಗೆ ವೇದಾರ್ಥ ತಮ್ಮ ಜ್ಞಾನದಿಂದ ಬಾಹೋದು. ನೀಚಜಾತಿಯಲ್ಲಿ ಹುಟ್ಟಿದ್ದರೂ ಸರಿಯೆ ಅವರು ಸ್ವರೂಪೋತ್ತಮರು. ಆದಕಾರಣ ವೇದಶಾಸ್ತ್ರ ಬಲ್ಲರು. ಪಾಂಡುಚಕ್ರವರ್ತಿ ಶಸ್ತ್ರಾಸ್ತ್ರದಲ್ಲಿ ಬಹು ನಿಪುಣನಾದನು.

ಈತಗೆ ಸರಿಯಾದ ವೀರರು ಮತ್ತೊಬ್ಬರಿದ್ದಿಲ್ಲ. ಆದ್ದರಿಂದ ದಿಗ್ವಿಜಯಕ್ಕೆ ಹೋಗಿ, ಸಮಸ್ತ ರಾಯರನ್ನೆಲ್ಲ ತನ್ನ ಪರಾಕ್ರಮದಿಂದ ಸೋಲಿಸಿ, ಕಪ್ಪಗಳ ಕೊಂಡು ತನ್ನ ವಶಮಾಡಿಕೊಂಡು ಸಾಮ್ರಾಜ್ಯ ಆಳಿದನು. ಇನ್ನು ಸಂಜಯನ ಉತ್ಪತ್ತಿ ಹೇಳಥಾರೆ.

ಗಾವಲ್ಗಣನೆಂದು ಸುನಾಮವುಳ್ಳಂಥ ಸೂತನ ದೆಸಿಯಿಂದ, ಸಮಸ್ತ ಗಂಧರ್ವರಿಗೆ ಪತಿಯಾದಂಥ 'ತುಂಬುರು' ಎಂದು ಪ್ರಸಿದ್ಧನಾದಂಥ, ಗಂಧರ್ವ-ಶ್ರೇಷ್ಠನು ಉದ್ವಹ ಎಂಬ ಮರುತಾಂಶದಿಂದ ಯುಕ್ತನಾಗಿ, ಸಂಜಯನಾಮದಿಂದ ಹುಟ್ಟಿದನು. ಸಂಜಯನೆಂಬೋ ನಾಮ ಏನುಕಾರಣ ಬಂತೆಂದಲ್ಲಿ, ಇಂದ್ರಿಯಗಳು ವಶವಾದ ಕಾರಣ ಸಂಜಯನೆಂದು ನಾಮವುಳ್ಳವನಾದನು. ವಿಚಿತ್ರವೀರ್ಯನ ಸೂತನಾದಂಥ ಗಾವಲ್ಗಣನಲ್ಲಿ ಹುಟ್ಟಿದಾತನೇ ಸಂಜಯ. ಧೃತರಾಷ್ಟ್ರಾದಿಗಳಿಗೆ ಅತಿ ಪ್ರಿಯನಾದನು, ಸಮಸ್ತ ವಿದ್ಯದಲ್ಲಿ ಸರ್ವಜ್ಞನಾದಂಥಾತ. ಸರ್ವಜ್ಞತ್ವದಲ್ಲಿ ಎರಡು ನಿಮಿತ್ತ ಹೇಳಥಾರೆ. ಮತಿವಂತನಾದಂಥಾವ, ತರುವಾಯ ವೇದವ್ಯಾಸನ ಶಿಷ್ಯ, ಇದರಿಂದ ಸರ್ವಜ್ಞತ್ವ ಬಂತು. ಇವರೆಲ್ಲ ವಾರಿಗಿಯವರು. ಅವರೊಳಗೆ ವಿಶೇಷಾಕಾರದಿಂದ ಧೃತರಾಷ್ಟ್ರಗೆ ಪ್ರೀತಿಕರನಾಗಿಹ. ಮುಂದೆ ಸಂತಾನ ಆಗ-ಬೇಕಾಗಿ, ಭೀಷ್ಮನು ಗಾಂಧಾರದೇಶಕ್ಕೆ ಅಧಿಪತಿಯಾದಂಥ ಸುಬಲರಾಯನ ಮಗಳಾದ ಗಾಂಧಾರಿಯನ್ನು, ಜ್ಯೇಷ್ಠನಾದಂಥ ಧೃತರಾಷ್ಟ್ರಗೆ ಮದುವಿ ಮಾಡಿದನು. ಗಾಂಧಾರಿ ಶಕುನಿಗೆ ಅಕ್ಕನಾಗಬೇಕು. ಶಕುನಿ ತಾ ದಾರು ಎಂದರೆ, ಸಂಶಯಜ್ಞಾನಕ್ಕೆ ಅಭಿಮಾನಿ. ಇದರ ಹೊರ್ತು, ಪರಲೋಕಾದಿಗಳಿಲ್ಲ ಎಂಬ ಮಿಥ್ಯಾಜ್ಞಾನಕ್ಕೆ ಅಭಿಮಾನಿಯಾದಂಥಾವ, ಪೂರ್ವಜನ್ಮದಲ್ಲಿ ನಾಸ್ತಿಕ. ಶಕುನಿ ಎಂದು ನಾಮವುಳ್ಳವ ಇಲ್ಲಿ ಹುಟ್ಟೋದಕ್ಕೆ ನಿಮಿತ್ತವೇನೆಂದರೆ, ಮುಂದೆ ಆಗುವಂಥ ದ್ಯೂತಾದಿ ಕುಕರ್ಮಕ್ಕೆ ಕಾರಣನಾಗಬೇಕೆಂದು ಹುಟ್ಟಿದನು. ಧೃತರಾಷ್ಟ್ರರಾಯ ಮದುವಿ ಮಾಡಿಕೊಂಡಿದ್ದು ಹೇಳಿ, ಇನ್ನು ಪಾಂಡುಚಕ್ರವರ್ತಿ ಮದುವಿ ಪ್ರಕಾರ ಹೇಳಥಾರೆ.

ಯಾದವನಾದಂಥ ಶೂರರಾಯನ ಮಗಳು ಪೃಥಾದೇವಿ ಎಂದು ನಾಮ-ವುಳ್ಳಾಕಿ, ವಸುದೇವನ ಅಕ್ಕನಾಗಬೇಕು, ಜ್ಞಾನಭಕ್ತಿವೈರಾಗ್ಯಶೀಲಳು, ರೂಪ ದಿಂದ ಅತಿ ಸುಂದರಳು. ಅಂಥಾ ಹೆಣ್ಣುಮಗಳನ್ನ ತನ್ನ ಗೆಳಿಯನಾದಂಥ ಕುಂತೀ-ಭೋಜರಾಯನಿಗೆ ಸಾಕಲಕ್ಕೆ ಕೊಟ್ಟ. ಅದೇನು ಕಾರಣವೆಂದರೆ, ಕುಂತೀಭೋಜ-ರಾಯಗೆ ಮಕ್ಕಳಿದ್ದಿಲ್ಲ. ತನ್ನ ಗೆಳೇನಾದ ಶೂರರಾಯಗೆ ಬೇಡಿಕೊಂಡಿದ್ದ. ಚೊಚ್ಚಲು ಗಂಡುಮಗನಾಗಲೀ, ಹೆಣ್ಣುಮಗಳಾಗಲೀ ಸಾಕಲಿಕ್ಕೆ ಕೊಡು ಎಂದು ಕೇಳಿದ್ದ. ಆದ್ದರಿಂದ ಶೂರರಾಯ ಚೊಚ್ಚಲು ಮಗಳಾದಂಥ ಪೃಥಾದೇವಿಯ, ತನ್ನ ಗೆಳಿಯ ಕುಂತೀಭೋಜರಾಯಗೆ ಸಾಕಲಿಕ್ಕೆ ಕೊಟ್ಟನು. ಕುಂತೀಭೋಜರಾಯ

ಸಾಕಿದ್ದರಿಂದ ಕುಂತೀ ಎಂಬ ನಾಮ ಬಂತು. ಅಕಿ ಪೂರ್ವದಲ್ಲಿ ದಾರು ಎಂದರೆ, ಪರಾವಹನೆಂಬ ಮರುತನ ಹೆಂಡತಿ. ತನ್ನ ನಿಜಪತಿಯಾದಂಥ ಪಾಂಡು-ಚಕ್ರವರ್ತಿನ್ನ ಮದುವಿ ಆಗ್ಯಾಳೆ. ಕುಂತೀಭೋಜರಾಯ ಪೂರ್ವದಲ್ಲಿ ದಾರು ಎಂದರೆ ಕೂರ್ಮನೆಂಬೋ ಮರುತ. ಕುಂತೀಗೆ ಛಲೋ ಗಂಡನಾಗಬೇಕಾಗಿ ದೂರ್ವಾಸನ ಸೇವಿಗೆ ಇಟ್ಟ. ದೂರ್ವಾಸ ಎಲ್ಲಿದ್ದ ಎಂದರೆ, ಹೇಳಥಾರೆ. ದೂರ್ವಾಸ ಮಹಾರುದ್ರನ ಅವತಾರ, ಮಹಾ ಕೋಪಿಷ್ಟಸನ್ಯಾಸಿ. ಇಂಥಾ ದುಷ್ಟಸನ್ಯಾಸಿಗೆ ಚಾತುರ್ವರ್ಣ್ಯ ದಾರು ಕೂಡ್ರಿಸಿಕೊಳ್ಳಥಾರೆ! ದಾರೂ ಕೂಡ್ರಿಸಿಕೊಳ್ಳರು. ಆದಕಾರಣ ದೂರ್ವಾಸ ಕುಂತೀಭೋಜನ ಸಮೀಪಕ್ಕೆ ಹೋಗಿ ಮಾತನಾಡಿದ. 'ನಿನ್ನ ಮನಿಯೊಳಗೆ ನನ್ನ ಇಟ್ಟುಕೊ' ಎನಲು, ಕುಂತೀಭೋಜರಾಯ ಮಾತ ನಾಡಥಾನೆ. 'ಎಲೈ ದೂರ್ವಾಸಮುನಿಯೇ ನಿನ್ನ ಸೇವಿ ನಿಮಿತ್ತ ನನ್ನ ಮಗಳನ್ನು ಕೊಟ್ಟೀನು. ಚಿಕ್ಕಾಕಿ, ತನ್ನ ಕೈಲಾದಮಟ್ಟಿಗೆ ಸೇವಿ ಮಾಡ್ಯಾಳು. ಎತಲಾಸಿಕೆ, ಅಪರಾಧ ಬಂದ ಕಾಲಕ್ಕೂ ಕ್ಷಮಿಸಬೇಕು, ಕೋಪಕ್ಕೆ ಬರಬಾರದು. ಹಾಂಗಾದ ಪಕ್ಷವೇ ಸುಖದಿಂದ ನನ್ನ ಮನೀ ಒಳಗೆ ವಾಸಮಾಡು' ಎಂದನು. ರಾಯನ ಮಾತು ಕೇಳಿ ದೂರ್ವಾಸ 'ಹಾಂಗೆ ಆಗಲಿ' ಎಂದನು. ಕುಂತೀಭೋಜ ತನ್ನ ಮಗಳಿಗೆ ಹೇಳಿದ. 'ದೂರ್ವಾಸ ಮಹಾ ದುಷ್ಟಸನ್ಯಾಸಿ ಇದ್ದಾನೆ. ಸೇವಿಯೊಳಗೆ ಅಂತರ ವಾದರೆ ಕೋಪಕ್ಕೆ ಬಂದಾನು. ಸನ್ಯಾಸಿ ಕೋಪಕ್ಕೆ ಬಾರದಹಾಂಗ ಚಿತ್ತಾನುಸಾರ ಸೇವಿ ಮಾಡು. ಒಳ್ಳೀ ಸುಂದರ ಗಂಡ ಬಂದಾನು. ತ್ರಿಕರಣಪೂರ್ವಕ, ಸನ್ಯಾಸೀ ಮನಸ್ಸಿಗೆ ಬಾಹೋಹಾಂಗೆ ಮಾಡು. ಮನಸ್ಸು ವಿಕಾರ ಮಾಡದೆ ಸೇವಿ ಮಾಡು.' ಹೀಂಗಂತ ಬಹುಪ್ರಕಾರ ಮಗಳಿಗೆ ಬುದ್ಧಿ ಹೇಳಿ, ಶೀಘ್ರದಿಂದ ಕುಂತಿಯನ್ನು ದೂರ್ವಾಸನ ಸೇವಿ ಮಾಡಲಿಕ್ಕೆ ಕಳುಹಿದನು.

ಕುಂತೀದೇವಿ ತಂದೀ ಮಾತು ಕೇಳಿ, ಬಹಳ ಸಂತೋಷವುಳ್ಳಾಕಿಯಾಗಿ, ಕೋಪಾವಿಷ್ಟನಾದಂಥ ಮುನೀಶ್ವರನ ಸೇವಿ ಮಾಡಿದಳು. ದಾವ ಪ್ರಕಾರ ಸೇವಿ ಮಾಡಿದಳು ಎಂದಲ್ಲಿ, ತಾ ಮಾಡಿದ ಸೇವಿ ಮತ್ತೊಬ್ಬರಿಂದ ಮಾಡಲಿಕ್ಕೆ ಶಕ್ಯವಲ್ಲ, ಕಾಯಾ ವಾಚಾ ಮನಸಾ ಹೀಂಗೆ ತ್ರಿಕರಣಶುದ್ಧವಾಗಿ, ಅತಿ ತ್ವರದಿಂದ ದೂರ್ವಾಸ ಋಷಿಯ ಮನೋವಾಕ್ಕಾಯಕರ್ಮಗಳ ಅನುಸರಿಸಿ, ಏಕಪ್ರಕಾರ ಹದಿಮೂರು ವರ್ಷ ಸೇವಿ ಮಾಡಿದಳು. ದೂರ್ವಾಸನ ವರಬಲದಿಂದ ಏನು ಪೂಜಾಸಾಮಗ್ರಿಗಳು ಸಾಧನದ್ರವ್ಯಗಳು ಬೇಕೋ, ಅವಷ್ಟೂ ಕುಂತಿಗೆ ಒದಗಿಬಾಹೋವು. ಸನ್ಯಾಸಿ ಬೇಡಿದ್ದು, ಸಕಲ ಸಾಮಗ್ರಿ ಒದಗಿಸಿಕೊಂಡು ಸೇವಿಗೆ ಸನ್ನದ್ಧಳಾಗಿಹೋಳು. ದೂರ್ವಾಸನ್ನ ಸಾಕ್ಷಾತ್ ಪರದೇವತಿ ಶ್ರೀರಾಮ ಗೆದ್ದಾನೆ. ದೂರ್ವಾಸನ ವರಬಲ ದಿಂದ ದೂರ್ವಾಸನ್ನ ಕುಂತೀ ಗೆದ್ದಾಳೆ. ಆ ಮುನೀಶ್ವರ ಹದಿಮೂರು ವರುಷ ಪರಿಯಂತ, ಕುಂತೀಭೋಜನ ಮನಿ ಬಿಟ್ಟುಹೋಗದೆ ವಾಸಮಾಡಿಕೊಂಡಿದ್ದನು.

ದ್ಯಾವ ಸಮಯದಲ್ಲಿ ದಾವದು ಬೇಡುವ, ಸಕಲವೂ ಒದಗಿಬಾಹೋದು. ಈ ರೀತಿಯಿಂದ ಹದಿವ್ಮೂರು ವರುಷವು, ಕುಂತೀದೇವಿಯಿಂದ ವಿಧ್ಯುಕ್ತಪ್ರಕಾರ ಚೆನ್ನಾಗಿ ಪೂಜಿ ಮಾಡಿಸಿಕೊಂಡು, ಬಹಳ ಸಂತುಷ್ಟನಾಗಿ, ಸಮುಸ್ತ ದೇವತಿಗಳನ್ನೂ ವಶೀಕರಿಸಿಕೊಂಬುವಂಥ ಒಂದು ಉತ್ತಮ ಮುಂತ್ರೋಪದೇಶ ಕುಂತಿಗೆ ಮಾಡಿದನು. 'ಈ ಮುಂತ್ರ ಜಪಿಸಿ ದಾವ ದೇವತಿಯನ್ನು ಕರೀತೀಯೋ ಆ ದೇವತಿ, ನಿನ್ನ ಕುರಿತು ಒಂದು ಮನೋಭೀಷ್ಟ ಸಿದ್ಧಿಗೈದಾನು' ಎಂದು ಹೀಂಗಂತ ಹೇಳಿ, ದೂರ್ವಾಸ ತನ್ನ ಆಶ್ರಮ ಕುರಿತು ಹೋದನು.

ಕುಂತೀದೇವಿ ಒಂದು ಪ್ರಾತಃಕಾಲದಲ್ಲಿ ಋತುಸ್ನಾನ ಮಾಡಿ ನೋಡಥಾಳೆ. ಸೂರ್ಯನ್ನ ಕಂಡಳು. ಮುಂತ್ರಪರೀಕ್ಷಾರ್ಥ, ಪ್ರಾರ್ಥನಪೂರ್ವಕ ದಿವಾಕರನ್ನ ಕರೆದಳು. ಮುಂತ್ರಸಾಮರ್ಥಿಯಿಂದ ಲಕ್ಷ ಯೋಜನ ವ್ಯವಧಾನದಲ್ಲಿದ್ದರೂ, ತತ್ಕ್ಷಣದಲ್ಲೀ ಪ್ರತ್ಯಕ್ಷನಾದನು. 'ಎಲೌ ಶೋಭನಕರಳಾದಂಥ ಸ್ತ್ರೀಯೇ, ನನ್ನ ಏನುಕಾರಣ ಕರದಿ, ಏನು ಬಯಕಿ ಕೊಡಲಿ?' ಎಂದು ಕೇಳಲಾಗಿ, ತಿರುಗಿ ಹೋಗೆಂದಳು. 'ನಾನು ನಿನ್ನ ಸಂಗಡ ಭೋಗ ಮಾಡದೆ ಹೋಗುವುದಿಲ್ಲ' ಎಂದು ಬಹಳ ದುರಾಗ್ರಹದಿಂದ ಹೇಳಲಿಕ್ಕೆ, ಅದಕ್ಕೆ ಕುಂತೀದೇವಿ ಬಹುಪ್ರಕಾರ ಸುವಾಕ್ಯಪ್ರಯತ್ನದಿಂದ 'ನಿನ್ನ ಸಂಗಡ ರವಿಸಲೊಲ್ಲೆ' ಎಂದು ನಾನಾ ಪ್ರಕಾರ ಬೇಡಿಕೊಂಡಳ.. ಬೇಡಿಕೊಂಡಂಥ ಕಾಲಕ್ಕೂ, ಭೋಗ ಬಿಡಿಸಿಕೊಳ್ಳಲು ಶಕ್ತಳಾಗಲಿಲ್ಲ. ಅದು ಕಂಡು ಸೂರ್ಯನ ಕೂಡ ಮಾತನಾಡಿದಳು. 'ನೀ ದಾರು? ದುರಾಗ್ರಹ ಮಾಡತಿದ್ದಿ. ನನ್ನ ಯೌವನ ಕೆಟ್ಟುಹೋಗತದೆ. ಮುಂದೆ ಗಂಡ ಬಾರದೆ ಹೋದಾನು' ಎಂದು ಈ ಪ್ರಕಾರ ಮಾತನಾಡಲಾಗಿ 'ನಿನ್ನ ಕನ್ಯಾವಸ್ಥಿ ಕೆಡಿಸೋಹಾಂಗಿಲ್ಲ' ಎಂದು ಕುಂತಿಯ ಸಂಗಡ ಮಾತನಾಡಿ ಭೋಗಮಾಡಿದನು. ಸಮರ್ಥನಾದಂಥ ಸೂರ್ಯನೇವೆ ಕುಂತಿದೇವಿಯಲ್ಲಿ, ಎರಡನೇ ರೂಪದಿಂದ ದಿವ್ಯ-ಕವಚದಿಂದಲೂ, ನವರತ್ನಖಚಿತ ಕರ್ಣಕುಂಡಲಗಳಿಂದಲೂ ಯುಕ್ತನಾಗಿ, ಅಗ್ನಿಯೋಪಾದಿ ತನ್ನ ತೇಜಸ್ಸಿನಿಂದ ದಿಕ್ಕುಗಳನ್ನೆಲ್ಲ ಪ್ರಕಾಶಿಸತ, ತಕ್ಷಣದಲ್ಲೆ ಹುಟ್ಟಿದನು. ಆ ರೂಪದಲ್ಲಿ ಅಸುರಾವೇಶ ಇದ್ದ ಕಾರಣ ಹೇಳಥಾರೆ.

ಸೂರ್ಯನು ಪೂರ್ವದಲ್ಲಿ, ರಾಮಾವತಾರದಲ್ಲಿ ಸುಗ್ರೀವರೂಪದಿಂದ ಅಣ್ಣನ ಕೊಲ್ಲಿಸಿದ್ದಾನೆ. ಆ ಶ್ರೇಷ್ಠ ಅಪರಾಧದಿಂದ ಸಹಸ್ರವರ್ಮನೆಂಬೊ ಅಸುರನ ಆವೇಶದಿಂದ ಯುಕ್ತನಾಗಿ ಹುಟ್ಟಿದನು. ಅಸುರಾವೇಶದ ಅಭಿಪ್ರಾಯ ಹೇಳಥಾರೆ. ಮನುಷ್ಯರಿಗೆ ಗ್ರಹ ಸೋಕಿದರೆ ಬುದ್ಧಿ ಹ್ಯಾಂಗೆ ಭ್ರಮಿಸತದೆ, ಹಾಂಗೆ ಈ ಕುಮಾರನ ಬುದ್ಧಿ ಈ ದೈತ್ಯಾವೇಶದಿಂದ ಭ್ರಮಿತವಾಗಿಹೋದು. ಆದಕಾರಣದಿಂದ ಪಾಂಡವರ ದ್ರೋಹ ಮಾಡ್ಯಾನೆ. ಸುಗ್ರೀವರೂಪದಲ್ಲಿ ಶ್ರೀರಾಮನ ಸೇವಿ ಬಹಳ ಮಾಡಿದ್ದರಿಂದ, ನಾರಾಯಣನ ಸನ್ನಿಧಾನದಿಂದ ಯುಕ್ತನಾಗಿ ಹುಟ್ಟಿದನು.

ಸುಂದರವಾದ ಕರ್ಣಗಳು ಇದ್ದ ಪ್ರಯುಕ್ತ, ಕರ್ಣನೆಂಬೋ ನಾಮವಾಯ್ತು. ಕನ್ಯಾವಸ್ಥೆ ಕೆಡಧಾಂಗೆ ಸೂರ್ಯನ ವರವು ಇತ್ತು. ಈಗ ಹುಟ್ಟಿದ ಕೂಸಿನ್ನ ಎಲ್ಲಿ ಬಿಟ್ಟುಬಿಡಬೇಕೆಂದು ಯೋಚನಿ ಮಾಡಿ, ದಾಸೀ ಕೈಯ ರತ್ನದ್ರವ್ಯಗಳ ತರಿಸಿ, ಸುವರ್ಣರತ್ನಮಯವಾದ ಪೆಟ್ಟಿಗಿಯೊಳಗೆ ರತ್ನಗಳ ಹಾಕಿ, ಬಾಲಕನ್ನ ಮಧ್ಯ ದೊಳಗಿಟ್ಟು, ಸೂರ್ಯನ ಮಗಳಾದಂಥ ಯಮುನಾದೇವಿಯ ಜಲದಲ್ಲಿ, ತೀರ. ಗೊಂಡು ಶೀಘ್ರದಿಂದ ಹರೇಬಿಟ್ಟಳು. ಏಕೆ ಬಿಟ್ಟಳೆಂದಲ್ಲಿ ಜನಾಪವಾದ ಭಯದ್ದೆಸಿ ಯಿಂದ ನದಿಯೊಳಗೆ ಹರೇಬಿಟ್ಟಳು. ಯಮುನಾದೇವಿಯಲ್ಲಿ ಹರಿದುಬಾಹೋಂಥ ಪೆಟ್ಟಿಗಿಯನ್ನು, ಕೆಳಭಾಗದಲ್ಲಿ ಸೂತನ ಮಗನಾದಂಥ ಅಧಿರಥ ಕಂಡನು. ಪೆಟ್ಟಿಗಿ ತೆಗೆದು ನೋಡಥಾನೆ, ರತ್ನಗಳಿಂದ ಯುಕ್ತವಾದಂಥ ಕುಮಾರನ ಕಂಡನು! ತನಗೆ ಮಕ್ಕಳಿಲ್ಲದಕಾರಣ ಪುತ್ರತ್ವೇನ ಸ್ವೀಕಾರ ಮಾಡಿದನು. ಅಧಿರಥನೆಂಬ ಸೂತನಿಂದ ಲಾಲಿಸಿಕೊಳ್ಳಲ್ಪಟ್ಟಂಥ ಶರೀರ ಉಳ್ಳವನಾಗಿ, ಆತನ ಹೆಂಡತಿ ರಾಧೆಯಿಂದ ಸಂರಕ್ಷಿತನಾಗಿ ಜಿನ್ನಾಗಿ ಬೆಳೆದನು. ಕರ್ಣ ಅಪರೋಕ್ಷಜ್ಞಾನಿಯಾದ ಪ್ರಯುಕ್ತ, ಸಮಸ್ತ ವೇದಶಾಸ್ತ್ರಗಳ ಓದಿಕೊಂಡನು. ಬಾಲತ್ವಾರಭ್ಯ ಬಲೌದಾರ್ಯ ಗುಣಗಳಿಂದ ಜಿನ್ನಾಗಿ ಸೂತನ ಮನಿಯೊಳಗ ವಾಸಮಾಡಿದನು. ಕರ್ಣಗೆ 'ವಸುಷೇಣ'ನೆಂಬೋ ನಾಮ ಪ್ರಾಪ್ತವಾಯಿತು. ಅದಕ್ಕೆ ನಿಮಿತ್ತ ಹೇಳಥಾರೆ. ದ್ರವ್ಯಸಹವಾಗಿ ಸಿಕ್ಕಿದ್ದನೆಂದು, ಸಾಕಿದವರು ವಸುಷೇಣನೆಂದು ನಾಮಕರಣ ಮಾಡಿದರು. ವಸು ಎಂದರೆ ದ್ರವ್ಯ, ಆ ದ್ರವ್ಯದಲ್ಲಿ ವಾಸ ಮಾಡಿದ್ದರಿಂದ ವಸುಷೇಣನೆಂದು ನಾಮಕರಣವಾಯಿತು. ಕನ್ಯಾವಸ್ಥೆಯಲ್ಲಿ ಕುಂತಿಗೆ ಕರ್ಣನುತ್ಪತ್ತಿ ಆದಪ್ರಕಾರ ಹೇಳಿದರು. ತರುವಾಯ ಕುಂತೀಭೋಜನ ದೆಸೆಯಿಂದ ಕೊಡಲ್ಪಟ್ಟಂಥ ಕುಂತಿಯನ್ನು ಭೀಷ್ಮ, ಪಾಂಡುಚಕ್ರವರ್ತಿಗೆ ಮದುವಿ ಮಾಡಿದನು. ಇನ್ನು ವಿದುರಗೆ ಮದುವಿ ಆದಪ್ರಕಾರ ಹೇಳಥಾರೆ. ವಸುದೇವನ ತಂದಿಯಾದ ಶೂರ-ರಾಯನ ದೆಸೆಯಿಂದ ಮದುವಿ ಮಾಡಿಕೊಂಡ ಶೂದ್ರಸ್ತ್ರೀಯಲ್ಲಿ ಹುಟ್ಟಿದಂಥ ಆರುಣೇಸಾವುಕಳನ್ನು ತಂದು ವಿದುರಗೆ ಭೀಷ್ಮನು ಮದುವಿ ಮಾಡಿದನು.

ಪಾಂಡುಚಕ್ರವರ್ತಿಗೆ ಶೀಘ್ರ ಪುತ್ರೋತ್ಪತ್ತಿ ಆಗಬೇಕೆಂದು, ಭೀಷ್ಮ ಎರಡನೇ ವಿವಾಹ ಮಾಡಿದ ಪ್ರಕಾರ ಹೇಳಥಾರೆ. ಮದ್ರದೇಶಾಧಿಪತಿಯಾದಂಥ ಶುತಾಯನನು, ತನಗೆ ದೇವೇಂದ್ರಸದೃಶ ಮಗನಾಗಬೇಕು, ಹಾಂಗೆ ಒಂದು ಕನ್ಯಾರತ್ನ ಹುಟ್ಟಬೇಕು ಎಂದು, ಬ್ರಹ್ಮದೇವರ ಕುರಿತು ತಪಸ್ಸು ಮಾಡಿದನು. ಬ್ರಹ್ಮದೇವರ ದೆಸೆಯಿಂದ ಅದೇ ಪ್ರಕಾರ ವರವನ್ನು ಐದಿದನು. ವರಕ್ಕೆ ಫಲ ಹೇಳಥಾರೆ. ಪೂರ್ವದಲ್ಲಿ ಪ್ರಹ್ಲಾದನ ತಮ್ಮನಾದಂಥ ಸಹ್ಲಾದ, ನಾರಾಯಣನ ಭಕ್ತ. ಬ್ರಹ್ಮದೇವರು ವರ ಕೊಟ್ಟ ತರುವಾಯ, ಮುಖ್ಯವಾಯುದೇವರ ಆವೇಶ ದಿಂದ, ಶುತಾಯನರಾಯಗೆ ಮಗನಾಗಿ ಹುಟ್ಟಿದನು. ವಾಯುದೇವರ ಆವೇಶಕ್ಕೆ

ಫಲ ಹೇಳಥಾರೆ. ವಾಯುದೇವರ ಆವೇಶದಿಂದ ಭೂಮಿಯಲ್ಲಿ ಬಹಳ ಬಲಾಧಿಕ ನಾದನು, ಹಾಂಗೆ ಬ್ರಹ್ಮದೇವರ ದೆಸಿಯಿಂದಲೂ ಬಲಾಧಿಕನಾದನು. ಆತಗೆ ಶಲ್ಯನೆಂಬೋ ನಾಮಕರಣವಾಯ್ತು. ಆಲ್ಲಿ ನಿಮಿತ್ತ ಹೇಳಥಾರೆ. ಸಮಸ್ತರಾದ ಶತ್ರುಗಳಿಗೆ ಅಲಗಾಗಿಹ, ಆದಕಾರಣ ಶಲ್ಯನೆಂಬೋ ನಾಮ ಪ್ರಾಪ್ತವಾಯಿತು. ಋತಾಯನರಾಯಗೆ ಮಾದ್ರಿ ಎಂಬ ನಾಮವುಳ್ಳಾಕಿಯಾಗಿ ಒಬ್ಬ ಹೆಣ್ಣುಮಗಳು ಹುಟ್ಟಿದಳು. ಆಕಿ ಪೂರ್ವದಲ್ಲಿ ದಾರು ಎಂದರೆ, ಮರುತನಾದಂಥ (ಪರಾವಹ) ಪಾಂಡುಚಕ್ರವರ್ತಿಗೆ ಎರಡನೇ ಹೆಂಡತಿಯಾಗಿದ್ದಳು. ಈ ಜನ್ಮದಲ್ಲಿಯೂ ಋತಾಯನರಾಯನಿಂದ, ಪಾಂಡುಚಕ್ರವರ್ತಿಗೆ ಕೊಡಿಸಿಕೊಳ್ಳಲ್ಪಟ್ಟಳು. ಪಾಂಡು ಚಕ್ರವರ್ತಿಗೆ ಭೀಷ್ಮನು ಮದುವಿ ಮಾಡಿದನು. ಸಮಸ್ತ ಶಾಸ್ತ್ರಗಳಿಂದಲೂ ಸರ್ವಜ್ಞನೆನಿಸಿಕೊಂಡು ಪಾಂಡುಚಕ್ರವರ್ತಿ, ಕುಂತೀ ಮಾದ್ರೀದೇವಿ ಸಂಗಡ, ಅಶೇಷ ವಿಷಯಭೋಗಗಳನ್ನು ಅನುಭೋಗಿಸುತ್ತಿದ್ದನು. ಅನೇಕ ಧರ್ಮಗಳಿಗೆ ಚೆನ್ನಾಗಿ ಆಶ್ರಯನಾಗಿಹ. ಆದಕಾರಣ ಅಣ್ಣನಾದ ಧೃತರಾಷ್ಟ್ರರಾಯನ ಅನುಸರಿಸಿ, ಬಹಳ ಭಕ್ತಿಯುಳ್ಳವನಾಗಿ ರಾಜ್ಯಪಾರುಪತ್ಯ ಮಾಡಿ, ಅಣ್ಣಗೆ ವರ್ತಮಾನ ಹೇಳುವ. ವಿದುರಗೆ ಉದಾಸೀನ ಮಾಡತಿದ್ದಿಲ್ಲ. ದಾವ ಪ್ರಕಾರ ವಿದುರ ನೀತಿ-ಮಾರ್ಗ ಹೇಳುವ, ಅದೇ ಪ್ರಕಾರ ರಾಜ್ಯಪರಿಪಾಲನಿ ಮಾಡುವನು.

ಹಾಂಗಾದರೆ, ಹಿರೇನಾದ ಧೃತರಾಷ್ಟ್ರರಾಯ ಇರಲಿಕ್ಕೆ ಪಾಂಡುಚಕ್ರವರ್ತಿ ಹ್ಯಾಂಗೆ ರಾಜ್ಯಪರಿಪಾಲನಿ ಮಾಡಿದನು ಎಂದಲ್ಲಿ, ಮೊದಲಿಗೆ ರಾಜ್ಯಪರಿಪಾಲನಿ ಮಾಡೋಲ್ಲಿ ಧೃತರಾಷ್ಟ್ರಗೆ ಅಭಿಷೇಕ ಮಾಡಿ, ಯುವರಾಜ್ಯದಲ್ಲಿ ಪಾಂಡು-ಚಕ್ರವರ್ತಿಗೆ ಅಭಿಷೇಕ ಮಾಡಿದನು. ಹಾಂಗಾದರೂ ಸರಿಯೇ, ಧೃತರಾಷ್ಟ್ರರಾಯ 'ನಾನು ಕುರುಡ, ಅರಸತ್ವ ನನಗೆ ಶೋಭಿಸದು' ಎಂದು ಪಾಂಡುಚಕ್ರವರ್ತಿಗೆ ರಾಜ್ಯ ಕೊಟ್ಟನು. ಆದಕಾರಣದಿಂದ ಪಾಂಡುಚಕ್ರವರ್ತಿ ಅರಸತ್ವ ಮಾಡಿದನೆಂದು ಹೇಳಿದರು. ಧೃತರಾಷ್ಟ್ರರಾಯನ, ಭೀಷ್ಮರ ವಚನದಲ್ಲೇವೆ ಪಾಂಡುಚಕ್ರವರ್ತಿ ತಾತ್ಪರ್ಯ ಉಳ್ಳವನಾಗಿಹ. ತನಗೆ ಸಮಾನಸ್ಕಂದ ರಾಯರು' ದಾರೂ ಇದ್ದಿಲ್ಲ. ಆದ್ದರಿಂದ ತಾನೇ ವೀರನಾಗಿ ರಾಜ್ಯಪಾಲನಿ ಮಾಡಿದನು. ತರುವಾಯ ಧೃತ-ರಾಷ್ಟ್ರರಾಯ ಪಾಂಡುಚಕ್ರವರ್ತಿ ಸಹಿತನಾಗಿ ಬಹಳ ಯಜ್ಞಗಳ ಮಾಡಿದನು. ದ್ರವ್ಯದಿಂದ ಚೆನ್ನಾಗಿ ದೇವತಾರಾಧನಿ ಮಾಡಿದನು. ಉಭಯತರೂ ಪ್ರತ್ಯೇಕ ಪ್ರತ್ಯೇಕ ಯಜ್ಞಗಳ ಮಾಡಿದರು. ಆನಂತರದಲ್ಲಿ ನಿತ್ಯಪರಿಪೂರ್ಣನಾದಂಥ ವೇದವ್ಯಾಸದೇವರು ಬದರಿಕಾಶ್ರಮದಿಂದ ಬಂದು, 'ಎಲೌ ಅಮ್ಮಾ ಸತ್ಯವತೀ ನಿನ್ನ ಗಂಡ ಶಂತನುಚಕ್ರವರ್ತಿ ಸತ್ತುಹೋದ. ನಿನ್ನ ಮಕ್ಕಳು ಚಿತ್ರಾಂಗದ ವಿಚಿತ್ರ-ವೀರ್ಯ ಈ ಉಭಯತರು ದೇಹಬಿಟ್ಟರು. ಇದರಿಂದ ನಿನಗೆ ಬಹಳ ದುಃಖ-ವಾಯಿತು. ಮುಂದೆ ಒಳ್ಳೇಕಾಲವಿಲ್ಲ. ಇನ್ನು ಇರಬ್ಯಾಡ' ಎಂದು ಹೇಳಿ

ಬದರಿಕಾಶ್ರಮಕ್ಕೆ ಕರೆದುಕೊಂಡು ಹೋದನು. ಕಾರಣವೇನೆಂದರೆ, ಮುಂದೆ ಪಾಂಡುಚಕ್ರವರ್ತಿ ಸಾಯಥಾನೆ. ಕುರು ಪಾಂಡವರಿಗೆ ದ್ವೇಷ ಪ್ರಾಪ್ತವಾಗತದೆ. ಭವಿಷ್ಯದುಃಖ ಕಾಣಬಾರದೆಂದು, ಬದರಿಕಾಶ್ರಮಕ್ಕೆ ಕರಕೊಂಡುಹೋದನು. ಅಂಬಿಕಾ ಅಂಬಾಲಿಕಾ ಇಬ್ಬರೂ 'ನಮ್ಮ ಅತ್ತಿ ಹೋಗಥಾಳೆ. ನಾವು ಅತ್ತೀ ಸೇವ ಮಾಡಿಕೊಂಡು ಇದ್ದೇವು. ಭವಿಷ್ಯದುಃಖ ದಾರು ನೋಡ್ಯಾರು ಎಂದು, ಅತ್ತೀ ಸಂಗಡ ಬದರಿಕಾಶ್ರಮಕ್ಕೆ ಹೋದರು. ತದನಂತರ ವೇದವ್ಯಾಸದೇವರು 'ನಾನು ನಿನ್ನ ಮಗನೆಂದು ತಿಳಿಯಬ್ಯಾಡ. ಸರ್ವೋತ್ತಮದೇವತಿ ಎಂದು ತಿಳಿದು ನನ್ನಲ್ಲಿ ಭಕ್ತಿ ಮಾಡು' ಎಂದು ಹೇಳಿ, ತತ್ತ್ವೋಪದೇಶ ಮಾಡಿದನು. ತದನಂತರ ಸತ್ಯವತೀ, ಮಗ ಹೇಳಿದ ಉಪದೇಶಮಾರ್ಗದಿಂದ, ವ್ಯಾಸಾತ್ಮಕವಾದ ಪರಬ್ರಹ್ಮ-ಮೂರ್ತಿ ಧ್ಯಾನ ಮಾಡಿ, ವಿಷ್ಣುಸಂಬಂಧಿಯಾದ ಉತ್ತಮಲೋಕವನ್ನು, ವೇದ-ವ್ಯಾಸನ ಪ್ರಸಾದದಿಂದ ಐದಿದಳು. ಹಾಂಗೇ ಅಂಬಿಕಾ ಅಂಬಾಲಿಕಾ ಇಬ್ಬರೂ ವ್ಯಾಸಪ್ರಸಾದದಿಂದ ಸ್ವರ್ಗವನ್ನು ಐದಿದರು. ವಿದುರನ ತಾಯಿ ಅಂಬಿಕೆಯ ಸಂಗಡ ಬದರಿಕಾಶ್ರಮಕ್ಕೆ ಹೋಗಿದ್ದಳು. ಆಕಿ ಸತ್ಯಲೋಕವನ್ನು ಐದಿದಳು. ಪತಿವ್ರತಾ-ಧರ್ಮದಿಂದ ರತಳಾದ್ದರಿಂದ, ವೇದವ್ಯಾಸರ ಸಂಗಡ ಚೆನ್ನಾಗಿ ಭೋಗಿಸಿದಕಾರಣ, ಹಾಂಗೆ ಸದ್ಗುಣವುಳ್ಳ ಮಗ ವಿದುರನ ಹಡದ ನಿಮಿತ್ತ, ಕಾಲಾಂತರದಿಂದ ಮುಕ್ತಿಯನ್ನು ಐದಾಳು. ಇದೇ ಪ್ರಕಾರ ಅಂಬಿಕಾ ಅಂಬಾಲಿಕಾ ಇವರು, ಕ್ರಮದಿಂದ ಮಾಡಲ್ಪಟ್ಟ ಯೋಗಧ್ಯಾನದಿಂದ ತಮ್ಮ ಯೋಗ್ಯತಾನುಸಾರ ಮುಕ್ತಿಯನ್ನು ಐದ್ಯಾರು. ಅಂಬಾಲಿಕಾ ಮುಕ್ತಿ ಐದಿದಂತೆ ಅಂಬಿಕಾ ಮುಕ್ತಿ ಐದಲಿಲ್ಲ. ಏನುಕಾರಣವೆಂದಲ್ಲಿ ಅಂಬಾಲಿಕೆಗಿಂತ ಗುಣದಲ್ಲಿ ನೀಚಳು. ಆದ್ದರಿಂದ ಮುಕ್ತಿಗೆ ಹೋಗಲಿಲ್ಲ. ಸತ್ಯವತ್ಯಾದಿಗಳಿಗೇನುಕಾರಣ ವಿಚಿತ್ರಗತಿ ಹೇಳ-ಬೇಕೆಂದಲ್ಲಿ, ಜೀವರುಗಳು ಹ್ಯಾಂಗೆಹ್ಯಾಂಗೆ ತಮ್ಮತಮ್ಮ ಯೋಗ್ಯತಾನುಸಾರದಿಂದ, ನಾರಾಯಣನ ಭಕ್ತ್ಯಾತಿಶಯ ಗುಣಗಳುಳ್ಳವರಾಗಥಾರೆ ಹಾಂಗೆಹಾಂಗೆ ತಮ್ಮತಮ್ಮ ಯೋಗ್ಯತಾನುಸಾರ, ಜೀವರುಗಳು ಪರಲೋಕವನ್ನು ಐದಥಾರೆ. ಆದಕಾರಣ ಸತ್ಯವತ್ಯಾದಿಗಳಿಗೆ ವಿಚಿತ್ರಗತಿ ಯುಕ್ತವಾಯಿತು ಎಂದು ಹೇಳಿಧಾಂಗಾಯಿತು.

ಪಾಂಡುಚಕ್ರವರ್ತಿ ಬಹುಕಾಲ ರಾಜ್ಯವಾಳಿ, ಸಾಮ್ರಾಜ್ಯದಲ್ಲಿ ಮನಸ್ಸು ಬಾರದೆಹೋಗಿ, ರಾಜ್ಯಸಾರುಪತ್ಯ ತನ್ನ ತಮ್ಮನಾದಂಥ ವಿದುರಗೆ ಹೇಳಿ, ರಾಜ್ಯಭಾರ ಉಭಯರಲ್ಲಿಟ್ಟು, ತಾನು ತಪೋವನಕ್ಕೆ ಹೋದನು. ಕುಂತೀದೇವಿ ಮಾದ್ರೀದೇವಿ ಸಹಿತ, ನಾರಾಯಣನಿಂದ ಪರಿಪಾಲಿತವಾದಂಥ, ಬದರೀನಾರಾ-ಯಣಾಶ್ರಮದಲ್ಲಿ ವಾಸ ಮಾಡಿದನು. ಈ ವನಕ್ಕೆ ಬಂದ ಪ್ರಕಾರ ವರ್ಣಿಸಥಾರೆ. ನಾರಾಯಣಾಶ್ರಮದಲ್ಲಿ ಗೃಹಸ್ಥಾಶ್ರಮದಿಂದ ವಾಸ ಮಾಡಿದನಲ್ಲದೆ ವಾನಪ್ರಸ್ಥಾ-ಶ್ರಮದಿಂದ ವಾಸ ಮಾಡಲಿಲ್ಲ. ಆದ್ದರಿಂದ ವಿಷಯಭೋಗಗಳ ಭೋಗಿಸತ,

ಹಾಂಗೇ ತಪಸ್ಸು ಮಾಡಿದನು. ತಪಸ್ಸಿನ ಪ್ರಕಾರ, ಮುನಿಶ್ರೇಷ್ಠರಿಂದ ಸಹಿತನಾಗಿ ಜಗತ್ಪತಿಯಾದಂಥ ಲಕ್ಷ್ಮೀಪತಿಯನ್ನು, ಚೆನ್ನಾಗಿ ಭಕ್ತಿಯಿಂದ ಯುಕ್ತನಾಗಿ, ಪೂಜಿ ಮಾಡಿಕೊಳ್ಳುತ, ಹಾಂಗೆ ತಪಸ್ಸು ಮಾಡಿದನು. ಹೀಂಗೆ ಇರಲಿಕ್ಕೆ, ಒಂದು ದಿವಸ ಪಾಂಡುಚಕ್ರವರ್ತಿ ಧನುರ್ಬಾಣಗಳ ಹಿಡಕೊಂಡು ವನದೊಳಗೆ ತಿರಗಥಾನೆ. ಅಲ್ಲಿ ಕಿಂದಮುಖುಷಿ, ಋಷಿರೂಪದಿಂದ ಭೋಗಮಾಡಿದರೆ ಋಷಿಗಳೆಲ್ಲ ನಕ್ಕಾರೆಂದು ಯದೃಚ್ಛಾದಿಂದ ಎರಳೀರೂಪ ಧರಿಸಿ, ಚಿಗರಿರೂಪಳಾದಂಥ ತನ್ನ ಹೆಂಡತೀಕೂಡ ಭೋಗದಲ್ಲಿ ಆಸಕ್ತನಾಗಿರಲಿಕ್ಕೆ, ಮೃಗವೆಂದು ಪಾಂಡುಚಕ್ರವರ್ತಿ ಬಾಣದಿಂದ ಹೊಡೆದ. 'ಎಲೋ ಪಾಪಿ! ಸಂಭೋಗಕಾಲ ಬಹಳ ಸುಖ. ಇಂಥಾ ವ್ಯಾಳ್ಯಾದಲ್ಲಿ, ನನ್ನ ಬಾಣದಿಂದ ಹ್ಯಾಂಗೆ ಹೊಡದಿ? ನಿನ್ನ ಹೆಂಡತೀಕೂಡ ನೀನು ಭೋಗ ಮಾಡಲಿಕ್ಕೆ, ನನ್ನಪ್ಪಂದೆ ಮರಣವಾಗಲಿ' ಎಂದು ಕಿಂದಮುಖುಷಿ ತಪಃಸಾಮರ್ಥ್ಯದಿಂದ ಎರಳಿರೂಪ ಧರಿಸಿ, ಮರಣಕಾಲದಲ್ಲಿ ಪಾಂಡುಚಕ್ರವರ್ತಿಗೆ ಶಾಪ ಕೊಟ್ಟನು. ಈ ಪ್ರಕಾರ ಋಷಿಯಿಂದ ಕೊಡಲ್ಪಟ್ಟ ಶಾಪವನ್ನು ಕೇಳಿ ಬಹಳ ದುಃಖಿಷ್ಠನಾದನು. 'ನನಗಾದರೂ ಋಷಿಶಾಪವಾಯಿತು. ಗೃಹಸ್ಥಾಶ್ರಮದಲ್ಲಿದ್ದರೆ ಸ್ತ್ರೀಭೋಗವಾದೀತು. ಅದರಿಂದ ಮರಣ ಪ್ರಾಪ್ತವಾದೀತು' ಎಂದು ತಿಳಿದು, ಮರಣಕ್ಕೆ ಅಂಜಿ, ಸನ್ಯಾಸಿ ಆದೇನೆಂದು ಉದ್ಯುಕ್ತನಾಗಲಿಕ್ಕೆ, ಗಂಡಗೆ ಕುಂತೀ ಬಹಳ ಬೇಡಿಕೊಂಡಳು. 'ನಾವು ಹಾವಭಾವವಿಲಾಸಾದಿಗಳು ತೋರಿಸೋಹಾಂಗಿಲ್ಲ. ಸಂಭೋಗ ಆಗದಹಾಂಗೆ ಮಾದ್ರೀಗೆ ಹೇಳಥೀನಿ' ಎಂದು ನಮಸ್ಕಾರಪೂರ್ವಕ ಬಹಳ ಬೇಡಿಕೊಂಡಳು. 'ನಾವು ಸ್ತ್ರೀಯರು, ಮನಸ್ಸು ಚಂಚಲ ಮಾಡೋ ಹಾಂಗೆ ಇಲ್ಲ, ಗೃಹಸ್ಥಾಶ್ರಮದಲ್ಲೇ ಇರಬೇಕು' ಎಂದು ಬೇಡಿಕೊಂಡಳು. ಆದ್ದರಿಂದ ಗೃಹಸ್ಥಾಶ್ರಮವುಳ್ಳಾತನಾಗಿ ವಾಸ ಮಾಡಿದನು. ಬದರಿಕಾಶ್ರಮಕ್ಕೆ, ನಾರಾಯಣಾಶ್ರಮವೆಂದು ಹೇಳಥಾರೆ. ಹೆಂಡಂದಿರಿಂದ ಸಹಿತನಾದಂಥ ಪಾಂಡು. ಚಕ್ರವರ್ತಿ, ವೇದವ್ಯಾಸನ ಪಾದಕಮಲಾಶ್ರಯನಾಗಿ ತೀವ್ರ ತಪಸ್ಸು ಮಾಡಿದನು. ನಾರಾಯಣನ ಪಾದಸಂಗದಿಂದ ಅತಿ ಪವಿತ್ರಳಾದ ಭಾಗೀರಥೀಪವಿತ್ರೋದಕದಲ್ಲಿ ತ್ರಿಕಾಲಸ್ನಾನ ಮಾಡಿ, ಅತಿ ಪವಿತ್ರವಾದ ಶರೀರವುಳ್ಳಾತನಾಗಿ, ತಪಸ್ಸು ಮಾಡಿಕೊಂಡು ಇರಹೊಕ್ಕನು. ಆದಿಪರ್ವ ಭಾರತದ ಕಥ ಹೇಳತಾ ನಿಂದರಿಸಿ, ಹರಿವಂಶ ಕಥ ಹೇಳಥಾರೆ. ಯಮುನಾ ಭಾಗೀರಥೀ ಹ್ಯಾಂಗೆ ಕೂಡಿ ಹರೀಥಾರೆ, ಹಾಂಗೆ ಭಾರತ ಹರಿವಂಶ ಮಿಶ್ರಿತವಾಗಿ ಕಥ ನಡದದೆ.

ಹರಿವಂಶ ಕಥ ಹೇಳಬೇಕಾಗಿ, ಕೃಷ್ಣಾವತಾರ ನಿಮಿತ್ತವಾಗಿ ಬ್ರಹ್ಮಾದಿ ದೇವತಿಗಳು ಪ್ರಾರ್ಥನಿ ಮಾಡಿದ ಪ್ರಕಾರ ಹೇಳಥಾರೆ. ಪಾಂಡುಚಕ್ರವರ್ತಿ ತಪಸ್ಸು ಮಾಡಿದ ಕಾಲದಲ್ಲೇವೆ, ಅಗ್ರೇಸರರಾದಂಥ ಬ್ರಹ್ಮರುದ್ರರ ಮುಂದೆಮಾಡಿಕೊಂಡು, ದೇವೇಂದ್ರನೇ ಮೊದಲಾಗಿ ಉಳ್ಳಂಥ ಸಮಸ್ತ ದೇವತಿಗಳು ಬಂದು, ದೇವಾದಿ-

ದೇವನಾದಂಥ ನಾರಾಯಣಗೆ ಮೊರಿಹೊಕ್ಕು ಸ್ತೋತ್ರ ಮಾಡಥಾರೆ. ದೇವತಿಗಳು ಎಂಥಾವರೆಂದರೆ, ಗೋರೂಪಳಾದಂಥ ಭೂಮಿಯಿಂದ ಸಹಿತರಾದಂಥವರು. ಭೂಮಿ ಎಂಥಾಕೆ ಎಂದರೆ, ತನ್ನಲ್ಲಿ ಸಂಚಾರ ಮಾಡುವಂಥ, ಪಾಪಾತ್ಮಕರಾದಂಥ, ದೈತ್ಯರ ಭಾರವನ್ನು ಸಹಿಸಲು ಶಕ್ತಳಾಗದೆ ಇದ್ದಂಥಾಕೆ, ದೈತ್ಯರುಗಳು ಮತ್ತೆಂಥಾವರೆಂದರೆ, ಭೂಮಿಯನ್ನು ಆಶ್ರಯಮಾಡಿಕೊಂಡಿಹೋಂಥಾವರು. ಇಂಥಾ ದೈತ್ಯರ ಭಾರವನ್ನು ತಾಳಲಾರದೆ ಇದ್ದಂಥ ಭೂಮಿಯನ್ನು ಮುಂದು-ಮಾಡಿಕೊಂಡು, ಬ್ರಹ್ಮದೇವರಿಗೆ ಗುರು ಆದಂಥ, ಕ್ಷೀರಸಾಗರದಲ್ಲಿ ಮುಕ್ತಶೇಷನ ಮ್ಯಾಲೆ ಮಲಗಿದಂಥ ನಾರಾಯಣನ ಕುರಿತು ಮಾತನಾಡಿದರು. ದಾವ ಪ್ರಕಾರ-ವೆಂದಲ್ಲಿ 'ಕ್ಷರಾಕ್ಷರ ಪುರುಷರುಗಳಿಗೆ ಉತ್ತಮನಾದಂಥ, ದೇಶತಃ ಕಾಲತಃ ಅಪರಿಚ್ಛಿನ್ನ ಶಕ್ತಿಯುಳ್ಳಂಥ ಪುರುಷ ನೀನು' ಎಂದು ಪುರುಷಪ್ರತಿಪಾದಕನಾದಂಥ ಸ್ವಾಮಿಯನ್ನು ಪುರುಷಸೂಕ್ತದಿಂದ ಸ್ತೋತ್ರ ಮಾಡಿ ಮಾತನಾಡಿದರು. 'ಹೇ ಬ್ರಹ್ಮಾದಿಗಳಿಗೆ ಈಶನಾದಂಥ ಸ್ವಾಮಿಯೇ, ಈ ಧರಾದೇವಿಯು ವಿಷ್ಣುವೈಷ್ಣವ-ದ್ರೋಹಿಗಳಾದ ಅಸುರಶ್ರೇಷ್ಠರುಗಳಿಂದ ಮಾಡಲ್ಪಟ್ಟ ಸಂಚಾರ ತಾಳದೆ, ಬಹಳ ದುಃಖಿಷ್ಟಳಾಗಿ, ಗೋರೂಪದಿಂದ ನಿನ್ನ ಬದಿಗೆ ಬಂದಿದ್ದಾಳೆ. ಪರ್ವತಾದಿಗಳ ಹೊತ್ತದ್ದರಿಂದ ಆಗದಂಥ ದುಃಖ, ಅಸುರರ ಸಂಚಾರದಿಂದ ಭೂಮಿಗೆ ಹ್ಯಾಂಗೆ ಆಯಿತು ಎಂದೀ, ದಾವ ಕಾರಣದಿಂದ ಆ ದೈತ್ಯರು ನಿನಗೆ ವಿಮುಖರೋ, ಆ ಕಾರಣದಿಂದ ಅತ್ಯಂತ ಪಾಪಿಷ್ಠರಾದವರು. ಅದರಿಂದ ಭೂಮಿಗೆ ಬಂದಂಥ ದುಃಖವು ಯುಕ್ತವೇವೆ.' ಅದರನ್ನೇ ವಿಸ್ತಾರ ಮಾಡಥಾರೆ. 'ಹೇ ಸ್ವಾಮಿಯೇ! ಎಂಥಾ ಸಹಿಸೋಣ ಆದಕಾಲಕ್ಕೂ, ನಿರಂತರದಲ್ಲಿ ದುಷ್ಟರ ಸಂಗತಿ ಇಹೋಣದ ರಿಂದ ಭಾರವಾಗಿ ತೋರತದೆ. ಆದಕಾರಣ ಹೇ ಈಶ ನಾವು ಆಡುವಂಥ ಮಾತುಗಳ ಕೇಳು. ಮಾತುಗಳು ಎಂಥಾವು ಎಂದರೆ, ಪೂರ್ವದಲ್ಲಿ ನಮ್ಮ ಹಿತಾರ್ಥವಾಗಿ ನಿನ್ನಿಂದ ರಣರಂಗದಲ್ಲಿ ಸತ್ತಂಥ ದೈತ್ಯರು, ಈಗ ಭೂಮೀವ್ಯಾಲೆ ಹುಟ್ಟಿದ್ದಾರೆ.' ಯುದ್ಧಪ್ರಸಕ್ತಿ ವಿಸ್ತಾರ ಮಾಡಥಾರೆ. 'ದಿತೀಪುತ್ರರಾದಂಥ ದೈತ್ಯರಿಗೆ, ದೇವೋತ್ತಮರಾದಂಥ ದೇವತಿಗಳಿಗೆ ಯುದ್ಧ ಪ್ರಾಪ್ತವಾಯಿತು. ಆ ಸಮಯದಲ್ಲಿ ಉತ್ತಮವಾದಂಥ ಗಜ, ಅಶ್ವ, ಕಾಲಾಳು, ರಥ, ಹೀಂಗೆ ಚತುರಂಗಸೇನಿಯಿಂದ ಯುಕ್ತವಾದಂಥ ನಮ್ಮ ಸೈನ್ಯ, ನೂರು ಮಹೌಘಅಕ್ಷೋಹಿಣಿ ಶತಕಮಹೌಘದಲ್ಲಿ ಹೆಚ್ಚು ಗುಣಿಸಿದರೆ ಎಷ್ಟೋ, ಅಷ್ಟು ಸೈನ್ಯವಿತ್ತು. ಮತ್ತೆ ಎಂಥಾದ್ದು ಸೈನ್ಯ ವೆಂದರೆ, ಉತ್ತಮವಾದ ಅಸ್ತ್ರಗಳಿಂದ ಯುಕ್ತವಾದಂಥಾದ್ದು. ನಮ್ಮ ಸೇನಾಬಲ ವನ್ನು ನೋಡಲಿಕ್ಕೆ ದೈತ್ಯರ ಸೇನ ನಮ್ಮ ಸೇನಾಬಲವನ್ನು ಮಹೌಘದಲ್ಲಿ ಹೆಚ್ಚು ಗುಣಿಸಿದರೆ ಎಷ್ಟೋ, ಅಷ್ಟು ಸೇನಾಬಲ ದೈತ್ಯರಿಗೆ ಇತ್ತು. ಕಲ್ಲುಗಳು, ಪರ್ವತಗಳು ಧರಿಸಿದಂಥಾದ್ದು. ಆದ್ದರಿಂದ ಅತಿ ಭಯಂಕರವಾದಂಥಾದ್ದು.' ದೇವಾಸುರರ ಕಥದ ಕರಿಮಾಣ ಹೇಳಥಾರೆ.

ಒಂದೊಂದು ರಥ ನಲ್ವ ಪ್ರಮಾಣದಲ್ಲಿ ಇದ್ದವು. ನಲ್ವದ ಸಂಖ್ಯೆ ನಾಲ್ಕು-ನೂರು ಹಸ್ತ. ಕಿಷ್ಕುವೆಂಬೋದು ಒಂದು ನಲ್ವ. ಕಿಷ್ಕುವೆಂಬೋ ಹೆಸರು ಪೊಳಕ್ಕೂ ಹಾಂಗು ಮಾರುಗೂ ಬರತದೆ. ಈ ಪ್ರಕಾರ ಬಹುನಲ್ವ ಪರಿಮಾಣದಿಂದ ಇದ್ದಂಥ ರಥಗಳು, ಧನುರ್ಬಾಣದಿಂದ ಪೂರ್ಣವಾಗಿ ಇದ್ದವು. 'ದೇವಾಸುರರು ಪರಸ್ಪರವಾಗಿ ಯುದ್ಧ ಮಾಡಿದರು. ನಾನಾವಿಧವಾದಂಥ ವಸ್ತ್ರಗಳಿಂದ, ಅಲಂಕಾರಗಳಿಂದ, ಉತ್ತಮ ವೇಷದಿಂದ, ಉತ್ತಮವಾದ ಆಯುಧಗಳಿಂದ ಶ್ರೇಷ್ಠರಾದಂಥಾವರು. ಇಂಥಾ ದೇವಾಸುರಶ್ರೇಷ್ಠರು ಪರ್ವತಗಳಿಂದ, ಮುಷ್ಟಿಗಳಿಂದ, ಕರತಳಗಳಿಂದ, ಮಹಾಸ್ತ್ರಗಳಿಂದ ಹೊಡೆದಾಡಿದರು. ಆ ವ್ಯಾಳ್ಯಾದಲ್ಲಿ ನಿನ್ನ ಅನುಗ್ರಹದಿಂದ ಅಸುರಸೈನ್ಯವು ನೂರರಲ್ಲಿ ಒಂದು ಭಾಗ, ದೇವಶ್ರೇಷ್ಠರಾದಂಥ ಸಮ್ಮಗಳಿಂದ ಸತ್ತುಹೋಯಿತು. ಅನಂತರದಲ್ಲಿ ಶಂಬರನೆಂಬ ರಾಕ್ಷಸ, ಹತವಾದಂಥ ತನ್ನ ಸೈನ್ಯ ನೋಡಿ, ಮಹಾರುದ್ರದೇವರ ವರಬಲದಿಂದ, ಸಹಿಸಲಿಕ್ಕೆ ಅಶಕ್ಯವಾದಂಥ ಇಂದ್ರಜಾಲಮಾಯವೇ ಮೊದಲಾಗಿ ಉಳ್ಳ ಮಾಯಗಳನ್ನು ಬಲ್ಲವನಾದ ಕಾರಣ, ಮಾಯದಿಂದ ದೇವತೆಗಳನ್ನು ಮೂರ್ಛಾಗತರನ್ನಾಗಿ ಮಾಡತಾ ಬಂದನು. ಯುದ್ಧರಂಗದಲ್ಲಿ ಬಹು ಮಾಯಾದಿಂದ ಪೀಡಿತರಾಗಿ, ಚಂದ್ರ ಸೂರ್ಯ ಮೊದಲಾದ ದೇವತೆಗಳು ಮೂರ್ಛಾಗತರಾದರು. ಮೂರ್ಛಾಗತರಾದ ಚಂದ್ರಸೂರ್ಯರ ನೋಡಿ ದೇವೇಂದ್ರ, ಬ್ರಹ್ಮದೇವರಿಂದ ಕೊಡಲ್ಪಟ್ಟ ವಿಷ್ಣುದೇವತಾಕವಾದ ವೈಷ್ಣವಾಸ್ತ್ರವನ್ನು ಬಿಟ್ಟನು. ಆ ಅಸ್ತ್ರ ಎಂಥಾದ್ದೆಂದರೆ, ಸಮಸ್ತ ಮಾಯಗಳನ್ನು ಪರಿಹರಿಸುವಂಥಾದ್ದು. ರಮೇಶನ ವರದಿಂದ, ಸರ್ವರಿಂದಲೂ ಸಹಿಸಲು ಶಕ್ಯವಲ್ಲದೇ ಇದ್ದಂಥಾದ್ದು. ಇಂಥಾ ವೈಷ್ಣವಮಾಯದಿಂದ, ಅಸುರಶ್ರೇಷ್ಠನಾದಂಥ ಶಂಬರಾಸುರನಿಂದ ಬಿಡಲ್ಪಟ್ಟಂಥ ಮಾಯವು ಕೆಟ್ಟುಹೋಯಿತು. ಈ ಮಂತ್ರವು ನಾರಾಯಣನಿಂದ ಬ್ರಹ್ಮದೇವರಿಗೆ ಕೊಡಲ್ಪಟ್ಟಿತ್ತು. ಬ್ರಹ್ಮ, ದೇವೇಂದ್ರನಿಗೆ ಕೊಟ್ಟಿದ್ದ. ಆ ಮಂತ್ರದಿಂದ ವರುಣ, ಹಾಂಗೆ ಪ್ರಧಾನಾಗ್ನಿ ಮೊದಲಾದವರು ಮೂರ್ಛೆಯಿಂದ ನಿವೃತ್ತರಾದರು. ಯಮ, ಚಂದ್ರ, ಸೂರ್ಯ ಮೊದಲಾಗಿ ಉಳ್ಳಂಥ ದೇವತೆಗಳು, ಅಸುರರ ಮಾಯ ವಿನಾಶವಾಗತ ಇರಲಾಗಿ, ಉತ್ಕೃಷ್ಟ ಪೌರುಷವುಳ್ಳವರಾಗಿ, ಅತಿಶಯವಾದ ಪರಾಕ್ರಮದಿಂದ ಬಹಳ ರಾಕ್ಷಸರ ಸಂಹಾರ ಮಾಡಿದರು. ದೇವೇಂದ್ರ ತನ್ನ ವಜ್ರಾಯುಧದಿಂದ ಶಂಬರಾಸುರನ್ನ ಸಂಹಾರಮಾಡಿದನು. ದೈತ್ಯಪಾಲಕನಾದಂಥ ಶಂಬರಾಸುರ ಸತ್ತುಹೋಗಲಾಗಿ, ದೇವೇಂದ್ರನ ಭೀತಿಯಿಂದ, ರಾಕ್ಷಸರು ಚಾವುಕ ಚೆಲ್ಲಿ ನಾಲ್ಕೂ ಕಡಿಗೆ ಓಡಹೊಕ್ಕರು.

'ಆ ಸಮಯದಲ್ಲಿ ವಿಪ್ರಚಿತ್ತಿ ಎಂಬ ಮೂಲದೈತ್ಯನು ಧನುರ್ಧಾರಿಯಾಗಿ, ಓಡಿಹೋಗುವಂಥ ಸೈನ್ಯಕ್ಕೆ ಓಡಬ್ಯಾಡವೆಂದು ಒದರತಲೇ ಬಂದನು. ಬಂದು

ದೇವೇಂದ್ರನೇ ಮೊದಲಾದ ದೇವಶ್ರೇಷ್ಠರಿಂದ ಕೂಡಿ ಯುದ್ಧ ಮಾಡಿದನು. ಬ್ರಹ್ಮದೇವರ ವರವಿದ್ದ ಕಾರಣ ಅವನ್ನ ಗೆಲ್ಲಲಿಕ್ಕೆ ಶಕ್ಯವಲ್ಲ. ಆದಕಾರಣದಿಂದ ವಿಪ್ರಚಿತ್ತಿ ಬಾಣಗಳಿಂದ ದೇವಶ್ರೇಷ್ಠರು ಬಿದ್ದರು. ಬಿದ್ದಂಥ ದೇವತಿಗಳ ನೋಡಿ ಮುಖ್ಯಪ್ರಾಣದೇವರು ಶೀಘ್ರದಿಂದ ಬಾಣಗಳ ಸಮೂಹ ಬಿಟ್ಟು ವಿಪ್ರಚಿತ್ತಿಯ ಅಸ್ತ್ರಗಳ ನಿವಾರಿಸಿ, ವಿಪ್ರಚಿತ್ತಿಯ ಹೃದಯದಲ್ಲಿ ಸುವರ್ಣಾತ್ಮಕವಾದಂಥ ಗದಿಯನ್ನು ಬಿಟ್ಟುಕೊಟ್ಟನು. ಮಹಾಬಲಿಷ್ಠನಾದ ವಿಪ್ರಚಿತ್ತಿಯು ಹಿಟ್ಟುಹಿಟ್ಟಾಗಿ, ವಾಯುದೇವರ ಬಲಾತಿಶಯದಿಂದ ಪ್ರೇರಿತನಾಗಿ, ಆಕಾಶಮಾರ್ಗದಿಂದ ಮೇರು-ಪರ್ವತದ ಮ್ಯಾಲೆ ಬಿದ್ದನು. ತದನಂತರದಲ್ಲಿ ಪ್ರಸಿದ್ಧನಾದಂಥ ಕಾಲನೇಮಿಯು ಶೀಘ್ರದಿಂದ ಯುದ್ಧಕ್ಕೆ ಬಂದನು. ಪೂರ್ವದಲ್ಲಿ ಸರ್ವರಿಂದಲೂ ಸೋಲಬ್ಯಾಡವೆಂದು, ನಿನ್ನ ಆಜ್ಞೆಯಿಂದ ಬ್ರಹ್ಮದೇವರು ವರವು ಕೊಟ್ಟಿದ್ದ. ಆ ಅಸುರನು ಸಾವಿರ ತಲಿ ಎರಡು ಸಹಸ್ರ ತೋಳುಗಳಿಂದ ಯುಕ್ತನಾಗಿ ಹುಟ್ಟಿದನು. ಅಂಥಾ ಕಾಲನೇಮಿಯು ತೀವ್ರದಿಂದ ಯುದ್ಧಕ್ಕೆ ಬಾಹೋದು ವಾಯುದೇವರು ನೋಡಿ, ನಿನ್ನ ಆಜ್ಞೆಯಿಂದ ಬ್ರಹ್ಮದೇವರು ಕೊಟ್ಟಂಥ ವರವು ತಿಳಿದು, ತಾ ಕೊಲ್ಲದೆ, ಸ್ವಾಮಿ ಮಾಡುವ ಕಾರ್ಯ ತಾ ಮಾಡಬಾರದೆಂದು, ನಿನ್ನಿಂದಲೆ ಸಂಹಾರ ಮಾಡೋ ನಿಮಿತ್ತದಿಂದ ನಿನ್ನ ಸ್ಮರಣೆ ಮಾಡಿದ. ನೀ ಭಕ್ತಪ್ರಿಯ—ಕಾಲನೇಮಿ ತೋಳುಗಳಿಂದ ಸಮಸ್ತ ದಿಕ್ಕುಗಳನ್ನೆಲ್ಲ ವ್ಯಾಪಿಸಿಹ—ಸ್ವಾಮಿ, ನೀನು ನಿನ್ನ ಸುದರ್ಶನದಿಂದ ರಾಕ್ಷಸನ ತಲಿಯನ್ನು ಇಳಹಿ, ಅವನನ್ನು ಯಮಲೋಕಕ್ಕೆ ಕಳುಹಿದಿ. ಅಸುರರ ಮೂರು ಭಾಗ ಸೇನಿ ಕೊಂದುಬಿಟ್ಟಿ. ಮತ್ತೊಂದು ಭಾಗ, ನಿನ್ನ ಅನುಗ್ರಹದಿಂದ ಮುಖ್ಯಪ್ರಾಣದೇವರು ಕೊಂದುಬಿಟ್ಟನು. ಮೂಲ ದೈತ್ಯರೆಲ್ಲ ರಣರಂಗದಲ್ಲಿ ಮರಣ ಐದಿ, ವೈಷ್ಣವರಲ್ಲಿ ಹುಟ್ಟಿ, ವಿಷ್ಣುಧರ್ಮಗಳ ಮಾಡಿದ ಪಕ್ಷವೇ, ನಿನ್ನ ವಿಷಯಕ ಜ್ಞಾನಪೂರ್ವಕವಾಗಿ ಭಕ್ತಿ ಮಾಡ್ಯಾರು. ನಿನ್ನಲ್ಲಿ ಭಕ್ತಿ ಮಾಡಿದ ಪಕ್ಷವೇ ಅವರಿಗೆ ದಿವ್ಯಗತಿ ಐದಿಸೀಯ. ಪಾಪಿಗಳಿಗೆ ದಿವ್ಯಗತಿ ಆಗಬಾರದು. ಅವರು ತಮಸ್ಸಿಗೆ ಬೀಳಬೇಕು. ನಮ್ಮ ಚಿತ್ತದಲ್ಲಿ ಪಾಪಿಗಳಿಗೆ ತಮಸ್ಸಿಗೆ ಕೆಡಹಾಕಬೇಕು, ಧರ್ಮಕ್ಕೆ ಮಿಥ್ಯತ್ವ ಬರಬಾರದು. ದೈತ್ಯರನ್ನ ಸತ್ಕರ್ಮದಿಂದ ಭ್ರಷ್ಟರನ್ನಾಗಿ ಮಾಡಬೇಕಂತ ಪ್ರಾರ್ಥನಿ ಮಾಡಥೇವು.

'ಉಗ್ರಸೇನನೆಂಬೋ ಗಂಧರ್ವ ಭೂಮಿಮ್ಯಾಲೆ ಉಗ್ರಸೇನನಾಗಿ ಹುಟ್ಯಾನೆ. ನಿನ್ನ ಅನುಗ್ರಹದಿಂದ ವಾಯುದೇವರು ಕಾಲನೇಮಿಯ ಕೊಲ್ಲಲಾಪ. ಆದರೂ ನಿನ್ನ ಪ್ರೀತಿ ಸಂಪಾದಿಸಬೇಕಾಗಿ ಅತನ ಕೊಲ್ಲದೇ ಬಿಟ್ಟ. ದ್ರುಮಿಳನೆಂಬೋ ಅಸುರನು, ಗಂಧರ್ವನ ವೀರ್ಯದಿಂದ ಉಗ್ರಸೇನರಾಯನ ಹೆಂಡತಿಯಲ್ಲಿ ಹುಟ್ಟಿದ್ದಾನೆ. ಉಗ್ರಸೇನರಾಯನ ಹೆಂಡತಿ, ಋತುಸ್ನಾನ ಮಾಡಿ ಕಾಮಾತುರಳಾಗಿ ವನದಲ್ಲಿರಲಿಕ್ಕೆ, ಆಕೆಯ ಸಂಭೋಗ ಬಲಾತ್ಕಾರದಿಂದ ಮಾಡಿದ್ದರಿಂದ

ಕಾಲನೇಮಿಯೇ ಕಂಸನಾಗಿ ಹುಟ್ಟ್ಯಾನೆ. ಆ ಕಂಸ ದೇವೇಂದ್ರನ್ನ ಸೋಲಿಸಿ ದಿವ್ಯ ರಥ ರತ್ನಗಳ ಸಂಪಾದಿಸಿದ್ದಾನೆ. ಜರಾಸಂಧನಲ್ಲಿ ಸ್ವಯಂವರವಾಗತಿತ್ತು. ಸಮಸ್ತ ರಾಯರುಗಳನ್ನ ಲೆಕ್ಕಿಸದೆ ಆಸ್ತಿ, ಪ್ರಾಸ್ತಿ ಎಂಬ ಕನ್ನಿಕೇರನ್ನ ಮದುವಿ ಮಾಡಿ-ಕೊಂಡನು. ವಿಪ್ರಚಿತ್ತಿ, ರುದ್ರನ ವರಬಲದಿಂದ ಜರಾಸಂಧನಾಗಿ ಹುಟ್ಯಾನೆ. ಕಂಸಗಿಂತ ಜರಾಸಂಧ ಬಲಿಷ್ಠನಾದರೂ, ತನ್ನ ಮಕ್ಕಳ ಕೊಂಡುಹೋಗುವಾಗ ಕಂಸನ್ನ ನಿವಾರಿಸಿದ್ದಿಲ್ಲ. ಆ ಬಲದೊಳಗೆ ಜರಾಸಂಧನ ಸಮಾನ, ಭೂಮಿಮ್ಯಾಲೆ ಪಾತಾಳಲೋಕಗಳಲ್ಲಿ, ಬಲವೀರ್ಯ ಉಳ್ಳವರು ದಾರೂ ಇದ್ದಿಲ್ಲ. ಮಧುಕೈಟಭರು ಮಹಾ ಪ್ರಬಲರು. ನೀನು ಹಯಗ್ರೀವಾವತಾರ ಮಾಡಿ ಮಧುಕೈಟಭರನ್ನು ಕೊಂದಿ. ಅವರೇ ಬ್ರಹ್ಮದತ್ತನ ದೆಸಿಯಿಂದ, ರುದ್ರನ ವರಬಲದಿಂದ, ಹಂಸ ಡಿಭಿಕರಾಗಿ ಹುಟ್ಯಾರೆ. ಹೀಂಗೆ ಅಷಾರ ದೈತ್ಯರು, ರಾಯರುಗಳಾಗಿ ಹುಟ್ಯಾರೆ. ಕೆಲವರು ಅಂಧಂತವಸ್ಸಿಗೆ ಹೋಗಿ ಬಿದ್ದಾರೆ. ಸ್ವಾಮಿ ನೀನು ವ್ಯಾಸಾವತಾರ ಮಾಡಿ, ಸಚ್ಛಾಸ್ತ್ರಗಳಿಂದ ಕಲೀನ್ನ ಕೊಂದಕಾರಣ ಕಲಿಯು ದೊಡ್ಡವನೆಂದು ತಿಳಿದಾರೆ. ರಾಮಾವತಾರದಲ್ಲಿ ಅಪಾರ ರಾಕ್ಷಸರು ನಿನ್ನಿಂದ ಮೃತರಾಗಿದ್ದಾರೆ. ನೀನು ದೊಡ್ಡವ, ನಿನ್ನ ಭಕ್ತ ಮುಖ್ಯಪ್ರಾಣ ದೊಡ್ಡಾತನೆಂದು ತಿಳಿದಾರೆ. ಇಂಥಾ ಸತ್ಯಜ್ಞಾನ ಅಸುರರಿಗೆ ಆಗಬಾರದು. ನಿನ್ನಲ್ಲಿ, ಮುಖ್ಯಪ್ರಾಣನಲ್ಲಿ, ವಿರೋಧ ಹುಟ್ಟಿ ಶೀಘ್ರ ತಮಸ್ಸಿಗೆ ಹೋಗಬೇಕು. ರಾವಣ ಕುಂಭಕರ್ಣರು ನಿನ್ನಿಂದ ಮೃತರಾಗಿ, ಶಿಶುಪಾಲ ದಂತವಕ್ರರಾಗಿ ಹುಟ್ಯಾರೆ. ಅವರನ್ನು ಸಂಹಾರಮಾಡಿ, ಅವರಲ್ಲಿ ಅವಿಷ್ಟರಾದಂಥ ದೈತ್ಯರನ್ನ ತಮಸ್ಸಿಗೆ ಕೆಡಹಾಕುವಂಥಾತನಾಗು. ನಿನ್ನ ದ್ವಾರಪಾಲಕರನ್ನು ವಿಮೋಚನ ಮಾಡಿ, ನಿನ್ನ ಸ್ಥಾನವಾದಂಥ ವೈಕುಂಠಕ್ಕ ಕಳುಹಿಸು. ಬಲಿನಾಮಕ ದೈತ್ಯ, ಬಲಿಚಕ್ರವರ್ತಿಯೊಳಗೆ ಹೊಕ್ಕು ಸಾಲ್ವರಾಯ-ನಾಗಿ ಹುಟ್ಟಿದ್ದಾನೆ. ಮಾಯಾವಿಮಾನ ಏರಿಕೊಂಡು ಖೇಚರಮಾರ್ಗದಿಂದ ತಿರಗಥಾನೆ. ಅಂಥಾ ಸಾಲ್ವರಾಯಗೆ ಪರಶುರಾಮಾವತಾರದಲ್ಲಿ ಅವನ್ನ ಓಡಿಸಿ-ಬಿಟ್ಟಲ್ಲದೆ, ಕೊಲ್ಲಲಿಲ್ಲ. ನಿನ್ನ ಸಂಕಲ್ಪ ಕೃಷ್ಣಾವತಾರದಲ್ಲಿ ಕೊಲ್ಲಬೇಕಂತ ಅದೆ. ಶೀಘ್ರ ಕೃಷ್ಣಾವತಾರ ಮಾಡಿ ಸಾಲ್ವರಾಯನ ಕೊಂದುಬಿಡು. ಬ್ರಹ್ಮದತ್ತನ ಮಗ ಸಾಲ್ವರಾಯ ತಪಸ್ಸಿಗೆ ಹೋಗಿದ್ದ. ಈಗ್ಲೆ, ಮತ್ತೂ ಎರಡು ವಿಮಾನಗಳು ಸಂಪಾದಿಸಿಕೊಂಡು ಬಂದಿದ್ದಾನೆ. ಬಲಿಪುತ್ರ ಬಾಣಾಸುರನಲ್ಲಿ, ಬಾಣನೆಂಬೋ ದೈತ್ಯ ಹೊಕ್ಕು ಕೀಚಕನಾಗಿ ಹುಟ್ಯಾನೆ. ಇವರನ್ನೆಲ್ಲ ಸಂಹಾರ ಮಾಡಬೇಕೆಂದು ನಿನ್ನ ಚಿತ್ತದಲ್ಲಿ ಅದೆ. ದೇವತೆಗಳಿಗೆ ಹಿತದಗೋಸ್ಕರ ಭೂಮಿಮ್ಯಾಲೆ ಅವತಾರ ಮಾಡಿ, ದೇವತಾಕಾರ್ಯ ಸಾಧಿಸಿಕೊಡಬೇಕು. ಸಮಸ್ತ ದೇವತೆಗಳಿಗೆ ಮುಖ್ಯ ಗತಿ ನೀನೇವೆ. ನಿನ್ನ ಸದೃಶ ಮತ್ತೊಬ್ಬರಿಲ್ಲ.' ಹೀಂಗಂತ ದೇವತೆಗಳು ಕ್ಷೀರ-ಸಮುದ್ರಕ್ಕೆ ಹೋಗಿ, ಶೇಷಶಾಯಿ ನಾರಾಯಣನ ಕುರಿತು ಸ್ತೋತ್ರಮಾಡಿದರು.

ದೇವತೆಗಳು ಈ ಪ್ರಕಾರ ಸ್ತೋತ್ರ ಮಾಡಲಿಕ್ಕೆ, ಕೋಟಿ ಸೂರ್ಯಕಾಂತಿ ಧಿಕ್ಕರಿಸತ ಸ್ವಾಮಿ ಪ್ರಸನ್ನನಾಗಿ, ದೇವತೆಗಳ ಕೂಡಿಕೊಂಡು ಕ್ಷೀರಸಮುದ್ರದಿಂದ ಮೇರುಪರ್ವತಕ್ಕೆ ಬಂದನು. ಬ್ರಹ್ಮರಾಯನ ಕುರಿತು ' ಹೇ ಕಮಲೋದ್ಭವನೇ, ನಿನಗೆ ಜಗದ್ಗುರುತ್ವ ಕೊಟ್ಟಿದ್ದೀನಿ. ನೀನು ದಾರಿಗೆ ವರಕೊಡೋಣವಿದ್ದೀತು, ಅದು ವಿಚಾರ ಮಾಡಿಕೊ, ನನ್ನ ವಚನ ಸತ್ಯ ಮಾಡೇನು. ದೇವತೆಗಳಿಂದ ಸಹಿತನಾಗಿ ಬಹಳ ಪ್ರಾರ್ಥನ ಮಾಡಿದ್ದಿ. ನಾನು ಎಲ್ಲಿ ಅವತಾರ ಮಾಡಲಿ?' ಹೀಂಗೆಂದು ಪರಬ್ರಹ್ಮನಾದ ನಾರಾಯಣನು ಮಾತನಾಡಲಿಕ್ಕೆ, ಬ್ರಹ್ಮರಾಯ ಸ್ವಾಮೀಕೂಡ ವಿಜ್ಞಾಪನ ಮಾಡಥಾನೆ. ' ಹೇ ಸ್ವಾಮೀ, ನೀನು ಸಕಲ ಜಗದಂತರ್ಯಾಮಿ. ಸಕಲವನ್ನೂ ಬಲ್ಲವ. ನಾನು ಒಂದು ಬಿನ್ನಹ ಮಾಡಥೀನಿ. ಕಾಮಧೇನುವಿನ ಪುಕ್ಕಳು ಛಲೋ ಆಕಳುಗಳನ್ನು, ವರುಣನಿಗೋಸ್ಕರ ಕೊಟ್ಟಿದ್ದೆ. ವರುಣನ ತಂದಿ ಕಶ್ಯಪ, ಮಗನ ವ್ಯಾಲಿ ಅಗ್ಗಳಿಕೆ ಮಾಡಿ, ಆಕಳುಗಳ ತರಬೇಕೆಂದು ಮೂರ್ಖ ಅಂತಃಕರಣವುಳ್ಳವನಾಗಿ, ತನ್ನ ಹೆಂಡತಿ ಅದಿತೀ ಹಾಂಗೂ ಸುರಭೀ ಇವರ ಮಾತು ಕೇಳಿ, ಮಗನಲ್ಲಿ ಆಕಳುಗಳವೆ ಎಂದು ಅಸಹ್ಯಬಟ್ಟುಕೊಂಡು, ಅಂಥಾ ಆಕಳುಗಳು ತನ್ನಲ್ಲಿರಬೇಕೆಂದು, ಕಳವು ಹಾಕಿಸಿ ಆಕಳುಗಳ ತರಿಸಿದ. ಮಗ ನಮ್ಮ ಮನಿಗೆ ಬಂದು ಹೇಳಿದ. ಕಳವು ನಿಂದ್ಯಕರ್ಮ, ಕಶ್ಯಪ ಹ್ಯಾಂಗೆ ಮಾಡಿದ ಎಂದು, ಗೋಜೀವನನಾಗಿ ಹುಟ್ಟೆಂದು ಕಶ್ಯಪಗೆ ನಾನು ಶಾಪ ಕೊಟ್ಟಿದ್ದೀನಿ. ಆದಕಾರಣ ಶೂರರಾಯನ ಹೊಟ್ಟೇಲಿ, ಕ್ಷತ್ರಿಯ ಕನ್ನಿಕೆಯಲ್ಲಿ ವಸುದೇವನಾಗಿ ಹುಟ್ಟಿದ್ದಾನೆ. ಕ್ಷತ್ರಿಯನಲ್ಲಿ ಹುಟ್ಟಿ, ವೈಶ್ಯಕರ್ಮ ಮಾಡೋದು ಬಹಳ ನಿಂದ್ಯಕರ್ಮ. ಅದಿತಿ ಎಂಬಾಕಿ, ದೇವಕಿಯಾಗಿ ಜನಿಸಿದ್ದಾಳೆ. ನನ್ನ ವಚನ ಸತ್ಯ ಮಾಡಬೇಕಾಗಿ, ವಸುದೇವ ದೇವಕಿಯರಲ್ಲಿ ಅವತಾರ ಮಾಡಬೇಕು. ಅಲ್ಲಿಂದ ನಂದಗೋಕುಲಕ್ಕೆ ಹೋಗಿ, ನಂದಗೋಪನ ಕೈಯ ಲಾಲಿಸಿಕೋಬೇಕು. ಏನು ಕಾರಣವೆಂದರೆ, ದ್ರೋಣನಾಮಕ ವಸು ಗೋಪಾಲಕರಿಗೆಲ್ಲ ಅಧಿಪತಿ, ನಂದ. ಗೋಪನಾಗಿ ಹುಟ್ಟಿದ್ದಾನೆ. ಅತನ ಹೆಂಡತಿ ಧರಾದೇವಿ, ಯಶೋದಾದೇವಿಯಾಗಿ ಹುಟ್ಟಿದ್ದಾಳೆ. ನಾರಾಯಣ ತನ್ನ ಮಗನಾಗಬೇಕೆಂದು ತಪಸ್ಸು ಮಾಡಿದಳು. ಹೇ ಸ್ವಾಮಿ, ನಾನು ಅವರಿಗೆ ವರವು ಕೊಟ್ಟಿದ್ದೀನಿ. ಸ್ವಾಮಿ ಗೋಕುಲಕ್ಕೆ ಬಂದು ಬಾಲಲೀಲಿಗಳ ತೋರಿಸಬೇಕು' ಎಂದು ಬೇಡಿಕೊಂಡನು. ' ನಂದಗೋಪ ದಾದ ಮಗನೆಂದರೆ, ಶೂರರಾಯಗೆ ವೈಶ್ಯಕನ್ನಿಕೆಯಲ್ಲಿ ಹುಟ್ಟಿದ್ದಾನೆ. ಶೂರರಾಯನ ಶೂದ್ರಸ್ತ್ರೀಯಲ್ಲಿ ಆರುಣೀ ಎಂಬ ಹೆಣ್ಣುಮಗಳು ಹುಟ್ಟಿದ್ದಾಳೆ. ಆಕಿ ವಿದುರನ ಹೆಂಡತಿ. ನಂದಗೋಪ ವೈಶ್ಯನ ಕನ್ನಿಕೆಯಲ್ಲಿ ಹುಟ್ಟಿದ ಕಾರಣ, ವೈಶ್ಯವೃತ್ತಿ ಮಾಡಿಕೊಂಡಿದ್ದಾನೆ. ಅವರಲ್ಲಿ ಅವತಾರ ಮಾಡಿ, ನಿನ್ನ ದಿವ್ಯರೂಪ ತೋರಿಸ-ಬೇಕು. ನಂದಗೋಪನ ಮನಿಯಲ್ಲಿ ಲೀಲೆಗಳ ತೋರಿಸಬೇಕು.' ಹೀಂಗಂತ

ಬ್ರಹ್ಮರಾಯ ಬೇಡಿಕೊಳ್ಳಲಿಕ್ಕೆ, ಸ್ವಾಮಿ ಭಕ್ತವತ್ಸಲ ಒಳ್ಳೇದೆಂದು ಅಂಗೀಕಾರ ಮಾಡಿದನು.

ಬ್ರಹ್ಮರಾಯ ದೇವತಿಗಳಿಗೆ ಭೂಮಿವ್ಯಾಲೆ ಅವತಾರ ಮಾಡಿರೆಂದು ಆಜ್ಞಾಪಿಸಿದನು. 'ನಮ್ಮ ಸ್ವಾಮಿ ಭೂಮಿವ್ಯಾಲೆ ಅವತಾರ ಮಾಡಥಾನೆ. ನನಗೆ, ಗರುಡಗೆ ಅವತಾರವಿಲ್ಲ. ನೀವು ಅಲ್ಲಿ ಅಂಗಭೂತರಾಗಿ ಸ್ವಾಮೀ ಸೇವಿ ಮಾಡಬೇಕಾಗಿ, ಶೀಘ್ರ ನಿಮ್ಮ ಅಂಶದಿಂದ ಅವತಾರಗಳ ಮಾಡಿ, ನಿಮ್ಮ ಕಾರ್ಯಪ್ರಯೋಜನ ತೀರಿಸಿಕೊಂಡು, ಆಲಸ್ಯರಹಿತರಾಗಿ, ನೀವು ಮನ ಬಂಧಾಂಗ ಸ್ಥಳಸ್ಥಳಗಳಲ್ಲಿ ಅವತಾರ ಮಾಡಿರಿ' ಎಂದು ಬ್ರಹ್ಮದೇವರು ಆಜ್ಞಾಪಿಸಿದನು. ಆಮೇಲೆ ಕುಬೇರ ಅಸುರಾವೇಶಯುಕ್ತನಾಗಿ ನರಕಾಸುರನ ಮಗನಾಗಿ ಹುಟ್ಯಾನೆ. ಆತನ ಹೆಸರು ಭಗದತ್ತ. ದೇವೇಂದ್ರನ ಶಿಷ್ಯನಾದ ನರಕಾಸುರ ಸತ್ತವ್ಯಾಲೆ ಅಸುರಾವೇಶ ಹೋಯಿತು. ಸ್ವಧರ್ಮದಲ್ಲಿ ನಿರತನಾದ ನರಕಾಸುರ ದಾರು ಎಂದರೆ ನಾರಾಯಣನ ಮಗನಾಗಬೇಕು. ಕುಬೇರನ ಸುಪ್ರತೀಕವೆಂಬ ಆನಿಯನ್ನು ಕದ್ದುಕೊಂಡು ಬಂದಿದ್ದ ವರಾಹದೇವರ ದೆಸಿಯಿಂದ ಭೂದೇವಿಯಲ್ಲಿ ಹುಟ್ಟಿದ್ದಾನೆ. ಆತನಲ್ಲಿ ಕುಬೇರ, ಭಗದತ್ತನಾಗಿ ಹುಟ್ಟಿದ್ದಾನೆ. ಶಿನಿ ಎಂಬೋ ಯಾದವನಲ್ಲಿ, ಸತ್ಯಕನೆಂಬೋ ಯಾದವ ಹುಟ್ಯಾನೆ. ಅಲ್ಲಿ ಕೃಷ್ಣಪಕ್ಷದ ಅಭಿಮಾನಿದೇವತಿ ಗರುಡನ ಆವೇಶದಿಂದ ಯುಕ್ತನಾಗಿ, ಸತ್ಯಕನ ಹೊಟ್ಟೆಯಲ್ಲಿ ಸಾತ್ಯಕಿ ಹುಟ್ಟಿದ್ದಾನೆ. ಆತನಲ್ಲಿ ಸುದರ್ಶನಚಕ್ರ ಸನ್ನಿಧಾನವದೆ. ಹೃದೀಕನೆಂಬ ಯಾದವನಲ್ಲಿ, ಶುಕ್ಲಪಕ್ಷಕ್ಕೆ ಅಭಿಮಾನಿದೇವತಿ ಪ್ರವಹನೆಂಬ ಮರುತನ ಆವೇಶದಿಂದ, ಪಾಂಚಜನ್ಯಾಂಶದಿಂದ, ಕೃತವರ್ಮನಾಗಿ ಹುಟ್ಯಾನೆ. ಯಾದವರೆಲ್ಲ ದೇವತಿಗಳು. ದುರ್ಯೋಧನನ ಪಕ್ಷಪಾತೀಯರು, ನಾರಾಯಣನಲ್ಲಿ ಮುಖ್ಯಪ್ರಾಣನಲ್ಲಿ ದ್ವೇಷ ಉಳ್ಳವರು ಕೆಲವು ದೈತ್ಯರು ತಮೋಯೋಗ್ಯರು; ಉದಾಸೀನರು ನಿತ್ಯಸಂಸಾರಿಗಳೆಂದು ತಿಳಿಯಬೇಕು. ಸ್ವಾಮಿ ಕೃಷ್ಣಾವತಾರ ಮಾಡಬೇಕೆಂದು, ಶ್ರೀವೇದವ್ಯಾಸದೇವರೇ ಅವತಾರ ಮಾಡಿದ್ದಾರೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಅಂಶಾವತರಣಂ' ಎಂಬ ಹನ್ನೊಂದನೇ ಅಧ್ಯಾಯವು ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೨

ಶ್ರೀಕೃಷ್ಣಚರಿತೇ

ಶ್ರೀಕೃಷ್ಣಾವತಾರ—ದೇವಾಂಶ ಅವತರಣ

ಈ ಹನ್ನೆರಡನೇ ಅಧ್ಯಾಯದಲ್ಲಿ ಸ್ವಾಮೀ ಅವತಾರವಾಗೇದೆ. ಶ್ರೀಶ, ದಾವ ಅವತಾರ ಮಾಡಿಧ ಅಂದರೆ, ವಂಶಾವಳಿ ಹೇಳಥಾರೆ. ದೇವಕನೆಂಬ ಗಂಧರ್ವ, ಆಹುಕನೆಂಬ ಯಾದವನ ದೆಸಿಯಿಂದ ಹುಟ್ಟಿದ್ದಾನೆ. ದೇವಕಗೆ ಹದಿಮೂರು ಮಂದಿ ಹೆಣ್ಣುಮಕ್ಕಳು. ಅವರೊಳಗೆ ಹಿರೇಮಗಳು ದೇವಕೀ, ಮುತ್ಯಾ ಆಹುಕ ಸಾಕಿದ್ದ. ಆಹುಕನ ಮಗ ಉಗ್ರಸೇನರಾಯ, ಆತನ ಹೆಂಡತಿಯಲ್ಲಿ ಕಂಸ ಹುಟ್ಟಿದ್ದಾನೆ. ಕಂಸಗೆ ಒಂದು ವಾವೀಲಿ ಸೋದರತ್ತಿ, ಒಂದು ವಾವೀಲಿ ತಂಗಿ ಆಗಬೇಕು. ಕಶ್ಯಪನ ಹೆಂಡತಿ ಅದಿತೀದೇವಿ, ದೇವಕಿಯಾಗಿ ಹುಟ್ಟಿರಲಿಕ್ಕೆ ಅಣ್ಣ ಕಂಸ, ವಸುದೇವಗೆ ಮದುವಿ ಮಾಡಿಕೊಟ್ಟ. ಚತುರಂಗಸೇನ ಯುಕ್ತನಾಗಿ ಮನೀ ತುಂಬಿಸಲಿಕ್ಕೆ ಹೋಗುವಾಗ, ತಂಗೀ ಮನೋಬಯಕೆ ಮಾಡಬೇಕಾಗಿ, ರಥಸಾರಥ್ಯಕರ್ಮ ಮಾಡತಾ ಕೂಡ್ರಲಿಕ್ಕೆ, ಆಕಾಶಮಾರ್ಗದಲ್ಲಿ ಮುಖ್ಯಪ್ರಾಣ-ದೇವರ ಅಶರೀರವಾಣಿ ಆಯಿತು. 'ಈ ದೇವಕೀ ಎಂಟನೇ ಗರ್ಭ ನಿನ್ನ ಮರಣಕ್ಕೆ ಕಾರಣ.' ಈ ರೀತಿ ವಾಯುದೇವರ ಅಶರೀರ ವಚನ ಕೇಳಿ, ಕಂಸ ಬಹಳ ಭಯ ವುಳ್ಳವನಾಗಿ ಖಡ್ಗ ಉಚ್ಚಿ, ಶಿರಚ್ಛೇದನ ಮಾಡೇನೆಂದು ಉದ್ಯುಕ್ತನಾದ. ಇಂಥಾ ಮಹೋತ್ಸವ ಸಂಭ್ರಮಕಾಲದಲ್ಲಿ; ಮುಖ್ಯಪ್ರಾಣ ಏನುಕಾರಣ ವಿಘ್ನ ಆಚರಿಸಿದನು ಎಂದರೆ, ಸ್ವಾಮೀ ಸಂಕಲ್ಪ, ಅಪರಾಧಾನುಸಾರ ದಂಡನಿ ಮಾಡ ಬೇಕು. ಕಂಸನವ್ಯಾಲೆ ಅಪರಾಧ ಹೊರಿಸಬೇಕೆಂದು, ವಧ್ಯಪುರುಷನಿಗೆ ಶ್ರೇಷ್ಠಾಪರಾಧವಾಗಬೇಕಾಗಿ, ಮುಖ್ಯಪ್ರಾಣ ಅಶರೀರವಾಕ್ಯ ನುಡಿದನು. ಪರ-ದೇವತಿ ಶ್ರೀಕೃಷ್ಣಗೆ ಗುರುವಿಲ್ಲ, ದೇವತಿ ಇಲ್ಲ, ಆದರೂ ಲೋಕವಿಡಂಬನಿ ತೋರಸ್ತಾನೆ. ಪ್ರಾಣಿಗಳಿಗೆ ತಾಯಿತಂದೇರು, ಸೋದರವಾವ ಮುಖ್ಯಗುರು. ಸೋದರವಾವ ತನ್ನ ತಾಯಿತಂದೇರ ದ್ರೋಹ ಮಾಡಿದ್ದ. ಆದಕಾರಣ ಸೋದರ-ಪಾವನ್ನ ಕೊಂದು ಲೋಕಕ್ಕೆ ಧರ್ಮ ತೋರಿಸಿದ. ಕಂಸ ತನ್ನ ಜೀವ ಉಳಿಸಿಕೋ ಬೇಕಾಗಿ, ತನ್ನ ಸೈನ್ಯಕ್ಕೆಲ್ಲ ಆಜ್ಞಾಪಿಸಿ ಮುಂದಕ್ಕೆ ಹೋಗಬ್ಯಾಡ್ಹವೆಂದು ಹೇಳಿ, ಆ ಕ್ಷಣವೇ ಖಡ್ಗ ಕೊಂಡು ದೇವಕೀ ತುರುಬು ಹಿಡಿದು ಶಿರಚ್ಛೇದನ ಮಾಡ-ಬೇಕೆಂದು ಪ್ರಯುಕ್ತನಾಗಲಿಕ್ಕೆ, ವಸುದೇವ ಕಂಸಗೆ ಬೇಡಿಕೊಂಡಿದ್ದಾನೆ. 'ಈ ಹೆಂಗಸು ನಿನ್ನ ಮರಣಕ್ಕೆ ಕಾರಣಳಲ್ಲ. ಈಕೀ ಹೊಟ್ಟೀಲಿ ಹುಟ್ಟಿದ ಶಿಶುಗಳ

ನಿನಗೋಸ್ಕರ ಕೊಟ್ಟೇನು' ಎಂದು ಆಡಿದನು. ದೇವರ ಗತಿ ವಿಚಿತ್ರ! ದೇವಕೀ ಮಕ್ಕಳು ಹಡಿಯುದೇ ಇರಬಾರದ್ಯಾಕೆ, ಅಂಥಾ ಕಂಸ ಶೀಘ್ರ ಸಾಯಬಾರದ್ಯಾಕೆ, ಈ ಅಭಿಪ್ರಾಯ ಮನಸ್ಸಿನಲ್ಲಿಟ್ಟು, ಹುಟ್ಟಿದ ಮಕ್ಕಳು ಕೊಟ್ಟೇನು ಎಂದು ಸಮಾಧಾನ ಮಾಡಿ, ಮಹಾಯತ್ನದಿಂದ ಹೆಂಡತಿಯನ್ನು ಉಳಿಸಿಕೊಂಡ. ನುನಿ ತುಂಬಿಸಿಕೊಂಡು ದೇವಕೀ, ದೇವಕೀ ತಂಗಿಯರು ಆರು ಮಂದಿಯನ್ನ ವಸು-ದೇವನೇ ಮದುವಿ ಆಗಿದ್ದಾನೆ.

ದೇವಕೀ ಮದುವಿ ಆಗದಕಿಂತ ಮೊದಲೇ, ಬಾಹ್ಲೀಕಪುತ್ರಿ ಸುರಭಿ ಅವತಾರ, ರೋಹಿಣೀದೇವಿ ಹುಟ್ಯಾಳೆ. ವಸುದೇವ ಮದುವಿ ಮಾಡಿಕೊಂಡಾನೆ. ಕಾಶೀರಾಯನು ಪುತ್ರಿಕಾಪುತ್ರಿ ನ್ಯಾಯದಿಂದ, ತನ್ನ ಮಗಳು ದ್ವಿತಿಯ ಅವತಾರ, ವಸುದೇವಗೆ ಮದುವಿ ಮಾಡಿಕೊಟ್ಟಾನೆ. ಹಾಂಗೂ ಕರವೀರಪಟ್ಟಣದ ಅರಸು, ಕರವೀರರಾಯ ಪುತ್ರಿಕಾಪುತ್ರನ್ಯಾಯದಿಂದ ತನ್ನ ಮಗಳು, ದನೂದೇವಿ ಅವತಾರ, ವಸುದೇವಗೆ ಮದುವಿ ಮಾಡಿಕೊಟ್ಟಾನೆ. ಕಾಶೀರಾಯನ ಮಗಳಲ್ಲಿ ಪೌಂಡ್ರಕ-ವಾಸುದೇವ ಹುಟ್ಟಿದ. ಆತ ಮೊದಲೇ ಅಂಗರಾಯನ ಮಗ, ಪರಮಪಾಪಿ ಹುಟ್ಟಿದ್ದಾನೆ. ಕರವೀರರಾಯನ ಮಗಳಲ್ಲಿ ಧುಂಧುನಾಮ ದೈತ್ಯನು ಸೃಗಾಲ-ವಾಸುದೇವನಾಗಿ ಹುಟ್ಟಿದ್ದಾನೆ. ಪೌಂಡ್ರಕವಾಸುದೇವ, ಸೃಗಾಲವಾಸುದೇವ ಇವ-ರಿಬ್ಬರೂ ವಸುದೇವಗೆ ತಮ್ಮ ತಾಯಂದಿರ ಬಿಟ್ಟುಕೊಟ್ಟು, ದೇವಕೀಗೆ ಹ್ಯಾಂಗೆ ಮದುವಿ ಆದನೆಂದು ವೈರತ್ವ ಮಾಡಹೊಕ್ಕರು. ದೇವಕೀ ತಂಗಿಯರು ಆರು ಮಂದಿಯಲ್ಲಿ ಆರುಮಂದಿ ಮಕ್ಕಳಾದರು. ವೇದವ್ಯಾಸನ ಶಿಷ್ಯರಾಗಿ ವರ ಸಂಪಾದಿಸಿದರು. ದೇವಕೀ ಎಂಟನೇ ಗರ್ಭದಲ್ಲಿ ಶ್ರೀಕೃಷ್ಣ ಅವತಾರ ಮಾಡ್ಯಾನೆ. ದೇವಕೀಗೆ ಮೊದಲು ಹುಟ್ಟಿದ ಆರುಮಂದಿ ಮಕ್ಕಳು ಕಂಸನಿಂದ ಸತ್ತಾರೆ. ಅವರು ದಾರೆಂದರೆ ಮರೀಚಿಋಷಿಯ ಮಕ್ಕಳು. ಆರುಮಂದಿ ತಾವು ಚೆಲುವರೆಂದು, ದೇವಕಋಷಿ ಕಾವುಜ್ವರದಿಂದ ಬಿಳುಪು ಬಡದು ಕೃಶನಾದನೆಂದು, ಮರೀಚಿಯ ಆರುಮಂದಿ ಮಕ್ಕಳು ದೇವಕಗೆ ನಕ್ಕರು. ದೇವಕ ತನಗೆ ನಕ್ಕರೆಂದು, ದೈತ್ಯರ ಮಕ್ಕಳಾಗಿ ಹುಟ್ಟಿರೆಂದು ಶಾಪ ಕೊಟ್ಟನು. ಬ್ರಾಹ್ಮಣನ ಶಾಪ ತತ್ಕಾಲಕ್ಕೇ ತೋರಿತು. ಆ ಕ್ಷಣವೇ ದೇಹತ್ಯಾಗ ಮಾಡಿ, ಕಾಲನೇಮೀ ಹೊಟ್ಟೇಲಿ ಹುಟ್ಟಿ, ಜರಾಮರಣರಹಿತರಾದೇವೆಂದು, ಆರುಮಂದಿ ಬ್ರಹ್ಮರಾಯನ ಕುರಿತು ತಪಸ್ಸು ಮಾಡಿ ವರವು ಸಂಪಾದಿಸಿದರು. ಹಿರಣ್ಯಕಶಪುವಿಗೆ ಸಿಟ್ಟು ಬಂತು. ಹಿರಣ್ಯಕಶಪು ತಾನೇ ವರ, ಶಾಪ ಕೊಡಬೇಕೆಂದು, ಬ್ರಹ್ಮದೇವರ ಕೈಯ ವರವು ಸಂಪಾದಿಸಿರಲಿಕ್ಕೆ, ಕಾಲನೇಮೀ ಮಕ್ಕಳು ನನ್ನ ಹೊರ್ತು ಹ್ಯಾಂಗೆ ವರ ಸಂಪಾದಿಸಿದರು, ಭೂಮೀ ಮ್ಯಾಲೆ ಹುಟ್ಟಿ ತಮ್ಮ ತಂದಿ ಕಾಲನೇಮಿ ಕೈಯ ಮರಣ ಹೊಂದಲೆಂದು ಹಿರಣ್ಯ-ಕಶಪು ಶಾಪ ಕೊಟ್ಟನು.

ಸ್ವಾಮಿ ದುರ್ಗಾದೇವಿಗೆ ಆಜ್ಞಾಪಿಸಿದ. ಬ್ರಹ್ಮದೇವರ ವರ ಸತ್ಯ ಮಾಡ-ಬೇಕು. ಹಿರಣ್ಯಕಶಪುವಿಗೆ ಬ್ರಹ್ಮದೇವರು ವರ ಕೊಟ್ಟಿದ್ದಾನೆ. ದುರ್ಗಾದೇವಿ ಗಂಡನ ಆಜ್ಞೆ ಕೊಂಡಳು. ಕಾಲನೇಮಿ ಮಕ್ಕಳು ಆರುಮಂದಿ ತಮ್ಮ ಮನ ಬಂದಹಾಂಗೆ ತಿರಗತಿಹೋರು. ದುರ್ಗಾದೇವಿಯ ಮಾಯದಿಂದ ಒಂದು ಪರ್ವತದ ಹೊದರೊಳಗೆ ಗಾಢನಿದ್ರೆಯಿಂದ ಮಲಗಿಕೊಂಡರು. ಬ್ರಹ್ಮದೇವರ ವಚನ ಸತ್ಯ ಮಾಡಬೇಕಾಗಿ, ಕಾಲನೇಮಿಯ ಆರುಮಂದಿ ಮಕ್ಕಳನ್ನು ದೇಹವಿಯೋಗ ಮಾಡಿಸಿ, ದೇವಕೀ ಉದರದಲ್ಲಿ ಹುಟ್ಟಿಸಿದಳು. ಕಂಸನಿಂದ ಸತ್ತು ತಮ್ಮ ದೇಹ-ದೊಳಗೆ ಹೊಕ್ಕರು. ಒಂದೇ ಕಾಲದಲ್ಲಿ ಗರ್ಭವಾಸ, ಮರಣದುಃಖವಾಯಿತ್ತು. ಹರಿವಂಶ ಕಥಾ ಹೇಳತಾ ನಿಂದರಿಸಿ, ಇನ್ನು ಆದಿಪರ್ವ ಕಥಾ ಹೇಳಥಾರೆ. ಯಮುನಾ ಭಾಗೀರಥೀ ಸಂಗಮದಂತೆ ಆದಿಪರ್ವಕಥ ಈ ಪ್ರಕಾರ ನಡದದೆ.

ಪಾಂಡುಚಕ್ರವರ್ತಿ ನಾರಾಯಣಾಶ್ರಮದಲ್ಲಿ ತಿಲಕಾನದೀ ಸ್ನಾನಮಾಡಿ, ತನ್ನ ಹೆಂಡಿರು ಕುಂತೀ, ಮಾದ್ರೀ ಇವರ ಭೋಗ ಮಾಡತಾ ಬಹುಕಾಲ ಇರಲಿಕ್ಕೆ, ಋಷಿಗಳೆಲ್ಲ ಸೋಮವಾರ ಅಮಾವಾಸ್ಯ ದಿವ್ಸ ಬ್ರಹ್ಮದೇವರ ದರ್ಶನಕ್ಕೆ ತೆರಳಿದರು. ತಾನೂ ಬಂದೇನೆಂದು ಪಾಂಡುರಾಯ ಮಾತಸಾಡಲಿಕ್ಕೆ, 'ನಿನ್ನಗೆ ಈಗ ಬರಲಿಕ್ಕೆ ಯೋಗ್ಯತ ಇಲ್ಲ. ನಿನ್ನಲ್ಲಿ ದೇವತಾವತಾರ ಮಕ್ಕಳಾಗಬೇಕಾಗೇದೆ. ಪ್ರಾಣಿಗಳಿಗೆ ಮಕ್ಕಳಿಲ್ಲದಿದ್ರೆ ಗತಿ ಇಲ್ಲ' ಎಂದು ಋಷಿಗಳ ಮುಖದಿಂದ ಕೇಳಿ, ಪಾಂಡು-ಚಕ್ರವರ್ತಿ, ಬ್ರಹ್ಮದೇವರ ದರ್ಶನಕ್ಕೆ ಹೋಗದೆ ವಿಮನಸ್ಕನಾಗಿ ನಿಂತನು. ಗಾಂಧಾರೀ ಗರ್ಭಿಣಿ ಆದ ವರ್ತಮಾನ ಕೇಳಿದನು. ಗಾಂಧಾರೀಯಲ್ಲಿ ಮೂಲಕಲಿ, ಇಂದ್ರಜಿತು, ಪ್ರಹಸ್ತ ಮೊದಲಾದವರು ಗರ್ಭದಲ್ಲಿ ನಿಂತರು. ಗಾಂಧಾರೀಗೆ ಮಕ್ಕಳಾದರೂ ತನಗೆ ಮಕ್ಕಳಿಲ್ಲವೆಂದು, ಪಾಂಡುಚಕ್ರವರ್ತಿ ತನ್ನ ಹೆಂಡತಿ ಕುಂತೀ ಕೂಡ ಮಾತನಾಡಿದ. 'ನಿಮ್ಮಂಥ ಹೆಂಡಿರಿದ್ದೂ ನನಗೆ ಮಕ್ಕಳಿಲ್ಲದ್ಹಾಂಗಾಯಿತ್ತು. ಹಾಹಾ! ಅದೃಷ್ಟವೇ! ನಮ್ಮ ದುಷ್ಕರ್ಮ ಏನದೆ! ಈಶಸಂಕಲ್ಪ ಮೀರಲಿಕ್ಕೆ ವಶವಲ್ಲ! ಮಕ್ಕಳಿಲ್ಲದಿದ್ದರೆ ಶುಭಗತಿ ಇಲ್ಲೆಂದು ಋಷಿಗಳು ಹೇಳಥಾರಿ. ನನಗೆ ಮಕ್ಕಳಾಗಬೇಕೆಂಬ ಅಪೇಕ್ಷವದೆ. ನೀನು ಪತಿವ್ರತಾ ಸ್ತ್ರೀ ಇದ್ದಿ. ನನ್ನ ಮನೋ-ಭಯಕೆ ಮಾಡಿಕೊಡುವಂಥ ಗುಣಾಧಿಕರನ್ನು ಕರದು, ಅವರ ಭೋಗ ಮಾಡಿ ನನಗೆ ಮಕ್ಕಳನ್ನು ಪಡದುಕೊಡು.' ಹೀಂಗಂತ ಪಾಂಡುಚಕ್ರವರ್ತಿ ಅನಲಿಕ್ಕೆ, 'ಅಯ್ಯೋ ಅದೃಷ್ಟವೇ! ನಿನ್ನಂಥ ಪತಿ ನಮಗಿದ್ದು ನಿನ್ನ ಭೋಗ ನಮಗಿಲ್ಲ-ಹಾಂಗಾಯಿತ್ತು. ಗಂಡನ ವಚನ ಮೀರಲಿಕ್ಕೆ ವಶವಲ್ಲ' ಎಂದು ಒಳಿತೆಂದು, ಗಂಡನ ಆಜ್ಞೆ ಮಹಾಕಷ್ಟದಿಂದ ಅಂಗೀಕರಿಸಿದಳು. 'ಎಲ್ಹೆ ಮಹರಾಯಾ, ನಿನಗಿಂತ ಗುಣಾಧಿಕ ಪುರುಷರು ದಾರಿದ್ಹಾರೆ? ದೇವತಿಗಳ ಕರಿಯೋ ಸಾಮರ್ಥಿ ನನಗದೆ. ದಾವ ದೇವತಿಯನ್ನ ಕರೀಲಿ ಹೇಳು. ನೀಚಪತಿ ಭೋಗಿಸಿದ ಪಕ್ಷವೇ

① Similar to ⑤ test tube babies.

ದಿವ್ಯಗತಿ ಆಗುವುದಿಲ್ಲ. ಕೃತಯುಗದಲ್ಲಿ ಮನಸ್ಸಿಂದ, ವಚನದಿಂದ, ಕಾಯದಿಂದ ಪರಪುರುಷನ ಇಚ್ಛೆ ಮಾಡತಿದ್ದಿಲ್ಲ. ತಮ್ಮ ಗಂಡಂದಿರ ಕೂಡ ಕಾಮಭೋಗ ಮಾಡಿ ಮನೋಬಯಕೆ ಪೂರ್ಣ ಮಾಡಿಕೊಂಬೋರು. ಅಪ್ಸರಸ್ತ್ರೀಯರಿಗೆ ದೋಷವಿಲ್ಲ. ದೇವತಾಸ್ತ್ರೀಯರಿಗೆ ಒಂದಾನೊಂದು ದೋಷಕಾರಣದಿಂದ ಪರ-ಪುರುಷನ ಭೋಗ ಘಟಿಸ್ತದೆ. ಕಾಮನ ಹೆಂಡತಿ ರತೀದೇವಿ, ಪಂಚದ್ರಾವಿಡೀ ಆಖ್ಯಾನ ಬ್ರಹ್ಮರಾಯನ ಮುಖದಿಂದ ಕೇಳಿ, ವ್ಯಭಿಚಾರಿಣಿ ಅಪ್ಸಂದೆ ಒಬ್ಬ ಸ್ತ್ರೀಯಳಿಗೆ ಐದುಮಂದಿ ಗಂಡಂದಿರೆಂದು ದೊಡ್ಡವರನ್ನ ನೋಡಿ ನಕ್ಕಳು. ಆದಕಾರಣದಿಂದ ಶಂಬರಾಸುರನ ಭೋಗವಾಗೇದೆ. ನೀಚಪುರುಷನ ಭೋಗ ಮಹಾದುಃಖಕರ, ಅನರ್ಥಸಾಧನ ವ್ಯಭಿಚಾರತನವಾಯಿತು. ನೀ ಪತಿ, ನಿನ್ನ ವಚನ ಮೀರಲಿಕ್ಕೆ ವಶವಲ್ಲ. ದಾವ ದೇವತಿಗೆ ಭೋಗಕ್ಕೆ ಕರೀಲಿ ಹೇಳು' ಎನಲಿಕ್ಕೆ, 'ದೊಡ್ಡ ಭೂಪಾಲ ಧರ್ಮಿಷ್ಟನಾಗಬೇಕು, ಪಿತೃಗುಣ ಮಗನಲ್ಲಿರ ಬೇಕು. ಆದಕಾರಣ ಯಮಧರ್ಮನ ಕರಿ' ಎಂದನು. ಆದೇ ವ್ಯಾಳ್ಯಾದಲ್ಲಿ ಕುಂತೀ ಮಂತ್ರ ಜಪಿಸಿ, ಯಮಧರ್ಮನ ಕರಿಯಲಿಕ್ಕೆ, ಆ ಕ್ಷಣವೇ ಯಮಧರ್ಮ ಕುಂತೀ ಭೋಗವಾಡಿ, ಅಲ್ಲಿ ತಾನೇ ಹುಟ್ಟಿದನು.

ಯುಧಿಷ್ಠಿರ ಎಂಬೋ ಮಗ ಕುಂತೀದೇವಿಗೆ ಆದನೆಂದು, ಸುಬಲರಾಯನ ಮಗಳಾದ ಗಾಂಧಾರೀ ಈ ವಾರ್ತೆ ಕೇಳಿ, 'ಇನ್ನೂ ನನಗೆ ಮಕ್ಕಳಾಗಲಿಲ್ಲ. ಈ ಗರ್ಭ ಸುಡಲಿಲ್ಲವೆ! ಎಷ್ಟು ದಿವಸ ಗರ್ಭ ಧರಿಸಿದೆ' ಎಂದು ಈರ್ಷ್ಯದಿಂದ ಒಂದು ಕಲ್ಲಿನಲ್ಲಿ ಗರ್ಭ ಮರ್ದಿಸಿದಳು. ಗರ್ಭ ಪತನವಾಗಿ, ಮಾಂಸದ ಗುಳಿಗಿ ಅಪ್ಪಂದೆ ದಂಡಾಕಾರವಾಗಿ ಭೂಮಿಯಲ್ಲಿ ಬಿತ್ತು. ಅದೇ ಕಾಲದಲ್ಲಿ ವೇದವ್ಯಾಸದೇವರು ಬಂದು, ಸೊಸಿ ಗಾಂಧಾರೀ ಪ್ರಲಾಪ ಕೇಳಿ ಸಮಾಧಾನ ಮಾಡಿ, ಇಷ್ಟೂ ಮಕ್ಕಳ ಮಾಡಥೇನೆಂದು ಉದಕ ಪ್ರೋಕ್ಷಿಸಲಿಕ್ಕೆ, ನೂರು ಹೋಳು ಆದವು. ತುಪ್ಪದ ಕೊಡಗಳ ತರಿಸಿ ಮಾಂಸದ ಗುಳಿಗಿ ಕೊಡದೊಳಗೆ ಹಾಕಿದನು. ಗಾಂಧಾರಿ ಅಭಿಪ್ರಾಯ ತಿಳಿದು, ದುಶ್ಶಲೀ ಎಂಬೋ ಕನ್ನಿಕೆಯಾಗಬೇಕಾಗೇದೆ ಎಂದು, ಒಂದು ಗುಳಿಗಿ ಮತ್ತೊಂದು ಕೊಡದೊಳಗೆ ಹಾಕಿದನು. ಕುಂಭವನ್ನೊಡೆದು ದುರ್ಯೋಧನಾದಿಗಳು ಹುಟ್ಟಿದರು. ಇಂಥಾ ಪಾಪಿಗಳನ್ನು ಏನುಕಾರಣ ಹುಟ್ಟಿಸ-ಬೇಕು, ತಿಪ್ಪೀನ್ಯಾಲೆ ಬಿಷ್ಟಬಾರದಿತ್ತೆ, ನಾಯಿ ನರಿ ತಿನ್ನಲಿಲ್ಲವ್ಯಾಕೆ ಎಂದಲ್ಲ, ಗರ್ಭ ಹುಟ್ಟಲಿಕ್ಕೇ ವಿನಾಶ ಮಾಡಲಾಪ, ಮುಂದೆ ದೇವತಾಕರ್ತವ್ಯವಾಗಬೇಕು, ಪಾಪಿಗಳು ಸಜ್ಜನರ ದ್ರೋಹ ಮಾಡಬೇಕು, ಆದಕಾರಣ ಮೂಲಕಲಿ ದುರ್ಯೋಧನ ಹುಟ್ಟಿದನು. ಅವನಲ್ಲಿ ಮುಖ್ಯಪ್ರಾಣನ ಸನ್ನಿಧಾನವದೆ, ಬಲಾಧಿಕ. ಇಂಥಾ ಮೂಲಕಲಿ ಹುಟ್ಟಲಿಕ್ಕೆ ಕಾರಣವೇನೆಂದರೆ, ಸಮಸ್ತ ದೈತ್ಯರಿಗೆ ಹುಟ್ಟಲಿಕ್ಕೆ ಬ್ರಹ್ಮದೇವರ ಆಜ್ಞವದೆ 'ನಾವು ಎಲ್ಲಿ ಹುಟ್ಟುವ, ದಾರ ಬದಿಯಲ್ಲಿ ಇಹೋಣ'

① ①

ಎಂದು ಕೇಳಲಿಕ್ಕೆ, ದೇವಕಂಟಕನ ಹುಟ್ಟಸ್ತೀನಿ ಎಂದು ಸಮಾಧಾನ ಮಾಡಿ, ಮೂಲಕಲಿಗೆ ಅಪ್ಪಣೆ ಕೊಟ್ಟ. ಮೂಲಕಲಿ ದುರ್ಯೋಧನನಾಗಿ ಹುಟ್ಟಲಿಕ್ಕೆ, ಮರುದಿವಸ ಇಂದ್ರಜಿತನೇ ದುಶ್ಶಾಸನನಾಗಿ ಹುಟ್ಟಿದ್ದಾನೆ. ಮೂರನೇ ದಿವಸ ಅತಿಕಾಯ, ವಿಕರ್ಣನಾಗಿ ಹುಟ್ಟಿದ್ದಾನೆ. ಮಕರಾಕ್ಷನ ಮಗ ಖರನೆಂಬುವ ಚಿತ್ರಸೇನನಾಗಿ ಹುಟ್ಯಾನೆ. ಹೀಂಗೆ ಎಷ್ಟು ಹೇಳುವ, ನೂರು ಮಂದಿ ಹುಟ್ಟಿದರು. ಇನ್ನು ದುಶ್ಶಲಿ ಎಂಬ ಹೆಣ್ಣುಮಗಳು, ಮೃಷಾಭಿಮಾನಿ ಅಸುರಳು ಹುಟ್ಟಿದಳು. ಆ ದುಶ್ಶಲಿಯಲ್ಲಿ ಅಮಾವಾಸ್ಯಾಭಿಮಾನಿ ದೇವತಿ ಇದ್ದಾಳೆ. ದುಶ್ಶಲಿ ಎಂಬಾಕೆ ಮಹಾರುದ್ರನ ಕುರಿತು ತಪಸ್ಸು ಮಾಡಿ, ತನ್ನ ಗಂಡ ಜಯದ್ರಥನ ಕೈಯಿಂದ ಅಭಿಮನ್ಯುವಿನ ಕೊಲ್ಲಿಸಿದ್ದಾಳೆ. ಜಯದ್ರಥ ದಾರು ಎಂದರೆ, ಕಾಲಕೇಯಗಣ ದಾನವನು. ಗಾಂಧಾರಿ ಎರಡು ವರ್ಷ ಗರ್ಭಿಣಿ ಇರಲಿಕ್ಕೆ ಧೃತರಾಷ್ಟ್ರಗೆ ಭೋಗ ಇಲ್ಲದೇ ಹೋಯಿತು. ಆದಕಾರಣ ಕಾಮಭೋಗ ನಿಮಿತ್ತ, ವೈಶ್ಯಕನ್ನಿಕೆ ಮದುವಿ ಮಾಡಿಕೊಂಡು ಕಾಮಭೋಗ ಮಾಡಲಿಕ್ಕೆ, ನೈರುತ್ಯಕೋಣಾಧಿಪತಿಯ ತಮ್ಮ, ನಿರಋತ ಎಂಬಾತ ಮರುತಾಂಶದಿಂದ ಹುಟ್ಟಿದನು. ದುರ್ಯೋಧನ ಹುಟ್ಟಿದ ಮರುದಿವಸ ಯುಯುತ್ಸು (ನಿರಋತ) ಹುಟ್ಟಿದ್ದಾನೆ.

ಪಾಂಡುಚಕ್ರವರ್ತಿಗೆ ಶತಶೃಂಗಪರ್ವತದಲ್ಲಿ, ಧರ್ಮರಾಯನೆಂಬೋ ಮಗ ಹುಟ್ಟಿದನು. ಒಬ್ಬ ಮಗ ಮನೆಗಲ್ಲ, ಒಂದು ಕಣ್ಣು ಕಣ್ಣಲ್ಲ, ಈತ ಧರ್ಮಿಷ್ಟ-ಮಗನಿದ್ದಾನೆ. ಧರ್ಮಸಂರಕ್ಷಣಾರ್ಥ ಬಲವೀರ್ಯ ಮಗನ್ನ ಹಡದುಕೊಡು. ಯಜ್ಞದೊಳಗೆ ಅಶ್ವಮೇಧಯಜ್ಞ ಹ್ಯಾಂಗೆ ದೊಡ್ಡದೋ, ಮನುಷ್ಯದೃಷ್ಟಿಗೆ ಸೂರ್ಯಕಾಂತಿ ಹ್ಯಾಂಗೆ ದೊಡ್ಡದೋ, ನಾಲ್ಕು ವರ್ಣದೊಳಗೆ ಬ್ರಾಹ್ಮಣ ಹ್ಯಾಂಗೆ ದೊಡ್ಡವನೋ, ಹಾಂಗೆ ದೇವತೆಗಳೊಳಗೆ ನಾರಾಯಣ ವಿನಃ ಮಾರುತಿ ದೊಡ್ಡಾತ. ಅಂಥಾ ಮುಖ್ಯಪ್ರಾಣನ ಭೋಗಕ್ಕೆ ಕರೆದು ಬಲವೀರ್ಯ ಮಗನ್ನ ಹಡದುಕೊಡು' ಎಂದನು. ಸಾಕ್ಷಾತ್ ನಾರಾಯಣನ್ನ ಭೋಗಕ್ಕೆ ಕರೀಬಾರದೆ ಎಂದಲ್ಲಿ, ಪಾಂಡು-ಚಕ್ರವರ್ತಿ ವೇದವ್ಯಾಸರೂಪೀ ನಾರಾಯಣನಿಂದ ಹುಟ್ಟಿದ್ದಾನೆ. ನಾರಾಯಣ ಸೊಸೀನ್ನ ಭೋಗಿಸ. 'ವಾಯುದೇವರನ್ನ ಭೋಗಕ್ಕೆ ಕರಿ' ಎಂದು ಪಾಂಡು. ಚಕ್ರವರ್ತಿ ತನ್ನ ಹೆಂಡತಿಗೆ ಆಜ್ಞಾಪಿಸಲಿಕ್ಕೆ, ಗಂಡನ ಆಜ್ಞೆ ಮೀರಲಿಕ್ಕೆ ಬಾರದು. ಕುಂತೀ ದೂರ್ವಾಸ ಕೊಟ್ಟ ಮಂತ್ರಸಾಮರ್ಥ್ಯಿಂದ ವಾಯುದೇವರನ್ನ ಕರೆಯ ಲಿಕ್ಕೆ, ಮಾರುತಿ ಬಂದು ಕುಂತಿಯನ್ನು ಅಪ್ಪಿಕೊಂಡು ಭೋಗಮಾಡಿ, ಅಲ್ಲಿ ತಾನೇ ಹುಟ್ಟಿದನು. ಭೀಮಸೇನನೆಂದು ನಾಮಕರಣ ಮಾಡಿದರು. ಭೀಮಸೇನ ತಾ ಎಂಥಾತ, ಬಲಾಧಿಕ ದೈತ್ಯರ ಕುಂಭಾಳಿಗಳನ್ನೆಲ್ಲ ಖಂಡ್ರಿಸೋವಂಥಾತ. ದೈತ್ಯರ ಹಲ್ಲು ಮುರಿದು ಕೈಲಿ ಕೊಡುವಂಥಾತ. ಇಂಥಾ ಭೀಮಸೇನ ಮಹಾ-ಪರಾಕ್ರಮಿ. ದಾವಾಗಲೂ ಹರಿಯ ವರ ಉಳ್ಳಾತ. ಆದಕಾರಣ ಭೀಮಸೇನ

ನೆಂದು ನಾಮಕರಣ ಮಾಡಿದರು. ಭೀಮಸೇನ ಹುಟ್ಟಲಿಕ್ಕೆ ಭೂಮಿ ಎರಡು ಹೋಳಾಯಿತು. ಕುಂತೀ ತನ್ನ ಮಗನ್ನ ಎತ್ತಿಕೊಂಡು ಪರ್ವತದವ್ಯಾಲೆ ತಿರಗಾಡಲಿಕ್ಕೆ, ಹುಲಿ ಗರ್ಜನಿ ಮಾಡಿತು. ಹೆಣ್ಣುಬಾಲಿ, ವ್ಯಾಘ್ರಗರ್ಜನಿ ಕೇಳಿ, ಕೂಸು ಬಿಟ್ಟಕೊಟ್ಟಳು, ಪರ್ವತ ನೂರು ಹೋಳಾಯಿತು. ಆದಕಾರಣ ಶತಶೃಂಗನಾವು ವಾಯಿತು. ಭೀಮಸೇನ ಹುಟ್ಟಿದ ದಿವಸ ಅಸುರರೆಲ್ಲ ರಕ್ತ ಕಾರಿದರು. ಆನಿ ಕುದರಿಗಳು ರಕ್ತ ಕಾರಿದವು.

ಭೀಮಸೇನ ಹುಟ್ಟಿದ ಎರಡು ತಿಂಗಳಿಗೆ ಬಲರಾಮ ಹುಟ್ಟಿದ್ದಾನೆ. ಬಲರಾಮ ದೇವರು ದೇವಕೀಗರ್ಭದಲ್ಲಿ ಮೂರು ತಿಂಗಳು ನಿಂತಿದ್ದನು. ಸ್ವಾಮಿ ದುರ್ಗಾದೇವಿಗೆ ಆಜ್ಞಾಪಿಸಿದ. ' ದೇವಕೀಗರ್ಭ ಎಳತಂದು ರೋಹಿಣಿಯಲ್ಲಿಡು.' ಗಂಡನ ಆಜ್ಞೆ ಆದವ್ಯಾಲೆ ದುರ್ಗಾದೇವಿ, ಮೂರು ತಿಂಗಳ ಗರ್ಭ ಎಳದುತಂದು ರೋಹಿಣಿಯಲ್ಲಿಟ್ಟಳು. ಏಳು ತಿಂಗಳು ರೋಹಿಣೀಗರ್ಭದಲ್ಲಿದ್ದನು. ಬಲದೇವನನಾವುದಿಂದ ರೋಹಿಣೀಯಲ್ಲಿ ಹುಟ್ಟಿದನು.

ಇನ್ನು ಕೃಷ್ಣಾವತಾರ — ಸ್ವಾಮಿ ಭಕ್ತರ ಜನ್ಮಜರಾದಿ ದೋಷಗಳ ಮರ್ದಿಸುವಂಥಾತ, ಉತ್ಪತ್ತಿನಾಶರಹಿತನಾದರೂ ಜ್ಞಾನಾನಂದ ವೀರ್ಯೌದಾರ್ಯ ಗುಣವುಳ್ಳಂಥ ಜನಾರ್ದನ, ಕ್ಷಣಮಾತ್ರದಲ್ಲಿ ಸ್ಮರಣೆಯಿಂದ ಭಕ್ತರ ಪಾಪ ಪರಿಹರಿಸುವಂಥಾತ, ಶುಕ್ಲಶೋಣಿತಸಂಬಂಧರಹಿತ, ಪ್ರಾಣಿಗಳು ಭ್ರಾಂತಿಜ್ಞಾನದಿಂದ, ಸ್ವಾಮಿ ವಸುದೇವ ದೇವಕೀ ಮಗನೆಂದು ಕರೀಥಾರೆ. ಸ್ವಾಮಿ ಚಿದಾನಂದ-ಸ್ನೇಹದಿಂದ ದೇವಕೀ ಉದರದಲ್ಲಿ ಏಳು ತಿಂಗಳು ನಿಂತು, ಎಂಟನೇ ತಿಂಗಳಲ್ಲಿ ವ್ಯಕ್ತನಾದ. ದುರ್ಗಾದೇವಿ ಯಶೋದಾದೇವಿಯಲ್ಲಿ ವ್ಯಕ್ತಳಾದಳು. ಆಕೀನೂ ಎಂಟನೇ ತಿಂಗಳಲ್ಲಿ ವ್ಯಕ್ತಳಾದಳು. ಸ್ವಾಮೀ ಅವತಾರ, ಕಂಭದಿಂದ ಹ್ಯಾಂಗೆ ವ್ಯಕ್ತನಾದನೋ, ಹಾಂಗೆ ದೇವಕೀರೂಪವಾದ ಕಂಭದಲ್ಲಿ ವ್ಯಕ್ತನಾದನು. ಸ್ವಾಮೀ ಅವತಾರಕಾಲದಲ್ಲಿ ಚತುರ್ಭುಜಗಳಲ್ಲಿ ಶಂಖ, ಚಕ್ರ, ಗದಾ ಮೊದಲಾದ ಆಯುಧಗಳ ಧರಿಸಿದ್ದಾನೆ. ಅನಂತ ಸೂರ್ಯಕಾಂತಿಯೋಪಾದಿ ಕಿರೀಟ ಇಟ್ಟಿದ್ದಾನೆ. ಕರ್ಣಾಭರಣ ಇಟ್ಟಾನೆ, ಪೀತಾಂಬರ ಉಟ್ಯಾನೆ, ವೈಜಯಂತಿಮಾಲಿ ಹಾಕಿ-ಕೊಂಡಿದ್ದಾನೆ. ಇಂಥಾ ಸ್ವಾಮಿ ದೇವಕೀ ಉದರದಲ್ಲಿ ವ್ಯಕ್ತನಾಗಥಾನೆಂದು, ಬ್ರಹ್ಮರುದ್ರಾದಿ ದೇವತೆಗಳು ಮೊದಲೇ ಬಂದು ಗರ್ಭಸ್ತುತಿ ಮಾಡಿಹೋಗಿದ್ದಾರೆ. ಇಂಥಾ ಸ್ವಾಮಿಯನ್ನು ಕಂಡು ವಸುದೇವ ದೇವಕೀ ಸ್ತೋತ್ರ ಮಾಡಿದರು. ಸ್ವಾಮಿ ಅವರ ಕೂಡ ಮಾತನಾಡಿದ. 'ನನ್ನ, ನಂದಗೋಪನ ಮನಿಗೆ ಕರಕೊಂಡು ಹೋಗು ' ಎನಲಿಕ್ಕೆ, ದ್ವಿಭುಜನಾದ. ಅರ್ಧರಾತ್ರೀಲಿ ಸ್ವಾಮಿಯನ್ನು ಕೊಂಡು-ಹೋಗಲಿಕ್ಕೆ ಸಂಕಲಿಗಳು ಕಡದುಬಿದ್ದವು. ಕಾರಾಗೃಹದ ದೂತರಿಗೆ ಗಾಢನಿದ್ರಿ ಕವಿಸಿದ. ಅವರು ಮಲಗಿದರು. ಬಾಗಿಲ ಬೀಗಮುದ್ರಿಗಳು ತಮ್ಮಿಂದ ತಾವೇ

ತೆಗೆದುಕೊಂಡವು. ಸ್ವಾಮಿಯನ್ನು ಒಯ್ಯುವಾಗ ತುಂತುರು ಹನಿಗಳು ಬೀಳಥವೆ. ಶೇಷ, ತುಂತುರಹನಿ ಸ್ವಾಮಿ ಮ್ಯಾಲೆ ಬೀಳದಹಾಂಗೆ ಹೆಡಿಯಿಂದ ಛತ್ರ ಹಿಡಿದಿಹ. ಯಮುನಾ ಎರಡು ಥಂಡ ಸೂಸಿ ಹರೀತಿಹೋಳು. ರಾಮಾವತಾರದಲ್ಲಿ ತನ್ನ ಗಂಡ ಸಮುದ್ರಗೆ ಬಹಳ ಕ್ಲೇಶಾವಸ್ಥ ಆಗೇದೆ. ಅದನ್ನೆಲ್ಲ ತಾ ಬಲ್ಲಳು. ಪರ-ದೇವತಿ ಬಂದನೆಂದು ಮಾರ್ಗ ಕೊಟ್ಟಳು. ವಸುದೇವ ಶ್ರೀಕೃಷ್ಣನ್ನ ನಂದಗೋಪನ ಮನಿಯಲ್ಲಿಟ್ಟು, ಅಲ್ಲಿ ಹುಟ್ಟಿದಂಥ ಹೆಣ್ಣುಮಗಳನ್ನ ಕೊಂಡು ಕಾರಾಗೃಹದ ಮನಿಗೆ ಬಂದು, ಕಾಲಿಗೆ ಸಂಕಲಿಗಳು ಹಾಕಿಕೊಂಡು ಕುಳಿತಿರಲಿಕ್ಕೆ, ಹೆಣ್ಣು ಕೂಸು ಅಳಹೊಕ್ಕಿತು. ದೂತರು ಕಂಸಗೆ ವಾರ್ತಿ ಕೊಂಡುಹೋದರು. ದೇವಕೀ ಹಡದ ವಾರ್ತಿ ಕೇಳಿ ಅದೇ ಕ್ಷಣದಲ್ಲಿ, ತನ್ನ ವೈರಿ ಹುಟ್ಟಿದ್ದಾನೆ ಕೊಲ್ಲಬೇಕೆಂದು, ಬಹಳ ಹರ್ಷವುಳ್ಳವನಾಗಿ ಎಡವತ ಮುಗ್ಗತ, ಬಹಳ ವೇಗದಿಂದ ಕಾರಾಗೃಹಕ್ಕೆ ಬಂದು, ಕೂಸಿನ್ನ ಎರಡು ಕಾಲು ಹಿಡದು ಅರಿಬಂಡೀಗೆ ಅಪ್ಪಳಿಸೇನೆಂದು ಉದ್ಯುಕ್ತ ನಾಗಲಿಕ್ಕೆ, ಕೂಸು ಕೈಯಿಂದ ಜಿಗಳಿ ಮ್ಯಾಲಕ್ಕೆ ಹಾರಿ, ಅಷ್ಟಭುಜದಿಂದ ಯುಕ್ತ ವಾಗಿ ಅದ್ಭುತ ಶರೀರ ತೋರಿಸಿ, 'ಎಲೋ ನಿರಪರಾಧಿಯಾದ ನನ್ನ ಕೊಲ್ಲಲಿಕ್ಕೆ ಕಾರಣವೇನು? ಎಲೋ ಮೂರ್ಖ! ನಿನ್ನ ಮೃತ್ಯು, ಸ್ಥಳಾಂತರದಲ್ಲಿ ಬೆಳೀಥಾನೆ. ವ್ಯರ್ಥ ನನ್ನ ಕೊಲ್ಲಬ್ಯಾಡ' ಹೀಂಗೆ ಮಾತನಾಡಿ, ದಾರಿಗೂ ಕಾಣಬಾರದಹಾಂಗೆ ಬಾಲರೂಪಳಾಗಿ, ದೇವಕೀ ಹತ್ತಿರ ಮಲಗಿಕೊಂಡಳು. ದಾರಿಗೂ ಅರಿಕಿಲ್ಲ. ವಸುದೇವ ದೇವಕೀ ದೃಷ್ಟಿಗೆ ಗೋಚರಳಾಗತಿಹೋಳು. ಕಂಸ ಪಶ್ಚಾತ್ತಾಪ ಉಳ್ಳವನಾಗಿ, ಅಕ್ಕಗೆ ಭಾವಗೆ ಸಂಕಲಿ ಕಡಿಸಿ ಬಹಳ ಸಮಾಧಾನ ಮಾಡಿದ. 'ಮನುಷ್ಯರು ಹುಸಿ ಆಡಥಾರೆಂದು ತಿಳೀತದೆ. ದೇವತಿಗಳೂ ಹುಸಿ ಆಡ-ಹೊಕ್ಕರು. ದೇವತಿಗಳ ಮಾತು ವಿಶ್ವಾಸ ಮಾಡಿ, ನಿಮಗೇವೇ ವ್ಯರ್ಥ ಸಂಕಲಿ ಹಾಕಿ ಬಹಳ ನಿರ್ಬಂಧದಲ್ಲಿಟ್ಟಿದ್ದೆ. ನಾ ಬಹಳ ಅಪರಾಧಿ, ನನ್ನ ಅಪರಾಧ ಕ್ಷಮಿಸಿರಿ.' ಹೀಂಗಂತ ಮಾತನಾಡಲಿಕ್ಕೆ, ವಸುದೇವ ದೇವಕೀ ಮಾತನಾಡಥಾರೆ. 'ಎಲೋ ಕಂಸ ನೀನು ಮಾಡಲಿಕ್ಕೆ ಎಷ್ಟರಾತ! ಸುಖದುಃಖ ಕೊಡೋ ಸ್ವಾಮಿ ಬ್ಯಾರಿಹಾನೆ. ನೀನು ನಿಮಿತ್ತ ಮಾತ್ರ.' ಹೀಂಗಂತ ಪರಸ್ಪರ ಸಮಾಧಾನ ಉತ್ತರಗಳು ಆದಮ್ಯಾಲೆ, ವಸುದೇವ ದೇವಕೀ ಇಬ್ಬರೂ ಸುಖದಿಂದಲೇ ಯುಕ್ತ ರಾಗಿ ಇರಹೊಕ್ಕರು.

ಕಂಸ ತನ್ನ ಪ್ರಧಾನಿ ಕರೆಸಿ, 'ಹತ್ತು ದಿವಸದ ಒಳಗಿನ ಕೂಸುಗಳು ಒಳಗೆ, ಹೊರಗೆ ಎಲ್ಲಿ ಅವೆ ಅವಷ್ಟೂ ಕೊಲ್ಲಿಸಿಬಿಡು' ಎಂದು ಆಜ್ಞಾಪಿಸಿ ಕೊಟ್ಟನು. ಕಂಸನ ಪ್ರಧಾನೇರು ಸ್ವಭಾವದಿಂದ ಹಿಂಸಕರು, ಕಲಹಪ್ರಿಯರು. ಆದಕಾರಣ ಅವರು ತೆರಳಿದರು. ಬೆಳಗಾಯಿತು. ಯಶೋದಾದೇವಿ ಹಾಸಿಗಿಮ್ಯಾಲೆ ಸ್ವಾಮಿ ಮಲಗಿಕೊಂಡಾನೆ. ಹೆಣ್ಣುಮಗಳಾದ ಕಾರಣ, ರಾತ್ರೀ ಕಾಲದಲ್ಲಿ ಜಾತಕರ್ಮ

ಮಾಡಿದ್ದಿಲ್ಲ. ದುರ್ಗಾದೇವಿಯ ಮಾಯೆಯಿಂದ ತನಗೆ ಗಂಡಸುಮಗನಾದನೆಂದು ತಿಳಿದರು. ಬ್ರಹ್ಮಾದಿ ದೇವತೆಗಳಿಗೆ ಒಡೆಯನಾದಂಥಾತಗೆ, ಈತ ತನಗೆ ಮಗನೆಂದು ತಿಳಿದರು. ಪುತ್ರೋತ್ಸವ ಬಹಳ ಕಾಲಕ್ಕೆ ಆಯಿತೆಂದು ಲಕ್ಷ ಗೋದಾನ ಕೊಟ್ಟನು. ಹಾಂಗೇ ಸುವರ್ಣಶೃಂಗ, ರೌಪ್ಯಖುರ, ಪಟ್ಟೀದ ವಸ್ತ್ರಗಳು ಹೊದಿಸಿ, ಕರಸೋ ಪಾತ್ರಿ ಸಹವಾಗಿ, ಯಥೇಷ್ಟ ದಕ್ಷಿಣಿ ಸಹವಾಗಿ ಗೋದಾನವನ್ನೂ ಕೊಟ್ಟನು. ಇದರ ಹೊರ್ತು ಯಥೇಷ್ಟ ಸುವರ್ಣ, ವಸ್ತ್ರಾಭರಣ, ವಿತ್ತ, ಶಾಠ್ಯ ಮಾಡದೆ ಅಪಾರ ದ್ರವ್ಯದಾನ ಬ್ರಾಹ್ಮಣರಿಗೆ ಕೊಟ್ಟನು. ನಂದಗೋಪಗೆ ಪುತ್ರೋತ್ಸವವಾಯಿತೆಂದು ಸಮಸ್ತ ಗೋಪಿಕಾಸ್ತ್ರೀಯರೂ ಕೇಳಿ, ನಂದಗೋಪಗೆ, ಯಶೋದಾದೇವಿಗೆ, ದೊಡ್ಡ ಜಾತಿ ಉಡುಗೊರಿ, ಉತ್ಸಾಹ, ಆಭರಣಗಳು ತಂದು-ಕೊಟ್ಟು ಭೆಟ್ಟಿ ತೆಗೆದುಕೊಂಡರು. ನಂದಗೋಪನ ಕೈಯ ಅಪ್ಪಣಿ ತೆಗೆದು-ಕೊಂಡರು. ಇದಷ್ಟೂ ಬೃಹದ್ವನದಲ್ಲಿ ಆಗಲಿಲ್ಲ.

ನಂದಗೋಪ, ಆರಸಗೆ ವರ್ಷದ ಕಪ್ಪ ಕೊಡಬೇಕಾಗಿ ಗೋಪಾಲಕರ ಕೊಂಡು ಹೆಂಡತಿಯಿಂದ ಯುಕ್ತನಾಗಿ ಹೋಗತಾ ಇರಲಾಗಿ, ಮಾರ್ಗದಲ್ಲಿ ಯಮುನಾ ತೀರದಲ್ಲಿ ಹೆಂಡತಿ ಪ್ರಸೂತಳಾದಳು. ನಂದಗೋಪ ತನ್ನ ಹೆಂಡತೀ ಹಡದ ಮ್ಯಾಲೆ ಹೋಗಬಾರದೆಂಬೋದರಿಂದ, ಮೂವತ್ತು ದಿವಸ ಅಲ್ಲೇ ಕಳದು, ವರ್ಷದ ಕಪ್ಪ ಕೊಂಡು ಕಂಸನ ಭೆಟ್ಟಿಗೆ ಹೋಗಿ ದ್ರವ್ಯ ಕೊಟ್ಟು, ಕೆಲವು ದಿವಸ ಅಲ್ಲೇ ವಾಸವಾಡಿಕೊಂಡು ಇರಲಿಕ್ಕೆ, ವಸುದೇವ ನಂದಗೋಪಗೆ ಭೆಟ್ಟಿ ಆಗಿ, 'ಇಲ್ಲಿ ಏನುಕಾರಣ ಇದ್ದಿ. ನಿನ್ನ ಸ್ಥಳಕ್ಕೆ ಹೋಗು. ಇಲ್ಲಿ ಉತ್ಪಾತಗಳು ಬಹಳ ಆಗತವೆ. ಅಲಕ್ಷ್ಯರಹಿತನಾಗ ಶೀಘ್ರ ಹೋಗು.' ಹೀಂಗಂತ ಮಾತನಾಡಲಿಕ್ಕೆ, ನಂದಗೋಪ ಇದ್ದಂಥ ಗೋರಸ ವಸುದೇವಗೆ ಕೊಟ್ಟು, ವಸುದೇವನ ಅಪ್ಪಣಿ ತೆಗೆದುಕೊಂಡು, ರಾತ್ರೀಲಿ ಗೋಕುಲಕ್ಕೆ ತೆರಳಿದನು.

ನಂದಗೋಪ ಹೋಗದಕಿಂತ ಮೊದಲೆ, ಪೂತನೀ ಯಶೋದಾದೇವಿಯ ಸಮೀಪಕ್ಕೆ ಬಂದಳು. ಗೋಪಿಕಾಸ್ತ್ರೀಯರ ವೇಷ ಧರಿಸಿದ್ದಾಳಿ. 'ಯಶೋದಾ-ದೇವಿಗೆ ನಿದ್ರಿ ಬಂದಿಹೋದು. ಮ್ಯಾಲೆ ದುರ್ಗಾದೇವಿಯಿಂದ ಮೋಹಿತಳಾಗಿ ರಾಕ್ಷಸೀಮಾಯವರಿಯದೆ, ಕೂಸಿನ ಕೊಂಬಾಗ ಸುಮ್ಮನೆ ಇದ್ದಳು. ಪೂತನೀ ಕೂಸಿಗೆ ಮೊಲಿ ಕೊಡಲಿಕ್ಕೆ, ದುಷ್ಟಜನರ ಮರ್ದಿಸುವಂಥಾ ಸ್ವಾಮಿ ರೋಷದಿಂದ ಮೊಲಿ ಹೀರಲಿಕ್ಕೆ, ಒಂದು ಯೋಜನವರಿ ಮೂಲರೂಪಳಾಗಿ ಬಿದ್ದಳು. ಅಷ್ಟ-ರೊಳಗೆ ನಂದಗೋಪ ಬಂದು ಬಹಳ ಆಶ್ಚರ್ಯ ಕಂಡು, ವಸುದೇವನ ಮಾತು ನೆನಸಿದನು. ಪೂತನೀ ದಾರೆಂದರೆ, ರಾಮಾವತಾರದಲ್ಲಿ ತಾಟಕಿ, ಊರ್ವಶೀ ಆವೇಶದಿಂದ ಪೂತನೀ ಆಗಿ ಹುಟ್ಟಿದಳು. ಊರ್ವಶೀಗೆ ಶಾಪವಾಗಲು ಕಾರಣ-ವೇನೆಂದರೆ ಊರ್ವಶೀ ಕುಬೇರನ ಭೋಗ ಮಾಡಬೇಕು, ತುಂಬುರುನೆಂಬೋ

ಗಂಧರ್ವನ ಭೋಗ ಮಾಡಿದಳು. ಆದಕಾರಣ ರಾಕ್ಷಸೀ ಆಗೆಂದು ಶಾಪವಾಗಿತ್ತು. ಕೃಷ್ಣನ ಸ್ಪರ್ಶವಾಗಲಿಕ್ಕೆ ಊರ್ವಶೀಗೆ ಸ್ವರ್ಗವಾಯಿತು. ಪೂತನೀ ಕೃಷ್ಣನ ಅವಜ್ಞೆ ಮಾಡಿದಕಾರಣ ನರಕಕ್ಕೆ ಹೋಗಿ ಬಿದ್ದಳು. ನರಕದುಃಖ ಉಂಡು ಕ್ರಮದಿಂದ ತಮಸ್ಸಿಗೆ ಹೋಗಿ ಬಿದ್ದಾಳು. ಯೋಜನವರಿ ಶರೀರ ಬಿದ್ದದ್ದು ಸುಡಲಿಕ್ಕೆ ವಶವಲ್ಲ. ಕೊಡಲೀಲಿ ತುಣಕ ಮಾಡಿ ಸುಡಲಿಕ್ಕೆ ಕೃಷ್ಣಾಗರಪರಿಮಳ ಹೊರಟಿತು.

ಅನಂತರ ನಾಲ್ಕನೇ ತಿಂಗಳಲ್ಲಿ ಉಷಃಕ್ರಮನಿಷ್ಕ್ರಮಣವಾಯಿತು.* ಅದೇ ದಿನ ಜನ್ಮನಕ್ಷತ್ರ ರೋಹಿಣೀ ಪ್ರಯುಕ್ತ, ಗೋಪಿಕಾಸ್ತ್ರೀಯರ ಕೂಡಿ ಭಂಡೀ-ಮ್ಯಾಲೆ ಏರಿಕೊಂಡು, ಮಹೋತ್ಸಾಹದಿಂದ ಯಮುನಾತೀರಕ್ಕೆ ಬಂದರು. ಭಂಡಿಗಳಿಂದೇ ನ್ಯಾರಳು ಮಾಡಿಕೊಂಡು ಕೃಷ್ಣನ ಮಲಗಿಸಿ, ಬ್ರಾಹ್ಮಣರ ಭೋಜನಕ್ಕೆ ಸ್ವಯಂಪಾಕಕ್ಕೆ ಯಶೋದಾದೇವಿ ತೊಡಗಿದಳು. ಭಂಡಿಯೊಳಗೆ ಶಕಟಾಕ್ಷ ದಾರಿಗೂ ತಿಳೀಧಾಂಗೆ ಬಂದಿರಲಿಕ್ಕೆ, ಕೂಸು ಹ್ಯಾಂಗೆ ಅಳತದೆ ಹಾಂಗೆ ಬಾಲಲೀಲದಿಂದ, ಕೃಷ್ಣ ಅತ್ತಹಾಂಗೆ ತೋರಿಸಿದನು. ಬ್ರಾಹ್ಮಣರ ಭೋಜನದ ಗಡಿಬಿಡಿಯಿಂದ ಕೂಸಿನ ಅಳೋಣ ದಾರೂ ಕೇಳಲಿಲ್ಲ. ಸ್ವಾಮಿ ತನ್ನ ಎಳೇಕಾಲು ಮ್ಯಾಲೆ ಈಡ್ಯಾಡಲಿಕ್ಕೆ ಶಕಟಾಸುರ, ಸ್ವಾಮೀ ಪಾದಪೆಟ್ಟಿನಿಂದ ಸತ್ತುಹೋದ. ಭಂಡಿ ಮುರದು, ಭಂಡೀಮ್ಯಾಲಿನ ಹಾಲು, ತುಪ್ಪ, ಬೆಣ್ಣೆ ಮೊದಲಾದ ಗೋರಸ ಗಳು ಗಡಗಿ ಒಡದು, ಕರ್ದಮವಾಗಿ ಹಳ್ಳ ಹರಿಯಿತು. ಕೂಸಿಗೆ ಏನಾಯಿತೋ ಎಂದು ಯಶೋದಾದೇವಿ ಎದಿ ಬಾಯಿ ಕುಟ್ಟಿಕೋತ, ಕೈಬೆಟ್ಟು ಮುರಕೋತ ಬರಲಿಕ್ಕೆ, ಕೂಸಿನ ಧ್ವನಿ ಕೇಳಿ ಎತ್ತಿಕೊಂಡು, ನಮ್ಮ ಬಾಲಕಗೆ ಗ್ರಹ ಸೋಕ-ಲಿಲ್ಲವಲ್ಲ ಎಂದು, ಬ್ರಾಹ್ಮಣರ ಕೈಯ ಮಂತ್ರೋಕ್ತ ಮಾರ್ಜನ ಮಾಡಿಸಿ ಯಂತ್ರ ಕಟ್ಟಿಸಿದಳು. ನಂದಗೋಪ ತನ್ನ ಹೆಂಡತೀಮ್ಯಾಲೆ ಬಹಳ ಸಿಟ್ಟುಮಾಡಿದ. 'ಕೂಸಿನ ಪರಾಮರಕಿ ತೆಗೆದುಕೊಳ್ಳದೆ, ಹೀಂಗೆ ಮೈಮರೆತು ಇರಥಾರೇ' ಎಂದು ಜಬರಿಸಿಕೊಂಡ. ದೈವೇಚ್ಛೆಯಿಂದ ಬಾಲಕಗೆ ಕ್ಷೇಮವಾಯಿತು ಎಂದು ಸಂತುಷ್ಟ-ನಾದ. ಈ ಪ್ರಕಾರ ಅದ್ಭುತ ಚರಿತ್ರ ಉಳ್ಳಂಥ ಶ್ರೀಕೃಷ್ಣ, ಬಾಲಲೀಲ ತೋರಿಸಿ ಗೋಪಾಲಕರಿಗೆ ತುಷ್ಟಿಬಡಿಸಿದ. ಲೋಕರೀತಿಯಲ್ಲಿ ಬೆಳೀಥಾನೆಂಬೋ ಹಾಂಗೆ ತೋರಸ್ತಿಹ, ಸ್ವಾಮಿಗೆ ವೃದ್ಧಿಯಿಲ್ಲ ಹ್ರಾಸವಿಲ್ಲ. ಇನ್ನು ಹರಿವಂಶಕಥ ನಿಂದರಿಸಿ, ಭಾರತಕಥ ಹೇಳಥಾರೆ.

ಪಾಂಡುಚಕ್ರವರ್ತಿ ಹೆಂಡತಿ ಕೂಡ ಮಾತನಾಡಿದ. 'ಸಿಂಹಾಸನಪದವಿ ಆಳಲಿಕ್ಕೆ ಧರ್ಮಿಷ್ಟವಾಗನಾದ. ಪರಚಕ್ರರ ಕೊಂದು ದಿಗ್ವಿಜಯ ಮಾಡಲಿಕ್ಕೆ

* ಪ್ರಥಮಜಲ್ಲಿ ಸೋದರಮಾವಾದಿಗಳ ಮನೆಗೆ ಮಗುವನ್ನು ಕರದುಕೊಂಡುಹೋಗುವ ಸಂಪ್ರದಾಯ.

ಬಲಾಢ್ಯವಮಗನಾದ. ಅರಸಿನ ಸಂರಕ್ಷಿಸಲಿಕ್ಕೆ ಇನ್ನೊಬ್ಬ ಮಗ ಬೇಕು. ಆದಕಾರಣ ಬಲಿಷ್ಠದೇವತಿಯನ್ನ ಕರದು, ಬಲವೀರ್ಯವಮಗನ್ನ ಹಡದುಕೊಡು. ಶೇಷನ ಕರೀಬೇಕಾದರೆ ಶೇಷ, ನಿಮ್ಮ ಅಣ್ಣನ ಮಗ ಬಲರಾಮನಾಗಿ ಹುಟ್ಟ್ಯಿದ್ದಾನೆ. ಇನ್ನು ಮತ್ತೆ ಶೇಷನ್ನ ಕರೀಬಾರದು. ಗರುಡಗೆ ಅಂಶದಿಂದ ಹುಟ್ಟಬಾರದೆಂದು ನಾರಾಯಣನ ಆಜ್ಞೆ ಅದೆ. ಶಂಕರನ ಕರೆಯಬೇಕಾದರೆ ಶಂಕರ ಮಹಾಕೋಪಾವಿಷ್ಟ. ಪ್ರಜಾಪಾಲನ ಮಾಡುವಲ್ಲಿ ದಯಾಳುಬುದ್ಧಿಯವನಲ್ಲ. ಸ್ವರ್ಗಾಧಿಪತಿ ದೇವೇಂದ್ರನ ಕರಿ' ಎನಲಿಕ್ಕೆ, ಗಂಡನ ವಾಕ್ಯ ಮೀರಲಿಕ್ಕೆ ಬಾರದು, ಆದಕಾರಣ ದೂರ್ವಾಸ ಕೊಟ್ಟ ಮಂತ್ರ ಜಪಿಸಲಿಕ್ಕೆ, ದೇವತಿಗಳಿಗೆ ಅರಸಾದಂಥ ದೇವೇಂದ್ರ ಭೋಗಕ್ಕೆ ಬಂದು ಕುಂತೀಕೂಡ ಭೋಗ ಮಾಡಿದನು. ಆಗ ನರಾವೇಶದಿಂದ ಅರ್ಜುನ ಹುಟ್ಟಿದನು. ಅರ್ಜುನನು ಮಹಾ ಬಲವಂತ, ಶಸ್ತ್ರಾಸ್ತ್ರವಿದ್ಯದಲ್ಲಿ ಮಹಾಕುಶಲ. ಹೀಂಗೆ ಮೂರುಮಂದಿ ಮಕ್ಕಳು ಕುಂತೀ ಪಡೆದಳು. ಪಾಂಡುಚಕ್ರವರ್ತಿ ವಿಷಯದಲ್ಲಿ ಬಹಳ ಆಸಕ್ತನಾಗಿ, ಮುದ್ದಾಡುವಂಥಾವನಾಗಿ, ಮತ್ತೆ ಮಗನ್ನ ಹಡದುಕೊಡು ಎನಲಿಕ್ಕೆ, ಕುಂತೀ ಮಾತನಾಡಥಾಳೆ. 'ಹೇ ರಾಜನ್, ವಿಷಯಾಸಕ್ತಿ ಮಹಾ ಹಾನಿ. ನೀ ಪತಿಯೆಂದು ಮೂರು ಮಾತು ನಡೆಸಿದೆ. ಮಕ್ಕಳವ್ಯಾಲಿನ ಅಪೇಕ್ಷದಿಂದ ಪರಪುರುಷರ ಭೋಗಕ್ಕೆ ಕರೆದರೆ, ವ್ಯಭಿಚಾರಿ ಎಂದು ಪ್ರಾಣಿಗಳು ನಕ್ಕಾರು. ಈ ಮಾತು ದೇವತಿಗಳಿಗೂ ಅಪ್ರಿಯ.' ಹೀಂಗಂತ ಗಂಡಗೆ ಬುದ್ಧಿ ಹೇಳಿ ಪುನಃ ಮಕ್ಕಳನ್ನು ಹಡಿಯಲಿಲ್ಲ.

ಕೃಷ್ಣ ಬಲರಾಮರ ಅವತಾರ ಹಾಂಗೂ ಪಾಂಡವರ ಅವತಾರ ಆಗದಕಿಂತ ಮೊದಲೆ, ಬೃಹಸ್ಪತಿ, ನಾರಾಯಣನ ಸೇವಿ ಮಾಡಬೇಕಾಗಿ, ಉಪಗವನೆಂಬೋ ಯಾದವನಲ್ಲಿ ಉದ್ಧವನಾಗಿ ಹುಟ್ಟಿದ್ದಾನೆ. ಮೊದಲಿಗೇ ದ್ರೋಣನಾಗಿ ಹುಟ್ಟಿರಲಿಕ್ಕೆ, ಮತ್ತೇನುಕಾರಣ ಉದ್ಧವನಾಗಿ ಹುಟ್ಟಬೇಕೆಂದಲ್ಲಿ, ದ್ರೋಣ ಕೌರವನ ಪಕ್ಷಪಾತಿಯಾದಮ್ಯಾಲೆ, ಸ್ವಾಮಿ ತನ್ನ ಕೈಯ ಸೇವಿ ತೆಗೆದುಕೊಳ್ಳದೆ ಹೋದಾನೆಂದು ಬೃಹಸ್ಪತಿ, ಉದ್ಧವನಾಗಿ ಹುಟ್ಟಿದ್ದಾನೆ. ಉದ್ಧವ ಮೂಲ-ಬೃಹಸ್ಪತಿ ಕೈಯಿಂದ ಅನೇಕ ವಿದ್ಯ ಓದಿಕೊಂಡನು. ಉದ್ಧವ ಹುಟ್ಟಿದ ಮೂರು ವರುಷಕ್ಕೆ ಸಾತ್ಯಕಿ ಹುಟ್ಟಿದ. ಅದೇ ದಿವಸ ಚೇಕಿತಾನರಾಯ ಹುಟ್ಟಿದನು ಚೇಕಿತಾನರಾಯ ದಾರು ಎಂದರೆ, ನಾಲ್ವತ್ತೊಂಭತ್ತು ಮರುತರೊಳಗೆ ಪ್ರತಿಭ ನೆಂಬೋ ಮರುತ, ಕೃಷ್ಣನ ಸೇವಿ ಮಾಡಬೇಕಾಗಿ ಯಾದವನಾಗಿ ಹುಟ್ಟಿದನು. ಅದೇ ದಿವಸ ಕೃತವರ್ಮ ಹುಟ್ಟಿದ. ಹೀಂಗೆ ಏಕಕಾಲದಲ್ಲಿ ಸಾತ್ಯಕಿ, ಕೃತವರ್ಮ, ಚೇಕಿತಾನರಾಯ ಈ ಮೂರು ಮಂದಿ ಒಂದೇ ದಿವಸ ಹುಟ್ಟಿದರು. ಈ ಮೂರು ಮಂದಿ ಹುಟ್ಟಿದ ಮೂರು ವರುಷಕ್ಕೆ ಧರ್ಮರಾಯ ಹುಟ್ಟಿದನು. ಧರ್ಮರಾಯ ಹುಟ್ಟಿದ ವರುಷಕ್ಕೆ ದ್ರೋಣಪುತ್ರ ಅಶ್ವತ್ಥಾಮ, ರುದ್ರನ ಅವತಾರನಾಗಿ ಹುಟ್ಟಿ,

ಕುದರಿ ಖ್ಯಾಕರಿಸಿಧಾಂಗೆ ಧ್ವನಿ ಮಾಡಲಿಕ್ಕೆ ಅಶ್ವತ್ಥಾಮನೆಂದು ನಾಮಕರಣ ವಾಯಿತು. ಅಶ್ವತ್ಥಾಮ ಹುಟ್ಟಿದ ನಾಲ್ಕನೇ ದಿವಸಕ್ಕೆ ದುರ್ಯೋಧನ ಹುಟ್ಟಿದ. ಮರುದಿವಸ ಭೀಮಸೇನ ಉದ್ಭವಿಸಿದ. ಭೀಮಸೇನ ಹುಟ್ಟಿ ತಿಂಗಳಾದಮ್ಯಾಲೆ ರೋಹಿಣೀದೇವಿಯಲ್ಲಿ ಬಲರಾಮ ಹುಟ್ಟಿದ್ದಾನೆ. ರಾಮಾವತಾರದಲ್ಲಿ ಲಕ್ಷ್ಮಣನಾಗಿ ಸ್ವಾಮೀ ಸೇವಿ ಸಾಲದ ಕಾರಣ, ಸ್ವಾಮೀ ಸೇವಿಗೆ ಕೃಷ್ಣಾವತಾರದಲ್ಲಿ ಬಲರಾಮ ನಾದನು. ದೇವಕೀ ಉದರದಲ್ಲಿ ಬಲರಾಮ ಮೂರು ತಿಂಗಳು ಇದ್ದ. ದೇವಕೀ ಎಂಟನೇ ಗರ್ಭವು ತನಗೆ ಮರಣಕ್ಕೆ ಕಾರಣವೆಂದು ಕಂಸ ಬಹಳ ಭಯವುಳ್ಳವನಾಗಿ, ವಸುದೇವನ ಹೆಂಡತೇರನ್ನ ದೇಶಾಂತರಕ್ಕೆ ಅಟ್ಟಿ, ವಸುದೇವ ದೇವಕಿ ಇಬ್ಬರನ್ನ ಸಂಕಲಿ ಹಾಕಿಟ್ಟನು. ರೋಹಿಣೀದೇವಿ ನಂದಗೋಪನ ಮನಿಯಲ್ಲಿದ್ದಳು, ಗೋಕುಲದಲ್ಲಿ ಶುಭ್ರವರ್ಣದಿಂದ ಯುಕ್ತನಾಗಿ, ಶೇಷಾವತಾರನಾದಂಥ ಬಲರಾಮ ಹುಟ್ಟಿದ್ದಾನೆ. ಬಲರಾಮಗೆ ಮೂರು ತಿಂಗಳಾದಮ್ಯಾಲೆ ಕ್ಷರಾಕ್ಷರಚೇತನಕ್ಕೆ ಒಡಿಯ, ಅನಂತವೇದಪ್ರತಿಪಾದ್ಯ, ಉತ್ಪತ್ತಿನಾಶರಹಿತ ಇಂಥಾ ಸ್ವಾಮಿ, ದೇವಕಿಯಲ್ಲಿ ಅವತಾರ ಮಾಡಿದ್ದಾನೆ. ನಾರಾಯಣನೂ ಶೇಷನೂ ತನ್ನ ಮಕ್ಕಳಾಗ. ಬೇಕೆಂದು ವಸುದೇವ ದೇವಕಿಯರು ಬಯಸಿದ್ದರು. ರೋಹಿಣೀದೇವಿ, ಶೇಷ ತನ್ನ ಮಗನಾಗಬೇಕೆಂದು ಪ್ರಾರ್ಥನ ಮಾಡಿದ್ದಳು. ಇದಕಾರಣ ಶೇಷದೇವರು ಮೂರು ತಿಂಗಳು ದೇವಕೀ ಉದರದಲ್ಲಿದ್ದ, ಆಮ್ಯಾಲೆ ರೋಹಿಣೀ ಉದರದಲ್ಲಿ ಏಳು ತಿಂಗಳು ಇದ್ದು, ನಾರಾಯಣನ ಶುಕ್ಲಕೇಶಾವೇಶದಿಂದ ಬಲರಾಮನಾಗಿ ಹುಟ್ಟಿದ. ಕೃಷ್ಣ ಬಲರಾಮರು ನಂದಗೋಪನ ಮನಿಯಲ್ಲಿ ಬಾಲಲೀಲಗಳ ತೋರಸ್ತ ಇರುವಂಥಾವರಾದರು.

ಶಕಟಾಕ್ಷನ ಕೊಂದ ಪರಿಯಂತ ಹೇಳಿದ್ದರಲ್ಲ, ಯಶೋದಾದೇವಿಗೆ ತಾ ಸರ್ವೋತ್ತಮನೆಂದು ತಿಳಿಸಬೇಕಾಗಿ — ತನ್ನ ಮಗನಂತ ತಿಳಿದಿದ್ದಾಳೆ — ತನ್ನ ತಾಯಿಗೆ ಒಮ್ಮಾನೊಮ್ಮಿಗೂ ಸ್ವಚ್ಛಜ್ಞಾನ ಸರ್ವೋತ್ತಮನೆಂದು ತಿಳಿಸಬೇಕಾಗಿ, ಸ್ತನ್ಯಪಾನ ಮಾಡತ ಆಕಳಿಸಲಾಗಿ ಸ್ವಾಮೀ ಬಾಯೊಳಗೆ ಹದಿನಾಲ್ಕು ಲೋಕಗಳ ಕಂಡಳು. ಬಾಯೊಳಗೆ ಪಂಚಮಹಾಭೂತ, ಮನಸ್ಸು, ಅಹಂಕಾರತತ್ತ್ವ ಮಹತ್ತತ್ತ್ವ ಜಡಪ್ರಕೃತಿ ರುದ್ರಾದಿ ದೇವತೆಗಳ ಕಂಡಳು. ಮನುಷ್ಯ ಸ್ಥಾವರ ಜಂಗಮ ಪ್ರಾಣಿಗಳನ್ನೆಲ್ಲ — ಅದ್ಭುತ ಚರಿತ್ರ ಕಂಡು — ದೃಷ್ಟೀಲಿ ನೋಡಲಾರದೆ ಬಹಳ ಅಂಜಿದಳು. ಸ್ವಾಮಿ ಅಷ್ಟರೊಳಗೆ ತನ್ನ ರೂಪ ಆಚ್ಛಾದಿಸಿದ. ಜ್ಞಾನಾನಂದ ಶರೀರವುಳ್ಳಂಥಾತ ಲೋಕರೀತಿ ತೋರಿಸಬೇಕಾಗಿ, ತನ್ನ ಬಾಯೊಳಗೆ ಬ್ರಹ್ಮಾಂಡ ತೋರಿಸಿದನು. ತರುವಾಯ ಯಶೋದಾದೇವಿ ಕೂಸಿನ್ನ ತನ್ನ ಟೊಂಕದಮ್ಯಾಲೆ ಕೂಡ್ರಿಸಿಕೊಂಡು ಮುದ್ದಾಡಿ, ಅಂಗಳದೊಳಗೆ ತಿರುಗ್ಯಾಡತಿರಲಿಕ್ಕೆ, ಸ್ವಾಮಿ, ಭಾರದಿಂದ ಜಡ ಆಗಹೊಕ್ಕನು. ಸ್ವಾಮೀ ಭಾರ ತಾಳಲಾರದೆ ಕೂಸಿನ್ನ ಅಂಗಳದೊಳಗೆ ಬಿಟ್ಟು ಯಶೋದಾದೇವಿ ಗೃಹಕೃತ್ಯದ ಕೆಲಸಕ್ಕೆ ತೊಡಗಿದಳು.

ತೃಣಾವರ್ತನೆಂಬೋ ದೈತ್ಯ ಸುಂಟರಗಾಳಿ ರೂಪದಿಂದ ಬಂದು ಕೂಸಿನ್ನ ಅಂತರಿಕ್ಷವಮಾರ್ಗದಿಂದ ಹಾರಿಸಿಕೊಂಡು ಹೋದನು. ಆಕಾಶಮಾರ್ಗದಲ್ಲಿ ತೃಣಾವರ್ತ ಹೋಗಥಾನೆ, ಸ್ವಾಮಿ ತನ್ನ ಎರಡು ತೋಳುಗಳಿಂದ ತೃಣಾವರ್ತನ ಹೆಗಲು ಒತ್ತಿದ್ದನು. ಗೋಣು ಒತ್ತತಲೇ ಉಸಿರುಕಟ್ಟಿ ಭೂತಳದವ್ಯಾಲೆ ಸತ್ತುಬಿದ್ದನು. ಸ್ವಾಮಿ ಅವನ ದೇಹದವ್ಯಾಲೆ ಆಡಥಾನೆ. ಸುಂಟರಗಾಳಿಯಿಂದ ಒಬ್ಬರ ಮಾರಿ ಒಬ್ಬರಿಗೆ ಕಾಣಿಸದು. ಕೂಸಿಗೆ ಏನಾಯಿತೋ ಎಂದು ಬಹಳ ದುಃಖಿಬಡಲಿಕ್ಕೆ, ತೃಣಾವರ್ತನ ಆಕಾಶಮಾರ್ಗದಿಂದ ದೊಡ್ಡ ಬಂಡಿಮ್ಯಾಲೆ ಹಾಕಿ ಸಾಯಿಸಕೊಟ್ಟನು. ಸ್ವಾಮಿ ಬಾಲಕತನದಲ್ಲಿ ಪೂತನೀ, ಶಕಟಾಕ್ಷನ್ನ ಕೊಂದುಬಿಟ್ಟನು. ಈ ಪ್ರಕಾರ ಬಾಲಲೀಲಗಳ ತೋರಿಸಿ, ಗೋಪಿಕಾಸ್ತ್ರೀಯರ ಮನಿಗಳಲ್ಲಿ ಕಳವು ಮಾಡಹೊಕ್ಕನು. ಬೆಣ್ಣೆ ಕದ್ದು ತನ್ನ ಒರಿಗಿಯವರಿಗೆ ನೀಡುವ, ಬೆಕ್ಕಿಗೆ ಹಾಕುವ, ಕರುಗಳ ಬಿಡುವ, ಹಾಲುಗಡಿಗಿ ಮೊಸರುಗಡಿಗಿ ಒಡದು ಬಿಸ್ಟುವ. ದೇವರ ಮನಿಯೊಳಗೆ ಶೌಚ ಮಾಡುವ. ಇದನ್ನೆಲ್ಲ ಕಂಡು ಕೆಲವರು ಸಂತೋಷಬಡೋರು. ಅವರಿಗೆಲ್ಲ ಮೋಕ್ಷದಲ್ಲಿ ಅನಂದ ಅಭಿವೃದ್ಧಿ ಆಗೋದು. ಅಸಹ್ಯ ಒಟ್ಟುಕೊಂಡು ನಿನ್ನ ಮಗ ಈ ರೀತಿ ಹಾವಳಿ ಮಾಡಥಾನೆಂದು ಯಶೋದಾದೇವಿಯ ಮುಂದೆ ದಾರು ಹೇಳೋರು ಅವರೆಲ್ಲ, ತಪ್ಪ ಯೋಗ್ಯತಿ ಮೀರಿ ಏನು ಪುಣ್ಯ ಮಾಡಿದ್ದರೂ ಅದೆಲ್ಲ ಹ್ಯಾಸವಾಗೋದು. ಸ್ವಾಮಿ ತಾನು ಆನಂದಪೂರ್ಣ, ಸುಖಿಸಮುದ್ರ, ಕಳವುಮಾಡಿ ಉಪಜೀವನ ಮಾಡಬೇಕಾಗಿಲ್ಲ. ನವನೀತಚೋರನೆಂದು ಲೀಲ ತೋರಿಸಿದನು. ಹರಿವಂಶಕಥ ಹೇಳತ ಸಿಂದರಿಸಿ, ಇನ್ನು ಆದಿಪರ್ವ ಭಾರತಕಥ ಹೇಳಥಾರೆ.

ಶ್ರೀಕೃಷ್ಣ ಶ್ರಾವಣಮಾಸದಲ್ಲಿ ಅವತಾರ ಮಾಡಿದ್ದಾನೆ. ಫಾಲ್ಗುಣಮಾಸದಲ್ಲಿ ಅರ್ಜುನ ಹುಟ್ಟಿದ್ದಾನೆ. ಅರ್ಜುನನಕಿಂತ ಕೃಷ್ಣ ಎಂಟುತಿಂಗಳು ಹಿರಿಯ. ಭಾದ್ರಪದಮಾಸದಲ್ಲ ಸೂರ್ಯ ಬೃಹಸ್ಪತಿ ಸಿಂಹರಾಶಿಯಲ್ಲಿ ಬಂದಿರಲಿಕ್ಕೆ, ಚಾಂದ್ರಮಾನದ ಲೆಖ್ಖದಲ್ಲಿ ಭಾದ್ರಪದಮಾಸದಲ್ಲಿ ಕೃಷ್ಣಾವತಾರವಾಗೇದೆ.

ಇನ್ನು ಮಾದ್ರೀಪುತ್ರರ ಉತ್ಪತ್ತಿ ಹೇಳಥಾರೆ. ಮಾದ್ರೀದೇವಿ ತನಗೆ ಮಕ್ಕಳಿಲ್ಲ ಮಂತ್ರಸಾಮರ್ಥ್ಯ ಇಲ್ಲ, ಅನಪತ್ಯಳಾದ ಕಾರಣ ಗಂಡಗೆ ಬೇಡಿಕೊಂಡಳು. 'ಅಕ್ಕಗೆ ಹೇಳಿ ಮಂತ್ರ ಕೊಡಸು. ನಿನ್ನ ಅನುಗ್ರಹದಿಂದ ದೇವತಿಗಳ ಕರದು ಮಕ್ಕಳ ಹಡದೇನು.' ಹೀಂಗಂತ ಗಂಡಗೆ ಬೇಡಿಕೊಂಡಳು. 'ನಾ ಇದ್ದೂ ನನ್ನ ಹೆಂಡತಿಗೆ ಭೋಗ ಇಲ್ಲದೇ ಹೋಯಿತಲ್ಲ! ಮಕ್ಕಳಿಲ್ಲದೆ ಹೆಣ್ಣುಬಾಲಿ ಎಷ್ಟು ಕಷ್ಟಬಟ್ಟಾಳು ಹಾಹಾ! ಅದೃಷ್ಟವೇ! ನಮ್ಮ ದುಷ್ಕರ್ಮವೇನದೆ!' ಎಂತ ಪಾಂಡುಚಕ್ರವರ್ತಿ ಬಹಳ ಚಿಂತಾಕ್ರಾಂತನಾಗಿ ಕುಂತೀದೇವಿಯ ಕರೆದು, 'ನೀನಂತೂ ಇನ್ನು ಮಕ್ಕಳ ಹಡೇವಲ್ಲಿ. ಮುದ್ದಾಡಿಸಲಿಕ್ಕೆ,' ನನಗೆ ಮಕ್ಕಳು

ಬೇಕಾಗೇದೆ. ಮಾದ್ರಿಗೋಸ್ಕರ ಮಂತ್ರ ಕೊಡು, ಮಕ್ಕಳ ಹಡಿಯಲಿ.' ಹೀಂಗನಲಿಕ್ಕೆ 'ನನಗೆ ಆಕಿಗೆ ಏನು ಪ್ರೀತಿ ಅದೆ? ಮಂತ್ರ ಕೊಡಬೇಕೆಂಬೋ ಹಾಂಗೆ ವಾತ್ಸಲ್ಯ ಆಗೋದಿಲ್ಲ. ನೀನು ಪತಿ, ನಿನ್ನ ಆಜ್ಞೆ ಮೀರಲಿಕ್ಕೆ ಬಾರದು. ನಿನ್ನ ಪ್ರೀತಿಗೋಸ್ಕರ ಮಂತ್ರ ಕೊಟ್ಟೀನು. ಒಬ್ಬ ಮಗನಾಗಲಿ! ಪುನಃ ಅದೇ ಮಂತ್ರದಿಂದ ದೇವತಿಗಳನ್ನ ಕರದರೆ ಬರಬ್ಯಾಡ' ಹೀಂಗಂತ ಮಾತನಾಡಿ, ಶುದ್ಧಳಾಗಿ, ಮಂತ್ರಶುದ್ಧ ಮಾಡಿ, ಮಂತ್ರೋಪದೇಶ ಮಾಡಿದಳು. ಕುಂತೀ ಕೈಯ ಮಂತ್ರೋಪದೇಶ ಕೊಂಡು 'ಒಬ್ಬಗೆ ಕರದರೆ ಒಂದೇ ಮಗನ್ನ ಹಡೀಥೀನಿ. ಇಬ್ಬರು ಮಕ್ಕಳುಳ್ಳಾಕಿ ಹ್ಯಾಂಗೆ ಆದೇನು? ದೇವತಿಗಳಲ್ಲಿ ಅಶ್ವಿನೀದೇವತಿಗಳು ಸರಸ್ಪರ ವಿಯೋಗರಹಿತರು, ಇವರುಗಳಿಗೆ ನಾಮಭೇದವಿಲ್ಲ, ಇವರ ಹೆಂಡತಿಯಾದರೋ ಉಷಾ ಎಂಬಾಕಿ ಒಬ್ಬಾಕಿಯೇ, ಆದಕಾರಣ ಒಂದಾವರ್ತಿ ಮಂತ್ರ-ಜಪದಿಂದ ನನ್ನಲ್ಲಿ ಪುತ್ರ ಸಂಪಾದನ ಮಾಡಥಾರೆ.' ಹೀಂಗೆ ಆಲೋಚನಿ ಮಾಡಿ ಅಶ್ವಿನೀದೇವತಿಗಳನ್ನು ಕರದಳು. ಅಶ್ವಿನೀದೇವತಿಗಳು ಬಂದು ಮಾದ್ರೀ ಭೋಗ ಮಾಡಲಿಕ್ಕೆ ಅವಳಿ-ಜವಳಿ ಮಕ್ಕಳು ಹುಟ್ಟಿದರು. ಪುನಃ ಮಾದ್ರಿ ಪಾಂಡು-ಚಕ್ರವರ್ತಿಯನ್ನು ಬೇಡಿಕೊಂಡಳು. ಪಾಂಡುಚಕ್ರವರ್ತಿ ಚಿಕ್ಕಹೆಂಡತೀ ಮಾತು ಕೇಳಿ ಪುನಃ ಕುಂತಿಯನ್ನು ಬೇಡಿಕೊಂಡನು. 'ಇನ್ನು ಒಂದು ಮಂತ್ರ ಕೊಡು' ಎನಲಿಕ್ಕೆ 'ನನ್ನ ಆಜ್ಞೆದ ಹೊರ್ತು ಇಬ್ಬರು ಮಕ್ಕಳ ಹಡದಾಳಿ. ಮಹಾ ಕಪಟಿ ಇದ್ದಾಳಿ, ನನ್ನ ಮಕ್ಕಳ ಕೂಡ ವಿರುದ್ಧ ಆಚರಿಸ್ಯಾಳು. ನಿನ್ನ ವಾತ್ಸಲ್ಯದಿಂದ ಮಂತ್ರ ಕೊಟ್ಟರಲಿಕ್ಕೆ, ಆಕೆ ನನ್ನ ಸರಿ ಆದೇನೆಂದು ಇಬ್ಬರನ್ನ ಹಡದಾಳಿ. ಉತ್ತಮದೇವತಿ ಭೋಗಕ್ಕೆ ಕರೀಲಿಲ್ಲ. ಸಾಮಾನ್ಯದೇವತಿ ಭೋಗಕ್ಕೆ ಕರದಾಳಿ. ಇನ್ನು ನನಗೆ ಹೇಳಬ್ಯಾಡ ನಾನು ಮಂತ್ರ ಕೊಡೋಹಾಂಗಿಲ್ಲ.' ಈ ಪ್ರಕಾರ ಅಂದು ಗಂಡನ ಮಾತು ಹಾರಿಸಿಬಿಟ್ಟಳು. ಪಾಂಡುಚಕ್ರವರ್ತಿ ಹೆಂಡತಿಯಿಂದ ನಿವಾರಿತನಾಗಿ ಸುಮ್ಮಗಾದನು.

ವಾಯುದೇವರು ಸರ್ವತ್ರ ವ್ಯಾಪ್ತನಾದರೂ, ಧರ್ಮರಾಯನಲ್ಲಿ ಸೌಮ್ಯ-ರೂಪದಲ್ಲಿಹೋನು. ಅರ್ಜುನನಲ್ಲಿ ಪರಾಕ್ರಮರೂಪದಲ್ಲಿಹೋನು. ನಕುಲನಲ್ಲಿ ಶೃಂಗಾರರೂಪದಲ್ಲಿಹೋನು. ಸಹದೇವನಲ್ಲಿ ಅತ್ಯಂತ ನೀತಿರೂಪದಲ್ಲಿಹೋನು. ಸಾಕ್ಷಾತ್ ವಾಯುದೇವರೇ ಭೀಮಸೇನನಾಗಿಹೋನು. ಈ ಐದುಮಂದಿ ಇಂದ್ರ-ಪದವಿ ಆಳಿದ್ದರು. ಸ್ವಾಯಂಭುವ ಮನ್ವಂತರದಲ್ಲಿ ಯಜ್ಞನಾಮಕ ನಾರಾಯಣ ಇಂದ್ರಪದವಿ ಆಳಿದ್ದಾನೆ, ಆತನೇ ಕೃಷ್ಣ. ಉತ್ತಮ ಮನ್ವಂತರದಲ್ಲಿ ಸತ್ಯಜಿತ ಇಂದ್ರಪದವಿ ಆಳಿದ್ದಾನೆ, ಆತನೇ ಧರ್ಮರಾಯನಾಗಿ ಅವತಾರ ಮಾಡಿದ್ದಾನೆ. ಸ್ವಾರೋಚಿಷ ಮನ್ವಂತರದಲ್ಲಿ ರೋಚನನಾಮಕ ಮುಖ್ಯಪ್ರಾಣ, ಇಂದ್ರಪದವಿ ಆಳಿದ್ದಾನೆ, ಆತನೇ ಭೀಮಸೇನನಾಗಿ ಹುಟ್ಟಿದ್ದಾನೆ. ತ್ರಿಶಂಕು, ವಿಭು, ಇವರು

(1) ಈಗ ಆಳುತ್ತಿರುವ ಪುರಂದರ ನಾಮಕ ಇಂದ್ರನಲ್ಲ ಇದಕ್ಕೆ ಉತ್ತರ ತಂತ್ರಿಗಳ ವ್ಯಾಖ್ಯಾನ ವೇನು? 127 ಪುಟ ನೋಡು.- (ಸ)

ರೈವತ, ತಾಪಸ ಮನ್ವಂತರಗಳಲ್ಲಿ ಇಂದ್ರಪದವಿ ಆಳಿದ್ದಾರೆ, ಅವರೇ ನಕುಲ-ಸಹದೇವರು. ಚಾಕ್ಷುಷಮನ್ವಂತರದಲ್ಲಿ ಮಂದ್ರದ್ಯುಮ್ನ ಇಂದ್ರಪದವಿ ಆಳಿದ್ದಾನೆ, ಆತನೇ ಅರ್ಜುನನಾಗಿ ಹುಟ್ಟಿದ್ದಾನೆ. ಪಾಂಡುಚಕ್ರವರ್ತಿ ತನ್ನ ಮಕ್ಕಳಿಗೆ ಜಾತಕರ್ಮ ಮಾಡಿದನು. ಈ ಐದುಮಂದಿ ತಮ್ಮತಮ್ಮ ಯೋಗ್ಯತಿಯಿಂದ ಸರ್ವಜ್ಞಶಿಖಾಮಣಿಗಳು, ಕೃಷ್ಣನಲ್ಲಿ ಭಕ್ತಿಯುಳ್ಳವರು, ನಾರಾಯಣಪರಾಯಣರು ಎಂಬಲ್ಲಿಗೆ ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯ-ನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಶ್ರೀಕೃಷ್ಣಾವತಾರ, ದೇವಾಂಶ ಅವತರಣ' ಎಂಬ ಹನ್ನೆರಡನೇ ಅಧ್ಯಾಯ ಸಂಪೂರ್ಣವು. ? (1)

ಶ್ರೀಮಧ್ವೇಶಾರ್ಪಣಮಸ್ತು

(ಸ) 7 ನೇ ಮನ್ವಂತರಕ್ಕೂ ಅದೇ ಇಂದ್ರ ಪುರಂದರ ನಾಮಕ ಇಂದ್ರನಾಗಿದ್ದಾನೆ. ಮೂಲದಲ್ಲಿ ಪುರಂದರ ಶಬ್ದ ಪ್ರಯೋಗವಿದೆ.- 135 ನೇ ಶ್ಲೋಕ.

ಅಧ್ಯಾಯ ೧೩

ಶ್ರೀಕೃಷ್ಣ ಚರಿತೆ

ಕಂಸಾದ್ಯಸುರ ಸಂಹಾರ

ಈ ಹದಿಮೂರನೇ ಅಧ್ಯಾಯದಲ್ಲಿ ಹರಿವಂಶ ಕಥ ಹೇಳಥಾರೆ. ವಸುದೇವನ್ನ ಪುರೋಹಿತ ಗರ್ಗಾಚಾರ್ಯರಿಗೆ ಹೇಳಿದ, ' ಕಂಸಗೆ ತಿಳೇಗೊಡದೆ, ಏಕಾಂತದಲ್ಲಿ ಕೃಷ್ಣ ಬಲರಾಮರಿಗೆ ಕ್ಷತ್ರಿಯ ಸಂಸ್ಕಾರ ಮಾಡಿ ಬಾ ' ಎಂದು ಕಳುಹಿದನು. ಕೃಷ್ಣ ಬಲರಾಮರಿಗೆ ಗರ್ಗಾಚಾರ್ಯ, ಯಾರಿಗೂ ತಿಳಿಸದೆ, ಏಕಾಂತದಲ್ಲಿ ಕ್ಷತ್ರಿಯ ಸಂಸ್ಕಾರ ಮಾಡಿಸಿ ನಂದಗೋಪಗೆ ಹೇಳಿದ. ' ಶ್ರೀಕೃಷ್ಣ ನಾರಾಯಣನೇವೆ. ನಿಮಗೆ ಸರ್ವಾಪತ್ತು ಬಂದಾವು, ಶ್ರೀಕೃಷ್ಣನಿಂದ ಕಡಿಗೆ ಬಿದ್ದೀರಿ, ಸುಖವುಳ್ಳವರಾದೀರಿ. ಶ್ರೀಕೃಷ್ಣ ಸಾಕ್ಷಾತ್ ನಾರಾಯಣನಿದ್ದಾನೆ.' ಹೀಂಗಂತ ಹೇಳಿ ಗರ್ಗಾಚಾರ್ಯ ಹೋದಮ್ಯಾಲೆ, ಸ್ವಾಮಿ ಏನು ಬಾಲಲೀಲ ತೋರಿಸಿದನೆಂದರೆ, ಅಂಬಿಗಾಲಿಕ್ಕತ ತಿರುಗಾಡಹೊಕ್ಕ. ಸ್ವಾಮಿ ತಾ ಸರ್ವೋತ್ತಮ ದೇವತಿ ಎಂದು ತಿಳಿಸಬೇಕಾಗಿ, ಒಂದು ದಿವಸ ಮೃತ್ತಿಕೆ ತಿಂದನು. ನಿನ್ನ ಮಗ ಮಣ್ಣು ತಿಂದನೆಂದು ಓರಿಗಿ ಮಕ್ಕಳು ಯಶೋದಾದೇವೀ ಮುಂದೆ ಹೇಳಿದರು. ಮಣ್ಣು ತಿಂದರೆ ಹೊಟ್ಟೆ ಕೆಟ್ಟೀತಲ್ಲ, ಏನು ಕೊರತಿ ಆಗೇದೆಂದು ಕೃಷ್ಣನ್ನ ಜಬರಿಸಿಕೊಂಡಳು. ತಾಯಿ ತನಗೆ ಜಬರಿಸಥಾಳೆ, ಬಡದಾಳೆಂದು ಸ್ವಾಮಿ ಅಂಜಿಕೆ ಸ್ವಭಾವ ತೋರಿಸಿದ. ' ಅಪ್ಮಾ ನಾ ಮಣ್ಣು ತಿಂದಿಲ್ಲ. ಸೇರಲಾರದೆ ಹುಸಿ ಆಡಥಾರೆ ' ಅನಲಿಕ್ಕೆ, ' ಹಾಂಗಿದ್ರೆ ಬಾಯಿ ತೆರಿ ' ಅನಲಿಕ್ಕೆ, ತಾಯಿ ಮಾತು ಕೇಳಿ ಬಾಯಿ ತೆರಿಯಲಿಕ್ಕೆ, ಪ್ರಕೃತಿ ಹಾಂಗೆ ವಿಕೃತಿ, ಎಂದರೆ ಮಹತ್ತತ್ವಾದಿಗಳು, ನವನವ ಬ್ರಹ್ಮಾಂಡ, ಸಕಲ ಜಗತ್ತೂ ಬಾಯೊಳಗೆ ಕಂಡು ಬಹಳ ಆಶ್ಚರ್ಯಬಟ್ಟು, ಈತ ಬಾಲಕನಲ್ಲ ಸರ್ವೋತ್ತಮ ದೇವತಿ ಎಂದು ತಿಳದು, ಅದ್ಭುತ ಚರಿತ್ರ ಕಂಡು ಯಶೋದಾದೇವಿ ಬಹಳ ಅಂಜಹೊಕ್ಕಳು. ಸ್ವಾಮಿ ತನ್ನ ಇಚ್ಛೆಯಿಂದ ಲೌಕಿಕಬಾಲಕನೋಪಾದಿ ಅಣಕಮಾಡಹೊಕ್ಕನು. ಸ್ವಾಮಿ ಅನಂತವೇದಪ್ರತಿಪಾದ್ಯ, ಆನಂದಪೂರ್ಣ ತಾ ಸುಖಸಮುದ್ರನಾದರೂ, ಯಶೋದಾದೇವಿ ಶ್ರೀಕೃಷ್ಣಗೆ ಸ್ತನ್ಯಪಾನ ಮಾಡಿಸಿದಳು. ಅಷ್ಟರೊಳಗೆ ಹಾಲು ಉಕ್ಕತದೆಂದು ಮೊಲಿ ಕೊಡೋದು ಬಿಟ್ಟು ಕೃಷ್ಣನ ಕೂಡ್ರಿಸಿ, ತಾಯಿ ಒಳಗೆ ಹೋದಳು. ಸ್ವಾಮಿ ತಾ ಪರಿಪೂರ್ಣನಾದರೂ, ಸ್ತನ್ಯಪಾನ ಪರಿಪೂರ್ಣವಾಗಲಿಲ್ಲೆಂದು ಸಿಟ್ಟಿನಿಂದ ಮೊಸರುಗಡಿಗಿನೆಲ್ಲ ಒಡೆಹೆಟ್ಟಿದ. ಚಂಪ್ರಮಂಡಲದೋಪಾದಿ ಬೆಣ್ಣೆ

ಯಥೇಷ್ಟ ಬಿತ್ತು. ಆಂಥಾ ಬೆಣ್ಣೆ ಕಂಡು, ಏಕಾಂತಸ್ಥಳದಲ್ಲಿ ಓರಿಗೆಮಕ್ಕಳ ಸಹವಾಗಿ ಬೆಣ್ಣೆತಿನ್ನಥಾನೆ. ಬೆಕ್ಕುಗಳಿಗೆ ಹಾಕಥಾನೆ. ಬಾಲಲೀಲದಿಂದ ನವನೀತ ಚೌರ್ಯ ಮಾಡಿದ್ದಾನೆ.

ಕಳ್ಳತನ ಅಧರ್ಮವಲ್ಲವೆ ಎಂದಲ್ಲಿ, ಸುರನರಪುರುಷಾದಿಗಳಲ್ಲಿ ಅವತಾರ ಮಾಡಿ, ಅದಪೇ ಜಾತಿಸ್ವಭಾವ ತೋರಸ್ತಾನೆ. ಬಾಲಕರು ದುಷ್ಟತನ ಮಾಡತಾರಷ್ಟೆ? ಅದರೋಪಾದಿ ತೋರಿಸಿದ್ದಾನೆ. ಸ್ವಾಮಿ ಶಶ್ವದೇಕಪ್ರಕಾರನಾಗಿ ದಾವಾಗಲೂ ಆನಂದಸಾಂದ್ರನಾಗಿರಥಾನೆ. ದಾವ ಜಾತಿಯಲ್ಲಿ ಅವತಾರ ಮಾಡಥಾನೆ, ಆ ಜಾತಿ-ಸ್ವಭಾವ ತೋರಸ್ತಾನೆ. ಅವರವರ ಕುಲಾನುಸಾರ ಲೀಲೆಗಳ ತೋರಸ್ತಾನೆ. ಯಶೋದಾದೇವಿ ಹಾಲು ಇಳಿಸಿಬಂದು ಮಗನ ಚರಿತ್ರ ಕಂಡಳು. ಮೊಸರು ಗಡಿಗಿಗಳ ಒಡದಾನೆ. ಮೊಸರು ಹಾಲಿನ ಹಳ್ಳ ಹರೀತದೆ. ಬೆಣ್ಣೆ ಕದ್ದು ಓರಿಗೆ ಮಕ್ಕಳ ಸಹ ತಿನ್ನಥಾನೆ. ಮಗನ ದುಷ್ಟತನವನ್ನು ನಿತ್ಯ ಗೋಪಿಕಾಸ್ತ್ರೀಯರು ದೂರು ಹೇಳೋರು, ಅದಷ್ಟೂ ಖರಿಯೆ. ಚಿಕ್ಕವಗೆ ಇಂಥಾ ದುಷ್ಟತನ ಯಾಕೆ ಉಂಟೆಂದು, ಕೈಲಿ ಒಂದು ಕಟ್ಟಿಗಿ ತೆಗೆದುಕೊಂಡು ಬಡಿಯಲಿಕ್ಕೆ ಹೋಗಥಾಳೆ. ಸ್ವಾಮಿ ಸರ್ವಜಗತ್ತಿಗೆ ತಾಯಿತಂದಿ ಆದರೂ, ತನ್ನ ತಾಯಿ ಬಂದು ಬಡಿದಾಳೆಂದು ಓಡಹೊಕ್ಕನು. ಯಶೋದಾದೇವಿ ಬಾಲಿಶಳು. ಮಹಿಮಿ ಬಲ್ಲಳಾದರೂ ಸರಿಯೆ, ಸ್ವಾಮಿ ಮಹಿಮಿಯಿಂದ ಮೋಹಿತಳಾಗಿ, ತಲುವಾರಿ ಆದಕಾರಣ ಅವನ್ನ ಬೆನ್ನಟ್ಟಿ ಹೋದಳು. ಯೋಗೀಶ್ವರ ಅಂತಃಕರಣಕ್ಕೆ ನಿಲುಕದವ, ಸ್ವಾಮಿ ಯಶೋದಾದೇವಿಯ ಕೈಯೊಳಗೆ ಸಿಕ್ಕಬಲ್ಲನೆ! ತಾಯಿ ಓಡಲಾರಳು, ಬೆವರೀಲಿ ಬೆವರಥಾಳೆ. ತಾಯಿಯ ಬಹಳ ಶ್ರಮ ಕಂಡು, ಸ್ವಾಮಿ ಭಕ್ತವತ್ಸಲನಾದ ಕಾರಣ ಯಶೋದಾದೇವಿಯ ಕೈಯೊಳಗೆ ಸಿಕ್ಕನು. ನಿತ್ಯಮುಕ್ತಳಾದಂಥ ಲಕ್ಷ್ಮೀದೇವಿಗೆ ಪತಿಯಾದ ಶ್ರೀಕೃಷ್ಣನ್ನ ಕಟ್ಟಿಹಾಕೇನೆಂದು ಹಗ್ಗ ಕೊಂಡುಬಂದಳು. ಗೋಪಿಕಾಸ್ತ್ರೀಯರ ಮನಿಯಲ್ಲಿ ದುಷ್ಟತನ ಮಾಡಥಾನೆಂದು ಹಗ್ಗದಿಂದ ಕಟ್ಟಿಹಾಕಲಿಕ್ಕೆ, ಎರಡು ಬೆರಳು ಸಾಲದೆ ಉಳಿತಿಹೋದು. ಗೋಕುಲದಲ್ಲಿದ್ದ ಕಣ್ಣಿಗಳು, ಹಗ್ಗಗಳು ತಂದು ಸ್ವಾಮೀನ್ನ ಕಟ್ಟಿಹಾಕೇನೆಂದು ಗಂಟುಗಳು ಹಾಕಿ ಹಗ್ಗ ಕಟ್ಟಿದ್ದಾಳೆ. ಬಹಳ ಸಾಹಸ ಮಾಡತಿಹೋಳು. ಮತ್ತೂ ಎರಡು ಬೆರಳು ಸಾಲದೆ ಉಳೀತಿಹೋದು. ಸ್ವಾಮಿ ಸರ್ವೋತ್ತಮ, ಸರ್ವತ್ರವ್ಯಾಪ್ತ, ಏಕಕಾಲದಲ್ಲಿ ಅಣುಮಹತ್ವ ತೋರಿಸತಿಹ, ಆದರೂ ಬಾಲಕನಾಗಿ ತೋರತಿಹ. ತಾಯೀಶ್ರಮ ಕಂಡು, ಮಾತೃ-ವಾತ್ಸಲ್ಯ ತೋರಿಸಬೇಕಾಗಿ ಕರುವಿನ ಕಣ್ಣಿಯಿಂದ ಕಟ್ಟಿಸಿಕೊಂಡನು. ಕಟ್ಟಿದ ಒರಳು ಸಹ ಎಳಕೊಂಡುಹೋಗಲಿಕ್ಕೆ, ಅಂಗಳದೊಳಗೆ ಮುತ್ತಿಮರಗಳಿದ್ದವು, ಸಾವಿರ ಧನುಸ್ಸಿನ ಪ್ರಮಾಣ ಬಹುಕಾಲದ ವೃಕ್ಷಗಳಿದ್ದವು. ಎರಡು ಗಿಡಗಳ ಮಧ್ಯದಲ್ಲಿ ಹೋಗಲಿಕ್ಕೆ ಒರಳು ಅಡ್ಡ ಬಿತ್ತು. ಒರಳು ಎಳೋ ಅಷ್ಟಕ್ಕೆ ಬೇರು-

ಸಹಿತವಾಗಿ ಕಿತ್ತುಬಿದ್ದವು. ಯಮಳಾರ್ಜುನರು ಹೊರಟರು. ಅವರು ಪೂರ್ವದಲ್ಲಿ ದಾರು ಎಂದರೆ, ಕುಬೇರನ ಮಕ್ಕಳು, ನಳಕೂಬರ, ಮಣಿಗ್ರೀವರು. ನಾರದನ ಶಾಪದಿಂದ ವೃಕ್ಷಜನ್ಮ ಬಂದಿತ್ತು. ಅವರಲ್ಲಿ ಧುನಿ, ಚಮು ಎಂಬಂಥ ಇಬ್ಬರು ದೈತ್ಯರಿದ್ದರು. ಪೂರ್ವದಲ್ಲಿ ಪೂತನಿ, ಶಕಟಾಕ್ಷ, ತೃಣಾವರ್ತ ಸತ್ತುಹೋಗ್ಯಾರೆ. ಧುನಿ, ಚಮು ಉಳದು ವೃಕ್ಷದೊಳಗೆ ಹೊಕ್ಕು ಮರಣರಹಿತರಾಗಿದ್ದರು. ಸ್ವಾಮಿ ಯಮಳಾರ್ಜುನರ ಕೆಡಹಿ ಧುನಿ, ಚಮು ಇವರನ್ನ ಕೊಂದುಬಿಟ್ಟನು. ಸ್ವಾಮಿ ದೈತ್ಯರನ್ನ ಕೊಲ್ಲಬಾರದೆ, ವೃಕ್ಷಗಳ ಏನುಕಾರಣ ಕೆಡಹಬೇಕೆಂದಲ್ಲಿ, ಕುಬೇರನ ಮಕ್ಕಳು ಮದ್ಯಪಾನ ಮಾಡಿ, ಭಾಗೀರಥೀ ತೀರದಲ್ಲಿ ಅಪ್ಸರಸ್ತ್ರೀಯರಿಂದ ಕೂಡಿ ಜಲಕ್ರೀಡಿ ಮಾಡಲಿಕ್ಕೆ, ಅಲ್ಲಿಗೆ ನಾರದ ಬಂದನು. ದೇವಋಷಿ ಬರಥಾನೆಂದು ಏಳಬೇಕು, ಸ್ತ್ರೀಯರೆಲ್ಲ ತಮ್ಮತಮ್ಮ ವಸ್ತ್ರಗಳ ಉಟ್ಟುಕೊಂಡರು. ನಳಕೂಬರ, ಮಣಿಗ್ರೀವ ಮದ್ಯಪಾನ ಮಾಡಿ ಬಹಳೀ ಉನ್ಮತ್ತರಾಗಿ, ಬತ್ತಲೆಯೇ ನಾರದನ ಎದುರಿಗೆ ವಿನೋದವಚನಗಳನ್ನಾಡತ ನಗತಾ ನಿಂತರು. 'ನನ್ನ ಎದುರಿಗೆ ನಗ್ನರಾಗಿ ಹ್ಯಾಂಗೆ ನಿಂತರಿ' ಎಂದು 'ವೃಕ್ಷಗಳಾಗಿ ಹುಟ್ಟ್ರಿರಿ' ಎಂತ ನಾರದ ಶಾಪ ಕೊಟ್ಟ. 'ಎಲೈ ದೇವಋಷಿಯಾದ ನಾರದನೇ, ಬಹಳ ಅನುಗ್ರಹ ಮಾಡಿ ಸೊಕ್ಕು ಮುರದಿ. ಎಷ್ಟು ದಿನ ವೃಕ್ಷಜನ್ಮದಲ್ಲಿರಬೇಕು? ನಮಗೆ ಉದ್ಧಾರವಾಗುವ ಹಾಂಗೆ ಕೃಪಾ ಮಾಡು' ಎಂದು ಶರಣುಹೊಕ್ಕರು. ಮುಂದೆ ಸ್ವಾಮಿ ಶ್ರೀಕೃಷ್ಣಾವತಾರ ಮಾಡ್ಯಾನು, ಕೃಷ್ಣನಿಂದ ವಿಮೋಚನ ಆದೀತೆಂದು ವಿಶಾಪ ಕೊಡಲಿಕ್ಕೆ, ನಾರದನ ವಚನ ಸತ್ಯ ಮಾಡಬೇಕಾಗಿ, ಯಮಳಾರ್ಜುನರನ್ನ ಬೇರು ಸಹ ಕೆಡಹಲಿಕ್ಕೆ, ಕುಬೇರನ ಮಕ್ಕಳು ದಿವ್ಯದೇಹ ಧರಿಸಿ ಕೃಷ್ಣನ್ನ ಸ್ತೋತ್ರ ಮಾಡಿದರು. ಸ್ವಾಮೀ ಸ್ಪರ್ಶವಾಗಲಿಕ್ಕೆ ವೃಕ್ಷಜನ್ಮದಿಂದ ಮುಕ್ತರಾಗಿ, ತಮ್ಮ ತಂದೀಮನಿ ಅಲಕಾಪಟ್ಟಣಕ್ಕೆ ಹೋದರು. ನಳಕೂಬರ, ಮಣಿಗ್ರೀವರು ಪ್ರತ್ಯಕ್ಷ ಸ್ತೋತ್ರ ಮಾಡುವುದು ಕಂಡು, ಗೋಪಾಲಕರೆಲ್ಲ ಬಹಳ ಆಶ್ಚರ್ಯವುಳ್ಳವರಾದರು.

ಮುಂದೆ ಬೃಹದ್ವನದಲ್ಲಿ ತೋಳಗಳು ಬಹಳ ಇದ್ದವು. ಸ್ವಾಮೀ ಚಿತ್ತದಲ್ಲಿ ವೃಂದಾವನಕ್ಕೆ ಹೋಗಬೇಕಾಗೇದೆ. ಅಲ್ಲಿ ದೇವತಿಗಳು ವೃಕ್ಷ ಬಳ್ಳಿ ನಾನಾವಿಧ ದೇಹ ಧರಿಸಿ ಉತ್ಪನ್ನರಾಗಿದ್ದಾರೆ. ಆದಕಾರಣ ಸ್ವಾಮಿ ತಾ ಅಲ್ಲಿಗೆ ಹೋಗಬೇಕಾಗಿ, ಯಥೇಷ್ಟ ತೋಳಗಳ ನಿರ್ಮಾಣ ಮಾಡಿದ. ತೋಳಗಳು ಎಂಥಾವು ಎಂದರೆ, ಹುಲಿಸಮಾನವಾದಂಥಾವು. ತಮ್ಮ ಆಕಳುಗಳಿಗೆ ಉಪದ್ರವ ಮಾಡತಾ ಇದ್ದವು. ಅದಲ್ಲದೆ ಈ ಬೃಹದ್ವನದಲ್ಲಿ ದುರ್ನಿಮಿತ್ತಗಳು ಬಹಳೇ ಆಗತವೆ. ವೃಂದಾವನದಲ್ಲಿ ತೃಣ, ಉದಕ ಯಥೇಷ್ಟ ಅದೆ ಎಂದು ಗೋಪಾಲಕರೆಲ್ಲ ತಮ್ಮ ಬಂಡಿಗಳ ಮ್ಯಾಲೆ ಸ್ತ್ರೀಯರು, ವೃದ್ಧರು, ಬಾಲಕರು ಇವರನ್ನು ಕೂಡ್ರಿಸಿಕೊಂಡು ವೃಂದಾವನಕ್ಕೆ ಹೋದರು. ವೃಂದಾವನದಲ್ಲಿ ಲಕ್ಷ್ಮೀನಿವಾಸ ತನ್ನ

ಉತ್ಕೃಷ್ಟ ಚರಿತ್ರ ತೋರಿಸಿ ಸಕಲರಿಗೆ ಸುಖಬಡಿಸಿದ್ದಾನೆ. ಕುಲಾನುಸಾರ ಚೇಷ್ಟ ಮಾಡಬೇಕಾಗಿ, ವೃಂದಾವನ ಸಮೀಪದಲ್ಲಿ ಚೇಷ್ಟಗಳ ಮಾಡಿದನು. ಚಿಕ್ಕ ಕರುಗಳ ಕಾಯುಹೊಕ್ಕನು. ಅಲ್ಲಿಗೆ ವತ್ಸಾಸುರ ದೈತ್ಯ, ಕರುವಿನ ರೂಪ ಧರಿಸಿ ಕಂಸನ ಆಜ್ಞದಮ್ಯಾಲೆ ಬಂದನು. ಅವಗೆ ಮಹಾರುದ್ರದೇವರ ವರವಿಹೋದು. ಆ ದೈತ್ಯನ ಹಿಂಗಾಲು ಹಿಡದು ಬೆಳವಲಗಿಡದ ಮ್ಯಾಲೆ ಈಡ್ಯಾಡಲಿಕ್ಕೆ, ವತ್ಸಾಸುರ ಸತ್ತುಬಿದ್ದನು. ಬೆಳವಲಹಣ್ಣುಗಳು ಉದರಿದವು. ಅದರಮ್ಯಾಲೆ, ಬಕಾಸುರನೆಂಬೋ ದೈತ್ಯ, ಕಂಸನ ಭೃತ್ಯನಾಗಬೇಕು. ಷಣ್ಮುಖನ ಸೇವಿ ಮಾಡಿ ಅವಧ್ಯತ್ವ ಸಂಪಾದಿಸಿದ್ದ. ಆ ಬಕನೆಂಬೋ ದೈತ್ಯ ಬೆಳ್ಳಕ್ಕಿರೂಪದಿಂದ ಹಾರತಲೇ ಬಂದು ಗೋವಿಂದನ ನುಂಗಿದ. ಗಂಟಲು ಬಹಳ ಸುಡಹೊಕ್ಕಿತು. ಉಗುಳುತಲೆ ತನ್ನ ಚುಂಚುಪುಟದಿಂದ ತಿಂದೇನೆಂದು ಬರಲಿಕ್ಕೆ, ಎರಡೂ ಮೂತಿ ಹಿಡದು ಸೀಳಿ ಎರಡು ತುಂಡುಮಾಡಿ ಬಿಷ್ಟನು. ಆ ವ್ಯಾಳ್ಯಾದಲ್ಲಿ ಬ್ರಹ್ಮಾದಿ ದೇವತಿಗಳು 'ಜಯ ಜಯ' ಎಂದು ಹೂವಿನ ಮಳಿಗರೆದರು. ಬಲರಾಮಸಹಿತನಾಗಿ ಶ್ರೀ-ಕೃಷ್ಣದೇವರು ಗೋಕುಲಪ್ರವೇಶ ಮಾಡಿದನು.

ಈ ಪ್ರಕಾರ ಒಂದು ವರುಷ ಕರುಗಳ ಕಾದನು. ಆರನೇ ವರುಷದವನಾದ ತರುವಾಯ ಶ್ರೀಕೃಷ್ಣದೇವರು ಆಕಳು ಕಾಯಲಿಕ್ಕೆ ಹೋದನು. ಅಖಿಳಲೋಕ-ಪರಿಪಾಲಕ, ಸರ್ವ ಜಗತ್ತು ಪಾಲಿಸೋ ಅಂಥಾ ಸ್ವಾಮಿ, ವನಕ್ಕೆ ಹೋಗಿ ಆಕಳುಗಳ ಕಾದುಕೊಂಡು ಬಾಹೋನು. ಹೀಂಗೆ ನಿತ್ಯಯಾತ್ರಿ ಮಾಡಲಿಕ್ಕೆ, ಒಂದು ದಿವಸ ತನ್ನ ಮಹಿಮಿ ತೋರಿಸಬೇಕಾಗಿ ಗೋಪಾಲಕರ ಸಮಾಧಾನ ನಿಮಿತ್ತ, ಬಲರಾಮನ್ನ ಮನಿಯಲ್ಲಿ ಬಿಟ್ಟು, ಗೋಪಾಲಕರಿಂದ ಯುಕ್ತನಾಗಿ ಯವನಾ ತೀರಗೊಂಡು ೀಕಳುಗಳ ಮೇಯಿಸತ ಹೋಗಲಿಕ್ಕೆ, ಕಾಳೀಯ ಸರ್ಪ, ಬ್ರಹ್ಮ-ದೇವರ ವರಬಲದಿಂದ ಗರುಡನ ಲೆಕ್ಕಿಸದೆ, ರಮಣಕದ್ವೀಪದಲ್ಲಿರತಿಹ. ಗರುಡಗೆ ಕಪ್ಪ ಕೊಡದ ಕಾರಣ ಗರುಡ ಬಹಳ ಕೋಪಾವಿಷ್ಟನಾಗಿ ತಿಂದೇನೆಂದು ಬರಲಿಕ್ಕೆ, ಗರುಡಗೆ ಅಂಜಿ ರಮಣಕದ್ವೀಪ ಬಿಟ್ಟು ಯಮುನಾ ನದಿಗೆ ಬಂದನು. ಅಲ್ಲಿ ಗರುಡ ಬಾರದ ಹಾಂಗೆ ಸೌಭರಿಋಷಿಯು ಶಾಪವಾಗಿಹೋದು. ಸೌಭರಿ ಶಾಪವಿದ್ದ ಕಾರಣ ಗರುಡಗೆ ಏನೂ ಆಗದು. ಆದರೂ ಬ್ರಾಹ್ಮಣಶಾಪ ಸತ್ಯ ಮಾಡಬೇಕಾಗಿ ಗರುಡ ಆ ಸ್ಥಳಕ್ಕೆ ಬರತಿದ್ದಿಲ್ಲ. ಆದಕಾರಣ ಕಾಳಿಸರ್ಪ ಯಮುನಾನದಿಯಲ್ಲಿ ವಾಸ ಮಾಡಕೊಂಡಿರಲಿಕ್ಕೆ, ಗೋಪಾಲಕರು ಆಕಳುಗಳ ಹೊಡದುಕೊಂಡುಹೋಗಿ, ಕಾಳಿಯ ಮಡುವಿನಲ್ಲಿ ನೀರು ಕುಡಿಸಿದರು. ನೀರು ಕುಡಿದು ಆಕಳುಗಳು ಸತ್ತು-ಬಿದ್ದವು. ಸ್ವಾಮಿ ತನ್ನ ಅಮೃತದೃಷ್ಟಿಯಿಂದ ದಯಾಪೂರ್ಣನಾಗಿ ನೋಡಲಿಕ್ಕೆ, ಸತ್ತ ಆಕಳು, ಗೋಪಾಲಕರು ಬದುಕಿಬಂದರು. ಯಮುನಾದೇವಿ ಉದಕ ಅಮೃತೋದಕ ಮಾಡಬೇಕಾಗಿ ಕಡಹಾಲದ ಮರ ಏರಿದನು. ವಿಷೋಲ್ಬಣದಿಂದ

ಕರಿಕೆ ಮೊದಲಾದ್ದು ನಾಟತಿದ್ದಿಲ್ಲ. ಹಾಂಗಾದರೆ ಕಡಹಾಲದ ವೃಕ್ಷ ಹ್ಯಾಂಗಿತ್ತು ಎಂದರೆ, ಪೂರ್ವದಲ್ಲಿ ಗರುಡನ ತಾಯಿ ವಿನತಾದೇವಿಗೆ ದಾಸೀತ್ವ ಪ್ರಾಪ್ತವಾಗಿರಲಿಕ್ಕೆ, ತಮ್ಮ ತಾಯಿಯ ದಾಸೀತ್ವ ಪರಿಹರಿಸುವುದಕ್ಕಾಗಿ ಗರುಡ ದೇವೇಂದ್ರನ ಸಮೀಪಕ್ಕೆ ಹೋಗಿ, ಸರ್ಪಗಳ ನಿಮಿತ್ತ ಅಮೃತ ಕೊಂಡುಬಂದು ಈ ವೃಕ್ಷದ ಸಮೀಪದಲ್ಲಿಟ್ಟಿದ್ದ. ಅಮೃತ ಸ್ಪರ್ಶವಾದಕಾರಣ ಈ ಮರಕ್ಕೆ ವಿಷದಿಂದ ಅಪಾಯ ವೇನೂ ಆಗಲಿಲ್ಲ. ಬಹು ದೊಡ್ಡ ವೃಕ್ಷವಾಗಿತ್ತು. ಸ್ವಾಮಿ ಶ್ರೀಕೃಷ್ಣದೇವರು ಕಡಹಾಲದ ವೃಕ್ಷ ಏರಿ ಭುಜಗಳ ಚಪ್ಪರಿಸಿಕೊಂಡು, ಟೊಂಕಕ್ಕೆ ಉತ್ತರೀಯವಸ್ತ್ರ ಸುತ್ತಿಕೊಂಡು, ವೃಕ್ಷದಮ್ಯಾಲಿಂದ ಕಾಳಿಮಡುವು ಧುಮುಕಿದನು. ಕಾಳಿಸರ್ಪ ಸ್ಥಾನಭ್ರಷ್ಟನಾಗಿ ವಿಷ ಕಾರಿದನು. ಆದಕಾರಣ ಉದಕ ಉಕ್ಕೇರಿ ಸಾವಿರ ಧನುಸ್ಸಿನ ಪ್ರಮಾಣ, ಉದಕ ಮ್ಯಾಲಕ್ಕೆ ಚಿಮ್ಮಿತು. ಅನಂತಬಲವುಳ್ಳಾತ ಮಡುವು ಧುಮುಕಲಿಕ್ಕೆ, ಸಾವಿರ ಧನುಸ್ಸಿನ ಪ್ರಮಾಣ ಉಕ್ಕೇರಿ ಬಾಹೋದು ಆಶ್ಚರ್ಯವಲ್ಲ. ಯಮುನಾದೇವೀ ಉದಕ ಕದಡತಾ ಹೋಗಥಾನೆ. ಕಾಳಿಸರ್ಪ ತನ್ನ ಸರ್ಪಗಳ ಕೂಡಿಕೊಂಡು, ತನ್ನ ಸಾವಿರ ಹೆಡಿಯಿಂದ ಸ್ವಾಮೀ ಮುರ್ಮು-ಸಥಳಕ್ಕೆ ಕಚ್ಚಿ ಬಿಗದು ಕಟ್ಟಿದನು. ಸ್ವಾಮಿ ಭಕ್ತವತ್ಸಲ, ತನ್ನ ಭಕ್ತನ ಅಪರಾಧ ತಾಳಿಕೊಂಡನು.

ಇಷ್ಟಾಗಲಿಕ್ಕೆ ಗೋಕುಲದಲ್ಲಿ ಉತ್ಪಾತಗಳು ಆದವು, ರಕ್ತದ ಮಳಿ ಬಿತ್ತು, ಭೂಕಂಪವಾಯ್ತು, ದಿಕ್ಕುಗಳಿಗೆ ಬೆಂಕಿ ಹತ್ತಿತು, ದುರ್ನಿಮಿತ್ತ ಬಹಳಾದವು. ಶ್ರೀಕೃಷ್ಣಗೆ ಏನಾಯಿತೆಂದು ಯಶೋದಾದೇವಿ, ಗೋಪಿಕಾಸ್ತ್ರೀಯರು, ನಂದ-ಗೋಪ ಮೊದಲಾದ ಗೋಪಾಲಕರು ಎದಿ ಬಾಯಿ ಕುಟ್ಟಿಕೊಳ್ಳತ ಅನೇಕ ವಿಧ ಪ್ರಲಾಪ ಮಾಡತ, ಆಕಳ ಹೆಜ್ಜಿ ನೋಡಿಕೊಳ್ಳತ ಯಮುನಾನದಿಯ ಸಮೀಪಕ್ಕೆ ಹೋಗಿ ನೋಡಥಾರೆ. ಉದಕ ಬಹಳ ತಿಳಿ! ಸರ್ಪದಿಂದ ಕಟ್ಟಿಸಿಕೊಂಡು, ನಿಶ್ಚೇಷ್ಟಿತನಾಗಿ ಕೃಷ್ಣ ಉದಕದೊಳಗೆ ಕಾಣಸಥಾನೆ! ಕಂಡು ಮತ್ತಷ್ಟು ಪ್ರಲಾಪ ಮಾಡತ, ತಾವೂ ಮಡುವು ಧುಮುಕೇವೆಂದು ಅನಹೊಕ್ಕರು. ಬಲರಾಮ ಏನು ಸಮಾಧಾನ ಮಾಡಿದರೂ ಸಮಾಧಾನವಾಗವಲ್ಲರು, ಧೈರ್ಯಭ್ರಷ್ಟರಾಗಿಹೋರು. ತಮ್ಮ ಸಜ್ಜನರುಗಳ ಪ್ರಲಾಪ ಕಂಡು ಸ್ವಾಮಿ, ಸರ್ಪದ ಕೈಯಿಂದ ಬಿಡಿಸಿಕೊಂಡು, ಕಾಳಿಯಸರ್ಪನ ಹೆಡಿಯಮ್ಯಾಲೆ ಕಾಲಕೊಟ್ಟು ನರ್ತನ ಮಾಡಲಿಕ್ಕೆ, ಬ್ರಹ್ಮ-ದೇವರು ಮದ್ದಲೀ ಬಾರಿಸಿದನು. ಮಹಾರುದ್ರ ವೀಣೆ ಬಾರಿಸಿದ. ಹನುಮಂತ ಗಾಯನ ಮಾಡಿದ. ಇಷ್ಟಾಗಲಿಕ್ಕೆ, ಕಾಳಿಯಸರ್ಪದ ಮುಖದಿಂದ ರಕ್ತವು ಬೀಳ-ಹತ್ತಿತು. ರಕ್ತ ಕಾರಿ ಸರ್ಪನು 'ಸ್ವಾಮಿ, ನಾನು ನಿನ್ನವ ನನ್ನ ಅಪರಾಧ ಕ್ಷಮಿಸು' ಎಂದು, ಮನಃಪೂರ್ವಕ ಶರಣುಹೊಕ್ಕನು. ಸಜ್ಜನರಿಗೆ ಏನು ಆಪತ್ತು ಬಂದರೂ ಸ್ವಾಮಿಗೆ ಶರಣುಹೋಗಥಾರೆ. ಸ್ವಾಮಿ ಕಮಲೇಕ್ಷಣನ ಕಾಲಪೆಟ್ಟಿನಿಂದ

(K) ಈ ಪ್ರಸಂಗವಾದ ಮೇಲೆ, ನಿಲಾಪಲ್ಲಿಲು ಮನಸುಲ್ಲ, ದೇವುಡಾಸುರ ಮರ್ದನ, ಪ್ರಲಂಬಾಸುರ ವಧಾ ಮುಂತಾದವುಲ್ಲಿ 'ಬಂದಿದೆ. ಇಲ್ಲಿತಿಹಾಸಿಕಾಜಕು ಎಕೆ ಪ್ರಸ್ತಾವಿಸಿಲ್ಲ?

ಐದಿಮೂರನೇ ಅಧ್ಯಾಯ

ಕಾಳಿಯಸರ್ಪನ ಬಲವೆಲ್ಲ ಹೋಯಿತು. ನಿರ್ವೀರ್ಯವುಳ್ಳವನಾದ. ಆ ವ್ಯಾಳ್ಯಾದಲ್ಲ ನಾಗಪತ್ನೀರು ಸ್ತೋತ್ರ ಮಾಡಿದರು. 'ಹೇ ಜಗದೀಶ್ವರ! ಗಂಡನೆಂಬಾತ ಪ್ರಾಣಪ್ರಿಯ, ನಮ್ಮ ಪತಿಯ ಪ್ರಾಣ ರಕ್ಷಿಸಬೇಕು, ನಮ್ಮ ತಾಳೀ ಕಾಯಬೇಕು' ಎಂದು ಸಾಷ್ಟಾಂಗನಮಸ್ಕಾರ ಮಾಡಿದರು. ಸ್ತ್ರೀಯರು ಬಂದು ಬೇಡಿಕೊಳ್ಳಲಿಕ್ಕೆ, ಬಹಳ ಅಂತಃಕರಣ ಹುಟ್ಟ್ಯತದೆ. ಸ್ವಾಮಿ ಕೃಪಾಸಮುದ್ರ ನಾಗಪತ್ನೀರ ಕಡಿಯಿಂದ ಸ್ತೋತ್ರ ಮಾಡಿಸಿಕೊಂಡು, ಕಾಳಿಯಸರ್ಪನ್ನ ತುಳಿಯುವುದು ಬಿಟ್ಟುಕೊಟ್ಟನು. ಆಗ ಕಾಳಿಯಸರ್ಪನು ಬಹಳ ಭಕ್ತಿರಸದಿಂದ ಸ್ವಾಮೀ ಸ್ತೋತ್ರ ಮಾಡಿದನು. 'ಇನ್ನು ಯಮುನಾನದಿಯೊಳಗೆ ಇರಬ್ಯಾಡ. ರಮಣಕದ್ವೀಪಕ್ಕೆ ಹೋಗು. ಗರುಡನ ಅಂಜಿಕೆ ನಿನಗಿಲ್ಲ. ನನ್ನ ಪಾದಲಾಂಛನ ನಿನ್ನ ತಲೀಮ್ಯಾಲೆ ಅದೆ. ನಿನ್ನ ಪರಿವಾರ ಸಹ ರಮಣಕದ್ವೀಪಕ್ಕೆ ಶೀಘ್ರ ಹೋಗು' ಎಂದು ಸ್ವಾಮಿ ಅಪ್ಪಣೆ ಕೊಟ್ಟು ಯಮುನಾದೇವೀ ಉದಕ ನಿರ್ಮಲೋದಕ ಮಾಡಿಬಿಟ್ಟನು.

ಆ ಹೊತ್ತು ರಾತ್ರಿಯಾಯಿತು. ಗೋಕುಲಕ್ಕೆ ಹೋಗಪೆ ಯಮುನಾ ತೀರದಲ್ಲಿ ವಾಸ ಮಾಡಿದರು. ಅರ್ಧರಾತ್ರೀಲಿ ಸುತ್ತಮುತ್ತ ಕಾಡುಗಿಚ್ಚು ಹತ್ತ್ಯಿತು. ಆಕಳುಗಳು ಮಾರ್ಗ ಕಾಣದೆ ಹಂಬಾರವದಿಂದ ಒದರಲಿಕ್ಕೆ, ಗೋಪಾಲಕರೆಲ್ಲ ಪ್ರಲಾಪ ಮಾಡುವದ ಕಂಡು, 'ಅಂಜಬ್ಯಾಡಿ. ನೀವೆಲ್ಲ ಕಣ್ಣ್ಮುಚ್ಚಿಕೊಳ್ಳಿ' ಎಂದು ಆಜ್ಞಾಪಿಸಿ, ನಾಲ್ಕು ಕಡೀಲಿ ಕಾಡು ಸುಡತಲೇ ಬರತದೆ, ಸ್ವಾಮಿ ಅಖಿಲೇಶ್ವರ, ಲೀಲಾಮಾತ್ರದಲ್ಲಿ ಕಾಡುಗಿಚ್ಚು ಪಾನಮಾಡಿ ಸಮುಸ್ತರನ್ನ ರಕ್ಷಿಸಿದನು. ಸ್ವಾಮಿ ಪ್ರಳಯಕಾಲದಲ್ಲಿ ತಮಸ್ಸು ಪಾನಮಾಡಿದಾತಗೆ, ಕಾಡುಗಿಚ್ಚು ನುಂಗಿದ್ದು ಆಶ್ಚರ್ಯವಲ್ಲ.

ಅನಂತರದಲ್ಲಿ ಮತ್ತೆ ವಿಚಿತ್ರ ಕರ್ಮ ಮಾಡಿ ತೋರಿಸಿದ್ದಾನೆ. ಗೋಕುಲ-ಪ್ರವೇಶಕಾಲದಲ್ಲಿ, ಉಗ್ರಾಸುರನೆಂಬ ದೈತ್ಯ ವೃಕ್ಷರೂಪದಲ್ಲ ಹುಟ್ಟಿಹೋನು. ವೃಕ್ಷದ ಗಾಳಿಯಿಂದ ಮನುಷ್ಯರಿಗೆ, ಆಕಳುಗಳಿಗೆ ರೋಗ ಬಂದು ಪೀಡಿತರಾಗಿ ಸಾಯುತಿಹೋರು. ಉಗ್ರಾಸುರಗೆ ಬ್ರಹ್ಮದೇವರ ವರವಿಹೋದು. ಆದಕಾರಣ ಸಂಕರ್ಷಣಗೆ ಮೂರ್ಖ ಬಂತು. ಸ್ವಾಮಿ ತನ್ನ ಕೈಕಮಲದಿಂದ ನ್ಯಾವರಿಸಲಿಕ್ಕೆ, ಬಲರಾಮ ಬಹಳ ಬಲವುಳ್ಳಂಥಾತನಾದ, ಸ್ವಾಮಿ ಆಜ್ಞೆ ಆದಮ್ಯಾಲೆ ಹೋಗಿ, ಉಗ್ರಾಸುರನೆಂಬೋ ವೃಕ್ಷರೂಪದಲ್ಲಿದ್ದ ದೈತ್ಯನ್ನ ಕಡಿದುಬಿಟ್ಟನು. ಅವನ ಅನುಜರೂ ವೃಕ್ಷರೂಪದಲ್ಲಿದ್ದರು. ಅವರನ್ನೆಲ್ಲ ಕಡಿದುಬಿಟ್ಟನು. ಆಕಳುರೂಪದಲ್ಲಿ ದೈತ್ಯರಿದ್ದರು. ಅವರನ್ನೂ ಕೊಂದು, ವೃಕ್ಷಗಳನ್ನು ಸುಟ್ಟುಬಿಟ್ಟನು. ಗೋಕುಲವೆಲ್ಲ ನಿರೋಗವಾಯಿತು. ಸ್ವಾಮಿ, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನ, ಗೋಪಾಲಕರಿಗೆ ಸಂತೋಷ ಹೆಚ್ಚಿಸತ, ಯಮುನಾತೀರದಲ್ಲಿ ಮಧ್ಯಾಹ್ನಕಾಲದಲ್ಲಿ ಆಕಳುಗಳ ಕಿರಗಸತ, ಕೊಳಲ ಧ್ವನಿ ಮಾಡತ ಬೃಂದಾವನಪ್ರದೇಶದಲ್ಲಿ, ತನ್ನ ಇಚ್ಛೆಯಿಂದ

ಗೋಪಾಲಕರಿಗೆ ಹಸಿವು ಹುಟ್ಟಿಸಿದ ತಾ ಸರ್ವೋತ್ತಮ, ಹಸಿವು ಪರಿಹರಿಸಲಾಪ. ರಾಮಾವತಾರದಲ್ಲಿ, ದೂರ್ವಾಸಗೆ ತನ್ನ ಅಂಗೈಯಲ್ಲಿ ಚತುರ್ವಿಧಾನ್ನ ಕೊಟ್ಟು ತುಷ್ಟಿಬಡಿಸ್ಯಾನೆ. ಯಜ್ಞಪತ್ನೀರ ಭಕ್ತಿವಿಶೇಷ ತೋರಿಸಬೇಕಾಗಿ, ಸಮೀಪದಲ್ಲಿ ಬ್ರಾಹ್ಮಣರು ಸತ್ರನಾಮಕ ಯಜ್ಞ ಮಾಡತಿದ್ದರು, ಅಲ್ಲಿಗೆ ಗೋಪಾಲಕರ ಕಳುಹಿಸಿಕೊಟ್ಟ. 'ಕೃಷ್ಣಬಲರಾಮರು ಬಂದಾರೆ. ಗೋಕುಲದಿಂದ ತಂದಿದ್ದ ಅನ್ನ ತೀರಿಹೋಯಿತು. ಕ್ಷುಧಿಯಿಂದ ಅನ್ನ ಬೇಡಿ ಕಳಿಸ್ಯಾರೆ' ಎಂದು ಅನಲಿಕ್ಕೆ, ಆ ಬ್ರಾಹ್ಮಣರು ಓದು ಕೇಳಿ ಏನು ಪ್ರಯೋಜನ! ವೇದಶಾಸ್ತ್ರ ಒದಿದರೇನು! ಭಕ್ತಿಯಿಲ್ಲದೆ, ಸರ್ವೇಶ್ವರನೆಂದು ತಿಳಿದೂ ತಿಳಿದೂ ಗೋಪಾಲಕರ ಮಾತು ಕಿವಿಗೆ ಹಾಕಿಕೊಂಡಿದ್ದಿಲ್ಲ. ಕೇಳಿ, ಕೇಳಧಾಂಗೆ ಸುಮ್ಮಗೆ ಇದ್ದಕಾರಣ, ಗೋಪಾಲಕರು ತಿರಗಿ ಬಂದರು. ಕೃಷ್ಣರಾಮರಿಗೆ ವಾರ್ತಿ ಹೇಳಿದರು. 'ಹೆಂಗಸರು ದಯಾಳು ಗಳಿದ್ದಾರೆ, ನನ್ನ ಹೆಸರೀಲಿ ಅನ್ನ ಬೇಡಿಕೊಂಡು ಬನ್ನಿ' ಎನಲಿಕ್ಕೆ, ಸ್ವಾಮೀ ಆಜ್ಞೆದ ಪ್ರಕಾರ, ಯಜ್ಞಪತ್ನೀರುಗಳಿಗೆ ಕೇಳಲಿಕ್ಕೆ, ಅವರು ತೀವ್ರದಿಂದ ನೂತನ ಅನ್ನ, ಸುವರ್ಣಪಾತ್ರಿಯೊಳಗೆ ತುಂಬಿಕೊಂಡು ಬಂದರು. ಪತಿಗಳಿಗೆ ಹೇಳದೇ ಕೇಳದೇ ಸ್ವಾಮಿಗೆ ಅನ್ನ ಒಯ್ದುಕೊಟ್ಟರು. ಅವರೊಳಗೆ ಒಬ್ಬ ಬ್ರಾಹ್ಮಣನು, ಹೆಂಡತಿಗೆ ನಿರ್ಬಂಧ ಮಾಡಿದಕಾರಣ, ಸ್ವಾಮೀ ದರ್ಶನವಾಗಲಿಲ್ಲ ಎಂದು ದೇಹ-ತ್ಯಾಗ ಮಾಡಿದಳು. ಆಕೆಗೆ ದಿವ್ಯಗತಿ ಆಯಿತು. ಶಾಸ್ತ್ರಶ್ರವಣದಿಂದ ಕೃಷ್ಣನ ಮಹಿಮಿ ಬಲ್ಲವರು ಆಸ್ತಿಕತದಿಂದ ಕೃಷ್ಣಗೆ ಅನ್ನ ಒಯ್ದುಕೊಟ್ಟವ್ಯಾಲಿ, 'ಸರ್ವೋತ್ತಮ ದೇವತಿ ಅನ್ನ ಬೇಡಿ ಕಳುಹಿದ, ನಾವು ಕಳುಹಲಿಲ್ಲ, ನಮ್ಮ ಜನ್ಮ ಸುಡಲಿ' ಎಂದು ಪಶ್ಚಾತ್ತಾಪ ಉಳ್ಳವರಾಗಿ, ಆ ಕ್ಷಣವೇ ಕೃಷ್ಣನ ದರ್ಶನಕ್ಕೆ ಹೋಗಬೇಕಾದವರು, ಕಂಸನ ಭಯದಿಂದ, ಆಂಗೀರಸಕುಲೋತ್ಪನ್ನ ಬ್ರಾಹ್ಮಣರು ಕೃಷ್ಣದರ್ಶನಕ್ಕೆ ಹೋಗಲಿಲ್ಲ.

ಮತ್ತೊಂದು ವಿಚಿತ್ರ ಮಹಿಮಿ ತೋರಿಸಿದನು. ದೇವೇಂದ್ರನ ಸೊಕ್ಕು ಮುರೀಥಾನೆ. ಅದೇನೆಂದರೆ, ನಂದಗೋಪ ಮೊದಲಾದ ಗೋಪಾಲಕರು, ದೇವೇಂದ್ರ ತಮಗೆ ಮಳಿಗರೆಯಥಾನೆ, ಆದ್ದರಿಂದ ನೀರು, ಹುಲ್ಲು ಬಿತ್ತು ಬೆಳೀಥಾರೆ. ಆದಕಾರಣ ಪ್ರತಿಸಂವತ್ಸರ ಇಂದ್ರನಗೋಸ್ಕರ ಯಜ್ಞ ಆರಂಭಿಸಿ, ಆಕಳುಗಳ ಶೃಂಗಾರ ಮಾಡಿ ಸರ್ವಸಾಮಗ್ರಿಗಳ ತಂದು, ಸರ್ವತಂತ್ರಸ್ವತಂತ್ರ ಸ್ವಾಮಿ ಶ್ರೀಕೃಷ್ಣನೆಂದು ತಿಳೀದೆ, ಇಂದ್ರನಗೋಸ್ಕರ ಯಜ್ಞ ಆರಂಭಿಸಿದರು. ಸ್ವಾಮಿ ಸರ್ವವ್ಯಾಪ್ತ, ತಾ ಏನೂ ಅರೇನೆಂಬೋ ಹಾಂಗೆ 'ಇದೇನು ಮಾಡ-ತಿದ್ದೀರಿ?' ಎಂದು ಕೇಳಲಿಕ್ಕೆ, 'ಪ್ರತಿವರುಷ ಇದೇ ಪ್ರಕಾರ ಮಾಡಥೀವಿ' ಎನಲಿಕ್ಕೆ, ದೇವೇಂದ್ರ ತನ್ನ ಭಕ್ತ, ಆತನೇ ದೇವರು, ಕೃಷ್ಣ ಮನುಷ್ಯನೆಂದು ತಿಳಿದಿದ್ದಾರೆ. ಆದಕಾರಣ ಇಂದ್ರನ ಪೂಜಿ ಭಂಗಮಾಡಿ ತೋರಿಸಬೇಕೆಂದು,

ಮಾಡಿದಂಥ, ಚತುರ್ವಿಧಾನ್ನ ರಸಪಾನಗಳು ಷಡ್ರಸೋಪೇತವಾದಂಥಾವು, ಪರ್ವತಕ್ಕೆ ನೈವೇದ್ಯ ಕೊಡಿಸಿ, ಒಂದು ರೂಪದಲ್ಲಿ ಪರ್ವತಾಕಾರರೂಪನಾಗಿ ಉಣತಿಹ. ಗೋವಿಂದ ಗೋಪಾಲರ ಕೂಡಿಕೊಂಡು, ಪರ್ವತಕ್ಕೆ ಪ್ರದಕ್ಷಿಣೆ ಮಾಡತ 'ಪರ್ವತ ಹ್ಯಾಂಗೆ ಉಣತದೆ, ನಿಮ್ಮ ದೇವೇಂದ್ರ ಹ್ಯಾಂಗೆ ಉಣಥಾನೆ' ಎಂದು ದೇವೇಂದ್ರಗೆ ಉಪಹಾಸ ಮಾಡತಾ, ಬ್ರಾಹ್ಮಣ ಭೋಜನವಾದಮ್ಯಾಲೆ ಮಾದಿಗ, ಚಂಡಾಲ ಮೊದಲಾದವರಿಗೆ ಅನ್ನಪಾನಗಳು ಕೊಡಸ್ತಿಹ. ದೇವೇಂದ್ರ ಮಾದಿಗಗಿಂತ ಅತ್ತಲಾಗಿ ದೂರ ನಿಂತಿಹ. ಸ್ವಾಮೀ ದಯ ತಪ್ಪಿದಮ್ಯಾಲೆ, ತ್ರಿಲೋಕಪತಿ ದೇವೇಂದ್ರಗೆ ಈ ಅವಸ್ಥಿ ಆಯಿತು. ದೇವೇಂದ್ರ ಅಸುರಸ್ವಭಾವದಿಂದ ಬಹಳ ಕೋಪಾವಿಷ್ಟನಾಗಿ, ತನ್ನ ಪೂಜಿ ಭಂಗವಾಯಿತು, ತನಗೆ ಅನ್ನ ಕೊಡಲಿಲ್ಲವೆಂದು ಪ್ರಳಯಕಾಲದ ಮೇಘಗಳಿಗೆ ಅಪ್ಪಣಿ ಕೊಡಲು, ಆ ಮೇಘಗಳು ಚನೀಸೊಂಡಿಲಿನೋಪಾದಿ ಮಳಿಧಾರಿ ಸುರೀತಿಹೋವು. ಗೋಕುಲದಲ್ಲಿ ಆಕಳುಗಳು ಮಳಿಯಿಂದ ಹಂಬಾರವಗರೀತಿಹೋವು. ಗೋಪಾಲಕರೆಲ್ಲ ಗೋವಿಂದಗೆ ಶರಣು ಹೋಗತಿಹೋರು. ಸ್ವಾಮಿ ಭಕ್ತವತ್ಸಲ ಭಕ್ತರನ್ನ ಸಂರಕ್ಷಿಸಬೇಕಾಗಿ, ಲೀಲಾಪಾತ್ರದಿಂದ ಎಡದ ಕೈ ಕಿರಿಬೆರಳಿನಿಂದ ಗೋವರ್ಧನಗಿರಿ ಎತ್ತಿ, ಸಕಲ ಸಾಮಗ್ರಿ, ಗೋಪಾಲಕರನ್ನೆಲ್ಲ, ಆಕಳುಗಳನ್ನೆಲ್ಲ ಪರ್ವತದ ಕೆಳಗೆ ಹೋಗಿಸಿದನು. ಹೀಂಗೆ ಏಳು ದಿವಸ ದೇವೇಂದ್ರ ಏಕಪ್ರಕಾರ ಮಳಿಗರೆದು ಭಗ್ನಸಂಕಲ್ಪವುಳ್ಳವನಾದ. ಅಸುರಾವೇಶ ಹೋಯಿತು. 'ನಾನು ಸ್ವಾಮೀ ಕೂಡ ವಿರೋಧ ಆಚರಿಸಿವೆನಲ್ಲ!' ಎಂದು ಪಶ್ಚಾತ್ತಾಪವುಳ್ಳವನಾಗಿ, ತಮ್ಮ ಸ್ವಾಮಿ ಶ್ರೀಕೃಷ್ಣ ಭೂಮೀಮ್ಯಾಲೆ ಅವತಾರ ಮಾಡಿದ್ದಾನೆ. ಗೋಬ್ರಾಹ್ಮಣರಲ್ಲಿ ವಾತ್ಸಲ್ಯ ಉಳ್ಳಾತನಾದಕಾರಣ, ಸುರಭಿ ಮುಂದೆ ಮಾಡಿಕೊಂಡು ಸ್ವಾಮಿಗೆ ಶರಣುಹೊಕ್ಕನು. ದಂಡದೋಪಾದಿ ನಮಸ್ಕಾರ ಮಾಡಿ, ತನ್ನ ಯೋಗ್ಯತಾನುಸಾರ ಉಪನಿಷದ್ವಾಕ್ಯಗಳಿಂದ ಸ್ವಾಮಿಯನ್ನ ಸ್ತೋತ್ರ ಮಾಡಿದನು. 'ಸೃಷ್ಟಿ, ಪಾಲನಿ, ಸಂಹಾರ ಮಾಡತಿದ್ದಿ, ಸಮಾಧಿಕ ಶೂನ್ಯ. ನಾವು ನಿನ್ನ ಮಕ್ಕಳು, ತಲುವಾರಿಗಳ ಅಪರಾಧ ಕ್ಷಮಿಸಬೇಕು. ಕರುಗಳು ಹಾಲು ಬರದಿದ್ರೆ ಸ್ನೇಹದಿಂದ ಗುಮ್ಮಥಾವೆ. ಆಕಳುಗಳು ಮೊಲಿ ತೊರಿಸಥಾವೆ. ಹಾಂಗೆ ನಾವು ಬಾಲಕರು, ನೀನು ಕ್ಷಮಾಸಮುದ್ರ, ಸರ್ವ ಅಪರಾಧಗಳು ಕ್ಷಮಿಸಬೇಕು' ಎಂದು ಸಹಸ್ರನಾಮದಿಂದ ಸ್ತೋತ್ರ ಮಾಡಲಿಕ್ಕೆ, ಸ್ವಾಮಿ ತನ್ನ ಭೃತ್ಯನ ಅಪರಾಧ ಲಕ್ಷ್ಯ ಮಾಡಲಿಲ್ಲ. 'ನಿನ್ನ ವ್ಯಾಳಿ ಕ್ಷೋಮವೇ ಮಾಡಿದ್ದೀನಿ. ನನ್ನ ಮಾತು ಕೇಳದ ಕಾರಣ ನಿನ್ನ ಪೂಜಿಗೆ ವಿಘ್ನ ಮಾಡಿದ್ದೀನಿ. ನಿನ್ನ ಅಸುರ ಸ್ವಭಾವ ಹೋಗಬೇಕಾಗಿ ನಿನ್ನ ಸಂಕಲ್ಪ ವ್ಯರ್ಥ ಮಾಡಿದ್ದೀನಿ.' ಹೀಂಗೆ ಸ್ವಾಮಿ ಮಾತನಾಡಲಿಕ್ಕೆ, ದೇವೇಂದ್ರ ಬಹಳ ಪ್ರೀತನಾಗಿ, ಸುರಭೀ ಮೊಲಿಗಳಿಂದ ಸ್ವಾಮೀ ವ್ಯಾಳಿ ಕ್ಷೀರಾಭಿಷೇಕ ಮಾಡಿದನು. ಅನ್ನಂತರ ಚನೀ ಸೊಂಡಲೊಳಗಿಂದ

ತುಂಬಿಕೊಂಡು ಬಂದ ಮೀಸಲೋಡಕದಿಂದ ಸ್ವಾಮಿಗೆ ಅಭಿಷೇಕ ಮಾಡಿದನು. ದೇವೇಂದ್ರ, ಸ್ವಾಮೀ ಕೈಯ ಅಪ್ಪಣೆ ಕೊಂಡು ಸ್ವರ್ಗಕ್ಕೆ ಹೋದನ್ಯಾಲೆ, ಕೃಷ್ಣ ಸಾಕ್ಷಾತ್ ನಾರಾಯಣನೆಂದು ತಿಳಿದು, ಗೋಪಾಲಕರು ಭೃತ್ಯರಪ್ಪಂದೆ ಸ್ವಾಮಿಗೆ ವಾಲ್ಗೈಸಹೊಕ್ಕರು. ಬಲರಾಮ ಪ್ರಲಂಭನೆಂಬೋ ದೈತ್ಯನ ಕೊಂದ, ಬಲರಾಮ ದೇವೋತ್ತಮನಿವ್ವಾನೆ. ಹೀಂಗೆ ನಿಶ್ಚಯಜ್ಞಾನ ತಿಳಿದು ಇಹೋರು.

ಅದರ ತರುವಾಯ ಹಿಮಂತಋತುವಿನಲ್ಲಿ ಕನ್ನಿಕೇರು, ಯಮುನಾತೀರದಲ್ಲಿ ಅರುಣೋದಯಕಾಲಕ್ಕೆ ಸ್ನಾನಮಾಡಿ, ಕೃಷ್ಣ ತಮಗೆ ಗಂಡನಾಗಬೇಕೆಂದು ಗೌರೀ ಪೂಜಿ ಮಾಡತಿಹೋರು. ಒಂದು ದಿವಸ ತಮ್ಮ ಉಟ್ಟ ವಸ್ತ್ರ ತೀರದಲ್ಲಿಟ್ಟು, ಜಲದೊಳಗೆ ಹೋಗಿ ಸ್ನಾನ ಮಾಡಥಾರೆ. ಅದೇ ಕಾಲದಲ್ಲಿ ಸ್ವಾಮಿ ಗೋಪಾಲಕರಿಂದ ಯುಕ್ತನಾಗಿ, ಅವರ ಸಮೀಪಕ್ಕೆ ಹೋಗಿ, ತೀರದಲ್ಲಿಟ್ಟ ವಸ್ತ್ರಗಳ ಕೊಂಡು ಕಡಹದವುರವೇರಿದನು. ಗೋಪಾಲಕರೆಲ್ಲ ನಗತಿಹೋರು. ಕನ್ನಿಕೆಯರು ಛಳಿಯಿಂದ ಪೀಡಿತರಾಗಿ, 'ವಸ್ತ್ರ' ಎಂದು ಬೇಡಿಕೊಳ್ಳತಿಹೋರು. 'ವಸ್ತ್ರ ಕೊಡದಿದ್ದರೆ ನಂದಗೋಪಗೆ ಹೇಳಿ ಬಡಿಸೇವು. ನಾವು ನಿನ್ನ ದಾಸರಿದ್ವೀವಿ.' ಹೀಂಗೆ ಚತುರ್ವಿಧ ವಿಧಾನದಿಂದ ಬೇಡಿಕೊಂಡರೂ ವಸ್ತ್ರ ಕೊಡವಲ್ಲ. 'ಜಲದೊಳಗಿಂದ ಹೊರಗೆ ಬಂದು ನಮಸ್ಕಾರ ಮಾಡಿದರೆ ಕೊಟ್ಟೀನು, ನೀರೊಳಗಿಂದ ಮಾಡಿದರೆ ಕೊಡವಲ್ಲೆ' ಎಂದನು. ಜಲದೊಳಗಿಂದ ಬಂದು ಒಂದು ಕೈಲಿ ನಮಸ್ಕಾರ ಮಾಡಿ, ಒಂದು ಕೈಲಿ ಯೋನಿ ಮುಚ್ಚಿಕೊಳ್ಳಲು, 'ಎರಡೂ ಕೈಲಿ ನಮಸ್ಕಾರ ಮಾಡರಿ' ಎನಲಿಕ್ಕೆ, ಸ್ವಾಮಿಯ ಆಜ್ಞೆ ಮೀರಲಿಕ್ಕೆ ವಶವಲ್ಲ. ಎರಡೂ ಕೈ ನೆಗಹಿ ನಮಸ್ಕಾರ ಮಾಡಿದರು. ಸ್ವಾಮಿ ಆ ಸ್ತ್ರೀಯರ ಕೈಯ ನಮಸ್ಕಾರ ಮಾಡಿಸಿಕೊಂಡು ವಸ್ತ್ರಗಳ ಕೊಟ್ಟನು. ತಮ್ಮನ್ನ ನಾಚಿಕೆ-ಭ್ರಷ್ಟರನ್ನ ಮಾಡಿದನೆಂದು ಅಸಹ್ಯಬಟ್ಟಿದ್ದಿಲ್ಲ, ಶ್ರೀಕೃಷ್ಣನ ಅಂಗಸಂಗವುಳ್ಳವರಾದರು. ಗೋಪಿಕಾಸ್ತ್ರೀಯರು ಕಾಮುಬಾಣದಿಂದ ಎಚ್ಚಿಸಿಕೊಂಡು, ಸ್ವಾಮೀ ಕೊಳಲಗಾಯನ ಕೇಳಿ ತಮ್ಮತಮ್ಮ ಪತಿಗಳ ಬಿಟ್ಟುಕೊಟ್ಟು, ರಾತ್ರಿಯಲ್ಲಿ ಬೆಳದಿಂಗಳೊಳಗೆ ಕೃಷ್ಣನ ಸಮೀಪಕ್ಕೆ ಬಂದು, ಕೃಷ್ಣನ ಕೂಡ ವಿಲಾಸ ಮಾಡಿ, ನಾರಾಯಣನಾಮಕ ಹತ್ತುಲಕ್ಷ ಮಕ್ಕಳ ಪಡೆದರು. ಅವರು ಕುರುಪಾಂಡವರ ಯುದ್ಧದಲ್ಲಿ ದುರ್ಯೋಧನನ ಸಹಾಯಕರಾಗಿ ರಣರಂಗದಲ್ಲಿ ಸತ್ತಾರೆ. ಅವರು ದೇವತೆಗಳು. ಜ್ಞಾನಭಕ್ತಿ ವಿಶೇಷವಾಗಿ ಉಳ್ಳವರು. ಗೋಪಿಕಾಸ್ತ್ರೀಯರಲ್ಲಿ ಕೃಷ್ಣನ ಮಕ್ಕಳಾಗಿ ಹುಟ್ಯಾರೆ. ಗೋಪಿಕಾಸ್ತ್ರೀಯರಿಗೆ ಪೂರ್ವಜನ್ಮದಲ್ಲಿ ವರವು ಕೊಟ್ಟಿದ್ದ. 'ನಾನು ಕೃಷ್ಣಾವತಾರ ಮಾಡಿ ಹೆಮ್ಮಣ್ಣಿತನದಲ್ಲಿ ನಿಮ್ಮ ಭೋಗ ಮಾಡೇನು' ಎಂದಿದ್ದ. ಸತ್ಯಸಂಕಲ್ಪ ಸಿದ್ಧವಾಡೋ ಆತ, ತನ್ನ ಮಾತು ಸತ್ಯ ಮಾಡಿದ್ದಾನೆ, ಗೋಪೀಜನಜಾರ, ನವನೀತ ಚೋರ. ಬಿಂದುಮಾತ್ರ ರೇತಸ್ಸು

ಪರಸ್ತ್ರೀಯಲ್ಲಿ ಇಟ್ಟರೆ ತನ್ನ ಕುಲಕೋಟಿ ವಿನಾಶವಾಗತದೆ. ಇಂಥಾ ಅಧರ್ಮ ಹ್ಯಾಂಗೆ ಮಾಡಿದ ಎಂದಲ್ಲಿ, ತಾನು ಚೇತನಶ್ರೇಷ್ಠ, ಹಿರೇರು ಮಾಡಿದ ಆಚಾರ ಪರಂಪರ ನಡಸಬೇಕೆಂದು; ಮೂರ್ಖಪ್ರಾಣಿಗಳು ಕಳವು ಹಾದರ ಮಾಡ್ಯಾರಲ್ಲ ಎಂದಲ್ಲಿ, ತಾನು ನಿರ್ದೋಷವಸ್ತು, ಆನಂದಪೂರ್ಣ, ಲೋಕಕ್ಕೆ ವಿಡಂಬನಿ ತೋರಿಸ್ಯಾನೆ. ಮಹಾರುದ್ರ ವಿಷಪಾನ ಮಾಡ್ಯಾನೆಂದು, ಮನುಷ್ಯಮಾತ್ರದವನು ತಾನೂ ವಿಷಪಾನ ಮಾಡಿದರೆ ಸತ್ತುಹೋದಾನು. ವಿಹಿತ ಮಾಡಬೇಕು, ಅವಿಹಿತ ಬಿಡಬೇಕು. ಸ್ವಾಮಿ ಪೂರ್ಣಕಾಮ, ವೃಂದಾವನದಲ್ಲಿ ನಿರ್ದುಷ್ಟ-ರಾತ್ರೀಲಿ ಗೋಪಿಕಾಸ್ತ್ರೀಯರ ಕೂಡ ಕ್ರೀಡಿ ಮಾಡ್ಯಾನೆ.

ಗೋಪಿಕಾಸ್ತ್ರೀಯರು ಮುಕುಂದನ ವೇಣುನಾದ ಕೇಳಿ ಮೂರ್ಛಿಯುಳ್ಳವರಾಗಿ ಭ್ರಾಂತರಾಗಿರಲಿಕ್ಕೆ, ಶಂಖಚೂಡನೆಂಬೋ ಯಕ್ಷ—ಕುಬೇರನ ಭೃತ್ಯನಾಗಬೇಕು, ಮಹಾರುದ್ರನ ವರಬಲದಿಂದ ಮರಣರಹಿತನಾಗಿಹ—ತಾ ಗೋಪಿಕಾಸ್ತ್ರೀಯರ ಭೋಗಿಸಬೇಕಾಗಿ, ಆಕಳಹಿಂಡುಗಳ ಗೋಪಾಲ ಹ್ಯಾಂಗೆ ಹೊಡಕೊಂಡು ಹೋಗಥಾನೆ, ಹಾಂಗೆ ಗೋಪಿಕಾಸ್ತ್ರೀಯರ ಕೊಂಡುಹೋಗಲಿಕ್ಕೆ, ಗೋವಿಂದಗೆ ಒದರಿದರು. ತಕ್ಷಣದಲ್ಲಿ, ಗೋವಿಂದನು ಶಂಖಚೂಡನ ಕೊಂದು, ಚೂಡಾರತ್ನ ಬಲರಾಮಗೆ ತಂದುಕೊಟ್ಟನು. ಅರಿಷ್ಟನೆಂಬೋ ದೈತ್ಯ—ಕಂಸನ ಭೃತ್ಯನಾಗಬೇಕು—ಗೂಳಿರೂಪದಿಂದ ಬಾಲ ನೆಟ್ಟಗೆ ಮಾಡಿಕೊಂಡು ಹೂಂಕಾರದಿಂದ ಒದರಲಿಕ್ಕೆ, ಆಕಳುಗಳ ಗರ್ಭಪಾತವಾಯಿತು. ಕೃಷ್ಣನ್ನ ಇರಿದು ಕೊಲ್ಲಬೇಕಂತ ಬಂದಿಹ. ಕೋಡು ಮುಂದೆ ಮಾಡಿಕೊಂಡು ಬರಲಿಕ್ಕೆ ಸ್ವಾಮಿ, ಆತನ ಎರಡೂ ಕೋಡು ಹಿಡಿದು ಭೂಮೀಮ್ಯಾಲೆ ಕೆಡಹಾಕಿದನು. ಯಜ್ಞದಲ್ಲಿ ಪಶು ಹ್ಯಾಂಗೆ ಕೊಲ್ಲಥಾರೆ, ಹಾಂಗೆ ವೃಷಭಾಕಾರದ ದೈತ್ಯನ್ನ ಕೊಂದನು. ಕೇಶಿ ಎಂಬ ದೈತ್ಯ ಕುದರೀರೂಪ ಧರಿಸಿ, ಪಾರ್ವತೀವರಬಲದಿಂದ ಉನ್ಮತ್ತನಾಗಿ, ಬಾಯಿ ತೆರದುಕೊಂಡು ಕೃಷ್ಣನ ನುಂಗಲಿಕ್ಕೆ ಬಂದನು. ಆತನ ಬಾಯೊಳಗೆ ಲೋಕದೃಷ್ಟಿಯಿಂದ ತೋಳು ಹಾಕಿದನು. ಅವನ ದೇಹದೊಳಗೆ ತೋಳು ಬೆಳೆಯಿತು. ಕೇಶಿ ಎಂಬ ದೈತ್ಯ, ತೋಳು ತಿಂದೇನಂತ ಯತ್ನ ಮಾಡಲಿಕ್ಕೆ, ಹಲ್ಲು ಪುಡಿಪುಡಿಯಾಯಿತು. ಉಸಿರುಕಟ್ಟಿ ದೈತ್ಯನು ಸತ್ತನು. ಇಷ್ಟಾಗಲಿಕ್ಕೆ ಬ್ರಹ್ಮಾದಿ ದೇವತಿಗಳು ಪುಷ್ಪವೃಷ್ಟಿಗರೆದು ಸ್ತೋತ್ರ ಮಾಡಹೊಕ್ಕರು. ಮಯನ ಮಗ ವ್ಯೋಮನೆಂಬುವ, ಮಹಾರುದ್ರನ ವರಬಲದಿಂದ, ಗೋಪಾಲವೇಷ ಧರಿಸಿ ಅತಿ ತೀಕ್ಷ್ಣನಾಗಿ ಬಂದನು. ಗೋಪಾಲಕರೆಲ್ಲ ಕೂಡಿ ಆಟ ಹೂಡಿದರು. ಹ್ಯಾಂಗೆಂದರೆ, ಅರಸು, ಪ್ರಧಾನಿ, ದೇಶಾಧಿಪತಿ, ಕಳ್ಳರು, ಹೀಂಗೆ ಬಾಲಕತನದ ಆಟ ಆಡಲಿಕ್ಕೆ, ವ್ಯೋಮನೆಂಬವ ಕಳ್ಳತನದಲ್ಲಿ ಗೋಪಾಲಕರ ಆಕಳುಗಳನ್ನೆಲ್ಲ ಗೆದ್ದು, ಪರ್ವತದ ಹೊದರೊಳಗೆ ಹಾಕಿ ಮುಚ್ಚಿಟ್ಟನು. ಲಕ್ಷ್ಮೀಪತಿ ವ್ಯೋಮನ ಕಪಟತನ ತಿಳಿದು

ಅವನನ್ನು ಕೊಂದು ಬಿಷ್ಟ. ಗೋಪಾಲಕರ ಆಕಳುಗಳನ್ನೆಲ್ಲ ಕಡಿಗೆ ತೆಗೆದನು. ಸ್ವಾಮಿ ತನಗೆ ಶರಣುಹೊಕ್ಕವರಿಗೆ ಸಂಸಾರದಿಂದ ಕಡಿಗೆ ಹಾಕಥಾನೆ.

ನಾರದ, ದೇವತಾಕಾರ್ಯ ಸಾಧಿಸಬೇಕಾಗಿ, ಮಥುರಾಪಟ್ಟಣಕ್ಕೆ ಹೋಗಿ ಕಂಸಗೆ ಹೇಳಿದ. 'ವಸುದೇವ ನಿನ್ನ ಕೂಡ ಬಹಳ ಕಪಟತನ ಮಾಡ್ಯಾನೆ. ದೇವಕೀ ಎಂಟನೇ ಗರ್ಭದಲ್ಲಿ ಶ್ರೀಕೃಷ್ಣ ಹುಟ್ಟಿದ. ಅರ್ಧರಾತ್ರೀಲಿ ಗೋಕುಲಕ್ಕೆ ಒಯ್ದು ಯಶೋದಾ ಹತ್ತಿರ ಇಟ್ಟು, ಅಲ್ಲಿದ್ದಂಥ ಹೆಣ್ಣುಕೂಸನ್ನು ಕೊಂಡು-ಒಂದನು. ನಿರಪರಾಧಿ ಹೆಣ್ಣುಮಗಳು, ನೀನು ಕೊಲ್ಲಥೇನೆಂದು ಉದ್ಯುಕ್ತ-ನಾಗಲಿಕ್ಕೆ, ನಿನ್ನ ಕೈಯಿಂದ ಬಿಡಿಸಿಕೊಂಡು ಆಕಾಶಮಾರ್ಗಕ್ಕೆ ಹಾರಿದಳು. ಪೂತನಾ, ಶಕಟಾಕ್ಷ, ತೃಣಾವರ್ತದೈತ್ಯರನ್ನೆಲ್ಲ ನಿನ್ನ ವೈರಿ ಕೃಷ್ಣ ಕೊಂದಾನೆ. ನಂದಗೋಪನ ಮನಿಯಲ್ಲಿ ನಿನ್ನ ವೈರಿ ಬೆಳೀಥಾನೆ. ಆ ಕೃಷ್ಣನ್ನ ಕೊಲ್ಲಬೇಕಾಗಿ, ನೀನು ದಂಡಯಾತ್ರಿ ಮಾಡಿದ ಪಕ್ಷವೇ, ನಿನ್ನ ಸಹವಾಗಿ ಸಂಹಾರ ಮಾಡ್ಯಾನು. ಮಹಾ ಪ್ರಬಲನಿದ್ದಾನೆ, ಉಪಾಯದಿಂದ ಕೃಷ್ಣನ್ನ ಕರೆಕಳುಹಿಸಿ ಆತನ ವಧಿ ಉಪಾಯ ಮಾಡು.' ಹೀಂಗಂದ ನಾರದನ ಮಾತು ಕೇಳಿ ಕಂಸ ಬಹಳ ಕೋಪಾ-ವಿಷ್ಟನಾಗಿ, ದೇಹವೆಲ್ಲ ನಡಗಸ್ತ, ವಸುದೇವ ಕಪಟತನ ಮಾಡಿದನೆಂದು ತುಟಿ ಅವಡುಗಚ್ಚಿ, ಮೈದುನ ವಸುದೇವಗೆ ಹಿಡತರಿಸಿ, ದೇವಕೀಸಹವಾಗಿ ದೊಡ್ಡ ಸಂಕಲಿ ಹಾಕಿದನು. ಕಾರಾಗೃಹಮನಿಯೊಳಗೆ ಹಾಕಿ ನಿರ್ಬಂಧ ಮಾಡಿದನು. ದೇವತಾಕಾರ್ಯ ಸಾಧಿಸಬೇಕಾಗಿ ನಾರದ ಕಂಸಗೆ ಹೇಳಿದನಲ್ಲದೆ, ವಿರೋಧ ಆಚರಿಸಿ ಹೇಳಿದಾತನಲ್ಲ.

ಕಂಸ ತನ್ನೊಳಗೆ ತಾನು ವಿಚಾರ ಮಾಡಿ, ಉಪಾಯದಿಂದ ಕೃಷ್ಣ ಬಲ-ರಾಮರನ್ನು ಕೊಲ್ಲಬೇಕೆಂದು ಧನುರ್ಯಾಗ ಆರಂಭಿಸಿ, ಅಕ್ರೂರನ ಕರೆದು ಮಾತನಾಡಿದ. 'ನಂದಗೋಪ ಮೊದಲಾದ ಗೋಪಾಲಕರು, ಯಶೋದ, ಕೃಷ್ಣ-ಬಲರಾಮರು ನನ್ನ ಸೋದರಳಿಯಂದಿರು ಇದ್ದಾರೆ. ಶೀಘ್ರ ನನ್ನ ರಥ ಏರಿಕೊಂಡುಹೋಗಿ, ಕೃಷ್ಣಬಲರಾಮರ ಕೂಡಿಕೊಂಡು ಬಾ' ಎಂದು ಅಕ್ರೂರಗೆ ಹೇಳಿಕಳುಹಿಸಲಿಕ್ಕೆ, ಅವನು ಬಹಳ ಸಂಭ್ರಮ ಉಳ್ಳವನಾಗಿ, 'ಸ್ವಾಮಿ ಸರ್ವ-ಸಮರ್ಥ, ಪ್ರಳಯಕಾಲದಲ್ಲಿ ಸರ್ವಜಗತ್ತು ಸಂಹಾರ ಮಾಡುವ ಸ್ವಾಮಿಗೆ, ಈ ಕಂಸನ ಭಯವೆ! ನನಗೆ ಸ್ವಾಮೀ ದರ್ಶನವಾದೀತಲ್ಲ' ಎಂದು ಬಹಳ ಹರ್ಷ-ಬಟ್ಟ. ಅಕ್ರೂರ ತಾ ದಾರು ಎಂದರೆ, ಕಿಶೋರನೆಂಬ ಗಂಧರ್ವ, ಸ್ವಾಮೀಸೇವ ಮಾಡಬೇಕಾಗಿ ಅಕ್ರೂರನಾಗಿ ಯಾದವಕುಲದಲ್ಲಿ ಹುಟ್ಯಾನೆ. ಅಕ್ರೂರನಲ್ಲಿ ಬ್ರಹ್ಮದೇವರ, ಸ್ವಾಯಂಭುವ ಮನುವಿನ ಆವೇಶವದೆ. ಅಕ್ರೂರ, ಸ್ವಾಮೀ ದರ್ಶನಕ್ಕೆ ಹೋಗಥೀನೆಂದು, ಸಂತೋಷವುಳ್ಳವನಾಗಿ ತನ್ನ ಜನ್ಮ ಸಫಲ-ವಾಯಿತು, ಆನಂದಪೂರ್ಣನ್ನ ಕಾಣಥೇನಲ್ಲ ಎಂದು, ಭಗವಂತನ ಪಾದಕಮಲ

ಚಿಂತಿಸತಲೇ ಹೋಗತಿಹ. 'ಸ್ವಾಮೀ ಪಾದಾಂಬುಜ ಎಂಥಾವು, ಬ್ರಹ್ಮದೇವರು ಪಾದಪದ್ಮ ಪೂಜಿ ಮಾಡಥಾನೆ. ಇವತ್ತು ಸರ್ವಜನ್ಮ ಸಫಲವಾಗಿ ಒದಗಿಬಂದೇದೆ. ಭಾರದ್ವಾಜಪಕ್ಷಿಗಳು ಶಕುನಗಳ ತೋರಸ್ತಾವೆ. ಇವತ್ತೇ ದೇವರ ಕಂಡು ಕೃತಾರ್ಥನಾದೇನು' ಎಂದು ಮಾರ್ಗದಲ್ಲಿ ಚಿಂತಿಸತಾ ಹೋಗಲಿಕ್ಕೆ, ಸ್ವಾಮಿ ಅಸ್ತಮಾನ ಕಾಲದಲ್ಲಿ ಆಕಳುಗಳ ಕೊಂಡು ಗೋಕುಲಕ್ಕೆ ಪ್ರವೇಶ ಮಾಡಿದ. ಸ್ವಾಮೀ ಹೆಜ್ಜೆಗಳು ಭೂಮಿಧೂಳಿಯೊಳಗೆ ನೆಟ್ಟವೆ. ಮಾರ್ಗದಲ್ಲಿ ಅಕ್ರೂರ ಕಂಡು ರಥದಿಂದಿಳದು, ಸ್ವಾಮೀಪಾದಧೂಳಿ ಕಂಡು—ಆ ಪಾದಧೂಳಿ ಏನು ಪುಣ್ಯ ಮಾಡೇದೆ! ಜಗದೀಶ್ವರನ ಪಾದಸಂಗವಾಗೇದೆ. ಆ ಧೂಳಿ ಬ್ರಹ್ಮರುದ್ರಾದಿ ದೇವತಿಗಳು ಕಿರೀಟಗಳಲ್ಲಿ ಧರಿಸಥಾರೆ. ಜಗತ್ತಿಗೇ ಒಡಿಯ. ಬಲರಾಮ ಆಕಳುಗಳ ಕರೀಥಾನೆ. ಆಕಳುಗಳ ಹಾಲು ಕರೆಸಿಕೊಳ್ಳಥಾನೆ. ಸ್ವಾಮಿ ಆನಂದಸಾಂದ್ರ, ಕುಲಾನುಸಾರ ಕಾರ್ಯ ಮಾಡಥಾನೆ—ಇಂಥಾ ಸ್ವಾಮೀ ಕಂಡು ಅಕ್ರೂರ, ದಂಡದೋಪಾದಿ ಕೃಷ್ಣನ ಪಾದದಮ್ಯಾಲೆ ಬಿದ್ದನು. ಸ್ವಾಮಿ ಅಕ್ರೂರನ್ನ ಎಬ್ಬಿಸಿ ಅಪ್ಪಿಕೊಂಡು, ತನ್ನ ಆಂತಃಪುರಕ್ಕೆ ಕೂಡಿಕೊಂಡುಹೋಗಿ, ದಿವ್ಯಾಸನದಲ್ಲಿ ಕೂಡ್ರಿಸಿ, ಅರ್ಘ್ಯಾದಿ ಷೋಡಶೋಪಚಾರ ಮಾಡಿ, ದಿವ್ಯವಾದ ಚತುರ್ವಿಧಾನ್ನ ಷಡ್ರಸೋಪೇತವಾದಂಥಾದ್ದು ಭೋಜನ ಮಾಡಿಸಿ, ಮೃದುವಾದ ಹಾಸಿಗಿ ಮಾಡಿಕೊಟ್ಟು, ತಾಂಬೂಲ ಗಂಧ ಕಸ್ತೂರಿಗಳನ್ನಿಟ್ಟ. ಸ್ವಾಮಿ ತಾ ಬಲ್ಲರೂ ಸರಿಯೆ, ಏನೂ ಅರಿಯದವನೋಪಾದಿ ಸಮಸ್ತರ ಕ್ಷೇಮ, ಪ್ರಶ್ನ ಮಾಡ್ಯಾನೆ. ಅಕ್ರೂರ, ಸ್ವಾಮೀ ಕೂಡ ಮಾತನಾಡಥಾನೆ. 'ಕಂಸನ ಅಗ್ಗಳಿಕಿ ಬಹಳ. ಬಿಲ್ಲಹಬ್ಬಕ್ಕೆ ನಿಮ್ಮನ್ನ ಕರಿಕಳುಹಿದ್ದಾನೆ. ನಿಮ್ಮನ್ನ ಕೊಲ್ಲಬೇಕಾಗಿ, ಚಾಣೂರ ಮುಷ್ಟಿಕರಿಗೆ ಹೇಳಿದ್ದಾನೆ. ಕುವಲಯ ಎಂಬೋ ಆನಿ ನಿಂದರಿಸಿದ್ದಾನೆ. ಕಂಸ ಬಹಳ ಪಾಪಿ, ಯಾದವರಿಗೆ ಕಂಟಕನಾಗ್ಯಾನೆ. ಭೂಭಾರ ಇಳಿಹಬೇಕಾಗಿ ನಿನ್ನ ಅವತಾರವಾಗೇದೆ. ಶೀಘ್ರ ಪಾಪಿಗಳ ಸಂಹರಿಸು. ಸಜ್ಜನರನ್ನ ಪಾಲಿಸು.' ಹೀಂಗಂತ ಅಕ್ರೂರ ಮಾತನಾಡಲಿಕ್ಕೆ, ಅವಶ್ಯ ಮಥುರಾ ಪಟ್ಟಣಕ್ಕೆ ಬರಥೇನೆಂದು ಅಕ್ರೂರಗೆ ಹೇಳಿದನು.

ಮರುದಿವಸ ರಥ ಏರಿಕೊಂಡು ಮಥುರಾಪಟ್ಟಣಕ್ಕೆ ತೆರಳಿದನು. ಗೋಪಾಲಕರೆಲ್ಲ ಅರಸಗೆ ಕಪ್ಪ ತೆಗೆದುಕೊಂಡು ನಡದರು. ಗೋಪಿಕಾಸ್ತ್ರೀಯರು ಸ್ವಾಮೀ ವಿಯೋಗವಾಗತದೆಂದು ದುಃಖಬಡಹೊಕ್ಕರು. 'ಇವ ಅಕ್ರೂರನಲ್ಲ, ಕ್ರೂರನಿದ್ದಾನೆ. ನಮ್ಮ ಸ್ವಾಮಿ ಶ್ರೀಕೃಷ್ಣನ್ನ ಕೂಡಿಕೊಂಡು ಹೋಗಥಾನೆ' ಎಂದು ದುಃಖಬಡಹೊಕ್ಕರು. ಅಕ್ರೂರ, ಮಾರ್ಗದಲ್ಲಿ ಯಮುನಾತೀರಕ್ಕೆ ಬಂದು ರಥ ನಿಂದರಿಸಿ, ಶ್ರೀಕೃಷ್ಣ ಬಲರಾಮರನ್ನ ರಥದಲ್ಲಿ ಕೂಡ್ರಿಸಿ, ಮಧ್ಯಾಹ್ನ ಸ್ನಾನಕ್ಕೆ ಯಮುನಾನದಿಯೊಳಗೆ ಹೋದನು. ವಿಧಿಪೂರ್ವಕವಾಗಿ ಆಘ-

ಮರ್ಷಣಸ್ನಾನ ಮಾಡಥಾನೆ. ನಿರಂತರ ಶೇಷನ ಕಾಂಬ, ಅವತ್ತು ಶೇಷಶಾಯಿ ನಾರಾಯಣನ ಕಂಡ! ಲಕ್ಷ್ಮೀದೇವಿ ಚಾಮರ ಬೀಸ್ತಾಳೆ. ಬ್ರಹ್ಮಾದಿಗಳು ವಾಲ್ಮೈಸಥಾರೆ. ಮುಂಭಾಗದಲ್ಲಿ ಕೃಷ್ಣಬಲರಾಮರಿದ್ದಾರೆ. ಉದಕದೊಳಗೆ ಕೃಷ್ಣಬಲರಾಮರ ಕಂಡು, ನೀರೊಳಗೆ ಬಿದ್ದರೆಂದು ಮ್ಯಾಲೆ ನೋಡಥಾನೆ, ರಥದೊಳಗೆ ಕೃಷ್ಣಬಲರಾಮರು ಕುಳಿಥಾರೆ! ಪುನಃ ಅಘಮರ್ಷಣಸ್ನಾನ ಮಾಡುವಾಗ, ಶೇಷಶಾಯಿ ನಾರಾಯಣನ್ನ ಸನಕಾದಿ ಯೋಗೀಶ್ವರರು ವಾಲ್ಮೈಸ ಥಾರೆ! ಅಂಥಾ ಸ್ವಾಮೀನ್ನ ಕಂಡು ಅಕ್ರೂರ ಸ್ತೋತ್ರ ಮಾಡಿ, ನಿತ್ಯಕರ್ತವ್ಯ-ಕರ್ಮ ಮಾಡಿಕೊಂಡು, ಆಶ್ಚರ್ಯ ಉಳ್ಳವನಾಗಿ ಬಂದನು. ಕೃಷ್ಣದೇವರು ಕೇಳಥಾನೆ. 'ಏನು ಆಶ್ಚರ್ಯ ಕಂಡಿ, ಕುತೂಹಲ ಕಂಡಿ' ಎಂದು ಕೇಳಲಾಗಿ, 'ನಿನ್ನ ಕಂಡಮ್ಯಾಲೆ ಸಕಲವೂ ಕಂಡಹಾಂಗೆ.' ಹೀಂಗೆ ಹೇಳಿ, ಕೃಷ್ಣಬಲರಾಮರ ಸಹಿತ ರಥ ಬಿಟ್ಟುಕೊಂಡು, ಅಸ್ತಮಾನಸಮಯದಲ್ಲಿ ಮಥುರಾಪಟ್ಟಣಕ್ಕೆ ಬಂದನು. 'ನಾವು ಬಂದ ವರ್ತಮಾನ ಕಂಸಗೆ ಮುಟ್ಟಿಸು' ಎಂದ ಕೃಷ್ಣನ ಮಾತು ಕೇಳಿ, 'ಸ್ವಾಮಿ ನನ್ನ ಮನಿಗೆ ಬರಬೇಕು' ಎಂದು ಅಕ್ರೂರ ಕರೆಯಲು 'ಕಂಸನ ಕೊಂದು, ಅಗತ್ಯ ನಿನ್ನ ಮನಿಗೆ ಬಂದೇನು' ಎಂದು ಸಮಾಧಾನ ಮಾಡಿದನು.

ಸ್ವಾಮಿ, ಪಟ್ಟಣ ನೋಡಲಿಕ್ಕೆ ಗೋಪಾಲಕರಿಂದ ಯುಕ್ತನಾಗಿ ಹೋಗ-ಥಾನೆ. ಸಮಸ್ತ ಜನರುಗಳು, ಸರ್ವೇಶ್ವರ ಬಂದನೆಂದು ರತ್ನ, ಕಾಣಿಕೆಗಳ ಕೊಂಡು ಎದುರುಗೊಳ್ಳತಿಹೋರು. ರಜಕ ಅನ್ನೀಮ್ಯಾಲೆ ಕಂಸನ ಹೊದ್ದಿಕೆ ಹಾಕಿಕೊಂಡು ಹೋಗಥಾನೆ. ಆ ರಜಕ ಪಾರ್ವತೀ ವರಬಲದಿಂದ ಮರಣರಹಿತನಾಗಿಹ. 'ನೂತನ ವಸ್ತ್ರಗಳ ಕೊಡು' ಎಂದು ರಜಕನ್ನ ಕೇಳಲಿಕ್ಕೆ, 'ಅರಸನ ವಸ್ತ್ರ ಗೋಪಾಲಕರಿಗೆ ಥರವಲ್ಲ. ಅರಸನ ಸಮಾನವಾದೇವೆಂದವರಿಗೆ ಕ್ಷೇಮವಿಲ್ಲ' ಎಂದಂಥ ಮಾತು ಕೇಳಿ, ಸ್ವಾಮಿ ತುದಿಗೈಯಿಂದ ರಜಕಗೆ ಹೊಡಿಯಲಿಕ್ಕೆ, ಆ ಕ್ಷಣವೇ ಸತ್ತನು. ಅರಸನ ಹೊದ್ದಿಕೆಗಳೆಲ್ಲ ಸ್ವಾಮಿ ಅಪ್ಪಣಿ ಮ್ಯಾಲೆ ಗೋಪಾಲಕರೆಲ್ಲ ಹೊದ್ದುಕೊಂಡರು. ಮಾರ್ಗದಲ್ಲಿ ವಸ್ತ್ರಗಳ ಹಾಸಿ, ಅದರಮ್ಯಾಲೆ ಕೃಷ್ಣ-ಬಲರಾಮರು ನಡೀತಿಹೋರು. ವಸ್ತ್ರಗಳು ತನಗೇನೂ ಬೇಕಾಗಿಲ್ಲ. ಸ್ವಾಮಿ ಆನಂದಸಾಂದ್ರ, ಪೂರ್ಣಕಾಮ, ಮಾರ್ಗದಲ್ಲಿ ನಾಪಿತನ ಕಂಡು, ಕಾಲಿಗೆ ಅಳತಿ ಹಚ್ಚಿಸಿಕೊಂಡು, ಸ್ವಾಮಿ ನಾಪಿತನ ಕೈಯ್ಯ ಸೇವಿ ಕೊಂಡ. ಸುಧಾಮನೆಂಬ ಹೂವುಗಾರ, ಮಾಲಿ ತಂದುಕೊಟ್ಟ. ಆ ಹೂವಿನಹಾರ ಹಾಕಿಕೊಂಡನು. ಇವರು ದಾರೆಂದರೆ ಹೂವುಗಾರ, ನಾಪಿತ ಪೂರ್ವದಲ್ಲಿ ಸ್ವಾಮಿ ವೈಕುಂಠಕ್ಕೆ ಹೋದರೆ ಕನ್ನಡಿ ತೋರಿಸೋಣ, ಮಾಲಿ ಸಮರ್ಪಿಸೋಣ ಮಾಡತಿದ್ದರು. ಅವರು ಸ್ವಾಮೀ ಸೇವಿ ಮಾಡಬೇಕಾಗಿ ಹುಟ್ಟಿದ್ದರು. ಸ್ವಾಮಿ ತನ್ನ ಭೃತ್ಯರ ಮನೋಭೀಷ್ಟ

ಪೂರ್ಣ ಮಾಡಬೇಕಾಗಿ, ಅವರ ಕೈಯ ಸೇವಿ ಕೊಂಡು, ವೈಕುಂಠದಲ್ಲಿ ಸಾರೂಪ್ಯ-ಪದವಿ ಕೊಟ್ಟನು.

ಈ ಪ್ರಕಾರ ರಾಜಮಾರ್ಗದಲ್ಲಿ ಹೋಗಥಾನೆ. ಕುಬ್ಜಾ ಕಂಸಗೆ ಗಂಧ ಲೇಪನ ಮಾಡಲಿಕ್ಕೆ ಒಯ್ಯುತಿದ್ದಳು. 'ಎಲ್ಲಿಗೆ ಹೋಗತಿದ್ದಿ?' ಎಂದು ಸ್ವಾಮಿ ಕೇಳಿದ. 'ಕಂಸನ ನಿಮಿತ್ತ ಒಯ್ತೀನಿ' ಎನಲಿಕ್ಕೆ, 'ನನಗೆ ಕೊಟ್ಟೀಯ?' ಎಂದು ಕೇಳಿದರೆ, 'ಅವಶ್ಯ ಕೊಟ್ಟೀನು' ಎಂದು ಭಕ್ತಿಪೂರ್ವಕವಾಗಿ ಕುಬ್ಜಾ, ಸ್ವಾಮಿಗೆ ಗಂಧ ಕೊಡಲಿಕ್ಕೆ, ಮಹಾಪ್ರೀತಿಯಿಂದ ಗೋಪಾಲಕರ ಸಹವಾಗಿ ಪರಿಮಳಗಂಧ ಹಚ್ಚಿಕೊಂಡನು. ತತ್ಕಾಲಕ್ಕೇ ಫಲ ತೋರಿಸಬೇಕಾಗಿ—ಕುಬ್ಜಾ ಮೂರು ಕಡೀಲಿ ಡೊಂಕು ಇದ್ದಳು—ಸ್ವಾಮಿ, ಕುಬ್ಜಾನ ಪಾದದಮ್ಯಾಲೆ ಪಾದವಿಟ್ಟು, ಆಕೀ ಮೈಮ್ಯಾಲೆ ಕೈಹಾಕಿ ಬಿಗಿಯಲಿಕ್ಕೆ, ಸರಳ ದೇಹವುಳ್ಳಾಕಿ ಯಾದಳು. ಕುಬ್ಜಾಗೆ ಕಾಮೋದ್ರೇಕವಾಯಿತು. ನನ್ನ ಮನಿಗೆ ಭೋಗಕ್ಕೆ ಬರಬೇಕೆಂದು ಶೆರುಗು ಹಿಡದು ಜಗ್ಗಿದಳು. 'ನಾವು ವನಚಾರಿಗಳು, ಮನೀ ಇಲ್ಲದವರು. ಈ ಪಟ್ಟಣದಲ್ಲಿ ನಿಮ್ಮ ಮನೀ ಹೊರ್ತು ನಮಗೆ ಮನೀ ಎಲ್ಲಿ ಅದೆ. ಕಂಸನ ಕೊಂದು ನಿಮ್ಮ ಮನಿಗೆ ಅವಶ್ಯ ಬಂದೇನು' ಎಂದು ಸೈರಂಧ್ರೀನ* ಸಮಾಧಾನ ಮಾಡಿ ಶೆರಗು ಬಿಡಿಸಿಕೊಂಡು ಹೋದನು.

ಕುಬ್ಜಾನ್ನ ಸರಳದೇಹವುಳ್ಳಾಕಿಯನ್ನಾಗಿ ಮಾಡಿದ. ಸ್ವಾಮಿ ಅನಂತ-ಪರಾಕ್ರಮವುಳ್ಳಾತ, ಉತ್ತಮ ಪೀತಾಂಬರ ಉಟ್ಯಾನೆ, ಕುಂಕುಮಕೇಸರಿ ಗಂಧ ಹಚ್ಯಾನೆ, ಮಾಲಿಗಳು ಹಾಕಿಕೊಂಡಾನೆ, ಮಾವ ದಾವಲ್ಲಿ ಬಿಲ್ಲಹಬ್ಬ ಮಾಡಥಾನೆಂದು ಸಮೀಪಕ್ಕೆ ಹೋದ. ಆ ಧನಸ್ಸು ಮಹಾರುದ್ರ ಕೊಟ್ಟಂಥಾದ್ದು, ಕೃಷ್ಣ ಬಲರಾಮರು ಬಿಲ್ಲ ಸಮೀಪಕ್ಕೆ ಹೋಗಿ, ಅಧನನ್ನು ತೆಗೆದುಕೊಂಡು ಹೆಪ್ಪೆಯೇರಿಸಲಿಕ್ಕೆ, ಸ್ವಾಮೀಬಲ ತಾಳಲಾರದೆ ಬಿಲ್ಲು ನಡುಮಧ್ಯದಲ್ಲಿ ಮುರಿಯಿತು. ಬ್ರಹ್ಮಾಂಡ ಒಡೆದರೆ ಎಂಥಾ ಶಬ್ದವಾಗತದೋ, ಅಂಥಾ ಶಬ್ದವಾಯಿತು. ಕಂಸ ಇಂಥಾ ಗರ್ಜನಿ ಕೇಳಿ, ಸಿಂಹಾಸನದಿಂದ ಬಿದ್ದು ಮೂರ್ಛಿಯುಳ್ಳವನಾಗಲಿಕ್ಕೆ, ಪ್ರಧಾನೇರು ಎಚ್ಚರಿಸಿ ಸಿಂಹಾಸನದಲ್ಲಿ ಕುಳ್ಳಿರಿಸಿದರು. ಈ ಪ್ರಕಾರ ಏನುಕಾರಣ ಗರ್ಜನಿ ಆಯಿತು, ವರ್ತಮಾನ ಏನು ಎಂದಲ್ಲಿ, ಶ್ರೀಕೃಷ್ಣನ ಅಗ್ಗಳಿಕೆ ಹೇಳಿದರು. ಕೃಷ್ಣಬಲರಾಮರ ಕೊಲ್ಲಿರೆಂದು ತನ್ನ ಸೇನಾಬಲ ಕಳುಹಿಕೊಟ್ಟನು. ಕೃಷ್ಣ-ಬಲರಾಮರು ಬಿಲ್ಲಿನ ಎರಡು ತುಣಕ ಹಿಡಕೊಂಡು, ಸರ್ವಸೈನ್ಯ ಸಂಹಾರ ಮಾಡಿದರು. ಅಸ್ತಮಾನವಾಯಿತು. ನಿಶ್ಚಿಂತಿಯುಳ್ಳವರಾಗಿ, ತಮ್ಮ ಶಿಬಿರಕ್ಕೆ ಹೋಗಿ, ಗೋಪಾಲಕರ ಸಹ ಹಾಲುವಾಗರ ಉಂಡು ಮಲಗಿಕೊಂಡರು.

---

* ಸಾಮಾನ್ಯವಾಗಿ ಹೆಂಗಸರುಗಳಿಗೆ ಅಲಂಕಾರಾದಿಗಳನ್ನು ಮಾಡುವ ದಾದಿ.

ಕಂಸ ತನಗೆ ಮೃತ್ಯು ಬಂತೆಂದು ಬಹಳ ಅಂಜಹೊಕ್ಕನು. ಸೇನಾಬಲವೆಲ್ಲ ಸತ್ತುಹೋಯಿತು. ಇನ್ನು ತನ್ನ ಕೊಂದಾನಲ್ಲ ಎಂದು ಭಯವುಳ್ಳವನಾಗಿ, ಬೆಳಗಾದವ್ಯಾಲೆ, ಮಂಡಲಾಧಿಪತಿ, ದೇಶಾಧಿಪತಿಗಳ ಕರೆಕಳುಹಿಸಿ ತನ್ನ ಸುತ್ತ-ಮುತ್ತ ಕುಳ್ಳಿರಿಸಿಕೊಂಡು ಬಹಳ ಸನ್ನದ್ಧನಾಗಿಹ. ಚಾಣೂರ ಮುಷ್ಟಿಕರಿಗೆ ಆಜ್ಞಾಪಿಸಿದ. 'ರಂಗಸ್ಥಳದಲ್ಲಿ ನಿಂದರರಿ. ಕೃಷ್ಣಬಲರಾಮರನ್ನ ಮಲ್ಲಯುದ್ಧದಿಂದ ಕೊಂದುಬಿಡರಿ. ಅಷ್ಟರೊಳಗೆ ಮಹಂತನ ಕರಸಿ ಆನೀರಂಗಸ್ಥಳದ ದ್ವಾರದಲ್ಲಿ ನಿಂದರಿಸಿರಿ. ಕೃಷ್ಣ ಬರಲಿಕ್ಕ ನನ್ನ ಸೋದರಳಿಯನೆಂದು ಭಿಡೆಮಾಡದೆ, ಆನೀ ಕೈಯಿಂದ ಕೊಲ್ಲಿಸಿಬಿಡಿರಿ.' ಆನಿ ಎಂಥಾದ್ದೆಂದರೆ, ಭೂಮಂಡಲ ಮರ್ದಿಸು ವಂಥಾದ್ದು. ಈ ಪ್ರಕಾರ ಸ್ವಾಮೀಕೂಡ ವಿರೋಧ ಆಚರಿಸಿ, ಇಪ್ಪತ್ತು ಅಕ್ಷೌಹಿಣಿ ಸೇನಾಬಲ ಮಹಾರುದ್ರನ ವರಬಲದಿಂದ ಅತಿಭಯಂಕರವಾಗಿಹೋದು, ಸುನೀಥ ಮೊದಲಾದ ಎಂಟುಮಂದಿ ಅಣ್ಣತಮ್ಮಂದಿರು, ಉಗ್ರಸೇನನ ವೀರ್ಯದಲ್ಲಿ ಹುಟ್ಟಿದವರು, ಕೃಷ್ಣನ ಕೊಲ್ಲಬೇಕೆಂದು ಆಯುಧಗಳ ಹಿಡಕೊಂಡು ನಿಂತರು. ಬೆಳಗಾದವ್ಯಾಲೆ, ಕೃಷ್ಣಬಲರಾಮರು ಓರಿಗಿವುಕ್ಕಳ ಸಹವಾಗಿ ರಂಗದ್ವಾರಕ್ಕೆ ಬರಲಿಕ್ಕೆ, ಬ್ರಹ್ಮಾದಿ ದೇವತಿಗಳು ಹೂವಿನ ಮಳಿಗರೆದರು. ಸ್ವಾಮಿ ದುರಂತಶಕ್ತಿಯುಳ್ಳಾತ, ಮಹಂತನ ಕಂಡು ಮಾತನಾಡಥಾನೆ. 'ಎಲೋ ಮಹಂತ! ಈ ರಂಗದೊಳಗೆ ಹೋಗಬೇಕಾಗೇದೆ. ಅರಸಿನ ನೋಡಲಿಕ್ಕೆ ಹೋಗಥೀವಿ, ಮಾರ್ಗ ಬಿಡು' ಎನಲಿಕ್ಕೆ, ಮಹಾರುದ್ರನ ವರಬಲದಿಂದ ಆನಿ ಬಹಳ ಬಲವುಳ್ಳಂಥಾಗಿ-ಹೋದು, ಇಂಥಾ ಆನೀವ್ಯಾಲೆ ಮಹಂತ ಅಂಕುಶ ಹಾಕಲಿಕ್ಕೆ, ಸ್ವಾಮೀವ್ಯಾಲೆ ಆನಿ ನಡದುಬಂತು. ಆನೀ ಶೀಘ್ರ ಕೊಲ್ಲದೆ ಸೊಂಡಿಲ ಹಿಡದು, ಬಾಲ ಹಿಡದು, ಜಗ್ಗಾಡಿ ಅತ್ತಿತ್ತ ತಿರಗಸ್ಯಾಡಿ ಕುಂಭಸ್ಥಳದಲ್ಲಿ ಕಾಲು ಕೊಟ್ಟು ಹಲ್ಲು ಕಿತ್ತಿ, ನಂತರ ಮಹಂತನ್ನ ಕೊಂದನು. ಆನೀ ಹಲ್ಲುಗಳನ್ನು ಕೃಷ್ಣಬಲರಾಮರು ತಮ್ಮ ಹೆಗಲವ್ಯಾಲೆ ಹಾಕಿಕೊಂಡು ರಕ್ತಬಿಂದುಗಳಿಂದ ಅಲಂಕೃತರಾಗಿ ತೋರ-ತಿಹೋರು. ರಂಗದೊಳಗೆ ಸ್ವಾಮಿ ಬರಲಿಕ್ಕೆ ಸಜ್ಜನರಿಗೆ ಸಂತೋಷವಾಯಿತು. ದುರ್ಜನರಿಗೆ ದುಃಖವಾಯಿತು. ಸೂರ್ಯೋದಯವಾಗಲು ಕಮಲ ಹ್ಯಾಂಗೆ ಅರಳತದೆ, ಹಾಂಗೆ ಸಜ್ಜನರೆಂಬೋ ಕಮಲಗಳು ಅರಳಿದವು.

ಚಾಣೂರ ಮುಷ್ಟಿಕರು ಮಾಧವನ್ನ ಮಲ್ಲಯುದ್ಧಕ್ಕೆ ಕರೆದರು. 'ಅರಸು ದೊಡ್ಡ ದೇವತಿ, ಅರಸಗೆ ಪ್ರೀತಿ ಮಾಡಿದರೆ ಪರಮಸಿದ್ಧಿ ಆಗತದೆ. ನಾವು ನೀವು ಮಲ್ಲಯುದ್ಧ ಮಾಡಿ ಅರಸನ ಪ್ರೀತಿ ಸಂಪಾದಿಸುವ.' ಹೀಂಗನಲಿಕ್ಕೆ ವಾಸುದೇವ ಮಾತನಾಡಥಾನೆ. 'ನೀವು ದೊಡ್ಡವರು, ನಾವು ಬಾಲಕರು. ಮಲ್ಲಯುದ್ಧ ಅರಿತವರಲ್ಲ.' ಇಂಥಾ ವಿನೋದವಚನಗಳಾಡಿ, ಒಂದು ಮುಹೂರ್ತಪರಿಯಂತ ಮಲ್ಲಯುದ್ಧಚಾತುರ್ಯ ತೋರಿಸಿ, ಆಕಾಶಮಾರ್ಗಕ್ಕೆ ಚಾಣೂರನ್ನ ಹಾರಿಸಿ,

ನೂರಾವರ್ತೀಲಿ ತಿರಗಿಸಿ, ಭೂಮೀಮ್ಯಾಲೆ ಅಪ್ಪಳಿಸಿ, ತನ್ನ ಕಾಲಿಲಿ ಒರಸಿ-ಬಿಟ್ಟನು. ಆ ವ್ಯಾಳ್ಯಾದಲ್ಲಿ ದೇವತಿಗಳು ಮಂದಾರಪಾರಿಜಾತ ಮಳಿಗರೆದರು. 'ಜಯ ಜಯ!' ಎಂದು ಹೊಗಳತಿಹೋರು. ಮುಷ್ಟಿಕನ್ನ ಬಲರಾಮು ಕೊಂದನು. ಕೂಟಕ, ಕೋಸಲ ಇವರನ್ನು ಕೃಷ್ಣ ಕೊಂದನು. ಥಲನೆಂಬುವ, ಹಾಂಗೆ ಕಂಸನ ತಮ್ಮಂದಿರು ಯುದ್ಧಕ್ಕೆ ಬಂದರು. ಅವರನ್ನೆಲ್ಲ ಬಲರಾಮು ಲಾಳುಂಡಿಗಿಪೆಟ್ಟಿನಿಂದ ಕೊಂದು ಬಿಟ್ಟನು. ಇಷ್ಟಾಗಲಿಕ್ಕೆ 'ಕಂಸ ತನ್ನ ಮೂಲಬಲಕ್ಕೆ ಅಪ್ಪಣಿ ಕೊಡಲಿಕ್ಕೆ, ಶೀಘ್ರ ಕೃಷ್ಣ ಬಲರಾಮರನ್ನ ಹೊರಗೆ ಹಾಕಲಿಕ್ಕೆ, ಇಪ್ಪತ್ತು ಅಕ್ಷೋಹಿಣಿ ಬಲ ಕಳುಹಿಸಿಕೊಟ್ಟನು. ಬಂದ ಸೇನ ಕೃಷ್ಣ ಬಲರಾಮರಿಗೆ ಸುತ್ತ್ಮಗಟ್ಟಿತು. ಸಿಂಹಗೆ ನರಿಗಳ ಹಿಂಡು ಮುತ್ತಿದಂತೆ ಮುತ್ತಿತು. ಆ ವ್ಯಾಳ್ಯಾದಲ್ಲಿ ದೇವೇಂದ್ರ ತನ್ನ ಸೇವಿ ಮುಟ್ಟಿಸಬೇಕಾಗಿ, ಮಾತಲೀ ಎಂಬ ಸಾರಥೀ ಸಂಗಡ ಅಸ್ತ್ರಶಸ್ತ್ರಗಳಿಂದ ಪೂರಿತವಾದ ರಥ ಕಳುಹಿದ. 'ಸಮುದ್ರಾ ತ್ಪಪ್ಯಂತು' ಎಂಬ ನ್ಯಾಯದಿಂದ, ಸ್ವಾಮೀ ರಥ, ಸ್ವಾಮಿಗೆ ಕಳುಹಿದ ದೇವೇಂದ್ರ ಫಲಕ್ಕೆ ಪಾತ್ರ ನಾದ. ಸೂರ್ಯೋದಯವಾಗತಲೀ ಕಗ್ಗತ್ತಲಿ ಹ್ಯಾಂಗೆ ನಾಶವಾಗತದೆ, ಹಾಂಗೆ ಆಯುಧಗಳಿಂದ ಇಪ್ಪತ್ತು ಅಕ್ಷೋಹಿಣಿ ಬಲ ಸಂಹರಿಸಲಿಕ್ಕೆ, ಕಂಸ ಬಹಳ ಕೋಪಾವಿಷ್ಟನಾಗಿ, ಅಸಿ ಚರ್ಮ ಹಿಡಕೊಂಡು ತಾ ಬರಲಿಕ್ಕೆ ಉದ್ಯುಕ್ತನಾದ. ಅಷ್ಟರೊಳಗೆ ಸ್ವಾಮಿ ಕಂಸನ ಸಮೀಪಕ್ಕೆ ಹಾರಿಕಿ ಮಾಡಿ ಹೋಗಲಿಕ್ಕೆ, ಗಿಡಗನಂತೆ ಕಂಸ ಓಡತಿರಲಿಕ್ಕೆ, ಸ್ವಾಮಿ ಕಂಸನ ತುರುಬು ಹಿಡಕೊಂಡು ಬಲಗೈಯಿಂದ ಮ್ಯಾಲೆ ಹೊಡೀಲಿಕ್ಕೆ, ಮುಕುಟ ಕೆಳಗೆ ಬಿತ್ತು, ಮಕರಗಳು ಕಳಚಿಬಿದ್ದವು, ಕಂಠಾಭರಣ ಹಾರಗಳು ಕಡದು ಬಿದ್ದವು, ಕೋಪಪ್ರಜ್ವಳನಾದ. ನರಸಿಂಹ ಹಿರಣ್ಯ-ಕಶಿಪ್ವನ ಹ್ಯಾಂಗೆ ಅವಸ್ಥಿ ಬಡಿಸಿದ್ದ, ಆ ಅವಸ್ಥಿ ಬಡಿಸಿದನು. ಕಂಸನ್ನ ಮಂಚದಿಂದ ಎಳತಂದು, ಕೆಳಗೆ ಕೆಡಹಾಕಿ, ಅವನಮ್ಯಾಲೆ ಹಾರಿ ಕೊಂದ. ಸ್ವಾಮಿ ಅನಂತಶಕ್ತಿಯುಳ್ಳಾತ, ಸ್ವಾಮೀ ರೋಮಕೂಪದಲ್ಲ ಅನಂತ ಬ್ರಹ್ಮಾಂಡ ಗಳು ಬಿದ್ದವೆ. ಕಂಸ ಸ್ವಾಮೀ ಕೈಯಿಂದ ಸಾಯಬೇಕೆಂಬೋಣವಾಯಿತು. ಸ್ವಾಮಿ ಅವನ ಕೊಂದು ಬಿಟ್ಟನು. ಕಂಸನಲ್ಲಿ ಭೃಗುಋಷಿ ವಾಯುದೇವರು ಇದ್ದರು, ಅವರು ಹೊರಗೆ ಹೊರಟರು. ಪಾಪಿ ಕಾಲನೇಮಿ ತಮಸ್ಸಿನ ದುಃಖ ಉಣಲಿಕ್ಕೆ ಬಂದಾನೆಂದು, ಪೂತನಾ ಮೊದಲಾದ ದೈತ್ಯರೆಲ್ಲ ಮಾರ್ಗ ನೋಡತಾ ಇದ್ದರು.

ಹೆಂಡರು ಮಕ್ಕಳು ಸತ್ತ ದುಃಖ, ದ್ರವ್ಯ ಹೋಗಾಡಿಸಿಕೊಂಡ ದುಃಖ, ಚೇಳು ಕಚ್ಚಿದ ದುಃಖ ಸಹ ಏಕಕಾಲದಲ್ಲಿ ಕೂಡಿದರೆ ಹ್ಯಾಂಗಾಗಬೇಕು, ಅಂಥಾ ದುಃಖ ದಾರಿಗೆ ಆಗತದೆಂದರೆ, ಜೀವೇಶ್ವರಿಗೆ ಐಕ್ಯ ತಿಳಿದವರಿಗೆ, ನಾರಾಯಣನಲ್ಲಿ ದ್ವೇಷವುಳ್ಳವರಿಗೆ. ತುಲಾಭಾರ ತೂಗಿಸಿಕೊಳ್ಳಲ್ಯಾಕೆ, ಯಜ್ಞಕರ್ಮವು ಮಾಡಲಿ,

ಅವಷ್ಟೂ ನಿಷ್ಫಲವಾಗಿ ಹೋಗಥದೆ. ಇನ್ನು ಮೋಕ್ಷ ದಾರಿಗೆಂದರೆ, ದೇವತಿಗಳಿಗೆ ಅತಿಶಯ ಸುಖವಾಗತಿರಬೇಕು; ದೇವರಲ್ಲಿ ದಾವಾಗಲೂ ತೃಪ್ತರಾಗಿ, ನಾರಾಯಣ ನಲ್ಲಿ ಭಕ್ತಿಯಿಂದ ಯುಕ್ತರಾಗಿರಬೇಕು; ಬ್ರಹ್ಮರುದ್ರಾದಿಗಳಿಗೆ ಒಡಿಯ ನಾರಾಯಣನೆಂದು ತಿಳೀಬೇಕು; ನಾರಾಯಣ ಸೃಷ್ಟ್ಯಾದ್ಯಷ್ಟಕರ್ತ, ಲಕ್ಷ್ಮೀದೇವಿ ಉಸಿರು ಬಿಡೋ ವ್ಯಾಪಾರ ಸಹ ಸ್ವಾಮೀ ಅಧೀನವೆಂದು ತಿಳಿದವರಿಗೆ ಅಚ್ಚ ಮೋಕ್ಷವಾಗತದೆ. ನಾರಾಯಣ ನಿರ್ದೋಷ ಗುಣಪೂರ್ಣನೆಂದು ತಿಳಿದು, ತಾರತಮ್ಯಾನುಸಾರ ವರ್ತಿಸಬೇಕು. ಸ್ವಾಮಿ, ಶ್ರೀಕೃಷ್ಣದೇವರು ತನ್ನ ಸಾಮರ್ಥಿಯಿಂದ ಕಂಸನ ಕೊಂದು ಬಿಷ್ಟನು. ಕಂಸನ ಕೊಲ್ಲಲಿಕ್ಕೆ ಸಜ್ಜನರಿಗೆ ಆನಂದೋದ್ರೇಕವಾಯಿತು. ದೇವತಿಗಳು ಮಂದಾರಪಾರಿಜಾತಹೂವಿನ ಮಳೆಗರೆದರು. ಜಯ! ಜಯ! ಎಂದು ಹೊಗಳತಿಹೋರು. ಸ್ವಾಮಿ ನಿರಂತರ ಸುಖವುಳ್ಳಾತ, ಸುಖಸ್ವರೂಪ, ದಾವಾಗಲ್ಲಿ ಉದಯಸ್ಥನಿರಥಾನೆ, ಅಂಥಾ ಸಾಕ್ಷಾತ್ ನಾರಾಯಣ ಇದ್ದಕಾರಣ ಹಗಲು ರಾತ್ರಿ ಎನಿಸತದೆ. ಸ್ವಾಮಿ ತಾಯೀತಂದೀ ಸಂಕಲಿ ಕಡಿಸಿ ಸುಖಬಡಿಸಿದ. ಸ್ವಾಮಿಗೆ ಸೂರ್ಯದೃಷ್ಟಾಂತ ಹೇಳಥಾರೆ. ಸ್ವಾಮಿ ಆನಂದಸಾಂದ್ರ, ಅನಂತಗುಣಪರಿಪೂರ್ಣ, ಭೂಭಾರ ಇಳುಹಲಿಕ್ಕೆ ಅವತಾರ ಮಾಡಿದ್ದಾನೆ. ಇಂಥಾ

ಸ್ವಾಮೀ ಚರಿತ್ರ ದಾರು ಆಸ್ತಿಕತದಿಂದ ಹೇಳಥಾರೆ, ಕೇಳಥಾರೆ ಅವರ ಅರಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿ ಮಾಡಿಕೊಡಥಾನೆ ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ಕಂಸಾದ್ಯಸುರ ಸಂಹಾರಃ' ಎಂಬ ಹದಿಮೂರನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

(1) ಯಯಾತಿಯಂತೆ ಶಾಪ ಪಡೆದು ಬಿಗ ಆಲ್ಲವೆ?

ಅಧ್ಯಾಯ ೧೪

ಶ್ರೀಕೃಷ್ಣಚರಿತೇ ಅಸುರಸಂಹಾರಃ

ಈ ಹದಿನಾಲ್ಕನೇ ಅಧ್ಯಾಯದಲ್ಲಿ—ಶ್ರೀಕೃಷ್ಣ ಕಂಸನ್ನ ಕೊಂದು, ತಾಯಿ ತಂದಿಯರ ಸಂಕಲಿ ಕಡಿಸಿ ನಮಸ್ಕಾರ ಮಾಡಿ, 'ನಾವು ನಿಮ್ಮ ಉದರದಲ್ಲಿ ಹುಟ್ಟಿ ಸುಖ ಕೊಡಲಿಲ್ಲ, ಬಾಲಲೀಲಿಗಳ ತೋರಿಸಲಿಲ್ಲ' ಎಂದನು. ಸರ್ವ ಜಗತ್ತಿಗೇ ತಾಯಿತಂದೆ, ಲಕ್ಷ್ಮೀಬ್ರಹ್ಮಾದಿವಂದಿತ ಶ್ರೀಕೃಷ್ಣನು, ಧರ್ಮ ಸಂರಕ್ಷಿಸಬೇಕಾಗಿ ಲೋಕರೀತಿಯಿಂದ ವಸುದೇವಗೆ ಸಮಾಧಾನ ಮಾಡಿ, ನಮಸ್ಕಾರ ಮಾಡಿ, ವಚನಗಳಾಡಿದ. ತ್ರಿಲೋಕಕ್ಕೆ ಅರಸು ಆದರೂ, ಮಥುರಾಪಟ್ಟಣದ ಅರಸೊತ್ತಿಗೆ ಆಳಬೇಕಾದರೆ ಯಯಾತಿರಾಯನ ಸಂತಾನಕ್ಕೆ ರಾಜ್ಯ ಆಳಬ್ಯಾಡವೆಂದು ಶಾಪ. (1) ವಾಗೇದೆ, ಆದಕಾರಣ ತಾ ಅರಸುತನ ಆಳದೆ, ಉಗ್ರಸೇನರಾಯಗೇ ರಾಜ್ಯಾಭಿಷೇಕ ಮಾಡಿದನು.

ಸ್ವಾಮಿ ತಾನು ವಿಧಿಬದ್ಧನಲ್ಲದಿದ್ದರೂ, ವಸುದೇವನ ಕೈಯಿಂದ ಮೌಂಜಿ ಕಟ್ಟಿಸಿಕೊಂಡು, ನಂದಗೋಪಗೆ ಗೋಕುಲಕ್ಕೆ ಹೋಗೆಂದು ಬಹಳಪ್ರಕಾರ ಸಮಾಧಾನ ಮಾಡಿದ್ದಾನೆ. 'ಇಷ್ಟು ದಿವಸ ನಿಮ್ಮಿಂದ ಲಾಲಿತರಾಗಿದ್ದೆವು. ನಿಮ್ಮ ಮಕ್ಕಳಕಿಂತ ಹೆಚ್ಚುಮಾಡಿ ಸಾಕಿದಿರಿ. ನಿಮ್ಮ ಉಪಕಾರ ನಾವು ಏನೂ ತೀರಿಸಲಿಲ್ಲ' ಎಂದು ಹೇಳಿ, ಗೋಕುಲಕ್ಕೆ ಹೋಗುವಾಗ, ಎಷ್ಟು ಬೇಕು ಅಷ್ಟು ದ್ರವ್ಯದ ಕುಪ್ಪಿಗಳು, ರತ್ನಗಳು ಕೊಟ್ಟು, ಗೋಪಾಲಕರಿಗೆ ಉಡುಗೊರಿ ಉತ್ಸಾಹಗಳು ಕೊಟ್ಟು, ಸಮಾಧಾನ ಮಾಡಿ ಕಳುಹಿಸಿದನು. ನಂದಗೋಪ ಶ್ರೀಕೃಷ್ಣನ್ನ ಬಿಟ್ಟುಹೋಗಲಾರ, ಮಹಾಕಷ್ಟದಿಂದ ಜನಾರ್ದನನ ಧ್ಯಾನ ಮಾಡತ ಹೋದನು. ತದನಂತರ ಗುರುಕುಲವಾಸ ಮಾಡಬೇಕಾಗಿ, ಅವಂತೀಪುರಕ್ಕೆ ಬಲರಾಮನ ಸಹವಾಗಿ ಹೋಗಿ, ವೇದಶಾಸ್ತ್ರಸಂಪನ್ನನಾದ ಸಾಂದೀಪಿನಿ ಎಂಬ ಬ್ರಾಹ್ಮಣನಲ್ಲಿ ವಿದ್ಯ ಕಲಿತನು. ತಾ ಸಕಲ ವಿದ್ಯ ಬಲ್ಲ, ಅನಂತವೇದಪ್ರತಿಪಾದ್ಯ, ಆದರೂ ಗುರುಮುಖದಿಂದ ಕಲಿತನೆಂಬೋದು ಚರಾಚರಕ್ಕೆ ತೋರಿಸಬೇಕಾಗಿ ಓದಿದನು. ತಾ ಸರ್ವಜ್ಞಶಿಖಾಮಣಿ, ಅನಂತವೇದಗಳು ಸ್ವಾಮೀನ ವಾಲ್ಮೀಕಿಸಥಾವೆ, ವೇದ-ಶಾಸ್ತ್ರಗಳ ಹೊರತು ಹದಿನಾಲ್ಕು ವಿದ್ಯ, ಅರುವತ್ತನಾಲ್ಕು ಕಳಾ ಕಲಿತನು. ದೇವತೆಗಳು ಮನುಷ್ಯರ ಹೊಟ್ಟೀಲಿ ಹುಟ್ಟಿದ ಕಾಲಕ್ಕೂ ತಮ್ಮ ಗುಣಗಳ ಪ್ರಕಟ ಮಾಡೋದಿಲ್ಲ. ಮನುಷ್ಯಸ್ವಭಾವ ತೋರಿಸಿ, ತಾವು ವಿದ್ಯ ಕಲೀಥಾರೆ. ಸಾಂದೀಪಿನಿಯಲ್ಲಿ ವಿದ್ಯ ಕಲಿತು, ಗುರುದಕ್ಷಿಣಿ ಏನು ಬೇಕೆಂದು ಕೇಳಲು, ಮಹಾ

ದೊಡ್ಡ ಪ್ರಬಲ ಏನು ಬೇಡಿದ್ದೂ ಕೊಡಲಾಪ, ಶ್ರೀಕೃಷ್ಣ ಸರ್ವೋತ್ತಮನೆಂದು, ತನ್ನ ಹೆಂಡತಿಯನ್ನು ಕರೆದು ಯುಕ್ತಿ ಕೇಳಿದ. ಪ್ರಭಾಸಕ್ಷೇತ್ರದಲ್ಲಿ ತನ್ನ ಮಗ ಸತ್ತಿದ್ದ. ಅವನನ್ನ ಬದುಕಿಸಿಕೊಡು ಎಂದು ಕೇಳಲಿಕ್ಕೆ, ಶ್ರೀಕೃಷ್ಣ ಬಲರಾಮನ ಸಹ ದಿವ್ಯರಥ ಏರಿಕೊಂಡು ಹೋಗಿ, ಪಂಚಜನನೆಂಬೋ ದೈತ್ಯನ್ನ ಕೊಂದು, ಪಾಂಚಜನ್ಯ ಶಂಖ ಸಂಪಾದಿಸಿದ. ಯಮಧರ್ಮನ ಲೋಕಕ್ಕೆ ಹೋಗಿ, ಅವನ ಕೈಯ ಪೂಜಿ ಕೊಂಡು, ಸಾಂದೀಪಿನಿಯ ಮಗನ್ನ ತಂದುಕೊಟ್ಟನು. ಸಾಂದೀಪಿನಿ ಬಹಳ ಸಂತೋಷ ಉಳ್ಳವನಾದನು. ಅವಂತೀಪಟ್ಟಣದಿಂದ ಬಲರಾಮನ ಸಹವಾಗಿ ಮಥುರಾಪಟ್ಟಣಕ್ಕೆ ಬಂದನು.

ಯಾದವರೆಲ್ಲ ಕಂಸನಿಂದ ಪೀಡಿತರಾಗಿ ದೇಶದೇಶಕ್ಕೆ ಹೋಗಿದ್ದರು. ಉಗ್ರಸೇನಗೆ ರಾಜ್ಯ ಆದಮ್ಯಾಲೆ, ಕೃಷ್ಣನ ಆಜ್ಞಾಪತ್ರ ಹೋಗಲಿಕ್ಕೆ ಸಮಸ್ತರೂ ಬಂದರು.. ಯಾದವರೆಲ್ಲ ಸಂತೋಷ ಹೆಚ್ಚಿಸಿಕೊಂಡು ಮನಬಂದಹಾಂಗೆ ಪಟ್ಟಣ. ದಲ್ಲಿರಹೊಕ್ಕರು. ಕೃಷ್ಣನು ಸರ್ವೋತ್ತಮನೆಂದು ತಿಳಿದು ಯಾದವರೂ, ಇತರರಾದ ಸಜ್ಜನರೂ ಸಂತೋಷಬಟ್ಟು ಇರಹೊಕ್ಕರು. ಸ್ವಾಮಿ ಎಲ್ಲಿ ಇರಥಾನೆ, ಆಲ್ಲಿ ಸುಖ ಪೂರ್ಣವಾಗಿರತದೆ. ವೃಂದಾವನ ಅಮರಾವತೀ ಸದೃಶವಾಗಿಹೋದು. ಮಥುರಾಪಟ್ಟಣ ಸತ್ಯಲೋಕದಕಿಂತಲೂ ಹೆಚ್ಚಾಗಿಹೋದು. ಉಗ್ರಸೇನನ ಕೈಯಿಂದ, ಧರ್ಮಿಷ್ಟತನದಿಂದ ರಾಜ್ಯ ಆಳಿಸತಿಹ. ಸಮಸ್ತರೂ ಮಥುರಾ-ಪಟ್ಟಣದಲ್ಲಿ ಕೃಷ್ಣಾಶ್ರಯ ಮಾಡಿಕೊಂಡು ಇಹೋರು.

ಕಂಸ ಸತ್ತವ್ಯಾಲೆ ಆತನ ಹೆಂಡಂದಿರು, ಜರಾಸಂಧನ ಮಕ್ಕಳು ಅಸ್ತೀ, ಪ್ರಾಸ್ತೀ ಇವರಿಬ್ಬರೂ, ಗಂಡ ಸತ್ತ ದುಃಖದಿಂದ ತಮ್ಮ ತಂದಿಗೆ ಹೇಳಿಕಳುಹಿಸಿದರು. 'ಸತ್ತ ಗಂಡ ಬದುಕಿ ಬರಲರಿಯ. ಗಂಡನ ವೈರಿ ಶ್ರೀಕೃಷ್ಣನ್ನ ಕೊಂದುಬಿಡು. ನಿನ್ನಂಥ ಪ್ರಬಲ ತಂದಿ ಇರಲಿಕ್ಕೆ ವೈರಿ ಬದುಕಿರಬಾರದು, ಭೂಮಿಮ್ಯಾಲೆ ಇಲ್ಲಧಾಂಗೆ ಮಾಡು' ಎನಲಿಕ್ಕೆ, ಜರಾಸಂಧ ಬಹಳ ಕೋಪಾವಿಷ್ಟನಾದ. ಜರಾಸಂಧಗೆ ಬ್ರಹ್ಮ, ರುದ್ರರ ವರವಿಹೋದು. ವರಬಲದಿಂದ ತೀಕ್ಷ್ಣನಾಗಿ, ಮಕ್ಕಳು ವಿಧವೆಯರಾದರೆಂದು ಕೋಪದಿಂದ ದೇಹವೆಲ್ಲ ನಡಗಸ್ತಾ, ಈಗಲೇ ಮಥುರಾ-ಸಹವಾಗಿ ಕೃಷ್ಣನ್ನ ಸಂಹಾರ ಮಾಡೇನೆಂದು, ಸೇನಾಬಲ ನೆರಹಿ, ಮುಂದೆ ದಂಡಯಾತ್ರಿಯಾದೀತು, ಈಗಲೇ ಗದಾ ಈಡ್ಯಾಡೇನೆಂದು ಉದ್ಯುಕ್ತನಾದ. 'ಇಲ್ಲಿಗೆ ಮಥುರಾ ಎಷ್ಟು ದೂರ ಅದೆ?' ಎಂದು ಕೇಳಲಿಕ್ಕೆ, ಜರಾಸಂಧನ ಸಮೀಪದಲ್ಲಿ ನಾರದ ಕುಳಿತಿದ್ದ, ದೇವರ ಸೇವಿ ಮುಟ್ಟಿಸಬೇಕಾಗಿ, ನೂರು ಯೋಜನವದೆ ಎಂದು ಹೇಳಿದ. ಮಥುರಾ ನೂರೊಂದು ಯೋಜನವಿತ್ತು. ಜರಾಸಂಧ ಅಜ್ಞಾನಿ, ನೂರು ಯೋಜನವೆಂದು ಮಹಾರುದ್ರ ಕೊಟ್ಟ ಗದಾ ಈಡ್ಯಾಡಲಿಕ್ಕೆ, ಗದಾ ವ್ಯರ್ಥವಾಗಬಾರದೆಂದು ಜರಾಸಂಧನ ತಾಯಿ, ಜರೆಯನ್ನು

ಕೊಂದಿತು. ಜರಾಸಂಧ ಶಿವಭಕ್ತರೊಳಗೆ ಅಗ್ರೇಸರ, ಶೈವಮತದೊಳಗೆ ದೊಡ್ಡವ, ನೂರು ಯೋಜನ ಈಡ್ಯಾಡಿದರೂ, ಗದಿ ಮಥುರೆಗೆ ಹೋಗಿ ಬೀಳಲಿಲ್ಲ. ನಾರದ ಭಗವಂತನ ಪ್ರೀತ್ಯರ್ಥವಾಗಿ ಚಾತುರ್ಯದಿಂದ ಹುಸಿ ಆಡಿದ. ನಾರದನ ಉಪಕಾರ ದಿಂದ ದೇವರಿಗೆ ಕ್ಷೇಮವಾಯಿತೆ ಹ್ಯಾಂಗೆ? ಶಿವನ ಗದಾದಿಂದ ಸ್ವಾಮಿಗೆ ಏನೂ ಇಲ್ಲ. ತನ್ನ ಸೇವಿ ಮುಟ್ಟಿಸಬೇಕಾಗಿ, ನಾರದ, 'ಒಂದುನೂರು ಯೋಜನವದೆ' ಅಂತ ಹೇಳಿದ. ಜರೆ ಮನುಷ್ಯರ ತಿನ್ನತಾ ತಿರಗಾಡತಿಹೋಳು. ಜರಾಸಂಧನ ಕೈಯಿಂದ ಬಿಡಿಸಿಕೊಂಡ ಗದಾ ನೂರು ಯೋಜನ ಹೋಗಿ, ಜರೆಯನ್ನು ಕೊಂದು ಕೃಷ್ಣನ ಸಮೀಪಕ್ಕೆ ಹೋಯಿತು. 'ನನ್ನ, ನಿನ್ನಮ್ಯಾಲೆ ಹಾಕಿದ್ದ, ಜರೆಯನ್ನು ಕೊಂದು ಬಂದೀನಿ, ನನಗ ಆಪ್ಪಣಿ ಕೊಡು' ಎನಲಿಕ್ಕೆ ಕೃಷ್ಣ, 'ಇನ್ನು ಜರಾಸಂಧನ ಸಮೀಪಕ್ಕೆ ಹೋಗದೆ, ಮಹಾರುದ್ರನ ಸಮೀಪಕ್ಕೆ ಹೋಗು' ಎಂದನು. ಗದಾ ಹೋಯಿತು, ತಾಯಿ ಸತ್ತಳು, ಮಥುರಾ ಸಂಹಾರವಾಗಲಿಲ್ಲ-ವೆಂದು ಕೋಪಾವಿಷ್ಟನಾಗಿ, ಸಮಸ್ತ ರಾಯರನ್ನೂ ಕರೆಕಳುಹಿ, ಇಪ್ಪತ್ತೂಮ್ಮರು ಅಕ್ಷೋಹಿಣಿ ಸೇನಾಬಲಕೊಂಡು ಮಥುರಾಪಟ್ಟಣಕ್ಕೆ ಬಂದು ಸುತ್ತುಗಟ್ಟಿದ.

ಜರಾಸಂಧ, ವಿಂದಾನುವಿಂದರ ಕೈಯಿಂದ ದರ್ಪದಿಂದ ವಚನ ಹೇಳಿ-ಕಳುಹಿಸಿಕೊಟ್ಟ. ವಿಂದ, ಅನುವಿಂದರು ಕೃಷ್ಣನ ಸಮೀಪಕ್ಕೆ ಬಂದು ನಿಂದಾ-ವಚನಗಳಾಡಿದರು. 'ನಿನ್ನಂಥ ಪ್ರಬಲ ಹುಟ್ಯಾನೆಂದು ತಿಳಿದಿದ್ದರೆ ಕಂಸಗೆ ನನ್ನ ಮಕ್ಕಳನ್ನು ಕೊಡತಿರಲಿಲ್ಲವೆ! ನೀನು ನಿನ್ನೊಳಗೆ ದೊಡ್ಡ ಶ್ರೇಷ್ಠ. ನಿನ್ನ ಶೂರತ್ವ ಸಾಮರ್ಥ್ಯ ಕಣ್ಣು ತುಂಬ ನೋಡಿದೆ. ನನ್ನ ಹೆಣ್ಣುಮಕ್ಕಳ ಕೊಂಡು ವನಕ್ಕೆ ಹೋದೇನು. ನನ್ನ ಇಬ್ಬರು ಹೆಣ್ಣುಮಕ್ಕಳು ವಿಧವೆಯರಾಗಿರಲಿಕ್ಕೆ ನಾ ಬದಿಕೇನು ಫಲ! ಗಂಡ ಸತ್ತ ಹೆಣ್ಣುಮಕ್ಕಳನ್ನು ವನಕ್ಕೆ ಕೊಂಡು ಹೋಗಬೇಕು. ತೀವ್ರ ದೃಷ್ಟಿಗೋಚರನಾಗು.' ಹೀಂಗಂತ ಜರಾಸಂಧ ಹೇಳಿದಂಥ ವಚನಗಳ ಹೇಳಲಿಕ್ಕೆ, 'ನೀವೇನು ಮಾಡಿದ್ದೂ ಯಥಾರ್ಥ, ಅವನು ಯಥಾರ್ಥವೇ ಹೇಳಿ-ಕಳುಹಿಸಿದ' ಎಂದು ಕೃಷ್ಣ ಉಪಹಾಸ ಮಾಡತ ಮುಗುಳುನಗೆ ನಗತಿರಲಾಗಿ, ಬಾಗಿಲಗಳಲ್ಲಿ ಸಾತ್ಯಕಿ, ಕೃತವರ್ಮ, ಉದ್ಧವ, ಅಕ್ರೂರ ಇವರನೆಲ್ಲ ಕಾಪಲಿಟ್ಟು, ಕೃಷ್ಣಬಲರಾಮರು, ಜರಾಸಂಧ ದಾವ ದಿಕ್ಕಿನಲ್ಲಿದ್ದ ಆ ದಿಕ್ಕಿಗೆ ನಡೆದರು. ಆ ಕಾಲದಲ್ಲಿ ಸ್ವಾಮೀ ಇಚ್ಛಾದಿಂದ, ದೇವೇಂದ್ರ ಸ್ವಾಮಿಗೆ ಯುದ್ಧಸಾಮಗ್ರಿಯಿಂದ ಪೂರ್ಣವಾದಂಥ ರಥವನ್ನು, ಮಾತಲಿ ಎಂಬ ಸಾರಥಿಯ ಸಂಗಡ ಖಡ್ಗ, ಚರ್ಮ, ಧನುರ್ಬಾಣಗಳು, ಸಕಲ ಸಾಮಗ್ರಿಗಳು ಆಕಾಶಮಾರ್ಗದಿಂದ ಕಳುಹಿದನು. ಭೂದೇವಿ ರಥವಾಗಿಹೋಳು. ನಾಲ್ಕು ವೇದಗಳು ನಾಲ್ಕು ಕುದರಿಗಳಾಗಿಹೋವು. ಇಂಥಾ ರಥ ಮಾತಲಿ ತೆಗೆದುಕೊಂಡು ಕೃಷ್ಣನ ಸಮೀಪಕ್ಕೆ ಬಂದನು. ಸ್ವಾಮಿ ರಥ ಏರಿಕೊಂಡು ಶಾರ್ಙ್ಗಧನುಸ್ಸು ಹೆದೆ ಏರಿಸಿ, ಜರಾಸಂಧನ ಎದುರಿಗೆ ನಡೆದನು.

ಬಲರಾಮ ಒನಕಿ ನೇಗಿಲ ಹಿಡಕೊಂಡು ಯುದ್ಧಕ್ಕೆ ಬಂದನು. ಕೃಷ್ಣಬಲರಾಮರು ಯುದ್ಧಕ್ಕೆ ಬರಲಿಕ್ಕೆ, ಸಮುದ್ರ ತನ್ನ ಮರ್ಯಾದಿ ಮೀರಿ ಹ್ಯಾಂಗೆ ಉಕ್ಕೇರಿ ಬಾಹೋನು, ಹಾಂಗೆ ಜರಾಸಂಧನ ಸೈನ್ಯಸಮುದ್ರ ಕೃಷ್ಣಬಲರಾಮರಮ್ಯಾಲೆ ಬರತಿಹೋದು. ಆ ವ್ಯಾಳ್ಯಾದಲ್ಲಿ ಉಗ್ರಸೇನರಾಯ ಕೃಷ್ಣನ ಪ್ರೇರಣಿಯಿಂದ ಜರಾಸಂಧನ ಎದುರಿಗೆ ನಿಂತನು. ಬೀಗ ಉಗ್ರಸೇನರಾಯ ತನ್ನ ಎದುರಿಗೆ ಯುದ್ಧಕ್ಕೆ ಬಂದಾನೆಂದು ನೋಡಿ ಮಾತನಾಡಿದ. 'ಎಲೋ ಪಾಪಿ! ಮಗನ ಕೊಲ್ಲಿಸಿ ರಾಜ್ಯ ಆಳಲಿಕ್ಕೆ ಹ್ಯಾಂಗೆ ನಾಚಿಕಿ ಬಾಹೋದಿಲ್ಲ! ಮಗನ ಸಾಯಗೊಟ್ಟು ಶತ್ರುಪಕ್ಷವಾಗಿ ಬರಬಾರದು. ಎಲೋ ಪಾಪಿ! ನನಗೆ ಮಾರಿ ತೋರಿಸಬ್ಯಾಡ. ನಿನ್ನ ಕೊಂದಲ್ಲಿ ನನಗೆ ಕೀರ್ತಿ ಬಾರದು. ಮುದಿಹೊಲ್ಯಾನ ಕೊಂದು ಪ್ರಯೋಜನ ಏನು! ಹ್ಯಾಂಗೆ ಸಿಂಹ ನರಿಯನ್ನು ಕೊಂದರೆ ಕೀರ್ತಿ ಬಾಹೋದಿಲ್ಲ, ಹಾಂಗೆ ನಿನ್ನ ಕೊಂದರೆ ನನಗೆ ಕೀರ್ತಿ ಬಾಹೋದಿಲ್ಲ. ಸಿಂಹನ್ನ ಕೊಂದರೆ ಕೀರ್ತಿ ಆದೀತು!' ಹೀಂಗೆ ಉಗ್ರಸೇನಗೆ ನಿರಾಕರಣ ಮಾಡಲಿಕ್ಕೆ, ರಾಯಗೆ ಬಹಳ ಸಿಟ್ಟು ಬಂತು. ಬತ್ತಳಿಕಿ ಒಳಗಿಂದ ಬಾಣಗಳ ತೆಗೆದು ಮಳಿ-ಗರೆದನು. ಉಗ್ರಸೇನರಾಯನ ಬಾಣಗಳ ಪೆಟ್ಟಿನಿಂದ ಜರಾಸಂಧನ ಬಿಲ್ಲು ಛೇದಿಸಿ-ಹೋಯಿತು. ಜರಾಸಂಧನ ದೇಹದೊಳಗೆ ಬಾಣಗಳು ಪ್ರೋಣಿಸಿದವು. ಬಹಳ ಆಶ್ಚರ್ಯವುಳ್ಳಾತನಾಗಿ 'ಬೀಗಗೆ ನಾನು ನೀಚ (ತುಚ್ಛೀ)ಕರಿಸಿದ್ದೆ, ಬಹಳ ಪ್ರಬಲ ನಿದ್ದಾನೆ! ನನ್ನಂಥಾವಗೆ ಬಾಣ ಹೊಡೀಥಾನೆ! ಇನ್ನು ಉಗ್ರಸೇನರಾಯನ ಕೊಲ್ಲಬೇಕು' ಎಂದು ಜರಾಸಂಧ ಬಾಣಗಳ ಕೊಳ್ಳಲಿಕ್ಕೆ, ರಾಯ ಇವನಿಂದ ಸತ್ತಾನೆಂದು ಉಗ್ರಸೇನನ ಹಿಂದಕ್ಕೆ ಹಾಕಿ, ಕೃಷ್ಣಬಲರಾಮರು ಮುಂದೆ ಆದರು.

ಜರಾಸಂಧ ಮಳಿಧಾರಿ ಆಪ್ಪಂದೆ ಬಾಣಗಳು ಬಿಡತಿಹ. ಕೃಷ್ಣ, ಆಷ್ಟೂ ಬಾಣಗಳ ಶಾರ್ಙ್ಗಧನುಸ್ಸಿನಿಂದ ಕಡದು ಕಡದು ಬಿಸ್ಟತಿಹ. ಜರಾಸಂಧನ ರಥ ಪುಡಿಪುಡಿ ಆಯಿತು. ಸಾರಥಿ ಸತ್ತ, ಕುದರಿ, ಛತ್ರ, ಚಾಮರ, ಧ್ವಜ, ಪತಾಕ ಆಷ್ಟೂ ಛೇದಿಸಿ ಬಿಸ್ಟನು. ಅದೇ ಕ್ಷಣವೆ ಜರಾಸಂಧನ ಕೊಲ್ಲಲಾಪ. ಮುಂದೆ ತನ್ನ ಭಕ್ತ, ಭೀಮಸೇನನ ಕೈಯ ಕೊಲ್ಲಿಸಿ ರಾಜಸೂಯಯಾಗ ಮಾಡಿಸಿ, ಫಲಕ್ಕೆ ಪಾತ್ರನ್ನ ಮಾಡಬೇಕಾಗೇದೆ. ಆದಕಾರಣ ಈಗ ಜರಾಸಂಧನ್ನ ಕೊಲ್ಲಲಿಲ್ಲ. ಜರಾಸಂಧನ ಬಳಿವಿಡಿದು ಶಿಶುಪಾಲ, ದಂತವಕ್ರ, ಪೌಂಡ್ರಕವಾಸುದೇವ, ಕೀಚಕ, ಸಾಲ್ವ, ಹಂಸ, ಡಿಬಿಕ, ರುಗ್ಮಿ, ಭಗದತ್ತ, ವಿವಿದ, ಮೈಂದ ಸಮಸ್ತ ರಾಯರೂ ಅವಯವಗಳ ಛೇದಿಸಿಕೊಂಡು, ಭಿನ್ನಾಯುಧರಾಗಿ, ವಸ್ತ್ರಗಳು ಜಿಗಳಿ, ಕೂದಲುಗಳು ಬಿದ್ದಾವೆ, ನಾನಾ ಅವಸ್ಥೀಲಿ ಶೋಕಯುಕ್ತರಾಗಿ, ಆಯುಧಗಳ ಕಳಕೊಂಡು, ಹತ್ತೂ ದಿಕ್ಕಿಗೆ ಓಡಿಹೋಗತಿಹೋರು. ಆ ಸಮಯದಲ್ಲಿ ಜರಾಸಂಧ ಪಲಾಯನ ಮಾಡದೆ ತಾ ಒಬ್ಬನೇ ಬಲರಾಮನ ಎದುರಿಗೆ ಬಂದು ನಿಂತನು.

ಬಲರಾಮ, ಕೋಪಾವಿಷ್ಟನಾಗಿ ಒನಕೆಪೆಟ್ಟು ಜರಾಸಂಧನಮ್ಯಾಲೆ ಹಾಕಿದನು. ಜರಾಸಂಧ ತನ್ನ ಗದಾದಿಂದ ಹೊಡೀತಿಹೋನು. ಉಭಯರೂ ಮುಷ್ಟಿಯುದ್ಧ ಮಾಡಲಿಕ್ಕೆ, ಅವರ ಕಾಲುಗಳ ಪೆಟ್ಟಿನಿಂದ ಪರ್ವತಗಳು, ವೃಕ್ಷಗಳು ಪುಡಿಪುಡಿ ಆಗತಿಹೋವು. ಬಲರಾಮಗೆ ಶಕ್ತಿ ವಿಶೇಷವಾಗಬೇಕೆಂದು ಸ್ವಾಮಿ ಪಾಂಚಜನ್ಯ ಶಂಖ ಊದತಿಹ. ಒನಕೆಪೆಟ್ಟಿನಿಂದ ಜರಾಸಂಧ ಮೂರ್ಛಾಗತನಾಗಿ ಬಿದ್ದನು, ಕೈಸೆರಿ ಸಿಕ್ಕಿದನು. ಏಕಲವ್ಯ ಕೃಷ್ಣನಿಂದ ಹೊಡಿಸಿಕೊಂಡು ಬೆನ್ನುಕೊಟ್ಟು ಓಡಿಹೋಗತಿಹ. ಅರಸು ಜರಾಸಂಧ ಕೈಸೆರಿ ಸಿಕ್ಕಿರಲಿಕ್ಕೆ, ನಮ್ಮಂಥ ಭೃತ್ಯರು ಓಡಿಹೋಗಬಾರದೆಂದು, ಶಸ್ತ್ರಾಸ್ತ್ರ ಬಲರಾಮನ ಮ್ಯಾಲೆ ಮಳಿಗರೆದನು. ಓಡಿಹೋದವನ ಕೂಡ ಯುದ್ಧ ಮಾಡಬಾರದೆಂದು ಸ್ವಾಮಿ ಲಕ್ಷಣ, ಪ್ರದ್ಯುಮ್ನನ ಹುಟ್ಟಿಸಿ ಏಕಲವ್ಯನ ಎದುರಿಗೆ ಕಳುಹಿದನು. ಪ್ರದ್ಯುಮ್ನ ಕಾಮನ ಅವತಾರ; ಏಕಲವ್ಯನೆಂಬುವ ಮಣಿಮಂತದೈತ್ಯ. ಏಕಲವ್ಯ ಪ್ರದ್ಯುಮ್ನರಿಗೆ ವಿಚಿತ್ರ ಯುದ್ಧ ವಾಯಿತು. ಪ್ರದ್ಯುಮ್ನನ ಕೈಯಿಂದ ಏಕಲವ್ಯ ಹೊಡಿಸಿಕೊಂಡು ಹೋದ. ಸ್ವಾಮಿ ಪ್ರದ್ಯುಮ್ನನ ತನ್ನ ಹೊಟ್ಟೀಯೊಳಗೆ ಇಟ್ಟುಕೊಂಡನು. ಜರಾಸಂಧ ಬಹಳ ಪಟ್ಟು ತಿಂದು ಖಿನ್ನನಾಗಿ, ಕಂಸ ಸತ್ತಮ್ಯಾಲೆ ಅವನ ಮಗನ ಕಡಿಯಿಂದ ಮಥುರಾಪಟ್ಟಣ ಆಳಿಸಬೇಕೆಂದು, ಮಥುರಾಮ್ಯಾಲೆ ದಂಡಯಾತ್ರಿ ಮಾಡಿದ್ದ. ಕೃಷ್ಣಬಲರಾಮರಿಂದ ಸೋತು, ಭ್ರಷ್ಟಸಂಕಲ್ಪ ಉಳ್ಳವನಾಗಿ ಮಾರಿ ಸಣ್ಣ ಮಾಡಿಕೊಂಡು, ಇನ್ನು ರಾಯರಿಗೆ ಏನು ಮಾರಿ ತೋರಿಸಲಿ ಎಂದು ಚಿಂತಿಯಿಂದ ಸುಡತಾ, ಅಲ್ಪ ಸೇನಾ ಉಳ್ಳವನಾಗಿ, ತನ್ನ ಮಗಧದೇಶಕ್ಕೆ, ಮಕ್ಕಳು ಮೊಮ್ಮಕ್ಕಳು ಕೂಡಿಕೊಂಡು ಹೋದನು. ಕೃಷ್ಣಬಲರಾಮರು ಜಯಶೀಲರಾಗಿ, ಜರಾಸಂಧನ ಹಿಡದು, ಪುನಃ ಬಿಟ್ಟುಕೊಟ್ಟರು. ಬ್ರಹ್ಮಾದಿ ದೇವತಿಗಳಿಂದ ಸ್ತೋತ್ರಮಾಡಿಸಿಕೊಳತ, ನುಂದಾರಪಾರಿಜಾತಹೂವಿನ ಮಳಿಗರಿಸಿಕೊಳತ, ಮಥುರಾಪಟ್ಟಣ ಪ್ರವೇಶ ಮಾಡಿದರು. ಇನ್ನು ಭಾರತಕಥ ಹೇಳಥಾರೆ.

ಪಾಂಡವರು ಶತಶೃಂಗಪರ್ವತದಲ್ಲಿಹೋರು. ಹದಿನಾರು ವರುಷ ಧರ್ಮರಾಯಗೆ, ಭೀಮಸೇನಗೆ ಹದಿನೈದು ವರುಷ, ಅರ್ಜುನಗೆ ಹದಿನಾಲ್ಕು. ಅರ್ಜುನಗೆ ವರ್ಷದ ಒಡ್ಡಿಂತಿ (ವರ್ಧಂತಿ) ಮಾಡಬೇಕಾಗಿ, ಕುಂತೀದೇವಿ ಬ್ರಾಹ್ಮಣರ ಭೋಜನಕ್ಕೆ ತೊಡಗಿದಳು. ಕುಂತೀದೇವಿಗೆ ಮಾದ್ರೀ ಅಂಜಿಕಿ ಬಹಳ ಇಹೋದು. ಗಂಡಗೆ ಹಾವಭಾವವಿಲಾಸ ತೋರಿಸ್ಯಾಳು, ಗಂಡಗೆ ಕಾಮೋದ್ರೇಕವಾಗಿ ಭೋಗ ಮಾಡ್ಯಾನು. ನಾವು ಪತಿಭ್ರಷ್ಟರಾಗಬೇಕಾದೀತು. ಮಾದ್ರೀ, ಗಂಡನ ವಂಚನಿ ಮಾಡ್ಯಾಳೆಂದು ಹದಿನಾರು ವರುಷ ಗಂಡನ ಬಿಟ್ಟು ಅಗಲದೆ, ಸವೀಪದಲ್ಲಿಟ್ಟುಕೊಂಡಿಹೋಳು. ಗಂಡಗೆ ಬಹಳೇ ಪ್ರಕಾರ ಸಂರಕ್ಷಿಸತಿಹೋಳು. ಅರ್ಜುನನ ವಡ್ಡಂತಿ ದಿವಸ, ಋಷಿಗಳ ಭೋಜನದಲ್ಲಿ ಆಸಕ್ತಳಾಗಿ ಕುಂತೀ, ಗಂಡನ ಹಂಬಲ

ಬಿಟ್ಟಳು. ಪಾಂಡುಚಕ್ರವರ್ತಿ ಮಾದ್ರೀಯನ್ನು ಕರಕೊಂಡು ವನದಿಂದ ವನಕ್ಕೆ ತಿರಗತಹೋಗಲಿಕ್ಕೆ, ನಾನಾ ಪಕ್ಷಿಗಳು ಧ್ವನಿಗೈತಿಹೋವು. ಭ್ರಮರ ಝೇಂಕಾರ ಮಾಡತವೆ. ಅನೇಕ ಪುಷ್ಪ ಜಾತಿಗಳಿಂದ ಬಹಳ ರಮ್ಯವಾದ ವನ, ವಸಂತಕಾಲ ಥಣ್ಣನ ಗಾಳಿ ಬೀಸತದೆ. ಆ ವ್ಯಾಳ್ಯಾದಲ್ಲಿ ಪಾಂಡುಚಕ್ರವರ್ತಿ ಕಾಮಬಾಣದಿಂದ ಪೀಡಿತನಾಗಿ ಸತ್ತರೂ ಸತ್ತೇನು, ಸ್ತ್ರೀಭೋಗ ಬಿಡೆನೆಂದು ಮಾದ್ರೀಯನ್ನು ಭೋಗದ ಉದ್ದಿಶ್ಯ ಶೆರಗು ಹಿಡದು ಎಳದನು. ಅಕ್ಕ ಬೈದಾಳು, ಕೊಂದಾಳು, ಭೋಗ ಮಾಡಬಾರದೆಂದು ಬಿಡಿಸಿಕೊಳತಿಹೋಳು. ಪುರುಷ ಬಲಾತ್ಕಾರ ಮಾಡಲಿಕ್ಕೆ, ಸ್ತ್ರೀಯತ್ನ ಏನು ನಡದೀತು! ಭೋಗ ಮಾಡಲಿಕ್ಕೆ ಆ ಕ್ಷಣವೇ ಸತ್ತನು. ದೇವರ ಅನುಗ್ರಹದಿಂದ ದಿವ್ಯಲೋಕ ಆಯಿತು.

ಪಾಂಡುಚಕ್ರವರ್ತಿಗೆ ಕಿಂದಮಋಷಿಯ ಶಾಪವು ಮತ್ತು ದೇವೇಂದ್ರನ ಚಿತ್ತಕ್ಷೋಭವಾಗಿತ್ತು, ಅದನ್ನ ವಿಸ್ತಾರಮಾಡಿ ಹೇಳಥಾರೆ. ದೇವತಿಗಳೆಲ್ಲ ತಮ್ಮ ಅರಸು ದೇವೇಂದ್ರನ ವಾಲ್ಗೈಸಬೇಕು. ಪಾಂಡುಚಕ್ರವರ್ತಿ ನಲವತ್ತೊಂಭತ್ತು ಮರುತ್ತುಗಳೊಳಗೆ, ತನ್ನ ಸೇವಿ ದೇವೇಂದ್ರಗೆ ಮುಟ್ಟಿಸಬೇಕಾಗಿ, ಆ ಕಾಲದಲ್ಲಿ ಹೋಗಿದ್ದ. ಈತ ಹೋದ ವ್ಯಾಳ್ಯಾದಲ್ಲಿ, ದೇವೇಂದ್ರ ತನ್ನ ಹೆಂಡತಿ ಭೋಗಕ್ಕೆ ಹೋಗಬೇಕಾಗಿತ್ತು. ಅಷ್ಟರೊಳಗೆ ಈತ ಹೋಗಲಿಕ್ಕೆ, ಭೋಗಕ್ಕೆ ಹೋಗೋದು ನಿಲುಕವಾಯಿತು. ಆ ಪಾಪವಶದಿಂದ, ಆ ವ್ಯಾಳ್ಯಾದಲ್ಲಿ ಭೇಟಿಗೆ ಹೋದಕಾರಣ, ದೇವೇಂದ್ರನ ಭೋಗಕ್ಕೆ ವಿಘ್ನವಾದಕಾರಣ, ದೊಡ್ಡವರು ಶಾಪ ಕೊಡದಿದ್ದರೂ ಮಹಾತ್ಮರ ಚಿತ್ತಕ್ಷೋಭವಾಯಿತು. ಆ ಪಾಪದಿಂದ ಮನುಷ್ಯನಾಗಿ ಹುಟ್ಟಿ, ಸ್ತ್ರೀಭೋಗ ತನಗೆ ಇಲ್ಲದೆ, ತನ್ನ ವೀರ್ಯದಿಂದ ಮಕ್ಕಳ ಹಡಿಯದೆ, ಸ್ತ್ರೀಭೋಗ ಮಾಡಲಿಕ್ಕೆ ಮರಣವಾಗೋಣ ಇಷ್ಟು ಅನರ್ಥವಾಯಿತು. ತನ್ನಕಿಂತ ಉತ್ತಮರ ಚಿತ್ತಕ್ಷೋಭದಿಂದ ಪಾಂಡುಚಕ್ರವರ್ತಿಗೆ ಈ ಅವಸ್ಥಿ ಆಯಿತು. ನೋಡಿದರೆ ಸ್ವಲ್ಪ ದೋಷ, ಮಹಾತ್ಮರ ಮನಸ್ಸು ವಿಕಾರ ಮಾಡಿದ್ದರಿಂದ ವಿಶೇಷವಾಗಿ ಪಾಪ ಬಲಿಯಿತು. ಪಾಪ ಅನುಭವಿಸತ, ಹರಿಭಕ್ತರು ಮಕ್ಕಳು ಹುಟ್ಟಿದಕಾರಣ ದಿವ್ಯ ಲೋಕಕ್ಕೆ ಹೋದನು. ಮಾದ್ರೀ ದೊಡ್ಡ ಧ್ವನಿಮಾಡಿ ಅಳಲಿಕ್ಕೆ, ಕುಂತೀದೇವಿ ಮಕ್ಕಳ ಸಹವಾಗಿ ಅಳಹೊಕ್ಕಳು. 'ಮಕ್ಕಳು ಅಂಜ್ಯಾರು ಆಪತ್ಕಾಲವದೆ ನೀನು ಒಬ್ಬಳೇ ಬಾ' ಎನಲಿಕ್ಕೆ, ಗಂಡ ಸತ್ತುಬಿದ್ದಾನೆ, ಎದಿ ಬಾಯಿ ಹೊಡಕೋತ 'ಪಾಪೀ! ನನ್ನ ಗಂಡನ ಸಾಯಗೊಟ್ಟ. ನೀನೂ ಕೆಟ್ಟ, ನನ್ನೂ ಕೆಡಸಿದಿ. ನೀನೇ ಗಂಡನ ಮರಣಕ್ಕೆ ಕಾರಣಾದಿ. ನನ್ನ ಸಂಡ ಛದ್ಮ ಮಾಡೋದು ಬಿಟ್ಟಿದ್ದಿಲ್ಲ. ನನ್ನ ಸರೀಕಳು ಆದೇನೆಂದು, ಒಂದು ಮಂತ್ರದಿಂದ ಅಶ್ವಿನೀ ದೇವತಿಗಳ ಕರದು ಇಬ್ಬರು ಮಕ್ಕಳನ್ನು ಹಡದಿ. ಗಂಡ ಸತ್ತ, ಮಕ್ಕಳಿಗೆ ರಾಜ್ಯ ಇಲ್ಲ. ವನಚಾರಿಗಳಾಗಿ ವ್ಯರ್ಥ ಕೆಟ್ಟಿವಲ್ಲ!' ಹೀಂಗಂತ ಅನೇಕ ಪ್ರಕಾರ ಪ್ರಲಾಪ

ಮಾಡಿ ಅಳಲಿಕ್ಕೆ, ತಾಯಂದಿರು ಏನುಕಾರಣ ಅಳ್ತಾರೆಂದು ಪಾಂಡವರು, ತಾಯೀ ಬಳಿಲಿ ಬಂದು ನೋಡಥಾರೆ. ತಮ್ಮ ತಂದಿ ಸತ್ತದ್ದು ನೋಡಿದರು. ದೊಡ್ಡ ಧ್ವನಿಯಿಂದ ಪ್ರಲಾಪ ಮಾಡಲಿಕ್ಕೆ, ಮುನಿಜನರುಗಳೆಲ್ಲ ಕೇಳಿ ಪರರ ಸಂತಾಪ ತಾವು ಹಚ್ಚಿಕೊಂಡು, ಶವದ ಸಮೀಪಕ್ಕೆ ಬಂದು, ಬಹಳ ಪ್ರಕಾರವಾಗಿ ಪಾಂಡವರಿಗೆ ಸಮಾಧಾನ ಮಾಡಿದರು. ಕುಂತೀದೇವಿ ಋಷಿಗಳ ಕೂಡ ಮಾತನಾಡಿದಳು, 'ಇಷ್ಟು ದಿವಸ ನನ್ನ ಗಂಡನ ರಕ್ಷಿಸಿದೆ. ಇವತ್ತು ಬ್ರಾಹ್ಮಣಭೋಜನಕ್ಕೆ ತೊಡಗಲಿಕ್ಕೆ, ಮಾದ್ರೀಭೋಗದಿಂದ ಸತ್ತುಹೋದ. ಮುಖ್ಯ ಔಪಾಸನಾಗ್ನಿ ನನ್ನದು. ನಾನು ಹಿರೇಳು, ಸಕಲ ಧರ್ಮಗಳಿಗೆ ಅನುಕೂಲಳು; ಈಕಿ ಚಿಕ್ಕಸ್ತ್ರೀ. ಉಭಯತರೂ ಸಹಗಮನಕ್ಕೆ ಯೋಗ್ಯರು. ಅದರೊಳಗೆ ನಾನು ಸಹಗಮನ ಕೊಂಡೇನು' ಎನಲಿಕ್ಕೆ, ಮಾದ್ರೀ ಋಷಿಗಳಿಗೆ ಬೇಡಿಕೋಥಾಳೆ. 'ಗಂಡ ನನ್ನ ಕೂಡ ಭೋಗಮಾಡಿ ಸತ್ತಾನೆ. ಪರಲೋಕದಲ್ಲಾದರೂ ನನಗೂ ಗಂಡಗೂ ಭೋಗವಾಗಲಿ, ನಾನೂ ಸಹಗಮನ ಕೊಂಬೋ ಹಾಂಗೆ ಮಾಡಿರಿ.' ಈ ಪ್ರಕಾರ ಪ್ರಾರ್ಥನ ಮಾಡತಿಹೋಳು. ಋಷಿಗಳೆಲ್ಲ ಕುಂತಿಗೆ ಹೇಳಿದರು. 'ನೀನು ಹಿರೇಳು, ಮುಖ್ಯ ಕರ್ತಳು. ನೀನು ಹೋದರೆ ಮಕ್ಕಳ ಸಂರಕ್ಷಣಿ ಮಾಡುವವರು ದಾರೂ ಇಲ್ಲ. ಮಾದ್ರೀ ಪಾಪ ಬಹಳವದೆ. ಗಂಡನ ಮರಣಕ್ಕೆ ಕಾರಣಳಾಗ್ಯಾಳೆ. ನೀನು ಹಿರೇಳು, ನಿನ್ನ ಸರೀಕಳಾದೇನೆಂದು ನಿನ್ನ ಕೂಡ ಛದ್ಮ ಮಾಡಿ ಮಕ್ಕಳ ಸೆಡದಾಳೆ. ಸಾಮಾನ್ಯ ದೇವತಿಗಳ ಭೋಗಕ್ಕೆ ಕರದಾಳೆ, ಉತ್ತಮ ದೇವತಿ ಭೋಗ ಮಾಡಲಿಲ್ಲ. ಈಕಿ ದೇಹಾಂತರ ಪ್ರಾಯಶ್ಚಿತ್ತ ಕೊಳ್ಳಲಿ. ನೀನು ಮಕ್ಕಳ ಸಂರಕ್ಷಿಸಿಕೊಂಡು ಇರು' ಎಂದು ಕುಂತಿಗೆ ಬಹಳ ಸಮಾಧಾನ ಮಾಡಿ, ಮಾದ್ರೀಗೆ ಸಹಗಮನ ಮಾಡಿಸಿದರು. ಕಾಷ್ಠಗಳ ತಂದು ಚಿತಿ ಮಾಡಿ, ಗಂಡಹೆಂಡಿರಿಗೆ ಅಗ್ನಿ ಕಾಣಿಸಿ, ರಾಜನೀತಿ ಹ್ಯಾಂಗೆ ಅದೆ ಹಾಂಗೆ ದಹನಾದಿ ಕರ್ತವ್ಯ ಕರ್ಮ ಮಾಡಿ, ಭೂರಿಭೋಜನ, ದಶಾಹ ಕರ್ತವ್ಯ ಮಾಡಿಸಿದರು. ಮಾದ್ರೀ ತನ್ನ ಪಾಪ ಸುಟ್ಟುಕೊಂಡು, ತನ್ನ ಗಂಡನ ಲೋಕಕ್ಕೆ ಹೋದಳು. ಪಾಂಡುಚಕ್ರವರ್ತಿಗೆ ವಿಧಿಪೂರ್ವಕ ಉತ್ತರಕರ್ಮಗಳು ಮಕ್ಕಳು ಮಾಡಿದರು. ಪಾಂಡುಚಕ್ರವರ್ತಿ ಜ್ಞಾನ, ಭಕ್ತಿ, ವೈರಾಗ್ಯವುಳ್ಳಾತ. ಸತ್ಕುಲಪ್ರಸೂತ, ವೇದವ್ಯಾಸರ ಮಗನಾಗಬೇಕು. ಆತನ ಮಕ್ಕಳು ವೈಷ್ಣವೋತ್ತಮರು, ನಾರಾಯಣನಲ್ಲಿ ಭಕ್ತಿಯುಳ್ಳವರು. ಪಾಂಡುಚಕ್ರವರ್ತಿ ಮೋಕ್ಷಾಧಿಕಾರಿಯಾದಕಾರಣ, ಭೋಗಸಮಯದಲ್ಲಿ ಸತ್ತರೂ ದಿವ್ಯಗತಿ ಆಯಿತು.

ರಾಜಕುಮಾರರು ಇಲ್ಲಿ ವನಚಾರಿಗಳಾಗಿ ಕೆಡಬಾರದು. ಆದಕಾರಣ ಋಷಿಗಳು ಕುಂತೀಕುಮಾರರನ್ನು ಕೂಡಿಕೊಂಡು, ನಾರಾಯಣಾಶ್ರಮದಿಂದ ಹಸ್ತಿನಾಪುರಕ್ಕೆ ಬಂದರು. ಶತಶೃಂಗಪರ್ವತದಿಂದ ಋಷಿಗಳು ಬರಥಾರೆಂದು ವಾರ್ತೆ

ಹೇಳಿಕಳುಹಿಸಿದರು. ಭೀಷ್ಮ, ಕೃಪಾಚಾರ್ಯ, ಧೃತರಾಷ್ಟ್ರ ಮೊದಲಾದವರೆಲ್ಲ ಋಷಿಗಳ ಭೆಟ್ಟಿಗೆ ಬಂದರು. 'ಎಲೈ ಧೃತರಾಷ್ಟ್ರರಾಯ! ನಿನ್ನ ತಮ್ಮ ವಿರಕ್ತನಾಗಿ ಅರಣ್ಯಕ್ಕೆ ಬಂದು ತಪಸ್ಸು ಮಾಡಲಿಕ್ಕೆ, ಕಿಂದಮಋಷಿ, ಸ್ತ್ರೀಭೋಗದಿಂದ ಮರಣ ಐದು ಎಂದು ಶಾಪ ಕೊಟ್ಟಿದ್ದ ಕಾರಣ, ಮಾದ್ರೀಭೋಗದಿಂದ ಸತ್ತನು. ಆತನ ಹೆಂಡತಿ ಈ ಕುಂತೀದೇವಿ, ಪಾಂಡುಚಕ್ರವರ್ತಿಯ ಈ ಐದು ಮಕ್ಕಳು, ಇವರು.' ಹೀಂಗಂತ ಹೇಳಿ ಧೃತರಾಷ್ಟ್ರನ ಕೈಲಿ ಕೊಟ್ಟು, ಋಷಿಗಳು ಶತಶೃಂಗ-ಪರ್ವತದ ನಾರಾಯಣಾಶ್ರಮಕ್ಕೆ ಹೋದರು. ಪಾಂಡುಚಕ್ರವರ್ತಿಯು ಸತ್ತ ದುಃಖದಿಂದ ಭ್ರಾಂತನಾಗಿ, 'ಇಂಥಾ ಪ್ರಬಲ ತಮ್ಮ ಸತ್ತ. ನಾನು ಕುರುಡನಾದೆ. ನನ್ನಲ್ಲಿ ರಾಜ್ಯಭಾರವಿಟ್ಟು, ತಾನು ವನಕ್ಕೆ ಹೋಗಿ ಸತ್ತುಹೋದ.' ಹೀಂಗಂತ ಧೃತರಾಷ್ಟ್ರ, ತಮ್ಮನ್ನ ನೆನಸಿಕೊಂಡು, ಬಹಳ ದುಃಖಮಾಡಹೊಕ್ಕನು. ಭೀಷ್ಮನು, 'ನಾನು ಬಹಳ ಪಾಪಿ! ನಮ್ಮ ತಮ್ಮ ವಿಚಿತ್ರವೀರ್ಯರಾಯ ಸತ್ತ. ತಮ್ಮನ ಮಕ್ಕಳ ನೋಡಿಕೊಂಡಿದ್ದೇನೆಂದರೆ, ಪಾಂಡುಚಕ್ರವರ್ತಿ ಸಾಯಬೇಕೆ! ನಾನು ಎಷ್ಟು ದಿವಸ ಬದುಕಿರಲಿ! ನನಗೆ ಮರಣವಿಲ್ಲ, ನಮ್ಮ ಮುಂದೆ ಚಿಕ್ಕವರು ಸತ್ತುಹೋಗಥಾರೆ, ಹಾಹಾ! ಅದೃಷ್ಟವೇ!' ಎಂದು ಪ್ರಲಾಪ ಮಾಡಲಿಕ್ಕೆ, ವಿದುರ ಬಹಳ ಸಮಾಧಾನ ಮಾಡಿದ. ನಮ್ಮ ಪಾಂಡುಚಕ್ರವರ್ತಿ ಠಾವಿನಲ್ಲಿ ಆತನ ಮಕ್ಕಳಿದ್ದಾರೆ. ದೈವೇಚ್ಛೆಯಿಂದ ಐದು ಮಂದಿ ಪಾಂಡವರು ಬಂದರೆಂದು, ವಿದುರ ಸಂತೋಷ ಹಚ್ಚಿಕೊಂಡ. ದುರ್ಯೋಧನಾದಿಗಳು ಪಾಂಡುಚಕ್ರವರ್ತಿ ಪ್ರಬಲನಿದ್ದ, ಸತ್ತುಹೋದ. ಸಾಮ್ರಾಜ್ಯ ತಮಗೆ ಆಗತದೆಂದು ಸಂತೋಷಬಡ-ಹೊಕ್ಕರು.

ದುರ್ಯೋಧನ ಮೊದಲಾದವರು ಶಕುನಿ ಕೂಡಿಕೊಂಡು, ಕುಯುಕ್ತಿ ಮಾತು ಹುಟ್ಟಿಸಿ, 'ಈ ಐದು ಮಂದಿ ಪಾಂಡುಚಕ್ರವರ್ತಿಗೆ ಹುಟ್ಟಿಲ್ಲ. ಕುಂತೀದೇವಿ ದುರಾಚಾರದಿಂದ ಹಡದಾಳಿ. ಇವರು ನಮ್ಮ ರಾಜ್ಯಕ್ಕೆ ಸಂಬಂಧಪಟ್ಟವರಲ್ಲ. ಯುಗಾನುಸಾರ ನೀತಿಶಾಸ್ತ್ರವದೆ. ಗಂಡ ಸತ್ತುಹೋದಮ್ಯಾಲೆ ಸಂತಾನ ಇಲ್ಲದೆ ಇದ್ರೆ, ಹಿರೇರ ಅಪ್ಪಣೆ ಕೊಂಡು, ಪರಪುರುಷನ್ನ ಕರದು ಮಕ್ಕಳ ಹಡೀಬಹುದು. ಈ ಕುಂತೀ ನಮ್ಮ ಧೃತರಾಷ್ಟ್ರನ್ನ ಕೇಳಿ ಮಕ್ಕಳ ಹಡದಿಲ್ಲ. ದಾರನ್ನ ಕೇಳಿ ಮಕ್ಕಳ ಹಡದಾಳೆ? ಹೆಂಡತಿಯಲ್ಲಿ ಹುಟ್ಟಿದವರು ತನ್ನ ಮಕ್ಕಳು ಖರೆಯೆ? ಕುಂತೀ ತನ್ನ ಬುದ್ಧಿಯಿಂದ ವ್ಯಭಿಚಾರಕ್ಕೆ ಹಡದಾಳೆ.' ಇಂಥಾ ಕುಯುಕ್ತಿಮಾತು ಉತ್ಪನ್ನ ಮಾಡಲಿಕ್ಕೆ, ಮುಖ್ಯಪ್ರಾಣದೇವರು ಅಂತರಿಕ್ಷವಾರ್ಗದಲ್ಲಿ ಅಶರೀರ-ವಾಣಿ ನುಡಿದರು. 'ಎಲೋ ದುರಾತ್ಮನಾದ ದುರ್ಯೋಧನನೇ! ಹೇ ಶಕುನಿ! ಅಶುದ್ಧ ಬೊಗಳಬ್ಯಾಡಿ. ಪಾಂಡುಚಕ್ರವರ್ತಿ ಬದುಕಿರಲಿಕ್ಕೆ, ತನಗೆ ಮಕ್ಕಳಾಗ-ಬೇಕಾದಕಾರಣ, ತನ್ನ ಹೆಂಡತಿಗೆ ಮಕ್ಕಳ ಹಡೀಲಿಕ್ಕೆ ಅಪ್ಪಣೆ ಕೊಟ್ಟ.

ಯಮಧರ್ಮನ ದೆಸಿಯಿಂದ ಧರ್ಮರಾಯ ಹುಟ್ಟಿದ. ವಾಯುದೇವರ ದೆಸಿಯಿಂದ ಭೀಮಸೇನ, ದೇವೇಂದ್ರನ ದೆಸಿಯಿಂದ ಅರ್ಜುನ, ಅಶ್ವಿನೀ ದೇವತೆಗಳ ದೆಸಿಯಿಂದ ನಕುಲ-ಸಹದೇವರು, ಹೀಂಗೆ ಐದು ಮಂದಿ, ಪಾಂಡುಚಕ್ರವರ್ತಿ ಇರಲಿಕ್ಕೇ ಹುಟ್ಟಿದ್ದಾರೆ. ಸಾಮ್ರಾಜ್ಯ ಆಳಲಿಕ್ಕೆ ತಕ್ಕವರು. ನಿಮ್ಮಿಂದ ಹೊರಗೆ ಹಾಕಿಸಿಕೊಳ್ಳಲಿಕ್ಕೆ ಯೋಗ್ಯರಲ್ಲ. ಇವರಿಗೆ ನಮ್ಮ ಸ್ವಾಮಿ ಶ್ರೀಕೃಷ್ಣ ರಕ್ಷಿಸಥಾನೆ.' ಅಷ್ಟರೊಳಗೆ ವೇದವ್ಯಾಸ ಬಂದನು. ಈ ಕುಯುಕ್ತಿ ಮಾತು ಆತ ಏನು ಬಲ್ಲನು ಎಂದಲ್ಲಿ, ಸರ್ವಾಂತರ್ಯಾಮಿ ಸಮಸ್ತ ಅಭಿಪ್ರಾಯ ಬಲ್ಲ. ಬರತಲೇ ಬಂದು, ನಮ್ಮ ಪಾಂಡುಚಕ್ರವರ್ತೀ ಮಕ್ಕಳೆಂದು ಕೈಲಿ ಹಿಡಕೊಂಡು, ಪಾಂಡುಚಕ್ರವರ್ತಿ ದಾವ ಮುನಿಯಲ್ಲಿರತಿದ್ದ ಆ ಮುನಿಗೆ ಕೂಡಿಕೊಂಡುಹೋಗಿ ಪಾಂಡವರಿಗೆ ಬಹುಮಾನ ಮಾಡಿಸಿದ. ದುರ್ಯೋಧನಾದಿಗಳು ಬಹಳ ದುಃಖಬಡಹೊಕ್ಕರು. 'ನಮ್ಮ ವೈರಿಗಳು ಬಲವಂತರು, ವೇದವ್ಯಾಸ ಅವರ ಪಕ್ಷಪಾತಿಯಾಗಿದ್ದಾನೆ. ಇನ್ನೇನು ಯತ್ನ ಮಾಡುವ' ಎಂದು ದುಃಖಬಡಹೊಕ್ಕರು.

ರಾಜಕುಮಾರರು ಆಡಿ ಕೆಟ್ಟುಹೋಗಥಾರೆಂದು ವೇದವ್ಯಾಸ, ತನ್ನ ಶಿಷ್ಯ ಕೃಪಾಚಾರ್ಯರಲ್ಲಿ ವಿದ್ಯ ಕಲೀಲಿಕ್ಕೆ ಹಾಕಿದನು. ಅನಧ್ಯಯನ ದಿವಸ ಆಡಲಿಕ್ಕೆ ಬಿಟ್ಟರು. ಆಟಿಕೆಯಲ್ಲಿ ವಾಯುತನುಜ ಭೀಮನಿಂದ ಸಮಸ್ತರೂ ಸೋತರು. ಪಕ್ಕಹಣ್ಣು ವೃಕ್ಷಗಳಮ್ಯಾಲೆ ಇದ್ದರೆ, ಹಣ್ಣುಗಳ ನಿಮಿತ್ತ ದುರ್ಯೋಧನಾದಿಗಳು ಮರ ಏರೋರು. ತುಟ್ಟತುದಿಗೆ ಏರಿದಮ್ಯಾಲೆ, ಭೀಮಸೇನ ತನ್ನ ಕಾಲ-ಪೆಟ್ಟಿನಿಂದ ವೃಕ್ಷಕ್ಕೆ ಒದಿಯೋಣ, ಹಣ್ಣುಸಹವಾಗಿ ಕುಮಾರರು ಬೀಳೋರು. ರಾಜಕುಮಾರರು ವೃಕ್ಷದಿಂದ ಬಿದ್ದು ಅಳೋರು. ಭೀಮಸೇನ ಹಣ್ಣುಗಳಿಲ್ಲ ಭ್ರಾತೃಸಹವಾಗಿ ತಿಂಬುವ. ಆಟಿಕೆಯಲ್ಲಿ ಒಬ್ಬರಿಗೆ ಒಬ್ಬರು ಎಳದಾಡೋರು. ಮುಷ್ಟಿಯುದ್ಧ ಮಾಡೋರು. ಗುರಿ ಮಾಡಿ ಹೊಡಿಯೋರು. ಹೋಗಿ ಗುರಿ ಮುಟ್ಟೋರು. ಈಜಾಡೋದರಲ್ಲಿ ಜಿಗೋದರಲ್ಲಿ ಭೀಮಸೇನ ಸೋಲನು. ನಾರಾಯಣಾನುಗ್ರಹದಿಂದ ಭೀಮ ಗೆಲ್ಲತಿಹ. ಭಾಗೀರಥೀಯಲ್ಲಿ ಈಜಾಡಲಿಕ್ಕೆ ರಾಜಕುಮಾರರು ಹೋದರೆ, ಚಂಡಿಕೆ ಹಿಡದು ನೀರೊಳಗೆ ಮುಣುಗಿಸುವ. ಅಷ್ಟೂ ಮಂದೀನ ಕೈಹಿಡಕೊಂಡು ನೀರೊಳಗೆ ಮುಣುಗುವ. ಪ್ರಾಣ ಹೋಗುವ ಸಮಯದಲ್ಲಿ ಬಿಟ್ಟುಕೊಡುವ. ಈತಗೂ ಅವರು ಎಳಿಯೋರು. ಸಮಸ್ತ ಕುಮಾರರ, ಕೈಮ್ಯಾಲೆ ಕೂಡಿಸಿಕೊಂಡು ಭಾಗೀರಥೀ ದಾಟಿ ಆಚಿಕಡಿಗ ಹೋಗುವ. ಈ ಪ್ರಕಾರ ಬಾಲಲ್ಲೀಲ ಅನೇಕ ಪ್ರಕಾರ ತೋರಿಸತಿಹೋನು. ಹರಿ ಮುಖ್ಯಪ್ರಾಣರ ದ್ವೇಷ ಆಗಬೇಕಾಗಿ, ಅಸುರರಿಗೆ ತಮಸ್ಸು ಬರಬೇಕಂತ ತನ್ನಲ್ಲಿ ದ್ವೇಷ ಹುಟ್ಟಿಸಿಕೊಡಬೇಕಾಗಿ, ರಾಜಕುಮಾರರಿಗೆ ದುಃಖಬಡಸ್ತಿಹ. ರಾಜಕುಮಾರರು ಬಹಳೇ ದ್ವೇಷವುಳ್ಳವರಾದರು. ಸಜ್ಜನರು ಭೀಮಸೇನನ ಚರಿತ್ರ ನೋಡಿ ಸಂತೋಷಬಡೋರು.

ಭೀಮಸೇನನ್ನ, ಆ ಪಕ್ಷದವರು ತಮ್ಮೊಳಗೆ ಕೂಡ್ರಿಸಿಕೊಳ್ಳದೆ, ದೈತ್ಯ-ಸ್ವಭಾವ ಉಳ್ಳವರನ್ನ ಕೂಡ್ರಿಸಿಕೊಂಡು, ಉಪಾಯದಿಂದ ಭೀಮಸೇನನ ಕೊಲ್ಲಬೇಕು, ಹೀಂಗೆ ಆಲೋಚನಿ ಮಾಡಿದರು. ಭೀಮಾರ್ಜುನರು ಸತ್ಯವ್ಯಾಲಿ, ಧರ್ಮರಾಯ ನಕುಲ ಸಹದೇವರನ್ನ ಸೆರಿಮನಿಯೊಳಗೆ ಹಾಕಬೇಕು. ಅಲ್ಲಿಂದ ದುರ್ಯೋಧನನ ದಾರು ಗೆದ್ದಾರು! ಈ ಮೂರು ಮುಂದೀಲಿಂದ ಏನು ಆದೀತು! ಹೀಂಗೆ ವಿಚಾರ ಮಾಡಿ, ಮಹೋಲ್ಬಣ ವಿಷ ಮೃತ್ಯುಸಮಾನ, ಆ ವಿಷದ ಗಳಿ ಸೋಕಿದರೆ ಬಹಳ ಮುಂದಿ ಸಾಯಬೇಕು—ಕ್ಷೀರಸಮುದ್ರ ಮಥನಕಾಲದಲ್ಲಿ ಕಾಲಕೂಟ ವಿಷ ಹೊರಟಿತು. ಸ್ವಲ್ಪಮಾತ್ರ ಮಹಾರುದ್ರ ಪಾನಮಾಡಲಿಕ್ಕಾಗಿ ಉಳಿದ ಸ್ವಲ್ಪ ವಿಷ ಮಹಾರುದ್ರನ ಬಳೀಲಿತ್ತು. ಆ ವಿಷ ಶುಕ್ರಾಚಾರ್ಯ ಮಹಾದೇವನಿಂದ ಸಂಪಾದಿಸಿದ್ದ. ಶುಕ್ರಾಚಾರ್ಯ ಕಾಳಿಂಗಗೆ ಕೊಟ್ಟಿದ್ದ. ಶಕುನಿ ಆ ವಿಷ ಬಚ್ಚಿಟ್ಟಿದ್ದ—ಅಂಥಾ ವಿಷ ಭೀಮಸೇನಗೆ ಹಾಕಿ ಕೊಲ್ಲಬೇಕಾಗಿ, ಸ್ವಯಂಪಾಕ ಮಾಡುವವರಿಗೆ ಹೇಳಿ, ಪಾಂಡವರ ನಿಮಿತ್ತ ಸ್ವಯಂಪಾಕ ಮಾಡಿಸಿ, ಈ ವಿಷ ಹಾಕೆಂದು ಹೇಳಲಿಕ್ಕೆ, ಯುಯುತ್ಸು ಒಬ್ಬಾತ ತನ್ನ ಸೇವಿ ಮುಟ್ಟಿಸ-ಬೇಕಾಗಿ, ಈ ಕಪಟತನ ಪಾಂಡವರಿಗೆ ಹೇಳಿದ. ಇವತ್ತಿನ ಭಕ್ಷ್ಯಭೋಜ್ಯ ಭೋಜನ ಮಾಡಬ್ಯಾಡಿ ಎನಲು, ಆ ಭೋಜನದಿಂದ ಏನಾದೀತೆಂದು, ಐದು ಮುಂದಿಗೆ ಮಾಡಿದ ಭಕ್ಷ್ಯಭೋಜ್ಯ, ಭೀಮಸೇನ ತಾ ಒಬ್ಬನೇ ಉಂಡ. ನಾರಾ-ಯಣಾನುಗ್ರಹದಿಂದ ಭೀಮಸೇನಗೆ ಜೀರ್ಣವಾಯಿತು. ಕ್ಷೀರಸಮುದ್ರ ಮಥನ-ಕಾಲದಲ್ಲಿ ಕಾಳಕೂಟ ವಿಷ ಪಾನಮಾಡಿದವಗೆ, ಅತ್ಯಲ್ಪವಿಷದಿಂದ ಏನು ಆಗ-ಬಲ್ಲದು! ಇಂಥಾ ವಿಷದಿಂದ ಏನೂ ಆಗಲಿಲ್ಲವೆಂದು ಮತ್ತೆ ಒಂದು ಉಪಾಯ ರಚಿಸಿದರು.

ಭಾಗೀರಥೀಯಲ್ಲಿ ಪ್ರಮಾಣಕೋಟಿ ಎಂದು ಒಂದು ಯೋಜನ ಉದ್ದದ ಒಂದು ಮಡುವು ಇಹೋದು. ಅಲ್ಲೀ ದಿವ್ಯ ಉಪ್ಪರಿಗಿ ಕಟ್ಟಿಸಿ ಭೀಮಸೇನಗೆ ನುಗ್ಗಸಬೇಕಂತ ಮಾಡಿದ್ದರು. ಈ ಕುಯುಕ್ತಿ ಯುಯುತ್ಸು ಹೇಳತಿಹ. ಆದರೂ ಅವರ ಲೆಖ್ಖವಿಲ್ಲದೆ ಭೀಮಸೇನ ರಾಜಕುಮಾರರ ಸಂಗಡ ಭಾಗೀರಥೀಗೆ ಹೋಗಿ, ನಾನಾವಿಧವಾದ ಭಕ್ಷ್ಯ ಭೋಜನ ಮಾಡಿ, ಅನೇಕ ಪ್ರಕಾರ ನದೀತೀರದಲ್ಲಿ ವೈಹಾಳಿಮಾಡಿ ಮಲಗಿಕೊಂಡ. ತುಟ್ಟತುದಿಗೆ ಇವರ ಕಪಟತನ ಹೊರಗೆ ಹಾಕ-ಬೇಕಾಗಿ ತಾ ಮಲಗಿಕೊಂಡು ಭೀಮಸೇನ ಗಾಢನಿದ್ರಿ ಮಾಡಿದ. ಮಂತ್ರಪೂರಿತ-ವಾದಂಥ ಉರಗಪಾಶದಿಂದ ಕರಕಮಲ ಕಟ್ಟಿ ನದೀಯೊಳಗೆ ಬಿಸ್ಟಿದರು. ಒಂದು ಯೋಜನ ಉದ್ದ ಬೀಳಲಿಕ್ಕೆ, ಭೀಮಸೇನ ಪಾಶಗಳನೆಲ್ಲ ಆ ಕಾಲದಲ್ಲೀ ಕಡದು ಬಿಸ್ಟನು. ಉದಕದೊಳಗಿಂದ ಬದುಕಿಬಂದನೆಂದು ಸಕಲರೂ ಆಶ್ಚರ್ಯವುಳ್ಳವರಾಗಿ —ದ್ವೀಪಾಂತರದಲ್ಲಿ ಕುಲನಾಗಗಳಿದ್ದವು, ಶುಕ್ರಾಚಾರ್ಯ ಕೊಟ್ಟಂಥ ಮಂತ್ರವು

ಶಕುನಿ ಕಲಿತಿಹ—ಮಂತ್ರ ಜಪಿಸಿ ಕುಲನಾಗಗಳ ಕರೀಲಿಕ್ಕೆ ಅವು ಬಂದವು. ಪೆಟ್ಟಿಗೆಯೊಳಗೆ ಹಾಕಿ, ಭೀಮಸೇನ ಮಲಗಿಕೊಂಡಿದ್ದಾನೆ, ಅತನ ಎದೀಮ್ಯಾಲೆ ಸರ್ಪಗಳು ಬಿಟ್ಟುಕೊಡು ಎಂದು ಸೂತನ ಕಳುಹಿಕೊಟ್ಟರು. ಸೂತ, ಭೀಮಸೇನನ ವಿಶಾಲ ಎದೀಮ್ಯಾಲೆ ಎಂಟು ನಾಗಗಳ ಬಿಡಲಿಕ್ಕೆ, ಮರ್ಮಸ್ಥಳಕ್ಕೆ ಕಚ್ಚಿದವು. ವಜ್ರಕಾಯ, ಸರ್ಪಗಳ ಹಲ್ಲುಗಳು ಮುರದುಹೋದವು! ನಿದ್ರಿಯಿಂದ ಕೈ ಝಾಡಿಸಲಿಕ್ಕೆ, ದ್ವೀಪಾಂತರಕ್ಕೆ ಹೋಗಿ ಬಿದ್ದವು. ಸರ್ಪಗಳು ಎಷ್ಟು ಇದ್ದವು ಅಷ್ಟೂ ತನ್ನ ಕೈಯಿಂದ ಒರಸಿ ಬಿಷ್ಟನು. ಕೈ ಝಾಡಿಸಿದಾಗ ಸೂತನ ಮಾರೀ ಮ್ಯಾಲೆ ಪೆಟ್ಟು ಬಿತ್ತು. ಸೂತ ದೂರ ಹೋಗಿ ಬಿದ್ದನ್ನು. ಭೀಮಸೇನ ನಿದ್ರಿಯಲ್ಲೇ ಅಷ್ಟೂ ಸರ್ಪಗಳ ಕೊಂದು ಬಿಷ್ಟನು. ಸ್ವಾಭಾವಿಕ ಬಲವುಳ್ಳಾತ, ನಮ್ಮನ್ನ ಹೀಂಗೆ ಒರಸಿಬಿಟ್ಟನಲ್ಲ ಎಂದು ದುಃಖಬಡಹೊಕ್ಕರು. ಸರ್ಪಗಳು ಮಹಾ ತೀಕ್ಷ್ಣವಿಷವುಳ್ಳವು, ಶ್ವಾಸೋಚ್ಛ್ವಾಸದಿಂದ ಹದಿನಾಲ್ಕು ಲೋಕದಲ್ಲಿ ಇದ್ದಂಥಾವರನ್ನ ಕೊಂದುಬಿಡೋವು. ಅಂಥಾ ಸರ್ಪಗಳು ಭೀಮಸೇನನ ಕಚ್ಚಿ ನಿರ್ವೀರ್ಯವುಳ್ಳವಾದವು. ಇಂಥಾ ಬಲ ದಾವಾತನಲ್ಲೂ ಕಂಡಿಲ್ಲ. ಪ್ರಹ್ಲಾದಗೆ ಹಿರಣ್ಯಕಶಿಪು ಬಹಳ ದುಃಖಬಡಸ್ತಿಹ. ಪ್ರಹ್ಲಾದ ನಿಷ್ಕಾಮಕರ್ಮ ಉಳ್ಳಾತ. ಆಪತ್ಕಾಲ ಬಂದರೆ ನರಸಿಂಹನ ಸ್ಮರಣೆ ಮಾಡುವ. ಈ ಭೀಮಸೇನಗೆ ಏನು ಆಪತ್ತು ಬಂದರೂ, ತನ್ನ ಬದುಕೋ ನಿಮಿತ್ತ ದೇವರ ಸ್ಮರಣೆ ಮಾಡತಿದ್ದಿಲ್ಲ. ಸ್ವಾಭಾವಿಕ ದೇವರ ಸ್ಮರಣೆಯುಳ್ಳಾತ. ಈತಗೆ ದಾವಾತ ಬಲ ಕೊಟ್ಟಾನೆ, ಅತನ ಸಹವಾಗಿ ಈತನ್ನ ವಿನಾಶ ಮಾಡಬೇಕು. ನಾರಾಯಣನೇ ಇಲ್ಲಿ ಕೃಷ್ಣನಾಗಿ ಹುಟ್ಯಾನೆ. ಇನ್ನು ಕೃಷ್ಣನ ವಿರೋಧ ಮಾಡಬೇಕೆಂದು, ಕುರುರಾಜಕುಮಾರರು ಭೀಮಸೇನನ ಅಗ್ಗಳಿಕೆ ತಮ್ಮ ಹಿರೇರ ಮುಂದೆ ಹೇಳಿದರು. ಸಮಸ್ತ ರಾಯರೂ ಜರಾಸಂಧಗೆ ಮೊರಿ ಇಟ್ಟರು. ಜರಾಸಂಧಗೆ, ತನ್ನ ಅಳಿಯನಾದ ಕಂಸನ್ನ ಕೃಷ್ಣ ಕೊಂದ, ತನ್ನ ಮಕ್ಕಳು ಅಸ್ತೀ ಪ್ರಾಸ್ತೀ ಇವರಿಗೆ ವೈಧವ್ಯ ಪ್ರಾಪ್ತವಾಯಿತೆಂದು ದುಃಖ ತುಂಬಿಹೋದು. ಜರಾಸಂಧ ದುರ್ಯೋಧನಾದಿಗಳಿಂದ ಪ್ರಾರ್ಥಿತನಾಗಿ, ಹದಿನೆಂಟು ಸಾರಿಗೆ ಮಥುರಾಪಟ್ಟಣಕ್ಕೆ ಹೋಗಿ, ಇಪ್ಪತ್ತಮೂರು ಅಕ್ಷೌಹಿಣಿಬಲ-ಸಹಿತನಾಗಿ ಮುತ್ತಿಗಿ ಹಾಕಿ, ಕೃಷ್ಣಬಲರಾಮರಿಂದ ಹೊಡಿಸಿಕೊಂಡು, ಶಸ್ತ್ರಾಸ್ತ್ರಗಳ ಕಳಕೊಂಡು, ಉಟ್ಟ ವಸ್ತ್ರ ತಲೀಮ್ಯಾಲೆ ಹೊತ್ತುಕೊಂಡು, ಕೂದಲು ಹರವಿಕೊಂಡು, ಹಸ್ತಪಾದಾದ್ಯವಯವಗಳ ಛೇದಿಸಿಕೊಂಡು, ಚತುರಂಗ ಸೇನಾಬಲ ಕಳಕೊಂಡು ಬಹಳ ಶೋಕಯುಕ್ತನಾಗಿ, ಹದಿನೆಂಟು ಸಾರಿಯೂ ಸೋತು ಸೋತುಹೋದ.

ಯಾದವಕುಲತಿಲಕ ತನ್ನ ಭಕ್ತರಿಗೆ ಸುಖ ಕೊಡತ ಮಥುರಾಪಟ್ಟಣ, ದಲ್ಲೀರಹೊಕ್ಕನು. ರಾಜಕುಮಾರರಿಗೆ ಭೀಮಸೇನನ ಭಯ ಬಹಳ ಇಹೋದು.

ಆದಕಾರಣ ಭೀಮಸೇನನ ಪಕ್ಷಪಾತಿ ಯದುಕುಲೋತ್ಪನ್ನ ಶ್ರೀಕೃಷ್ಣನ್ನ ಕೊಲ್ಲ ಬೇಕು. ಭೀಮಾರ್ಜುನರನ್ನ ಕೊಂದವ್ಯಾಲೆ, ಧರ್ಮರಾಯ ನಕುಲ ಸಹದೇವ ರನ್ನ ಕಾರಾಗೃಹದಲ್ಲಿ ಹಾಕಬೇಕು. ಈ ಪ್ರಕಾರ ಆಲೋಚನಿ ಮಾಡಿದರು. ಭೀಮಸೇನ ಬಲವುಳ್ಳಾತ, ಆದಕಾರಣ ಧೃತರಾಷ್ಟ್ರರಾಯ ಭೀಮಸೇನನ್ನ ದಿಗ್ವಿಜಯಕ್ಕೆ ಕಳುಹಿದ. ಪಾಂಡುಚಕ್ರವರ್ತಿಗೆ ಮಣಿದು ಬಂದಿದ್ದಿಲ್ಲ, ಅಂಥಾ ರಾಯರನ್ನೆಲ್ಲ ತನ್ನ ಪಾದಾಕ್ರಾಂತರನ್ನ ಮಾಡಿಕೊಂಡು ಅಪಾರ ಕಪ್ಪಗಳು ಕೊಂಡವ್ಯಾಲೆ, ಪೂರ್ವದಿಕ್ಕಿಗೆ ಭೀಮಸೇನ ಹೋಗಿ, ಶಿಶುಪಾಲ ದಂತವಕ್ರ ರೆಂಬೋ ತನ್ನ ಅಬಚಿ ಮಕ್ಕಳನ್ನ ಗೆದ್ದ. ಅವರು ಮೊದಲ ಜನ್ಮದಲ್ಲಿ ರಾವಣ ಕುಂಭಕರ್ಣರು. ರಾವಣ ದಮುಘೋಷರಾಯನ ಮಗನಾಗಿ ಶಿಶುಪಾಲನೆಂದು ಹುಟ್ಯಾನೆ. ಅಂಥಾ ಶಿಶುಪಾಲನ್ನ ಗೆದ್ದು ಕಪ್ಪ ಕೊಂಡುಬಂದನು. ಮತ್ತೊಬ್ಬ ಅಬಚಿಯ ಮಗ ಕರೂಷದೇಶದ ಅರಸು, ದಂತವಕ್ರ. ಆತನ್ನ ಗೆದ್ದ. ವಸುದೇವನ ಮಗ ಪೌಂಡ್ರಕ ವಾಸುದೇವ, ಭೀಷ್ಮಕರಾಯನ ಮಗ ರುಕ್ಮಿ ಇವರನ್ನ ಗೆದ್ದ.

ರುಕ್ಮಿ ಪೂರ್ವದಲ್ಲಿ ದಾರೆಂದರೆ, ಮನುಷ್ಯನ ತಿಂಬೋಂಥ ಇಲ್ವಲನೆಂಬನ. ಇಲ್ವಲನು ಬ್ರಾಹ್ಮಣರ ಭೋಜನ ಮಾಡಸಥಾನೆಂದು, ತನ್ನ ತಮ್ಮಂದಿರನ್ನ ಕರೆದು ಪಾಕ ಮಾಡಿ ಬ್ರಾಹ್ಮಣರಿಗೆ ಭೋಜನ ಮಾಡಿಸಿ, 'ಏಹಿ ವಾತಾಪೀ' ಎಂದರೆ, ಬ್ರಾಹ್ಮಣರ ಹೊಟ್ಟೀ ಸೀಳಿಕೊಂಡು ದೇಹವುಳ್ಳವನಾಗಿ ಬಾಹ. ಹೀಂಗೆ ಬಹುಮಂದಿ ಬ್ರಾಹ್ಮಣರಿಗೆ ಸಾಯಗೊಟ್ಟಿದ್ದನು. ದೈವೇಚ್ಛೆಯಿಂದ ಅಗಸ್ತ್ಯಋಷಿ ಅಲ್ಲಿಗೆ ಬಂದನು. ಆಗ ಇಲ್ವಲನು ಇವೇ ಪ್ರಕಾರ ಮಾಡಲಿಕ್ಕೆ, ಹೊಕ್ಕಳ ಮುಟ್ಟಿ ಜಪಿಸಲಿಕ್ಕೆ, ವಾತಾಪಿ ಸತ್ತುಹೋದನು. 'ಏಹಿ ವಾತಾಪೀ' ಎಂದರೆ, 'ವಾತಾಪಿ ಜೀರ್ಣೋ ಭವ' ಎಂದನು. ಆ ಇಲ್ವಲನೇ ರುಕ್ಮಿಯಾಗಿ ಹುಟ್ಯಾನೆ. ರುಕ್ಮಿಯಲ್ಲಿ ಅಗ್ನಿ ಮಗ ಶುಚಿ ಆವೇಶವದೆ. ಭೀಷ್ಮಕರಾಯ ದಾರು ಎಂದರೆ, ಮಿತ್ರನೆಂಬೋ ಆದಿತ್ಯ, ರಾಹುವಿನ ಅಂಶದಿಂದ ಹುಟ್ಯಾನೆ. ಭೀಷ್ಮಕರಾಯನ ತಮ್ಮಂದಿರು ಕ್ರಥ-ಕೌಶಿಕರು, ಇವರು ಅಗ್ನಿಪುತ್ರರು, ಪ್ರಧಾನಾಗ್ನಿ ಮಕ್ಕಳು, ಪವಮಾನ ಶುಂಧಿ ಎಂಬುವರು ಕ್ರಥ ಕೌಶಿಕರಾಗಿ ಹುಟ್ಯಾರೆ. ಅಂಥಾ ರುಕ್ಮೀನ್ನ ಲೀಲಾ-ಮಾತ್ರದಲ್ಲಿ ಗೆದ್ದು ಕಪ್ಪಗಳ ಕೊಂಡುಬಂದನು. ಅಲ್ಲಿಂದ ನಕುಲ ಸಹದೇವರು ತಮ್ಮ ಸೋದರಮಾವನ ದೇಶಕ್ಕೆ ಹೋದರು. ಶಲ್ಯ ಸುಮ್ಮಗೆ ಕಪ್ಪ ಕೊಡಲಿಲ್ಲ. ಭೀಮಸೇನನ ಮುಷ್ಟೀಪೆಟ್ಟಿನಿಂದ ಪೀಡಿತನಾಗಿ, ತನ್ನ ಸೋದರಳಿಯನಾದ ಭೀಮಸೇನಗೆ ಕಪ್ಪ ಕೊಟ್ಟನು. ಏಕಲವ್ಯ ಕಿರಾತದೇಶ ಕಟ್ಟಿಕೊಂಡು ಬಲವಂತ, ನಾಗಿಹ. ಮಣಿಮಂತನೆಂಬೋ ದೈತ್ಯನೇವೆ ಏಕಲವ್ಯನಾಗಿ ಹುಟ್ಯಾನೆ. ಅವನ ಕೈಯ ಕಪ್ಪ ಕೊಂಡು ಬಹುಮಂದಿ ರಾಯರನ್ನೆಲ್ಲ ಸೋಲಿಸಿ ಅಪಾರ ಕಪ್ಪಗಳ ಕೊಂಡುಬಂದ. ಅರ್ಜುನ, ಭೀಮಸೇನನ ಬಲವೀರ್ಯದಿಂದ ಸಾಲ್ವ, ಹಂಸ,

ಡಿಬಿಕರನ್ನು ಗೆದ್ದನು. ಭೀಮಸೇನನ ಪರಾಕ್ರಮ ಕಂಡು ಸಕಲರೂ ಸಂತೋಷ ಪಟ್ಟರು.

ಸ್ವಾಮಿ ಅಕ್ರೂರನ್ನ ಕಳುಹಿಸಿದ್ದಾನೆ. 'ಧೃತರಾಷ್ಟ್ರಗೆ ನನ್ನ ಹೆಸರು ಹೇಳು. ನಿನ್ನ ಮಕ್ಕಳು, ಪಾಂಡವರ ಕೂಡ ವಿರೋಧ ಮಾಡಥಾವೆಂದು ಕರ್ಣೋಪಕರ್ಣ ಬ್ರಾಹ್ಮಣರು ನನಗೆ ವಾರ್ತೆ ಹೇಳಿದ್ದಾರೆ. ನೀನು ಹಿರಿಯ ಇರಲಿಕ್ಕೆ ಕಲಹ ಬೆಳಸಬಾರದು. ಪಾಂಡವರನ್ನು ನಿನ್ನ ಮಕ್ಕಳ ಸಮ ಮಾಡಿ ನೋಡು. ಇವರಿಗೆ ಅರ್ಧ ರಾಜ್ಯ ಕೊಟ್ಟು ಸುಖದಿಂದ ಬಾಳು. ಹೀಂಗಂತ ಹೇಳಿ-ಕಳುಹಿದ್ದೀನೆಂತ ಹೇಳು.' ಅಕ್ರೂರನ ಮನಿಗೆ ಕೃಷ್ಣ ಹೋಗಿ ಅವನನ್ನ ಹಸ್ತಿನಾವತಿಗೆ ಕಳುಹಿದ. ಸ್ವಾಮೀ ಅಪ್ಪಣಿ ಕೊಂಡು, ಹಸ್ತಿನಾವತಿಗೆ ಹೋಗಿ ಶೀಘ್ರ ಸಮಾಚಾರ ತಿಳೀದಕಾರಣ, ಮೂರು ನಾಲ್ಕು ತಿಂಗಳು ಅಲ್ಲಿಯೇ ಇದ್ದು, ಪಾಂಡವರಿಗೆ ಮಿತ್ರರು, ಶತ್ರುಗಳು ದಾರು ದಾರು ಇದನೆಲ್ಲ ದೃಷ್ಟೀಲೆ ಕಂಡ. ವಿದುರ, ಕುಂತೀ ಇವರ ಮುಖದಿಂದಲೂ ಕೇಳಿದ. ಅದರ ಮ್ಯಾಲೆ ಧೃತರಾಷ್ಟ್ರನ ಬಳಿಗೆ ಅಕ್ರೂರ ಹೋಗಿ, 'ನಮ್ಮ ಸ್ವಾಮಿ ಶ್ರೀಕೃಷ್ಣ ಕಳುಹಿದ್ದಾನೆ. ನಿನ್ನ ಮಕ್ಕಳಲ್ಲಿ ಪಾಂಡವರಲ್ಲಿ ಸಮತ್ವವಿರಲಿ. ಇದರಿಂದ ನಿನ್ನ ಮ್ಯಾಲೆ ವಾಸುದೇವನ ಪ್ರೀತಿ ಆಗತದೆ. ವಾಸುದೇವನ ಅನುಗ್ರಹದಿಂದ, ಬ್ರಹ್ಮಾದಿ ದೇವತೆಗಳು ನಿನ್ನ ಮ್ಯಾಲೆ ಪ್ರೀತಿ ಮಾಡಥಾರೆ. ಪಾಂಡನರನ್ನ ಸರಿಮಾಡದೆ ನಿನ್ನ ಮಕ್ಕಳಲ್ಲಿ ಸ್ನೇಹವುಳ್ಳವನಾದ ಪಕ್ಷವೇ ನಿನಗೆ ರಾಜ್ಯ ದಕ್ಕದು. ವೈಷವ್ಯ ಮಾಡಬ್ಯಾಡ. ವೈಷವ್ಯ ಮಾಡಿದ್ದರಿಂದ ನರಕಾದ್ಯನರ್ಥಗಳು ಉಂಡೀ. ಈ ವಚನ ನನ್ನದಲ್ಲ, ಶ್ರೀಕೃಷ್ಣದೇವರದು' ಎಂತೆನಲಿಕ್ಕೆ ಧೃತರಾಷ್ಟ್ರ ಮಾತನಾಡಥಾನೆ. 'ಎಲ್ಲೆ ಅಕ್ರೂರ ನಾನು ಸ್ವತಂತ್ರನಲ್ಲ. ಭೂಭಾರ ಇಳುಹಲೋಸುಗ ಕೃಷ್ಣ ಅವತಾರ ಮಾಡಿದ್ದಾನೆ. ತನ್ನ ಚಿತ್ತಕ್ಕೆ ಸರಿಬಂಧಾಂಗೆ ಮಾಡಲಿ. ನನಗೆ ಪರಾಧೀನತ್ವವದೆ' ಎಂತ ಬಹಳ ಮಾತಾಡಲಿಕ್ಕೆ, 'ಎಲ್ಲೆ ಧೃತರಾಷ್ಟ್ರರಾಯ ನಿನ್ನ ಮಕ್ಕಳಿಗೆ ಕ್ಷೇಮವಿಲ್ಲ. ಭೀಮಸೇನನ ಗದಾರೂಪ ಅಗ್ನಿಯಿಂದ ನಿನ್ನ ಮಕ್ಕಳು ಸುಟ್ಟು-ಹೋದಾರು. ಕುಲಕ್ಕೆ ಕ್ಷೇಮವಿಲ್ಲ' ಎಂದು ರಾಯನ ಮ್ಯಾಲೆ ಮಾತಿಟ್ಟು, ಇನ್ನು ಇಲ್ಲಿ ಇಹೋ ಕಾರಣವೇನು ಎಂದು, ಭೀಮಾರ್ಜುನ ನಕುಲ ಸಹದೇವರ ಕೂಡಿಕೊಂಡು ಅಕ್ರೂರ, ಮಥುರಾಪಟ್ಟಣಕ್ಕೆ ಹೋದನು. ಅಲ್ಲಿ ಭೀಮಸೇನ ಗದಾವಿದ್ಯ ಬಲರಾಮನಿಂದ ಓದಿಕೊಂಡ. ಉದ್ಧವನ ಕೈಯಿಂದ ಸಹದೇವ ನೀತಿ-ಶಾಸ್ತ್ರ ಓದಿಕೊಂಡಾನೆ.

ಶ್ರೀಕೃಷ್ಣದೇವರು ಗೋಕುಲಕ್ಕೆ ಉದ್ಧವನ್ನ ಕಳುಹಿದ್ದಾನೆ. " ಗೋಪಿಕಾ-ಸ್ತ್ರೀಯರಿಗೆ ಒಹಳ ಪ್ರಕಾರ ಸಮಾಧಾನ ಮಾಡು. ನನ್ನಿಂದ ವಿಯೋಗ ದಾರಿಗೂ ಇಲ್ಲ. ಸಮಸ್ತರಲ್ಲಿ ನಿಯಾಮಕನಾಗಿರಥೀನಿ. ನಾನು ಮನುಷ್ಯನೆಂತ ತಿಳಿಯ-

ಬ್ಯಾಡಿ. ಋಷಿಗಳೆಲ್ಲ ನಾನು ಪರಬ್ರಹ್ಮನೆಂತ ತಿಳೀಥಾರೆ. ನಾನು ಪರಬ್ರಹ್ಮ-ನೆಂಬುದು ನಿಮಗೆ ಸಾಕ್ಷಿ ಬಂದದೆ ಇಲ್ಲವೇ? ಅಜಗರಸರ್ಪ ನಂದಗೋಪನ್ನ ನುಂಗಿತು. ನನ್ನ ಪಾದಸ್ಪರ್ಶವಾಗಲಿಕ್ಕೆ, ಆ ಸರ್ಪ ವಿದ್ಯಾಧರದೇಹ ಧರಿಸಿ ಸ್ತೋತ್ರ ಮಾಡಿದ್ದಾನೆ. ಪ್ರತ್ಯಕ್ಷ ತಾವು ಕಂಡಾರೆ. ಆ ವಿದ್ಯಾಧರಗೆ ಅಜಗರಜನ್ಮ ಬರಲು ಕಾರಣವೇನು ಎಂದರೆ, ವಿದ್ಯಾಧರ ರೂಪದಲ್ಲಿ ತಾ ಚಲುವ. ಬ್ರಾಹ್ಮಣರು ತಪಸ್ಸು ಮಾಡಿ ಪಂಚಾಗ್ನಿ ಒಳಗೆ, ಮಾರಿ ಕಪ್ಪಿಟ್ಟಹೋದು, ಕಣ್ಣುಗಳು, ಹೊಟ್ಟಿ ಗೂಡಹೊಕ್ಕು ಬಿದ್ದಿಹೋವು. ಆದಕಾರಣ ಬ್ರಾಹ್ಮಣರ ಕಂಡು ತಾ ಚಲುವನೆಂದು ನಕ್ಕನು. ಆ ಬ್ರಾಹ್ಮಣರಿಗೆ ನಕ್ಕ ಕಾರಣ ಅಜಗರನಾಗಿ ಹುಟ್ಟಿದ್ದ. ನನ್ನ ಪಾದ. ಸ್ಪರ್ಶವಾಗಲಿಕ್ಕೆ ದಿವ್ಯದೇಹ ಬಂತು. ಗೋಪಿಕಾಸ್ತ್ರೀಯರು ನನ್ನ ಮಹಿಮ ಕೇಳಿದ್ದಾರೆ. ಸಾಧನೀ ದ್ವಾದಶಿ ದಿವಸ ಯಮುನಾಸ್ನಾನಕ್ಕೆ ನಂದಗೋಪ ಹೋಗಿರಲಿಕ್ಕೆ, ಆ ವ್ಯಾಳ್ಯಾದಲ್ಲಿ ವರುಣನ ಭೃತ್ಯರು ನಂದಗೋಪನ ಹಿಡಕೊಂಡು ಹೋದರು. ಜಲದೊಳಗೆ ಕಾಣಬಾಹೋದಿಲ್ಲ ಎಂದು ನನಗೆ ಶರಣುಹೊಕ್ಕರು. ಆ ಕ್ಷಣವೇ ವರುಣನ ಲೋಕಕ್ಕೆ ಹೋಗಿರಲಿಕ್ಕೆ, ವರುಣ ಎದುರುಗೊಂಡು ಕರಕೊಂಡುಹೋಗಿ, ತನ್ನ ಅಪರಾಧ ಕ್ಷಮಿಸಲಿಕ್ಕೆ ನನ್ನ ಸ್ತೋತ್ರ ಮಾಡಿದನು. 'ಈತ ಸರ್ವೇಶ್ವರ, ಸರ್ವೋತ್ತಮನಿದ್ದಾನೆ. ಹೇ ನಂದಗೋಪ! ನಿನ್ನ ಮಗನೆಂದು ತಿಳಿಯಬ್ಯಾಡ.' ಹೀಂಗೆ ವರುಣನ ಮುಖದಿಂದ ನನ್ನ ಮಹಿಮ ಕೇಳಿದ್ದಾನೆ. ಗೋಪಾಲಕರೆಲ್ಲ ಕೂಡಿ ನನಗೆ, 'ನೀನು ನಾರಾಯಣನಾದ ಪಕ್ಷವೇ ವೈಕುಂಠ ತೋರಿಸು' ಎಂದರು. ಪ್ರತ್ಯಕ್ಷ ವೈಕುಂಠ ತೋರಿಸಿದ್ದೀನಿ. ಬ್ರಹ್ಮಾದಿ ಜಗತ್ತು ನನ್ನ, ವೈಕುಂಠದಲ್ಲಿ ವಾಲ್ಮೈಸತಿಹೋದು. ಇದನ್ನೆಲ್ಲಾ ಅವರು ಕಂಡಾರೆ. ನನ್ನ ಚರಿತ್ರ ಅನುಭೂತವದೆ. ಇದನ್ನೆಲ್ಲಾ ನೆನಪು ಮಾಡಿಕೊಳ್ಳಲಿ" ಎಂದು ಉದ್ಧವಗೆ ಹೇಳಿ, ಗೋಪಿಕಾಸ್ತ್ರೀಯರ ಸಮಾಧಾನಾರ್ಥವಾಗಿ ಗೋಕುಲಕ್ಕೆ ಕಳುಹಿದ್ದಾನೆ. ಅಲ್ಲಿ ಅವರ ಕೈಯಿಂದ ಭ್ರಮರಗೀತಾ ಕೇಳಿ, ಅಲ್ಲಿ ಬಹುಕಾಲ ವಾಸಮಾಡಿ, ಆ ಗೋಪಿಕಾಸ್ತ್ರೀಯರ ಸಮಾಧಾನ ಮಾಡಿಕೊಳ್ಳತ ಇದ್ದು, ಅಲ್ಲಿಂದ ಸ್ವಾಮೀ ಸಮೀಪಕ್ಕೆ ಬಂದನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತ-ತಾತ್ಪರ್ಯನಿರ್ಣಯವನ್ನು, ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಅಸುರ ಸಂಹಾರಃ' ಎಂಬ ಹದಿನಾಲ್ಕನೇ ಅಧ್ಯಾಯವು ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೫

ಶ್ರೀಕೃಷ್ಣಚರಿತೇ ಪಾಂಡವಾದೀನಾಂ ಅಸ್ತ್ರವಿದ್ಯಾಭ್ಯಾಸಃ

ಈ ಹದಿನೈದನೇ ಅಧ್ಯಾಯದಲ್ಲಿ ಏನು ಪ್ರಮೇಯವೆಂದರೆ, ಶ್ರೀಕೃಷ್ಣ ಮಥುರಾಪಟ್ಟಣ ಸಂರಕ್ಷಿಸತಾ ಇರಲಾಗಿ, ಭೀಮಾರ್ಜುನ, ನಕುಲಸಹದೇವರು, ಮೂರು ವರುಷ ಪರಿಯಂತ ವಿದ್ಯಾಭ್ಯಾಸ ಮಾಡಿ, ಶ್ರೀಕೃಷ್ಣನ ನಿರೂಪಗೊಂಡು, ಶ್ರೀಕೃಷ್ಣನ ಮಗ ವಿಶೋಕನ ಕೂಡಿಕೊಂಡು, ಇಂದ್ರಪ್ರಸ್ಥಕ್ಕೆ ನಡದರು. ವಿಶೋಕ ?
ಸೈರಂಧ್ರಿಯ (ಕುಬಿ) ಮಗ, ನಾರದನ ಶಿಷ್ಯ. ಭೀಮಸೇನನ ಸಾರಥಿಯಾಗಿಹ. ಸೈರಂಧ್ರಿ ಪೂರ್ವದಲ್ಲಿ ದಾರು ಎಂದರೆ, ಪಿಂಗಳಾ ಎಂಬಂಥ ಅಪ್ಸರಸ್ತ್ರೀ. ಹಿಂದೆ, ಶ್ರೀಕೃಷ್ಣನೇ ತನಗೆ ಪತಿಯಾಗಬೇಕೆಂದು ತಪಸ್ಸು ಮಾಡಲಾಗಿ, ಈಗ ಶ್ರೀಕೃಷ್ಣನ ಸ್ತ್ರೀಯಾಗಿ ಹುಟ್ಟಿದಳು. ಭೀಮಸೇನ, ಸಾರಥಿಯ ಸಾಮರ್ಥ್ಯ ಕಂಡು ಮಹಾ ಹರ್ಷಿತನಾದ. ಇಂದ್ರಪ್ರಸ್ಥಕ್ಕೆ ಹೋದಮ್ಯಾಲೆ ಭೀಮಸೇನ, ವೇದವ್ಯಾಸನ ?
ಕೈಯ್ಯ ತತ್ತ್ವಜ್ಞಾನ ತಿಳಕೊಂಡು, ಅರ್ಜುನ ನಕುಲ ಸಹದೇವರಿಗೆ ಹೇಳಿದನು. ವಿಷ್ಣುವೈಷ್ಣವದ್ರೋಹಿಗಳನೆಲ್ಲ ಶಿಕ್ಷಿಸಿ, ವೈಷ್ಣವಮಾರ್ಗ ಪ್ರವರ್ತಿಸತ, ಸರ್ವರಿಗೆ ಬಾಹುಯುದ್ಧದಲ್ಲಿ ವಾಗ್ಯುದ್ಧದಲ್ಲಿ ಪರಾಜಿತರನ್ನ ಮಾಡಿದ ಧರ್ಮರಾಯ ಏನು ಮಾಡಿದನೆಂದರೆ, ಭೀಮಸೇನನ ಕೈಯ ಹಿರಿಯ ಕಲಿಯಬಾರದು ಎಂದು ಲೋಕ-ಶಿಕ್ಷಾರ್ಥವಾಗಿ ವೇದವ್ಯಾಸನ ಕೈಯ ಅಭ್ಯಾಸ ಮಾಡಿದ್ದಾನೆ. ಈ ಪ್ರಕಾರ ಐದು ಮಂದಿ ಪಾಂಡವರು, ವೇದವ್ಯಾಸನ ಶಿಕ್ಷಿಯಿಂದ ವಿದ್ಯಾಭ್ಯಾಸ ಮಾಡಿ, ಸಂತೋಷ ಉಳ್ಳವರಾದರು.

ಅದೇ ಕಾಲದಲ್ಲಿ ಭರದ್ವಾಜನ ಮಗನಾದಂಥ ದ್ರೋಣಾಚಾರ್ಯನು, ತನ್ನ ನಿಜಧರ್ಮ ರಕ್ಷಿಸತ, ಶಿಲೋಂಛನ ವೃತ್ತಿ ಮಾಡಿಕೊಂಡು ಇಹೋ ಕಾಲದಲ್ಲಿ, ಅಶ್ವತ್ಥಾಮ, ದುರ್ಯೋಧನ ಮೊದಲಾದಂಥ ಕೌರವರ ಕೂಡ ಕ್ರೀಡಿ ಮಾಡಿ, ಮನಿಗೆ ಬಾಹೋನು. ತಾಯಿ, ಹಿಟ್ಟಿನ ಹಾಲು ಮಾಡಿ ಅಶ್ವತ್ಥಾಮಗೆ ಕೊಡೋಳು. ಈ ಪ್ರಕಾರ ನಿತ್ಯ ಕುಡದು, ದುರ್ಯೋಧನಾದಿಗಳ ಮುಂದೆ ಹಾಲು ಕುಡದೆನೆಂದು ಹೇಳುವ. ಇದೇ ರೀತಿ ಇರಲಾಗಿ, ಒಂದಾನೊಂದು ದಿವಸ, ದುರ್ಯೋಧನಾದಿಗಳು ಅಶ್ವತ್ಥಾಮನ ತಮ್ಮ ಮನಿಗೆ ಕರದುಕೊಂಡುಹೋಗಿ, ಹಾಲು ಕುಡಿಯಲಿಕ್ಕೆ ಕೊಟ್ಟರು. ಕ್ಷೀರಸ್ವಾದ ತಿಳದು, ಮರುದಿವಸ ತಮ್ಮ ಮನಿಯೊಳಗೆ ಹಿಟ್ಟಿನ ಹಾಲು ಮಾಡಿಕೊಡಲಿಕ್ಕೆ, ದುರ್ಯೋಧನಾದಿಗಳು ಕೊಟ್ಟಂಥ ಹಾಲು ಕೊಡೆಂದು ಒಹು ರೋದನ ಮಾಡಹೊಕ್ಕನು. ದ್ರೋಣಾಚಾರ್ಯ ತನ್ನ ಮಗನ್ನ ನೋಡಿ

ಸ್ನೇಹದಿಂದ, ಆಕಳ ಸಂಪಾದಿಸಲಿಕ್ಕೆ ಹೋದ. ದ್ರೋಣಾಚಾರ್ಯ ಒಬ್ಬರ ಕೈಯ ಪ್ರತಿಗ್ರಹ ಕೊಂಬೋವನಲ್ಲ. ಆದಕಾರಣ ಪರಶುರಾಮದೇವರ ಸಮೀಪಕ್ಕೆ ಹೋಗಿದ್ದಾನೆ. ಭಾರ್ಗವರಾಮ ಸರ್ವರಿಗೂ ಪಿತಾಮಹ, ಮುಖ್ಯಗುರು. ಗುರುವಿನ ಕೈಯ ಪ್ರತಿಗ್ರಹ ಕೊಂಡದ್ದು ಪ್ರತಿಗ್ರಹವಲ್ಲ ಎಂದು, ಪರಶುರಾಮನ ಸಮೀಪಕ್ಕೆ ಹೋದ.. ಪರಶುರಾಮ, ಮನಸ್ಸಿನಲ್ಲಿ ಆಲೋಚನಿ ಮಾಡಿದ. ಸಕಲ ದೈತ್ಯರು ಭೂಮಿಗೆ ಭಾರರಾಗಿದ್ದಾರೆ. ಇವರನ್ನೆಲ್ಲ ನಾಶ ಮಾಡಬೇಕಾಗಿ, ದ್ರೋಣನ ನಿಮಿತ್ತ ಮಾಡಿ ಭೂಭಾರ ಇಳಿಹಬೇಕಾಗಿ, ವಿದ್ಯಾಭ್ಯಾಸ ಮಾಡಿಸಬೇಕೆಂದು ಯೋಚನಿ ಮಾಡಿದ. ದೇವತಿಗಳನ್ನು ಏನುಕಾರಣ ವಿನಾಶ ಮಾಡಬೇಕೆಂದು ಯೋಚನಿ ಮಾಡಿದ ಎಂದರೆ, 'ಕಲಿಯುಗದಲ್ಲಿ ದೇವತಿಗಳ ಸಂತತಿ ಇರಬಾರದು' ಎಂದು ಈ ಪ್ರಕಾರ ಚಿಂತನಿ ಮಾಡಿ, ಭಾರ್ಗವರಾಮ ದ್ರೋಣನ ಕೂಡ, ಮುಗುಳುನಗಿಯಿಂದ ಯುಕ್ತನಾಗಿ ಮಾತನಾಡಿದ. 'ಎಲ್ಲೆ ದ್ರೋಣಾಚಾರ್ಯ ಏನುಕಾರಣ ಬಂದಿ?' ಎಂದು ಕೇಳಲಾಗಿ, 'ನನ್ನ ಮಗ ಹಾಲು ನಿಮಿತ್ತ ಬಹು ರೋದನ ಮಾಡಥಾನೆ. ನಿನ್ನ ಸಮೀಪಕ್ಕೆ ಒಂದಾಕಳ ದೆಸಿಯಿಂದ ಬಂದಿದ್ದೀನಿ.' ಹೀಂಗಂತ ಎನಲಿಕ್ಕೆ, ಸಕಲವೂ ಕೊಡಲಿಕ್ಕೆ ಇಹೋದು, ಹ್ಯಾಗೆಂದರೆ, ದೂರ್ವಾಸನಿಗೆ ತನ್ನ ಅಂಗೈಯೊಳಗೆ ಅನ್ನ ಕೊಟ್ಟು ತೃಪ್ತಿ ಬಡಿಸಿದ್ದಾನೆ. ಅಂಥಾ ಸ್ವಾಮಿಗೆ ಆಕಳ ಕೊಡಲಿಕ್ಕೆ ಇಲ್ಲದೇ ಹೋಯಿತೇ ಎಂದರೆ, ಸಾಮರ್ಥ್ಯ ಉಂಟು, ಆದರೆ ಮುಂದೆ ಕುರು. ಪಾಂಡವರು ಯುದ್ಧ ಮಾಡಬೇಕಾಗೇದೆ. ಆದಕಾರಣ 'ಸರ್ವವನ್ನೂ ಬಿಟ್ಟು ತಳಕೊಂಕಣಕ್ಕೆ ಬಂದಿದ್ದೀನಿ. ನನ್ನಲ್ಲಿ ಮೂರು ವಸ್ತು ಅವೆ. ದಾವವೆಂದರೆ, ಶರೀರ; ವಿದ್ಯ, ಆಯುಧ. ಈ ಮೂರರೊಳಗೆ ದಾವ ಪದಾರ್ಥ ಬೇಕು ಬೇಡು' ಎನಲಿಕ್ಕೆ, 'ಹೇ ಸ್ವಾಮಿ ಬ್ರಹ್ಮರುದ್ರಾದಿ ದೇವತಿಗಳಿಗೆ ಒಡಿಯನಾದಂಥ ನಿನ್ನ ಸಮಾನ ದಾರೂ ಇಲ್ಲ. ನಿನ್ನ ಸಮಾನರಾದೇವೆಂದವರನ್ನು ಅಂಧಂತಮಸ್ಸಿಗೆ ಕೆಡಹಾಕಿ, ಉದ್ಧಾರವಿಲ್ಲದೆ ಹೋಗಥಾರೆ. ನಿನ್ನ ಶಸ್ತ್ರವದೆ ಎಂತ ಹೇಳಿದಿ. ಅನಂತ ಪರಾಕ್ರಮ ಉಳ್ಳಂಥ ನಿನ್ನ ಶಸ್ತ್ರ ದಾರು ಧರಿಸಲಾಪರು! ನೀನು ಅನಂತವೇದ-ಪ್ರತಿಪಾದ್ಯ, ನಿನ್ನ ವಿದ್ಯ ನನಗೆ ಶಿಕ್ಷಿಸು' ಎಂದು ಈ ಪ್ರಕಾರ ದ್ರೋಣನಿಂದ ವಿಜ್ಞಾಪನ ಮಾಡಿಸಿಕೊಂಡು, ಆನಂತವೇದಪ್ರತಿಪಾದ್ಯನಾದಂಥ ಪರಶುರಾಮ, ತತ್ತ್ವ ಮೊದಲಾದ ಸಂಪೂರ್ಣ ಶಸ್ತ್ರವಿದ್ಯ ಅಭ್ಯಾಸ ಮಾಡಿಸಿದ.

ದ್ರೋಣಾಚಾರ್ಯ ಹನ್ನೆರಡು ವರ್ಷ ಪರಿಯಂತ ವಿದ್ಯಾಭ್ಯಾಸ ಮಾಡಿದ ನಂತರ ದ್ರೋಣ ತನ್ನ ಗೆಳೆನಾದಂಥ ದ್ರುಪದರಾಯನ ಸಮೀಪಕ್ಕೆ ಹೋದ. ಏನುಕಾರಣವೆಂದರೆ, ಚಿಕ್ಕತನದಲ್ಲಿ ಗೆಳೆತನ ಕಟ್ಟಿದಾಗ, ಅರ್ಧ ರಾಜ್ಯ ಕೊಡಿಸೆನೆಂದು ಆಡಿದ್ದ. ಅದು ಸ್ಮರಣೆಗೆ ಬಂದು, ದ್ರುಪದರಾಯನ ಸಮೀಪಕ್ಕೆ ಹೋದ. 'ಎಲ್ಲೆ ರಾಯ ನಾನು ನಿನ್ನ ಗೆಳ್ಯಾನಿದ್ದೀನಿ' ಎನಲಿಕ್ಕೆ, ದ್ರುಪದರಾಯ ಭಾಗ್ಯದ

① ಶಿಷ್ಯರಿಂದ ಪ್ರತಿ ಸ್ವೀಕರಿಸಿದ ಪ್ರತಿಗ್ರಹವಾಸ್ತವದಲ್ಲಿ ಎನ್ನುವ ಭಾವನೆ.

ಮುದದಿಂದ ದ್ರೋಣಾಚಾರ್ಯನ ಕುರಿತು ಮಾತನಾಡಿದ. 'ಎಲೋ ಬ್ರಾಹ್ಮಣನೇ! ನಿರ್ಧನರಿಗೆ, ಅರಸರುಗಳಿಗೆ ಗೆಳಿತನ ಕೂಡೋದುಂಟೆ! ಏನು ಮಾತನಾಡಥಿ!' ಎಂದು ಉಪಹಾಸ ಮಾಡಿದ. ಈ ಪ್ರಕಾರ ದ್ರುಪದನಿಂದ ನಿರಾಕೃತನಾಗಿ— ದ್ರೋಣಾಚಾರ್ಯ ಕೋಪಕ್ಕೆ ಬರಬಾರದು, ಆದರೂ ಸ್ವಾಮಿ ಸಂಕಲ್ಪದಿಂದ— ದ್ರೋಣಾಚಾರ್ಯ ರಾಯನ ಕೂಡ ಮಾತನಾಡಿದ. 'ಎಲ್ಕೆ ದ್ರುಪದರಾಯ, ನಾನು ದಾರ ಕೈಯಿಂದೂ ಕೊಂಬೋದಿಲ್ಲ. ನೀನು, ನಮ್ಮ ತಂದಿ ಭರದ್ವಾಜನ ಶಿಷ್ಯನಾಗಬೇಕು, ನನಗೂ ಶಿಷ್ಯ ಆದಕಾರಣ ಬಂದಿರಲಿಕ್ಕೆ, ನನ್ನ ಅಪಮಾನ ಮಾಡಿ, ದುಷ್ಟವಚನಗಳಿಂದ ನನ್ನ ಚಿತ್ತಕ್ಷೋಭ ಮಾಡಿದಿ. ಐಶ್ವರ್ಯಭ್ರಷ್ಟನ್ನ ಮಾಡೇನು!' ಎಂದು, ಕುರುಪಾಂಡವರ ಸಮೀಪಕ್ಕೆ ಬಂದನು. ಇಲ್ಲಿಗೆ ಏನು-ಕಾರಣ ಬಂದ ಎಂದರೆ, ಕುರುಪಾಂಡವರನೆಲ್ಲ ಶಿಷ್ಯರನ್ನ ಮಾಡಿಕೊಂಡೇನೆಂದು ಬಂದ. ಇವರಿಂದ ಕೊಟ್ಟಂಥಾದ್ದು ತನಗೆ ಪ್ರತಿಗ್ರಹವಲ್ಲ ಎಂದು ಪಾಂಡವರ ① ಸಮೀಪಕ್ಕೆ ಬಂದನು.

ಊರಹೊರಗೆ ಕ್ರೀಡಾ ಮಾಡಲಿಕ್ಕೆ ಬಂದಂಥ ಕುರ ಪಾಂಡವರು ಕೂಡಿ ಕ್ರೀಡಿಯಾಡಲಿಕ್ಕೆ, ಧರ್ಮರಾಯನ ಉಂಗುರ ಭಾವಿಯೊಳಗೆ ಬಿತ್ತು. ದಾರೂ ತೆಗೇಲಾರರು. ಭೀಮಸೇನದೇವರು, ತಾನು ಇಳಿದು ತೆಗೆದೇನೆಂದು ಪ್ರತಿಜ್ಞೆ ಮಾಡಿದ. ಈ ಪ್ರಕಾರ ಸರ್ವರ ಮಾತೂ ಕೇಳಿ ದ್ರೋಣ ಮಾತನಾಡಿದನು. 'ಸುಡಲಿಲ್ಲವೆ ನಿಮ್ಮ ಜನ್ಮ!' ಎಂದು ಧಿಕ್ಕಾರ ಮಾಡಲಿಕ್ಕೆ, ಈ ಬ್ರಾಹ್ಮಣ ಶಸ್ತ್ರಾಸ್ತ್ರವಿದ್ಯ ಬಲ್ಲಾತನೆಂದು ತಿಳಿದು, ಮುದ್ರಿಯುಂಗುರ ತೆಗೆದುಕೊಡೆಂದು ಬೇಡಿಕೊಂಡರು. ಈ ಪ್ರಕಾರ ರಾಜಕುಮಾರರ ಕೈಯ ಪ್ರಾರ್ಥನ ಮಾಡಿಸಿ-ಕೊಂಡು, ದ್ರೋಣಾಚಾರ್ಯ ಏನು ಮಾಡಿದನೆಂದರೆ, ಉಬ್ಬಿಗೆ ಉಬ್ಬು (ಹುಲ್ಲಿಗೆ ಹುಲ್ಲು) ಗಂಟುಹಾಕಿ ಚಂಡು ತೆಗೆದುಕೊಟ್ಟನು. ಪುನಃ ಮುದ್ರಿಯುಂಗುರ ತೆಗೆದುಕೊಟ್ಟನು. ಉಂಗುರ ತೆಗೆದುಕೊಡುವಾಗ ರಾಜಕುಮಾರರ ಕೈಯ ಪ್ರಾರ್ಥನ ಮಾಡಿಸಿಕೊಂಡ. 'ನನಗೆ ಉದರಪೂರ್ತಿ ನಡೋಹಾಂಗೆ ಮಾಡಿಕೊಟ್ಟರೆ ಮುದ್ರಿಯುಂಗುರ ತೆಗೆದುಕೊಟ್ಟೇನು' ಎನಲಿಕ್ಕೆ, ಧರ್ಮರಾಯ 'ಯಥೇಷ್ಟ ದ್ರವ್ಯ ಕೊಡಥೀನಿ ತೆಗೆದುಕೊಡು' ಎನಲಿಕ್ಕೆ, ತೆಗೆದುಕೊಟ್ಟನು. ಮುದ್ರಿ ತೆಗೆಯಲಿಕ್ಕೆ 'ಎಲ್ಕೆ ಬ್ರಾಹ್ಮಣೋತ್ತಮ! ನೀನು ದಾರು? ನಿನ್ನ ಸ್ವರೂಪವೇನು?' ಎಂದು ಕೇಳಲಿಕ್ಕೆ 'ನಿಮ್ಮ ಪಿತಾಮಹ ಭೀಷ್ಮನ ಕೇಳು ಹೇಳ್ತಾನ್ನು' ಎಂದು ಮಾತನಾಡಿದನು. ಈ ಪ್ರಕಾರ ದ್ರೋಣನ ಕೈಯ ನುಡಿಸಿಕೊಂಡು, ಕುರುಪಾಂಡವರು ಭೀಷ್ಮನ ಸಮೀಪಕ್ಕೆ ಹೋಗಿ ಮಾತನಾಡಥಾರೆ. 'ಎಲ್ಕೆ ಭೀಷ್ಮ, ಒಬ್ಬ ಬ್ರಾಹ್ಮಣ ಬಂದಿದ್ದ, ಅಸ್ತ್ರವಿದ್ಯಾದಲ್ಲಿ ಮಹಾ ಸಮರ್ಥ' ಎಂದು ಹೇಳಲಾಗಿ, ಬಹುಶಃ ದ್ರೋಣನಾದಾನು ಎಂದು ಭೀಷ್ಮನು ಹೇಳಿದನು.

ಒಂದೇ ಊರೊಳಗಿದ್ದು ಕುರುಪಾಂಡವರು ದ್ರೋಣನ ಗ:ರ್ತಾ ಅರೇರೆ ಎಂದರೆ, ದ್ರೋಣ ರಾಜಗೃಹಕ್ಕೆ ಎಂದಿಗೂ ಹೋದಾತನಲ್ಲ. ಏನುಕಾರಣ ಎಂದರೆ, ವಿತ್ತಾಪೇಕ್ಷ ಉಳ್ಳಾತನಲ್ಲ. ಭೀಷ್ಮ ಹ್ಯಾಂಗೆ ಬಲ್ಲನೆಂದರೆ, ಪೂರ್ವದಲ್ಲಿ ಭರದ್ವಾಜನ ಸಮೀಪದಲ್ಲಿ ಭೀಷ್ಮ, ದ್ರೋಣ ಇಬ್ಬರೂ ಅಭ್ಯಾಸ ಮಾಡಿದ್ದಾರೆ. ಆದರಮೇಲಿಂದ ಭೀಷ್ಮ, ದ್ರೋಣನು ಆಕಳ ದೆಸಿಯಿಂದ ಹೋಗಿದ್ದಾನೆಂದು ಕೇಳಿದ್ದ. ಆದಕಾರಣ ದ್ರೋಣನೆಂದು ಹೇಳಿದನು. ಚಿಕ್ಕವರನ್ನ ಬ್ರಾಹ್ಮಣ ಹ್ಯಾಂಗಿಹಾನೆಂದು ವಿಚಾರ ಮಾಡಿದ. ವೃದ್ಧ ಬ್ರಾಹ್ಮಣ, ಕಪ್ಪು ಇದ್ದಾನೆಂದು ಹೇಳಲಿಕ್ಕೆ, ದ್ರೋಣನೆಂದು ತಿಳದು, ಭೀಷ್ಮ ಚಿಕ್ಕವರನ್ನ ಕೂಡಿಕೊಂಡು ದ್ರೋಣನ ಸಮೀಪಕ್ಕೆ ಬಂದು, 'ಇವರಿಗೆ ವಿದ್ಯಾಭ್ಯಾಸ ಮಾಡಿಸು' ಎಂದನು. ದ್ರೋಣ ರಾಜಕುಮಾರರನ್ನು ಕುರಿತು ಮಾತನಾಡಥಾನೆ. 'ಎಲ್ಲೆ ರಾಜಕುಮಾರರುಗಳಿರಾ, ನನ್ನ ಪ್ರತಿಜ್ಞೆ ದಾರು ಸತ್ಯಮಾಡೀರಿ ತಿವರನ್ನ ಧನುರ್ಧಾರಿಗಳೊಳಗೆ ಶ್ರೇಷ್ಠರನ್ನ ಮಾಡೇನು.' ಹೀಂಗೆನಲಿಕ್ಕೆ, ಭೀಮಸೇನನ ತಿಜ್ಞೆಯಿಂದ ತಿರ್ಜುನ ಸತ್ಯಮಾಡೇನೆಂದನು. ತಿರ್ಜುನ ಕೃಷ್ಣನಿಂದ ಶಿಕ್ಷಿತನಾಗಿ ವಿದ್ಯ ಕಲಿತಿದ್ದ. ಮತ್ತೆ ಏನುಕಾರಣ ಪ್ರತಿಜ್ಞೆ ಮಾಡಿ ಕಲಿತನೆಂದರೆ, ಕೃಷ್ಣ ಕಲಿಸಿದಂಥ ವಿದ್ಯ ಬಹು ತಪತ್ಕಾಲಕ್ಕೆ ಉಪಯೋಗ ಮಾಡೆಂದು ಹೇಳಿದ್ದ. ಸರ್ವದಾ ಬಿಡಲಿಕ್ಕೆ (ಪ್ರಯೋಗಕ್ಕೆ) ವಿದ್ಯ ಬೇಕಲ್ಲ, ಆದಕಾರಣ ದ್ರೋಣನ ಕೂಡ ಪ್ರತಿಜ್ಞೆ ಮಾಡಿಹ. ಭೀಮಸೇನ ಏನುಕಾರಣ ಪ್ರತಿಜ್ಞೆ ಮಾಡಲಿಲ್ಲ ಎಂದರೆ, ಭೀಮಸೇನ ಧನುರ್ವಿದ್ಯೆಯಲ್ಲಿ ಮನಸ್ಸು ಇಲ್ಲದಾತ, ಸ್ವ-ಬಾಹುಬಲವುಳ್ಳಾತ, ಅದಲ್ಲದೇ ಪರಮಾತ್ಮನ ವ್ಯತಿರಿಕ್ತವಾಗಿ ಎರಡನೇದವರನ್ನು ತಿನುಸರಿಸೋನಲ್ಲ. ಆದಕಾರಣ ತಿರ್ಜುನನ ಕೈಯಿಂದ ಪ್ರತಿಜ್ಞೆ ಮಾಡಿಸಿದ. ದ್ರೋಣ ಸರ್ವರಗಿಂತ ತಿರ್ಜುನನ ಮ್ಯಾಲೆ ಬಹು ಸ್ನೇಹದಿಂದ ವಿದ್ಯಾಭ್ಯಾಸ ಮಾಡಿಸುವ. ತದರೊಳಗೆ ಗುಪ್ತದಲ್ಲಿ ತರ್ಜುನನೆ ವಿಶೇಷಾಕಾರ ವಿದ್ಯಾಭ್ಯಾಸ ಮಾಡಿಸುವ. ಇದು ಭೀಮಸೇನಗೆ ತಿಳಿದಿಹೋದು. ದ್ರೋಣನ ಸ್ನೇಹ ತಿರ್ಜುನನಲ್ಲಿದ್ದರೂ, ಭೀಮಸೇನ ವಿದ್ಯಾಭ್ಯಾಸ ತಿಪೇಕ್ಷಿಸತಿದ್ದಿಲ್ಲ, ತದಕಾರಣ ಗುರುಶುಶ್ರೂಷ ಮಾಡಲಿಕ್ಕೆ ತಿರ್ಜುನಗೆ ಶಿಕ್ಷಿಸುವ. ತಾ ಏನುಕಾರಣ ಕಲಿಯಲಿಲ್ಲ ಎಂದರೆ, ಸ್ವ-ಬಾಹುಬಲವುಳ್ಳಾತ. ತಮ್ಮ ಲಕ್ಷ್ಮೀಪತಿಯ ಅನುಗ್ರಹದಿಂದ ಶತ್ರುಗಳ ಪರಾಜಿತ ಮಾಡೇನು ಎಂದು ಧೈರ್ಯವುಳ್ಳಾತ. ತದಕಾರಣ ವಿದ್ಯ ಕಲಿಯಲಿಲ್ಲ. ಭೀಮಸೇನ ಹೊರ್ತು ಊರೊಳಗೆ ಎಷ್ಟು ಮುಂದಿ ಇದ್ದಾರೆ, ತವರಷ್ಟೂ ಮುಂದಿ ದ್ರೋಣನ್ನಿಂದ ವಿದ್ಯಾಭ್ಯಾಸ ಮಾಡಿನರು. ಪೂರ್ವದಲ್ಲಿ ನಹುಷ, ದುಷ್ಯಂತ, ಭರತ ಇವರನ್ನ ನೋಡಲಿಕ್ಕೆ ಹೆಚ್ಚಿನವರು.

ತದೇ ಕಾಲದಲ್ಲಿ ಕರ್ಣ, ಏಕಲವ್ಯ ದ್ರೋಣನ ಸಮೀಪಕ್ಕೆ ಬಂದರು. ತನುಗೂ ವಿದ್ಯಾಭ್ಯಾಸ ಮಾಡಿಸೆಂದು ಕೇಳಲಾಗಿ, ದ್ರೋಣ ಮಾತನಾಡಿದನು.

'ಎಲೋ ಕರ್ಣ. ನೀನು ಸೂತಪುತ್ರನಿದ್ದಿ. ಏಕಲವ್ಯ ಕಿರಾತನಿದ್ದಾನೆ. ಇಬ್ಬರೂ ಅಸ್ತ್ರವಿದ್ಯೆ ಕಲೀಲಿಕ್ಕೆ ಅರ್ಹರಲ್ಲ' ಎಂದು ನಿರಾಕರಣ ಮಾಡಲಿಕ್ಕೆ, ಕರ್ಣ ಮನಸ್ಸಿನಲ್ಲಿ ಮಾಡಿಕೊಂಡ ನಿನಗೆ ದಾವಾತ ವಿದ್ಯೆ ಕಲಿಸ್ಯಾನೆ, ಆತನ ಕೈಯ ಕಲಿತೇನು ಎಂದು, ಪರಶುರಾಮನ ಸಮೀಪಕ್ಕೆ ಹೋಗಿ, 'ನಾನು ಬ್ರಾಹ್ಮಣ ನಿದ್ದೀನಿ, ಅಸ್ತ್ರವಿದ್ಯೆ ಹೇಳು' ಎನಲಿಕ್ಕೆ, ಭಾರ್ಗವರಾಮ ಸರ್ವಜ್ಞ, ಸಕಲವೂ ಬಲ್ಲ. ಪಾಂಡವರೊಳಗೆ ಇಂದ್ರಸೂನು ಅದಂಥ ಅರ್ಜುನ ಮಹಾ ವೀರನಿದ್ದಾನೆ. ಕೌರವರ ಕಡಿಗೆ ದಾರೂ ಇಲ್ಲ. ಕರ್ಣನ್ನ ಆಶ್ರಯಿಸಿ ದುರ್ಯೋಧನಾದಿಗಳು ಯುದ್ಧಮಾಡಿ ಮೃತಿ ಐದಬೇಕೆಂದು, ಪರಶುರಾಮ ಕರ್ಣಗೆ ವಿದ್ಯಾಭ್ಯಾಸ ಮಾಡಿಸಿದ್ದಾನೆ. ಸರ್ವವೂ ಕಲಿತು, ವಿಷ್ಣುಸರ್ವೋತ್ತಮತ್ವಜ್ಞಾನ ಕಲಿತು, ವಿಜಯಧನುಸ್ಸು ಸಂಪಾದಿಸಿ, ವಿಜಯರಥ ಸಂಪಾದಿಸಿದ. ಈರೀತಿ ನಾಲ್ಕು ವರುಷ ಪರಶುರಾಮನ ಕೈಯ ವಿದ್ಯ ಕಲಿತು, ಭಾರ್ಗವರಾಮನ ಸಹವಾಸ ಬಿಟ್ಟು ಹೋಗ ಲಾರ. ಆ ಕಾಲದಲ್ಲಿ ಸರ್ವಜ್ಞಶಿಖಾಮಣಿಯಾದಂಥ ಪರಶುರಾಮ, ತನಗೆ ನಿದ್ರಿ ಇಲ್ಲದಿದ್ದರೂ ಸರಿ ಕರ್ಣನ ತಕ್ಕೈಸಬೇಕಾಗಿ, ಕರ್ಣನ ತೊಡೀಮ್ಯಾಲೆ ತಲಿಗೊಟ್ಟು ನಿದ್ರಿಮಾಡಿದವನೋಪಾದಿ ತೋರಿಸಿದ. ಏನು ಕಾರಣವೆಂದರೆ, ರಾಮಾವತಾರದಲ್ಲಿ ಸುಗ್ರೀವನ ಕೈಯ ವಾಲಿಯನ್ನು ಕೊಲ್ಲಿಸಿದ್ದಾನೆ. ಕೃಷ್ಣಾವತಾರದಲ್ಲಿ ಇಂದ್ರಾವ-ತಾರನಾದಂಥ ಅರ್ಜುನನ ಕೈಯ, ಕರ್ಣನ ಕೊಲ್ಲಿಸಬೇಕಾಗೇದೆ. ಆದಕಾರಣ ಗಾಢನಿದ್ರಿ ಮಾಡಿದವನೋಪಾದಿ ತೋರಿಸಿದ. ಆ ಕಾಲದಲ್ಲಿ ಹೇತಿನಾಮಕ ರಾಕ್ಷಸ ಇಂದ್ರನ ಶಾಪದಿಂದ ವಜ್ರಸದೃಶ ಹುಳ್ವಾದ. ಅವನ ಉದರದೊಳಗೆ ಇಂದ್ರ ಪ್ರವಿಷ್ಟನಾದ. ಏನುಕಾರಣವೆಂದರೆ ಕರ್ಣಗೆ ಶಾಪವಾಗಬೇಕಾಗೇದೆ. ಆದ್ದರಿಂದ ಅರ್ಜುನನ ಮ್ಯಾಲೆ ಸ್ನೇಹದ ದೆಸಿಯಿಂದ ಪ್ರವಿಷ್ಟನಾಗಿ, ಕರ್ಣನ ತೊಡಿ ಚುಂಚು-ಪುಟದಿಂದ ಛೇದಿಸಿ ತೂತುಮಾಡಿದನು. ಕರ್ಣ ಚಲನ ಮಾಡಲಿಲ್ಲ. ಏನುಕಾರಣ ಎಂದಲ್ಲಿ ಗುರುವು ಮಲಗಿದ್ದಾನೆ, ನಿದ್ರಾಭಂಗವಾದೀತೆಂದು ಅಷ್ಟೂ ಶ್ರಮ ಸಹಿಸಿದ.

ಪರಶುರಾಮ ಎಚ್ಚೆತ್ತವನೋಪಾದಿ ಎದ್ದು ನೋಡಥಾನೆ, ರಕ್ತಪ್ರವಾಹ ಹರೀತದೆ. 'ಇದೇನು ಅನರ್ಥವಾಯಿತು! ನನ್ನ ಎಚ್ಚರಿಸಲಿಲ್ಲ ಏನುಕಾರಣ? ನೀನು ಬ್ರಾಹ್ಮಣನಲ್ಲ, ನಿನ್ನ ಸ್ವರೂಪವೇನು?' ಎಂದು ಕೇಳಲಾಗಿ, 'ಸ್ವಾಮಿ ನೀನು ನಿದ್ರಿಗೈತ್ತಿದ್ದಿ. ನಿದ್ರಾಭಂಗವಾಗಬಾರದೆಂದು ನಿನ್ನ ಎಚ್ಚರಿಸಲಿಲ್ಲ. ಆ ಹುಳುವಿನ ಉಪದ್ರವ ಸಹಿಸಿದೆ' ಎಂದು ಹೇಳಲಿಕ್ಕೆ, 'ಇಂಥಾ ಕಠಿಣತ್ವ ಬ್ರಾಹ್ಮಣಗೆ ಕೂಡದು. ನಿನ್ನ ಸ್ವರೂಪವೇನು?' ಎಂದು ಕೇಳಲಾಗಿ, 'ಎಲೈ ಸ್ವಾಮಿಯೆ ನಂದು ಸೂತಕುಲ. ನಿನ್ನ ಸಂಗಡ ಛದ್ಮ ಹ್ಯಾಂಗೆ ಮಾಡಿದಿ ಎಂದೀ, ಸ್ವಾಮಿ ನೀನು ಸರ್ವರಿಗೆ ತಾಯಿ ತಂದಿ, ನನಗೂ ತಂದಿ ಎಂದು, ನಿನ್ನ ಕೂಡ ಛದ್ಮ ಮಾಡಿದೆ.'

ಈ ಪ್ರಕಾರ ಕರ್ಣ ಹೇಳಿದ ವಾಕ್ಯ ಕೇಳತಲೆ, ಇಂದ್ರ ತನ್ನ ಕೀಟಸ್ವರೂಪ ಬಿಟ್ಟು ಸ್ವರ್ಗಕ್ಕೆ ಹೋದ. ಅದರಮ್ಯಾಲೆ ಭಾರ್ಗವರಾಮ ಕರ್ಣಗೆ ಅಂದ 'ನೀನು ನನ್ನ ಸವಾಗವುಕ್ಕೆ ಯೋಗ್ಯನಲ್ಲ. ನನ್ನ ಸಮೀಪದಲ್ಲಿ ಇರಬ್ಯಾಡ. ಹೋಗು' ಎಂದು ಆಡಿದನು. 'ತಿರುಗಿಹೋದರೂ ಸರಿಯೆ, ಇವತ್ತಿನ ಪರ್ಯಂತ ನನ್ನಲ್ಲಿ ಭಕ್ತಿ ಮಾಡಿದ್ದು ವ್ಯರ್ಥವಾಗದು. ಸರ್ವರಿಂದಲೂ ಜಯಶೀಲನಾದೀ. ಸ್ಪರ್ಧಿಯಿಂದ ಹೋದರೆ, ಅಸ್ತ್ರಗಳು ನೆನಪೀಲಿ ಬಾರದೇಹೋದಾವು. ಸ್ಪರ್ಧಿ ಇಲ್ಲದೆ ಹೋದರೆ, ದಾವಾತನೂ ನಿನ್ನ ಗೆಲ್ಲಲಾರ.' ಈ ಪ್ರಕಾರ ಕರ್ಣಗೆ ಹೇಳಿ ಅಪ್ಪಣೆ ಕೊಟ್ಟನು. ಕರ್ಣ ಹೊರಟುಹೋದನು.

ಕರ್ಣ ಹೋವ ತರುವಾಯ, ಏಕಲವ್ಯ ದ್ರೋಣನಿಂದ ನಿರಾಕೃತನಾಗಿ ವನದೊಳಗೆ ಹೋಗಿ, ಮಣ್ಣಿನಿಂದ ದ್ರೋಣಾಚಾರ್ಯನ ಪ್ರತಿಮಿ ಮಾಡಿ, ಅನೇಕವಿಧ ಭಕ್ತಿಯಿಂದ ಅನೇಕ ವಿದ್ಯಗಳು ಕಲಿತನು. ಒಂದಾನೊಂದು ಕಾಲದಲ್ಲಿ ಧೃತರಾಷ್ಟ್ರರಾಯನ ಮಕ್ಕಳಾದಂಥ ದುರ್ಯೋಧನಾದಿಗಳು, ಪಾಂಡವರನ್ನ ಕೂಡಿಕೊಂಡು ಮೃಗಬ್ಯಾಟಿಗೆ ಹೋದರು. ಆ ಕಾಲದಲ್ಲಿ ಸಾರಮೇಯ ಶ್ವಾನನ ಮುಂದುವರಿದು ಕಳುಹಿಸಿಕೊಟ್ಟರು. ಶ್ವಾನನ ಶಬ್ದ ಕೇಳಿ ಏಕಲವ್ಯ, ಅದರ ಬಾಯಿಗೆ ಗಾಯ ವಾಗದ ಹಾಂಗೆ ಬಾಣಪ್ರಯೋಗ ಮಾಡಿದ್ದಾನೆ. ನಾಯಿ, ಬಾಯಿಯೊಳಗೆ ಬಾಣ ತುಂಬಿಕೊಂಡು ಧರ್ಮರಾಯನ ಸಮೀಪಕ್ಕೆ ಬಂತು. ಆ ಕಾಲದಲ್ಲಿ ಆ ಶ್ವಾನನ್ನ ದ್ರೋಣಾಚಾರ್ಯರಿಗೆ ತೋರಿಸಿದ. 'ಎಲೈ ದ್ರೋಣಾಚಾರ್ಯನೇ, ಸರ್ವ ಬಿಲ್ಲುಗಾರರೊಳಗೆ ಅರ್ಜುನ ಮಹಾ ಕುಶಲ ಏಂತ ಹೇಳಿದ್ದಿ. ಅರ್ಜುನನಕಿಂತ ಮಹಾ ಕುಶಲನಿದ್ದಾನೆ' ಎಂದು ಆತನ ಪರೀಕ್ಷ ಮಾಡತ ಹೋಗಥಾನೆ. ವನದಲ್ಲಿ ಮೃತ್ತಿಕಾಗೊಂಬಿ ದ್ರೋಣಾಚಾರ್ಯರ ಆಕಾರ ಮಾಡಿದ್ದಾನೆ. ಗುರೀ ಎಸೀಥಾನೆ. ತಪ್ಪಿದರೆ ಅಡ್ಡಬಿದ್ದು ನಮಸ್ಕಾರ ಮಾಡಥಾನೆ. ಆಗ ದ್ರೋಣಾಚಾರ್ಯ 'ನನ್ನಿಂದ ವಿದ್ಯ ಕಲಿತಿದ್ದೀಯಲ್ಲ, ಗುರುದಕ್ಷಿಣಿ ಏನು ಕೊಡತಿ ಕೊಡು' ಎನಲಿಕ್ಕೆ, 'ಸ್ವಾಮಿ, ನೀನು ಏನು ಬೇಡಿದ್ದು ಕೊಟ್ಟೀನು' ಎಂದು ಆಡಿದನು. 'ನಿನ್ನ ಬಲದ ಅಂಗುಷ್ಠ ಕೊಡು' ಎನಲಿಕ್ಕೆ, ಅದೇ ಕ್ಷಣದಲ್ಲಿ ಅಂಗುಷ್ಠ ಕೊಯಿದು ಮುಂದೆ ಇಟ್ಟನು. ಅಂದಾರಭ್ಯ ಅರ್ಜುನನಿಂದ ಕುಂದಾದನು. ಅರ್ಜುನನ್ನ ಬಿಲ್ಲುಗಾರರೊಳಗೆ ಪರಮ ಶ್ರೇಷ್ಠನ್ನ ಮಾಡೇನೆಂಬಂಥ ತನ್ನ ಮಾತನ್ನು ಉಳಿಸಿಕೊಂಡನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಪಾಂಡವಾದೀನಾಂ ಅಸ್ತ್ರವಿದ್ಯಾಭ್ಯಾಸಃ' ಎಂಬ ಹದಿನೈದನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೬

ಶ್ರೀಕೃಷ್ಣಚರಿತೇ ಜರಾಸಂಧಾದಿ ಭಂಗಃ

ಶೃಗಾಲ ವಾಸುದೇವ ಸಂಹಾರ: ಅಥವಾ ಶೃಗಾಲ ವಧಃ

ಈ ಹದಿನಾರನೇ ಅಧ್ಯಾಯದಲ್ಲಿ — ಶ್ರೀಕೃಷ್ಣಬಲರಾಮರು ಮಥುರಾ ಪಟ್ಟಣದಲ್ಲಿ ವಾಸಮಾಡಿ ಬಹುಕಾಲ ಅತೀತವಾಗಲಿಕ್ಕೆ, ಸಮಸ್ತ ಭೂಪಾಲಕರಿಂದ ಯುಕ್ತನಾಗಿ ಮಗಧದೇಶಾಧಿಪ ಜರಾಸಂಧ, ಯುದ್ಧ ಮಾಡೋ ಇಚ್ಛಿಯುಳ್ಳವನಾಗಿ ಯಾದವರ ಕುರಿತು ಬರಲಿಕ್ಕೆ, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದ ಶ್ರೀಕೃಷ್ಣದೇವರು, ತಾನು ಬಲಪೂರ್ಣನಾದರೂ ಸರಿಯೆ, ಸ್ಥಳಾಂತರಕ್ಕೆ ಹೋಗಬೇಕೆಂದು ಇಚ್ಛಿ ಮಾಡಿದನು. ಏನುಕಾರಣವೆಂದಲ್ಲಿ, ಬಲಿಷ್ಠ ರಾಯರ ಸಂಗಡ ಅಲ್ಪ ಸೇನವುಳ್ಳವರಿಗೆ ವಿರುದ್ಧ ಪ್ರಾಪ್ತವಾದರೆ ಸ್ಥಳಾಂತರಕ್ಕೆ ಹೋಗಬೇಕೆಂದು ನೀತಿ ತೋರಿಸಬೇಕಾಗಿ, ದಕ್ಷಿಣದಿಕ್ಕನ್ನು ಕುರಿತು, ಲಕ್ಷ್ಮೀಕಾಂತನಾದಂಥ ಸ್ವಾಮಿ ಬಲರಾಮನಿಂದ ಕೂಡಿ ಹೋಗುವಂಥಾತನಾದನು.

ಅನಂತಪರಾಕ್ರಮ ಉಳ್ಳಂಥ ಶ್ರೀಕೃಷ್ಣದೇವರು, ಪರಮ ಭಯಸ್ಥನೋಪಾದಿ ನೋಟಕ್ಕೆ ತೋರಿಸತ, ಹೋಗೋ ಮಾರ್ಗದಲ್ಲಿ ಜಮದಗ್ನಿಋಷೀಶ್ವರನ ಕುಮಾರನಾದಂಥ ಪರಶುರಾಮದೇವರನ್ನ ಕಂಡನು. ಆತನಿಂದ ಕ್ರೀಡಾ ಮಾಡೋದರಗೋಸ್ಕರ ಅತ್ಯಂತ ರಮ್ಯವಾದಂಥ, ಅನ್ಯಪುರುಷರುಗಳಿಂದ ಐದಲಿಕ್ಕೆ ದುರ್ಗಮವಾದಂಥ ಸ್ಥಾನವನ್ನು ಐದಿದನು. ಅದೇ ಕಾಲದಲ್ಲಿ ಕ್ಷೀರಸಾಗರಶಾಯಿ ಶ್ರೀನಾರಾಯಣನ ಪೂಜಿಗೋಸ್ಕರ ಬ್ರಹ್ಮದೇವರಿಂದ ಕೂಡಿ, ಸಮಸ್ತ ದೇವತಿಗಳು ತಮ್ಮ ಯೋಗ್ಯಸ್ಥಾನಕ್ಕೆ ಹೋಗಿರಲಾಗಿ, ಅಮುಕ್ತಸ್ಥಾನ ಕುರಿತು ಬಲಿಚಕ್ರವರ್ತಿ, ಉತ್ಪತ್ತಿನಾಶರಹಿತನಾದಂಥ ನಾರಾಯಣನ ದರ್ಶನಕ್ಕೆ ಬಂದು, ಸ್ವಾಮಿಗೆ ನಮಸ್ಕರಿಸಿ ಕೂಡ್ರಲಿಕ್ಕೆ, ಸ್ವಾಮಿ ಶ್ರೀನಾರಾಯಣ, ಬಲಿಚಕ್ರವರ್ತಿಯಲ್ಲಿ ಅಸುರಸ್ವಭಾವ ಲೋಕಕ್ಕೆ ತೋರಿಸಬೇಕಾಗಿ, ನಿರಂತರದಲ್ಲಿ ತಾನು ಸುಷುಪ್ತಿಹೀನನಾದರೂ, ಸುಷುಪ್ತಿಯುಳ್ಳವನು ಎಂಬ ಸ್ವಭಾವದಿಂದ, ಸಮರ್ಥನಾದಂಥ ಸ್ವಾಮಿ ದೇವತಿಗಳ ಮುಖವನ್ನು ನೋಡಿ ಮಲಗಿಕೊಂಡಂಥಾವನಾದನು. ಈ ಅಭಿಪ್ರಾಯವನ್ನು ತಿಳದು, ಸಮಸ್ತ ದೇವತಿಗಳು ಕಣ್ಣು ಮುಚ್ಚಿಕೊಂಡರು. ಅದೇ ವ್ಯಾಳ್ಯಾದಲ್ಲಿ ಬಲಿಚಕ್ರವರ್ತಿಯು ಶ್ರೀನಾರಾಯಣನ ಕಿರೀಟವನ್ನು ಕದ್ದುಕೊಂಡು ಹೋದನು. ಸಮಸ್ತ ದೇವತಿಗಳು ಬಲಿಯ ಕರ್ಮವನ್ನು ತಿಳದು ನಗಲಿಕ್ಕೆ, ಸ್ವಾಮಿ ಬ್ರಹ್ಮದೇವರಿಂದ ಕೂಡಿ ತಾನೂ ನಗಹೊಕ್ಕನು. ಇದನ್ನು ಗರುಡನು ಕಂಡು, ಪಾತಾಳಲೋಕಕ್ಕೆ ಬಲಿಯ ಬೆನ್ನಟ್ಟಿ ಹೋಗಿ, ಆತನ್ನ ಯುದ್ಧದಿಂದ ಗೆದ್ದು, ಸ್ವಾಮೀ

ಕಿರೀಟವನ್ನು ತಕ್ಕೊಂಡುಹೋಗತ, ಮಾರ್ಗದಿಂದ ಗೋವುಂತಪರ್ವತದ ಮ್ಯಾಲೆ ಹಾಯ್ದು ಬರಲಿಕ್ಕೆ, ಆ ಪರ್ವತದ ಮ್ಯಾಲೆ ಕ್ರೀಡಾದಿಗುಣವಿಶಿಷ್ಟನಾದಂಥ ಶ್ರೀಕೃಷ್ಣನ್ನ ಕಂಡು, ಆ ಕಿರೀಟವನ್ನು ಸ್ವಾಮೀ ಶಿರಸ್ಸಿನಲ್ಲಿಟ್ಟನು. ತಲಿಗೆ ಹವಣಿ ಆಯಿತು. ಆದೇ ಕಾಲದಲ್ಲಿ ಮೂಲನಾರಾಯಣನ ತಲೀಮ್ಯಾಲೆ ಕಿರೀಟ ಬಾಹೋಂಥಾದ್ದಾಯಿತು. ಗರುಡನು ಸ್ವಾಮಿ ಶ್ರೀಕೃಷ್ಣನ ತಲೀಮ್ಯಾಲೆ ಕಿರೀಟ ಇಟ್ಟ ಸ್ತೋತ್ರ ಮಾಡಿದನು. 'ದೇವಾದಿದೇವನಾದಂಥ ಸ್ವಾಮಿಯೇ, ನನ್ನ ಉದ್ಧರಿಸು' ಎಂದು ಪ್ರಾರ್ಥಿಸಿ ಪುನಃ ಕ್ಷೀರಸಮುದ್ರಶಾಯಿ ನಾರಾಯಣನ ದರ್ಶನಕ್ಕೆ ಬರಲಾಗಿ, ಶ್ರೀಕೃಷ್ಣದೇವರ ತಲೀಮ್ಯಾಲೆ ಇಟ್ಟ ಬಂದಿದ್ದ ಆ ಕಿರೀಟ ಮೂಲನಾರಾಯಣನ ಮಸ್ತಕದಲ್ಲಿ ಕಾಂಬೋ ಪ್ರಂಥಾತನಾದನು. ಇದರಮ್ಯಾಲೆ ಸ್ವಾಮೀ ರೂಪಕ್ಕೂ, ಅವತಾರರೂಪಕ್ಕೂ ಲೇಶಮಾತ್ರ ಭೇದ ತಿಳಿಯಬಾರದು. ಸ್ವಾಮಿ ಅಗಾಧ ಮಹಿಮಿಯುಳ್ಳಾತ.

ಇಂಥಾ ಸ್ವಾಮಿ ಶ್ರೀಕೃಷ್ಣದೇವರು ಗೋವುಂತಪರ್ವತದಲ್ಲಿರಲಿಕ್ಕೆ, ವೈಕುಂಠದಿಂದ ಆಯುಧಗಳು ಬಂದು ತಿರುಗಿಹೋಗಿದ್ದವು. ಮತ್ತೆ ದಿವ್ಯಾಯುಧಗಳು ಬಂದವು. ಆವೇ ಕಾಲದಲ್ಲಿ ರೋಹಿಣೀಕುಮಾರನಾದಂಥ ಬಲರಾಮನ ಹೆಂಡತಿ —ಪೂರ್ವದಲ್ಲಿ ವಾರುಣೀ ಎಂಬ ನಾಮ ಉಳ್ಳಾಕಿ—ಆ ಗೋವುಂತಪರ್ವತವನ್ನು ಕುರಿತು ದಿವ್ಯರೂಪವನ್ನು ಧರಿಸಿ, 'ಶ್ರೀ' ಎಂದು ನಾಮವುಳ್ಳಾಕಿಯಾಗಿ, ಲಕ್ಷ್ಮೀ ಆವೇಶದಿಂದ ಬಂದಳು. ಕಾಂತಿ ಎಂಬ ಸ್ತ್ರೀ ಬಲರಾಮನ ಕುರಿತು ಬಂದಳು ಚಂದ್ರನ ಹೆಂಡತಿ ಕಾಂತಿ ಎಂದು ತಿಳಿಯಬಾರದು. ಬಹುಕಾಲದಲ್ಲಿ ಬಲರಾಮನ ಹೆಂಡತಿ ಆಗಬೇಕು. ಅಂಥಾ ದ್ವಿರೂಪಸ್ತ್ರೀಯರಿಂದ ಕೂಡಿ, ಬಲರಾಮನು ಗೋವುಂತಪರ್ವತದಲ್ಲಿ ಬಹಳ ಸಂತೋಷದಿಂದ ಕ್ರೀಡಿಸುವಂಥಾತನಾದನು. ಅನೇಕ ಚಂದ್ರರ ಕಾಂತಿಯಪ್ಪಂದೆ ಒಪ್ಪುವಂಥಾತನಾದನು. ಮತ್ತು ಬಲರಾಮನ ಹೆಂಡತಿ ವಾರುಣೀ ಎಂಬಾಕೆ, ಕಾದಂಬರಿವೃಕ್ಷದಿಂದ ದಿವ್ಯರೂಪಳಾಗಿ, ಬಲರಾಮನ ಸಮೀಪಕ್ಕೆ ಬಾಹೋದು ಕಂಡು, ಆ ಕಾದಂಬರಿಯ ಮದ್ಯವನ್ನು ವಾರುಣಿಯಿಂದ ಕೂಡಿಕೊಂಡು ಪಾನ ಮಾಡುವಂಥಾತನಾದನು.

ಈ ಪ್ರಕಾರ ಬಲರಾಮ ಗೋವುಂತಪರ್ವತದಲ್ಲಿ ಕ್ರೀಡಿಸತಿರಲಿಕ್ಕೆ, ಸಮಸ್ತ ರಾಯರ ಸಮೂಹಗಳನ್ನು ಕೂಡಿಕೊಂಡು, ಜರಾಸಂಧ ಗೋವುಂತಪರ್ವತಕ್ಕೆ ಬಂದು, ಸುತ್ತಾಗಿ ಪರಿಸ್ತರಣದಿಂದ ಇಳಿದು ಪರ್ವತಕ್ಕೆ ಬೆಂಕಿ ಹಚ್ಚಿಸಿದ. ಅಂಥಾ ಜರಾಸಂಧನ ಅಗಾಧ ಕರ್ಮವನ್ನು ಸ್ವಾಮಿ ಕೃಷ್ಣದೇವರು ಕಂಡು, ಬಲರಾಮನಿಂದ ಕೂಡಿ ಪರ್ವತದ ಮ್ಯಾಲಿಂದ ಕೆಳಗೆ ಹಾರಲಿಕ್ಕೆ ಏನಾಯಿತೆಂದರೆ, ಸ್ವಾಮಿ ಪರ್ವತ ಮೆಟ್ಟಿ ಜಿಗಿದ ಭಾರಕ್ಕೆ, ಹನ್ನೊಂದು ಯೋಜನ ಉದ್ದ ಗೋವುಂತಪರ್ವತ ಭೂಮಿಯೊಳಕ್ಕೆ ಇಳಿಯಿತು. ಪರ್ವತ, ಭೂಮೀ ಪ್ರವೇಶವಾಗೋ ಕಾಲದಲ್ಲಿ ಉದಕ

ಮ್ಯಾಲೆ ಚಿಮ್ಮಲಿಕ್ಕೆ, ಪರ್ವತಕ್ಕೆ ಹತ್ತಿದಂಥ ಅಗ್ನಿ ಶಾಂತವಾಯಿತು. ಸ್ವಾಮಿ ಪರ್ವತದ ಮ್ಯಾಲಿಂದ ಭೂಮಿಗೆ ಹಾರಿ, ಜರಾಸಂಧನ ಬಳಿವಿಡಿದು ಬಂದು ರಾಯರ ಸೈನ್ಯದಲ್ಲಿ ಪ್ರವೇಶ ಮಾಡಿ, ದಿವ್ಯವಾದ ಶಸ್ತ್ರಾಸ್ತ್ರದಿಂದ ಅವರನ್ನೆಲ್ಲ ಮರ್ದಿಸುವಂಥಾವನಾದ. ಕೃಷ್ಣ ತಮ್ಮನ್ನು ಬಾಣದಿಂದ ಹೊಡಿಯೋದು ಕಂಡು ಹಂಸ, ಡಿಭಿಕ, ಏಕಲವ್ಯ, ಕೀಚಕ, ಪೌಂಡ್ರಕ, ಶಿಶುಪಾಲ, ದಂತವಕ್ರ, ನರಕಾಸುರ, ರುಕ್ಮ, ಸಾಲ್ವ ಮೊದಲಾದ ರಾಯರುಗಳು ಮಹಾ ಕೋಪದಿಂದ ಶ್ರೀಕೃಷ್ಣನ್ನ ಸುತ್ತುಗಟ್ಟಿ ಚನ್ನಾಗಿ ಬಾಣಗಳಿಂದ, ಶಸ್ತ್ರಗಳಿಂದ ಅಸ್ತ್ರಗಳಿಂದ ವೃಕ್ಷಸಮೂಹಗಳಿಂದ ಕಲ್ಲುಗಳಿಂದ, ಭಕ್ತರಾದಂಥ ಶಲ್ಯ, ಬಾಹ್ಲೀಕೆರೇವೇ ಕೂಡಿ ಮಳಿಗರಿಯು ವಂಥಾವರಾದರು.

ಸ್ವಾಮೀಭಕ್ತರು ಏನುಕಾರಣ ಇಂಥ ಅಕರ್ಮ ಮಾಡಿದರೆಂದಲ್ಲಿ, ಪೂರ್ವದಲ್ಲಿ ಸೋಮದತ್ತರಾಯ, ವಿರಾಟರಾಯ, ಪಾಂಚಾಲರಾಯರುಗಳು ಹಾಂಗೂ ಶಲ್ಯ, ಬಾಹ್ಲೀಕರೂ ಜರಾಸಂಧನಿಂದ ಪೀಡಿತರಾಗಿ ಕಾರಾಗೃಹದಲ್ಲಿ ಹಾಕಿಸಿಕೊಂಡಿದ್ದರು. ಆದಕಡೀಲಿ ಜರಾಸಂಧನ ಅನುಸರಿಸಿ, ಸ್ವಾಮೀಮ್ಯಾಲೆ ಯುದ್ಧಕ್ಕೆ ಬಂದಿದ್ದರು. ಜರಾಸಂಧನ ಭಯದಿಂದ ಸ್ವಾಮೀ ಸಂಗಡ ಯುದ್ಧ ಮಾಡಿದರಲ್ಲದೆ, ದ್ವೇಷಬುದ್ಧಿಪೂರ್ವಕ ಮಾಡಿದವರಲ್ಲ. ಉಳಿದ ರಾಯರುಗಳು ದ್ವೇಷಬುದ್ಧಿಪೂರ್ವಕ ಯುದ್ಧ ಮಾಡಿದರು. ಇಂಥಾ ಸಮರ್ಥ ರಾಯರುಗಳ ಸಮೂಹವನ್ನು ಸ್ವಾಮಿ ಕೃಷ್ಣದೇವರು ಹೋಗಲ್ಪಟ್ಟ ಸಾರಥಿಗಳನ್ನೂ, ಹೋಗಲ್ಪಟ್ಟ ಧ್ವಜಸ್ತಂಭಗಳನ್ನೂ, ಹೋಗಲ್ಪಟ್ಟ ಕುದರಿವುಳ್ಳವರನ್ನೂ ಮಾಡಿದನು. ಕೃಷ್ಣನಿಂದ ಬಿಡಲ್ಪಟ್ಟಂಥ ಅಸ್ತ್ರಗಳು, ಬಂದ ರಾಯರುಗಳ ಮರ್ಮಸ್ಥಾನ ಛೇದಿಸಿ ರಕ್ತಪ್ರವಾಹವನ್ನು ಮಾಡಿದವು. ಸಿಂಹವು ಆನೀಹಿಂಡುಗಳನ್ನು ಹ್ಯಾಂಗೆ ಓಡಿಸತದೆ, ಹಾಂಗೆ ಕೃಷ್ಣನು ವೈರಿಗಳನ್ನು ಓಡಿಸುವಂಥಾತನಾದನು.

ಈ ಪ್ರಕಾರ ಇಪ್ಪತ್ತು ಅಕ್ಷೋಹಿಣಿ ಸೈನ್ಯ ವಿನಾಶವಾಗಲಿಕ್ಕೆ, ಮೂರು ಅಕ್ಷೋಹಿಣಿ ಸೇನಾಬಲದಿಂದ ರುಕ್ಮಿ ಬಾಹೋಂಥಾವನಾದ. ಸ್ವಾಮಿ ಶ್ರೀಕೃಷ್ಣದೇವರು, ರುಕ್ಮಿಣೀಸಹೋದರ ರುಕ್ಮಿಯನ್ನು ಬಾಣಗಳಿಂದ ಅಸ್ತ್ರಗಳಿಂದ ಪೀಡಿಸಿ, ಜೀವದಿಂದ ಉಳಿಹಿ, ವಿರಥನ್ನ ಮಾಡಲಿಕ್ಕೆ, ರುಕ್ಮಿ ಓಡಿಹೋಗೋವಂಥಾತನಾವ. ಜರಾಸಂಧ ಬಲರಾಮನಿಂದ ಬಹುಕಾಲ ಯುದ್ಧವನ್ನು ಮಹಾ ಧೈರ್ಯದಿಂದ ಮಾಡಲಿಕ್ಕೆ, ಬಲರಾಮದೇವರು ಜರಾಸಂಧಗೆ ಒನಕೀಲಿ ಹೊಡಿಯಲಿಕ್ಕೆ, ಜರಾಸಂಧ ಮೂರ್ಛಿಯನ್ನು ಐದಿ ಭೂಮೀಮ್ಯಾಲೆ ಬಿದ್ದ, ಸಂಗಡಲೇ ಎಚ್ಚರವುಳ್ಳವನಾಗಿ ಕೃದ್ಧನಾಗಿ, ಬಲರಾಮನ ವಕ್ಷಸ್ಥಳದಲ್ಲಿ ಗದಾ ಬೀಳಿಸಲು, ಬಲರಾಮ ಮೂರ್ಛಿತನಾದ. ಪೂರ್ವದಲ್ಲಿ ಬ್ರಹ್ಮದೇವರು, ಜರಾಸಂಧಗೆ ದಾರಿಂದಲೂ ಸೋಲಬ್ಯಾಡವೆಂದು ವರವು ಕೊಟ್ಟಿದ್ದ. ಆದಕಾರಣ ಬಲರಾಮನ್ನ ಇಂಥಾ

ಅವಸ್ಥಿ ಮಾಡಿದ. ಈ ಯುದ್ಧ ಆಗದಕಿಂತ ಮುಂಚೆ ಬಲರಾಮನಿಂದ ಯುದ್ಧದಲ್ಲಿ ಸೋತಿಲ್ಲೆ ಎಂದರೆ, ಬಲರಾಮನು ಸ್ವಾಮಿಯ ಶುಕ್ಲಕೇಶಾವೇಶದಿಂದ ಸ್ಫೋಲಿಸ-ಥಾನಲ್ಲದೆ, ಸ್ವಬಲದಿಂದ ಗೆದ್ದಿಲ್ಲ. ಮಹಾ ಬಲಶಾಲಿಯಾದ ಬಲರಾಮನು ಸ್ವಾಮಿಯ ಶುಕ್ಲಕೇಶಾವೇಶದಿಂದ ಉತ್ಕೃಷ್ಟನಾಗಿದ್ದ. ಈಗ ಶ್ರೀಕೃಷ್ಣನು ಮಗಧಾಧಿಪತಿಯಾದ ಜರಾಸಂಧನನ್ನು ತನ್ನ ಗದಿಯ ತಾಡನದಿಂದ ಮೂರ್ಛಾ-ಗತನನ್ನಾಗಿ ಮಾಡಿದ. ಅಷ್ಟರೊಳಗೆ ಎದ್ದ ಬಲರಾಮನು ಕೃದ್ಧನಾಗಿ, ತನ್ನ ಮುಸಲಾಯುಧವನ್ನು ಹಿಡಿದು ಜರಾಸಂಧನ ಶಿರಸ್ಸಿಗೆ ತಾಡಿಸಿದ. ಜರಾಸಂಧನು ಅಷ್ಟರಲ್ಲಿ ಚೇತರಿಸಿಕೊಂಡು ಯುದ್ಧಕ್ಕೆ ಸನ್ನದ್ಧನಾದ. ಇಂಥಾ ಜರಾಸಂಧನ ಬಲವನ್ನು ಕಂಡು, ರೋಹಿಣೀಕುಮಾರನಾದ ಬಲರಾಮನು ಜರಾಸಂಧನ ಶಿರಸ್ಸನ್ನು ಹಿಡದು, ಶೀಘ್ರ ಕೊಲ್ಲಬೇಕೆಂದು ಸ್ವಕೀಯವಾದ ಮುಸಲವನ್ನು ಕೊಳ್ಳಲಿಕ್ಕೆ, ಆ ಕಾಲದಲ್ಲಿ ಪ್ರಭಂಜನಾತ್ಮಕರಾದಂಥ ವಾಯುದೇವರು ಆಕಾಶದಿಂದ ನುಡಿಯು-ವಂಥಾವರಾದರು. 'ಎಲೈ ಬಾಹುಶಾಲಿಯಾದ ಬಲರಾಮನೇ, ಈ ಜರಾಸಂಧ ನಿನ್ನಿಂದ ಕೊಲ್ಲಲ್ಕಿಕ್ಕೆ ಯೋಗ್ಯನಲ್ಲ. ವ್ಯರ್ಥ ನಿನ್ನ ಬಲವನ್ನು ಪ್ರಯೋಗಿಸ-ಬ್ಯಾಡ. ನಿನ್ನ ಬಲ ಅಮೋಘವಾದದ್ದು. ಇವನ್ನ ಕೊಲ್ಲಲಿಕ್ಕೆ ಮತ್ತೊಬ್ಬ ಬಲಿಷ್ಠಪುರುಷನಿದ್ದಾನೆ, ಬಿಟ್ಟುಕೊಡು' ಎಂದ ತಿಶರೀರವಾಣಿಯನ್ನು ಕೇಳಿ ಬಲರಾಮ, ಜರಾಸಂಧನ್ನ ಬಿಟ್ಟುಕೊಟ್ಟನು.

ಜರಾಸಂಧ ಆ ಬಲರಾಮನಿಂದ ಬಿಡಿಸಿಕೊಂಡಂಥಾತನಾಗಿ ಮಹಾ ಕೋಪ ದಿಂದ ಉದ್ಯುಕ್ತನಾಗಲಿಕ್ಕೆ, ಸ್ವಾಮಿ ಶ್ರೀಕೃಷ್ಣ ಜರಾಸಂಧನ ಮ್ಯಾಲೆ ಗದಿ ಈಡ್ಯಾಡಲಿಕ್ಕೆ, ಗದಿಯಿಂದ ಹೊಡಿಸಿಕೊಂಡು, ಸಮಸ್ತ ದೇಹ ಕಂಪಿಸಿಕೊಳ್ಳುತ, ಬಹಳ ಹೊತ್ತು ಮೂರ್ಛಿ ಐದಿದ. ಆಮ್ಯಾಲೆ ಎಚ್ಚರಿಕೆಯುಳ್ಳವನಾಗಿ, ಬಹಳ ಅಂಜಿಕೆಯುಳ್ಳವನಾಗಿ, ಲಜ್ಜೆಯಿಂದ ಯುಕ್ತನಾಗಿ ಹೋಗುವಂಥಾತನಾದ. ಜರಾಸಂಧನ ಸಂಗಡ ಬಂದ ರಾಯರುಗಳು ಬದುಕಿದೆವೆಂದು ಜೀವದಿಂದ ಯುಕ್ತ-ರಾಗಿ, ತಮ್ಮತಮ್ಮ ಪಟ್ಟಣಗಳನ್ನು ಕುರಿತು ಹೋಗುವಂಥಾವರಾದರು. ಈ ಪ್ರಕಾರ ಪುನಃಪುನಃ ಶ್ರೀಕೃಷ್ಣನಿಂದ ಯುದ್ಧದಲ್ಲಿ ಪರಾಜಿತನಾಗಿ, ಜರಾಸಂಧ ಬಲರಾಮನಿಂದ ಜೀವ ಉಳಿಸಿಕೊಂಡಾತನಾಗಿ ಹೋಗುವಂಥಾವನಾದ. ಶ್ರೀಕೃಷ್ಣ ತನ್ನ ಸೋದರತ್ತಿ ಗಂಡ, ದಮಘೋಷರಾಯನಿಂದ ನುಡಿಸಿಕೊಂಡ. 'ಎಲ್ಲೈ ಸ್ವಾಮಿ, ಇಲ್ಲೆ ಸಮೀಪದಲ್ಲಿ ಕವವೀರಪಟ್ಟಣವದೆ. ಅಲ್ಲೇ ಮಹಾಲಕ್ಷ್ಮೀ ಇದ್ದಾಳೆ. ಬಹಳೇ ದೊಡ್ಡ ಕ್ಷೇತ್ರವದೆ. ದರ್ಶನಕ್ಕೆ ಹೋಗಬೇಕು' ಎಂದು ಪ್ರಾರ್ಥನಿ ಮಾಡಿಸಿಕೊಂಡ. ದಮಘೋಷರಾಯ ಪೂರ್ವದಲ್ಲಿ ಸ್ವಾಮೀ ಸಂಗಡ ಯುದ್ಧ ಮಾಡಿ ಪರಾಜಿತನಾಗಿ ಬಹಳೇ ಅಂಜಿಕೆಯಿಂದ ಇದ್ದ. ಕಡೀಲಿ ಸ್ವಾಮಿಯಲ್ಲಿ ಭಕ್ತಿ ಮಾಡಿದ. ಸ್ವಾಮಿ ಶ್ರೀಕೃಷ್ಣ ತಮ್ಮ ಬಾಂಧವನೆಂದು, ದಮಘೋಷ-

ರಾಯನ ವಾಕ್ಯವನ್ನು ಆದರಿಸಿದನು. ದನು ಎಂಬ ಗಂಧರ್ವನೇ ದಮಘೋಷ-ರಾಯನಾಗಿ ಹುಟ್ಟಿದಕಾರಣ, ಸ್ವಾಮಿಯಲ್ಲಿ ಭಕ್ತಿಮಾಡಹೊಕ್ಕ.

ಸ್ವಾಮಿ ಆ ದಮಘೋಷರಾಯನಿಂದ ಕೂಡಿಕೊಂಡು, ಕರವೀರಪಟ್ಟಣಕ್ಕೆ ಬರಲಾಗಿ, ಮಹಾಪಾಪಿಷ್ಟನಾದಂಥ ಸೃಗಾಲ ವಾಸುದೇವನು ಸ್ವಾಮಿ ಬಂದನೆಂದು ಕೇಳಿ, ಮಹಾ ರೋಷದಿಂದ ಶ್ರೀಕೃಷ್ಣನ ಸಂಗಡ ಯುದ್ಧಕ್ಕೆ ಬರಲಾಗಿ, ಸ್ವಾಮಿ ಸೃಗಾಲ ವಾಸುದೇವನ ಶಿರಸ್ಸು ಚಕ್ರದಿಂದ ಕಡಿದು ಬಿಷ್ಟನು. ಅವನ ಮಗ ಸ್ವಾಮೀ ಭಕ್ತನಾದ್ದರಿಂದ ಅವಗೆ ರಾಜ್ಯಾಭಿಷೇಕ ಮಾಡಿದ. ಪೂರ್ವದಲ್ಲಿ ಮಣಿ-ಭದ್ರನಾಗಿದ್ದವನೇ ಶಕ್ರನಾಗಿ (ದಮಘೋಷರಾಯನ ಮಗ) ಹುಟ್ಟಿದ್ದಾನೆ. ? ಶಕ್ರದೇವಗೆ ಕಶವೀರಪಟ್ಟಣದಲ್ಲಿಟ್ಟು, ಸ್ವಾಮಿ ತಾ ಸ್ವಕೀಯವಾದಂಥ ಮಥುರಾ-ಪಟ್ಟಣಕ್ಕೆ, ಅಣ್ಣ ಬಲರಾಮನಿಂದ ಕೂಡಿ ಬಾಹೋ ಅಂಥಾತನಾದ. ಪರಿಪೂರ್ಣ ಶಕ್ತಿಯುಳ್ಳಂಥ ಸ್ವಾಮಿ ತನ್ನ ಮ್ಯಾಲೆ ಬಂದ ಶೂರರುಗಳನ್ನು ತೃಣೀಕರಿಸಿ, ಒಬ್ಬನೇ ಅವರನ್ನೆಲ್ಲ ಸಂಹರಿಸಿ, ಸ್ವಕೀಯವಾದ ಸೇನಾ ಸಂರಕ್ಷಿಸಿ, ಬ್ರಹ್ಮಾದಿಗಳಿಂದ ಸ್ತೋತ್ರ ಮಾಡಿಸಿಕೊಂಡು ಚನ್ನಾಗಿ ವಾಸಮಾಡಿದನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಜರಾಸಂಧಾದಿ ಭಂಗಃ' ಎಂಬ ಹದಿನಾರನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೬

ಶ್ರೀಕೃಷ್ಣಚರಿತೇ ಶ್ರೀಕೃಷ್ಣದಿಗ್ವಿಜಯಃ

ಈ ಹದಿನೇಳನೇ ಅಧ್ಯಾಯದಲ್ಲಿ—ದಮಘೋಷರಾಯ ಸ್ವಾಮೀ ಅಪ್ಪಣೆ ಕೊಂಡು, ತನ್ನ ಚೈದ್ಯದೇಶಕ್ಕೆ ಹೋದಮ್ಯಾಲೆ, ಭೀಷ್ಮಕರಾಯನ ಮಗ ರುಕ್ಮಿ ತನ್ನ ತಂಗಿ ರುಕ್ಮಿಣೀನ್ನ, ದಮಘೋಷರಾಯನ ಮಗ ಶಿಶುಪಾಲಗೆ ಕೊಡ-ಬೇಕೆಂದು ಮಾಡಿ, ಸ್ವಯಂವರ ಆರಂಭಿಸಿ ದೇಶದೇಶದ ರಾಯರಿಗೆಲ್ಲ ಪತ್ರ ಬರೆದು, ಲಗ್ನಕ್ಕೆ ಬರಹೇಳಿ, ದೂತರ ಕಳುಹಿಕೊಟ್ಟನು. ಲಗ್ನ ನೋಡಲಿಕ್ಕೆ ಸಾಲ್ವದೇಶದ ಅರಸು ಸೌಂಡ್ರಕ, ಸಮಸ್ತ ರಾಯರೂ ಜರಾಸಂಧನ ಬಳಿವಿಡಿದು ಬಂದರು. ಸ್ವಾಮಿ ಶ್ರೀಕೃಷ್ಣ ಈ ವಾರ್ತಿ ಕೇಳಿ—ಗರುಡ ಮೊದಲಿಗೆ ಕಿರೀಟ ಹಾಕಿ ಹೋಗಿದ್ದಾನೆ. ಸ್ಮರಿಸಲಿಕ್ಕೆ ಬಾ ಎಂದು ತಾನು ಹೇಳಿದ್ದ ಆ ಕ್ಷಣವೇ ಗರುಡ ಬರಲು — ಗರುಡವಾಹನನಾಗಿ ಸ್ವಾಮಿ ಬರಲಿಕ್ಕೆ, ಗರುಡನ ಪಕ್ಷಗಾಳಿಯಿಂದ ದುಷ್ಟರಾಯರ ಚತುರಂಗ ಸೈನ್ಯ ಮೂರ್ಛಾಗತವಾಗಿ ಬಿತ್ತು. ಜರಾಸಂಧ ಮಾತ-ನಾಡಿದ: 'ನಾವು ವ್ಯರ್ಥ ಕೃಷ್ಣನ ಕೂಡ ವೈರಿತನ ಕಟ್ಟಿದೆವು. ಕೃಷ್ಣ ಪಯೋಬ್ಧಿ-ಮಂದಿರ, ಪಕ್ಷಿವಾಹನ, ಸಾಕ್ಷಾತ್ ನಾರಾಯಣನೇ ಕೃಷ್ಣ. ಬಹಳ ಬಲವುಳ್ಳಾತ, ನನ್ನಂಥವ ಖ್ಯಾಪಿಗೆ ಇಪ್ಪತ್ತಮೂರು ಅಕ್ಷೋಹಿಣಿ ಬಲ ಕಟ್ಟಿಕೊಂಡು ಹೋಗಿ, ಹದಿನೇಳು ಸಾರೀಗೆ ಸೋತು ಸೋತು ಬಂದೀನಿ. ಗೋಮಂತಕಪರ್ವತದಿಂದ ಹಾರಿಕೊಂಡು, ಕೃಷ್ಣ ತಾ ಒಬ್ಬನೇ ನಮ್ಮ ಸೇನಾಬಲ ಮರ್ದಿಸಿಬಿಟ್ಟ. ಈತನ ಅಣ್ಣ ಎಂಥಾತ ಎಂದರೆ, ನನ್ನ ಕೈಸೆರಿ ಹಿಡಿದು ವಧಿಗೆ ಉಪಾಯ ಮಾಡಿದ್ದ. ಅಶರೀರವಚನ ಕೇಳಿ ಬಿಟ್ಟುಕೊಟ್ಟ. ದೈವೇಚ್ಛೆಯಿಂದ ಉಳದೆ. ಈಗ ಕೃಷ್ಣ-ಬಲರಾಮರು ಬಂದು ಏನು ಅದ್ಭುತಕಾರ್ಯ ಮಾಡ್ಯಾರು ನಾನು ಅರಿತವನಲ್ಲ.' ಹೀಂಗಂತ ಜರಾಸಂಧ ಚಿಂತಸ್ತಾ ಕೂಡ್ರಲಿಕ್ಕೆ ಶಿಶುಪಾಲ, ದಂತವಕ್ರ, ಉಭಯ-ತರು ಶುಭಜೀವನಾವೇಶದಿಂದ ಮಾತನಾಡಿದರು. 'ರಾಯ ಏನುಕಾರಣ ಮಾರಿ ತಗ್ಗಿಸಿದ್ದಿ? ಕೃಷ್ಣ ಸರ್ವೋತ್ತಮ. ಬ್ರಹ್ಮರುದ್ರಾದಿಗಳಿಗೆ ನಿಯಾಮಕನೆಂದು ಪ್ರಾಣಿಗಳ ಮುಖದಿಂದ ಕೇಳಿದ್ದೀವಿ. ಇಂಥಾ ಕೃಷ್ಣನಲ್ಲಿ ಒಮ್ಮೊಮ್ಮಿಗೆ ಭಕ್ತಿ ಮಾಡಬೇಕೆಂಬೋ ಹಾಂಗೆ ಆಗತದೆ. ಒಮ್ಮಿಗೆ ದ್ವೇಷವೂ ಹುಟ್ಟತದೆ. ಶ್ರೀಕೃಷ್ಣ ಪರದೇವತಿ, ಬ್ರಹ್ಮಾದಿಗಳಿಗೆ ಒಡಿಯನಿದ್ದಾನೆ. ಆತನ ಕೂಡ ವೈರಿತನ ಕಟ್ಟಬಾರದು. ಸ್ನೇಹ ಬೆಳೆಸಿದ್ದರಿಂದ ನಮ್ಮ ಅಪರಾಧಗಳ ಕ್ಷಮಿಸ್ಯಾನು.' ಹೀಂಗಂತ ಶಿಶುಪಾಲ ದಂತವಕ್ರರು ಮಾತನಾಡಲಿಕ್ಕೆ, ಜರಾಸಂಧ ಕೋಪಾ-ವಿಷ್ಟನಾಗಿ ಕೆಂಪುಕಣ್ಣು ಮಾಡಿಕೊಂಡು, 'ಎಲೋ ಪಾಪಿ, ನಿನ್ನ ಮಗನ್ನ

① ಭೀಷ್ಮಕ ರಾಜನ ತಮ್ಮಂದಿರು - ಭಗವದ್ಭಕ್ತರು.
② ಆಗ ಇನ್ನು ನಿರ್ಮಾಣ ಆಗಿದ್ದಿಲ್ಲ. ಮುಂದೆ ಕಾಲಯವನ ಬಂದಾಗ ದ್ವಾರಾವತಿ ಕಟ್ಟಿಸುತ್ತಾನೆ ಶ್ರೀ ಕೃಷ್ಣ.

ಮಾಡಿ ಸಾಕಿದ್ದಕ್ಕೆ ವೈರಿಪಕ್ಷ ಬಲಿಸಿ ಹೇಳತಿದ್ದಿ. ನಮ್ಮ ಕುಲಕ್ಕೆಲ್ಲ ಕಳಂಕ ತರುವನಾದಿ.' ಹೀಂಗಂತ ಮಾತನಾಡಲಿಕ್ಕೆ, ಸಾಲ್ವರಾಯ ಜರಾಸಂಧನ ಅಭಿಪ್ರಾಯ ತಿಳಿದು ಮಾತನಾಡಥಾನೆ. 'ಕೃಷ್ಣ, ನಾರಾಯಣ ಖರೆಯೇ. ನಾವು ದಾನವೇಂದ್ರರು, ನಾರಾಯಣನ ದ್ವೇಷ ಮಾಡಬೇಕು. ನಾವು ಸ್ವಧರ್ಮದಿಂದ ಸತ್ತಪಕ್ಷವೇ ಗತಿ ಆದೀತು. ನಮ್ಮ ಶಿವ ನಮಗೆ ಪರಮಗತಿ. ಜರಾಸಂಧ ನಮಗೆ ಮುಖ್ಯ ಗುರು. ಕೃಷ್ಣ ನಮ್ಮ ವೈರಿ.' ಹೀಂಗೆ ಸಾಲ್ವ ಮಾತನಾಡಲಿಕ್ಕೆ, 'ಭಲಾ ಸಾಲ್ವ! ಛಲೋ ಮಾತನಾಡಿದಿ' ಎಂದು ಸಾಲ್ವನ ಮಾತು ವಹಿಸಿಕೊಂಡು, ಸಮಸ್ತ ದುಷ್ಟರಾಯರೂ ರುಕ್ಮಿ ಮೊದಲಾದವರೂ ಶಿವ ಸರ್ವೋತ್ತಮ, ಕೃಷ್ಣ ವೈರಿ ಎಂದು ಮಾತನಾಡಲಿಕ್ಕೆ, ಶಿಶುಪಾಲದಂತವಕ್ರರು ತಮ್ಮದು ತಪ್ಪಾಯಿತೆಂದು ಬಾಯಿ ಮುಚ್ಚಿಕೊಂಡು, ಕ್ಷಮಿಸಬೇಕೆಂದು ಅಸುರಾವೇಶದಿಂದ ಜರಾಸಂಧನ ಅನುಸರಿಸಿ 'ಕೃಷ್ಣನ ಕೂಡ ವೈರಿತನ ಮಾಡಬೇಕು. ಕೃಷ್ಣ ರುಕ್ಮಿಣೀ ಸ್ವಯಂವರಕ್ಕೆ ಬಂದಾನು. ಅಗ್ಗಳಿಕಿ ಮಾಡಿ ಕನ್ಯಾ ಕೊಂಡುಹೋದಾನು. ಹದಿನಾಲ್ಕು ಲೋಕದೊಳಗೆ ರುಕ್ಮಿಣೀ ಪರಮ ಸುಂದರೀ ಇದ್ದಾಳೆ. ಕೃಷ್ಣ ತಾನೂ ಚಲುವನಿದ್ದಾನೆ. ಬಲವೀರ್ಯ ಉಳ್ಳಾತ, ಪರಾಕ್ರಮಿ. ವೈರಿಗಳೆಲ್ಲ ಅವನೇ ಚಲುವನೆಂದು ಹೇಳಥಾರೆ. ಕೃಷ್ಣನ್ನ ಕಾಣಲಿಕ್ಕೆ ನಮ್ಮನ್ನ ವರಿಸದೇ ಹೋದಾಳು. ಕೃಷ್ಣನ ಕೊರಳಿಗೆ ಮಾಲೀ ಹಾಕ್ಯಾಳು. ಇಷ್ಟಾಗಲಿಕ್ಕೆ ನಮ್ಮ ಬಹುಮಾನ ಕೊರತಿಯಾದೀತು. ಯುದ್ಧ ಮಾಡಿ ಕೃಷ್ಣನ ಗೆಲ್ಲಲಿಕ್ಕೆ ವಶವಲ್ಲ. ಆದಕಾರಣ ಕೃಷ್ಣ, ಸ್ವಯಂವರಕ್ಕೆ ಬರಬಾರದೆಂದು ಒಂದು ಉಪಾಯ ಚಿಂತಿಸಬೇಕು. ನಾವೆಲ್ಲ ಸಭಿ ಮಾಡಿ ಸಿಂಹಾಸನದಲ್ಲಿ ಕುಳಿತಿರಬೇಕು. ಕೃಷ್ಣ ಬರಲಿಕ್ಕೆ ಬಹುಮಾನ ಮಾಡಿ ಕೂಡ್ರಿಸಿಕೋಬಾರದು. ನಮ್ಮಿಂದ ಅಪಮಾನಿತನಾಗಿ, ಹಿಂದಕ್ಕೆ ತಿರಗಿ ಕೋಪದಿಂದ ಹೋದಾನು. ಕೃಷ್ಣನು ದ್ವಾರಾವತಿಗೆ ಹೋದಮ್ಯಾಲೆ ರುಕ್ಮಿಣೀ ಮದುವಿ ಮಾಡಿಕೊಂಬೋಣ.' ಇಂಥಾ ಕುಬುದ್ಧಿ ಕ್ರಥ-ಕೌಶಿಕರು ಪರಸ್ಪರ ತಿಳಿದು, ತಾವು ಹೋಗಿ ಸ್ವಾಮೀ ಎದುರುಗೊಂಡು, ತಮ್ಮ ಮನಿಗೆ ಕರೆದೊಯ್ದು ಅರ್ಘ್ಯಾದಿ ಪೂಜಿ ಮಾಡಿದ್ದಾರೆ.

? ②

ಅದೇ ವ್ಯಾಳ್ಯಾದಲ್ಲಿ, ರಾಯರ ಸಭಿಗೆ ಸ್ವರ್ಗದಿಂದ ದೇವೇಂದ್ರನ ದೂತ ಬಂದು "ನನ್ನ ಇಂದ್ರ ಕಳುಹಿದ್ದಾನೆ. ಇಂದ್ರನ ಆಜ್ಞ ಹೇಳಥೀನಿ. 'ನಮ್ಮ ಸ್ವಾಮಿ ಶ್ರೀಕೃಷ್ಣ, ಕ್ರಥ-ಕೌಶಿಕರಲ್ಲಿದ್ದಾನೆ. ನೀವು ಸಮಸ್ತ ರಾಯರೂ ಹೋಗಿ, ರಾಜಾಧಿರಾಜನೆಂದು ಹೊಗಳಿ, ಮಹಾಭಿಷೇಕ ಅನೇಕ ಪೂಜಿಗಳಿಂದ ನಮ್ಮ ಸ್ವಾಮೀನ್ನ ವಾಲ್ಗೈಸಿರಿ. ಹೀಂಗೆ ಮಾಡದ ಪಕ್ಷವೇ ನಿಮ್ಮ ಮ್ಯಾಲೆ ವಜ್ರಾಯುಧ ಬಿಷ್ಟಥೀನಿ.' ಹೀಂಗಂತ ಇಂದ್ರ ಹೇಳಿದ್ದಾನೆಎಂದು ದೂತ ಹೇಳಲಿಕ್ಕೆ, ರಾಯರೆಲ್ಲ ಆಶ್ಚರ್ಯವುಳ್ಳವರಾದರು. 'ನಾವು ಯೋಚನಿ ಮಾಡಿದ್ದು ವ್ಯರ್ಥವಾಯಿತು. ಇವತ್ತಿಗೆ

ದೇವೇಂದ್ರ ಬಹಳ ಬಲಿಷ್ಠನಾಗ್ಯಾನೆ. ಮೊದಲಿಗೆ ದೇವೇಂದ್ರ ನನುಗೆ ಅಂಜತಿದ್ದ. ಈಗ ತನಗೆ ಕೃಷ್ಣ ಸಹಕಾರಿ ಆಗ್ಯಾನೆಂದು ಬಹಳ ಗರ್ವಿಷ್ಟನಾಗ್ಯಾನೆ. ಅದೃಶ್ಯದಿಂದ ವಜ್ರಾಯುಧ ಬಿಷ್ಟರೆ ನಮ್ಮ ಅಂಗ ನ್ಯೂನವಾದೀತು. ಗಂಧರ್ವನ ಮ್ಯಾಲೆ ವಜ್ರಾಯುಧ ಬಿಷ್ಟಲಿಕ್ಕೆ, ಹೊಟ್ಟೆಯೊಳಗೆ ಅವನ ತಲಿ ಇಳಿಯಿತು. ನಮ್ಮದೇನು ಹೋಗತದೆ, ಕಾರ್ಯದ ಮ್ಯಾಲೆ ದೃಷ್ಟೀ ಇಟ್ಟು ಕೃಷ್ಣ ಪೂಜಿ ಮಾಡಬಾರದ್ಯಾಕೆ?' ಎಂದು ಜರಾಸಂಧ, ರುಕ್ಮಿ, ಶಿಶುಪಾಲ, ಸಾಲ್ವ ಹೀಂಗೆ ನಾಲ್ಕೋರು ತಮ್ಮ ಸ್ಥಳದಲ್ಲಿ ಸಿಂತವರಾದರು. 'ನನುಗೆ ರುದ್ರ, ಬ್ರಹ್ಮದೇವರ ವರದಿಂದ ಮರಣ ಇಲ್ಲದಿದ್ದರೂ ಅದೃಶ್ಯದಿಂದ ಇಂದ್ರ ವಜ್ರಾಯುಧ ಬಿಷ್ಟಾನು, ಅಂಗ ನ್ಯೂನ ವಾದೀತು. ಈಗಲೇ ಸ್ವರ್ಗಕ್ಕೆ ಧಾಳಿ ಹಾಕಿ ದೇವೇಂದ್ರನ ಸೊಕ್ಕು ಮುರೀ-ಜೇಕಾದರೆ, ಕೃಷ್ಣ ರುಕ್ಮಿಣೀ ಕೊಂಡುಹೋದಾನು.' ಹೀಂಗಂತ ಕಾರ್ಯದ ಮ್ಯಾಲೆ ದೃಷ್ಟಿ ಇಟ್ಟು, ಸಮಸ್ತ ರಾಯರೂ ಕೃಷ್ಣನ ಪೂಜಿಗೆ ಹೋದರು.

ಜರಾಸಂಧ, ಶಿಶುಪಾಲ, ರುಕ್ಮಿ ಇವರು ಏನುಕಾರಣ ಹೋಗಲಿಲ್ಲ ಎಂದರೆ, ಜರಾಸಂಧನಂಥವ ಕೃಷ್ಣಗೆ ಶರಣುಹೊಕ್ಕ, ಕೃಷ್ಣ ದೊಡ್ಡವನೆಂದು ತಿಳಿದು ದುಷ್ಟರಾಯರೆಲ್ಲ ಸ್ವಾಮೀ ದರ್ಶನಕ್ಕೆ ಹೋದರೆ, ಅವರಿಗೆ ದಿವ್ಯಗತಿ ಆದೀತು. ಆದಕಾರಣ ಜರಾಸಂಧ ಮೊದಲಾದ ನಾಲ್ವರು ಸ್ವಾಮೀ ಸಮೀಪಕ್ಕೆ ಹೋಗದ್ದಿಲ್ಲ. ಮಿಗಿಲಾದ ಸಮಸ್ತ ರಾಯರೂ ಸ್ವಾಮೀ ಸಮೀಪಕ್ಕೆ ಹೋದರು. ಸ್ವಾಮಿಗೆ ರಾಜಾಧಿರಾಜನೆಂದು ಹೊಗಳಿ, ಸುವರ್ಣ ಕುಂಭದಿಂದ ಮೀಸಲೋದಕ ತಂದು, ಶಂಖದಿಂದ ಮಹಾಭಿಷೇಕ ಪುರುಷಸೂಕ್ತದಿಂದ ಮಾಡಿದರು. ಸ್ವಾಮಿ ತನ್ನ ಸಮೀಪದಲ್ಲಿ ಕ್ರಥ ಕೌಶಿಕರ ಕೂಡ್ರಿಸಿಕೊಂಡಿಹ. ಗರುಡನೂ ಇಹಾನೆ. ರಾಯರ ಕೈಯಿಂದ ಪೂಜಿಗೊಳ್ಳಥಾನೆ. ಸಮಸ್ತ ಪಟ್ಟಣವೂ ಹೊಡಗೆಡದು ಬಂದದೆ. ಕೃಷ್ಣನ ಪೂಜಿ ಮಹಾಸಂಭ್ರಮದಿಂದ ನಡೀತದೆ. ಅದೇ ಕಾಲದಲ್ಲಿ ದೇವೇಂದ್ರ ಸ್ವಾಮಿಗೋಸ್ಕರ ಸಿಂಹಾಸನ ಕಳುಹಿದ್ದಾನೆ. ಆಗ ಸ್ವಾಮಿ ಭೀಷ್ಮಕರಾಯನ ಕೂಡ ಮಾತನಾಡಥಾನೆ. 'ರಾಯಾ ಈ ಸ್ವಯಂವರ ವಿಘ್ನಕಾರಕವಾದೀತು. ನಿವುಗೆ ಅಮಂಗಳ ತೋರೀತು. ನಿನ್ನ ಮಗಳು ದಾರಿಂದರೆ, ಸಾಕ್ಷಾತ್ ಲಕ್ಷ್ಮೀ, ನಿನ್ನ ಮಗಳಾಗಿ ಹುಟ್ಯಾಳೆ. ಈ ಕನ್ನಿಕೆಗೆ ನಾರಾಯಣನೇ ಪತಿ. ಮನುಷ್ಯರಿಗೆ ಕೊಟ್ಟ ಪಕ್ಷವೇ, ಅಧೋಲೋಕಕ್ಕೆ ಹೋಗಬೇಕಾದೀತು. ನನಗೆ ಕೊಡೆಂದು ನಿನಗೆ ತಕ್ಕಿಸಲಿಕ್ಕೆ ಮಾತನಾಡೋದಿಲ್ಲ' ಅಂದು, ಅದೇ ಕ್ಷಣವಲ್ಲಿ ಸ್ವಾಮಿ ವಿಶ್ವರೂಪ ತೋರಿಸಿದನು. ಸ್ವಾಮಿ ಅನಂತ ಬಾಹು, ಅನಂತ ಶೀರ್ಷ, ವಿಚಿತ್ರ ಕುಂಡಲ, ಅಂಗದ ಬಾಹುಪುರಿಗಳು, ಅನಂತ ಕೃಷ್ಣರೂಪಗಳು, ನೋಡಲಿಕ್ಕೆ, ರುಕ್ಮಿಣೀ ಅನಂತರೂಪಳಾಗಿ ಕೃಷ್ಣನ ಸಮೀಪದಲ್ಲಿ ನಿಂತಿಹೋಳು. ನಿತ್ಯ ತನ್ನ ಮಗಳನ್ನ ಮನುಷ್ಯದೃಷ್ಟಿಯಿಂದ ನೋಡತಿದ್ದ. ಅವತ್ತೇ ಇಂಥಾ

ಸ್ವರೂಪ ನೋಡಲಿಕ್ಕೆ ದಿವ್ಯ ಚಕ್ಷುಸ್ಸು ಕೊಟ್ಟ. ದಿವ್ಯ ಚಕ್ಷುವಿನಿಂದ ನೋಡುವಾಗ, ಕೃಷ್ಣ ರುಕ್ಮಿಣೀಗೆ, ಬ್ರಹ್ಮಾದಿ ದೇವತಿಗಳು ವಾಲ್ಮೀಕಿಸಹಿತಹೋರು. ಹೀಂಗೆ ಕಾಣಲಿಕ್ಕೆ, ಭೀಷ್ಮಕರಾಯ ಬಹಳ ಅಂಜಿ 'ಸ್ವಾಮಿ ನಿನ್ನ ಮಹಿಮಿ ನಾನು ಅರಿತವನಲ್ಲ' ಎಂದು ಪಾದಗಳ ಮ್ಯಾಲೆ ಬಿದ್ದ. ಸ್ವಾಮಿ ವಿಶ್ವರೂಪ ಉಚ್ಚಾದಿಸಿ, ಮೊದಲಪ್ಪಂದೆ ಕೃಷ್ಣರೂಪ ಉಳ್ಳವನಾಗಿ ಗರುಡನ ಏರಿಕೊಂಡು (ಮಥುರಾ ಪಟ್ಟಣಕ್ಕೆ) ಹೋದನು.

ಸ್ವಾಮಿ ಏನುಕಾರಣ ಸ್ವಯಂವರ ವ್ಯರ್ಥವಾದೀತು ಎಂದನು, ಸಮುದ್ರರಾಜ ಲಕ್ಷ್ಮೀ ಸ್ವಯಂವರ ಮಾಡಲಿಲ್ಲವೇ, ಜನಕರಾಯ ಸೀತಾಸ್ವಯಂವರ ಮಾಡಲಿಲ್ಲವೇ ಎಂದಲ್ಲಿ, ವರುಣಗೆ, ಜನಕರಾಯಗೆ, ಲಕ್ಷ್ಮೀನಾರಾಯಣರೆಂಬೋ ಸ್ವಚ್ಛ ಜ್ಞಾನವಿಹೋದು. ಭೀಷ್ಮಕರಾಯಗೆ ಸ್ವಚ್ಛ ಜ್ಞಾನವಿದ್ದಿಲ್ಲ. ಆದಕಾರಣ, ತಾ ಕೃಪಾಳು, ತನ್ನ ಭಕ್ತರಿಗೆ ವಿಶೇಷ ಜ್ಞಾನೋಪದೇಶ ಮಾಡಬೇಕಾಗಿ, ಭೀಷ್ಮಕರಾಯಗೆ ವಿಶ್ವರೂಪ ತೋರಿಸಿದ. ಶ್ರೀಕೃಷ್ಣ ಹೋದಮ್ಯಾಲೆ, ಜರಾಸಂಧ ಮೊದಲಾದ ರಾಯರೆಲ್ಲ 'ಕೃಷ್ಣ ಏನೋ ಕಪಟತನ ಮಾಡಿ ಹೋದ, ಭೀಷ್ಮಕರಾಯನಿಂದ ಆಯುಕಟ್ಟು ಮಾಡಿಸಿ ಹೋಗಿದ್ದಾನೆ. ರುಕ್ಮಿಣೀ ತನಗೆ ಕೊಡಲಿಕ್ಕೆ ಸಂಕಲ್ಪ ಮಾಡಿಸಿದ್ದಾನೆ' ಎಂದು ಮಾತನಾಡಿದರು. ಕೃಷ್ಣ, ಜರಾಸಂಧನ ಕೊಲ್ಲಬಾರದೆ? ಏನುಕಾರಣ ಈ ರೀತಿ ಮಾಡಿ ಹೋಗಬೇಕೆಂದರೆ, ತನ್ನ ಭಕ್ತ ಭೀಮಸೇನನ ಕೈಯ ಕೊಲ್ಲಿಸಬೇಕಾಗೇದೆ. ಜರಾಸಂಧನ ಪಾಪ ಪೂರ್ಣವಾಗಬೇಕು. ಆದಕಾರಣ ದುಷ್ಟರಾಯರನ್ನೆಲ್ಲ ಆ ವ್ಯಾಳ್ಯಾದಲ್ಲಿ ಕೊಲ್ಲೋದು ಉದಾಸೀನ ಮಾಡಿದ.

ಜರಾಸಂಧ ಕೃಷ್ಣನಿಂದ ಸೋತರೂ, ಶಿವನಲ್ಲಿ ಭಕ್ತಿಯುಳ್ಳವ. ಶಿವನ ಪೂಜಿ ತಪ್ಪಿದ್ದೇವಾದೀತು. ಆದಕಾರಣ ಗೋಪಾಲಕನಿಂದ ಸೋತೆವು. ಬಾರಿ-ಬಾರಿಗೆ ಸೋತು ಬಂದೆವೆಂದು ಶಿವನಲ್ಲಿ ಭಕ್ತಿಯುಳ್ಳವನಾಗತಿಹ. ಜರಾಸಂಧ ರಾಯರ ಕೂಡ ಮಾತನಾಡಿದ 'ಶ್ರೀಕೃಷ್ಣ ಗೋಪಾಲ. ದೇವೇಂದ್ರನು ತನ್ನ ಸಿಂಹಾಸನ ಕಳುಹಿಸಿಕೊಟ್ಟ. ಗೋಪಾಲಕನೆಂದು ಉದಾಸೀನ ಮಾಡಿದ್ದೆವು. ರಾಜಾಧಿರಾಜನೆಂದು ಹೊಗಳಿದೆವು. ಕಾರ್ಯಾರ್ಥವಾಗಿ ಹೊಗಳಿದ್ದಕ್ಕೆ, ನಮ್ಮ ಕಾರ್ಯ ಸಾಧಿಸಿಕೊಳ್ಳಬೇಕು.' ಈ ಪ್ರಕಾರ ಜರಾಸಂಧ ಮಾತನಾಡತಿರಲಿಕ್ಕೆ, ಸಾಲ್ವ ರುಕ್ಮನ ಮಾರಿ ನೋಡಿ ಮಾತನಾಡಿದ. 'ನಿನ್ನ ತಂದಿ ಭೀಷ್ಮಕರಾಯ ಬಹಳ ಕೆಟ್ಟಬುದ್ಧಿಯುಳ್ಳವ. ತನ್ನ ಮಗಳ ರಾಜಾಧಿರಾಜಗೆ ಕೊಡೋದು ಬಿಟ್ಟು, ಗೋಪಾಲಕಗೆ ಕೊಟ್ಟೇನೆನಥಾನೆ. ನಿನ್ನ ಅಭಿಪ್ರಾಯ ಏನು ಅದೆ ಹೇಳು' ಎನಲಿಕ್ಕೆ, 'ನಮ್ಮ ತಂದೀ ಮಾತೇನದೆ, ನಾನು ಪ್ರಬುದ್ಧನಿರಲಿಕ್ಕೆ ಕೃಷ್ಣಗೆ ನನ್ನ ತಂಗಿ ಕೊಡೋಹಾಂಗಿಲ್ಲ. ಶಿಶುಪಾಲಗೇ ಮದುವಿ ಮಾಡಿಕೊಟ್ಟೇನು.' ಹೀಂಗನಲಿಕ್ಕೆ, 'ಕೃಷ್ಣ ಕಪಟತನದಲ್ಲಿ ಬಂದು ವಿಘ್ನ ಉಚರಿಸ್ಯಾನಲ್ಲ' ಎಂದರೆ,

'ಕೃಷ್ಣನ ಕೊಂದು ರುಕ್ಮಿಣೀ ಮದುವಿ ಮಾಡಬೇಕು' ಎಂದು ಸಾಲ್ವ ಮಾತ ನಾಡತಿರಲಿಕ್ಕೆ, ಕೃಷ್ಣ ಹ್ಯಾಂಗೆ ಸಾಯತಾನೆಂದರೆ, ಗರ್ಗಾಚಾರ್ಯ ಯಾದವರ ಪುರೋಹಿತ; ನೈಷ್ಠಿಕ ಬ್ರಹ್ಮಚರ್ಯವ್ರತ ಮಾಡಲಿಕ್ಕೆ, ಗರ್ಗಾಚಾರ್ಯನ ಮೈದುನ ಗರ್ಗಾಚಾರ್ಯನ್ನ ಉಪಹಾಸ ಮಾಡಿ ನಕ್ಕನು. 'ಇವಗೆ ಪುರುಷತ್ವ ಇಲ್ಲ. ಸುಮ್ಮಗೆ ಘಟಾಟೋಪ ಮಾಡತಾನೆ' ಎಂದು ಉಪಹಾಸ ಮಾಡಿ ನಕ್ಕನು. ಕೃಷ್ಣಪ್ರೇರಣೆಯಿಂದ ಯಾದವರೆಲ್ಲ ಗರ್ಗಾಚಾರ್ಯನ್ನ ಷಂಡನೆಂದು ನಕ್ಕರು. 'ನನ್ನ ಶಿಷ್ಯರು ನನ್ನ ಷಂಡನೆಂದು ನಕ್ಕರು. ಇದಿಷ್ಟಕ್ಕೂ ಕೃಷ್ಣ ಮೂಲ ಅನರ್ಥ. ಕೃಷ್ಣನೇ ನನ್ನ ಉಪಹಾಸ ಮಾಡ್ಯಾನೆ' ಎಂದು ಕೋಪಾವಿಷ್ಟನಾಗಿ, 'ಪಾಪ ಬಂದರೂ ವ್ಯಭಿಚಾರತನ ಮಾಡೇನು. ನನ್ನ ಸ್ತ್ರೀಯಲ್ಲಿ ನಾನು ಭೋಗ ಮಾಡೋ ಹಾಂಗೆ ಇಲ್ಲ. ಪರಸ್ತ್ರೀಯಲ್ಲಿ ವೀರ್ಯ ಇಟ್ಟು, ನನ್ನ ಪುರುಷತ್ವ ಖರೇ ಮಾಡಿ, ಕೃಷ್ಣನ್ನ ಕೊಲ್ಲೋಂಥ ಮಗನ್ನ ಹಡದೇನು' ಎಂದು ಸಂಕಲ್ಪ ಮಾಡಿಕೊಂಡು, ಯವನದೇಶಕ್ಕೆ ಹೋಗಿ, ಉಕ್ಕಿನ ಪುಡಿ ಮುಕ್ಕಿ, ಒಂದು ವರುಷ ಪರಿಯಂತ ಮಹಾರುದ್ರನ ಕುರಿತು ತಪಸ್ಸು ಮಾಡಲಿಕ್ಕೆ, ಮಹಾರುದ್ರ ಪ್ರತ್ಯಕ್ಷನಾಗಿ 'ಏನು ವರವು ಬೇಡತಿ ಬೇಡೆನಲಿಕ್ಕೆ, 'ಕೃಷ್ಣನ ಕೊಲ್ಲೋ ಅಂಥ ಮಗನ್ನ ಕೊಡು.' ಹೀಂಗೆಂದು ಗರ್ಗಾಚಾರ್ಯ ಕಲಿ ಆವೇಶದಿಂದ ಮಾತನಾಡಲಿಕ್ಕೆ, ಈ ವರ್ತಮಾನ ಯವನದೇಶದ ಅರಸು ಕೇಳಿ, ತನಗೆ ಮಕ್ಕಳಿಲ್ಲದ ಕಾರಣ ಚಿಂತಸ್ತಾ 'ಗರ್ಗಾಚಾರ್ಯ ಮಗನ ದೆಸಿಯಿಂದ ತಪಸ್ಸು ಮಾಡಥಾನೆ. ಈತ ಮಗನ್ನ ಹಡದು ಕೊಟ್ಟಾನು, ಸಾಕಿಕೊಂಡೇನು' ಎಂದು ಸುಂದರ ಗೊಲ್ಲತೀಯರ ಕೈಯ ಪೂಜಾ ಸಾಧನ ದ್ರವ್ಯ, ಕಾಮಭೋಗಕ್ಕೆ ಸಾಧನವಾದಂಥಾದ್ದು ಕಳುಹಿಸಿಕೊಟ್ಟ. ಅವರಿಂದ ಅನೇಕ ಪ್ರಕಾರ ಪೂಜಾ ಆದಮ್ಯಾಲೆ, 'ನಿನಗೆ ದಾವ ಸ್ತ್ರೀ ಭೋಗಕ್ಕೆ ಬೇಕು ಕೇಳಿಕೋ' ಎನಲಿಕ್ಕೆ ಗರ್ಗಾಚಾರ್ಯ, ಅಪ್ಸರಸ್ತ್ರೀ ದಾವ ಸ್ತ್ರೀಯೊಳಗೆ ಹೊಕ್ಕಿದ್ದಳೋ, ಆ ಸ್ತ್ರೀಯಳನ್ನು ಕರದು ಭೋಗ ಮಾಡಲಿಕ್ಕೆ ಕಾಲಯವನ ಹುಟ್ಟಿದನು.

ಗರ್ಗಾಚಾರ್ಯ ವೀರ್ಯ ಇಟ್ಟಮ್ಯಾಲೆ ಬಹಳ ಪಶ್ಚಾತ್ತಾಪಪಟ್ಟು, ತಾನು ಬಹಳೇ ಅಪರಾಧಿ ಎಂದು ಕೃಷ್ಣಗೆ ಮೊರಿ ಹೊಕ್ಕನು. 'ಕೇಳಯ್ಯ ಜರಾಸಂಧ! ಗರ್ಗಾಚಾರ್ಯ ಮೂರ್ಖ ಅಂತಃಕರಣವುಳ್ಳವನಾಗಿ, ಶಿವನ ಪೂಜಿ ಮಾಡಿ, ಪ್ರಬಲ ಮಗನ್ನ ಪಡದ. ಶಿವನ ಪೂಜಿ ಮಾಡೋದು ಬಿಟ್ಟುಕೊಟ್ಟ. ಪುನಃ ಗೋವಳಗೆ ಶರಣುಹೊಕ್ಕ. ನಿರ್ಭಾಗ್ಯ ಗರ್ಗಾಚಾರ್ಯ, ಶಿವನ ಮಹಿಮಿ ಏನು ಬಲ್ಲ! ಶಿವನಲ್ಲಿ ರತಿಯುಳ್ಳ ದಾನವೇಂದ್ರನೇ! ಕಾಲಯವನ ಕೃಷ್ಣನ ಮರ್ದಿಸುವಲ್ಲಿ ಕಾಲ ನಿರೀಕ್ಷ್ವಾ ಮಾಡಥಾನೆ. ಯವನ ಸಾಕಿದ್ದನೆಂದು ಕಾಲಯವನನೆಂದು ಕರಸಿಕೋಥಾನೆ. ನಿನ್ನ ಆಜ್ಞಾ ಆದರೆ, ಕಾಲಯವನನ್ನ ಕರಕೊಂಡು ಬಂದು

ಕೃಷ್ಣನ್ನ ಕೊಲ್ಲಿಸೇನು.' ಹೀಂಗಂತ ಸಾಲ್ವರಾಯ ಮಾತನಾಡಲಿಕ್ಕೆ, ಜರಾಸಂಧ ಮೂರಿ ತಗ್ಗಿಸಿಕೊಂಡು 'ಸಮಸ್ತ ವೀರರೂ ತಮ್ಮ ಕಾರ್ಯ ಸಾಧಿಸಿಕೊಡಿರೆಂದು ನನಗೆ ಶರಣು ಬರುತಿಹೋರು. ಇಂದಿನವರೆಗ್ಯೂ ನಾನು ದಾರಿಗೂ ಶರಣು ಹೊಕ್ಕಿದ್ದಿಲ್ಲ. ಹಾ ಹಾ! ಅದೃಷ್ಟವೇ! ಏನಾಯಿತು ಕಂಡ್ಯ!' ಹೀಂಗಂತ ಜರಾಸಂಧ ಚಿಂತಿಸತಾ ಕುಳಿತಿರಲಿಕ್ಕೆ, ಸಾಲ್ವ ಮಾತನಾಡಥಾನೆ. 'ರಾಯಾ, ಶಿವಭಕ್ತರೊಳಗೆ ನೀನು ಅಗ್ರೇಸರ. ನಾವೆಲ್ಲ ನಿನ್ನ ಶಿಷ್ಯರು. ಕಾಲಯವನ ನಿನ್ನ ಶಿಷ್ಯನಿದ್ದಾನೆ. ಭೃತ್ಯರು ಮಾಡಿದ್ದು ನೀನು ಮಾಡಿಥಾಂಗೆ ಅಲ್ಲೆ? ಕಟ್ಟಿಗೀ ಕಡಿಯಲಿಕ್ಕೆ ಕೊಡಲಿ ಕೊಂಡರೆ, ಕೊಡಲಿ ಬ್ಯಾರೆ ದೊಡ್ಡದಲ್ಲ. ಹಾಂಗೆ ಕಾಲಯವನ ಕರಣಕಾರಕ, ನೀ ಮುಖ್ಯ ಕಾರ್ಯಕಾರಕ. ನಮ್ಮ ಶಿವನ ವರವು ಆದೆ. ಕಾಲಯವನ ಕೃಷ್ಣನಿಗೋಸ್ಕರ ಹುಟ್ಯಾನೆ. ಅವನು ನಿನಕಿಂತ ದೊಡ್ಡವನಲ್ಲ. ನನಗೆ ಆಜ್ಞಾಪಿಸಿದರೆ, ಅತಿವೇಗದಿಂದ ಕಾಲಯವನನ್ನ ಕರಕೊಂಡು ಬರಥೀನಿ.' ಹೀಂಗಂತ ಸಾಲ್ವರಾಯ ಮಾತನಾಡಲಿಕ್ಕೆ, ಜರಾಸಂಧ ಸುಮ್ಮಗಾದ.

ಸಾಲ್ವರಾಯ ತನಗೆ ಅಪ್ಪಣಿ ಆಯಿತೆಂದು ತಿಳಿದು, ವಿಮಾನ ಏರಿಕೊಂಡು, ಚತುರಂಗಸೇನಿಯಿಂದ ಯುಕ್ತನಾಗಿ, ಯವನದೇಶಕ್ಕೆ ಹೋಗಲಿಕ್ಕೆ, ಸಾಲ್ವರಾಯ ಬರಥಾನೆಂದು ವಾರ್ತಿ ಕೇಳಿ, ಎದುರುಗೊಂಡು ಕರಕೊಂಡು ಹೋಗಿ, ಕಾಲಯವನ ಬಹಳ ಪ್ರಕಾರ ಪೂಜಿ ಮಾಡಿದ. ಅನಂತರ ಸಾಲ್ವರಾಯ 'ನಾನು ಜರಾಸಂಧನ ಭೃತ್ಯನಿದ್ದೀನಿ. ನಮ್ಮ ಜರಾಸಂಧ ಹರಿದ್ವೇಷಿಗಳೊಳಗೆ ಮುಖ್ಯನಿದ್ದಾನೆ. ರುದ್ರ ನಮ್ಮ ಸ್ವಾಮಿ. ಜರಾಸಂಧ ನಮ್ಮ ಗುರು.' ಹೀಂಗಂತ ಹೇಳಲಿಕ್ಕೆ, ಜರಾಸಂಧ ದಾವ ದಿಕ್ಕೀಲಿಹಾನೆಂದು ಕೇಳಿ, ಕಾಲಯವನ ಆ ದಿಕ್ಕಿಗೆ ನಮಸ್ಕಾರ ಮಾಡಿ, ಬಂದ ಕಾರಣವೇನೆಂದು ಮಾತನಾಡಿದನು. ಸಾಲ್ವ ಕೃಷ್ಣನ ಅಗ್ಗಳಿಕಿ ಹೇಳಿ, 'ಜರಾಸಂಧ, ಕೃಷ್ಣನ್ನ ಕೊಲ್ಲಲಿಕ್ಕೆ ನಿನ್ನ ಕರೆಕಳುಹಿದ್ದಾನೆ' ಎನಲಿಕ್ಕೆ, ಆಜ್ಞೆ ಶಿರಸಾವಹಿಸಿಕೊಂಡು ಅವಶ್ಯ ಬಂದೇನೆಂದು, ತನ್ನ ಸೇನಾ, ಮೂರು ಕೋಟಿ ಅಕ್ಷೋಹಿಣಿ ಮಹಬ್ಬಲದಿಂದ ಯುಕ್ತನಾಗಿ ಬರಲಿಕ್ಕೆ ಚತುರಂಗ ಸೇನಾ ಇಳಿದ ಸ್ಥಳದಲ್ಲಿ ಮೂತ್ರದಿಂದ ನದೀ ಆಗಿ ಹರಿಯಿತು. ಇನ್ನೂ ಕಲಿಯುಗದಲ್ಲಿ ನದಿ ಹರೀತದೆ. ಅಶುದ್ಧವೆಲ್ಲ ಕಲ್ಲುಗಳಾಗ್ಯಾವೆ. ಹೀಂಗೆ ಪೈಣದ ಮ್ಯಾಲೆ ಪೈಣ ಬರಲಿಕ್ಕೆ, ಇಳ ಇಳದ ಸ್ಥಳದಲ್ಲಿ ಅಶುದ್ಧ, ಮೂತ್ರ ನದಿಯಾಗಿ ಹರಿದರೆ, ಗ್ರಾಮುಗಳೆಲ್ಲ ಹರಹರದು ಲೋಕವಿನಾಶವಾದೀತು ಎಂದು, ಮುಖ್ಯಪ್ರಾಣದೇವರು ಶೋಷಿಸಿಬಿಟ್ಟರು. ಈ ಪ್ರಕಾರ ಕಾಲಯವನ ಬರಥಾನೆಂದು ವಾರ್ತಿ ಕೇಳಿ, ಕಮಲೇಕ್ಷಣ ಬಲರಾಮನ ಕೂಡ ವಿಚಾರ ಮಾಡಿದ. 'ಕಾಲಯವನ ಮಥುರಿಗೆ ಬರಥಾನೆ. ಅವನ ಕೂಡ ಯುದ್ಧಕ್ಕೆ ಹೋದರೆ—ಜರಾಸಂಧ ನಮ್ಮಿಂದ ಸೋತುಹೋಗಿ, ಬಹಳ ಕೋಪಾವಿಷ್ಟನಾಗ್ಯಾನೆ — ಕೋಪದಿಂದ

ಯಾದವರಿಗೆ ಉಪದ್ರವ ಕೊಟ್ಟಾನು. ಇದಕ್ಕೇನು ಉಪಾಯ ಮಾಡಬೇಕು' ಎಂದಲ್ಲಿ, 'ಸ್ವಾಮಿ ನೀನು ಸರ್ವವನ್ನೂ ಬಲ್ಲಿ. ನೀ ಬಲಿಷ್ಠ. ನಾ ಬಲ್ಲೆನೆ! ನಿನ್ನ ಚಿತ್ತಕ್ಕೆ ಹ್ಯಾಂಗೆ ಬರತದೆ, ಹಾಂಗೆ ಮಾಡಲಿಕ್ಕೆ ಅಭಿಜ್ಞನಿದ್ದಿ' ಎಂದು ಬಲರಾಮ ಮೊದಲಾದ ಯಾದವರೆಲ್ಲ ಹೇಳಿಕೊಂಡರು.

ಆಗ್ಗೆ ಸ್ವಾಮಿ ಜಲದುರ್ಗ ನಿರ್ಮಾಣ ಮಾಡಬೇಕೆಂದು, ದೇವತಿಗಳ ಬಡಿಗ್ಯ ವಿಶ್ವಕರ್ಮನ ಕರಸಿ, ಕುಶಸ್ಥಳೀ ನಿರ್ಮಾಣ ಮಾಡಿಸಿದ. ಜನಾರ್ದನನ ಆಜ್ಞೆದಿಂದ ಸಮುದ್ರ ಜಲಶೋಷಣವಾಯಿತು. ಹನ್ನೆರಡು ಯೋಜನ ಉದ್ದ ಅಡ್ಡ ದ್ವಾರಾವತೀ ನಿರ್ಮಾಣ ಮಾಡಿದ. ಶ್ವೇತದ್ವೀಪ, ಕ್ಷೀರಸಾಗರದಲ್ಲಿ ಹ್ಯಾಂಗೆ ಅದೆ, ಹಾಂಗೆ ಲವಣಸಮುದ್ರದೊಳಗೆ, ದ್ವಾರಾವತಿ ನಿರ್ಮಾಣ ಮಾಡಿಸಿದ. ಸುತ್ತು-ಮುತ್ತು ಲವಣೋದಕ, ಸ್ವಾಮಿ ಇಚ್ಛೆಯಿಂದ ಅಮೃತೋದಕವಾಯಿತು. ಪಟ್ಟಣ ನಿರ್ಮಾಣ ಮಾಡಸ್ತಾನೆಂದು ಮುಖ್ಯಪ್ರಾಣದೇವರು, ಸುಧರ್ಮ ಎಂಬ ಸಭಾ-ಮಂಟಪ ತಂದುಕೊಟ್ಟರು, ನಿಕ್ಷೇಪ ದ್ರವ್ಯ ತಂದುಕೊಟ್ಟರು. ಸಮಸ್ತ ಯಾದವರೂ ಸಕಲ ಸಾಮಗ್ರಿಯಿಂದ ಯುಕ್ತರಾಗಿ, ದಾವದಾವ ಕೆಲಸದವ್ಯಾಲೆ ಇದ್ದರು, ಅದೇ ಪ್ರಕಾರದಿಂದ ಆಪತ್ತು ಆಗದಹಾಂಗೆ ಲೀಲಾಮಾತ್ರದಲ್ಲಿ ಸ್ವಾಮೀ ಇಚ್ಛೆ-ಯಿಂದ ಯುಕ್ತರಾಗಿ, ದ್ವಾರಾವತೀಲಿ ಹೋಗಿ ನಿಂತರು. ಪರಚಕ್ರರು ಬಂದರೆ, ತಮ್ಮವರಿಗೆ ಒಂದು ಸ್ಥಳಾಂತರದಲ್ಲಿಡಥಾರೆ. ಹಾಂಗೆ ಒಂದು ನೀತಿ ತೋರಿಸ್ಯಾನೆ. ಮಥುರೆಯಲ್ಲಿ ರಕ್ಷಿಸಲಾರದೆ, ಅಶಕ್ತತನದಲ್ಲಿ ಯಾದವರನ್ನು ಜಲದುರ್ಗದಲ್ಲಿಟ್ಟಾತ ನಲ್ಲ. ಹದಿನಾಲ್ಕು ಲೋಕ ರಕ್ಷಿಸುವಂಥ ಸ್ವಾಮಿ ಯಾದವರನ್ನು ರಕ್ಷಿಸದೇ ಹೋದಾನೆ! ತನ್ನ ಭಕ್ತರನ್ನ ಸರ್ವಾಪತ್ಕಾಲದಲ್ಲಿ ರಕ್ಷಿಸತಾನೆ. ಯಾದವರನ್ನ ರಕ್ಷಿಸಿದ್ದು ಆಶ್ಚರ್ಯವಲ್ಲ.

ಕೃಷ್ಣದೇವರು, ಮೂರು ಕೋಟಿ ಅಕ್ಷೌಹಿಣಿ ಸೇನಾ ತಾ ಒಬ್ಬನೇ ಸಂಹರಿಸೇನೆಂದು, ಸಾಕ್ಷೀಭೂತಕ್ಕೆ ಕೃಷ್ಣಸರ್ಪ ಕೊಡದೊಳಗೆ ಹಾಕಿ ಕಳುಹಿಸಿ-ಕೊಟ್ಟ. ಕಾಲಯವನ ಕೃಷ್ಣನ ಅಭಿಪ್ರಾಯ ತಿಳದು, ಕೊಡದೊಳಗೆಲ್ಲ ಸಣ್ಣ ಇರುವು ತುಂಬಿ, ಕರೇಸರ್ಪ ಸಾಯಗೊಟ್ಟು ಕಳುಹಿಸಿಕೊಟ್ಟ. ನಾವೆಲ್ಲಾ ಕೂಡಿ ಕೊಂದೇವೆಂಬ ಅಭಿಪ್ರಾಯದಿಂದ ಕಳುಹಿಸಿಕೊಟ್ಟನು. ಇದರವ್ಯಾಲೆ ಕಾಲ-ಯವನನ ಪಕ್ಷ ಬಲೀತು. ಸ್ವಾಮೀ ಪಕ್ಷ ಬಿತ್ತು ಎಂತ ತಿಳೀಬಾರದು. ಸ್ವಾಮಿ ಶ್ರೀಕೃಷ್ಣದೇವರು, ಕಾಲಯವನನ ಮೂರು ಕೋಟಿ ಅಕ್ಷೌಹಿಣಿ ಸೇನಾನೆಲ್ಲ ತನ್ನ ಕಾಲಪೆಟ್ಟಿನಿಂದ ಸಂಹಾರ ಮಾಡಿ ಆನಿ, ಕುದರಿ, ಭಂಡಾರ, ಕೋಶ, ಕಾಲ-ಯವನನ ಸೇನಾಸಾಮಗ್ರಿ ಎಷ್ಟು ಇತ್ತು, ಅಷ್ಟೂನೂ ದ್ವಾರಾವತಿಗೆ ಕಳುಹಿದ. ಕಾಲಯವನನು ಕೋಪಾವಿಷ್ಟನಾಗಿ ಶಸ್ತ್ರಾಸ್ತ್ರ ಮುಳಿಗರಿಯಲಿಕ್ಕೆ, ಸ್ವಾಮೀ ಹಸ್ತ-ಪೆಟ್ಟಿನಿಂದ ಬಾಯಿವ್ಯಾಲೆ ಹೊಡಿಸಿಕೊಂಡು, ನಿರಾಯುಧನಾಗಿ ಮೂರ್ಛೆಯಿಂದ ಬಿದ್ದನು.

ಪೂರ್ವದಲ್ಲಿ, ಯೌವನಾಶ್ವರಾಯನ ಪುತ್ರ ಮಾಂಧಾತನ ಮಗ ಮುಚು-ಕುಂದರಾಯ, ದೇವತಿಗಳಿಗೆ ಸಹಕಾರಿಯಾಗಿ ಬಹುಕಾಲ ಯುದ್ಧ ಮಾಡಿದ. ದೈತ್ಯರ ಸೋಲಿಸಿದಕಾರಣ, ದೇವತಿಗಳು ಪ್ರೀತರಾಗಿ ವರವು ಕೊಟ್ಟೇವೆಂದರೆ, ಸ್ವರ್ಗಪದವು ಆಳದೆ, ನಿದ್ರಿ ಬೇಡಿಕೊಂಡ. ' ನನಗೆ ದಾರು ಎಚ್ಚರಿಸ್ಯಾರು ಅವರು, ನನ್ನಿಂದ ಮರಣ ಐದಲಿ.' ಹೀಂಗಂತ ಮುಚುಕುಂದರಾಯ ಬೇಡಿಕೊಳ್ಳಲಿಕ್ಕೆ, ನಿದ್ರಿ ಕೊಟ್ಟರು. ದೇವತಿಗಳು ವರ ವ್ಯರ್ಥವಾಗಬಾರದೆಂದು ನಾರಾಯಣಗೆ ಶರಣು ಹೊಕ್ಕರು. ಮುಚುಕುಂದರಾಯನ ನಿದ್ರಿ ಸಾರ್ಥಕವಾಗಲಿ ಎಂದು ಬೇಡಿ-ಕೊಂಡಿದ್ದರು. ಆದಕಾರಣ ಸ್ವಾಮಿ ಶ್ರೀಕೃಷ್ಣದೇವರು, ತನ್ನ ಭಕ್ತನ ಕೈಯ ಕಾಲಯವನನ್ನ ಕೊಲ್ಲಿಸಬೇಕಾಗಿ, ಕೃಷ್ಣ ಓಡಹೊಕ್ಕ. ಕಾಲಯವನ ಎಚ್ಚರಿಕೆ-ಯುಳ್ಳವನಾಗಿ ಕೃಷ್ಣನ ಬೆನ್ನಟ್ಟಿ ಹೋಗಥಾನೆ. ಪರ್ವತದ ಬಿಲದೊಳಗೆ ಮುಚು-ಕುಂದರಾಯ ಮಲಗಿಕೊಂಡಿದ್ದ. ನನಗೆ ಅಂಜಿ ಕೃಷ್ಣ ಮಲಗಿಕೊಂಡಾನೆಂದು ಕಾಲೀಲೆ ಒದೀಲಿಕ್ಕೆ, ಮುಚುಕುಂದರಾಯ ಕಣ್ಣು ತೆರೆದು ನೋಡಲಿಕ್ಕೆ, ಕಾಲ-ಯವನ ಸುಟ್ಟು ಭಸ್ಮ ಆದನು. ಕಾಲಯವನನ ವಧೆಯಿಂದ ಮುಚುಕುಂದ-ರಾಯಗೆ ಬಹಳ ಪುಣ್ಯ ಬಂತು. ಮುಚುಕುಂದರಾಯ ಮಲಗಿದ್ದರಿಂದ ಕರ್ಮ ಲೋಪ ಆಗಿತ್ತು. ಸ್ವಾಮಿಸೇವಿ ಮಾಡಿ ತುಷ್ಟಿಬಡಿಸಿದ್ದರಿಂದ, ಕರ್ಮಲೋಪದ ಪಾಪ ಮುಚುಕುಂದರಾಯಗೆ ಬರಲಿಲ್ಲ. ಇದಿಷ್ಟೂ ಸ್ವಾಮೀ ಸಾಮರ್ಥ್ಯದಿಂದ —ಮುಚುಕುಂದರಾಯನ ದೃಷ್ಟೀಲಿ ನಿಂತು, ಕಾಲಯವನನ ಸಂಹರಿಸಿ, ಭಕ್ತಗೆ ಯಶಸ್ಸು ತಂದುಕೊಟ್ಟಾನೆ. ಮುಚುಕುಂದರಾಯ ಸ್ವಾಮೀ ಸ್ತೋತ್ರ ಮಾಡ ಥಾನೆ. ' ನೀನು ಜಗಜ್ಜನ್ಮಾದಿಕಾರಣ, ಅಪ್ರಾಕೃತ, ಸ್ವಗತಭೇದವರ್ಜಿತ, ದೋಷ-ದೂರ, ಗುಣಪೂರ್ಣ, ಐಶ್ವರ್ಯಗುಣಸಮುದ್ರ, ಸರ್ವ ಜಗತ್ತು ನಿನ್ನಾಧೀನ, ಜಗತ್ತು ನಿತ್ಯ, ಅಸಾರ. ನೀ ಸರ್ವೇಶ್ವರ, ಸರ್ವರಿಗೆ ಸ್ವಾಮಿ ' ಎಂದು ಸ್ತೋತ್ರ ಮಾಡಿದನು. ಮುಚುಕುಂದಸ್ತುತಿ ಭಾಗವತ ದಶಮಸ್ಕಂಧದಲ್ಲಿ ಹೇಳೀದೆ. ಮುಚುಕುಂದ ಗಂಧಮಾದನ ಪರ್ವತಕ್ಕೆ ಹೋಗಿ ತಪಸ್ಸು ಮಾಡಿ, ದೇಹ-ವಿಯೋಗ ಮಾಡಿ, ಬ್ರಾಹ್ಮಣಜನ್ಮ ಸಂಪಾದಿಸಿದ. ಹರಿಸರ್ವೋತ್ತಮತ್ವಜ್ಞಾನದಿಂದ ಮೋಕ್ಷ ಐದಿದನು.

ಕಾಲಯವನ ಸಾಯಲಿಕ್ಕೆ, ಜರಾಸಂಧ ಬಹಳ ಕೋಪಾವಿಷ್ಟನಾಗಿ ಶಸ್ತ್ರಾಸ್ತ್ರ ಮಳಿಗರೆದನು. ಮತ್ತು ಪರ್ವತ ವೃಕ್ಷಗಳ ಹಾಕತಲೇ ಬಂದ. ಸಮಸ್ತ ರಾಯರನ್ನೂ ಮರ್ದಿಸಿ, ಜರಾಸಂಧನ ಸೋಲಿಸಿ, ಸ್ವಾಮಿ ದ್ವಾರಾವತಿಗೆ ಹೋದನು. ರಾಯರೆಲ್ಲ ಎಚ್ಚರಿಕೆ ಉಳ್ಳವರಾಗಿ, ಕೃಷ್ಣನಂತೂ ದ್ವಾರಾವತಿಗೆ ಹೋದ. ಬಂದದ್ದಕ್ಕೆ ಕಾರ್ಯ ಸಂಪಾದಿಸಿಕೊಂಡು ಹೋಗಬೇಕು. ಅದೇನೆಂದರೆ, ರುಕ್ಮಿಣೀಯನ್ನು ಶಿಶುಪಾಲಗೆ ಮದುವಿ ಮಾಡಿಕೊಡಬೇಕೆಂದು, ಸಮಸ್ತ

ರಾಯರೂ ವಿಳಿತರಾಗಿ ಕುಂಡಿನಾಪಟ್ಟಣಕ್ಕೆ ಬಂದರು. ಇದಕ್ಕೆಲ್ಲ ರುಕ್ಮಿ ಸಹಕಾರಿ; ಭೀಷ್ಮಕರಾಯನ ಲೆಕ್ಕಿಸದೆ, ತನ್ನ ತಂದಿ ಭೀಷ್ಮಕರಾಯನ ವಶ ಮಾಡಿಕೊಂಡು, ರುಕ್ಮಿಣೀಯನ್ನು ಶಿಶುಪಾಲಗೆ ಕೊಡಬೇಕೆಂದು ಉದ್ಯುಕ್ತನಾದ. ಈ ವಾರ್ತಿ ರುಕ್ಮಿಣೀ ಕೇಳಿ, ತನ್ನರಮನಿಗೆ ಬ್ರಾಹ್ಮಣರನ್ನ ಕರದು, ಸ್ವಾಮಿಗೆ ಬಿನ್ನಹಪತ್ರ ಬರೆದು, 'ಸಿಂಹನ ಆಹಾರಕ್ಕೆ ನರಿಗಳು ಸುತ್ತುಗಟ್ಟ್ಯೇವೆ. ನಮ್ಮ ಕುಲಧರ್ಮ—ಅಂಬಿಕಾಗುಡಿಗೆ ಹೊರಗೆ ಬರಥೀನಿ. ನನ್ನ ಕೊಂಡುಹೋಗಬೇಕು' ಎಂದು ವಿಸ್ತಾರ ಪತ್ರ ಬರೆದು, ವಿಪ್ರನ ಕೈಯ ಕಳಿಸಲಿಕ್ಕೆ, ಸ್ವಾಮಿ ರುಕ್ಮಿಣೀಪತ್ರ ಓದಿಕೊಂಡು, ರಥ ಏರಿಕೊಂಡು ಬರಲಿಕ್ಕೆ, ಶ್ರೀಕೃಷ್ಣ ತಾ ಒಬ್ಬನೇ ಹೋಗ ಥಾನೆಂದು, ಬಲರಾಮ ಯಾದವಸೇನಿ ಕೊಂಡುಬಂದನು. ಕೃಷ್ಣ ಬಂದನೆಂದು ಸಮಸ್ತ ರಾಯರೂ ಸನ್ನದ್ಧರಾಗಿಹೋರು. ಲಗ್ನ ಮುನ್ನಾದಿವಸ ಅಂಬಿಕಾಗುಡಿಗೆ, ತಮ್ಮ ಕುಲಧರ್ಮ ಇಹೋದು, ಆದಕಾರಣ ಅಂಬಿಕಾಪೂಜೆ ಮಾಡಿಕೊಂಡು ಬರಲಿಕ್ಕೆ ರುಕ್ಮಿಣೀ ಬರಲಿಕ್ಕಾಗಿ, ಸ್ವಾಮಿ ಸಮಸ್ತ ರಾಯರ ಹಿಂಡಿನೊಳಗೆ ರಥ ಓಡಿಸಿ ರುಕ್ಮಿಣೀ ಕಂಡು, ಸಮಸ್ತ ರಾಯರ ಲೆಕ್ಕಿಸದೆ ಕೊಂಡುಹೋಗಲಿಕ್ಕೆ, ಜರಾಸಂಧ ಮೊದಲಾದ ರಾಯರೆಲ್ಲ ಸ್ವಾಮೀ ಬೆನ್ನಟ್ಟಿ ಹೋದರು.

ಸ್ವಾಮೀಮ್ಯಾಲೆ ಬಾಣ ಮಳಿಗರೆಯುತ ಹೋಗಲಿಕ್ಕೆ, ರುಕ್ಮಿ ಸಾಲ್ವ ಮೊದಲಾದವರು, ಶಸ್ತ್ರಾಸ್ತ್ರಗಳು ಬಾಣಗಳ ಎಸೀತ ಹೋದರು. ಅವರ ಲೆಕ್ಕಿಸದೆ ರಥ ನಡೆಸಿಕೊಂಡುಹೋಗಥಾನೆ. ಅಷ್ಟರೊಳಗೆ ಬಲರಾಮ ಅಡ್ಡ ಬಂದು ಯುದ್ಧಕ್ಕೆ ನಿಂತನು. ಬಲರಾಮ ಶುಕ್ಲಕೇಶಾವೇಶವುಳ್ಳವನಾಗಿ, ಜರಾಸಂಧನ ಮ್ಯಾಲೆ ಗದಾ ಈಡ್ಯಾಡಲಿಕ್ಕೆ, ಜರಾಸಂಧ ಮೂರ್ಛಾಗತನಾಗಿ ಭೂತಳದಲ್ಲಿ ಬಿದ್ದನು. ಅಷ್ಟರೊಳಗೆ ಶಿಶುಪಾಲ ಮದವಣಿಗ್ಯ, ಕೈಗೆ ಕಂಕಣ ಕಟ್ಟಿಕೊಂಡು ಮಹಾ-ಕೋಪಾವಿಷ್ಟನಾಗಿ ಯುದ್ಧಕ್ಕೆ ಬರಲಿಕ್ಕೆ, ಸತ್ಯಕನ ಮಗ ಸಾತ್ಯಕಿಗೆ, ಶಿಶುಪಾಲಗೆ ಭಯಂಕರ ಯುದ್ಧವಾಯಿತು. ಸಾತ್ಯಕಿ ಶಿಶುಪಾಲನ ಸಮಸ್ತ ಭಾರ ತಾಳಲಾರದೆ, ದೊಡ್ಡ ಬಾಣದಿಂದ ಎದಿಗೆ ಹೊಡೆದನು. ಸಮಸ್ತ ಸೇನೀನೆ ಸೋಲಿಸಿ, ಯಾದವ-ಪತಿ ಶ್ರೀಕೃಷ್ಣನ ಸಮೀಪಕ್ಕೆ ಹೋಗಥಾನೆ. ಸ್ವಾಮಿ ರುಕ್ಮಿಯ ಕೂಡ ಯುದ್ಧ ಮಾಡಥಾನೆ. ರುಕ್ಮಿಯ ಬಳಿವಿಡಿದು ಏಕಲವ್ಯ ಹೋಗಿದ್ದನು. ಸ್ವಾಮಿ, ಬೆನ್ನಟ್ಟಿ ಬರಥಾರೆಂದು ತಿಳದು ಹಿಂದಕ್ಕೆ ತಿರುಗಿ—ರುಕ್ಮಿಯ ಕೂಡ ಮೂರು ಅಕ್ಷೋಹಿಣಿ ಸೇನಾ ಒಂದಿತ್ತು—ಅಷ್ಟೂ ಸೇನಾ ಸಂಹಾರ ಮಾಡಿ, ಏಕಲವ್ಯನ ಧನುರ್ಬಾಣ ಛೇದಿಸಿಬಿಟ್ಟ. ಸಾರಥಿ ಸತ್ತುಹೋದ. ಏಕಲವ್ಯನ ಶಿರಚ್ಛೇದನ ಮಾಡ-ಬೇಕೆಂಬೋದರೊಳಗ, ಜೀವ ಉಳಿಸಿಕೊಂಡು ಓಡಿಹೋದ. ಹಾಂಗೆ ದಂತವಕ್ರ ಮೊದಲಾದ ರಾಯರು ಕೃಷ್ಣನಿಂದ ಹೊಡಿಸಿಕೊಂಡು, ಉಳಿದಷ್ಟು ಸೇನಾ ಕೊಂಡು ಹತ್ತೂ ದಿಕ್ಕಿಗೆ ಓಡಿಹೋದರು.

ಭೀಷ್ಮಕರಾಯನ ಮಗ ಶಪಥ ಮಾಡಿ ಬಂದಿದ್ದ. ರಣರಂಗದಲ್ಲಿ ಸತ್ತರೂ ಸತ್ತೇನು,. ಇನ್ನು ಜೀವ ಉಳಿಸಿಕೊಂಡು ರಾಜಧಾನಿಗೆ ಹೋಗೋದಿಲ್ಲೆಂದು ಯುದ್ಧಕ್ಕೆ ನಿಂತನು. ಧನುರ್ಬಾಣ, ರಥ ಛೇದಿಸಿಹೋದವು. ಕುದರಿಗಳು ಸತ್ತವು, ಸಾರಥಿ ಹಾಂಗಾದ. ರುಕ್ಮಿ ವಿರಥನಾಗಿ ಖಡ್ಗಚರ್ಮ ಹಿಡಕೊಂಡು, ಕೃಷ್ಣನ ಕಡಿದೇನೆಂದು ರಥದೊಳಗೆ ಹೊಕ್ಕನು. ಸ್ವಾಮಿ ರುಕ್ಮಿಯ ಖಡ್ಗಚರ್ಮ ಕಸಕೊಂಡನು. ಸಮೀಪದಲ್ಲಿ ಬಂದಾತಗೆ ಚಿಕ್ಕ ಬಾಣಗಳಿಂದ ಹೊಡೀಲಿಕ್ಕೆ, ರುಕ್ಮಿ ನಿರಾಯುಧನಾದ. ಸ್ವಾಮಿ ತನ್ನ ಮೈದುನನ ಸೆರಿ ಹಿಡಿದು, ಶಿರಚ್ಛೇದನ ಮಾಡಲಿಕ್ಕೆ ಉದ್ಯುಕ್ತನಾದ. ಗಂಡನ ಅಭಿಪ್ರಾಯ ತಿಳಿದು, ರುಕ್ಮಿಣೀ ಗಂಡನ್ನ ಬೇಡಿಕೊಂಡಳು. 'ನಮ್ಮ ತಂದಿತಾಯೇರಿಗೆ ಮುಪ್ಪಿನ ಕಾಲದಲ್ಲಿ ಶೋಕವಾಗ ಬಾರದು, ಇದರ ಹೊರ್ತು ವಿವಾಹಕಾಲದಲ್ಲಿ ಅಶುಭವಾಗಬಾರದು' ಎಂದು, ಗಂಡನ ಚಿತ್ತಾಭಿಪ್ರಾಯ ಬಲ್ಲಾಕೆಯಾದ ಕಾರಣ ಹೇಳಿಕೊಳ್ಳಲಿಕ್ಕೆ, ಹೆಂಡತಿ ಮಾತು ಕೇಳಿದನೆಂಬ ಅಭಿಪ್ರಾಯದಿಂದ, ರುಕ್ಮಿಗೆ <u>ಪಂಚಮುಂಡನ</u> ಮಾಡಿ ರಥದಿಂದ ಕೆಳಗೆ ಕೆಡಹಾಕಿದನು. ಜಗತ್ತಿಗೆ ತಂದಿತಾಯಿ ಆದಂಥ ಸ್ವಾಮಿ, ಈತಗೆ ಮತ್ತೊಬ್ಬರು ಸರಿಯುಂಟೆ! ಸ್ವಾಮಿ, ರುಕ್ಮಿಣೀ ಕೂಡಿಕೊಂಡು ದ್ವಾರಾವತಿಗೆ ಹೋದನು. ರುಕ್ಮಿ ಪಂಚಚೂಡನಾಗಿ ಮೂರ್ಛೆಯಿಂದ ಭೂತಳದಲ್ಲಿ ಬಿದ್ದಿರುವ. ಮೂರ್ಛೆ ತಿಳಿದವ್ಯಾಲೆ, ಇನ್ನು ಲೋಕಕ್ಕೆ ನಾನು ಏನು ಮಾರಿ ತೋರಿಸಲೆಂದು, ಮಹಾರುದ್ರನ ಸಮೀಪಕ್ಕೆ ಹೋಗಿ ತಪಸ್ಸು ಮಾಡಹೊಕ್ಕನು.

ಶ್ರೀಕೃಷ್ಣ ದ್ವಾರಾವತಿಗೆ ಬಂದು, ಒಂದು ಸುಮುಹೂರ್ತದಲ್ಲಿ ರುಕ್ಮಿಣೀ ಲಗ್ನ ಮಾಡಿಕೊಂಡನು. ರುಕ್ಮಿಣೀ ಮದುವಿ ಆಗದಕಿಂತ <u>ಮೊದಲೇ ಬಲರಾಮಗೆ ಮದುವಿ ಆಗಿತ್ತು</u>. ಮದುವಿ ಪ್ರಕರಣ ಹೇಳಥಾರೆ. ವಾರುಣೀದೇವಿ <u>ರೇವತಿ</u> ಎಂಬ ನಾಮವುಳ್ಳಾಕೆಯಾಗಿ, <u>ಕಕುದ್ಮರಾಯನಲ್ಲಿ</u> ಹುಟ್ಯಾಳೆ. ಕಕುದ್ಮರಾಯನ ತಂದೀ ಹೆಸರು <u>ರೈವತರಾಯನೆಂದು</u> ಇಹೋದು. ಬ್ರಹ್ಮದೇವರ ವರಬಲದಿಂದ ಸತ್ಯ-ಲೋಕಕ್ಕೆ ಹೋಗಿಬರತಿಹ. ತನ್ನ ಮಗಳು ವಾರುಣೀದೇವಿಗೆ ನಿಜಪತಿ ಕೇಳ-ಬೇಕಾಗಿ, ತನ್ನ ಮಗಳ ಕೂಡಿಕೊಂಡು ಬ್ರಹ್ಮಲೋಕಕ್ಕೆ ಹೋದ. ಆ ವ್ಯಾಳ್ಯಾದಲ್ಲಿ ಗಂಧರ್ವರು ಗಾಯನ ಮಾಡತಿಹೋರು. ದೇವಗಾಯನ ಮನುಷ್ಯರು ಕೇಳಲಿಕ್ಕೆ ಅರ್ಹರಲ್ಲ. ಆದಕಾರಣ <u>ತಂದೀಮಗಳು ಮೂರ್ಛಾಗತರಾಗಿ ಬಿದ್ದರು</u>. ವೈವಸ್ವತ-ಮನುವು ಮೊದಲಾದ <u>ಪ್ರಥಮ ಮಹಾಯುಗದ ಕೃತಯುಗದಲ್ಲಿ</u> ಹೋದವರು ಮೂರ್ಛೆಯುಳ್ಳವರಾಗಲಿಕ್ಕೆ, <u>ಇಪ್ಪತ್ತೇಳು ಮಹಾಯುಗಗಳು ಹೋದವು</u>. ಬ್ರಹ್ಮ-ರಾಯ ರೈವತರಾಯನ್ನ ಎಚ್ಚರಿಸಿ, 'ಏನುಕಾರಣ ಮಗಳ ಕೂಡಿಕೊಂಡು ಬಂದಿದ್ದೀ?' ಎಂದು ಕೇಳಲಿಕ್ಕೆ, 'ನನ್ನ ಮಗಳು ಸುಂದರಳಿದ್ದಾಳೆ. ದಾರಿಗೆ ಮದುವಿ ಮಾಡಿಕೊಡಲಿ' ಎಂದು ಕೇಳಿದ. ರಾಯರ ಹೆಸರು ಕೋ ಎನಲಿಕ್ಕೆ

ಸಮಸ್ತ ರಾಯರನ್ನೂ ಹೆಸರುಗೊಂಡ. ಬ್ರಹ್ಮರಾಯ ಮುಗುಳುನಗೆ ನಕ್ಕು, 'ಆಂದಿನ ರಾಯರೆಲ್ಲ ಸತ್ತುಹೋದರು. ಈಗ ಕೃಷ್ಣನ ಅಣ್ಣ ಬಲರಾಮನೆಂಬಾತ ಯಾದವಕುಲದಲ್ಲಿ ಹುಟ್ಟ್ಯಾನೆ. ಆತಗೆ ನಿನ್ನ ಮಗಳನ್ನ ಮದುವಿ ಮಾಡಿಕೊಡು' ಎಂದನು. ರೈವತರಾಯ ತನ್ನ ರಾಜ್ಯಕ್ಕೆ ಬರಥಾನೆ. ಐಶ್ವರ್ಯವೇನೂ ಇಲ್ಲ. ಈ ಭೂಮಿ ದಾರಿಗೆ ದಾರೋ ಆಳಥಾರೆ! ತಾನು ಪೃಥವು ಕೃತಯುಗದಾತ. ಈಗ ಇಪ್ಪತ್ತೈಂಟನೇ ಮಹಾಯುಗ ದ್ವಾಪರ. ಈ ಯುಗದಲ್ಲಿ ಕೃಷ್ಣನ ಕುತೂಹಲ ಕಂಡು ಬಹಳಾಶ್ಚರ್ಯ ಉಳ್ಳವನಾಗಿ, ತನ್ನ ಮಗಳ ಬಲರಾಮಗೆ ಮದುವಿ ಮಾಡಿಕೊಟ್ಟನು. ಅನಂತರ ಗಂಧಮಾದನ ಪರ್ವತಕ್ಕೆ ಹೋಗಿ, ಕೇಶವನ ಸಾರೂಪ್ಯ ಐದಿದನು. ಬಲರಾಮ ತಾ ಯುಗಾನುಸಾರ ಚಿಕ್ಕಾತ, ರೇವತೀ ಬಹಳೇ ಉದ್ದಾದಕಾರಣ, ತನ್ನ ಹೆಂಡತೀ ಕೊಂಕಳಿಗೆ ನೇಗಲ ಹಾಕಿ ಒತ್ತಿ, ತನ್ನ ಹವಣಿಗೆ ಹೆಂಡತಿ ಮಾಡಿಕೊಂಡನು. ಬಲರಾಮ ರೇವತಿಯಲ್ಲಿ ಕ್ರೀಡಿಸಿ ಶಠ, ಉಲ್ಮುಕ ಇಬ್ಬರು ಮಕ್ಕಳನ್ನು ಹಡದನು: ಶಠ ಉಲ್ಮುಕ ದಾರೆಂದರೆ, ಆದಿತ್ಯ ಪರ್ಜನ್ಯನೆಂಬೋ ಆದಿತ್ಯರು, ಶಠ-ಉಲ್ಮುಕರಾಗಿ ಹುಟ್ಯಾರೆ.

ಸ್ವಾಮಿ ಶ್ರೀಕೃಷ್ಣ, ದ್ವಾರಾವತಿಗೆ ರುಕ್ಮಿಣೀ ಕೊಂಡುಹೋಗಿ, ಸು-ಮುಹೂರ್ತ ಲಗ್ನ ತೆಗೆದು, ಮಹೋತ್ಸಾಹದಿಂದ ಮದುವಿ ಮಾಡಿಕೊಂಡನು. ಬ್ರಹ್ಮಾದಿ ದೇವತಿಗಳು ತಾಯಿತಂದೇರ ಮದುವಿ ನೋಡಬೇಕಾಗಿ, ರೂಪಗಳ ಧರಿಸಿಕೊಂಡು ಸೇವಿ ಮಾಡತಿಹೋರು. ಮುನಿಗಳು, ಋಷಿಗಳು, ಪಾಂಡವರು, ದೇವಾಂಶರಾಯರು ಸ್ವಾಮೀ ವಿವಾಹ ನೋಡಲಿಕ್ಕೆ ಬಂದರು. ಲಕ್ಷ್ಮೀ-ನಾರಾಯಣರು ಮಹಾ ಸುಂದರರು. ಹದಿನಾಲ್ಕು ಲೋಕಕ್ಕೆ ತಮ್ಮ ಕಾಂತಿಯಿಂದ ಬೆಳಕು ಮಾಡತಿಹೋರು. ಇಂಥಾ ಯಾದವಪತಿ ಶ್ರೀಕೃಷ್ಣ ರುಕ್ಮಿಣೀ ಕೂಡ ರಮಿಸಿ, ನಾನಾ ಕ್ರೀಡಿಗಳು ಮಾಡಿ, ಪುತ್ರೋತ್ಪಾದನ ಮಾಡಿದನು. ಪ್ರದ್ಯುಮ್ನ-ನಾಮಕ ನಾರಾಯಣನ ಆವೇಶದಿಂದ, ಕಾಮದೇವನೇವೆ ಪ್ರದ್ಯುಮ್ನನಾಗಿ ಹುಟ್ಟಿದನು. ಪ್ರದ್ಯುಮ್ನ ಹುಟ್ಟುದಕಿಂತ ಮೊದಲೇ, ನಾರದ ಶಂಬರಾಸುರಗೆ, ನಿನ್ನ ವೈರಿ ರುಕ್ಮಿಣೀ ಉದರದಲ್ಲ ಹುಟ್ಟಥಾನೆ' ಎಂದು ಹೇಳಿದ್ದ. ಪ್ರದ್ಯುಮ್ನ ಹುಟ್ಟಿದವ್ಯಾಲೆ ಪುನಃ ಶಂಬರಾಸುರಗೆ ಹೇಳಿದನು. ತನ್ನ ವೈರೀನ್ನ ಕೊಲ್ಲ-ಬೇಕೆಂದು, ಆಕಾಶಮಾರ್ಗದಿಂದ ದ್ವಾರಾವತಿಗೆ ಇಳದು ಬಾಲಕನ ತೆಗೆದು-ಕೊಂಡನು. ಕೂಸಿನ್ನ ಏನು ಕೊಲ್ಲಬೇಕೆಂದು ಸಮುದ್ರದೊಳಗೆ ಈಡ್ಯಾಡಿದನು. ಪ್ರದ್ಯುಮ್ನನ್ನ ಮೀನ ನುಂಗಿತು. ಆ ಮೀನ ಜಾಲಗಾರನ ಕೈಲಿ ಸಿಗಲಾಗಿ, ಶಂಬರಾಸುರಗೆ ತಂದುಕೊಟ್ಟನು. ಶಂಬರಾಸುರನ ಆಜ್ಞಾದ ಮ್ಯಾಲೆ ಪಾಕ ಮಾಡುವವರ ಕಡಿ ಕೊಟ್ಟರು. ಪಾಕ ಮಾಡುವವರು ಆ ಮೀನ ಕೊರೆದು ನೋಡಥಾರೆ. ಆ ಮೀನದ ಹೊಟ್ಟೀಯಲ್ಲಿ ಬಾಲಕನ ಕಂಡು, ಬಹಳ ಆಶ್ಚರ್ಯ

ಉಳ್ಳವರಾಗಿ ಶಂಬರಾಸುರಗೆ ಒಯ್ದು ತೋರಿಸಿದರು. ಶಂಬರಾಸುರ ಬಾಲಕನ್ನ ಕಂಡು ತನ್ನ ಭೋಗದ ಹೆಂಡತಿ ರತೀ ಕೈಲಿ ಕೊಟ್ಟನು.

ಕಾಮನ ಹೆಂಡತಿ ರತೀನ್ನ ಶಂಬರಾಸುರ ಭೋಗ ಮಾಡಲಿಕ್ಕೆ ಕಾರಣವೇನೆಂದರೆ, ಬ್ರಹ್ಮದೇವರಿಂದ ಶಾಪವಾಗಿತ್ತು. ಶಾಪವಾಗಲಿಕ್ಕೆ ನಿಮಿತ್ತವೇನೆಂದಲ್ಲಿ ಕಾಮ, ರುದ್ರನ ಕಣ್ಣಿನಿಂದ ಸುಟ್ಟು ಸತ್ತ. ರತೀ, ಗಂಡ ಸತ್ತ ದುಃಖದಿಂದ ತಪಸ್ಸು ಮಾಡತಿಹೋಳು. ಆಶೂನ್ಯಶಯನವ್ರತ ಮಾಡತಿಹೋಳು. ಶಂಬರಾಸುರ ವೈಹಾಳಿಯಿಂದ ಹೋಗಲಿಕ್ಕೆ, ಸುಂದರಸ್ತ್ರೀ ಕಂಡು ಭೋಗಿಸಬೇಕೆಂದುಕೊಂಡು ಬಂದ. ತನ್ನಲ್ಲಿ ಭೋಗಸ್ತ್ರೀ ಮಾಡಿಕೊಂಡು ಇಟ್ಟುಕೊಂಡಿದ್ದನು. ದೇವತಾಸ್ತ್ರೀಗೆ ಅಸುರಭೋಗವಾಗಲಿಕ್ಕೆ ಕಾರಣವೇನೆಂದರೆ, ಬ್ರಹ್ಮರಾಯ ಮುನಿಗಳಿಗೆ ಆಖ್ಯಾನ ಹೇಳತಿದ್ದ. ಅದರೊಳಗೆ ಪಂಚದ್ರೌಪದೀ ಆಖ್ಯಾನ ಬಂತು. ದ್ರೌಪದೀಗೆ ಐದು ಮುಂದಿ ಗಂಡಂದಿರು ಹ್ಯಾಂಗಾದರೆಂದು ರತೀ—ದೇವತಾಕಾರ್ಯವೆಂದು ಸುಮ್ಮಗೆ ಇರಬೇಕು, ಇರಲಿಲ್ಲ. ಜಗತ್ತಿಗೆ ಗುರುವು ಬ್ರಹ್ಮರಾಯನು ಹೇಳಥಾನೆಂದು —ದೊಡ್ಡವರಿಗೆ ನಕ್ಕಳು. ಆದಕಾರಣ ಬ್ರಹ್ಮರಾಯನ ಶಾಪವಾಯಿತು. ಅಸುರನ ಸಂಭೋಗವಾಗಲೀ ಎಂದು ಶಾಪವಾದ ಕಾರಣ, ಶಂಬರಾಸುರ ಹಿಡಕೊಂಡು ಒಯ್ದಿದ್ದ. ದೇವತಾದೇಹಕ್ಕೆ ಅಸುರಸಂಪರ್ಕ ಆಗಬಾರದೆಂದು, ಮತ್ತೊಂದು ದೇಹನಿರ್ಮಾಣ ಮಾಡಿಕೊಂಡು, ನಿತ್ಯ ಶಂಬರಾಸುರನ ಭೋಗಿಸೋಳು.

ಹೀಂಗಿರಲಿಕ್ಕೆ, ಕಾಮನೇ ಪ್ರದ್ಯುಮ್ನನಾಗಿ ಹುಟ್ಯಾನೆ. ಮೂಲದೇವತಿ ಆದಕಾರಣ ಗಂಡನೆಂಬೋದು ಬಲ್ಲಳು. ಮೀನದ ಹೊಟ್ಟೀಲಿಂದ ಹೊರಟಂಥ ಬಾಲಕನನ್ನು, ಶಂಬರಾಸುರ ರತೀ ಕೈಲಿ ಸಾಕಲಿಕ್ಕೆ ಕೊಟ್ಟಿದ್ದ. ರತೀ ಮಗನಪ್ಪಂತೆ ರಸಾಯನ ದ್ರವ್ಯದಿಂದ ಬೆಳಸತಿಹೋಳು. ನಾಲ್ಕು ವರುಷದ ಬಾಲಕ, ಷೋಡಶವರುಷದ ಪ್ರಾಯದವನೋಪಾದಿ ತೋರತಿಹ. ಗಂಡಗೆ ಹಾವಭಾವ ವಿಲಾಸಗಳು ತೋರಿಸಹೊಕ್ಕಳು. ಆ ಕಾಲದಲ್ಲಿ ಪ್ರದ್ಯುಮ್ನ ಮಾತನಾಡಥಾನೆ. 'ಎಲೌ ಅಮ್ಮ! ನಾನು ನಿನ್ನ ಮಗನಿದ್ದೀನಿ. ಇಂಥಾ ಕುಚೇಷ್ಟೆ ಏನುಕಾರಣ ಮಾಡಥಿ?' ಎನಲಿಕ್ಕೆ, ರತೀದೇವಿ ಮೂಲದೇವತಿ ಆದಕಾರಣ, ಮೂಲಾರಂಭ ಕಥ ತನ್ನ ಗಂಡನಗೋಸ್ಕರ ಹೇಳಿದಳು. 'ನೀ ಕಾಮನಿದ್ದಿ. ದೇವತಾಕಾರ್ಯಗೋಸ್ಕರ, ಮಹಾರುದ್ರನ ತಪಸ್ಸಿಗೆ ವಿಘ್ನ ಆಚರಿಸಿದ ಕಾರಣ, ರುದ್ರನ ಕಣ್ಣಿನಿಂದ ಸುಟ್ಟು ಸತ್ತಿ. ತರುವಾಯ ಮಹಾರುದ್ರನ ಮಗ ಷಣ್ಮುಖನಾಗಿ ಹುಟ್ಟಿದ್ದಿ. ಅದರ ತರುವಾಯ ಈ ಜನ್ಮದಲ್ಲಿ, ಕೃಷ್ಣನ ದೆಸಿಯಿಂದ ರುಕ್ಮಿಣೀ ಉದರದಲ್ಲಿ ಜನಿಸಿದ್ದಿ. ಶಂಬರಾಸುರ ತನ್ನ ವೈರಿ ಎಂದು, ನಿನ್ನ ತೆಗೆದುಕೊಂಡು ಬಂದು, ಸಮುದ್ರ ದೊಳಗೆ ಈಡ್ಯಾಡಲಿಕ್ಕೆ, ಮೀನ ನುಂಗಿತು. ಮೀನ ಹಿಡಿಯೋವರು ತಂದು, ಗರ್ಭಿಣಿ ಮೀನ ಎಂದು ಶಂಬರಾಸುರಗೆ ಕೊಟ್ಟರು. ಶಂಬರಾಸುರ ಮೀನ ಕೊರದು

ನೋಡಲಿಕ್ಕೆ, ನಿನ್ನ ಕಂಡು ನನ್ನ ಕೈಲಿ ಸಾಕಲಿಕ್ಕೆ ಕೊಟ್ಟ. ನೀನು ನನ್ನ ಗಂಡ, ನಾನು ನಿನ್ನ ಹೆಂಡತಿ' ಎಂದು ಮೂಲಾರಂಭ ಕಥ ಹೇಳಿ, ಇನ್ನು ತನ್ನ ಗಂಡ ಜಯಶೀಲನಾಗಬೇಕು, ಶಂಬರಾಸುರನ ಗೆಲ್ಲೋ ಸಾಮರ್ಥಿ ಗಂಡಗೆ ಬರಬೇಕೆಂದು —ಪರಶುರಾಮನ ಕೈಯ ಮಂತ್ರ ಕಲಿತಿದ್ದಳು—ಶಸ್ತ್ರಾಸ್ತ್ರ ಮಂತ್ರಗಳನ್ನೆಲ್ಲ ತನ್ನ ಗಂಡಗೆ ಕಲಿಸಿದಳು. ಪ್ರದ್ಯುಮ್ನನ ಕೂಡ ರತೀದೇವಿ ರಮಿಸತಿಹೋಳು. ಶಂಬರಾಸುರ ನಿತ್ಯ ಪ್ರತಿಭೋಗಕ್ಕೆ ಕರೆದರೆ ಹೋಗಳು. ಹೋಗದಕಾರಣ ಶಂಬರಾಸುರ, ಕುಮಾರನ ಕೂಡ ಭೋಗಸ್ಥಾಳೆಂದು, ಪ್ರದ್ಯುಮ್ನನ ಕೂಡ ಯುದ್ಧಕ್ಕೆ ನಿಂತು, ಶಸ್ತ್ರಾಸ್ತ್ರ ಮಳಿಗರೆಯುತ್ತ ಬಂದನು. ಪ್ರದ್ಯುಮ್ನನ ಯುದ್ಧ-ಸಾಮರ್ಥಿ ಕಂಡು, ಶಂಬರಾಸುರ ಎದುರಿಗೆ ನಿಂದರಲಾರದೆ, ಮಾಯಾದಿಂದ ಆಕಾಶಮಾರ್ಗದಿಂದ ಪರ್ವತಗಳ ಕಡಹತಿಹ. ರತೀದೇವಿ ಕಲಿಸಿದ ವಿದ್ಯಾ-ಸಾಮರ್ಥಿಯಿಂದ, ಶಂಬರಾಸುರನ ಕೊಂದು ಬಿಷ್ಟನು.

ಪ್ರದ್ಯುಮ್ನ ತನ್ನ ಪತ್ನಿ ರತೀ ಕೂಡಿಕೊಂಡು, ತಮ್ಮ ತಾಯಿತಂದೇರ ಮನಿಗೆ ಆಕಾಶಮಾರ್ಗದಿಂದ ಬರಥಾನೆ. ಅಷ್ಟರೊಳಗೆ ನಾರದ ಹೋಗಿ ರುಕ್ಮಿಣೀ-ಕೃಷ್ಣರಿಗೆ ಸಮಾಚಾರ ಹೇಳಿದ. 'ನಿಮ್ಮ ಮಗ ಸೊಸಿ ಬರಥಾರೆ' ಎಂದು ಹೇಳಲಿಕ್ಕೆ, ಜಗತ್ತಿಗೆ ತಾಯಿತಂದೇರು ಸಕಲವನ್ನೂ ಬಲ್ಲರೂ ಸರಿಯೆ, ಮನುಷ್ಯ-ಸ್ವಭಾವ ತೋರಿಸಿ, 'ನಮಗೆ ಎಲ್ಲೀ ಸೊಸಿ! ನಾರದ ಪರಿಹಾಸ ಮಾಡಿ ಮಾತ. ನಾಡಥಾನೆ' ಎಂತ ಮಗನ್ನ ನೆನಿಸಿ, ದುಃಖಸ್ವಭಾವ ತೋರಿಸಿ, ದೇವರ್ಷಿ ನಾರದ ಹುಸಿ ಆಡಲಿಕ್ಕಿಲ್ಲೆಂದು, ಜನಾರ್ದನ ತನ್ನ ಹೆಂಡತಿ ಕೂಡಿಕೊಂಡು, ವಸುದೇವ, ದೇವಕೀ, ಯಾದವ ಬಲಸಹಿತ ಎದುರುಗೊಳ್ಳಲಿಕ್ಕೆ ಹೋಗಿ, ಮಗ ಸೊಸೀನ್ನ ಅಪ್ಪಿಕೊಂಡ. ವಸುದೇವ, ಮೊಮ್ಮಗ ಮೊಮ್ಮಗಳು ಸತ್ತು ಬದುಕಿ ಬಂದರೆಂದು ಮೊಮ್ಮಕ್ಕಳನ್ನು ಲಾಲಿಸಿದನು.

ಪ್ರದ್ಯುಮ್ನ ಬಾರದಕಿಂತ ಮೊದಲೆ ಶ್ರೀಕೃಷ್ಣ ಸತ್ಯಭಾಮಾ ಮದುವಿ ಮಾಡಿಕೊಂಡ್ಯಾನೆ. ಸತ್ಯಭಾಮಾ ತಂದಿ ಸತ್ರಾಜಿತರಾಯ ಸೂರ್ಯನ ಆರಾಧನಿ ಮಾಡಿ, ಶ್ಯಮಂತಕಮಣಿ ಸಂಪಾದಿಸಿದ್ದ. ಸತ್ರಾಜಿತರಾಯ ದೇವರಲ್ಲಿ ಭಕ್ತಿ-ಯುಳ್ಳವನಾದರೂ, ಬಹಳೇ ಲೋಭಿ. ಇವನ ಲೋಭಿತ್ವ ಹದಿನಾಲ್ಕು ಲೋಕಕ್ಕೆ ತೋರಿಸಬೇಕಾಗಿ, ತಾ ಪೃಥ್ವೀಪತಿ, ಹದಿನಾಲ್ಕು ಲೋಕದಲ್ಲಿದ್ದಂಥ ಯಾವತ್ತೂ ಪದಾರ್ಥ ತನ್ನದಾದರೂ, ಶ್ಯಮಂತಕ ಕೊಡೆಂದು ಕೃಷ್ಣದೇವರು ಸತ್ರಾಜಿತ ರಾಯನ್ನ ಬೇಡಿಕೊಂಡ. ಮಂದಭಾಗ್ಯ ಉಳ್ಳವ, ಮಹಾ ಪುರುಷಾರ್ಥ ಅರಿತವನಲ್ಲ. ಸರ್ವೋತ್ತಮ ದೇವತಿ ಬೇಡಥಾನೆ. ಆತನ ವಸ್ತು ಆತಗೆ ಕೊಡಬೇಕು. ಹೀಂಗೆ ಮಾಡದೆ, ರತ್ನ ಕೊಡಲಿಲ್ಲ. ಸತ್ರಾಜಿತರಾಯನ ತಮ್ಮ, ಪ್ರಸೇನರಾಯ, ಶ್ಯಮಂತಕಮಣಿ ಕೊರಳೊಳಗೆ ಹಾಕಿಕೊಂಡು ಮೃಗಬ್ಯಾಟಿಗೆ

ಹೋಗಲಿಕ್ಕೆ, ಸಿಂಹ ಪ್ರಸೇನರಾಯನ ಕೊಂದು ಮಣಿ ತೆಗೆದುಕೊಂಡುಹೋಯಿತು. ಜಾಂಬವಂತ ಸಿಂಹನ ಕೊಂದು, ಮಣಿ ತೆಗೆದುಕೊಂಡು ಹೋಗಿ ತನ್ನ ಬಿಲದಲ್ಲಿ ಕುಮಾರಕನ ತೊಟ್ಟಿಲವ್ಯಾಲೆ ಕಟ್ಟಿಹ. ಇತ್ತ ಕಡಿ ಏನು ವರ್ತಮಾನವೆಂದರೆ, 'ಕೃಷ್ಣ ಶ್ಯಮಂತಕಮಣಿ ಬೇಡಿದ್ದ. ಆದಕಾರಣ ನನ್ನ ತಮ್ಮನ ಕೊಂದು, ರತ್ನ ಕೊಂಡುಹೋಗಿದ್ದಾನೆ' ಎಂದು ಸತ್ರಾಜಿತರಾಯ ಅಪರಾಧ ಹೊರಿಸಿದ. ಈ ವಾರ್ತೆ ಕರ್ಣೋಪಕರ್ಣ ಕೃಷ್ಣದೇವರು ಕೇಳಿ, ಬಂದ ಅಪಕೀರ್ತಿ ಪರಿಹರಿಸಿಕೊಳ್ಳ-ಬೇಕಾಗಿ, ಯಾದವರ ಕೂಡಿಕೊಂಡು ಹೆಜ್ಜೆ ಎತ್ತತಾ ಹೋಗಲಿಕ್ಕೆ, ಪ್ರಸೇನ ಸಿಂಹನಿಂದ ಸತ್ತಾನೆ. ಇದನ್ನು ಕಂಡು ಸಿಂಹನ ಹೆಜ್ಜೆ ಎತ್ತತಾ ಹೋಗಲಿಕ್ಕೆ, ಜಾಂಬವಂತನಿಂದ ಸಿಂಹ ಸತ್ತದೆ. ಕರಡೀ ಹೆಜ್ಜೆ ಎತ್ತತಾ ಹೋಗಲಿಕ್ಕೆ, ಹೆಜ್ಜೆ ಬಿಲದೊಳಗೆ ಹೊಕ್ಕದೆ. ಬಿಲದ್ವಾರದಲ್ಲಿ ಯಾದವರನ್ನೆಲ್ಲ ನಿಂದರಿಸಿ, ಸ್ವಾಮಿ ತಾ ಒಬ್ಬನೇ ಬಿಲದೊಳಗೆ ಹೊಕ್ಕನು. ಸ್ವಾಮಿ ಜಾಂಬವಂತನ ಕೂಡ ಇಪ್ಪತ್ತೆಂಟು ದಿವಸ ಯುದ್ಧ ಮಾಡಿದ. ಭಕ್ತನ ಕೂಡೆ ಮೆಲ್ಲನೆ ಯುದ್ಧ ಮಾಡತಿಹ. ಕಡೀ ದಿವಸ ತಲೀ ವ್ಯಾಲೆ ಪೆಟ್ಟು ಹಾಕಲಿಕ್ಕೆ, ಎಲವುಗಳೆಲ್ಲ ಸಡಲಿದವು. ಬಹಳ ಹಿಟ್ಟು-ಹಿಟ್ಟಾಗಿ, ಜಾಂಬವಂತ ರಾಮನ ಸ್ಮರಣೆ ಮಾಡಲಿಕ್ಕೆ, ಯಾದವಪತಿ ಶ್ರೀಕೃಷ್ಣ ಶ್ರೀರಾಮನಾಗಿ ತೋರಿದ. ತನ್ನ ಕುಲದೇವತ್ಯಕೂಡ ಇಪ್ಪತ್ತೆಂಟು ದಿವಸ ಯುದ್ಧ ಮಾಡಿದೆನೆಂದು ತಿಳಿದು, ಯುಗಧರ್ಮಾವತಾರನಾದಂಥ ಜಾಂಬವಂತ—ಆದಿ-ಸೃಷ್ಟೀಲಿ ಬ್ರಹ್ಮದೇವರ ಸೀನಿನಿಂದ ಹುಟ್ಯಾನೆ—ಸ್ವಾಮೀ ಕಂಡು, ಬಹಳ ಪಶ್ಚಾ-ತ್ತಾಪವುಳ್ಳವನಾಗಿ, ತನ್ನ ಮಗಳು ಜಾಂಬವತೀನ್ನ, ಸ್ವಾಮಿಗೆ ಮದುವಿ ಮಾಡಿಕೊಟ್ಟ. ಶ್ಯಮಂತಕಮಣಿ ವರದಕ್ಷಿಣಿ ಕೊಟ್ಟ. ಸರ್ವಾಪರಾಧ ಕ್ಷಮಿಸ-ಬೇಕೆಂದು ನಮಸ್ಕಾರ ಮಾಡಿದನು. ಜಾಂಬವಂತನ ದೇಹ ಬಹಳ ಜೀರ್ಣ ವಾದದ್ದು, ಸ್ವಾಮಿ ತನ್ನ ಸುದರ್ಶನಚಕ್ರದಿಂದ ದೇಹಕ್ಕೆ ದುಃಖ ಆಗದಹಾಂಗೆ ಛೇದಿಸಿ ತೆಗೆದು, ಪ್ರಾಯದವನೋಪಾದಿ ಮಾಡಿದನು. ಅಚಿಂತ್ಯಮಹಿಮೆಯುಳ್ಳ ಸ್ವಾಮಿ ಜಾಂಬವತೀಯಿಂದ ಕೂಡಿಕೊಂಡು ದ್ವಾರಾವತಿಗೆ ಬಂದನು.

ಯಾದವರೆಲ್ಲ ಬಿಲದ್ವಾರದಲ್ಲಿ ಹನ್ನೆರಡು ದಿವಸ ಮಾರ್ಗ ನೋಡಿ, ಕೃಷ್ಣಗೆ ಏನಾಯಿತೋ ಎಂದು, ಈ ಪಾಪಿ ಸತ್ರಾಜಿತರಾಯ ಸ್ವಾಮೀಮ್ಯಾಲೆ ಕಳವು ಇಟ್ಟ ಎಂದು, ಪಟ್ಟಣಸ್ಥರೆಲ್ಲ ಸತ್ರಾಜಿತರಾಯಗೆ ಶಪಿಸತಿಹೋರು. ಕರಳುಕರಳು ಹಿಂಸಿಸ ತಿಹೋರು. ಸ್ವಾಮಿ ತನ್ನ ಕಳವು ಪರಿಹರಿಸಿಕೊಂಡ. ಸತ್ರಾಜಿತರಾಯಗೆ ಶ್ಯಮಂತಕ ಕೊಟ್ಟ. ಸತ್ರಾಜಿತರಾಯನ ಮಾರಿ ಎಲ್ಲ ಕಪ್ಪಿಟ್ಟಿತು. ಬ್ರಹ್ಮವರ್ಚಸ್ಸು ಹೋಗಿ, ಕಳಾಕಾಂತಿ ಏನೂ ಇಲ್ಲದಾಂಗಾಯಿತು. ಸ್ವಾಮೀಮ್ಯಾಲೆ ಅಪರಾಧ ಹೊರಿಸಿದೆನೆಂದು ಇರಳುಹಗಲು ದುಃಖಿಬಡತಿಹ. ಸತ್ರಾಜಿತರಾಯ ತನ್ನ ಅಪರಾಧ ಕ್ಷಮಿಸಬೇಕಾಗಿ, ತನ್ನ ಮಗಳು ಸತ್ಯಭಾಮಾನ್ನ, ಸಾಕ್ಷಾತ್ ಲಕ್ಷ್ಮೀ ಅವತಾರ—

ರುಕ್ಮಿಣೀ ಸತ್ಯಭಾಮೇರು ಶ್ರೀ ಮತ್ತು ಭೂ ಅವತಾರರು—ಭೂದೇವಿ ಅವತಾರ ಳಾದ ಸತ್ಯಭಾವಾನ್ನ, ಕೃಷ್ಣಗೋಸ್ಕರ ಮದುವಿ ಮಾಡಿಕೊಟ್ಟ, ಶ್ಯಮಂತಕ-ಮಣಿಯನ್ನು ವರದಕ್ಷಿಣೆ ಕೊಟ್ಟನು. ಸ್ವಾಮಿ ಕಮಲೇಕ್ಷಣ ಸತ್ಯಭಾಮಾ ಮದುವಿ ಮಾಡಿಕೊಂಡು, ಶ್ಯಮಂತಕರತ್ನ ತಿರುಗಿ ಕೊಟ್ಟನು. ಶ್ರೀಶನ ಹೆಂಡಿರೊಳಗೆ ರುಕ್ಮಿಣೀಸತ್ಯಭಾಮಾರು ಪರಮ ಸುಂದರಿಯರು. ಹದಿನಾಲ್ಕು ಲೋಕದೊಳಗೆ ಅಸದೃಶ ರೂಪವುಳ್ಳವರು ಇಂಥಾ ಲಕ್ಷ್ಮೀ ಅವತಾರ ಶ್ರೀದೇವಿ, ಭೂದೇವಿ ಕೂಡ, ಜನಾರ್ದನ ಅನೇಕ ಕ್ರೀಡಿಗಳ ಮಾಡಿದನು. ಶ್ರೀಕೃಷ್ಣ ಜಾಂಬವತಿಯಲ್ಲಿ, ಷಣ್ಮುಖನ ಅವತಾರನಾದ ಸಾಂಬನ ಹಡದನು. ಇವನು ಬ್ರಹ್ಮನ ಆವೇಶದಿಂದ ಯುಕ್ತನಾದಂಥಾತ.

ಈ ಪ್ರಕಾರ ಸಮರ್ಥನಾದಂಥ ಶ್ರೀಕೃಷ್ಣನು ಜಗತ್ತು ಶಾಸನ ಮಾಡ-ತಿರಲಿಕ್ಕೆ, ಕದಾಚಿತ್ ಬ್ರಹ್ಮದತ್ತನ ಮಕ್ಕಳು, ಹಂಸ ಡಿಭಿಕರು ದಿಗ್ವಿಜಯ ಮಾಡಿ, ರಾಜಸೂಯ ಯಾಗ ಮಾಡಬೇಕಾಗಿ, ಯಜ್ಞಕ್ಕೆ ಎಷ್ಟು ಲವಣ ಬೇಕು ಅಷ್ಟೂ ಲವಣ ಕೊಂಡು ಬರಹೇಳಿ, ತಮ್ಮ ದೇಶದಲ್ಲಿದ್ದ ಜನಾರ್ದನಭಟ್ಟನ್ನ ದ್ವಾರಾವತಿಗೆ ಕಳುಹಿದರು. ಶ್ರೀಕೃಷ್ಣದೇವರು ಯಾದವರಿಂದ ಯುಕ್ತನಾಗಿ, ಸುಧರ್ಮಸಭಾದಲ್ಲಿ ಕುಳಿಥಾನೆ. ಜನಾರ್ದನಭಟ್ಟ ಹೋಗಿ ಸ್ವಾಮಿಗೆ ಕೈಮುಗಿದು ನಮಸ್ಕಾರ ಮಾಡಿ, ' ಪಾಪಿಗಳು ಹೇಳಿಕಳುಹಿದ ಮಾತು ನನ್ನ ಮುಖದಿಂದ ನಾ ಏನು ಹೇಳಲಿ ! ನೀನು ಅಖಿಲೇಶ್ವರ, ಹದಿನಾಲ್ಕು ಲೋಕಕ್ಕೆ ಅರಸು, ಸಮಸ್ತ ವನ್ನೂ ಬಲ್ಲಿ. ಪಾಪಿಗಳ ಮಾತು ನಾ ಹೇಳಬಾರದು. ಆದರೂ ನಾನು ದುರಾತ್ಮನ ದೇಶದಲ್ಲಿದ್ದ ಕಾರಣ, ಅವನ ದೂತನಾಗಿ ಬಂದೀನಿ. ನಿನ್ನ ಆಜ್ಞವಾದರೆ ಹೇಳೀನು.' ಹೀಂಗಂತ ಜನಾರ್ದನಭಟ್ಟ ಮಾತಾಡತಿರಲಿಕ್ಕೆ, ಕಮಲಲೋಚನ ಬ್ರಾಹ್ಮಣಗೆ ಅಂದ. ' ಎಲೈ ದ್ವಿಜೋತ್ತಮ! ಏನು ಹೇಳಿಕಳುಹಿದ್ದಾರೆ ಅವಶ್ಯ ಹೇಳು. ಆ ಪಾಪ ನಿನಗೆ ಬರಬ್ಯಾಡ.' ಹೀಂಗಂತ ಸ್ವಾಮಿ ಅನಲಿಕ್ಕೆ, " ಬ್ರಹ್ಮದತ್ತನೇ ಸಾಲ್ವ. ಆತಗೆ ಇಬ್ಬರು ಮಕ್ಕಳು. ಶಿವನ ವರಬಲದಿಂದ ಅವಧ್ಯರಾಗ್ಯಾರೆ. ಅವರಿಬ್ಬರೂ ಹಂಸ-ಡಿಭಿಕರು. ಜರಾಸಂಧನ ಶಿಷ್ಯರು. ಅಜೇಯತ್ವ, ಅವಧ್ಯತ್ವ ಸಂಪಾದಿಸಿದ್ದಾರೆ. ಮಹಾರುದ್ರ ಹಂಸ ಡಿಭಿಕರಿಗೆ ಮಹೋದರ, ಕುಂಡಧಾರಿ, ಹೀಂಗೆ ಇಬ್ಬರು ಭೂತಗಳ ಕೊಟ್ಟಾನೆ. ಹಂಸ-ಡಿಭಿಕರು ರಾಯರನೆಲ್ಲ ಕೊಂದು, ಕಪ್ಪ ಕೊಂಡು ದಿಗ್ವಿಜಯ ಮಾಡಿ, ತಮ್ಮ ತಂದಿ ಸಾಲ್ವನ ಕೈಯ ರಾಜಸೂಯಯಾಗ ಮಾಡಿಸ-ಬೇಕೆಂದಿದ್ದಾರೆ. ಜರಾಸಂಧ ತಾ ದೊಡ್ಡ ಅರಸಾದರೂ, ಶಿಷ್ಯರು ಮಾಡಿದ್ದು ತಾ ಮಾಡಿಧಾಂಗಾಯಿತೆಂದು ತಿಳದು, ಶಿಷ್ಯರು ರಾಜಸೂಯಯಾಗ ಮಾಡಿಕೊಳ್ಳಲಿ ಎಂದು ಸುಮ್ಮಗಿದ್ದಾನೆ. ಸಮಸ್ತ ವೈಷ್ಣವ ರಾಯರ ಕೈಯ ಕಪ್ಪ ಕೊಂಡು-ಬಂದಾರೆ. ' ಶ್ರೀಕೃಷ್ಣ ಅರಸಲ್ಲ, ಗೋಪಾಲಕನಿದ್ದಾನೆ. ಸಮುದ್ರತೀರದಲ್ಲಿರಥಾನೆ.

ರಾಜಸೂಯಯಾಗಕ್ಕೆ ಎಷ್ಟು ಲವಣ ಬೇಕಾಗತದೆ, ಅಷ್ಟು ಹಡಗುಗಳ ತೆಗೆದು-ಕೊಂಡು ಬರೋಹಾಂಗ ಹೇಳು' ಹೀಂಗೆ ಹೇಳಿದ್ದಾರೆ." ಈ ಪ್ರಕಾರ ಪಾಪಿಗಳ ಮಾತು ಬ್ರಾಹ್ಮಣಮುಖದಿಂದ ಕೇಳಿ, ಸಮಸ್ತ ಯಾದವರೂ ದೊಡ್ಡನಗೆಯಿಂದ ನಗಹೊಕ್ಕರು. ಶ್ರೀಕೃಷ್ಣ ಸಾತ್ಯಕಿಗೆ ಆಜ್ಞಾಪಿಸಿದ. 'ಈ ಬ್ರಾಹ್ಮಣನ ಸಂಗಡ ಹಂಸ ಡಿಭಿಕರ ಸಮೀಪಕ್ಕೆ ಹೋಗು. ಲವಣ ಕಪ್ಪ ತೆಗೆದುಕೊಂಡು ಏನು ಮಾಡಥೀರಿ, ಯುದ್ಧಕಪ್ಪ ಕೊಡಥೇನೆಂಥಾನೆ. ಶೀಘ್ರ ಪುಷ್ಕರಕ್ಷೇತ್ರಕ್ಕೆ ಮಹರ್ಬಲ ಸಹವಾಗಿ ಬಾ, ಎಂದು ಹೇಳು.' ಸಾತ್ಯಕಿ ಬಲಿಷ್ಠನಾದಕಾರಣ ಹಂಸ ಡಿಭಿಕರ ಲೆಕ್ಕಿಸದೆ, ಸ್ವಾಮೀ ವಚನ ಕೇಳಿ, ಹಂಸ-ಡಿಭಿಕರ ತೃಣಪ್ರಾಯ ಮಾಡಿ, ಅವರನ್ನ ತುಚ್ಛೀಕರಿಸಿ ದ್ವಾರಾವತಿಗೆ ಬಂದನು.

ಇಷ್ಟಾಗದಕಿಂತ ಮೊದಲೇ, ಹಂಸ-ಡಿಭಿಕರು ರುದ್ರಾವತಾರನಾದಂಥ ದೂರ್ವಾಸನ ದ್ರೋಹ ಮಾಡಿದ್ದರು. ದಿಗ್ವಿಜಯಕ್ಕೆ ಹೋಗಿ ರಾಯರ ಕೈಯ ಕಪ್ಪ ಕೊಂಡು ಬರುವಾಗ, ಮಾರ್ಗದಲ್ಲಿ ದೂರ್ವಾಸಋಷಿ, ಮೂರು ಸಾವಿರ ಸನ್ಯಾಸಿಗಳ ಸಹವಾಗಿ ಚಾತುರ್ಮಾಸ್ಯಕ್ಕೆ ಕುಳಿತಿದ್ದನು. ಹಂಸ-ಡಿಭಿಕರು ದಿಗ್ವಿಜಯ ಮಾಡಿ ಬಹಳ ಉನ್ಮತ್ತರಾಗಿ, ದೂರ್ವಾಸ ಮೊದಲಾದ ಮೂರು ಸಾವಿರ ಸನ್ಯಾಸಿಗಳ ಕೌಪೀನ, ಕಾಷಾಯವಸ್ತ್ರ ಕಸಕೊಂಡು, ದಂಡಕಮಂಡಲುಗಳ ಮುರಿ-ಹಟ್ಟಿ, ಸನ್ಯಾಸಿಗಳ ಸಮೀಪದಲ್ಲಿದ್ದ ಸಾಮಗ್ರಿಗಳ ಕಸಕೊಂಡು, ಆಶ್ರಮವೆಲ್ಲ ಕೆಡಹಾಕಿ ಅಶುದ್ಧ, ಮೂತ್ರದಿಂದ ಕೆಡಿಸಿಬಿಟ್ಟರು. ದೂರ್ವಾಸ ಹಂಸ ಡಿಭಿಕರಿಗೆ ತಾ ಶಾಪ ಕೊಟ್ಟಾನು. ಆದರೂ ಮೂಲರುದ್ರನ ವರವಿಹೋದು. ತನ್ನ ಶಾಪ ನಡೇದ ಕಾರಣ ಉನ್ಮತ್ತರ ಹಲ್ಲು ಮುರೀಬೇಕು, ವಿನಾಶ ಮಾಡಬೇಕೆಂದು ಮೂರು ಸಾವಿರ ಸನ್ಯಾಸಿಗಳಿಂದ ಯುಕ್ತನಾಗಿ, ದೂರ್ವಾಸ ದ್ವಾರಾವತಿಗೆ ಬಂದು, ಕೃಷ್ಣನ ಮುಂದೆ ಹಂಸ-ಡಿಭಿಕರ ಅಗ್ಗಳಿಕೆ ಹೇಳಿದನು. 'ಸನ್ಯಾಸಾಶ್ರಮವೆಲ್ಲ ಕೆಟ್ಟುಹೋಗೇದೆ. ಬ್ರಹ್ಮಾದಿಗಳಿಗೆ ಮುಖ್ಯಗುರು ನೀನು. ಆದಕಾರಣ ಸನ್ಯಾಸಾ-ಶ್ರಮ ಕೊಡು' ಎಂದು ಕೇಳಿಕೊಂಡು ಪುನಃ ಸ್ವಾಮಿ ಕೈಯ ಸನ್ಯಾಸಾಶ್ರಮ ಕೊಂಡನು. ಮೂರು ಸಾವಿರ ಸನ್ಯಾಸಿಗಳಿಗೆ ಆಶ್ರಮ, ಕಾಷಾಯವಸ್ತ್ರ, ದಂಡ-ಕಮಂಡಲು ಕೊಡಿಸಿದನು. ಎಲ್ಲರೂ ಸನ್ಯಾಸಾಶ್ರಮ ಉಳ್ಳವರಾದರು. ಅಷ್ಟ-ರೊಳಗೆ ಜನಾರ್ದನಭಟ್ಟ ಬಂದು ಸ್ವಾಮಿ ಮುಂದೆ, 'ಪಾಪಿಗಳು ದುರಾತ್ಮರು ಶಿವನ ಅವತಾರನಾದ ದೂರ್ವಾಸನ ದ್ರೋಹ ಮಾಡಿದ್ದಾರೆ' ಎಂದು ಹೇಳಿದ್ದ.

ಹಂಸ-ಡಿಭಿಕರು ಕೃಷ್ಣನಮ್ಯಾಲೆ ಕೋಪದಿಂದ, ಯುದ್ಧದಲ್ಲಿ ಕೃಷ್ಣನ್ನ ಕೊಲ್ಲಬೇಕೆಂದು ಪುಷ್ಕರಕ್ಷೇತ್ರಕ್ಕೆ ಬಂದರು. ಜರಾಸಂಧ ತನ್ನ ಶಿಷ್ಯರ ವಹಿಸಿ-ಕೊಂಡು ಬರಲಿಲ್ಲ. ವಿಚಕ್ರನೆಂಬೊ ರಾಕ್ಷಸ, ಹಿಡಿಂಬನೆಂಬೋ ರಾಕ್ಷಸ, ಇವರಿಬ್ಬರೂ ಮಹಾರುದ್ರನ ವರಬಲದಿಂದ ಅವಧ್ಯತ್ವ, ಅಜೇಯತ್ವ ಐದಿದ್ದರು.

ಹಂಸ ಡಿಭಿಕರಿಗೆ ಸಹಕಾರಿಗಳಾಗಿ ಬಂದಿಹೋರು. ಹಂಸ-ಡಿಭಿಕರ ಸೈನ್ಯಬಲ ಹತ್ತು ಅಕ್ಷೋಹಿಣಿ. ವಿಚಕ್ರನ ಸೇನಾಬಲ ಒಂದು ಅಕ್ಷೋಹಿಣಿ. ಹೀಂಗೆ ಹದಿನೇಳು ಅಕ್ಷೋಹಿಣಿ ಮಹರ್ಬಲ ಸಹವಾಗಿ ಯುದ್ಧಕ್ಕೆ ಬಂದರು. ಹಂಸ-ಬಲರಾಮರಿಗೆ ಯುದ್ಧ ಆರಂಭವಾಯಿತು. ಡಿಭಿಕ ಸಾತ್ಯಕಿಗೆ ಯುದ್ಧ ಆರಂಭವಾಯಿತು. ಗದನೆಂಬವ ಕೃಷ್ಣನ ತಮ್ಮನಾಗಬೇಕು, ರೋಹಿಣಿಯಲ್ಲಿ ಹುಟ್ಯಾನೆ. ಪೂರ್ವದಲ್ಲಿ ದಾರೆಂದರೆ, ಚಂಡಗಣ ದೇವತಿ. ಸ್ವಾಮಿ ಮೂಲನಾರಾಯಣ ವೈಕುಂಠದಲ್ಲಿ ವೈಹಾಳಿ ಮಾಡಿ ಬರಲಿಕ್ಕೆ, ಸ್ವಾಮೀಗೆ ಈ ಗಣದೇವತಿ ಬುತ್ತಿ ನಿವಾಳಿಸೋನು. ಅಂಥಾ ನಿವಾಳಿಸಿದ ಅನ್ನ ಉಂಡುಕೊಂಡು, ಅಮುಕ್ತಸ್ಥಳದಲ್ಲಿ ಇರತಿಹ. ಆತನೇ ರೋಹಿಣೀ ಉದರದಲ್ಲಿ, ಗದನೆಂಬ ನಾಮದಿಂದ ಹುಟ್ಟಿದ್ದಾನೆ. ಆ ಗದಗೆ ಬ್ರಹ್ಮದತ್ತಗೆ ಯುದ್ಧವಾಯಿತು. ಮೂರು ಅಕ್ಷೋಹಿಣಿ ಯಾದವರ ಕೂಡ ಹಿಡಿಂಬನೆಂಬ ರಾಕ್ಷಸ, ಮಹಾರುದ್ರನ ಎರಡು ಭೂತಗಳು ಯುದ್ಧ ಮಾಡಿದವು. ಕೃಷ್ಣಗೆ ವಿಚಕ್ರಗೆ ಯುದ್ಧವಾಯಿತು. ಸ್ವಾಮೀಮ್ಯಾಲೆ ವಿಚಕ್ರ ಬಾಣದ ಮಳಿಗರೆದನು. ಸ್ವಾಮಿ ಶಾರ್ಙ್ಗಧನುಸ್ಸಿನಿಂದ ವಿಚಕ್ರನ ಬಾಣಗಳೆಲ್ಲ ತುಣುಕುತುಣುಕು ಮಾಡಿಬಿಟ್ಟನು. ವಿಚಕ್ರ ಸಮರಂಗ ಮಾಡಲಾರದೆ, ಪಾಯಾಸರ್ಜನಿಯಿಂದ ಪರ್ವತ ಮಳಿಗರೆದನು, ಸ್ವಾಮಿ ಸುದರ್ಶನದಿಂದ ಮಾಯಾ ಪರಿಹರಿಸಿ, ವಿಚಕ್ರನ ತಲಿ ಕಡದುಬಿಟ್ಟನು. ಇಷ್ಟಾಗಲಿಕ್ಕೆ ಬ್ರಹ್ಮಾದಿ ದೇವತಿಗಳು ಮಂದಾರ ಪಾರಿಜಾತ ಹೂವಿನಮಳಿಗರೆದರು. ಸ್ವಾಮೀಸ್ತೋತ್ರ ಮಾಡಿದರು. ಯಾದವರಿಗೆ ಎರಡು ಭೂತಗಳು ಉಪದ್ರವ ಕೊಡತವೆ ಎಂದು, ಹಿಡಿಂಬನ ಎದುರಿಗೆ ಸ್ವಾಮಿ ಯುದ್ಧಕ್ಕೆ ಹೋಗಲಿಕ್ಕೆ, ಮಹೋದರ, ಕುಂಡಧಾರಿ ಭೂತಗಳು ಯಾದವರ ಬಿಟ್ಟು, ಕೃಷ್ಣನೇ ಪ್ರಧಾನಪುರುಷನೆಂದು ಸ್ವಾಮೀ ಹೆಗಲ ಮ್ಯಾಲೆ ಬಂದು ಕುಳಿತವು. ಸ್ವಾಮೀ ಛಲೋ ಕಿವಿ ಕಂಡು ತಮ್ಮ ಭೂತಚಾಷ್ಟಿಯಿಂದ ಕಿವೀ ಕಚ್ಚಲಿಕ್ಕೆ, ಸ್ವಾಮಿ ತನ್ನ ಭುಜಗಳು ತಿಲ್ಲಾಡಿಸಲಾಗಿ, ಕೈಲಾಸದಲ್ಲಿ ಮಹಾರುದ್ರನ ಮನಿಯೊಳಗೆ ಹೋಗಿ ಬಿದ್ದವು. ಬ್ರಹ್ಮಾಂಡ ಚಂಚಲ ಮಾಡ ಲಾಪ! ಸ್ವಾಮಿಗೆ ಇದೇನು ಆಶ್ಚರ್ಯ.

ಹಿಡಿಂಬನೆಂಬ ರಾಕ್ಷಸ ಯಾದವರ ಸೇನಾನೆಲ್ಲ ಭಕ್ಷಿಸತಾ ಬರಲಿಕ್ಕೆ ಉಗ್ರ-ಸೇನ, ವಸುದೇವ ಇಬ್ಬರೂ ಹಿಡಿಂಬನ ಕೈಕೆಳಗೆ ಸಿಕ್ಕರು. ಬಾಯೊಳಗೆ ಹೋಗಿ ರೆಂದು, ವಸುದೇವ ಉಗ್ರಸೇನರಾಯನ್ನ ನಿರ್ಬಂಧ ಮಾಡತಿಹ. ಬಲರಾಮ ಹಂಸನ ಕೂಡ ಯುದ್ಧ ಬಿಟ್ಟುಕೊಟ್ಟು, ಹಿಡಿಂಬನ ಎದುರಿಗೆ ಬರಲಿಕ್ಕೆ, ಹಿಡಿಂಬ ಉಗ್ರ-ಸೇನ ವಸುದೇವರನ್ನ ಬಿಟ್ಟುಕೊಟ್ಟ. ಬಲರಾಮನ ಸಂಗಡ ಬಹಳ ಯುದ್ಧ ವಾಯಿತು. ಮುಷ್ಟೀಪೆಟ್ಟಿನಿಂದ ಹಿಡಿಂಬಗೆ ಹೊಡೀಲಿಕ್ಕೆ, ಹಿಡಿಂಬ ಮೂರ್ಛಿ-ಯುಳ್ಳವನಾಗಿ ಬಿದ್ದನು. ಬಲರಾಮ ಹಿಡಿಂಬನ ಹಿಡದು ಈಡ್ಯಾಡಲಿಕ್ಕೆ, ಐದು

ಹರಿದಾರಿವ್ಯಾಲೆ ಹಿಡಿಂಬ ಬಿದ್ದನು. ಮನುಷ್ಯನ ಕೈಯಿಂದ ಪರಾಜಿತನಾಗಿ ಬಿದ್ದನೆಂದು, ಪುನಃ ರಾಕ್ಷಸರಿಗೆ ತನ್ನ ಮಾರಿ ತೋರಿಸದೆ, ಅಂದಾರಭ್ಯ ವನ ಸೇರಿಕೊಂಡ. ಭೀಮಸೇನನಿಂದ ಹಿಡಿಂಬ ಸತ್ತಾನೆ. ಬ್ರಹ್ಮದತ್ತಗೆ, ಗದಗೆ ವಿಚಿತ್ರ ಯುದ್ಧವಾಯಿತು. ಗದನು ಬ್ರಹ್ಮದತ್ತನ್ನ ನಿರಾಯುಧನನ್ನಾಗಿ ಮಾಡಿದ. ವಾಹನ ಸತ್ತವು, ರಥ ಪುಡಿಪುಡಿ ಆಯಿತು, ಬ್ರಹ್ಮದತ್ತ ಓಡಿಹೋದನು. ಡಿಭಿಕ ಸಾತ್ಯಕಿಗೆ ಬಹುಕಾಲ ಯುದ್ಧವಾಯಿತು. ಡಿಭಿಕ ಬಿಲ್ಲುಗಳ ಕೊಳ್ಳತಿಹ. ಸಾತ್ಯಕಿ ಕಡದುಕಡದು ಬಿಸ್ಟತಿಹ. ಹೀಂಗೇವೆ ಒಂದುನೂರಾ ಐದು ಬಿಲ್ಲುಗಳ ಡಿಭಿಕಾ ಕೊಂಡ. ಅಷ್ಟೂನೂ ಸಾತ್ಯಕಿ ತನ್ನ ಬಾಣಗಳಿಂದ ಛೇದಿಸಿಬಿಟ್ಟ. ಅದರ ತರುವಾಯ ಖಡ್ಗಗಳ ಕೊಳ್ಳತಿಹ. ಕೊಂಡಂಥ ಖಡ್ಗಗಳ ತುಣುಕುತುಣುಕು ಮಾಡಿ ಬಿಸ್ಟತಿಹ. ಉಭಯತರೂ ನಿರಾಯುಧರಾಗಿ ನಿಂತರು, ಸಮಯುದ್ಧವಾಯಿತು. ಸೋಲುಗೆಲವು ಆಗಲಿಲ್ಲ. ಡಿಭಿಕ ತನ್ನ ಅಣ್ಣನ ಸಮೀಪಕ್ಕೆ ಹೋದ. ಶ್ರೀಕೃಷ್ಣನ ಶಾರ್ಙ್ಗಧನುಸ್ಸಿನಿಂದ, ಹದಿನೇಳು ಅಕ್ಷೋಹಿಣಿ ಸೇನಾಬಲ, ನಾಲ್ಕರಲ್ಲಿ ಒಂದು ಪಾಲು ನಿಂತಿತು. ಶ್ರೀಕೃಷ್ಣನ ಎದುರಿಗೆ ನಿಲ್ಲಲಾರದೆ ಭಯದಿಂದ ಉಳದಷ್ಟು ಸೇನ ಕೊಂಡುಹೋದರು.

ಸ್ವಾಮಿ ಆ ಹೊತ್ತು ಪುಷ್ಕರಕ್ಷೇತ್ರದಲ್ಲಿ ವಾಸಮಾಡಿ, ಮರುದಿವಸ ಹಂಸ ಡಿಭಿಕರ ಹುಡಕತಾ ಹೋಗಥಾನೆ. ಯಾದವರ ಸೇನ, ಹಂಸಡಿಭಿಕರ ಕಂಡು ಬಾಣಗಳ ಮಳಿಗರೆದರು. ಬಾಣಗಳು ಹಿಂಡುಗಟ್ಟಿ ಬರತವೆ. ಬಲರಾಮ ದೊಡ್ಡ ಬಿಲ್ಲುಗಾರ, ಬಾಹೋಂಥ ಬಾಣಗಳನ್ನು ಛೇದಿಸಿ ಬಿಸ್ಟನು. ಡಿಭಿಕಗೆ ಸಾತ್ಯಕಿ-ಗದರುಗಳಿಗೆ ಯುದ್ಧವಾಯಿತು. ಡಿಭಿಕ, ಸಾತ್ಯಕಿ-ಗದರುಗಳನ್ನ ಆಯುಧ, ರಥ, ಕವಚಗಳಿಂದ ರಹಿತರನ್ನಾಗಿ ಮಾಡಿ, ಸರ್ವ ಸೈನಿಕರನ್ನು ಗೆದ್ದು, ಶ್ರೀಕೃಷ್ಣನ ಮುಂದೆ ಹೋಗಿ, ಶಸ್ತ್ರಾಸ್ತ್ರ ವೃಷ್ಟಿಗರೆದನು. ಶ್ರೀಕೃಷ್ಣನಿಂದ ನಿರಾಯುಧನಾಗಿ ಸೋತನು. ಬಲರಾಮನ ಸಮೀಪಕ್ಕೆ ಹಂಸ ಹೋಗಿ, ಬಹಳ ಭಯಂಕರ ಯುದ್ಧ ಮಾಡಿ ಸೋತನು. ಪುನಃ ಬಲವುಳ್ಳವನಾಗಿ ಶ್ರೀಕೃಷ್ಣನ ಎದುರಿಗೆ ಹಂಸ ಬಂದು ಯುದ್ಧ ಮಾಡಿದನು. ಸಾತ್ಯಕಿ ಬ್ರಹ್ಮದತ್ತರಿಗೆ ಯುದ್ಧವಾಗಿ, ಬ್ರಹ್ಮದತ್ತ ಸಾತ್ಯಕೀ ಕೊರಳ ಕುಣಿಕೆಗೆ ಬಾಣದಿಂದ ಹೊಡೆದನು. ಸಾತ್ಯಕಿ ಮೂರ್ಛಿಯುಳ್ಳವನಾಗಿ ಬಿದ್ದ. ಪುನಃ ಬಹಳ ಕೋಪಾವಿಷ್ಟನಾಗಿ, ಬ್ರಹ್ಮದತ್ತನ ಬಿಳ್ದೀ ಕೂಡಲುಳ್ಳ ಶಿರಸ್ಸನ್ನು ಕಡದುಬಿಸ್ಟನು. ಬಲರಾಮ ಡಿಭಿಕನ ಕೂಡ, ಹಂಸ ಶ್ರೀಕೃಷ್ಣನ ಕೂಡ ಭಯಂಕರ ಯುದ್ಧ ಮಾಡಿದರು. ಹದಿನೇಳು ಅಕ್ಷೋಹಿಣಿ ಸೇನಾಬಲ ಸರ್ವಸಂಹಾರವಾಯಿತು. ಸ್ವಾಮಿ ಕೃಷ್ಣದೇವರು ನಾರಾಯಣಾಸ್ತ್ರ ಬಿಡಲಿಕ್ಕೆ, ಹಂಸ ಸ್ವಾಮಿ ಎದುರಿಗೆ ನಿಂದರಲಾರದೆ ಓಡಿಹೋಗಿ ಅಡಗಿಕೊಳ್ಳಲಿಕ್ಕೆ, ಯವ ಎನಾನದಿಯೊಳಗೆ ಹೋಗಬೀಳತಿದ್ದ. ಸ್ವಾಮಿ ಹಂಸನ ಬೆನ್ನಟ್ಟಿಹೋಗಿ,

ಕಾಲಲಿ ಒದೀಲಿಕ್ಕೆ, ಮೂರ್ಛಿಯಯುಳ್ಳವನಾಗಿ ಬಿದ್ದನು. ನೀತೊಳಗೆ ತೇಲತಾ ಇದಲಿಕ್ಕೆ, ಧೃತರಾಷ್ಟ್ರನೆಂಬ ಸರ್ಪ ಹಂಸನ್ನ ನುಂಗಿತು. ಹಂಸ, ಎಂಥಾದ್ದು ತಮಸ್ಸಿನ ದುಃಖ, ಅಂಥಾ ದುಃಖ ಸರ್ಪನ ಹೊಟ್ಟೀಯೊಳಗೆ ಅನುಭವಿಸಥಾನೆ. ಈಗ ವೈವಸ್ವತಮನು, ಇಪ್ಪತ್ತೈಂಟನೇ ಮಹಾಯುಗ ನಡೀತದೆ. ನಲವತ್ತಮೂರು ಮಹಾಯುಗ ಹದಿನೆಂಟುಲಕ್ಷ ವರುಷ ಆದಮ್ಯಾಲೆ, ಹಂಸ ಸತ್ತು, ತಮಸ್ಸಿಗೆ ಹೋಗಿ ಬಿದ್ದಾನು. ಡಿಭಿಕ ಬಲರಾಮನ ಕೂಡ ಯುದ್ಧ ಮಾಡಿ, ತನ್ನ ಅಣ್ಣ ಹಂಸನ ಕಾಣದೆ, ಯಮುನಾನದಿಯಲ್ಲಿ ಹುಡುಕಿದ. ಎಲ್ಲೂ ಅಣ್ಣನ ಕಾಣದೆ, ನಾಲಿಗಿ ಕಿತ್ತುಕೊಂಡು ಸತ್ತನು. ತಮಸ್ಸಿನೊಳಗೆ ಅದ್ಯಾಪಿ, ಅಣ್ಣ ಬಂದಾನೆಂದು-ಹಾದಿ ನೋಡತಾ ಬಿದ್ದಾನೆ.

ಈ ಪ್ರಕಾರ ಕೃಷ್ಣದೇವರು ಸರ್ವ ರಾಕ್ಷಸರ ಸಂಹಾರ ಮಾಡಿ, ಯಾದವರಿಂದ ಯುಕ್ತನಾಗಿ, ಕಮಲೇಕ್ಷಣ ಬ್ರಹ್ಮಾದಿಗಳಿಂದ ಸ್ತೋತ್ರ ಮಾಡಿಸಿಕೊಳತ, ಯಾದವಕುಲತಿಲಕ ತನ್ನ ಕುಶಸ್ಥಳೀ ದ್ವಾರಾವತಿಗೆ ಬಂದನು. ಸ್ವಾಮಿ ಯಾದವ-ಪತಿ ಅಸುರಜನಮರ್ದಕ, ಸ್ಮರಣೆಮಾತ್ರದಲ್ಲಿ ಭಕ್ತರ ಪಾಪ ನಾಶ ಮಾಡಥಾನೆ. ನಿರಂತರ ಸುಖ ಹೆಚ್ಚಿಸಿಕೊಡತ, ಜನ್ಮಜರಾದಿ ದೋಷಗಳ ಪರಿಹರಿಸತಾ ಆನಂದ-ಸಮುದ್ರ ಶ್ರೀಕೃಷ್ಣದೇವರು ದ್ವಾರಾವತೀಲಿ ಇರಹೊಕ್ಕನು. ಸ್ವಾಮೀ ಪರಾಕ್ರಮ ಚರಿತ್ರಗಳ ಕೇಳಿದ ಮಾತ್ರದಿಂದ ಅರಿಷ್ಟ ನಿವೃತ್ತಿ, ಇಷ್ಟಪ್ರಾಪ್ತಿ ಆಗತದೆ ಎಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಶ್ರೀಕೃಷ್ಣದಿಗ್ವಿಜಯಃ' ಎಂಬಂಥ ಹದಿನೇಳನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೮

ಶ್ರೀಕೃಷ್ಣಚರಿತೇ ಪಾಂಡವದಿಗ್ವಿಜಯಃ

ಈ ಹದಿನೆಂಟನೇ ಅಧ್ಯಾಯದಲ್ಲಿ—ದ್ರೋಣಾಚಾರ್ಯರು, ಪರಶುರಾಮ. ರೇವರಿಂದ ಸಂಪಾದಿಸಿದಂಥ ದಿವ್ಯಾಸ್ತ್ರಗಳ ಕುರುಪಾಂಡವರಿಗೆ ಅಭ್ಯಾಸ ಮಾಡಿಸಿದರು. ಅದರೊಳಗೆ ಅರ್ಜುನ ಶ್ರೇಷ್ಠನಾದನು. ಭೀಮಸೇನನು ಸ್ವಬುದ್ಧಿಬಲದಿಂದ ಸಕಲವೂ ತಿಳಿಯುವಂಥಾವನಾಗಿ, ಅಸ್ತ್ರವಿದ್ಯಾಭ್ಯಾಸ ಗಣನಿ ಮಾಡಲಿಲ್ಲ. ಏಕೆ ಮಾಡಲಿಲ್ಲ ಎಂದರೆ, ಅಸ್ತ್ರವಿದ್ಯಾಭ್ಯಾಸದಲ್ಲಿ ಅನ್ಯದೇವತಿ ಉಪಾಸನಿ ಮಾಡಬೇಕು. ಅದು ಶುದ್ಧ ಭಾಗವತಧರ್ಮವಲ್ಲ. ಜ್ಞಾನ, ಭಕ್ತಿ, ದೇವರ ಪ್ರೀತಿ ಈ ಮೂರರ ಹೊರ್ತಾಗಿ ಮತ್ತೆ ಒಂದೂ ಬೇಡಿಕೊಳ್ಳಬಾರದು. ಇನ್ನು ಮಿಗಿಲಾದ ದೇವತಿಗಳನ್ನ ಕಾಮ್ಯಫಲವಾಗುವಂಥಾದ್ದು ಬೇಡಬಾರದು, ಇದು ಶುದ್ಧ ಭಾಗವತ-ಧರ್ಮ. ಜ್ಞಾನಿ ಆದಕಾರಣ ಭೀಮಸೇನದೇವರು ಕಾಮ್ಯಕರ್ಮ ಮಾಡಲಿಲ್ಲ. ಆದಕಾರಣದಿಂದೇವೆ ಮುಂದೆ ಭಿಕ್ಷಾ ಬೇಡುವಾಗೂನೂ ಹೂಂಕಾರದಿಂದಲೇವೆ ಬೇಡಿದನು ಹೊರ್ತಾಗಿ, ಯಾಚನಿ ಮಾಡಲಿಲ್ಲ. ವಾಸುದೇವನ ವ್ಯತಿರಿಕ್ತ, ಅನ್ಯ-ದೇವತಿ ಪೂಜಿ ಧ್ಯಾನ ನಮಸ್ಕಾರ ಮಾಡೋ ಆತನಲ್ಲ. ಯುದ್ಧ ಸೋಪಸ್ಕರ ಇಲ್ಲದವನ ಕೂಡ ಯುದ್ಧಕ್ಕೆ ಹೋಗೋಣವಿಲ್ಲ, ಪಲಾಯನವೂ ಇಲ್ಲ, ಒಮ್ಮಿ-ಗಾದರೂ ವಂಚನಿ ಇಲ್ಲ. ಅವೈಷ್ಣವರ ಕೂಡ ಗೆಳಿತನ ಮಾಡ. ವೈಷ್ಣವರ ಕೂಡ ಗೆಳಿತನ ಮಾಡುವ. ಪರೋಕ್ಷದಲಾ ದರೂ ಹರಿನಿಂದ ದಾವಾತ ಮಾಡಥಾನೆ, ಅವನ ಜಿಹ್ವ ಛೇದನ ಮಾಡೇನೆಂದು ಭೀಮಸೇನನ ಪ್ರತಿಜ್ಞ. ದಾನ, ಧರ್ಮ, ಜ್ಞಾನ ಇವುಗಳಲ್ಲಿ ಸಂಶಯ ಮಾಡೋದಿಲ್ಲ. ವಿದ್ಯೋಪಜೀವನ ಒಮ್ಮಿಗಾದರೂ ಮಾಡೋ-ದಿಲ್ಲ. ಅದಕ್ಕಾಗೇವೆ ಅರಣ್ಯವಾಸದಲ್ಲಿ, ಯಕ್ಷರೂಪಿ ಯಮಧರ್ಮರಾಯ-ನಹುಷರ ಕುರಿತ ಪ್ರಶ್ನಕ್ಕೆ ಉತ್ತರ ಹೇಳಲಿಲ್ಲ. ಆದಕಾರಣ ದ್ರೋಣನ ಕೂಡ ಅಸ್ತ್ರವಿದ್ಯ ಕಲಿಯಲಿಲ್ಲ. ಶ್ರೀಕೃಷ್ಣದೇವರ ಅನುಜ್ಞ ಆದಕಾರಣ, ಅಸ್ತ್ರಗಳಿಂದ ದ್ರೋಣ-ಪುತ್ರನ ಅಸ್ತ್ರಗಳ ನಿವಾರಣ ಮಾಡಿದನು. ಅದೃಶ್ಯನಾದ ಅಲಂಬುಸರಾಕ್ಷಸನ್ನ ಭಗ್ನ ಮಾಡಿದನು. ಸಕಲಾಭ್ಯಾಸ ಭೀಮಸೇನದೇವರಿಗೆ ಆದೆ ಅಂತ ತಿಳುಹಿಸ-ಬೇಕಾಗಿ ಶ್ರೀಕೃಷ್ಣದೇವರು ಆಕಾಶದಲ್ಲಿ ಆಜ್ಞ ಕೊಟ್ಟನು. ಪ್ರತ್ಯಕ್ಷದೇವತಿಗಳಾದ ಇಂದ್ರಾದಿಗಳಲ್ಲಿ, ಧರ್ಮರಾಯ ಮೊದಲಾದ ಜ್ಯೇಷ್ಠಬಂಧುಗಳಲ್ಲಿ ಮರ್ಯಾದಿ ಸ್ಥಾಪನ ಮಾಡಬೇಕಾಗಿ, ಶ್ರೀಕೃಷ್ಣದೇವರು ತಾನೇ ವಂದನ ಮಾಡಿದ್ದಾನೆ. ಈ ನಿಮಿತ್ತವಾಗಿ ಭೀಮಸೇನದೇವರು ತಾನೂ ವಂದನ ಮಾಡಿದನು ಸರಿಯೇ, ಅವ-ರಲ್ಲಿದ್ದಂಥ ಭಗವಂತನಿಗೆ ವಂದನ ಮಾಡಿದನು. ಭೀಮಸೇನದೇವರಿಗೆ ಅನ್ಯ-

ಶುದ್ಧ ಭಾಗವತ ಧರ್ಮ

ದೇವತೆಗಳ ವಂದನ ಸರ್ವಥಾ ಇಲ್ಲ. ತನ್ನ ಆಜ್ಞೆಯಿಂದಲೇವೆ ಅಸ್ತ್ರದೇವತೆಗಳ ಪ್ರೇರಣೆ ಮಾಡಿದನೇ ಹೊರ್ತು, ಪ್ರಾರ್ಥನ ಮಾಡಲಿಲ್ಲ. ಇದೇ ಪ್ರಕಾರ ತತ್ಪತ್ನಿ ದ್ರೌಪದೀಯೂ ಭಾಗವತಧರ್ಮದಲ್ಲಿ ನಿಷ್ಠೆಯುಳ್ಳಂಥಾಕೆಯಾಗಿದ್ದಳು. ಆದಕಾರಣ ಧೃತರಾಷ್ಟ್ರನ ದೆಸೆಯಿಂದ ಆತ್ಮಾರ್ಥವಾಗಿ ವರವು ಬೇಡಿಕೊಳ್ಳಲಿಲ್ಲ. ಮಹಾ ಆಪತ್ತಿನಲ್ಲಾದರೂ ಧಾರ್ತರಾಷ್ಟ್ರರಿಗೆ ಶಾಪ ಕೊಡಲಿಲ್ಲ ಇವರ ಹೊರ್ತಾಗಿ ಮಿಗಿಲಾದ ದೇವತೆಗಳು ಭಗವಂತನ ಭಕ್ತರಾದರೂ ಸರಿಯೇ, ಕಾಲಕಾಲಕ್ಕೂ ಭಿನ್ನ ಭಕ್ತರಾಗಿದ್ದಾರೆ ಅಚ್ಛಿನ್ನ ಭಕ್ತರೆಂಬೋರು ಭೀಮಸೇನದೇವರೊಬ್ಬರೇ. ಅದು ಹ್ಯಾಂಗೆಂದರೆ ತತ್ಪ್ರಕಾರ ಆಚಾರ್ಯರು ಕೆಲವು ತೋರಿಸಿದರು.

ಶ್ಯಮಂತಕಮಣಿ ನಿಮಿತ್ತವಾಗಿ, ಬಲರಾಮನು ಕೃಷ್ಣದೇವರಿಗೆ ವಿಮನಸ್ಕನಾದನು. ಅರ್ಜುನನು ಬ್ರಾಹ್ಮಣ ಬಾಲಕರ ಸಂರಕ್ಷಣೆ ವಿಷಯದಲ್ಲಿ ನಿಂದಾ ಮಾಡಿದನು. ಪ್ರದ್ಯುಮ್ನ, ಅನಿರುದ್ಧ, ಉದ್ಧವ, ಸಾಂಬ ಮೊದಲಾಗುಳ್ಳಂಥಾವರು, ಕೃಷ್ಣದೇವರ ಅಭಿಪ್ರಾಯ ಅರ್ಜುನಗೆ ಸುಭದ್ರಾ ಕೊಡಬೇಕೆಂಬೋದು, ಬಲ್ಲರೂ ಸರಿಯೆ, ವಿರುದ್ಧ ಆಚರಣೆ ಮಾಡಿದರು. ಹಾಂಗೇವೆ ಸಾತ್ಯಕಿಯು ಜ್ಞಾನಿ ಆದರೂ ಸರಿಯೆ, ಕದಾಚಿತ್ ಕಾಲದಲ್ಲಿ ಅರ್ಜುನ ಕೃಷ್ಣದೇವರು ಸರಿ ಎಂದು ತಿಳಿಯೋನು. ಹಾಂಗೆ, ಧರ್ಮರಾಯು, ಕೃಷ್ಣ ಮನುಷ್ಯೋತ್ತಮನೆಂದು ತಿಳದು, ಜರಾಸಂಧನ ವಧಿಯಲ್ಲಿ ಶಕ್ತನಾದಾನೋ, ಆಗನೋ ಎಂದು ಮನಸ್ಸಿನಲ್ಲಿ ಸಂಶಯ ಮಾಡಿದನು. ಕೌರವರ ಸಭಾದಲ್ಲಿ ಕೃಷ್ಣದೇವರು ಹೋದಪಕ್ಷನೇ, ಕೃಷ್ಣದೇವರನ್ನ ಬಂಧನ ಮಾಡ್ಯಾರು, ಸರ್ವಾತ್ಮನ ಹೋಗಬ್ಯಾಡವೆಂದು ವಿದುರ ಶ್ರೀಕೃಷ್ಣದೇವರಿಗೆ ಬೇಡಿಕೊಂಡನು. ಇದರಿಂದ ವಿದುರನ ಜ್ಞಾನ ಹೇಳಿಧಾಂಗೆ ಆಯಿತು. ಹೀಂಗೇವೆ ನಕುಲ ದಿಗ್ವಿಜಯಕ್ಕೆ ಹೋದ ಸಮಯದಲ್ಲಿ ಕಪ್ಪವನ್ನು ಶೀಘ್ರ ಕೊಡೆಂತ ದೂತರ ಕಳುಹಿಸಿಕೊಟ್ಟನು. ಸಹದೇವನು ಕೃಷ್ಣನಿಂದ ನಮ್ಮ ಕುಲ ವಿನಾಶವಾಯಿತೆಂದು ತಿಳಿದನು. ದೇವಕೀ ವಸುದೇವಾದಿಗಳು ಕೃಷ್ಣದೇವರು ಮನುಷ್ಯೋತ್ತಮನಂತ ಕದಾಚಿತ್‌ಕಾಲ ತಿಳಿಯೋರು. ಭೀಷ್ಮ, ಪರಶುರಾಮ ದೇವರ ದ್ರೋಹ ಮಾಡಿ, ಯುದ್ಧವನ್ನು ಅವನ ಸಂಗಡ ಮಾಡಿದನು. ದ್ರೋಣ, ಅಶ್ವತ್ಥಾಮ, ಕೃಪಾಚಾರ್ಯ, ದುರ್ಯೋಧನನ ನಿಮಿತ್ತವಾಗಿ ಶ್ರೀಕೃಷ್ಣದೇವರ ಸಂಗಡ ವಿರುದ್ಧ ಮಾಡಿದರು. ಶಿವನೇ ಮೊದಲಾದ ಮೂಲದೇವತೆಗಳು ಕ್ವಚಿತ್ ಕಾಲದಲ್ಲಿ ವಿರುದ್ಧ ಮಾಡಥಾರೆ. ಇನ್ನು ಋಷಿಗಳು ಜನ್ಮಜನ್ಮಾಂತರದ ಅಜ್ಞಾನ ದಿಂದ, ದೇವರ ಸಂಗಡ ವಿರುದ್ಧ ಮಾಡ್ಯಾರಂತ ಏನು ಹೇಳಬೇಕು. ಆದಕಾರಣ ಶುದ್ಧವಾದಂಥ ಭಾಗವತಧರ್ಮದಲ್ಲಿ ಇದ್ದಂಥಾವರೇ ವಾಯುದೇವರು. ಹಾಂಗೇ ಲಕ್ಷ್ಮೀದೇವಿ, ಸರಸ್ವತೀ, ಈ ಪ್ರಕಾರ ಪರಮಾತ್ಮನ ವ್ಯತಿರಿಕ್ತವಾಗಿ ಈ ಮೂರು ಮಂದಿಯೂ ಪರಮ ಶುದ್ಧರಾದಂಥಾವರು. ಇವರಿಗೆ ಅಜ್ಞಾನ ಲೇಶವಿಲ್ಲ. ಈ

ಪ್ರಮೇಯ ಭಾರತವಲ್ಲಿ, ಹದಿನೆಂಟು ಪುರಾಣಗಳಲ್ಲಿ, ಶ್ರೀ ವೇದವ್ಯಾಸರಿಂದಲೇ ಅಲ್ಲಲ್ಲಿ ಹೇಳಲ್ಪಟ್ಟಿದೆ. ಆ ಮುಂದಿನ ಅಭಿಪ್ರಾಯದಿಂದ ಏನಾಯಿತೆಂದರೆ, ಸರ್ವಜ್ಞಾಚಾರ್ಯರು ನಿರೂಪಿಸಿಕೊಂಡು ಬರಥಾರೆ.

ದ್ರೋಣಾಚಾರ್ಯರು ವಿದ್ಯಾಭ್ಯಾಸ ಮಾಡಲ್ಪಟ್ಟಂಥ ಕುರುಪಾಂಡವರನ್ನು ಕೂಡಿಕೊಂಡು, ಒಂದು ರಂಗಮಂಟಪದಲ್ಲಿ ಕುಳಿತುಕೊಂಡು, ತಮ್ಮ ಗುರುವು ಆದಂಥ ಪರಶುರಾಮದೇವರ ಪೂಜಿ ಮಾಡಿ, ಆ ಕುಮಾರಕರಿಗೆ ನಿಮ್ಮ ವಿದ್ಯ ತೋರಿಸರಿ ಅಂತ ಆಜ್ಞಾಪಿಸಿದರು. ಆ ಕುಮಾರರು ಭೀಷ್ಮ, ದ್ರೋಣ, ವಿದುರ, ಧೃತರಾಷ್ಟ್ರ, ಗಾಂಧಾರೀ, ಕುಂತೀ ಮೊದಲಾಗುಳ್ಳಂಥ ರಾಜಸಭಾದಲ್ಲಿದ್ದಂಥ ಹಿರೇರನ್ನ ವಂದನ ಮಾಡಿ, ತಮ್ಮ ಪರಿಶ್ರಮ ತೋರಿಸಿದರು. ಆ ಸಮಯದಲ್ಲಿ ದ್ರೋಣಪುತ್ರ ಅಶ್ವತ್ಥಾಮನು, ತಿಸದೃಶವಾದಂಥ ಅಸ್ತ್ರವಿದ್ಯ ಸರ್ವರಗಿಂತ ಅಧಿಕವಾಗಿ ತೋರಿಸಿದನು. ತತನ ತರುವಾಯದಲ್ಲಿ ಅರ್ಜುನ, ಅಶ್ವತ್ಥಾಮನಿಗಿಂತ ಅಧಿಕವಾಗಿ ಅಸ್ತ್ರವಿದ್ಯ ತೋರಿಸಿದನು. ಮುಶಕದ ಪಾದಗಳಲ್ಲಿ, ಪಕ್ಷಿಗಳ ಎವಿಗಳಲ್ಲಿ, ಗಾಯವಾಗದಲೇವೆ ಬಾಣ ನಿಂದ್ರೋಣ ಏವಮಾದಿ ವಿಚಿತ್ರವಾದ ಬಾಣಪ್ರಯೋಗ ತೋರಿಸಿದನು. "ಆದೇ ಸಮಯದಲ್ಲಿ ಪರಶುರಾಮದೇವರಿಂದ ಸಂಪಾದಿತವಾದಂಥ ಅಸ್ತ್ರವಿದ್ಯ ತೋರಿಸಬೇಕಾಗಿ, ಕರ್ಣನು ಅರ್ಜುನನಗಿಂತ ಹೆಚ್ಚು ತೋರಿಸಿದನು. ಕುಂತೀದೇವಿ ತನ್ನ ಮಗನೆಂದು ತಿಳಿದರೂ ಸರಿಯೆ, ಲಜ್ಜೆಯಿಂದ ಪುತ್ರನೆಂತ ಹೇಳಲಿಲ್ಲ. ಅದೇ ಸಮಯದಲ್ಲಿ ಅರ್ಜುನ ಅಸ್ತ್ರಜ್ಞರೊಳಗೆ ಶ್ರೇಷ್ಠ ಅಂತ ತಿಳಿದು, ಯುದ್ಧದಗೋಸ್ಕರ ಕರೆದನು. ಭೀಮಸೇನದೇವರು ಬ್ಯಾಡೆಂದು ನಿವಾರಿಸಿದನು. ಕ್ಷತ್ರಿಯರ ಸಂಗಡ ಯುದ್ಧ ಮಾಡಬೇಕು. ತಿಕ್ಷತ್ರಿಯರ ಸಂಗಡ ಯುದ್ಧ ಮಾಡಬಾರದು ತಿಂದು, ಧರ್ಮಕ್ಕೆ ವಿರುದ್ಧ ಅಂತ ಅರ್ಜುನನ್ನ ನಿವಾರಣೆ ಮಾಡಿ, ಕರ್ಣನಿಗೋಸ್ಕರ ಚಪಕ ಕೊಟ್ಟನು. ತಿಶ್ವಸೇವಕನೆಂಬೋ ಸೂಚನಿ ತೋರಿಸಿ ಮತ್ತೆ ಮಾತನಾಡಥಾನೆ. 'ಎಲೋ ಕರ್ಣನೇ ನೀನು ಕ್ಷತ್ರಿಯಕುಲದಲ್ಲಿ ಹುಟ್ಟಿಲ್ಲ. ಕ್ಷತ್ರಿಯ ಸಂಸ್ಕಾರವಿಲ್ಲ. ಇಂಥಾ ನೀನು ಕ್ಷತ್ರಿಯರ ಸರಿ ಹ್ಯಾಂಗಾದೀ! ಬ್ರಹ್ಮ-ವೀರ್ಯದಿಂದ ಹುಟ್ಟಿದರೂ, ಬ್ರಾಹ್ಮಣಸಂಸ್ಕಾರ ಇಲ್ಲದೆ ಇದ್ದವರು ಹ್ಯಾಂಗೆ ಬ್ರಾಹ್ಮಣರಲ್ಲೋ ಹಾಂಗೆ.' ಈ ಪ್ರಕಾರ ಭೀಮಸೇನನಿಂದ ಕರ್ಣನು ನಿರುತ್ತರ-ನಾಗತಿರಲಿಕ್ಕೆ, ಕರ್ಣಗೆ ಬಹುಮಾನ ಮಾಡಬೇಕೆಂದು ದುರ್ಯೋಧನ ಬಂದು, ಅವಗೆ ಅಂಗದೇಶದಲ್ಲಿ ರಾಜ್ಯಾಭಿಷೇಕ ಮಾಡಿದನು.

ಆ ಸಮಯದಲ್ಲಿ ಕರ್ಣನ ತಂದಿ ಅಧಿರಥನು ಬಂದನು. ಸರ್ವರಾಜಸಭಾ-ಮಧ್ಯದಲ್ಲಿ ಕರ್ಣನು ಎದ್ದುನಿಂತು, ಸನ್ಮಾನ ಮಾಡಿ, ನಮಸ್ಕಾರ ಮಾಡಿದನು. ಆ ಬಹುಮಾನ ಮಾಡೋದನ್ನ ಸಭಾಮಧ್ಯದಲ್ಲಿ ಜನರು ಕಂಡು ಸಂತೋಷ-ಬಟ್ಟರು. ತರುವಾಯ ಭೀಮಸೇನ, ದುರ್ಯೋಧನಾದಿಗಳು ತಮ್ಮತಮ್ಮ ಶಿಷ್ಯ-

ಸಾಮರ್ಥ್ಯವನ್ನು ತೋರಿಸಬೇಕೆಂದು, ತಮ್ಮ ತಮ್ಮ ಗದಿಗಳು ಹಿಡಕೊಂಡು, ಕೋಪದಿಂದ ಯುದ್ಧಾರ್ಥವಾಗಿ ಎದುರುಎದುರಿಗೆ ನಿಂತರು. ಆಗ ದೇವತಿಗಳು, ಅಸುರರು, ಮನುಷ್ಯರು ಮೊದಲಾದ ಚರಾಚರಾತ್ಮಕವಾದ ಜಗತ್ತು ಎರಡು ಪ್ರಕಾರವಾಯಿತು. ಕೆಲವು ಸಜ್ಜನರು, ದೇವತಿಗಳು ಭೀಮಸೇನನ ಪಕ್ಷದವರು. ಕೆಲವು ದೈತ್ಯರು, ದುರ್ಜನರು ದುರ್ಯೋಧನನ ಪಕ್ಷದವರಾದರು. ಜಯಭೀಮ! ಜಯದುರ್ಯೋಧನ! ಎಂದು ಹೂಂಕಾರ ಜಯಕಾರಗಳನ್ನು ಸ್ಪಷ್ಟವಾಗಿ ಉಭಯ ಪಕ್ಷದವರೂ ಮಾಡಿದರು. ದ್ರೋಣಾಚಾರ್ಯ, ಇಬ್ಬರ ನಿಮಿತ್ತದಿಂದ ಜಗತ್ತು ನಾಶವಾಗತಡೆಂದು, ತನ್ನ ಮಗನಾದಂಥ ಅಶ್ವತ್ಥಾಮನನ್ನ ಕಳುಹಿಸಿಕೊಟ್ಟನು. ಆತನು ಇವರಿಬ್ಬರ ಸಮೀಪಕ್ಕೆ ಬಂದು, ನಿಮ್ಮ ನಿಮ್ಮ ಯೋಗ್ಯತೆಯಲ್ಲಿ ನಿಮು-ನಿಮಗೆ ದಾರೂ ಸರಿಯಲ್ಲವೆಂದು ಹೇಳಿ, ಉಭಯರಿಗೂ ಸಮಾಧಾನ ಮಾಡಿದನು. ಆಗ ದ್ರೋಣಾಚಾರ್ಯರ ಆಜ್ಞೆದಿಂದ ಯುದ್ಧ ಬಿಟ್ಟುಕೊಟ್ಟು, ತಮ್ಮ ತಮ್ಮ ಮನಿಗಳಿಗೆ ಹೋದರು. ಬ್ರಹ್ಮದೇವರು ಆಕಾಶಮಾರ್ಗದಿಂದ ಬಂದವರಿಗೆ, ಕಾಲಾಂತರದಲ್ಲಿ ಯುದ್ಧ ನೋಡಥೀರೆಂದು ಸಮಾಧಾನಮಾಡಿ ಕಳುಹಿದನು. ತಾನು ತನ್ನ ಮನಿಗೆ ಹೋದನು. ದುರ್ಯೋಧನ, ಕರ್ಣನ ಕೈ ಹಿಡಕೊಂಡು ಮನಿಗೆ ಹೋದ. ಅರ್ಜುನನ ಕೈ ಹಿಡಕೊಂಡು ಭೀಮಸೇನ, ತನ್ನ ಮನಿಗೆ ಹೋದ.

ಕರ್ಣನಿಂದ ಅರ್ಜುನನ ಕೊಲ್ಲಿಸಬೇಕೆಂದು, ದುರ್ಯೋಧನನ ಅಭಿಪ್ರಾಯ. ಅರ್ಜುನನಿಂದ ಕರ್ಣನ ಕೊಲ್ಲಿಸಬೇಕೆಂದು, ಭೀಮಸೇನನ ಅಭಿಪ್ರಾಯ ತತ್ ನಿಮಿತ್ತ ಇಬ್ಬರೂ ಉಪಾಯಗಳ ಮಾಡಿದರು. ಭೀಮಸೇನನ ನಿಮಿತ್ತವಾಗಿ ಶ್ರೀಕೃಷ್ಣದೇವರು ಹಾಂಗೆ ಮಿಗಿಲಾದ ದೇವತಿಗಳು ಅರ್ಜುನನ ಪಕ್ಷ ವಹಿಸಿದರು. ವಾಯುದೇವರು ದಾವ ಪಕ್ಷ ವಹಿಸಥಾರೆ, ನಾರಾಯಣ ಅದೇ ಪಕ್ಷ ವಹಿಸಥಾನೆ. ಅದಕ್ಕಾಗೇವೆ ರಾಮಾವತಾರದಲ್ಲಿ ಸೂರ್ಯಪುತ್ರನಾದಂಥ ಸುಗ್ರೀವನ್ನ ಹನುಮಂತ ವಹಿಸಿದ ಕಾರಣ, ರಾಮಚಂದ್ರದೇವರು ಸುಗ್ರೀವನ್ನ ವಹಿಸಿದರು. ಅದರಿಂದ ಸಕಲ ದೇವತಿಗಳೂ ಹಾಂಗೇ ಮಾಡಿದರು. ಆದ್ದರಿಂದ, ಪೂರ್ವದಲ್ಲಿ ಇಂದ್ರಾವ-ತಾರನಾದ ವಾಲಿ, ಈಗ ಅನುತಾಪದಿಂದ ಭೀಮಸೇನನ ತಮ್ಮ ಅರ್ಜುನನಾಗಿ ಹುಟ್ಟಿದನು. ಆದಕಾರಣ ಸಕಲ ದೇವತಿಗಳೂ ಅರ್ಜುನನ ಪಕ್ಷ ವಹಿಸಿದರು. ದುರ್ಯೋಧನನ ನಿಮಿತ್ತವಾಗಿ, ಸಕಲ ದೈತ್ಯರೂ ಕರ್ಣನ ಪಕ್ಷ ವಹಿಸಿದರು. ಆಮೇಲೆ ಏನು ಕರ್ತವ್ಯವಾಯಿತೆಂದರೆ ನಿರೂಪಿಸಥಾರೆ.

ಕುರುಪಾಂಡವರು ಎಲ್ಲರೂ ಕೂಡಿ ಗುರುದಕ್ಷಿಣಿ ಏನು ಕೊಡಬೇಕೆಂದು ಕೇಳಿದರು. ಅವರಿಂದ ಕೇಳಿಸಿಕೊಳ್ಳಲ್ಪಟ್ಟಂಥ ದ್ರೋಣಾಚಾರ್ಯರು ಮಾತನಾಡಿ, 'ಪಾಂಚಾಲದೇಶಕ್ಕೆ ಅರಸಾದಂಥ ದ್ರುಪದರಾಯನ ಬಂಧನ ಮಾಡಿ ತಂದುಕೊಡಿ'.

ಎಂದರು. ಆಗ ದುರ್ಯೋಧನ ಕರ್ಣನಿಂದ ಸಹಿತನಾಗಿ, ಹಾಂಗೆ ಪಾಂಡವರು ದ್ರೋಣನಿಂದ ಸಹಿತರಾಗಿ, ದ್ರುಪದರಾಯನ ಪಟ್ಟಣಕ್ಕೆ ಹೋದರು. ಆ ತರುವಾಯ ಭೀಮಸೇನದೇವರು ದ್ರೋಣಾಚಾರ್ಯರ ಕುರಿತು ಮಾತನಾಡಿದರು. ಸಾಮರ್ಥ್ಯ ವಿವೇಕ ತಿಳಿಯಬೇಕೆಂಬ ಅಭಿಪ್ರಾಯದಿಂದ 'ಹೇ ದ್ರೋಣಾಚಾರ್ಯ ಕೌರವರ ಗರ್ವ ಬಹಳವದೆ. ಇವರೇ ಮುಂದಾಗಿ ಹೋಗಲಿ. ಇವರಿಗೆ ದ್ರುಪದರಾಯ ಒಳಗಾಗುವುದಿಲ್ಲ. ಇವರು ತಮ್ಮ ಮನೋರಥ ಇಲ್ಲದೆ ತಿರಗಿ ಬರಲಿಕ್ಕೆ, ನಾವು ನಿನ್ನ ಶತ್ರುವಾದಂಥ ದ್ರುಪದರಾಯನ್ನ ತಂದುಕೊಡಥೇವು. ಈ ಮಾತಿಗೆ ಸಂದೇಹವಿಲ್ಲ.' ಹೀಂಗಂತ ಮಾತನಾಡಿ ಭೀಮಸೇನ ಭ್ರಾತೃಗಳ ಸಹವಾಗಿ ಅಲ್ಲೀ ನಿಂತನು. ದುರ್ಯೋಧನಾದಿಗಳು ಕರ್ಣನಿಂದ ಸಹಿತರಾಗಿ, ತಮ್ಮ ಶಸ್ತ್ರಾಸ್ತ್ರಗಳಿಂದ ಯುಕ್ತರಾಗಿ, ದ್ರುಪದರಾಯನ ಪಟ್ಟಣಕ್ಕೆ ಹೋದರು. ತನ್ನನ್ನ ಹಿಡಿಯಲಿಕ್ಕೆ ಬಂದಂಥ ಕೌರವರನ್ನ ಕಂಡು ದ್ರುಪದರಾಯ, ಮೂರು ಅಕ್ಷೋಹಿಣಿ ಸೇನ ಸಮೇತನಾಗಿ ಹೊರಗೆ ಹೊರಟನು. ದ್ರುಪದರಾಯನ ಸೈನ್ಯದವರು ಕೌರವರ ಸುತ್ತುಗಟ್ಟಿ, ಬಹಳ ಮರ್ದನ ಮಾಡಿದರು. ಹಾಂಗೆ ಸ್ತ್ರೀಯರು, ಬಾಲಕರು, ಉಪ್ಪರಿಗಿ ಮ್ಯಾಲೆ ಇದ್ದಂಥವರು ಸಮಸ್ತರೂ, ಪಾಷಾಣಗಳಿಂದ ಅತ್ಯಂತವಾಗಿ ಹೊಡೆದರು. ಬಾಲ್ಯಾರಭ್ಯ ಅತ್ಯಂತ ಸುಖದಿಂದ ಬೆಳೆದಂಥಾವರು ನುಗ್ಗುನುಗ್ಗು ಆದರು. ಏನುಕಾರಣ ಹಾಂಗೆ ಆಯಿತೆಂದರೆ, ದ್ರುಪದರಾಯನ ತಪೋಬಲದ್ದಿಸಿಯಿಂದ ಸೂರ್ಯನ ವರವು ದೊಡ್ಡದದೆ. 'ಪಟ್ಟಣದ ಸುತ್ತಮುತ್ತ ಯೋಜನ ದೂರ ಒಬ್ಬಾನೊಬ್ಬನೂ ನಿನ್ನ ಗೆಲ್ಲಬ್ಯಾಡ.' ಹೀಂಗೆ ವರವು ಇದ್ದ-ಕಾರಣ, ಅತ್ಯಂತ ಭಗ್ನಮನೋರಥರಾದಂಥಾವರಾಗಿ, ಎಲ್ಲಿ ಪಾಂಡವರು ಇದ್ದರೋ ಅಲ್ಲಿಗೆ ಓಡಿಬಂದರು.

ಸ್ತ್ರೀಬಾಲಕರಿಂದ ಹೊಡೆಸಿಕೊಳ್ಳಲ್ಪಟ್ಟವರಾಗಿ 'ಹೇ ಭೀಮ! ಹೇ ಅರ್ಜುನ!' ಎಂದು ಒದರತಲೇ ಬಂದರು. ಆಗ ಯುದ್ಧದಿಂದ ತಿರಿಗಿ ಬಂದಂಥಾವ-ರನ್ನ ನೋಡಿ, ಭೀಮಸೇನ ಬಾಣಗಳ ತೆಗೆದುಕೊಂಡು, ರಥ ಏರಿಕೊಂಡನು. ಆತನ ಸಂಗಡ ಅರ್ಜುನ ತೆರಳಿದನು. ಆತನ ಎಡಬಲದಲ್ಲಿ ನಕುಲಸಹದೇವರು ತೆರಳಿದರು. ಧರ್ಮರಾಯ ದ್ರೋಣಾಚಾರ್ಯರಿಂದ ಸಹಿತನಾಗಿ ನೋಡತಲೇ ನಿಂತನು. ಮುಂದಾಗಿ ಬಾಹೋಂಥಾ ಭೀಮಸೇನನ್ನ ನೋಡಿ, ಪಾಂಚಾಲರು ಓಡಿ ತಮ್ಮ ಪಟ್ಟಣ ಪ್ರವೇಶ ಮಾಡಿದರು. ದ್ರುಪದರಾಯನು ಮಕ್ಕಳುಗಳಿಂದ ಸೈನ್ಯದಿಂದ ಯುಕ್ತನಾಗಿ ಯುದ್ಧಕ್ಕೆ ಹೊರಟನು. ಆತಗೆ ಪಾರ್ಶ್ವರಕ್ಷಕರು ಯುಧಾಮನ್ಯು, ಉತ್ತಮೌಜ ಎಂಬ ಇಬ್ಬರಿದ್ದರು. ಸತ್ಯಜಿತು ಎಂಬಾತನು ಹಿಂಭಾಗದಲ್ಲಿದ್ದನು. ಮುಂಭಾಗದಲ್ಲಿ ಶಿಖಂಡಿ ಇಹೋನು. ಜನಮೇಜಯ ಎಂಬುವನು ಆತನ ಬಳಿವಿಡಿದು ಹೋದನು. ಭೀಮಸೇನದೇವರು ಸೈನ್ಯವನ್ನು

ಮರ್ದಿಸುವಂಥಾತನಾದನು. ಯುಧಾಮನ್ಯು, ಉತ್ತಮೌಜ ಇವರು ಭೀಮಸೇನನ ವ್ಯೂಹ ಬಾಣ ಮಳಿಗರೆದರು. ಭೀಮಸೇನ ಅವರ ರಥ ಮುರಿದು, ಬಾಣಗಳು ಇಲ್ಲದಪ್ಪಂದೆ ಮಾಡಿದನು. ಕೈಗೆ ಸಿಕ್ಕಂಥ ದ್ರುಪದರಾಯನ್ನ ಬಿಟ್ಟುಕೊಟ್ಟನು. ಏಕೆಂದರೆ ದ್ರೋಣಾಚಾರ್ಯನ ಕುರಿತು, ಅರ್ಜುನ ಪ್ರತಿಜ್ಞೆ ಮಾಡಿದ್ದು ಸತ್ಯ ಮಾಡಬೇಕಾಗಿ ಅರ್ಜುನನ್ನ ಮುಂದುಮಾಡಿದನು. ಬಹು ಬಾಣಗಳ ಬಿಡುವಂಥ ದ್ರುಪದರಾಯನ ರಥಕ್ಕೆ ಜಿಗಿದಂಥಾತನಾಗಿ, ಆತನ ಧನುಸ್ಸು ಛೇದಿಸಿ, ಕ್ಷಣ ಮಾತ್ರದಲ್ಲಿ ಸಿಂಹ ಮೃಗನ್ನ ಹ್ಯಾಂಗೆ ಹಿಡತರತಪೆ, ಹಾಂಗೆ ಅರ್ಜುನನು ದ್ರುಪದರಾಯನ ಹಿಡಕೊಂಡು ತನ್ನ ರಥಕ್ಕೆ ಬಂದನು. ಆಗ ದ್ರುಪದರಾಯನ ಸೈನ್ಯ ಒಗ್ಗಟ್ಟಾಗಿ ಅರ್ಜುನನ ಸುತ್ತುಗಟ್ಟಿತು. ಭೀಮಸೇನದೇವರು ಆ ಸೈನ್ಯವನ್ನು ಬಾಣಗಳಿಂದ ಸಂಹಾರ ಮಾಡಿದ. ಆ ಕಾಲದಲ್ಲಿ ಭೀಮಸೇನದೇವರನ್ನ ಕುರಿತು ಅರ್ಜುನ ಮಾತನಾಡಿದ. 'ಹೇ ಭೀಮಸೇನ! ಈ ಅರಸಿನ ಸೈನ್ಯವನ್ನು ಸಂಹಾರ ಮಾಡಬ್ಯಾಡ. ಈತನು ನಮಗೆ ಸಂಬಂಧಕ್ಕೆ ಯೋಗ್ಯ. ನಮ್ಮ ತಂದಿಗೆ ಗೆಳಿಯನಾದಂಥಾತನು. ಧರ್ಮಿಷ್ಟನಾದಂಥಾತ. ಈತನ್ನ, ಗುರುವಿನ ನಿಮಿತ್ತ ವಚನ ತೊಡಗಿದ್ದರಿಂದ ಒಯ್ಯಥೀನಿ.' ಈ ಪ್ರಕಾರ ಅರ್ಜುನ ಮಾತನಾಡತಿರಲಾಗಿ, ದ್ರುಪದರಾಯ ಅರ್ಜುನನಲ್ಲಿ ಬಹಳೆ ಸ್ನೇಹ ಮಾಡಿದ. ಭೀಮಸೇನದೇವರು ಆ ಸೈನ್ಯವನ್ನು ಬಿಟ್ಟುಕೊಟ್ಟು, ಅರ್ಜುನನ ಬಳಿವಿಡಿದು ಹೋದನು.

ದ್ರುಪದರಾಯನ್ನ ದ್ರೋಣಾಚಾರ್ಯರ ಸವೀಪದಲ್ಲಿ ಸ್ಥಾಪನಿ ಮಾಡಿದರು. ದ್ರೋಣಾಚಾರ್ಯ ದ್ರುಪದರಾಯನ್ನ ಕುರಿತು ಮಾತನಾಡಿದ. 'ಎಲೋ ದ್ರುಪದರಾಯ, ನನಗೆ ನಿನಗೆ ಗೆಳಿತನ ಅದೋ ಇಲ್ಲೊ' ಎಂದು ಕೇಳಿದನು. 'ಈಗ್ಗೆ ಗೆಳಿತನ ಅದೆ' ಎಂದು ದ್ರುಪದರಾಯ ದ್ರೋಣಾಚಾರ್ಯನ ಕುರಿತು ಮಾತನಾಡಿದನು. ದ್ರೋಣಾಚಾರ್ಯ ಮತ್ತೆ ಉತ್ತರ ಕೊಟ್ಟನು. 'ನೀನು ಅರಸು, ನಾನು ಬ್ರಾಹ್ಮಣ, ನನಗೆ ನಿನಗೆ ಸುಮ್ಮಗೆ ಗೆಳಿತನ ಆಗದು. ಆದ್ದರಿಂದ ಈ ಶಿಷ್ಯರಿಂದ ಈ ಪ್ರಕಾರ ಮಾಡಲ್ಪಟ್ಟಿತು. ನಿನ್ನ ಗೆಳಿತನ ಬೇಕಾದ ಕಾರಣದಿಂದ ಅರ್ಧ ರಾಜ್ಯ ತೆಗೆದುಕೊಳ್ಳಲ್ಪಡತದೆ. ಭಾಗೀರಥೀ ತೀರದ ದಕ್ಷಿಣದ ಕಡಿಗೆ ನೀನು ಅರಸಾಗು. ಉತ್ತರದ ಕಡಿಗೆ ನಾನು ಅರಸಾಗಥೀನಿ. ಹೀಂಗಾದರೆ ಗೆಳಿತನ ಒಪ್ಪತ್ತದೆ.' ಹೀಂಗಂತ ಮಾತನಾಡಿ, ಆತನ ಅರ್ಧ ರಾಜ್ಯ ಕೊಂಡು ಬಿಟ್ಟುಕೊಟ್ಟನು. ತರುವಾಯ ದ್ರೋಣ, ಶಿಷ್ಯರಿಂದ ಹಸ್ತಿನಾವತಿಗೆ ಹೋದ.

ದ್ರುಪದರಾಯ, ಪರಾಭವಚಿಂತಿಯಿಂದ ದಿವಾರಾತ್ರಿ ಆಲೋಚನಿ ಮಾಡುವಂಥಾವನಾದ. ಭೀಮಾರ್ಜುನರ ಬಲವನ್ನು ಕಂಡು ಅವರ ಆಶ್ರಯವನ್ನು ಇಚ್ಛಿಸಿದನು. 'ಸಂಬಂಧಕ್ಕೆ ಯೋಗ್ಯ' ಎಂಬಂಥ ಅರ್ಜುನನ ಮಾತು ಕೇಳಿ, ಅರ್ಜುನನಲ್ಲಿ ಮೃದುತ್ವ ಕಂಡು, ಆತನ ನಿಮಿತ್ತ ಕನ್ಯಾಪೇಕ್ಷ ಮಾಡಿದನು.

ದ್ರೋಣಾಚಾರ್ಯನನ್ನ ಕೊಲ್ಲೋಂಥ ಮಗ ಹುಟ್ಟಬೇಕೆಂದು ಅಪೇಕ್ಷ ಮಾಡಿ, ತನ್ನ ಪುರೋಹಿತನ್ನ ಕರಸಿ, ಯಜ್ಞ ಆರಂಭ ಮಾಡಿದನು. ಆ ಯಜ್ಞಕಾಲದಲ್ಲಿ ಪುತ್ರಪ್ರಾಪ್ತ್ಯರ್ಥವಾಗಿ ತಿಂಬುವಂಥ ಹವಿಸ್ಸನ್ನು ಹಿಡಕೊಂಡು, ಯಜಮಾನನ ಹೆಂಡತಿಯನ್ನು ಕರದರು. ಆಕೆ ಅಹಂಕಾರದಿಂದ ಆಲಸ್ಯ ಮಾಡಲಾಗಿ, ಯಾಜೋಪಯಾಜರು, ಈಕೆಯಿಂದ ಏನು ಪ್ರಯೋಜನವೆಂದು, ಯಜ್ಞಪುರುಷನಲ್ಲಿ ಹೋಮ ಮಾಡಥಿರಲಿಕ್ಕೆ, ದಿವ್ಯರೂಪ ಧರಿಸಿ, ಕುಂಡದ ದೆಸಿಯಿಂದ ಯಜ್ಞ-ಪುರುಷದೇವರು ಕಿರೀಟ ಕುಂಡಲ ಧರಿಸಿಕೊಂಡು, ದಿವ್ಯ ಸುವರ್ಣಮಾಲೀ ಹಾಕಿ-ಕೊಂಡು, ರಥ ಏರಿಕೊಂಡು, ಸಿಂಹನಾದ ಮಾಡತ, ದ್ರುಪದರಾಯನ ಎದುರಿಗೆ ಬಂದನು. ಆತನು ದಿಟ್ಟನಾದ ಕಡಿಯಿಂದ, ಪ್ರಕಾಶಮಾನನಾದ್ದರಿಂದ, ಧೃಷ್ಟ-ದ್ಯುಮ್ನ ಎಂತ ನಾಮವುಳ್ಳವನಾದನು. ಆ ತರುವಾಯದಲ್ಲಿ ಸಾಕ್ಷಾತ್ ಭಾರತೀ-ದೇವಿ, ಕುಂಡದ ಮಧ್ಯದ ದೆಸಿಯಿಂದ ಹೊರಟಳು. ಹ್ಯಾಂಗೆಂದರೆ, ಉಷಾ, ಶಚಿ, ಶ್ಯಾಮಲಾ, ಪಾರ್ವತೀ, ಈ ನಾಲ್ಕೂ ರೂಪ ಉಳ್ಳಾಕೆಯಾಗಿ ಹೊರಟಳು. ಕೃಷ್ಣಾ ಎಂಬ ನಾಮವುಳ್ಳಾಕೆ, ವರ್ಣ ಕೃಷ್ಣವಾದ ಕಾರಣ ಮತ್ತು ಉತ್ಕೃಷ್ಟ ಆನಂದದಿಂದ ಇದ್ದಾಳೆಂಬೋ ಕಾರಣ, ಕೃಷ್ಣಾ ಎಂಬೋ ನಾಮ ಬಂತು. ಉತ್ಪತ್ತಿ ಆಗೋ ಕಾಲದಲ್ಲಿ ಸರ್ವಾಭರಣ ಭೂಷಿತಳಾಗಿ, ಯೌವನರೂಪವುಳ್ಳಾಕೆಯಾಗಿ, ಲೋಕ-ಸುಂದರಿಯಾಗಿ, ಸರ್ವಲಕ್ಷಣಯುಕ್ತಳಾಗಿ ಅವತರಿಸಿದಳು. ಹ್ಯಾಂಗೆಂದರೆ ಶಚೀ, ಶ್ಯಾಮಲಾ, ಉಷಾ, ಪಾರ್ವತೀ ರೂಪವುಳ್ಳಾಕೆಯಾಗಿ ಅವತರಿಸಿದಳು. ಅವರಿಂದ ಕೂಡಿ ಏನುಕಾರಣ ಅವತರಿಸಿದಳೆಂದರೆ, ಪೂರ್ವದಲ್ಲಿ ಅವರಿಗೆ ಬ್ರಹ್ಮದೇವರ ಶಾಪವದೆ ಎಂದು ಹೇಳಿದ್ದಾರೆ.

ಪೂರ್ವದಲ್ಲಿ ಈ ದೇವತಾಸ್ತ್ರೀಯರುಗಳು ಬ್ರಹ್ಮದೇವರು ನೋಡತಿರಲಿಕ್ಕೆ, ಹಾವಭಾವವಿಲಾಸಾದಿಗಳ ತೋರಿಸಿದರು.* ಆಗ ಬ್ರಹ್ಮದೇವರು ಶಾಪ ಕೊಟ್ಟ. 'ಮನುಷ್ಯಯೋನಿಯನ್ನು ಐದರಿ. ಅಲ್ಲಲ್ಲಿ ಅನ್ಯಪುರುಷರ ಸಮಾಗಮವಾದೀತು.' ಈ ಪ್ರಕಾರ ಶಾಪ ಉಳ್ಳಂಥಾವರಾಗಿ ಭಾರತೀ ಸಮೀಪಕ್ಕೆ ಬಂದು, ತಮಗೆ ಶಾಪವಾದ ಪ್ರಕಾರವನ್ನು ಹೇಳಿ, ಸಾವಿರ ವರುಷ ಭಾರತೀ ಸೇವಿ ಮಾಡಿ, ನೂತ-ನಾಡಿದರು. " ಹೇ ಭಾರತೀ ನಮಗೆ ಮನುಷ್ಯಜನ್ಮ, ಅನ್ಯರ ಸಮಾಗಮ ಸರ್ವಥಾ ಬಿಟ್ಟಿದ್ದಲ್ಲ. ನಿನ್ನಲ್ಲಿ ನಾವು ವಾಸ ಮಾಡಿದ ಪಕ್ಷನೇ, ವಾಯುದೇವರ ಹೊರ್ತಾಗಿ, ಅನ್ಯರ ಸಮಾಗಮವಾಗದು. ಆದ್ದರಿಂದ ನಿನ್ನಿಂದ ಕೂಡಿ ಏಕದೇಹತ್ವ ಐದಥೇವು.

---

* ತಮ್ಮ ತಮ್ಮ ಪತಿಗಳಿಂದ ಕೂಡಿ ಹಾವಭಾವವಿಲಾಸಗಳ ತೋರಿಸಿದರು.

ಉಮಾಂಶಯೋತ್ಪನ್ನಾ ನಿತರಾಂ ಸರ್ವಲಕ್ಷಣ ಸಂಯುತಾ ।
ಪೂರ್ವಂ ಹ್ಯಮೂ ಚ ದೇವಸ್ತ್ರಿಃ ಕದಾಚಿದ್ಭರ್ತೃಭಿರ್ಯುತಾ ॥

ಮ. ಭಾ. ತೀ. ನಿ. ಅಧ್ಯಾಯ ೧೯, ಶ್ಲೋ. ೧೮೮

ಇಷ್ಟೇ ಅಲ್ಲ. ಬ್ರಹ್ಮರಾಯನಿಂದ ಪೂರ್ವದಲ್ಲಿ ಮತ್ತೂ ಒಂದು ಶಾಪವಾಗೇದೆ. ಅದು ಹ್ಯಾಂಗೆಂದರೆ, ನಾವು ಸ್ತ್ರೀಯರು ಎಲ್ಲರೂ ಕೂಡಿ ಏಕದೇಹತ್ವ ಐದಿ, ದಾವಾಗ ಬ್ರಹ್ಮದೇವರ ವಂಚನಿ ಮಾಡಬೇಕೆಂದು ಹೋದೆವು, ಆಗ್ಗೆ 'ನೀವು ಏಕದೇಹದಿಂದ ಮೂರುಖ್ಯಾಪಿ ಜನ್ಮ ಐದರಿ. ನನ್ನ ವಂಚನೀ ಮಾಡಬೇಕಂತ ಬಂದೀರಿ. ಆದಕಾರಣ ಮೂರಾವರ್ತಿ ಮನುಷ್ಯಜನ್ಮ ಐದರಿ.' ಈ ಪ್ರಕಾರ ನಾವು ಬ್ರಹ್ಮದೇವರಿಂದ ಶಪ್ತರಾಗಿದ್ದೀವಿ. ನಾಲ್ಕನೇ ಜನ್ಮದಲ್ಲಿ ಏನುಕಾರಣ ಹುಟ್ಟ-ಬೇಕಾಗೇದೆ ಎಂದರೆ, ನೀನು, ವಾಯುದೇವರ ಹೊರ್ತಾಗಿ, ಮತ್ತೊಬ್ಬ ಪುರುಷನ ಸಮಾಗಮ ಐದೋದಿಲ್ಲಾದಕಾರಣ, ನಿನ್ನಿಂದ ಕೂಡಿ ಏಕದೇಹವುಳ್ಳಂಥ ನಮ್ಮನ್ನು ವಾಯುದೇವರ ಹೊರ್ತಾಗಿ, ಮತ್ತೊಬ್ಬ ಪುರುಷನ ಸ್ಪರ್ಶ ಮಾಡಬ್ಯಾಡ. ಆದ-ಕಾರಣ ನಿನ್ನ ಸೇವಿ ಮಾಡಿದ್ದೀವಿ." ಈ ಪ್ರಕಾರ ದೇವತಾಸ್ತ್ರೀಯರಿಂದ ಸ್ತೋತ್ರ ಮಾಡಿಸಿಕೊಳ್ಳಲ್ಪಟ್ಟಂಥಾಕಿಯಾಗಿ, 'ಹಾಂಗೆ ಆಗಲಿ' ಎಂದು ಭಾರತೀ ಅವರಿಗೆ ಸಮಾಧಾನ ಮಾಡಿ, ಅವರಿಂದ ಕೂಡಿ, ಏಕದೇಹವುಳ್ಳಾಕಿಯಾಗಿ, ವಿಪ್ರಕನ್ಯಾ ಎಂಬ ನಾಮ ಧರಿಸಿದಳು. ಆ ಜನ್ಮದಲ್ಲಿದ್ದಂಥ ಪಾರ್ವತೀ ಮೊದಲಾದ ನಾಲ್ಕು ಮಂದಿ, ಶಿವನ ಕುರಿತು ತಪಸ್ಸು ಮಾಡಿದರು. ರುದ್ರದೇವರಲ್ಲಿದ್ದಂಥಾ ನಾರಾಯಣನ ಕುರಿತು ಭಾರತೀ ತಪಸ್ಸು ಮಾಡಿದಳು. 'ನಿಮಗೆ ಏಕದೇಹ ವ್ಯಾಪಾಡವಾಗಲಿ' ಎಂದು ರುದ್ರದೇವರು ವರವು ಕೊಟ್ಟ. ರುದ್ರನಲ್ಲಿದ್ದಂಥ ನಾರಾಯಣನು ಭಾರತೀ-ದೇವಿಗೆ ಅನಂತ ತೋಷಕರವಾದಂಥ ವರವು ಕೊಟ್ಟನು. ತರುವಾಯದಲ್ಲಿ ಆ ದೇಹವನ್ನು ಬಿಟ್ಟುಕೊಟ್ಟು ನಳನಂದಿನಿ ಎಂತ ನಳರಾಯನ ಮಗಳಾದಂಥಾಕಿಯಾಗಿ ಅವತರಿಸಿದಳು. ಆ ತರುವಾಯ ಇಂದ್ರಸೇನಾ ಎಂಬ ನಾಮ ಉಳ್ಳಾಕಿಯಾಗಿ ಏಕದೇಹವುಳ್ಳ ಭಾರತೀ ಅವತರಿಸಿದಳು.

ಆ ಕಾಲದಲ್ಲಿ ಮುದ್ಗಲನೆಂಬ ಮುನೀಶ್ವರ ತಪಸ್ಸು ಮಾಡತಿದ್ದ. ಕಥಾ-ಶ್ರವಣ ಮಾಡತಿದ್ದ. ಕಥಾಮಧ್ಯದಲ್ಲಿ ಬ್ರಹ್ಮದೇವರು ಮಗಳನ್ನ ಇಚ್ಛಾ ಮಾಡಿದ ಎಂತ ಕಥಾ ಕೇಳಿ, ಮುದ್ಗಲಬ್ರಾಹ್ಮಣ ಬ್ರಹ್ಮದೇವರ ಅಪಹಾಸ ಮಾಡಿದ. ಬ್ರಹ್ಮದೇವರು ಮುದ್ಗಲಋಷಿಗೆ ಶಾಪ ಕೊಟ್ಟನು. 'ಎಲೋ ಅಹಂಕಾರವುಳ್ಳಂಥ ಮುನೀಶ್ವರನೇ! ಭಾರತೀ ಮೊದಲಾದ ಪಂಚ ದೇವತಾಸ್ತ್ರೀಯರನ್ನು ಐದು.' ಹೀಂಗೆ ಬ್ರಹ್ಮದೇವರಿಂದ ನುಡಿಸಿಕೊಂಡಂಥಾತನಾಗಿ ತಪಸ್ಸು ಮಾಡಿ ಬ್ರಹ್ಮ-ದೇವರ ಸಂತೋಷಪಡಿಸಿದ. 'ಶಾಪಾನುಗ್ರಹ ಐದಿದ ನೀನು ಆ ದೇವತಾಸ್ತ್ರೀಯರನ್ನು ಐದು ಸರಿಯೇ, ನಿನ್ನ ಶರೀರದಲ್ಲಿದ್ದಂಥ ವಾಯುದೇವರೇವೇ ಭೋಗಿಸ್ಯಾನು. ನೀನು ಮೂರ್ಖಗೈದೀ. ನಿನಗೆ ಜ್ಞಾನವೆಂಬುದು ಆಗದು' ಎಂತ ನಿಮಿತ್ತ ಇದ್ದದ್ದರಿಂದ, ವಾಯುದೇವರು ಮುದ್ಗಲಋಷಿಯಲ್ಲಿ ಪ್ರವಿಷ್ಟನಾಗಿ, ಇಂದ್ರಸೇನಾ ಎಂಬ ಕನ್ನಿಕೆಯನ್ನು ಮದುವಿ ಮಾಡಿಕೊಂಡು ಸ್ವಸ್ಥ ಅಂತಃಕರಣವುಳ್ಳವನಾಗಿ

ಆಕಿಯಿಂದ ಕೂಡಿಕೊಂಡು ಬಹುಕಾಲ ರಮಿಸಿದನು. ಆಮ್ಯಾಲೆ ಮುದ್ಗಲ-ಋಷೀಶ್ವರಗೆ ಎಚ್ಚರಿಕೆ ಮಾಡಿ, ವಾಯು ತನ್ನ ಲೋಕಕ್ಕೆ ಹೋದನು. ಆಮ್ಯಾಲೆ ಮುದ್ಗಲಋಷಿ ದೇಶಾಂತರಕ್ಕೆ ಹೋಗಿ, ನಾರಾಯಣನ ಕುರಿತು ತಪಸ್ಸು ಮಾಡಿದನು. ಆ ಇಂದ್ರಸೇನೆಯೂ ತಪಸ್ಸು ಮಾಡಿದಳು. ಇಂದ್ರಸೇನಾ ದೇಹದಲ್ಲಿದ್ದಂಥ ಭಾರತೀಯು, ಶಿವಾಂತರ್ಯಾಮಿ ನಾರಾಯಣನ ಕುರಿತು ತಪಸ್ಸು ಮಾಡಿದಳು. ಮಿಗಿಲಾದ ಸ್ತ್ರೀಯರು ಶಿವನ ಕುರಿತು ತಪಸ್ಸು ಮಾಡಿದರು. ಶಿವನು ಪ್ರತ್ಯಕ್ಷನಾದ. ತರುವಾಯ ನಾರಾಯಣನು ಪ್ರತ್ಯಕ್ಷನಾಗಲಿಕ್ಕೆ, ಏಕದೇಹದಲ್ಲಿದ್ದಂಥ ಐದು ಮಂದಿ ಸ್ತ್ರೀಯರು, ಸ್ವಪತಿಪ್ರಾಪ್ತ್ಯರ್ಥ ಬೇಡಿಕೊಳ್ಳತ ಇರಲಿಕ್ಕೆ, ಐದಾವರ್ತಿ ವಾಕ್ಯವಾಯಿತು. ಇಂಥ ಐದು ಮಂದಿ ವಾಕ್ಯ ಕೇಳಿ ಐದು ಮಂದಿಗೆ ಉತ್ತರವನ್ನು ಕೊಟ್ಟನು. 'ನಿಮ್ಮನಿಮ್ಮ ಪತಿಯು ನಿಮ್ಮನಿಮ್ಮಗಳಿಗೆ ಪ್ರಾಪ್ತವಾಗಲಿ' ಎಂದು ನಿರೂಪಿಸಿದನು. ಶಿವನ ದೇಹದಲ್ಲಿದ್ದಂಥ ವಿಷ್ಣುವು ಭಾರತೀಗೆ ಪತಿಯನ್ನು ಕೊಟ್ಟನು. ಉಳಿದವರಿಗೆ ರುದ್ರನೇ ಪತಿಗಳನ್ನು ಕೊಟ್ಟನು.

ಐದು ಮೊದೀ ಉತ್ತರವನ್ನು ಕೇಳಿ, ನಾಲ್ಕು ಮಂದಿ ದೇವತಾಸ್ತ್ರೀಯರು—ದೇವತೆಗಳ ಪತಿತಾರ್ಥವಾಗಿ ಐದು ಮಂದಿ ಸ್ತ್ರೀಯರಿದ್ದೇವೆ ಎಂಬ ಪರಿಜ್ಞಾನವಿಲ್ಲ. ಕ್ಷೀರ ನೀರು ಕೂಡಿದರೆ ಹ್ಯಾಂಗಾಗತದೆ, ಹಾಂಗೆ ಏಕದೇಹತ್ವವೆಂದೇ ತಿಳೀದೆ, ಪರಸ್ಪರ ಜ್ಞಾನ ಹೋಯಿತು—ಅವರೈದು ಮಂದೀ ವಾಕ್ಯವು ಕೇಳಿ, ಒಬ್ಬಳಿಗೆ ಐದು ಮಂದಿ ಗಂಡರಾಗಲೆಂದು ಉತ್ತರ ಕೊಟ್ಟ, ಎಂದು ತಿಳಕೊಂಡು ರೋಧನ ಮಾಡಿದರು. ಆಗ್ಗೆ ಅಲ್ಲಿಗೆ ದೇವೇಂದ್ರ ಬಂದು ಏಕದೇಹದಿಂದ ಆಗುವಂಥ ರೋಧನ ಕಂಡು, ಏನುಕಾರಣ ಅಳತಿದ್ದಿ ಎಂತ ಕೇಳಿದನು. ವಟುರೂಪಿಯಾದಂಥ ರುದ್ರನ್ನ ತೋರಿಸಿ 'ನನ್ನ ಒಬ್ಬಳಿಗೆ ಐದು ಮಂದಿ ಗಂಡರು ಆಗಲಿ ಎಂದು ಶಾಪ ಕೊಟ್ಟಿಹಾನೆ' ಎಂಬ ವಚನವನ್ನು ಕೇಳಿ ದೇವೇಂದ್ರ, 'ಈ ಲೋಕದಲ್ಲಿ ನನ್ನಿಂದ ರಕ್ಷಿತಳಾದ ಸ್ತ್ರೀಯನ್ನು ವ್ಯರ್ಥವಾಗಿ ಶಪಿಸಿದ್ದಿ. ಎಲೋ ದುರ್ಮತಿಯಾದಂಥ ರುದ್ರನೇ!' ಅಂತ ಈ ಪ್ರಕಾರ ಎನತಿರಲಿಕ್ಕೆ ಶಿವನು ಮಾತನಾಡಿದ. 'ಹೇ ಇಂದ್ರ ನೀನು ಮನುಷ್ಯಜನ್ಮವನ್ನು ಐದು. ಈಕಿ ಗಂಡನಾಗು. ನನ್ನ ದ್ರೋಹದ ದೆಸಿಯಿಂದ ಬಂದಂಥ ನಿನ್ನಂಥ ದೇವತೆಗಳು, ಈ ಪರ್ವತ ಅಧೋಭಾಗದಲ್ಲಿಹಾರೆ ನೋಡು' ಎಂತ, ಈ ಪ್ರಕಾರ ಶಿವನಿಂದ ಮಾತನಾಡಿಸಿಕೊಂಡ ದೇವೇಂದ್ರನು, ಕೋಪದಿಂದ ಆ ಪರ್ವತವನ್ನು ಕೆತ್ತಿದ ಆ ಪರ್ವತದ ಕೆಳಭಾಗದಲ್ಲಿ ವಾಯುದೇವರು ಮೊದಲಾದ ದೇವತೆಗಳು, ಮನುಷ್ಯರಲ್ಲಿ ಅವತಾರ ಮಾಡೋದರಗೋಸ್ಕರ, ಆಲೋಚನಿ ಮಾಡುವಂಥಾವರಾಗಿ ಕುಳಿತಿದ್ದರು. ಅಂಥಾವರನ್ನು ದೇವೇಂದ್ರ ಕಂಡನು. ಆ ವ್ಯಾಳ್ಯಾದಲ್ಲಿ ದೇವೇಂದ್ರನು ನಾರಾಯಣನ ಪ್ರಾರ್ಥನ ಮಾಡಿ, ಆತನ ಅನುಗ್ರಹದಿಂದ ನರಾವೇಶದಿಂದ ಯುಕ್ತನಾಗಿ ಭೂಮ್ಯಾಲೆ ಹುಟ್ಟಿದನು.

ದೇವತಿಗಳು ತನ್ನ ದ್ರೋಹ ಮಾಡಿದ್ದಾರೆಂದು ರುದ್ರ, ಅಪದ್ಧ ಮಾತ ನಾಡಿದ್ದ. ತನ್ನಿಮಿತ್ತವಾಗಿ ಬ್ರಹ್ಮದೇವರು ಬಂದು ರುದ್ರದೇವರಿಗೆ ಶಾಪ ಕೊಟ್ಟ. 'ದಾವಾತಗೆ ಹುಸಿ ಆಡಿದ್ಯೋ, ಆತನ ದೆಸೆಯಿಂದ ಪರಾಭವವನ್ನು ಐದು. ನನ್ನಿಂದ ಶಪ್ತರಾದಂಥ ದೇವತಾಸ್ತ್ರೀಯರಿಗೆ, ನನ್ನ ಕೂಡ ವಿಚಾರ ಮಾಡದೆ, ಪತಿ-ಸಂಬಂಧವಾಗಲಿ ಎಂದು ವರವು ಕೊಟ್ಟ. ಆದರ ನಿಮಿತ್ತವಾಗಿ, ನಿನ್ನ ಸ್ತ್ರೀಯನ್ನು ನೀ ಐದಬ್ಯಾಡ. ಈಕೀನು ದ್ರೌಪದೀ ಎಂಬ ನಾಮವುಳ್ಳಾಕೆಯಾಗಿ ಹುಟ್ಟಲಿ. ಪರ್ವತದ ಕೆಳಗೆ ದಾವ ವಾಯುದೇವರು ಮೊದಲಾದ ದೇವತಿಗಳಿದ್ದರೋ ಅವರು ಈಕಿಗೆ ಪತಿಯಾಗಲಿ' ಎಂತ, ಈ ಪ್ರಕಾರ ಮಾತನಾಡಿ ಬ್ರಹ್ಮದೇವರು ತನ್ನ ಮನಿಗೆ ತೆರಳಿದನು. ಅದೇ ಶಿವನೇ ಅಶ್ವತ್ಥಾಮನಾಗಿ ಜನಿಸಿದನು. ಈ ಅರ್ಥವು ವೇದಗಳಲ್ಲಿ ಹದಿನೆಂಟು ಪುರಾಣಗಳಲ್ಲಿ, ಭಾರತದಲ್ಲಿ ಹೇಳೀದೆ.

ಸರ್ವ ಪಾಂಚಾಲದೇಶದಲ್ಲಿದ್ದವರು ಧೃಷ್ಟದ್ಯುಮ್ನ, ದ್ರೌಪದೀನ್ನ ನೋಡಿ ಬಹಳ ಸಂತೋಷಬಟ್ಟರು. ಇವರಾದರೂ ಯಜ್ಞಕುಂಡದಿಂದ ಬಂದರೂ ಸರಿಯೆ, ಮನುಷ್ಯರ ಉಪಭೋಗದಿಂದ, ಮನುಷ್ಯರ ಸಂಸರ್ಗದಿಂದ ಮನುಷ್ಯರ ಭಾವನಿ ಆಯಿತ್ತು. ದ್ರುಪದರಾಯನ ಸ್ತ್ರೀಯು ಪುರೋಹಿತಗೆ ಬೇಡಿಕೊಂಡು 'ಕುಂಡ-ದೊಳಗಿಂದ ಬಂದ ಮಕ್ಕಳು ತಾಯಿ ಹಾಂಗೆ ನನ್ನಲ್ಲಿ ಸ್ನೇಹ ಮಾಡಬೇಕು. ಹೀಂಗೆ ಮಾಡಿಕೊಡು' ಎನಲಿಕ್ಕೆ, ಪುರೋಹಿತ ಅದೇ ಪ್ರಕಾರ ಮಾಡಿದನು. ದ್ರೋಣಾಚಾರ್ಯ, ತನ್ನ ಕೊಲ್ಲಬೇಕೆಂದು ಧೃಷ್ಟದ್ಯುಮ್ನ ಹುಟ್ಟಿದ್ದಾನೆಂಬೋ ವಾರ್ತೆ ಕೇಳಿದ್ದರೂ ಸರಿಯೆ, ಧೃಷ್ಟದ್ಯುಮ್ನ ಅಸ್ತ್ರಾಭ್ಯಾಸ ನಿಮಿತ್ತವಾಗಿ ದ್ರೋಣಾಚಾರ್ಯನ ಸಮೀಪಕ್ಕೆ ಬಂದಾಗ, ದ್ರೋಣಾಚಾರ್ಯ ಲೋಕದಲ್ಲಿ ಪರಮ ಯಶಸ್ಸು ಆಗಬೇಕಾಗಿ, ಅಸ್ತ್ರಗಳನ್ನು ಧೃಷ್ಟದ್ಯುಮ್ನಗೆ ಕೊಟ್ಟನು. ಧೃಷ್ಟದ್ಯುಮ್ನನಾದರೋ, ಪರಶುರಾಮನ ಅಸ್ತ್ರಗಳನ್ನ — ದೇವತಿಗಳಲ್ಲಾದರೂ ದುರ್ಬಲತ್ವ ಇರೋಣದರಿಂದ — ಲೋಭದಿಂದ ಗ್ರಹಣ ಮಾಡಿದನು. ಆ ತರುವಾಯ ಕೃಷ್ಣದೇವರು, ಭೀಮಾರ್ಜುನರಿಂದ ದ್ರುಪದರಾಯ ಕಟ್ಟಿಸಿ-ಕೊಳ್ಳಲ್ಪಟ್ಟ ವೃತ್ತಾಂತವನ್ನು ಕೇಳಿ, ಪಾಂಡವರ ಸಮೀಪಕ್ಕೆ ಕೃತವರ್ಮನ ಕಳುಹಿಸಿಕೊಟ್ಟನು. ಆ ಕೃತವರ್ಮ ಕೃಷ್ಣದೇವರ ಕಡಿಯಿಂದ ಬಂದಾನೆಂದು, ಭಕ್ತಿಯಿಂದ ಪಾಂಡವರು ಬಹುಮಾನ ಮಾಡಿದರು. ಕೃತವರ್ಮ ಪಾಂಡವರಿಂದ ಬಹುಮಾನಿತನಾಗಿ, ಶ್ರೀಕೃಷ್ಣದೇವರ ಬಳಿಗೆ ತೆರಳಿದನು. ಅಂದಾರಭ್ಯ ದ್ರುಪದ-ರಾಜಾದಿಗಳು ದೇವತಾಪಕ್ಷಪಾತಿಗಳಾದರು. ಜರಾಸಂಧನ ಭೀತಿ ಬಿಟ್ಟುಕೊಟ್ಟ ಪಾಂಡವರನ್ನ ಆಶ್ರಯಿಸಿದರು. ಭೀಮಾರ್ಜುನರ ಬಲವನ್ನು ಕಂಡು, ವಿಶೇಷವಾಗಿ ಕೃಷ್ಣಾನುಗ್ರಹ ಪಾಂಡವರಲ್ಲಿ ಕಂಡು, ಪಾಂಡವರನ್ನ ಆಶ್ರಯಿಸಿದರು. ಪೂರ್ವದಲ್ಲಿ ಜರಾಸಂಧನ ಸಾಮರ್ಥ್ಯಿಯಿಂದ ಜರಾಸಂಧನ ಆಶ್ರಯಿಸಿದ್ದರೂ, ಸ್ನೇಹಪೂರ್ವಕ

① ಮೂಲಪಾಠದಲ್ಲಿ "ಯಾವ ರಾಜ್ಯಾಭಿಷೇಕವೂ ಎಂದು ಇಷ್ಟೆಂಬಲ್ಲ.

ಇದ್ದಿಲ್ಲ. ಈಗ ಪಾಂಡವರ ಬಲವನ್ನು ಕಂಡು, ಶ್ರೀಕೃಷ್ಣನ ಸಹಾಯ ಕಂಡು, ಜನ್ಮಜನ್ಮಾಂತರದ ಅಭ್ಯಾಸದ್ದಿಸಿಯಿಂಡ, ಶ್ರೀಕೃಷ್ಣನಲ್ಲಿ ಹಾಂಗೆ ಪಾಂಡವರಲ್ಲಿ ಸ್ನೇಹಯುಕ್ತರಾದರು. ಹಾಂಗೆ ದೈತ್ಯರು, ಬಹುಖ್ಯಾಪಿ ಕೃಷ್ಣನಿಂದ ಸೋತಂಥ ಜರಾಸಂಧನ್ನ ಕಂಡರೂ ಸರಿಯೆ, ಸ್ನೇಹ ಬಿಡಲಿಲ್ಲ. ತಮ್ಮತಮ್ಮ ಪೂರ್ವಸಂಸ್ಕಾರದಿಂದ, ಜರಾಸಂಧನಲ್ಲಿ ಪಕ್ಷಪಾತರಾಗಿದ್ದರು.

ಧೃತರಾಷ್ಟ್ರರಾಯನು, ಭೀಮ, ಅರ್ಜುನರ ಬಲವನ್ನು ತಿಳಿದಂಥಾತನಾಗಿ, ಪಾಂಡವರು ದೇವಾಂಶರೆಂದು ತಿಳಿದು, ಧರ್ಮರಾಯಗೆ ರಾಜ್ಯದಲ್ಲಿ ಅಭಿಷೇಕ ಮಾಡಿದನು ಯುವರಾಜ್ಯದಲ್ಲಿ ಭೀಮಸೇನಗೆ ಅಭಿಷೇಕ ಮಾಡಿದನು. ಭೀಮ-ಅರ್ಜುನರು ಸರ್ವದಿಕ್ಕುಗಳಲ್ಲಿ ಸಮಸ್ತ ರಾಯರುಗಳ ಗೆದ್ದು, ಧೃತರಾಷ್ಟ್ರರಾಯಗೆ ಕಪ್ಪ ಕೊಡುವಂಥಾವರಾದರು. ಧೃತರಾಷ್ಟ್ರ ಇವರ ಅಮಾನುಷವಾದಂಥ ವ್ಯಾಪಾರ ಕಂಡು ಸಃಪ್ರೀತನಾದನು. ಪಟ್ಟಣದಲ್ಲಿ ದೇಶದಲ್ಲಿದ್ದಂಥ ಜನರುಗಳು, ಹಾಂಗೆ ಭೀಷ್ಮ ದ್ರೋಣ ಕೃಪಾಚಾರ್ಯರು ಪ್ರೀತರಾದರೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ, 'ಶ್ರೀಕೃಷ್ಣಚರಿತೇ ಪಾಂಡವದಿಗ್ವಿಜಯಃ' ಎಂಬಂಥ ಹದಿನೆಂಟನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೧೯

ಶ್ರೀಕೃಷ್ಣಚರಿತೇ ಶ್ರೀ ದ್ರೌಪದೀಪರಿಣಯ ನಿರ್ಣಯಃ

ಈ ಹತ್ತೊಂಭತ್ತನೇ ಅಧ್ಯಾಯದಲ್ಲಿ—ಪಾಂಡವರು ಹರಿಭಕ್ತರು, ಜ್ಞಾನ ಭಕ್ತಿವೈರಾಗ್ಯಸಂಪನ್ನರು, ಗುಣಾಧಿಕರು, ಕೃತವರ್ಮನ ಕೈಯ ವಿಚಾರಿಸಿಕೊಂಡು, ತಾವು ಮಾಡಿದಂಥ ಅದ್ಭುತ ಕರ್ಮ ಶ್ರೀಕೃಷ್ಣನಲ್ಲಿ ಅರ್ಪಿಸತಿಹ್ದೋರು. ಹೀಂಗೆ ಜಯಶೀಲರಾಗಿ ಸಮಸ್ತರಿಗೆ ಬೇಕಾಗಿರಲಿಕ್ಕೆ, ದುರ್ಯೋಧನ ತನ್ನ ಸೋದರಮಾವ ಶಕುನಿಯಿಂದ ಪ್ರೇರಿತನಾಗಿ, ಶುಕ್ರಾಚಾರ್ಯರ ಶಿಷ್ಯ ಕಳಿಂಗನಲ್ಲಿ ಕಳಿಂಗಶಾಸ್ತ್ರ ಓದಿಕೊಂಡನು. ಕಳಿಂಗ ತಾನು ದೈತ್ಯ, ಬ್ರಾಹ್ಮಣನಾಗಿ ಹುಟ್ಟಿದ್ದ. ಸುಬಲರಾಯ ಶಕುನಿಗೆ ಕಳಿಂಗಶಾಸ್ತ್ರ ಕಲಿಸಿಹ. ಶಕುನಿ, ತನ್ನ ಸೋದರಳಿಯಂದಿರಿಗೆ ವಿದ್ಯಾಭ್ಯಾಸ ಮಾಡಿಸಬೇಕಾಗಿ, ತನ್ನ ಗುರುವು ಕಳಿಂಗಗೆ ಹೇಳಿ, ದುರ್ಯೋಧನಾದಿಗಳಿಗೆ ವಿದ್ಯಾಭ್ಯಾಸ ಮಾಡಿಸಿದನು. ಧೃತರಾಷ್ಟ್ರಗೆ ಅರಿಕಿಲ್ಲದೆ ಏಕಾಂತದಲಿ ವಿದ್ಯಾಭ್ಯಾಸ ಮಾಡಲಾಗಿ, ತಮ್ಮ ಬುದ್ಧಿಬಲದಿಂದ ಗುರುವಿಗಿಂತ ಹೆಚ್ಚಾದರು. ಸ್ನಾನ, ಸಂಧ್ಯಾವಂದನಿ ಜನನಿಮಿತ್ತ ಮಾಡಬೇಕು. ಜಗತ್ತು ತನ್ನ ಪೊಗಳಬೇಕಾಗಿ, ದಾನಧರ್ಮಗಳ ಮಾಡಬೇಕು, ತನಗೆ ಗುರುವಿಲ್ಲ, ದೇವತಿ ಇಲ್ಲ, ಇಂಥಾ ಕಪಟ-ವಿದ್ಯ ದಾರು ಕಲೀಥಾರೆ, ಅವರು ದೈತ್ಯರೊಳಗೆ ಬಹಳ ದೊಡ್ಡವರಾಗಿರಥಾರೆ. ಕಳಿಂಗನ ವಿದ್ಯ, ದುರ್ಯೋಧನಾದಿಗಳಿಗೆ ಬಹಳ ರುಚಿಕರವಾಗಿ ತೋರತಿಹೋದ . ಹಂದಿಗೆ ಅಶುದ್ಧ ಹ್ಯಾಂಗೆ ರುಚಿಕರವಾಗಿ ತೋರತದೆ, ಹಾಂಗೆ ದುರ್ಯೋಧನಾದಿ-ಗಳಿಗೆ ಕಳಿಂಗವಿದ್ಯ ರುಚಿಕರವಾಗಿ ತೋರತಿಹೋದು. ದುರ್ಯೋಧನಾದಿಗಳು ಕಳಿಂಗನಲ್ಲಿ ತಮ್ಮ ಬುದ್ಧಿಬಲದಿಂದ ವಿದ್ಯ ವಿಸ್ತಾರ ಮಾಡಿ ತೋರಿಸಿದರು.

ದುರ್ಯೋಧನ ಪಾಂಡವರ ವೈಭವ, ರಾಜಾಜ್ಞ, ಉತ್ಕೃಷ್ಟತನ, ಸಮಸ್ತರೂ ಪಾಂಡವರನ್ನು ಹೊಗಳೋದು ಕಂಡು, ಪಾಪಿ ಬಹಳ ಅಸಹ್ಯವುಳ್ಳವನಾಗಿ, ಧೃತರಾಷ್ಟ್ರನ ಅಂತಃಕರಣ ತಮ್ಮ ಕಡಿಗೆ ತಿರುಗಿಸಕೋಬೇಕಾಗಿ, ಶಕುನಿ ಕೂಡಿಕೊಂಡು ಧೃತರಾಷ್ಟ್ರನ ಸಮೀಪಕ್ಕೆ ಹೋದ. 'ಹೇ ಧೃತರಾಷ್ಟ್ರ, ನೀನು ಅರಸು, ಕುರುಕುಲಕ್ಕೆ ಹಿರಿಯ, ನಿನ್ನ ವೀರ್ಯದಿಂದ ನಾವು ಹುಟ್ಟೀವಿ. ಪಾಂಡು-ಚಕ್ರವರ್ತಿ ರಾಜ್ಯಕ್ಕೆ ತಕ್ಕವನಲ್ಲ. ಅಷ್ಟಾಗಿ ಪಾಂಡುಚಕ್ರವರ್ತೀ ವೀರ್ಯಕ್ಕೆ ಪಾಂಡವರು ಹುಟ್ಟಿದವರಲ್ಲ, ಅನ್ಯಪುರುಷರಿಗೆ ಹುಟ್ಯಾರೆ. ವ್ಯಭಿಚಾರಕ್ಕೆ ಹುಟ್ಟಿದವರು ರಾಜ್ಯಕ್ಕೆ ಯೋಗ್ಯರಲ್ಲ. ಅವರಲ್ಲಿ ರಾಜ್ಯಭಾರ ಇಟ್ಟಿದ್ದೀ. ಸಕಲ ಸಾಮ್ರಾಜ್ಯ ತಮ್ಮ ವಶ ಆಗೋ ಪರಿಯಂತ ನಿನ್ನಲ್ಲಿ ಗುರುತ್ವ ಇಡಥಾರೆ. ಬಲ-ವಂತರಾದವ್ಯಾಲೆ, ನೀ ಕುರುಡನೆಂದು ಉದಾಸೀನತ ಮಾಡಿ, ಸಕಲ ಸಾಮ್ರಾಜ್ಯ

(1) ಹಸ್ತಿನಾವತಿಗೆ ಪಾಂಡವರು ಬಂದಾಗ, ಧರ್ಮರಾಯಗೆ 16 ವರ್ಷ. 77ನೆ ಪುಟ ನೋಡು. ಅಂದರೆ ಈಗ 16+13 = 29 ವರ್ಷ.

ತಾವೇ ಆಳಥಾರೆ. ಭೀಮಾರ್ಜುನರು ಬಲಿಷ್ಠರಿದ್ದಾರೆ. ರಾಜ್ಯ ತಮ್ಮ ವಶವಾದ-ಮ್ಯಾಲೆ, ನಿನ್ನ ಹೊರಗೆ ಹಾಕ್ಯಾರು. ನಾವು ನಿನ್ನ ಮಕ್ಕಳಾಗಿ ಪಾಂಡವರ ದಾಸ-ರಾಗಿರಬೇಕು. ನಾವು ನಮ್ಮ ದುಃಖಕ್ಕೆ ಹೇಳೋದಿಲ್ಲ. ಧೃತರಾಷ್ಟ್ರನ ಮಕ್ಕಳು ಪಾಂಡವರ ದಾಸರೆಂದು, ಅಪಕೀರ್ತಿ ನಿನಗೆ ಬರತದೆಂದು ಹೇಳಥೀವಿ. ನಮ್ಮ ನಿಮಿತ್ತ ಹೇಳೋದಿಲ್ಲ. ನಿನ್ನ ಕೀರ್ತಿ ಕೆಡತದೆ. ಇನ್ನು ನಾವು ಬದುಕೇನು ಫಲ! ಸಾಯ ಲಿಕ್ಕೆ ಅಪ್ಪಣಿ ಕೊಡು' ಎನಲಿಕ್ಕೆ, ಅಂಧನೃಪ ಮಗನಕೂಡ ಮಾತನಾಡಥಾನೆ. 'ಎಲೋ ದುರ್ಯೋಧನ, ಪಾಂಡವರು ಬಲಿಷ್ಠರು. ಸಾಕ್ಷಾತ್ ಕೃಷ್ಣದೇವರು ಪಾಂಡವರ ಪಕ್ಷಪಾತಿ ಇದ್ದಾನೆ. ಭೀಮಾರ್ಜುನರು ತಮ್ಮ ಬಾಹುಪರಾಕ್ರಮದಿಂದ ಸಮಸ್ತ ದಿಕ್ಕುಗಳನ್ನೂ ಗೆದ್ದು, ನಮಗೆ ಮಣಿದು ಬರತಿದ್ದಿಲ್ಲದಂಥಾವರನ್ನು ಪಾದಾಕ್ರಾಂತರ ಮಾಡಿ, ಅಪಾರ ಕಪ್ಪಗಳು ನಮ್ಮ ಮುಂದೆ ಸುರವಥಾರೆ. ಅವರ ಐಶ್ವರ್ಯ ನೋಡಿ ಸರ್ವಥಾ ಅಸಹ್ಯಪಡಬ್ಯಾಡ. ಬಲವಂತರ ಸಂಗಡ ವಿರುದ್ಧ ಕಟ್ಟಿದ ಪಕ್ಷವೇ ತನ್ನ ಕುಲಕ್ಷಯವಾಗತದೆ. ಪಾಂಡವರು ಮಹಾ ಬಲಿಷ್ಠರಿದ್ದಾರೆ. ಅವರ ಕೂಡ ಒಳಿತು ಬಳಸಿದ್ದರಿಂದ ಸಕಲ ಪುರುಷಾರ್ಥವೇ ಫಲಿಸಿ ಬಂದೀತು.'

ಹೀಂಗೆಂದು ಧೃತರಾಷ್ಟ್ರ ಅನಲಿಕ್ಕೆ, ಶಕುನಿ ತನ್ನ ಸೋದರಳಿಯಗೆ ಹಚ್ಚಿ-ಕೊಟ್ಟ. 'ಪಾಂಡವರನ್ನ ಪಟ್ಟಣದ ಹೊರಗೆ ಹಾಕೋ ಹಾಂಗೆ ಮಾಡು' ಎನಲಿಕ್ಕೆ, ದುರ್ಯೋಧನ ತನ್ನ ತಂದಿಗೆ ಹೇಳಥಾನೆ. 'ರಾಯ, ಬೇಕೆಂಬೋ ಹಾಂಗೆ ಇತ್ತೆಂದರೆ, ಪಾಂಡವರನ್ನ ಪಟ್ಟಣದ ಹೊರಗೆ ಹಾಕು. ಇಲ್ಲದಿದ್ರೆ ನಾನು ಪ್ರಾಣತ್ಯಾಗ ಮಾಡಥೀನಿ.' ಹೀಂಗಂತ ಪಾಪಿ ದುರ್ಯೋಧನ ಎನಲಿಕ್ಕೆ, ಅಂಧ-ನೃಪ, ಕಲ್ಯಾವೇಶದಿಂದ, ಚಕ್ರಧಾರಿ ನಾರಾಯಣನ ಬಂಧಕಶಕ್ತಿಯಿಂದ ಮೋಹಿತ ನಾಗಿ, ಮಗನ ಕೂಡ ಮಾತನಾಡಿದ. 'ಎಲೋ ದುರ್ಯೋಧನ, ಪಾಂಡವರು ಮಹಾ ಬಲಿಷ್ಠರಿದ್ದಾರೆ. ದಾವ ಉಪಾಯದಿಂದ ಹೊರಗೆ ಹಾಕಬೇಕು, ಹೇಳು' ಎನಲಿಕ್ಕೆ, ದುರ್ಯೋಧನ, ಬಹಳ ಹರ್ಷವುಳ್ಳವನಾಗಿ, ತಂದಿ ತನ್ನ ವಶವಾದನೆಂದು ರೋಮಾಂಚನದಿಂದ ಉಬ್ಬಿ ಮಾತನಾಡಥಾನೆ. 'ಪಾಂಡವರು ಶತಶೃಂಗಪರ್ವತ ದಿಂದ ಬಂದು ಹದಿಮೂರು ವರುಷವಾಯಿತು. ಬಂದಾರಭ್ಯ ಇವರನ್ನ ಹೊರಗೆ ಹಾಕೋ ಉಪಾಯ ಬಹಳ ರಚಿಸಿದ್ದೀವಿ. ಪಾಂಡವರು ಬಲಿಷ್ಠರಿದ್ದಾರೆ, ಹ್ಯಾಂಗೆ ಹೊರಗೆ ಹಾಕಬೇಕೆಂದೀ. ಅಶ್ವತ್ಥಾಮ ದೊಡ್ಡ ಅಸ್ತ್ರಜ್ಞ, ಆತನ ಸೋದರ ಮಾವ ಕೃಪಾಚಾರ್ಯ, ಇವರನ್ನ ನನ್ನ ವಶ ಮಾಡಿಕೊಂಡೀನಿ. ಸಮಸ್ತ ಬಲವೂ ನನ್ನ ಅಧೀನವದೆ. ಪಿತಾಮಹ ಭೀಷ್ಮ, ದ್ರೋಣ ಬಹಳಕ್ಕೆ ನನ್ನ ಕಡಿಗಿದ್ದಾರೆ. ಕರ್ಣ ದೊಡ್ಡ ಶೂರ, ಪರಶುರಾಮನಿಂದ ವಿದ್ಯ ಕಲಿತು, ಬಂದಾನೆ. ಭೀಮಾರ್ಜುನರ ಗೆಲ್ಲಲಿಕ್ಕೆ ಕರ್ಣ ಮಹಾ ಶೂರನಿದ್ದಾನೆ. ಭೀಮಸೇನ ಮಹಾ ಬಲಿಷ್ಠನಂದಿ. ಭೀಮಸೇನನ ಸೋಲಿಸಲಿಕ್ಕೆ ನಾನು, ನಿನ್ನ ಮಗನಿದ್ದೀನಿ.

ನನ್ನ ಸಾಮರ್ಥ್ಯ ಕೇಳು. ಭೀಮಸೇನನ ಗೆಲ್ಲಲಿಕ್ಕೆ ದೂರ್ವಾಸಋಷಿಯಿಂದ ಮೂರುಸಾವಿರ ಮಂತ್ರಗಳು ಸಂಪಾದಿಸಿ, ಮಂತ್ರಗಳು ಗೌಪ್ಯದಲ್ಲಿಟ್ಟುಕೊಂಡೀನಿ. ಮಂತ್ರಗಳ ಪ್ರಾಬಲ್ಯದಿಂದ ಭೀಮಸೇನನ ಕೊಲ್ಲೋದಕ್ಕೆ ನಾ ಸಮರ್ಥ. ನನ್ನಲ್ಲಿದ್ದ ಮಂತ್ರಗಳಿಂದ ವೈರಿಗಳು ಪರಾಜಿತರಾದಾರು. ಮೂರುಸಾವಿರ ಮಂತ್ರಗಳಿಂದ ಅಗ್ನಿಸ್ತಂಭ, ಜಲಸ್ತಂಭ ಮಾಡೋ ಶಕ್ತಿ ನನಗದೆ. ಆದಿಪದದಿಂದ ಸಕಲ ಪುರುಷಾರ್ಥ ಮಂತ್ರಸಾಮರ್ಥ್ಯಯಿಂದ ಫಲಿಸಿಬಾಹೋದು. ಎರಡನೇ ವಿಚಾರಮಾಡದೆ, ಪಾಂಡವರ ಹೊರಗೆ ಹಾಕು. ನಾಗಪುರಿ ರಾಜಧಾನಿ, ನಿನ್ನ ಮಗನಾದ ಕಾರಣ ನಾ ಆಳಬೇಕು. ನಿನ್ನ ಮಕ್ಕಳ ಬಿಟ್ಟು ಪರರ ಮಕ್ಕಳಲ್ಲಿ ಸ್ನೇಹ ಮಾಡಿದ್ದರಿಂದ, ತ್ರಿಲೋಕದಲ್ಲಿ ನಿನಗೆ ಅಪಕೀರ್ತಿ ಬರತದೆ.

" ಈಗ ಪಾಂಡವರು ತಮ್ಮ ಸ್ವಾರ್ಥದಿಂದ ನಿನ್ನಲ್ಲಿ ಗುರುತ್ವ ಇಡಥಾರೆ. ಇವರಿಗೆ ವಿದುರನ ಹೊರತು ದಾರೂ ಸಹಕಾರಿಗಳಿಲ್ಲ. ಪಾಂಡವರು ರಾಜಧಾನಿಯಲ್ಲಿದ್ದ ಕಾರಣ, ಭೀಷ್ಮದ್ರೋಣಾದಿಗಳು ಉಭಯ ಪಕ್ಷಪಾತಿಗಳಾಗಿದ್ದಾರೆ. ಪಾಂಡವರನ್ನ ಹೊರಗೆ ಹಾಕಿದರೆ, ಸಕಲರೂ ನನ್ನ ಕಡಿಗೆ ಆಗಥಾರೆ. ಬಲಿಷ್ಠತನದಲ್ಲಿ ಪಾಂಡವರನ್ನ ಹೊರಗೆ ಹಾಕೋ ಸಾಮರ್ಥಿನಮಗಿಲ್ಲ. ಹೊರಗೆ ಹಾಕಲಿಕ್ಕೆ ಒಂದು ಉಪಾಯ ರಚಿಸಿದ್ದೀನಿ. ವಾರಣಾವತಿಯಲ್ಲಿ ಜಯಂತನಾಮಕನಾದ ನಾರಾಯಣ, ಲಿಂಗಾಕಾರನಾಗಿದ್ದಾನೆ. ಅಲ್ಲಿ ಪ್ರತಿವರುಷ ಜಾತ್ರಿ ನೆರೀತದೆ. ದೀಪೋತ್ಸವವಾಗತದೆ. ಯಥೇಷ್ಟ ದ್ರವ್ಯ ಬರತದೆ. ಬಂದ ದ್ರವ್ಯ ಹರಹಂಚಾಗಿ ಹೋಗತದೆ. ಆದಕಾರಣ ರಾಜಕುಮಾರರು ಅಲ್ಲಿರಬೇಕು. ಹಸ್ತಿನಾವತೀಸದೃಶ, ವಾರಣಾವತಿ ರಾಜಧಾನಿ ಆದೆ. ಹೋಗಿರೆಂದು ಪಾಂಡವರಿಗೆ ನಿನ್ನ ಅಪ್ಪಣೆ ಆಗಲಿಕ್ಕೆ, ಈ ಕ್ಷಣವೇ ತೆರಳಿ ಹೋಗಥಾರೆ. ಪಾಂಡವರು ನಾರಾಯಣನಲ್ಲಿ ಭಕ್ತಿಯುಳ್ಳವರು. ದೇವರ ಯಾತ್ರಿಗೆ ಹೋದೇವೆಂದು ನಿನ್ನ ಆಜ್ಞೆ ವಹಿಸಥಾರೆ. ನನ್ನ ಭೃತ್ಯರೇ ಪಾಂಡವರಿಗೆ ಹಿತವಾಗುವಂಥ ಮಾತುಗಳ ಹೇಳಥಾರೆ. ನನ್ನ ಭೃತ್ಯರೆಂದು ಪಾಂಡವರಿಗೆ ಅರಿಕೆ ಆಗಥಾಂಗೆ ಹಿತೋಪದೇಶ ನಿತ್ಯ ಹೇಳಥಾರೆ. ಏನು ಹೇಳಥಾರೆಂದರೆ, 'ದುರ್ಯೋಧನ ಪಾಪಿ ಇದ್ದಾನೆ. ಇವನ ಸಂಗತೀಲಿ ಇರಬ್ಯಾಡರಿ. ವಾರಣಾವತಿ ರಾಜಧಾನಿ ಆದೆ. ಜಯಂತನಾಮಕ ನಾರಾಯಣ ಲಿಂಗಾಕಾರನಾಗಿದ್ದಾನೆ, ನಿರಂತರ ಜಾತ್ರಿ ನೆರೀತ್ತದೆ. ದ್ರವ್ಯ ಯಥೇಷ್ಟ ಬರತದೆ. ನೀವು ಬಲಿಷ್ಠರಿದ್ದೀರಿ. ಸಮಸ್ತ ರಾಯರು ನಿಮ್ಮ ವಶರಾಗಿದ್ದಾರೆ. ಚಾತುರ್ಯದಿಂದ ರಾಜ್ಯ ಆಳಬಹುದು.' ಈ ಪ್ರಕಾರ, ಪರಸ್ಪರ ಗುಣವುಳ್ಳಂಥ ಮಾತುಗಳ ವಿಸ್ತ್ರತ್ವದಲ್ಲಿ ಹೇಳಥಾರೆ. ಪಾಂಡವರು ವಾರಣಾವತಿಗೆ ಹೋಗೋದಕ್ಕೆ ಸಮ್ಮತರಿದ್ದಾರೆ. ಅವರಿಗೆ ನಿನ್ನ ಅಪ್ಪಣೆ ಆಗಬೇಕು " ಎಂದಲ್ಲಿ ಅಂಧನೃಪ ಮಗನ ಮಾತು ಕೇಳಿ, ಕಲ್ಯಾವೇಶದಿಂದ ' ಬಹಳ ಒಳ್ಳೇದು ' ಎಂದು ಅಂಗೀಕಾರ ಮಾಡಿದನು.

ಧರ್ಮರಾಯ ತಮ್ಮಂದಿರ ಸಹವಾಗಿ, ಧೃತರಾಷ್ಟ್ರರಾಯಗೆ ನಮಸ್ಕಾರ ಮಾಡಲಿಕ್ಕೆ ಹೋದ. ಗತಚಕ್ಷುನ್ನೃಪ ಯುಧಿಷ್ಠಿರನಿಗೆಂದನು, 'ವಾರಣಾವತಿಗೆ ಹೋಗರಿ. ಅಲ್ಲಿ ದ್ರವ್ಯ ಬಹಳ ಬರತದೆ. ರಾಜಕುಮಾರರು ಅಲ್ಲಿರಬೇಕು. ವಾರಣಾವತಿ ರಾಜಧಾನಿ ಅದೆ. ಅಲ್ಲಿದ್ದ ಪಕ್ಷವೇ, ದ್ರವ್ಯ ಬಹಳ ಒದಗಿಬರತದೆ. ಹೋಗರಿ' ಎನಲಿಕ್ಕೆ,/ ರಾಯ ತಮಗೆ ಎಂದೂ ಹೋಗರೀ ಎಂದು ಅಂದಿದ್ದಿಲ್ಲ. ಬಪಳಕ್ಕೆ ದುರ್ಯೋಧನಾದಿಗಳು ಹೇಳಿದ್ದಾರಾಗಿದ್ದೀತು ಎಂದು ಪಾಂಡವರು ತಿಳಿದರು. ಹಿರೇರ ಆಜ್ಞೆ ಮೀರಲಿಕ್ಕೆ ಬಾರದು ಕಾರಣ, ಭೀಮಸೇನ ತಾನು ಸರ್ವಜ್ಞನಾದರೂ ಸರಿಯೆ, ಧರ್ಮರಾಯ ಅಣ್ಣನಾದಕಾರಣ, ಮುಂದಾಗೋ ಕಾರ್ಯ ಹೇಳಿದನು. 'ಎಲ್ಲ ಅಣ್ಣ, ನಾವು ಇನ್ನು ಭಿಕ್ಷ ಬೇಡಬೇಕಾದೀತು. ನಾವು ಕ್ಷತ್ರಿಯರು. ಭಿಕ್ಷ ಬೇಡಬಾರದು. ಹೀಂಗೆ ನಮ್ಮ ಪ್ರತಿಜ್ಞೆ ಅದೆ. ಬಲಾತ್ಕಾರದಿಂದ ರಾಯ ನಮ್ಮನ್ನ ಹೊರಗೆ ಹಾಕಿಸ್ಯಾನೆಂದೀ. ನಾವು ಬಲಿಷ್ಠರಿದ್ದೀವಿ. ನಮ್ಮನ್ನ ಹೊರಗೆ ಹಾಕೋ ಸಾಮರ್ಥ್ಯ ದಾರಿಗೆ ಅದೆ! :ಯುದ್ಧ ಮಾಡಿ ವೈರಿಗಳ ಗೆಲ್ಲೋಣಂತೆ. ದುರ್ಯೋಧನಾದಿಗಳು ಜ್ಞಾತಿಗಳಂತ ತಿಳಿಯಬ್ಯಾಡ. ಇವರನ್ನ ಕೊಂದರೆ ಕುಲಕ್ಷಯ ಮಾಡಿದ ಪಾಪವಿಲ್ಲ. ನಮ್ಮನ್ನ ಹೊರಗೆ ಹಾಕಿ, ತಾವು ಈ ರಾಜಧಾನಿಯಲ್ಲಿರಬೇಕೆಂಥಾರೆ. ಹಿರಿಯ, ಧೃತರಾಷ್ಟ್ರರಾಯ ಇದಲಿಕ್ಕೆ, ಆಗ್ಗಳಿಕೆ ಅನ್ಯಾಯ ಮಾಡಿದರೆ ಲೋಕದಲ್ಲಿ ಅಪಕೀರ್ತಿ ಬರತದಲ್ಲ ಎಂದರೆ, ನೀನು ಹಿರಿಯ ಅಣ್ಣನಿದ್ದೀ. ನಿನ್ನ ಆಜ್ಞೆ ಮೀರಲಿಕ್ಕೆ ಬಾರದು. ನನಗೆ ಬುದ್ಧಿಗೆ ತಿಳಿದಷ್ಟು ಹೇಳಿದೆ. ನಿನಗೆ ಚಿತ್ತಕ್ಕೆ ಬಂಧಾಂಗೆ ಮಾಡು' ಎಂದು ಭೀಮಸೇನ ಮಾತನಾಡಲಿಕ್ಕೆ; ದುರ್ಯೋಧನಾದಿಗಳನ್ನ ಆಕ್ಷಣವೇ ಕೊಲ್ಲಬಾರದಿತ್ತೆ ಎಂದಲ್ಲ, ಪಾಪಿಗಳ ಪಾಪ ಪೂರ್ಣವಾಗಬೇಕು. ಭೀಮಸೇನಗೆ ಲೇಶಮಾತ್ರ ದೋಷ ಬರಬಾರದು. ದೋಷಕ್ಕೆ ಪಾತ್ರ ಧರ್ಮರಾಯನಾಗಬಾರದು, 'ಭಗವಂತನ ದ್ವೇಷಿಗಳ ಕೊಲ್ಲೋಣವೇ ಪರಮಧರ್ಮವಾದರೂ ಸರಿಯೆ, ಪಾಪಿಗಳ ಪಾಪ ಪೂರ್ಣವಾಗಬೇಕು' ಎಂದ ಧರ್ಮರಾಯನ ವಚನ ಕೇಳಿ, ಭೀಮಸೇನ ಸುಮ್ಮಗಾದನು. ವಾರಣಾವತಿಗೆ ಹೋಗಲಿಕ್ಕೆ ಧೃತರಾಷ್ಟ್ರನ ಅಪ್ಪಣೆ ಆಗಲಿಕ್ಕೆ ಪಾಂಡವರು ತೆರಳಿದರು.

ವಿದುರ ನೀತಿಜ್ಞ, ಅಂತ್ಯಜರ ಭಾಷೆಯಿಂದ ದಾರಿಗೂ ತಿಳಿಯದಾಂಗೆ, ಸಂಜ್ಞಾದಿಂದ ಧರ್ಮರಾಯನ ಕೂಡ ಮಾತನಾಡಿದನು. 'ಅಗ್ನಿಭಯದಿಂದ, ವಿಷಭಯದಿಂದ ಬಹಳೇ ಸನ್ನದ್ಧರಾಗಿರರಿ. ದಾರಾದರೂ ಭೋಜನ ತಂದರೆ, ಭೋಜನ ಮಾಡಬ್ಯಾಡಿರಿ. ನಿದ್ರಿಗ್ಯೆದೀರಿ.' ಹೀಂಗೆಂದು ಧರ್ಮರಾಯಗೆ ಹೇಳಿ, ವಾರಣಾವತಿಗೆ ಕಳುಹಿಸಿಕೊಟ್ಟನು. ಭೀಮಸೇನ ತಾನು ಸರ್ವಜ್ಞಶಿಖಾಮಣಿ, ದುರ್ಯೋಧನನ ಕಪಟತನದ ಚರಿತ್ರಿಗಳನ್ನೆಲ್ಲ ಬಲ್ಲ. ವಿದುರ ಹೇಳಿದ ಮಾತು

ಕೇಳಿ ವಾರಣಾವತಿಗೆ ಹೋದಮ್ಯಾಲೆ ದುರ್ಯೋಧನ, ಪಾಂಡವರು ಬಹಳ ಪ್ರಬಲರಿದ್ದಾರೆ. ಛತ್ರ ಎತ್ತಿ, ವಾರಣಾವತಿ ರಾಜಧಾನಿ ಮಾಡಿ ಸಾಮ್ರಾಜ್ಯ ಆಳ್ಯಾರೆಂದು, ಉಪಾಯದಿಂದ ಕೊಲ್ಲಿಸಬೇಕೆಂದು, ತನ್ನ ಪ್ರಧಾನಿ ಪುರೋಚನಗೆ ಆಜ್ಞಾಪಿಸಿ, ಲಾಕ್ಷಾಗೃಹ, ರತ್ನಮಣಿಗಳಿಂದ ಖಚಿತವಾದಂಥಾದ್ದು, ವೈಡೂರ್ಯನಿರ್ಮಿತವಾದಂಥಾದ್ದು ಮಾಡಿಸಿದನು. ಆ ಲಾಕ್ಷಾಗೃಹ ತೆಗೆದುಕೊಂಡು ಪುರೋಚನ ವಾರಣಾವತಿಗೆ ಬಂದನು. ಪುರೋಚನ, ಪೂರ್ವದಲ್ಲಿ ರಾವಣನ ಪ್ರಧಾನಿ, ಪ್ರಹಸ್ತನೆಂಬುವ ಪುರೋಚನನಾಗಿ ಹುಟ್ಟಿ, ಪಾಂಡವರ ಸಂಗಡ ದ್ವೇಷ ಮಾಡಲಿಕ್ಕೆ, ಲಾಕ್ಷಾಗೃಹ ಕೊಂಡುಬಂದು, ಧರ್ಮರಾಯನ ಕೂಡ 'ಹೇ ಧರ್ಮರಾಯಾ! ಪಾಪಿ ದುರ್ಯೋಧನ ಒಳ್ಳೇವ ಅಲ್ಲ. ನಿಮ್ಮಂಥ ಸಜ್ಜನರ ಹೊರಗೆ ಹಾಕಿದ. ಅಂಥಾ ಪಾಪೀ ಸಂಗತೀಲಿ ಇರಬಾರದೆಂದು, ನೀವು ಬಲಿಷ್ಠರು, ದೊಡ್ಡವರು, ನಿಮ್ಮನ್ನ ಆಶ್ರಯಿಸಿ ಇರಬೇಕೆಂದು ಬಂದೀನಿ. ಮತ್ತೆ ನಿಮಗೆ ಉಚಿತವಾದಂಥಾದ್ದು ಕೊಂಡುಬಂದೀನಿ. ನೀವು ಅರಸರಿದ್ದೀರಿ. ದಿವ್ಯಗೃಹ ನಿಮಗೆ ಬೇಕೆಂದು, ಮಣಿಮಯವಾದಂಥ ಮನಿ ತಂದೀನಿ. ನೀವು ಧರ್ಮಶ್ರೇಷ್ಠರು, ಸಮೀಪದಲ್ಲಿದ್ದರೇ ನಮಗೆ ಪುರುಷಾರ್ಥ' ಎಂತ ಮಾತನಾಡಿ, ಲಾಕ್ಷಾಗೃಹ ಕೊಟ್ಟನು. ಆ ಗೃಹ ಮೀನಿನ ರಸದಿಂದ ನಿರ್ಮಿತವಾಗಿಹೋದು. ಭೀಮಸೇನ ಸರ್ವಜ್ಞ, ತಾ ಬಲ್ಲರೂ ಸರಿಯೆ, ಧರ್ಮರಾಯಗೆ ಹೇಳಥಾನೆ. 'ಈ ಪಾಪಿ ನಮ್ಮನ್ನ ಕೊಲ್ಲಬೇಕೆಂದು ಮನೀ ಕೊಂಡುಬಂದಾನೆ. ಎಚ್ಚತ್ತಿರಬೇಕು' ಎಂತ ಹೇಳಿದನು. ವಿದುರ, ಪುರೋಚನ ವಾರಣಾವತಿಗೆ ಹೋದದ್ದು ಕಂಡು, ಖನಕನೆಂಬ ಉಪ್ಪಣಿಗ್ಯನ್ನ ಕಳುಹಿದ. ಅಂತ್ಯಜಮಾತಿನಿಂದ ಧರ್ಮರಾಯಗೆ ಹೇಳಿದ್ದಾನೆ. ಆ ಮಾತು ನೆನಪು ಮಾಡಿಕೊಂಡು, 'ಲಾಕ್ಷಾಗೃಹದ ಸುತ್ತಮುತ್ತ ಅಗಳತಿ, ಪ್ರಾಕಾರ ಮಾಡಿ, ಬಿಲದ್ವಾರ ಹುಟ್ಟಿಸಿ ಬಾ' ಎಂದು ಕಳುಹಿದ. ವಿದುರನ ಆಜ್ಞಾ ಪ್ರಕಾರ, ಖನಕನೆಂಬೋ ಉಪ್ಪಣಿಗ್ಯ ಧರ್ಮರಾಯನ ಸಮೀಪಕ್ಕೆ ಬಂದು, ವಿದುರನ ಭೃತ್ಯನೆಂದು ಲೋಕಕ್ಕ ತಿಳೀಗೊಡದೆ, ರಾಜಕುಮಾರರ ಮನೀ ಸುತ್ತಮುತ್ತ ಪ್ರಾಕಾರ ಹುಟ್ಟಿಸಥಾರೆಂದು ಲೋಕಕ್ಕೆ ತಿಳುಹಿಸಿ, ಮನೀ ಒಳಗಿಂದ ಬಿಲದ್ವಾರ ಹುಟ್ಟಿಸಿ, ಖನಕ ಹೋದನು. ಪುರೋಚನ ಪಾಂಡವರನ್ನ ಸುಡಬೇಕೆಂದು ಬಹಳೇ ಸನ್ನದ್ಧನಾಗಿಹ.

ಹೀಂಗೆ ಆರು ತಿಂಗಳು ಪರಸ್ಪರ ಎಚ್ಚರಿಕೆ ಉಳ್ಳವರಾಗಿರಲಿಕ್ಕೆ, ಒಂದು ದಿವಸ ಪುರೋಚನನ ಅಕ್ಕ, ತನ್ನ ಐದು ಮಂದಿ ಮಕ್ಕಳ ಸಹವಾಗಿ, ತಮ್ಮನ ಭೆಟ್ಟಿಗೆ ಬಂದಳು. ಪಾಂಡವರಿಗೆ ವಿಷ ಹಾಕಿ ಸಾಯಗೊಡಬೇಕೆಂದು, ವಿಷಯುಕ್ತ ಭಕ್ಷ್ಯ, ಭೋಜ್ಯಗಳು ಕೊಂಡುಬಂದಳು. ಭೀಮಸೇನ ಅಣ್ಣತಮ್ಮಂದಿರಿಗೆ ಉಣಗೊಡಿಸದೆ, ತಂದಂಥಾ ಭಕ್ಷ್ಯ ಭೋಜ್ಯ ತಾನೇ ಉಂಡು ಜೀರ್ಣ

ಮಾಡಿದನು. ಪುರೋಚನ ತನ್ನ ಸೋದರಳೇಂದರ ಸಹವಾಗಿ ಏಳು ಮಂದಿ, ನಾನಾ ವಿಧ ಮಧುರ ರಸ, ಸುರಾಪಾನ ಮಾಡಿ ಸೊಕ್ಕಿ, ಲಾಕ್ಷಾಗೃಹದಲ್ಲಿ ಮಲಗಿ-ಕೊಂಡರು. ಭೀಮಸೇನ ಇವನ ಕಪಟತನ ಕಂಡು, ತನ್ನ ತಾಯಿ, ಭ್ರಾತೃ ಸಹವಾಗಿ ಐದು ಮಂದೀನ ಬಿಲದೊಳಗೆ ಇರಸಿ, ಲಾಕ್ಷಾಗೃಹಕ್ಕೆ ಬೆಂಕಿ ಹಚ್ಚಲಿಕ್ಕೆ, ಏಳು ಮಂದಿ ಸುಟ್ಟು ಸತ್ತರು.

ನಿರಪರಾಧಿ ಹೆಂಗಸಿನ್ನ ಏನುಕಾರಣ ಕೊಂದರೆಂದರೆ, ವಿಷಹಾಕಿ ಭಕ್ಷ್ಯ ಭೋಜ್ಯಗಳ ತಂದಿದ್ದಳು. ಅದಲ್ಲದೆ ಅಯೋಗ್ಯ ಬಯಕಿ ಬಯಸಿ, ಮಹಾರುದ್ರನ ಕುರಿತು ತಪಸ್ಸು ಮಾಡಿದ್ದಳು. ತಾ ಅದಿತಿ ಆಗಬೇಕು, ತನ್ನ ಮಕ್ಕಳು ದೇವತಿ-ಗಳಾಗಬೇಕು, ಹೀಂಗೆ ಒಂದು ವರುಷ ತಪಸ್ಸು ಮಾಡಲಾಗಿ, 'ನೀವೆಲ್ಲರೂ ಒಂಪೇ ಸಾರಿ ಸಾಯುದಿದ್ದರೆ ನೀ ಅದಿತಿ ಆದಿ, ನಿನ್ನ ಐದು ಮಂದಿ ಮಕ್ಕಳು ದೇವತಿ ಗಳಾದಾರು.' ಹೀಂಗೆಂದು ಮಹಾರುದ್ರ ವರವು ಕೊಟ್ಟಿದ್ದ. ಮಹಾರುದ್ರನ ವರವು ಸತ್ಯ ಮಾಡಬೇಕಾಗಿ, ಮಕ್ಕಳ ಸಹವಾಗಿ ಹೆಂಗಸಿನ್ನ ಸುಟ್ಟು, ಬಿಲದೊಳಗೆ ಭೀಮಸೇನ ಬರಥಾನೆ. ಕುಂತೀದೇವಿ ಮಕ್ಕಳ ಸಹವಾಗಿ ನಡಗಥಾಳೆ. ಕೈಕಾಲು ಮುಂದಕ್ಕೆ ಏಳವು. ಪುರೋಚನನ್ನ ಹ್ಯಾಂಗೆ ಸುಟ್ಟರಿ ಎಂದು, ಅಪರಾಧ ಹೊರಿಸಿ ಮಾರ್ಗ ಅಡ್ಡಗಟ್ಟಿ ದಂಡಿಸ್ಯಾರಲ್ಲ ಎಂದು ಬಹಳೇ ಅಂಜತಿಹೋಳು. ಇನ್ನು ಎತ್ತ ಹೋಗುವ ಎಂದು ಭಯಸ್ತಳಾಗಿಹೋಳು. ಅಷ್ಟರೊಳಗೆ ಭೀಮಸೇನ ಹೋಗಿ, ಧರ್ಮರಾಯನ್ನ ಅರ್ಜುನನ್ನ ಹೆಗಲೇರಿಸಿಕೊಂಡು, ಕುಂತಿಯ ಬೆನ್ನಮ್ಯಾಲೆ ಕೂಡ್ರಿಸಿಕೊಂಡು, ನಕುಲಸಹದೇವರನ್ನ ಟೊಂಕದಮ್ಯಾಲೆ ಕೂಡ್ರಿಸಿಕೊಂಡು, ಬಿಲದೊಳಗಿಂದ ಹೋಗಥಾನೆ. ಮಾರ್ಗದಲ್ಲಿ ಭಾಗೀರಥೀ ನದಿ ಕಂಡನು. ಅಲ್ಲಿ ವಿದುರನಾಜ್ಞಾದಿಂದ ನಾವಿ ದಾಟಿಸೋರು ಬಂದಿದ್ದರು. ಪಾಂಡವರು ನಾವಿಯಿಂದ ಭಾಗೀರಥೀ ದಾಟಿ, ಅತಿ ವೇಗದಿಂದ ನಾನಾ ದೇಶಗಳು ತುಳಿದು, ತಮ್ಮ ಕಾಲು-ಪೆಟ್ಟಿನಿಂದ ಪರ್ವತಗಳು ಪುಡಿಪುಡಿ ಮಾಡತಾ, ಹಿಡಿಂಬನ ವನಕ್ಕೆ ಹೋದರು.

ವಾರಣಾವತೀಲಿ ಬೆಳಗಾಯಿತು. ನೋಡಥಾರೆ, ಏಳು ಶವ ಸುಟ್ಟುಬಿದ್ದವೆ! 'ಪಾಂಡವರು ಸುಟ್ಟು ಸತ್ತರು. ಪುರೋಚನ ಪಾಂಡವರನ್ನ ಸುಡಲಿಕ್ಕೆ ಬಂದಿದ್ದ, ಪಾಪಿ ತಾನೂ ಸುಟ್ಟು ಸತ್ತುಹೋದ. ಇಂದಿಗೆ ಪಾಂಡುಚಕ್ರವರ್ತಿ ಸಂತಾನ ಮುಣುಗಿತು. ಹಾಹಾ! ಕಷ್ಟ ಕಷ್ಟ! ಪಾಪಿ ದುರ್ಯೋಧನ ಏನು ಅನ್ಯಾಯ ಮಾಡಿದ!' ಎಂದು ಕುರುಡನ ಮ್ಯಾಲೆ ಮಾತಿಟ್ಟು, ವಾರಣಾವತಿಯವರು ಹಸ್ತಿನಾವತಿಗೆ ಹೇಳಿಕಳುಹಿಸಿದರು. ಪಾಂಡವರು ಸುಟ್ಟು ಸತ್ತರೆಂಬೋ ವಾರ್ತೆ ಕೇಳಿ, ಧೃತರಾಷ್ಟ್ರ ಬಹಳ ದುಃಖ ಮಾಡಿದ. ಭೀಷ್ಮದ್ರೋಣಾದಿಗಳು ಅನೇಕ ವಿಧ ಪ್ರಲಾಪ ಮಾಡಿದರು. ವಿದುರ ಅಳತಿಹೋನು. ದುರ್ಯೋಧನಾದಿಗಳು ಸಂತೋಷ ದಿಂದ ಅತ್ತರು. ಅಳದಿದ್ದರೆ ಲೋಕಕ್ಕೆ ಒಂದು ಪ್ರಕಾರ ತೋರತದೆ. ಆದಕಾರಣ

ಎಲ್ಲರೂ ಅಳೋದು ಕಂಡು, ತಾವೂ ಅಳಹೊಕ್ಕರು. ಪಾಂಡವರು ಬದುಕ್ಯಾರೆಂದು ವಿದುರ ಸಂತೋಷದಿಂದ ಅತ್ತನು. ಪಾಂಡವರ ದ್ವಾದಶಾಹಕರ್ತವ್ಯ ಭೂರಿ-ಭೋಜನಾದಿ ಕರ್ಮ ಮಾಡಿದರು.

ಭೀಮಸೇನ ತನ್ನ ಭ್ರಾತೃಗಳನ್ನು ಹೊತ್ತುಕೊಂಡುಹೋಗಥಾನೆ. ಅವರೆಲ್ಲರೂ ಬಹಳ ನೀರಡಿಸಿಹೋರು. ನೀರು ಕುಡಿಯಲಿಕ್ಕೆ ಪಾತ್ರಿ ಇಲ್ಲ. ಭೀಮಸೇನ ತನ್ನ ಉಟ್ಟ ವಸ್ತ್ರದೊಳಗೆ ಕಮಲದ ಎಲಿ ಹಾಕಿ, ಸರೋವರದಿಂದ ನೀರು ಕೊಂಡು ಬರಥಾನೆ. ರಾಜಪುತ್ರರು ಶ್ರಮಪಟ್ಟವರಲ್ಲ. ಶ್ರಾಂತರಾಗಿ ನಿದ್ರಿ ಮಾಡತಿಹೋರು. ನಿದ್ರಿ ಭಂಗ ಮಾಡಬಾರದೆಂದು ಉದಕ ಕೊಂಡು ಭೀಮಸೇನ ನಿಂತಾನೆ. ಹಿಡಿಂಬ, ಮನುಷ್ಯರ ವಾಸನಿ ತಿಳದು ತನ್ನ ತಂಗಿ ಹಿಡಿಂಬೀನ ಕಳುಹಿದನು. 'ತಿನ್ನಲಿಕ್ಕೆ ಮನುಷ್ಯರನ್ನ ಕೊಂಡು ಬಾ' ಎನಲಿಕ್ಕೆ, ಹಿಡಿಂಬಿ ಬಂದು ಭೀಮಸೇನನ ಚಲುವಿಕಿ ಕಂಡು ಕಾಮಾತುರಳಾಗಿ, ತನ್ನ ಮದುವಿ ಮಾಡಿಕೊಂಡು ಭೋಗಿಸೆಂದು ಪ್ರಾರ್ಥನ ಮಾಡತಿಹೋಳು. ಹಿಡಿಂಬೀ ದಾರೆಂದರೆ, ದೇವೇಂದ್ರನ ಲೋಕಕ್ಕೆ ಸಂಪತ್ತಭಿಮಾನಿದೇವತಿ. ಹಾವಭಾವ ವಿಲಾಸಗಳು ದೇವೇಂದ್ರಗೆ ತೋರಿಸಿದಳು. ಶಚೀದೇವಿಗೆ ಸಿಟ್ಟು ಬಂತು. 'ನಾನು ನಿಜಸ್ತ್ರೀ ಇರಲಿಕ್ಕೆ, ಮುಂದರಿದು ನನ್ನ ಗಂಡಗೆ ಹಾವಭಾವವಿಲಾಸಗಳು ತೋರಿಸಿದಿ. ಆದ-ಕಾರಣ ರಾಕ್ಷಸಳಾಗು' ಎಂದು ಶಾಪ ಕೊಟ್ಟಳು. ಶಚೀದೇವೀ ಶಾಪವಾದಕಾರಣ, ಸಂಪತ್ತಭಿಮಾನಿದೇವತಿ ಭಾರತೀ ಕುರಿತು ತಪಸ್ಸು ಮಾಡಿದಳು. ಭಾರತೀಯು 'ರಾಕ್ಷಸಜನ್ಮದಲ್ಲಿ ಹುಟ್ಟಿದಾಗ್ಯೂ, ನನ್ನ ಗಂಡ ಭೀಮಸೇನನ ಭೋಗವಾದೀತು. ಹಾಂಗೂ ರಾಕ್ಷಸಜನ್ಮ ಹೋದೀತು' ಎಂದಳು. ಸಂಪತ್ತಭಿಮಾನಿ ಶ್ರೀದೇವಿ, ಭಾರತೀ ಆವೇಶದಿಂದ ಹಿಡಿಂಬಿಯಾಗಿ ಹುಟ್ಟಿದ್ದಳು. ಸುಂದರಪುರುಷ ಭೀಮಸೇನನ ಭೋಗ ಬಯಸಿದಳು. ಬಹಳ ಪ್ರಾರ್ಥಿಸತಿಹೋಳು.

ಭೀಮಸೇನ ಮಾತನಾಡಥಾನೆ. 'ನಮ್ಮ ಅಣ್ಣನ ಮದುವಿ ಆಗದಕಿಂತ ಮೊದಲೇ ನಾನು ಮದುವಿ ಮಾಡಿಕೊಂಡರೆ ಪರವೇತ್ತನಾಗಥೀನಿ. ನಿನ್ನ ಭೋಗ ಮಾಡೋ ಹಾಂಗಿಲ್ಲ' ಎಂದು ಹೇಳಿದ ಭೀಮಸೇನನ ಮಾತು ಕೇಳಿ ಹಿಡಿಂಬೀ, ಭಾರತೀ ಆವೇಶ ಇದ್ದಕಾರಣ, ತನ್ನ ಭೋಗಿಸೆಂದು ಬಹಳವಾಗಿ ಬೇಡಿಕೊಂಡಳು. 'ನನ್ನ ಮಾತು ಉದಾಸೀನ ಮಾಡಿದಿ. ನಾಳಿಲ್ಲ ನಾಡದೇ, ಜಗತ್ತಿಗೆ ಒಡಿಯ ಸಾಕ್ಷಾತ್ ಪರದೇವತಿ ವೇದವ್ಯಾಸ ಬರಥಾನೆ. ನನಗೆ ನಿನ್ನ ಅಂಗಸಂಗ ಮಾಡಿಸಿ-ಕೊಟ್ಟಾನು. ಗುರುವಾಕ್ಯವು ನೀನು ಮೀರಲಿಕ್ಕೆ ಬಾರದು. ನಾನು ಏನುಕಾರಣ ವ್ಯರ್ಥ ಪ್ರಾರ್ಥಿಸಲಿ.' ಹೀಂಗೆ ಮಾತನಾಡಿ, ಭೋಗದಲ್ಲಿ ಬಯಕೆಯುಳ್ಳಾಕೆಯಾಗಿ ಸುಮ್ಮಗೆ ನಿಂತಳು. ಹಿಡಿಂಬೀ, ರಾಕ್ಷಸತಂಗಿ ಕಾಮಾತುರಳಾಗಿ, ಮನುಷ್ಯನ್ನ ಕೊಲ್ಲದೆ ನಿಂತಾಳೆ. ಇಬ್ಬರನ್ನೂ ಕೊಂದೇನೆಂದು, ಹಿಡಿಂಬರಾಕ್ಷಸ ಮಹಾ

ವೇಗದಿಂದ ಭೀಮಸೇನನ ಸಮೀಪಕ್ಕೆ ಬಂದನು. 'ಎಲೌ ರಾಕ್ಷಸಿ! ಮನುಷ್ಯನ್ನ ಭಕ್ಷಾರ್ಥವಾಗಿ ತರಲು ನಿನ್ನ ಕಳುಹಲಿಕ್ಕೆ, ಪರಪುರುಷನ ಬಯಸಿ ಹ್ಯಾಂಗೆ ನಿಂತಿ' ಎಂದು ಕೋಪದಿಂದ ತನ್ನ ಕೊಲ್ಲಲಿಕ್ಕೆ ಬಾಹೋದು ಕಂಡು, ಭೀಮಸೇನನ್ನ ಹಿಡಿಂಬೀ ಶರಣುಹೊಕ್ಕಳು. 'ಹಿಡಿಂಬ, ನನ್ನ ಕೊಲ್ಲಲಿಕ್ಕೆ ಬರಥಾನೆ, ನೀನು ರಕ್ಷಿಸು' ಎನಲಿಕ್ಕೆ ಭೀಮಸೇನ ಮಾತನಾಡಿದ. 'ನನ್ನ ತಾಯಿ ಭ್ರಾತೃಗಳು ಮಲಗಿಕೊಂಡಾರೆ. ನಾನು ಯುದ್ಧಕ್ಕೆ ತೊಡಗಿದರೆ, ಹುಲಿಕರಡಿಗಳು ತಿಂದಾವು. ಇವರನ್ನ ರಕ್ಷಿಸಿಕೊಂಡು ನೀನು ಇಲ್ಲಿರು' ಎಂದು ಹೇಳಿ, ಹಿಡಿಂಬನ ಹಿಡಕೊಂಡು ಹೋಗಿ, ದೂರದಲ್ಲಿ ಇಬ್ಬರೂ ಮುಷ್ಟೀಪೆಟ್ಟಿನಿಂದ ಪರ್ವತಗಳೆಲ್ಲ ಪುಡಿಪುಡಿ ಮಾಡಿದರು. ಭೂಮಿ ತಗ್ಗುಬೀಳತೊಹೋದು. ಸಿಂಹನಾದ ಮಾಡಥಾರೆ. ಉಭಯತರ ಯುದ್ಧಶಬ್ದದಿಂದ ಮಲಗಿದ್ದವರು ಎದ್ದು ನೋಡಥಾರೆ. ದುರ್ಯೋಧನಾದಿಗಳು ಬೆನ್ನಟ್ಟಿ ಬಂದಿದ್ದಾರಲ್ಲ ಎಂದು ಚಂಚಲ ಮನಸ್ಸುಳ್ಳವರಾದರು. ಭೀಮಸೇನ ಶೀಘ್ರ ರಾಕ್ಷಸನ್ನ ಕೊಲ್ಲಬೇಕೆಂದು, ಹಿಡಿಂಬನ ಎದೀಮ್ಯಾಲೆ ಮುಷ್ಟೀಪೆಟ್ಟು ಹಾಕಲಿಕ್ಕೆ, ಭೂತಳದಲ್ಲಿ ರಕ್ತ ಕಾರತಾ ಬಿದ್ದನು. ಮರಣವನ್ನು ಐದಿದನು. ಕ್ರಮದಿಂದ ನರಕಾದ್ಯನರ್ಥ ಉಂಡು, ತಮಸ್ಸಿಗೆ ಹೋಗಿ ಬಿದ್ದಾನು. ಹಿಡಿಂಬಗೆ ಮಹಾರುದ್ರನ ವರವಿಹೋದು. ಅಂಥಾ ವರವು ತಿರಸ್ಕಾರ ಮಾಡಿ, ಹಿಡಿಂಬನ ಕೊಂದು ಬಿಟ್ಟನು. ಅನಂತರ ಮುಂದಕ್ಕೆ ಹೋಗಥಾರೆ.

ಆಗ್ಯೆ ಹಿಡಿಂಬೀ ಭೋಗ ಬಯಸಿ ಕುಂತೀ ಧರ್ಮರಾಯರಿಗೆ 'ಭೀಮಸೇನನ್ನ ನನ್ನ ಭೋಗ ಮಾಡೋಹಾಂಗೆ ಮಾಡಿಸರಿ' ಎಂದು ಬೇಡಿಕೋತಿಹೋಳು. ಭೀಮಸೇನಗೆ ಕುಂತೀ-ಧರ್ಮರಾಯರು ಹೇಳತಿಹೋರು. 'ಹೆಂಗಸು ಹಿಡಿಂಬೀ ಏನಂಥಾಳೆ, ಆಕೀ ಮನೋಭೀಷ್ಟ ಪೂರ್ಣಮಾಡು' ಹೀಂಗಂತ ಹೇಳಿದರು. ಅನಂತವೇದ-ಪ್ರತಿಪಾದ್ಯ ವೇದವ್ಯಾಸದೇವರು ಪ್ರತ್ಯಕ್ಷರಾದರು. ವ್ಯಾಸರೂಪಿ ನಾರಾಯಣ ಸುಖಸಮುದ್ರನಾದಂಥಾತನ್ನ ಕಂಡು, ಪಾಂಡವರು ಬಹಳ ಉಲ್ಲಾಸದಿಂದ ಸ್ವಾಮೀ ಪೂಜಿ ಮಾಡಿದರು. ಸ್ವಾಮಿ ವೇದವ್ಯಾಸ ತನ್ನ ಮೊಮ್ಮಕ್ಕಳ ತೊಡೀಮ್ಯಾಲೆ ಕೂರಿಸಿಕೊಂಡು, ತಲೀಮ್ಯಾಲೆ ನ್ಯಾವರಿಸಿ, 'ಲಾಕ್ಷಾಗೃಹದಲ್ಲಿ ಸುಟ್ಟು ಸಾಯಬೇಕೆಂದು ಪಾಪಿಗಳು ಮಾಡಿದ್ದರು. ದೈವೇಚ್ಛೆಯಿಂದ ಉಳಿದಿದ್ದೀರಿ' ಎಂದು, ತನ್ನ ಕೈಕಮಲಗಳಿಂದ ನ್ಯಾವರಿಸಿದನು. ಪಾಂಡವರು ನಮ್ರಿತರಾಗಿ ಕೈ ಮುಗಿದುಕೊಂಡು ನಿಂತರು. ಹಿಡಿಂಬೀ ಬಂದು ಸಾಷ್ಟಾಂಗನಮಸ್ಕಾರ ಮಾಡಿ, ವೇದವ್ಯಾಸನ್ನ ಬೇಡಿಕೊಂಡಳು. ಭೀಮಸೇನನ ಭೋಗ ಆಗೋಹಾಂಗೆ ಮಾಡೆಂದು ಕೇಳಲಿಕ್ಕೆ, ಶ್ರೀವೇದವ್ಯಾಸನು ಹೇಳಿದನು. 'ಎಲೈ ಭೀಮಸೇನ! ಈಕಿ ರಾಕ್ಷಸಿಯಲ್ಲ. ಸ್ವರ್ಗಕ್ಕೆ ಸಂಪತ್ತ್ಯಭಿಮಾನಿದೇವತಿ, ಶ್ರೀದೇವಿ ಇದ್ದಾಳೆ. ಶಚೀ ಶಾಪದಿಂದ ರಾಕ್ಷಸಜನ್ಮ ಬಂದದೆ. ಈಕಿಗೆ ಮಗ ಹುಟ್ಟೋತಪರಿಯಂತ ಈಕಿ ಭೋಗ ಮಾಡು.'

ಹೀಂಗಂತ ಬೋಧಿಸಲಿಕ್ಕೆ, ಸರ್ವೋತ್ತಮ ದೇವತಿ ಲಕ್ಷ್ಮೀಪತಿ ಹೇಳಥಾನೆ. ಸ್ವಾಮೀ ಆಜ್ಞೆ ಮೀರಲಿಕ್ಕೆ ವಶವಲ್ಲ. ಆದಕಾರಣ, ಆಕ್ಷಣವೇ ಸ್ವಾಮೀ ಆಜ್ಞೆದಿಂದ ಪಾಣಿಗ್ರಹಣ ಮಾಡಿದನು.

ಕುಂತೀದೇವಿ ಹಿಡಿಂಬಿ ಕೂಡ ಮಾತನಾಡಿ 'ರಾತ್ರೀಲಿ ಹುಲಿ ಕರಡಿಗಳು ಬಹಳ ಬರಥಾವೆ. ಆದಕಾರಣ ನಮ್ಮ ರಕ್ಷಣಾರ್ಥವಾಗಿ, ನಮ್ಮ ಸಮೀಪದಲ್ಲಿರಬೇಕು' ಎಂದಲ್ಲಿ, ರಾತ್ರೀಲಿ ಹಿಡಿಂಬಿ ಪಾಂಡವರ ಸಂರಕ್ಷಿಸಬೇಕಾಗಿ, ಅವರ ಸಮೀಪದಲ್ಲಿದ್ದು, ಸೂರ್ಯೋದಯವಾಗಲಿಕ್ಕೆ, ಭೀಮಸೇನನ್ನ ತನ್ನ ಹೆಗಲಮ್ಯಾಲೆ ಕೂಡ್ರಿಸಿಕೊಂಡು, ನಂದನಾದಿ ವನಗಳಲ್ಲಿ ಅನೇಕ ಕ್ರೀಡಿಗಳ ಮಾಡಿ, ನಾನಾವಿಧ ಭೋಗಗಳ ಬಯಸಿ, ಅಸ್ತಮಾನಕ್ಕೆ ತನ್ನ ಹೆಗಲಮ್ಯಾಲೆ ಭೀಮಸೇನನ್ನ ಕೂಡ್ರಿಸಿಕೊಂಡು, ಪಾಂಡವರ ಸಮೀಪಕ್ಕೆ ಬಾಹೋಳು. ಹೀಂಗೆ ನಿರಂತರ ಆರು ತಿಂಗಳು ಭೋಗ ಮಾಡಿದಳು. ಕಡೀ ದಿವಸ ನೈರುತ್ಯಕೋಣಾದಿಪತಿ, ಮಹಾರುದ್ರನ ಆವೇಶದಿಂದ ಘಟೋತ್ಕಚನಾಗಿ ಹುಟ್ಟಿದನು. ತಾಯೀ ಹೊಟ್ಟೆಯೊಳಗಿಂದ ಬಾಹಾಗ, ತಲಿ ನುಣುಪಾಗಿ ಕೊಡದಪ್ಪಂದೆ ಇಹೋದು. ಹುಟ್ಟಿದಾಗಲೇ ತುರುಬು ಕಟ್ಟಿಕೊಳ್ಳಲಿಕ್ಕೆ, ಕೂದಲುಗಳು ಬೆಳೆದಕಾರಣ ಘಟೋತ್ಕಚನೆಂಬ ನಾವು ಬಂತು. ಭೀಮಸೇನ ಹಿಡಿಂಬೀಗೆ 'ನಿನ್ನ ಮಗನ್ನ ಕೂಡಿಕೊಂಡು ಹೋಗು. ನಾವ್ ದಾವಾಗ ಸ್ಮರಿಸೇವು ಆಗ ಬಾ' ಅಂತ ಹೇಳಿ ಕಳುಹಿಕೊಟ್ಟನು. ಹಿಡಿಂಬೀ ರಾಕ್ಷಸದೇಹ ಬಿಟ್ಟು, ತನ್ನ ನಿಜರೂಪ ಧರಿಸಿ ಇಂದ್ರನ ಲೋಕಕ್ಕೆ ಹೋದಳು.

ಇಷ್ಟಾಗಲಿಕ್ಕೆ, ಪುನಃ ವೇದವ್ಯಾಸ ಬಂದು ಪಾಂಡವರಿಗೆ ಹೇಳಿದನು. 'ವನದಲ್ಲಿ ನಿಂದರಬ್ಯಾಡರಿ. ಪಟ್ಟಣ ಸೇರಿಕೊಂಡು ಬ್ರಾಹ್ಮಣವೇಷ ಧರಿಸಿ, ಗುರುಕುಲವಾಸ ಮಾಡಿ ಬನ್ನಿ' ಎಂದು ಹೇಳಿ, ಏಕಚಕ್ರನಗರಕ್ಕೆ ಪಾಂಡವರಿಂದ ಕೂಡಿಕೊಂಡು ಬಂದನು. ಭಕ್ತನಾದ ಭೀಮಸೇನನ ಕೈಯಿಂದ ಬಕಾಸುರನ್ನ ಕೊಲ್ಲಿಸಬೇಕಾಗಿ, ಏಕಚಕ್ರನಗರಕ್ಕೆ ಕೂಡಿಕೊಂಡು ಬಂದನು. ಅಲ್ಲಿ ಒಬ್ಬ ಬ್ರಾಹ್ಮಣನಲ್ಲಿ 'ಇವರು ನನ್ನ ಶಿಷ್ಯರಿದ್ದಾರೆ. ಇವರಿಗೆ ವಿದ್ಯಾಭ್ಯಾಸ ಮಾಡಿಸು' ಎಂದು ಹೇಳಿ, ಪಾಂಡವರಿಗೆ ಸಂತವಿಟ್ಟು, 'ದಾವಾಗ್ಲೆ ನನ್ನ ಬಾ ಎಂದು ನೆನಸಥೀರಿ, ಅದೇ ಕ್ಷಣದಲ್ಲಿ ನಿಮ್ಮ ಸಮೀಪದಲ್ಲಿ ಬಂನೇನು' ಎಂದು ಸೊಸಿಗೆ ಹೇಳಿ, ಮೊಮ್ಮಕ್ಕಳಿಗೆ ಸಮಾಧಾನ ಮಾಡಿ, ಬದರಿಕಾಶ್ರಮಕ್ಕೆ ಹೋದಮ್ಯಾಲೆ ನಿತ್ಯ ಉದರಕ್ಕೆ ಅನ್ನ ಬೇಕು—ಭಿಕ್ಷಾಪಾತ್ರಿ ಬೇಕಲ್ಲ, ಕುಂಬಾರ ತನ್ನ ಮನಿ ಉದ್ದ ಪಾತ್ರಿಗಳ ಮಾಡಿ ಇಟ್ಟಿದ್ದ. ಭೀಮಸೇನ ಹೂಂಕಾರ ಮಾಡಲಿಕ್ಕೆ, ಬಹಳ ಅಂಜಿಕೆಯುಳ್ಳವನಾಗಿ ಪಾತ್ರಿಗಳ ಕೊಟ್ಟ. ಆ ಪಾತ್ರಿಗಳ ಕೊಂಡು ಪಾಂಡವರು ಭಿಕ್ಷಕ್ಕೆ ಹೋಗೋರು. ಭೀಮಸೇನ ಹೂಂಕಾರ ಮಾಡಲಿಕ್ಕೆ, ಊರವರು ಅಂಜಿಕೆ-

ಯುಳ್ಳವರಾಗಿ ಮೀಸಲನ್ನ ತಂದುಕೊಡೋರು. ಧರ್ಮರಾಯು ಭೀಮಸೇನಗೆ ಬುದ್ಧಿ ಹೇಳುವ. 'ಎಲ್ಲೈ ಭೀಮಸೇನ ಇಂಥಾ ಭಿಕ್ಷಾಪಾತ್ರಿ ಒಯ್ದು ಹೂಂಕಾರ ಮಾಡತಿದ್ದಿ! ಈ ವಾರ್ತೆ ದುರ್ಯೋಧನಗೆ ಹೋದೀತು. ಕುಂಬಾರನ ಮನಿಗೆ ಬೆಂಕಿ ಹಚ್ಚಲಿ! ಭೂಮಿ ಸಹ ಕಿತ್ತಿ, ಇಂಥಾ ಪಾತ್ರಿ ಅವನಾದರೂ ಏನುಕಾರಣ ಮಾಡಿಕೊಟ್ಟ. ರೂಪ ಆಚ್ಛಾದಿಸಿಕೊಂಡು ಇದ್ದೀವೆಂದರೆ, ಅದ್ಭುತಕರ್ಮವನ್ನೇ ತೋರಸ್ತಿದ್ದೀ. ನೀನು ಭಿಕ್ಷ ಬೇಡಬ್ಯಾಡ. ನಾನು, ಅರ್ಜುನ, ನಕುಲ, ಸಹದೇವ ಎಲ್ಲರೂ ಭಿಕ್ಷ ತಂದುಹಾಕಥೇವು. ನೀನು, ಕುಂತೀದೇವಿ ಮನೀಲಿ ಹ್ಯಾಂಗೆ ಇರಥಾಳೆ, ಹಾಂಗೆ ಉಂಡುಕೊಂಡು ಸುಖದಲ್ಲಿರು.' ಈ ಪ್ರಕಾರ ಹೇಳಲಿಕ್ಕೆ, ಪಾಂಡವರು ದಾವ ಮನಿಯಲ್ಲಿದ್ದರೋ, ಆ ಮನಿಯಲ್ಲಿ ಬ್ರಾಹ್ಮಣರು ಪ್ರಲಾಪ ಮಾಡಥಾರೆ. ತಾವು ಪರಪುರುಷರು, ಸ್ತ್ರೀಪುರುಷರು ಇದ್ದಲ್ಲಿ ತಾವು ಹೋಗ-ಬಾರದೆಂದು, ಕುಂತೀದೇವಿಗೆ 'ಬ್ರಾಹ್ಮಣ ಏನುಕಾರಣ ಅಳಥಾನೆ, ಕೇಳಿ ಬಾ' ಎಂದರು.

ಬ್ರಾಹ್ಮಣರಿಗೆ ಅರಿಕಿಲ್ಲಥಾಂಗೆ, ಪ್ರಲಾಪ ಮಾಡೋದು ಕುಂತೀದೇವಿ ಕೇಳಥಾಳೆ. 'ಬಕಾಸುರಗೆ ಪರ್ವತಸದೃಶ ಅನ್ನ, ಭಕ್ಷ್ಯ, ಭೋಜ್ಯ, ರಸ-ಪಾನಗಳು, ಹಾಲು, ಮೊಸರು ನಿತ್ಯ ಏನು ಒಯ್ತಾರೆ ಅದಷ್ಟೂ ದೊರಕಿಸೇನು. ಎತ್ತು ಬಂಡಿ ದೊರಕ್ಯಾವು. ಹೊಡಕೊಂಡು ಹೋಗಲಿಕ್ಕೆ ಮನುಷ್ಯ ಬೇಕು. ಇಷ್ಟೂ ಬಕಾಸುರಗೆ ಕೊಡದಿದ್ದರೆ ನಮ್ಮ ಕುಟುಂಬ ಘಾತವಾಗತದೆ. ಮೊದಲಿಗೇ ಈ ಗ್ರಾಮ ಬಿಟ್ಟು ದೇಶಾಂತರ ಹೋಗುವ ಎಂದು ಬಹುಪ್ರಕಾರ ಹೇಳಿದರೂ, ನನ್ನ ಮಾತು ಕೇಳಲಿಲ್ಲ. ನೀನು ಹೆಂಗಸು, ನಿನ್ನ ತಾಯಿ, ಒಡಹುಟ್ಟಿದವರ ಬಿಟ್ಟು ಬಾರದೆ ನಿಂತಿ. ನನ್ನ ಮಾತು ಉದಾಸೀನ ಮಾಡಿಬಿಟ್ಟಿ. ನಾವು ದರಿದ್ರರು, ಪರ-ಪುರುಷನ್ನ ಕಳುಹಲಿಕ್ಕೆ ನಮಗೆ ಶಕ್ತಿ ಇಲ್ಲ. ಬಕಾಸುರನ ಎದುರಿಗೆ ನಾನೇ ಬಂ ಡಿ ಹೊಡಕೊಂಡು ಹೋದೇನು.' ಹೀಂಗಂತ ಬ್ರಾಹ್ಮಣ ಮಾತನಾಡಲಿಕ್ಕೆ, ಹೆಂಡತಿ ಮಾತನಾಡಥಾಳೆ. 'ನಿನ್ನಂಥ ಪತಿ ಸತ್ತು ನಾ ಬದುಕೇನು ಪ್ರಯೋಜನ! ಗಂಡ ಇರಲಿಕ್ಕೆ, ಹೆಂಡತಿ ಮೃತಿ ಐದೋಣ ಮಹಾ ಪುಣ್ಯ. ಬಕಾಸುರನ ಎದುರಿಗೆ ನಾನೇ ಬಂಡಿ ಹೊಡಕೊಂಡು ಹೋದೇನು.' ಹೀಂಗೆನಲಾಗಿ, ತಾಯಿತಂದೇರ ಪ್ರಲಾಪ ಕೇಳಿ ಹೆಣ್ಣುಮಗಳು ಮಾತನಾಡಥಾಳೆ. 'ನೀವಿಬ್ಬರೂ ಗಂಡಹೆಂಡಿರು ಸುಖ ದಲ್ಲಿರರೀ. ನಾನು ಕನ್ಯಾ, ಇನ್ನೂ ಮದುವಿ ಇಲ್ಲ. ಹೆಣ್ಣು ಹುಟ್ಟಲು ಸಕಲರೂ ಉದಾಸೀನ ಮಾಡಥಾರೆ. ವಿವಾಹ ಮಾಡಲಾಗಿ, ತಾಯಿತಂದೇರ ಮನಿ, ಬದುಕು ತೊಳಕೊಂಡುಹೋಗಥದೆ. ಪ್ರಾಯಸಾಮರ್ಥ್ಯ ಬಂದರೆ, ಹೆಂಗಸಿಗೆ ಮಾತು ಬರತದೆ. ಹೆಣ್ಣುಜನ್ಮ ಮಣ್ಣುಕೂಡೋ ಪರಿಯಂತ ಪರಾಧೀನಳಾಗಿರಬೇಕು. ಇನ್ನೂ ನಾನು ಕನ್ಯಾ, ನನ್ನ ಕಳುಹಿಕೊಡು' ಎನಲಿಕ್ಕೆ, 'ಎಲೌ ಅವ್ವಾ!

ಕನ್ಯಾದಾನದಿಂದ ಉಭಯಕುಲಕ್ಕೂ ಕೀರ್ತಿ ಬರತದೆ. ಕನ್ಯಾದಾನ ಇಪ್ಪತ್ತೊಂದು ಕುಲ ಉದ್ಧಾರ ಮಾಡತದೆ. ಕನ್ಯಾದಾನದಿಂದ ಪರಲೋಕವಾಗತದೆ. ನಿನ್ನ ಕೊಡೋಹಾಂಗೆ ಇಲ್ಲ. ಈ ಚಿಕ್ಕಮಗನ್ನ ಕೊಡೋಹಾಂಗೆ ಇಲ್ಲ. ರಾಕ್ಷಸನ ಎದುರಿಗೆ ನಾನೇ ಹೋದೇನು' ಎಂದು ಪರಸ್ಪರವಾಗಿ ಅಪ್ಪಿಕೊಂಡು ಅಳಲಿಕ್ಕೆ, ಬಾಲಕ ತಾಯಿ, ತಂದಿ, ಅಕ್ಕಗೆ ಸಮಾಧಾನ ಮಾಡಥಾನೆ. 'ನೀವು ಏನುಕಾರಣ ಅಳತಿದ್ದೀರಿ! ಈ ಕಡ್ಡಿಯಿಂದ ರಾಕ್ಷಸನ್ನ ಕೊಲ್ಲಥೀನಿ!' ಎಂದು ಮಾತನಾಡಲಿಕ್ಕೆ, ಬಾಲಕನ ವಾಕ್ಯ ಕೇಳಿ ಕುಂತೀದೇವಿ ಬ್ರಾಹ್ಮಣನ ಸಮೀಪಕ್ಕೆ ಬಂದಳು.

ಕುಂತೀದೇವಿ ಬ್ರಾಹ್ಮಣನ ಕುರಿತು 'ಏನುಕಾರಣ ದುಃಖ ಮಾಡತಿದ್ದೀರಿ? ನಿಮಿತ್ತವೇನು, ಅದನ್ನೆಲ್ಲ ಹೇಳಬೇಕು' ಎಂದಲ್ಲಿ, 'ಈ ನಗರದ ಬಳೀಲಿ ಎರಡು ಹರಿದಾರಿಮ್ಯಾಲೆ ಬಕಾಸುರನಿದ್ದಾನೆ. ಹದಿಮೂರು ವರುಷಕ್ಕೆ ಒಬ್ಬೊಬ್ಬರ ಪಾಳಿ ಬರತದೆ. ಬಕಾಸುರ ರಾವಣನ ಸೋದರಮಾವನಾಗಬೇಕು. ರಾಮಾವತಾರದಲ್ಲಿ ಶ್ರೀರಾಮಚಂದ್ರದೇವರ ಪರಾಕ್ರಮ, ತನ್ನ ತಮ್ಮ ಮಾರೀಚನ ಮುಖದಿಂದ ಕೇಳಿ, ರಾಮನ ಬಾಣಕ್ಕೆ ಅಂಜಿ, ಭೂಮೀ ಬಿಲದೊಳಗೆ ಅಡಗಿಕೊಂಡಿದ್ದ. ರಾಮಚಂದ್ರ ಪರಂಧಾಮಕ್ಕೆ ಹೋದಮ್ಯಾಲೆ, ಬಹಳ ಪ್ರಬಲನಾಗಿ ರಾಯರನ್ನೆಲ್ಲ ಅಂಜಿಸಿಕೊಂಡು, ತನ್ನ ಆಹಾರನಿಮಿತ್ತ ಕಪ್ಪಗಳ ಕೊಳ್ಳಥಾನೆ ಈ ಏಕಚಕ್ರ ನಗರದವರು ನಿತ್ಯ ಎರಡು ಎತ್ತು, ಒಬ್ಬ ಮನುಷ್ಯ, ಪರ್ವತರಾಶೀ ಭಕ್ಷ್ಯ, ಭೋಜನ ಅಷ್ಟೂ ಬಂಡೀಮ್ಯಾಲೆ ಹೇರಿಕೊಂಡು ಹೋಗಬೇಕು. ಈ ರೀತಿ ಸಮಸ್ತರ ಕೈಯ ನಿರಂತರ ಕೊಂಡು, ಪಟ್ಟಣದ ಹೊರಗೆ ಇರಥಾನೆ. ನಾಳೆ ನಾವು ಅವಗೆ ಬಲಿ ಕೊಂಡು ಹೋಗದಿದ್ದರೆ, ನಮ್ಮ ಕುಟುಂಬ ಸಹ ಘಾತವಾಗತದೆಂದು ಪ್ರಲಾಪ ಮಾಡಥೀವಿ.' ಹೀಂಗೆನಲಿಕ್ಕೆ, ಕುಂತೀ ಬಹಳ ಸಂತೋಷ ಉಳ್ಳಾಕಿಯಾದಳು. ಇಂಥಾ ಬಲಿಷ್ಠನ್ನ ತನ್ನ ಮಗ ಕೊಂದಾನೆಂದು ತಿಳಿದು 'ಎಲೈ ಬ್ರಾಹ್ಮಣ ಅಳಬ್ಯಾಡ. ನನಗೆ ಐದು ಮಂದಿ ಮಕ್ಕಳಿದ್ದಾರೆ. ಐದು ಮಂದೀಯೊಳಗೆ ಒಬ್ಬನ್ನ ಕೊಟ್ಟೇನು' ಎನಲಿಕ್ಕೆ, 'ನಾವು ಬ್ರಾಹ್ಮಣರು, ನಿನ್ನ ಮಗನ್ನ ಕೊಲ್ಲಿಸಿ, ಬ್ರಹ್ಮಹತ್ಯಾಕಾರನೆನಿಸಿಕೊಳ್ಳವಲ್ಲೆ. ಎಲೌ ಸ್ತ್ರೀ, ನೀ ದಾರು? ನಿನ್ನ ಮಗನ್ನ ಕೊಟ್ಟೇನೆಂದಿ. ಬಹಳೇ ಧೈರ್ಯ ಉಳ್ಳಾಕಿ!' ಎಂದು ಮಾತನಾಡಲಿಕ್ಕೆ, 'ಎಲೈ ವಿಪ್ರ, ನನ್ನ ಮಗನ ಸಾಮರ್ಥ್ಯ ನಾ ಬಲ್ಲೆ. ನನ್ನ ಮಗಗೆ ಅಷ್ಟದಿಕ್ಪಾಲಕರ ಗೆಲ್ಲೋ ಸಾಮರ್ಥ್ಯ ಅದೆ. ನನ್ನ ಮಗನ ಬಳೀಲಿ ಮಂತ್ರ ಅದೆ. ಅಂಥಾ ವಿದ್ಯ ದಾರ ಮುಂದೂ ಹೇಳೋದಿಲ್ಲ. ನೀವು ಅನ್ನಪಾನ ಸಿದ್ಧಮಾಡಿರಿ. ನನ್ನ ಮಗನ್ನ ಬಕಾಸುರನ ಎದುರಿಗೆ ಕಳುಹಿಸಿಕೊಟ್ಟೇನು.' ಹೀಂಗಂತ ಹೇಳಿ, ದ್ವಿಜನ್ನ ಸಮಾಧಾನ ಮಾಡಿ, ಭೀಮಸೇನಗೆ ಈ ವಾರ್ತಿ ಹೇಳಿದಳು.

!೨೧೭೬

ಭೀಮಸೇನ ಈ ವಾರ್ತೆ ಕೇಳಿ, ಬಹಳ ಸಂತೋಷದಿಂದ ಉಬ್ಬಿ, ದೇಹದಿಂದ ಪುಷ್ಟನಾಗಿ, ಮುಖ ಅರಳಿಸಿಕೊಂಡು ಕುಳಿಥಾನೆ. ಧರ್ಮಾರ್ಜುನರು ಬಂದು 'ಎಲೌ ಅವ್ಮಾ ತಾಯಿ, ಇವತ್ತು ಭೀಮಸೇನ ಏನು ವಾರ್ತೆ ಕೇಳಿದ! ಏನು-ಕಾರಣ ಉಲ್ಲಾಸ ಉಳ್ಳವನಾಗಿದ್ದಾನೆ! ಏನು ಕಾರಣ ಹೇಳು' ಎನಲಿಕ್ಕೆ, ಬ್ರಾಹ್ಮಣನ ವಿಚಾರ ಆದ್ಯಂತ ಹೇಳಿ, 'ಬಕಾಸುರನ ಎದುರಿಗೆ ಭೀಮಸೇನನ ಕಳುಹಥೀನಿ' ಎನಲಿಕ್ಕೆ, 'ಅಮ್ಮಾ ಇದೇನು ಘಾತ ಮಾಡಿದಿ! ಲಾಕ್ಷಾಗೃಹದಿಂದ ನಮ್ಮನ್ನೆಲ್ಲ ಬದುಕಿಸಿ ತಂದ. ಹಿಡಿಂಬರಾಕ್ಷಸ ನಮ್ಮನ್ನೆಲ್ಲ ತಿನ್ನಲಿಕ್ಕೆ ಬಂದಿದ್ದ, ಅವನ್ನ ಕೊಂದ. ಭೀಮಸೇನನ ಬಲದಿಂದ ನಾವು ರಾಜ್ಯ ಇಚ್ಛಿಸಥೀವಿ. ಇಂಥಾ ಭೀಮನ್ನ, ಬಕಾಸುರನ ಎದುರಿಗೆ ಕಳಿಸಥೇನಂತ ಹೇಳಥಿ. ನಿನ್ನ ಬುದ್ಧಿಗೆ ಏನು ಹೇಳಲಿ! ಇಂಥಾ ಬಲಿಷ್ಠ ಮಗನ್ನ, ನಮ್ಮಿಂದ ವಿಯೋಗ ಮಾಡಸಥಾರೆ!' ಎನಲಿಕ್ಕೆ, 'ಅಪ್ಪಗಳಿರ್ಯಾ, ಭೀಮಸೇನನ ಸಾಮರ್ಥ್ಯ ನಾ ಬಲ್ಲೆ. ಶತಶೃಂಗ-ಪರ್ವತದಲ್ಲಿ ನಾವು ಇರಲಿಕ್ಕೆ, ಭೀಮಗೆ ಮೊಲಿ ಕೊಡತಿರಲು ಹುಲೀ ಗರ್ಜನಿ ಕೇಳಿ, ನಾ ಹೆಂಗಸಲ್ಲವೆ, ಅಂಜಿಕೆಯುಳ್ಳಾಕೆಯಾಗಿ, ಕೂಸು ಬಿಷ್ಟಲಿಕ್ಕೆ, ಪರ್ವತ ನೂರು ಹೋಳಾಯಿತು. ಸಾಕ್ಷಾತ್ ವಾಯುದೇವರೇ ನನ್ನಲ್ಲಿ ವೀರ್ಯ ಇಟ್ಟು, ಈ ಭೀಮಸೇನನ್ನ ಹಡದುಕೊಟ್ಟಾರೆ. ಹದಿನಾಲ್ಕು ಲೋಕ ಒಕ್ಕಟ್ಟಾಗಿ ಬರಲ್ಯಾಕೆ, ಈ ಭೀಮಸೇನನ್ನ ದಾರೂ ಗೆಲ್ಲೋದಿಲ್ಲ,' ಹೀಂಗಂತ ಹೇಳಿದಳು. ಹಾಂಗೆ ಆಗಲಿ ಅಂತ ಧರ್ಮರಾಯನು ನುಡಿದನು.

ಮರುದಿವಸ ಆ ಬ್ರಾಹ್ಮಣ ಶಾಕಪಾಕ, ಭಕ್ಷ್ಯಭೋಜ್ಯ, ಅನ್ನಾದಿ ಸಾಮಗ್ರಿ ಬಂಡೀ ಮ್ಯಾಲೆ ಹೇರಿದನು. ಸಾಯೋ ಅವನಿಗೆ ಮಜ್ಜನ ಮಾಡಿಸಿ, ಷಡ್ರಸ ವಾದಂಥ ಪಕ್ವಾನ್ನ ಭೋಜನ ಮಾಡಿಸಿ, ಹೂವಿನ ಮಾಲಿಗಳ ಹಾಕಿ, ಪರಿಮಳ ದಿಂದ ಅಲಂಕರಿಸಥಾರೆ. ಹಾಂಗೇ ಭೀಮಸೇನಗೆ ಯಾವತ್ತೂ ಮಾಡಿ, ಬಂಡೀ ಮ್ಯಾಲೆ ಕೂಡ್ರಿಸಿದರು. ಭೀಮಸೇನ ಬಂಡಿ ಓಡಿಸತಲೇ ಹೋದ. ರಾಕ್ಷಸನ ನಿಮಿತ್ತ ಒಯ್ದಂಥ ಅನ್ನ, ಭೀಮಸೇನ ತಾ ಉಣಹೊಕ್ಕ. ಪರಮಾನ್ನ, ನಾನಾ ಭಕ್ಷ್ಯಗಳು ಉಂಡು, ಹಾಲು ಮೊಸರು ಕೊಡಗಳು ಎತ್ತಿಕೊಂಡು ಕುಡಿದನು. ರಾಕ್ಷಸನ ಸ್ಪರ್ಶವಾಗದಕಿಂತ ಮೊದಲೇ, ಪರ್ವತಸದೃಶ ಅನ್ನ, ಎಷ್ಟು ಬಂಡೀ ಮ್ಯಾಲೆ ಹೇರಿತ್ತೋ, ಅದಷ್ಟೂ ಮಾರ್ಗದಲ್ಲಿ ಉಂಡದ್ದು ಬಕಾಸುರ ಕಂಡು, ಬಹಳ ಕೋಪಾವಿಷ್ಟನಾಗಿ, ನನಗೆ ಬಾಹೋ ಅಂಥಾದ್ದು ತಾನೇ ಉಣಥಾನೆಂದು, ಪರ್ವತ ಕಿತ್ತುಕೊಂಡು ಬರಲಿಕ್ಕೆ, ಭೋಜನಕಾಲದಲ್ಲಿ ರಾಕ್ಷಸನ ನೋಡಬಾರದೆಂದು ತನ್ನ ತೊಡಿ ಮರಿ ಮಾಡಿಕೊಂಡು ಉಣತಿಹ. ಅಸುರ ಪರ್ವತ ವೃಕ್ಷ ಈಡ್ಯಾಡ-ಥಾನೆ. ಅದನ್ನೆಲ್ಲ ಎಡಗೈ ಒಡ್ಡಿಕೊಂಡು, ಲಗುಬಗಿಯಲ್ಲಿ ಭೋಜನ ಮಾಡದೆ, ಸಾವಕಾಶದಲ್ಲಿ ಭೋಜನ ಮಾಡಿ, ರಸಪಾನಾದಿಗಳು ಕುಡದು, ಕೈಕಾಲು

ತೊಳದುಕೊಂಡು, ಆಚಮನ ಮಾಡಿ ತರುವಾಯದಲ್ಲಿ ರಾಕ್ಷಸನ್ನ ಕಣ್ಣೀಲಿ ನೋಡಿ, ವೃಕ್ಷಗಳನ್ನು ಕಿತ್ತಿ ರಾಕ್ಷಸನಮ್ಯಾಲೆ ಈಡ್ಯಾಡಿದನು. ಉಭಯತರೂ ವೃಕ್ಷ ಪರ್ವತಗಳಿಂದ ಹೊಡದಾಡಿದರು. ಕಾಲಪೆಟ್ಟಿನಿಂದ ಭೂಮಿ ಕಂಪಿಸತಿಹೋಳು. ಬಹಳ ಭಯಂಕರ ಯುದ್ಧವಾಯಿತು. ಭೀಮಸೇನ ಬಕಾಸುರನ ಕೈಸೆರಿ ಹಿಡದು, ಅವನ ಕಾಲಮ್ಯಾಲೆ ಕಾಲು ಕೊಟ್ಟು ಸೀಳಿಬಿಷ್ಟನು. ಬಕಾಸುರಗೆ ಉತ್ಕೃಷ್ಟ ತಮಸ್ಸಾಯಿತು. ಅಸುರ ದಾರಿಗೂ ಮಣಿದು ಬರಕಿದ್ದಿಲ್ಲ. ಅಂಥಾ ಬಕಾಸುರನ್ನ ಭೀಮಸೇನ ಎರಡು ಹೋಳು ಮಾಡಿ ಕೊಂದುಬಿಷ್ಟನು. ಎರಡು ಹೋಳೂ ಕೂಡಿಸಿ, ಏಕಚಕ್ರನಗರದ ಬಾಗಿಲ ಮುಂದೆ ನಿಂದರಸಿ, ಸ್ನಾನ ಮಾಡಿಕೊಂಡು, ಭೀಮಸೇನ ತನ್ನ ಭ್ರಾತೃಗಳ ಸಮೀಪಕ್ಕೆ ಬಂದು, ಬಕಾಸುರನ ಸಂಹಾರಪ್ರಕಾರ ಅಣ್ಣತಮ್ಮಂದಿರ ಮುಂದೆ ಹೇಳಿದನು.

ಮರುದಿವಸ ಪಟ್ಟಣಸ್ಥರು ನೋಡಥಾರೆ, ಬಕಾಸುರ ದ್ವಾರದಲ್ಲಿ ನಿಂತಾನೆ! ಪಟ್ಟಣಸ್ಥರು ಬಹಳ ಅಂಜತಿಹೋರು. ಬಕಾಸುರ ತನ್ನ ವನ ಬಿಟ್ಟು ಇಲ್ಲಿಗೆ ಏನುಕಾರಣ ಬಂದಿದ್ದಾನೆಂದು ಹರಳುಗಳು ಹೊಡದು ,ನೋಡಥಾರೆ. ಆಮ್ಯಾಲೆ ಸತ್ತಿದ್ದಾನೆಂದು ತಿಳಿದರು. ನಂತರ ಬ್ರಾಹ್ಮಣನು ಬಂದು 'ಇಷ್ಟು ಏನುಕಾರಣ ಪರೀಕ್ಷ ಮಾಡಿ ನೋಡಥೀರಿ? ನನ್ನಲ್ಲಿ ಓದಿಕೊಳ್ಳಥಾನೆ, ಈತ ನಮ್ಮ ಶಿಷ್ಯ. ಅಸುರನ್ನ ಕೊಂದಾತ ಈತನೇ' ಎಂದು ತೋರಿಸಲಿಕ್ಕೆ, ಬಹಳ ಆಶ್ಚರ್ಯವುಳ್ಳವರಾಗಿ, 'ಈ ಬ್ರಾಹ್ಮಣ ನಿತ್ಯ ಭಿಕ್ಷ ಬೇಡಿ ಅನ್ನ ಉಣಥಾನೆ. ಅನ್ನಾತ್ಮಕವಾದ ಕಪ್ಪ ಈ ಬ್ರಾಹ್ಮಣಗೆ ಕೊಡಬೇಕು.' ಹೀಂಗೆ ಪಟ್ಟಣಸ್ಥರೆಲ್ಲ ಅಂಗೀಕಾರ ಮಾಡಿದರು. ಏಕಚಕ್ರನಗರದಲ್ಲಿ ನರಸಿಂಹದೇವಾಲಯವಿತ್ತು. ಅದು ಪೂಜಿ ಇಲ್ಲದೆ ಹಾಳುಬಿದ್ದಿತ್ತು. ಭೀಮಸೇನ ಗ್ರಾಮಸ್ಥರಿಗೆ 'ಈ ದೇವರ ಸಂತರ್ಪಣೆ ಮಾಡತ ಬನ್ನಿ' ಎಂದು ಹೇಳಿದನು. 'ಒಂದು ಕಡಕೂ ಇಲ್ಲದೆ, ದಿವಸ ತಪ್ಪದೆ ನರಸಿಂಹನ ಪೂಜಿ ಮಾಡತ ಬನ್ನಿ' ಎಂದು ಶಿಕ್ಷ ಮಾಡಿದನು.

ಹೀಂಗಿರಲಿಕ್ಕೆ, ಸತ್ಯವತೀಪುತ್ರ ವೇದವ್ಯಾಸರು, ನೊಮ್ಮಕ್ಕಳ ನೋಡಲಿಕ್ಕೆ ಬಂದು ಹೇಳಿದರು. 'ಪಾಂಚಾಲದೇಶದಲ್ಲಿ ದ್ರೌಪದೀಸ್ವಯಂವರವಾಗತದೆ. ಬ್ರಾಹ್ಮಣರು ಬಹುಮುಂದಿ ಹೋಗಥಾರೆ. ದಕ್ಷಿಣೆ ಭೋಜನ ದೊರತದೆಂದು ಹೊಡಗೆಡದು ಹೋಗಥಾರೆ. ದ್ರುಪದರಾಯನು ಪಾಂಡವರು ಲಾಕ್ಷಾಗೃಹದಲ್ಲಿ ಸತ್ತರೆಂದು ವಾರ್ತೆ ಕೇಳಿದನು. ಕೃಷ್ಣ ಹಸ್ತಿನಾವತಿಗೆ, ಒಳಿತು ಮುಟ್ಟಿಸಿಕೊಳ್ಳಲಿಕ್ಕೆ ಹೋಗಿದ್ದಾನೆಂದು ವರ್ತಮಾನ ಕೇಳಿದನು. ದ್ರುಪದರಾಯ ಮಹಾರುದ್ರನ ವಚನದಲ್ಲಿ ವಿಶ್ವಾಸ ಮಾಡಿ, ಯಾಜೋಪಯಾಜರ ಕರೆಸಿ, ಯಜ್ಞಾದಿ ಕರ್ಮ ಮಾಡಿಸಿ, ದ್ರೋಣನ ಕೊಲ್ಲೋದಕ್ಕೆ ಧೃಷ್ಟದ್ಯುಮ್ನನ ಹಡದು, ಅರ್ಜುನನ ನಿಮಿತ್ತವಾಗಿ ದ್ರೌಪದೀನ್ನ ಹಡದದ್ದು ಹುಸಿ ಆಗದು, ಪಾಂಡವರು

ಎಲ್ಲಾದರೂ ಬದುಕಿದ್ದಾರಾದೀತೆಂದು ಸ್ವಯಂವರ ಆರಂಭಿಸಿಹ. ಮಹಾರುದ್ರನ ಕೈಯಿಂದ ಒಂದು ಧನುಸ್ಸು ಸಂಪಾದಿಸಿಹ. ದೇಶದೇಶದ ರಾಯರಿಗೆಲ್ಲ ಪತ್ರ ಬರೆದಿಹ. ಧನುಸ್ಸು ಹೆದಿ ಏರಿಸಿ, ಬಾಣ ಎಸೆದು, ಮತ್ಸ್ಯಯಂತ್ರ ದಾರು ಭೇದನ ಮಾಡಥಾರೋ, ಅವರಿಗೆ ದ್ರೌವದೀ ವರಿಸ್ಯಾಳು. ಈ ಪ್ರಕಾರ ದ್ರುಪದರಾಯ ಪಣ ಮಾಡಿದ್ದಾನೆ' ಎಂದು ವೇದವ್ಯಾಸದೇವರು ಪಾಂಡವರಿಗೆ, 'ದ್ರುಪದರಾಯ ಸ್ವಯಂವರ ಮಾಡಥಾನೆ. ಬಹು ಮಂದಿ ಸ್ವಯಂವರಕ್ಕೆ ಹೋಗಥಾರೆ. ನೀವೂ ಹೋಗರಿ' ಎಂದು ಹೇಳಿದನು. ದಿಗ್ದೇಶದ ಬ್ರಾಹ್ಮಣರು ಹಿಂಡುಹಿಂಡುಗಟ್ಟಿ, ತಮಗೆ ದಕ್ಷಿಣೆ ಬಂದೀತೆಂದು ಹೋಗಥಾರೆ. ಏಕಚಕ್ರನಗರದವರು ಪಾಂಡವರಿಗೆ ನೀವೂ ಬ್ರಾಹ್ಮಣರಿದ್ದೀರಿ ಬರಬಹುದೆಂದು ಕರೆದರು. 'ನೀವೂ ನಮ್ಮ ಸಂಗಡ ಪಾಂಚಾಲದೇಶಕ್ಕೆ ಬನ್ನಿ, ಯಥೇಷ್ಟ ಭೋಜನ, ದ್ರವ್ಯ, ದಕ್ಷಿಣೆ ಬಂದೀತು' ಎಂದು ಕರೆದುಕೊಂಡು ಹೋದರು. ಭಾರತ ಕಥ ನಿಂದರಿಸಿ ಹರಿವಂಶ ಕಥ ಹೇಳಥಾರೆ.

ಪಾಂಡವರು ಲಾಕ್ಷಾಗೃಹದಲ್ಲಿ ಸುಟ್ಟು ಸತ್ತರೆಂದು ವರ್ತಮಾನ ಕೇಳಿ, ಬೀಗರಿಗೆ ಒಳಿತು ಮುಟ್ಟಿಸಬೇಕಾಗಿ, ದ್ವಾರಾವತಿಯಿಂದ ಕೃಷ್ಣ, ಬಲರಾಮನ ಸಹಿತವಾಗಿ ಹಸ್ತಿನಾವತಿಗೆ ಹೋಗಿ, ತನ್ನ ಸೋದರತ್ತಿ, ಐದು ಮಂದಿ ಮಕ್ಕಳು ಸತ್ತರು. ಐದು ಮಂದಿಯೊಳಗೆ ಒಬ್ಬನೂ ಬದುಕಲಿಲ್ಲ ಏಂದು, ಪಾಪಿಗಳಿಗೆ ವಿಶ್ವಾಸ ತೋರಿಸಬೇಕಾಗಿ, ಪಾಂಡವರು ಸತ್ತರೆಂದು, ಏನೂ ಅರೇನು ಎಂಬೋ-ಪಾದಿ ಹಸ್ತಿನಾವತಿಗೆ ಹೋದನು. ಸ್ವಾಮಿ ಸರ್ವಜ್ಞ, ಪಾಂಡವರು ಬದುಕಿಹೋದು ತಾ ಬಲ್ಲರೂ ಸರಿಯೆ, ಬೀಗರಿಗೆ ಒಳಿತು ಮುಟ್ಟಿಸಲಿಕ್ಕೆ ಹೋಗಿರಲಿಕ್ಕೆ ಆ ಸಮಯದಲ್ಲಿ ಶತಧನ್ವಗೆ ಅಕ್ರೂರ, ಕೃತವರ್ಮ ಹಚ್ಚಿಕೊಟ್ಟಾರೆ. 'ಸತ್ರಾಜಿತ-ರಾಯ ಕಪಟಿ ಇದ್ದಾನೆ. ಸತ್ಯಭಾಮಾನ್ನ ನಮಗೆ ಕೊಟ್ಟೀನೆಂದಿದ್ದ. ಶ್ಯಮಂತಕ ರತ್ನದ ಕಳವು ಕೃಷ್ಣನ ಮ್ಯಾಲೆ ಇಟ್ಟ. ಆ ದೋಷ ಪರಿಹರಿಸೋ ನಿಮಿತ್ತವಾಗಿ, ಸತ್ಯಭಾಮಾನ್ನ ಕೃಷ್ಣಗೆ ಮದುವಿ ಮಾಡಿಕೊಟ್ಟ. ಈಗ ಕೃಷ್ಣ ಒಳಿತು ಮುಟ್ಟಿಸ ಲಿಕ್ಕೆ ಹಸ್ತಿನಾವತಿಗೆ ಹೋಗಿಹಾನೆ. ಇದೇ ವ್ಯಾಳ್ಯಾದಲ್ಲಿ ಹೋಗಿ, ಸತ್ರಾಜಿತ-ರಾಯನ್ನ ಕೊಂದು, ಶ್ಯಮಂತಕಮಣಿಯನ್ನು ಕೊಂಡು ಬಾ. ನಾವು ನಿನ್ನ ಬೆನ್ನ ಹಿಂದೆ ಇದ್ದೀವು.' ಹೀಂಗಂತ ಶತಧನ್ವನ ಕಳುಹಿಸಿಕೊಟ್ಟರು. ಶತಧನ್ವ ಮೊದಲೇ ಕುಲಗೇಡಿ, ಪೂರ್ವದಲ್ಲಿ ದೈತ್ಯ, ಹಿಂಸಕ್ಕೆ ಹೇಸೋವನಲ್ಲ. ಲೇಶಮಾತ್ರ ಅಂಜದೆ ಸತ್ರಾಜಿತರಾಯನ್ನ ಕೊಂದು, ರತ್ನ ಕೊಂಡುಹೋದ. ಸತ್ಯಭಾಮ ಸರ್ವಜ್ಞಳು, ಲೋಕಾನುಸರಣಿಯಿಂದ ಪ್ರಲಾಪ ಮಾಡಿ, ತಂದೀನ್ನ ಎಣ್ಣೆಯೊಳಗೆ ಕರದಿಟ್ಟು, ಲೋಕಕ್ಕೆ ವಿಡಂಬನಿ ತೋರಿಸಿ, ಶತಧನ್ವನ್ನ ತನ್ನ ಗಂಡನ ಕೈಯ ಕೊಲ್ಲಿಸ-ಬೇಕೆಂದು, ತಂದೀ ಸತ್ತ ವಾರ್ತಿ ಕೊಂಡು ಹಸ್ತಿನಾವತಿಗೆ ಹೋಗಥಾಳೆ.

ಮಾರ್ಗದಲ್ಲಿ ಕೃಷ್ಣ ಎದುರಾಗಿ ಬಂದನು. ಹೆಂಡತೀನ್ನ ಕಂಡು, ನೀನು ಏನುಕಾರಣ ಬಂದ್ಯೆನಲಿಕ್ಕೆ, ಸತ್ಯಭಾಮಾ ತನ್ನ ತಂದಿ ಸತ್ತದ್ದು, ಆದ್ಯಂತ ವರ್ತಮಾನ ಹೇಳಿದಳು. ಮಾವ ಸತ್ರ ದುಃಖದಿಂದ ಕ್ಲೇಶಿತನೋಪಾದಿ ದುಃಖ ತೋರಿಸಿ, ಶತಧನ್ವನ್ನ ಕೊಲ್ಲಬೇಕೆಂದು ದ್ವಾರಾವತಿಗೆ ಬರಲಿಕ್ಕೆ, ದ್ರುಪದರಾಯನ ಪುತ್ರ, ದ್ರೌಪದೀಸ್ವಯಂವರಕ್ಕೆ ಕೃಷ್ಣನ ಕರಿಯಲಿಕ್ಕೆ ಪತ್ರ ತೆಗೆದುಕೊಂಡು ಬಂದು, ಕೃಷ್ಣಗೆ ಕೊಟ್ಟ. ಶ್ರೀಕೃಷ್ಣ ಪತ್ರ ತೆಗೆದುಕೊಂಡು, ಬಿನ್ನಹ ನೋಡಿಕೊಂಡು, ತನ್ನ ಭಕ್ತರಾದಂಥ ಪಾಂಡವರನ್ನ ನೋಡಬೇಕೆಂದು, ಸ್ವಾಮಿ ಪಾಂಚಾಲದೇಶಕ್ಕೆ ಬಂದನು. ಇನ್ನು ಭಾರತ ಕಥ ಹೇಳತ್ತಾರೆ.

ಬ್ರಾಹ್ಮಣರು ಹಿಂಡುಗಟ್ಟಿ ನಾಲ್ಕು ಕೋಣೆಗಳಿಂದ ಹೋಗತ್ತಾರೆ. ದ್ವಿಜರು ತಮ್ಮೊಳಗೆ ತಾವೇ ಭೀಮಸೇನನ್ನ ನೋಡಿ ವಿಚಾರ ಮಾಡತಿಹೋರು. 'ದ್ರುಪದರಾಯ ತನ್ನ ಮಗಳ ಈ ಬ್ರಾಹ್ಮಣರಿಗೆ ಕೊಟ್ಟಾನು. ಈ ಬ್ರಾಹ್ಮಣ ಲಕ್ಷಣೋತ್ತಮ, ಆಜಾನುಬಾಹು, ವಿಶಾಲ ದೇಹ ಉಳ್ಳಾತ, ಮೂವತ್ತೆರಡು ಲಕ್ಷಣಗಳು ಇವನಲ್ಲವೆ. ಈತಗೆ ದ್ರೌಪದೀ ಮಾಲಿ ಹಾಕ್ಯಾಳು', ಈ ಪ್ರಕಾರ ಮಾತನಾಡತ ಹೋಗತಿಹೋರು. ಪಾಂಡವರು ಕಾಲುನಡಗಿಯಿಂದ ಸಮುಸ್ತರನ್ನೂ ಹಿಂದಕ್ಕೆ ಹಾಕಿ, ವೇಗದಿಂದ ನಡದು ಹೋಗತಿಹೋರು. ಅರ್ಧರಾತ್ರೀಲಿ ಗಂಗಾನದೀ ದಾಟಿದ್ದಾರೆ. ಭೀಮಸೇನ ಹಿಂಭಾಗದಲ್ಲಿ ರಕ್ಷಿಸತಿಹೋನು. ಅರ್ಜುನ ಮುಂಭಾಗದಲ್ಲಿ ರಕ್ಷಿಸಥಾನೆ. ರಾತ್ರೀಲಿ ಕತ್ತಲಿ ಎಂದು, ಅರ್ಜುನ ಕೊಳ್ಳೀಲಿ ಮಾರ್ಗ ತೆಗೆದು ಹೋಗಥಾನೆ. ಚಿತ್ರಸೇನಗಂಧರ್ವ ಗಂಗಾಜಲದೊಳಗೆ ಜಲಕ್ರೀಡಿ ಮಾಡಥಾನೆ. ಆ ಬ್ರಾಹ್ಮಣರು ರಾತ್ರೀಲಿ ಗಂಗಾ ದಾಟಲಾರರು, ಮಾರ್ಗ ನಡೀಲಾರರು. ಇವರು ಬಹುಶಃ ಕ್ಷತ್ರಿಯರಾದಾರು ಎಂದು, ಚಿತ್ರಸೇನಗಂಧರ್ವ ಮಾರ್ಗದಲ್ಲಿ ಅಡ್ಡಗಟ್ಟಿ, 'ರಾತ್ರೀಲಿ ಎಲ್ಲಿ ಹೋಗಥೀರಿ, ನಿಮ್ಮನ್ನ ಕೊಂದೇನು' ಎನಲಿಕ್ಕೆ, ಅರ್ಜುನ ಮಾತನಾಡಥಾನೆ. 'ಎಲೋ ಗಂಧರ್ವ, ನಮಗೆ ಅಸ್ತ್ರಸಾಮರ್ಥ್ಯ ಅದೆ. ನಿನ್ನ ಸಾಮರ್ಥ್ಯ ನೀರಮ್ಯಾಲಿನ ನೊರಿ ಅಪ್ಪಂದೆ ವ್ಯರ್ಥವಾದೀತು. ನಿನ್ನ ಸಾಮರ್ಥ್ಯ ಪುರುಷಾರ್ಥಕ್ಕೆ ಸಾಧನವಾಗದು.' ಹೀಂಗೆ ಅರ್ಜುನ ಮಾತನಾಡಲಿಕ್ಕೆ, ಗಂಧರ್ವ ಜಲದೊಳಗಿಂದ ಹೊರಗೆ ಬಂದು, ರಥ ಏರಿಕೊಂಡು ಬಾಣಗಳ ಬಿಡಲಿಕ್ಕೆ, ಅರ್ಜುನ ಅಸ್ತ್ರಜ್ಞ ಆದಕಾರಣ, ತನ್ನ ಕೈಯೊಳಗೆ ಹಿಡಿದ ಬೆಳಕಿನ ಕೊಳ್ಳಿಯನ್ನು ಅಭಿಮಂತ್ರಿಸಿ ಹೊಡೀಲಿಕ್ಕೆ, ಗಂಧರ್ವನ ರಥಾನೆಲ್ಲ ಸುಟ್ಟಿತು. ದೇಹವೆಲ್ಲ ತಾಪ ಅಡರಿ ಭೂತಳದಲ್ಲಿ ಬಿದ್ದನು.

ಅರ್ಜುನ ಚಿತ್ರಸೇನಗಂಧರ್ವನ ತುರುಬು ಹಿಡದು ಎಳೀತಿರಲಿಕ್ಕೆ, ಧರ್ಮರಾಯಗೆ ಶರಣುಹೊಕ್ಕನು. ಧರ್ಮರಾಯ, ಗಂಧರ್ವನ ಕೊಲ್ಲಬ್ಯಾಡ ಬಿಟ್ಟುಕೊಡಿನಲಿಕ್ಕೆ, ಬಿಟ್ಟುಕೊಟ್ಟನು. ಗಂಧರ್ವನ ವರ್ಣ ಕೆಟ್ಟುಹೋಯಿತು,

ಅಂಗಾರವರ್ಣನಾದ. ತನ್ನ ಜೀವ ಉಳುಹಿದನೆಂದು ಅರ್ಜುನನ ಕೂಡ ಗೆಳತನ ಕಟ್ಟಿದ. ಅಗ್ನ್ಯಸ್ತ್ರ ತನಗೆ ಉಪದೇಶ ಮಾಡೆಂದು ಪ್ರಾರ್ಥಿಸಿದನು. ಗಂಧರ್ವ ತಾನು ಅಗ್ನ್ಯಸ್ತ್ರ ಬಲ್ಲನಾದರೂ, ಅರ್ಜುನನ ಸಾಮರ್ಥ್ಯ ತನ್ನಲ್ಲಿಲ್ಲದಕಾರಣ ವಿದ್ಯೋಪದೇಶ ಕೊಂಡನು. ಅರ್ಜುನಗೆ ತನ್ನ ಗಂಧರ್ವವಿದ್ಯ ಹೇಳೀನು ಎನಲಿಕ್ಕೆ, 'ನಿನ್ನ ನನ್ನ ವಿದ್ಯ ಸಮವಲ್ಲ. ಕಾಲಾಂತರದಲ್ಲಿ ಗಂಧರ್ವವಿದ್ಯ, ಗಂಧರ್ವ-ಮಾಯ ಕೃಷ್ಣಾರ್ಪಣ ಬುದ್ಧಿಯಿಂದ ಹೇಳುವಂತಿ. ಈಗಲೀ ಗಂಧರ್ವವಿದ್ಯ ಕೊಂಬೋಹಾಂಗೆ ಇಲ್ಲ.' ಹೀಂಗಂತ ಹೇಳಲು ಗಂಧರ್ವ ಅರ್ಜುನಗೆ ಬಹು ಆಖ್ಯಾನ ಹೇಳಿದ್ದಾನೆ, ತಾಪತ್ಯ ಆಖ್ಯಾನ ಹೇಳಿದ್ದಾನೆ. ಈ ಕಥಾಗಳೆಲ್ಲ ಆದಿ-ಪರ್ವದಲ್ಲಿ ಸವಿಸ್ತಾರ ಹೇಳೀದೆ. 'ನೀವು ಸ್ವಯಂವರಕ್ಕೆ ಹೋಗಥೀರಿ. ಬ್ರಾಹ್ಮಣರ ಮುಂದಮಾಡಿಕೊಂಡು ಹೋಗರಿ. ಇಲ್ಲಿ ಬ್ರಾಹ್ಮಣರ ಆಶ್ರಮವದೆ' ಎನಲಿಕ್ಕೆ, ಧೌಮ್ಯಾಚಾರ್ಯರ ಆಶ್ರಮಕ್ಕೆ ಹೋಗಿ,' ಪಾಂಡವರು ಧೌಮ್ಯಾಚಾರ್ಯರ ಕೂಡ ಮಾತನಾಡಥಾರೆ. 'ಹೇ ಧೌಮ್ಯಾಚಾರ್ಯಾ! ನಾವು ಪಾಂಚಾಲದೇಶಕ್ಕೆ ಹೋಗಥೀವಿ. ನಮಗೆ ಪುರೋಹಿತನಾಗಿ ಬರಬೇಕು' ಎಂದು ಹೇಳಿ, ಧೌಮ್ಯಾ-ಚಾರ್ಯನ್ನ ಮುಂದಮಾಡಿಕೊಂಡು, ಪಾಂಡವರು ಪಾಂಚಾಲದೇಶಕ್ಕೆ ಪ್ರವೇಶ ಮಾಡಿದರು.

ಸಮಸ್ತ ರಾಯರಿಂದ ಪಟ್ಟಣವೆಲ್ಲ ಜಡಿತವಾಗೇದೆ. ಅಲಂಕಾರದಿಂದ ಶೋಭಿಸತದೆ, 'ಲಕ್ಷ್ಯ ಎಚ್ಚಿದವರಿಗೆ ನಮ್ಮ ತಂಗೀ ದ್ರೌಪದೀನ್ನ ಕೊಡಥೀನಿ' ಎಂತ ಧೃಷ್ಟದ್ಯುಮ್ನ, ತನ್ನ ತಂಗಿಗೆ ಸಮಸ್ತ ರಾಯರ ಬಲಾಬಲ, ದೇಶಕೋಶ, ಧನ ವಸ್ತುಗಳ ಬಗ್ಗೆ ಹೇಳಿದನು. 'ಲಕ್ಷ್ಯ ಎಸಯಿರಿ' ಎಂದು, ಅಗ್ನಿಯೋಪಾದಿ ಧೃಷ್ಟದ್ಯುಮ್ನ ಹೇಳತ ಕುಳಿತುಕೊಂಡನು. ಸಮಸ್ತ ರಾಯರೂ ತಮ್ಮ ಕುಂಡಲ ಗಳ ಅಲ್ಲಾಡಿಸತ, ತಮ್ಮ ಮುಖಕಾಂತಿಯಿಂದ ಸಭಾನೆಲ್ಲ ಬೆಳಕು ಮಾಡತ, ನಾ ಮುಂದು ನೀ ಮುಂದೆಂದು ಹೋಗಥಾರೆ. ಲಕ್ಷ್ಯ ಉದಕದೊಳಗೆ ನೆರಳು ನೋಡಿ, ಐದು ಬಾಣಗಳಿಂದ ಕೆಡಹಿದರೆ, ದ್ರೌಪದೀ ಮಾಲಿ ಕೊರಳೊಳಗೆ ಹಾಕ್ಯಾಳು, ಹೀಂಗೆ ಪಣವಿಹೋದು. ಕೆಲವು ರಾಯರು ತಮ್ಮಿಂದ ಆಗದೆಂದು ತಿರುಗಿ-ಹೋದರು. ಶಿಶುಪಾಲ ಬಹಳ ಸಾಮರ್ಥ್ಯವುಳ್ಳವ, ಬಿಲ್ಲಿಗೆ ಹೆದಿ ಏರಿಸೇನೆಂದು ಬಹಳ ಸಾಹಸ ಮಾಡಲಿಕ್ಕೆ, ಉದ್ದಿನಕಾಳಷ್ಟು ಉಳೀತು. ಬಿಲ್ಲು ಶಿಶುಪಾಲಗೆ ತಿರುಗಿಹೊಡೀಲಿಕ್ಕೆ, ಮೂರ್ಛಾಗತನಾಗಿ ಸಭಾಮಧ್ಯದಲ್ಲಿ ಬಿದ್ದನು. ಅರ್ಜುನನ ಹೊರ್ತು ಬಿಲ್ಲು ದಾರೂ ಹೆದಿ ಏರಿಸಲಾರರು, ಮಹಾರುದ್ರನ ವರವಿಹೋದು. ದ್ರುಪದರಾಯಗೆ ರುದ್ರ, ಈ ಲಕ್ಷ್ಯ ಎಚ್ಚ್ಯೋಣ ಅರ್ಜುನನ ವ್ಯತಿರಿಕ್ತ ದಾರಿಗೂ ಆಗದೆಂದು ಹೇಳಿಹ. ಶಿಶುಪಾಲ ತಾನು ಅಪ್ರತಿಷ್ಠಿತನಾಗಿ ಹೋದಮ್ಯಾಲೆ, ಶಲ್ಯ ತಾನು ವೃದ್ಧನಾದರೂ, ಬಲವೀರ್ಯವುಳ್ಳಾತ ಹೆದಿ ಏರಿಸಲಿಕ್ಕೆ, ಹೆಸರುಕಾಳಷ್ಟು

ಉಳೀತು. ಭೂತಳದಲ್ಲಿ ಬಿದ್ದು ಅಪ್ರತಿಷ್ಠಿತನಾಗಿ ತಿರುಗಿ ಹೋದನು. ಸಮಸ್ತ ರಾಯರೂ ತಮ್ಮಿಂದ ಶಕ್ಯವಲ್ಲವೆಂದು ತಿರುಗಿ ಹೋಗಲಿಕ್ಕೆ, ಜರಾಸಂಧ ರಾಯರಿಗೆಲ್ಲ ಧಿಕ್ಕಾರ ಮಾಡಿ, ತಾನು ಹೆದಿ ಕೂಡಿಸಲಿಕ್ಕೆ, ಸಾಸಿರೀಕಾಳಷ್ಟು ಉಳೀತು. ಥರಥರ ನಡುಗಿ, ಮೊಣಕಾಲು ಮುರಿದು ಬಿದ್ದನು. ಸಂಗಡಲೇ ತಾನು ಬಿದ್ದಿಲ್ಲೆಂದು ಎದ್ದು ಕುಣಿದಾಡತಿಹ. ಜರಾಸಂಧ ರಾಯರಿಗೆಲ್ಲ ಮಾರಿ ತೋರಿಸದೆ, ಮಗಧ ದೇಶಕ್ಕೆ ಹೋದನು. ಸೂತಜಾತಿ ಕರ್ಣ ಬಂದು, ತನಗೆ ಕ್ಷತ್ರಿಯಜಾತಿ ಕನ್ಯಾ ಕೊಡರೆಂದು ಬಲ್ಲರೂ, ಲಕ್ಷ್ಯ ಎಸೆದು, ದ್ರೌಪದೀ ದುರ್ಯೋಧನಗೆ ಕೊಡಬೇಕು, ಹೀಂಗೆ ಮನಸಾ ಮಾಡಿ, ಪರಶುರಾಮ ಕೊಟ್ಟಂಥ ದಿವ್ಯಸಾಮರ್ಥಿಯಿಂದ ಲಕ್ಷ್ಯ ವಿಲ್ಲದಲೆ, ತನ್ನ ಬಾಹುಬಲದಿಂದ ಹೆದಿ ಕೂಡಿಸಲಿಕ್ಕೆ, ಕೂದಲಷ್ಟು ಉಳೀತು. ಬಿಲ್ಲು ಕರ್ಣಗೆ ಹೊಡದು ಕೆಡಹಾಕಿತು. ಅಪ್ರತಿಷ್ಠಿತನಾಗಿ ಹೋಗಲಿಕ್ಕೆ, ಸಮಸ್ತ ಕ್ಷತ್ರಿಯರೂ, ದಾರಿಂದಲೂ ಆಗದೆಂದು ತಿರುಗಿ ಹೋದರು.

ಸಮಸ್ತ ಕ್ಷತ್ರಿಯ ರಾಯರು ದಾರೂ ಇಲ್ಲಧಾಂಗೆ ತೋರೋಣ, ಬ್ರಹ್ಮಸಭೆಯಲ್ಲಿ ಸೂರ್ಯಚಂದ್ರರೋಪಾದಿ ಭೀಮಾರ್ಜುನರು ಎದ್ದು ನಿಂತರು. ಆಗ ಬ್ರಾಹ್ಮಣರೆಲ್ಲ 'ಸುಮ್ಮನೆ ಕೂಡ್ರೀ. ಕ್ಷತ್ರಿಯರ ಕೈಯಿಂದ ಈ ಕರ್ತವ್ಯವಾಗದು. ನಾವು ಬ್ರಾಹ್ಮಣರು ಭೋಜನಗೈದು, ದಕ್ಷಿಣೆ ಕೊಂಡು ಹೋಗಬೇಕು. ವ್ಯರ್ಥ ಅಪ್ರತಿಷ್ಠಿತ ರಾಗಬ್ಯಾಡರಿ!' ಎಂದು ನಿವಾರಿಸಿದರು. ಕೆಲವರು 'ನಮ್ಮೊಳಗೆ ಸಮರ್ಥರಿರಬಾರದ್ಯಾಕೆ, ಲಕ್ಷ್ಯ ಎಸೀಬಾರದ್ಯಾಕೆ?' ಈ ಪ್ರಕಾರ ಅನ್ನತಿಹೋರು. ಆದರೂ ಭೀಮಾರ್ಜುನರು ಕೃಷ್ಣನ ಮುಖಕಮಲ ನೋಡಿದರು. ಭೀಮನ ಆಜ್ಞೆ ಕೊಂಡು, ಅರ್ಜುನ ತನ್ನ ಮನಸ್ಸಿನಿಂದ ಕೃಷ್ಣಗೆ ನಮಸ್ಕಾರ ಮಾಡಿ, ಮಂಗಳಾಚರಣೆ ಮಾಡಿ, ಲೀಲಾಮಾತ್ರದಲ್ಲಿ ಹೆದಿ ಕೂಡ್ರಿಸಿ ನೀರೊಳಗೆ ನೋಡಿ, ಮತ್ಸ್ಯರೂಪವಾದಂಥ ಗುರಿ ಐದು ಬಾಣಗಳಿಂದ ಕೆಡಹಾಕಿದನು. ದ್ರೌಪದೀ, ಕೈಲಿ ಸುವರ್ಣಮಾಲಿ ಹಿಡಿದಿದ್ದಳು, ಅರ್ಜುನನ ಕೊರಳಿಗೆ ಹಾಕಿದಳು. ಬಾಡದಂಥ ಮಾಲಿ ಕೊರಳಿಗೆ ಹಾಕಿಕೊಂಡು, ತಾವು ಇಳಿದ ಕುಂಬಾರಸಾಲಿಗೆ, ದ್ರೌಪದೀ ಕೊಂಡುಹೋದರು.

ಕ್ಷತ್ರಿಯು ರಾಯರೆಲ್ಲ ಉನ್ಮತ್ತರಾಗಿ, ರಾಜಪುತ್ರಿ ಅಯೋಗ್ಯಗೆ ಹ್ಯಾಂಗೆ ಮಾಲಿ ಹಾಕಿದಳೆಂದು, ಸಮಸ್ತರೂ ಸಭಾ ಮುರಿದೆದ್ದು, ಧನುರ್ಬಾಣಗಳ ಹಿಡಕೊಂಡು ಯುದ್ಧಕ್ಕೆ ಬಂದರು. ಯಾದವರಿಗೆ ಕೃಷ್ಣನ ಆಜ್ಞೆ ಏನೆಂತೆಂದರೆ, ದ್ರೌಪದೀ ಸ್ವಯಂವರಕ್ಕೆ ಬನ್ನಿ, ಲಕ್ಷ್ಯ ಎಸೀಬ್ಯಾಡಿರೆಂದು ನಿರೂಪಿಸಿಹಕಾರಣ ಯಾದವರ ಹೊರ್ತಾಗಿ, ಸಮಸ್ತ ರಾಯರೂ ಭೀಮಾರ್ಜುನರ ಮ್ಯಾಲೆ ಮೇರೆದಪ್ಪಿ ಬರಲಿಕ್ಕೆ, ಭೀಮಸೇನ ದೊಡ್ಡ ವೃಕ್ಷ ಕಿತ್ತಿ ಎಲಿಗಳು ಉದರೋಹಾಂಗೆ ಅಪ್ಪಳಿಸಿ, ಕೈಲಿ ಹಿಡಕೊಂಡು, 'ದಾರು ಯುದ್ಧಕ್ಕೆ ಬರಥೀರಿ ಬರ್ರೀ' ಎಂದು ನಿಂದರಲಿಕ್ಕೆ, ಸಮಸ್ತ ರಾಯರೂ ತಮ್ಮ ಜೀವ ಉಳುಹಿಕೊಂಡು ಓಡಿಹೋದರು. ಇವರು

ಪಾಂಡವರೆಂದು ಶ್ರೀಕೃಷ್ಣ ಬಲರಾಮಗೆ ಹೇಳಿದನು. 'ಇವರು ಸತ್ತರೆಂದು ಒಳಿತು ಮುಟ್ಟಿಸಲಿಕ್ಕೆ ಹಸ್ತಿನಾವತಿಗೆ ಹೋಗಿದ್ದೆವು. ಅದೃಷ್ಟನಾಮಕ ಪರಮಾತ್ಮ, ನಮ್ಮ ಸೋದರತ್ತೀ ಮಕ್ಕಳನ್ನ ಉಳುಹಿಸಿದ, ನಮ್ಮ ಸೋದರತ್ತಿ ಮಕ್ಕಳು ಉಳಿದರು' ಎಂದು ಬಲರಾಮ ಬಹಳ ಸಂತೋಷವುಳ್ಳವನಾದ. ತಿನೀ ಮೊಮ್ಮಗ ಸಾತ್ಯಕಿ, ತನ್ನ ಗುರುವು ಅರ್ಜುನ ಉಳಿದನೆಂದು ಉಲ್ಲಾಸದಿಂದ ಕುಣಿದಾಡಿದನು. ಯಾದವರೆಲ್ಲ ಪ್ರೀತರಾದರು. ದುರ್ಯೋಧನಾದಿಗಳು, ಭೀಮಸೇನ ವೃಷ್ಣ ಹಿಡಕೊಂಡು ನಿಂದರಲಿಕ್ಕೆ ಮೊದಲಿಗೇ ಓಡಿಹೋಗಿದ್ದರು. ಕರ್ಣ ಕನ್ಯಾ ಕಸಕೊಂಡು ಬರಥೀನೆಂದು ಯುದ್ಧಕ್ಕೆ ಬಂದನು. ಕರ್ಣ ಸುಯೋಧನಗೆ ಅಂದ. 'ನೀ ರಾಜಾಧಿರಾಜ ಅರಸಿಗೆ ಸೋಲೋಣವಾಗಬಾರದು. ನಾವು ಭೃತ್ಯರಿದ್ದೀವಿ. ಜಯಾಪಜಯವಾಗಲೀ ನಾವೇ ಯುದ್ಧಕ್ಕೆ ಹೋಗಥೀವಿ' ಎಂದು ಹೇಳಿ, ದುರ್ಯೋಧನನ್ನ ನಿಂದರಸಿ, ಶಲ್ಯ ಕರ್ಣರು ಯುದ್ಧಕ್ಕೆ ಬಂದರು. ಬ್ರಾಹ್ಮಣರೆಲ್ಲ ಸಭಾ ಮುರದೆದ್ದು, ಲಕ್ಷ್ಯ ಎಸೆದು ಕನ್ಯಾ ಕೊಂಡಿರಲಿಕ್ಕೆ, ಕ್ಷತ್ರಿಯರೆಲ್ಲ ತಮ್ಮ ವ್ಯಾಲಿ ಹ್ಯಾಂಗೆ ಅಗ್ಗಳಿಕೆಯಿಂದ ಯುದ್ಧಕ್ಕೆ ಬರಥಾರೆಂದು, ಕ್ರೋಧದಿಂದ ಆಸನಗಳು, ದರ್ಭ, ಕಮಂಡಲುಗಳು ಸಿಟ್ಟೀಲೆ ತಿಪ್ಪಳಿಸತಿಹೋರು. ಈ ಪ್ರಕಾರ ಕೋಪಾವಿಷ್ಟರಾದಂಥ ಬ್ರಾಹ್ಮಣರನ್ನು ದ್ರುಪದರಾಯ ಕಂಡು, ಈ ಬ್ರಾಹ್ಮಣರ ಶಾಪದಿಂದ ಕ್ಷತ್ರಿಯರೆಲ್ಲ ವಿನಾಶವಾದಾರೆಂದು ಅಂಜತಿಹ. 'ಇನ್ನು ಹ್ಯಾಂಗೆ ಮಾಡಲಿ! ಭೂಸುರರು ಹ್ಯಾಂಗೆ ಶಾಂತರಾದಾರು, ಮಂಗಳಕರ ವಿವಾಹದಲ್ಲಿ ಏನು ಅನರ್ಥ ಮುಂಡಿಸಿತು!', ಎಂದು ನಿಟ್ಟುಸಿರು ಹಾಕತಾ ಶ್ರೀಕೃಷ್ಣಗೆ ಬೇಡಿಕೊಳ್ಳತಿಹ. 'ಹೇ ಸ್ವಾಮಿ ಶ್ರೀಕೃಷ್ಣ, ಇತ್ಥಂಡಕ್ಕೆ ಸಮಾಧಾನ ಮಾಡು. ನಿನ್ನ ಹೊರ್ತು ದಾರಿಂದಲೂ ಆಗದು' ಎಂದು ದ್ರುಪದರಾಯ ಬೇಡಿಕೊಳ್ಳತಿಹ. ಅಷ್ಟರೊಳಗೆ ಭೀಮಸೇನಗೆ ಶಲ್ಯಗೆ ಯುದ್ಧವಾಯಿತು. ವೃಷ್ಣದಲ್ಲಿ ಶಲ್ಯಗೆ ಹೊಡೀಬೇಕೆಂದರೆ, ಸೋದರಮಾವ ಸತ್ತಾನೆಂದು ಭೀಮಸೇನ ವೃಷ್ಣ ಕೆಳಗಿಟ್ಟು, ಕೈಲಿ ಹಿಡದು ವ್ಯಾಲಕ್ಕೆ ಹಾರಿಸುವ. ಕೆಳಗೆ ಬಿದ್ದರೆ ಪುಡಿಪುಡಿ ಆದಾನೆಂದು ಅಂತರಿಕ್ಷದಲ್ಲಿ ಹಿಡಕೊಂಬ, ಕೆಳಗೆ ಬೀಳಗೊಡ. ಮೆಲ್ಲಗೆ ಭೂಮೀವ್ಯಾಲಿ ಇಳಿಸತಿಹ. ಶಲ್ಯ, ಹರಿಭಕ್ತ, ವಾಯುದೇವರ ಆವೇಶ, ಸಹ್ಲಾದನ ಅವತಾರ, ವಧಿಗೆ ಯೋಗ್ಯನಲ್ಲ ಎಂದು ಭೂತಳದಲ್ಲಿ ಇಳಹಲಿಕ್ಕೆ ಶಲ್ಯ, ತನ್ನ ಜೀವ ಉಳುಹಿದವ ಭೀಮಸೇನನೆಂದು ತಿಳದು ತನ್ನ ರಾಜಧಾನಿಗೆ ಹೋದನು.

ಅರ್ಜುನಗೆ ಕರ್ಣಗೆ ಯುದ್ಧವಾಯಿತು. ಇಬ್ಬರೂ ಬಿಲ್ಲುಗಾರರು ಭಯಂಕರ ಯುದ್ಧ ಮಾಡಿದರು. ಕರ್ಣ ತನ್ನ ಸರ್ವ ಶಕ್ತಿಯಿಂದ ಯುದ್ಧ ಮಾಡಲಿಕ್ಕಾಗಿ, ಕರ್ಣನ ಮರ್ಮಸ್ಥಳಕ್ಕೆ ಬಾಣಗಳು ಪೋಣಿಸಲಿಕ್ಕೆ, ಕರ್ಣ ಬಹಳ ವ್ಯಥಿಯುಳ್ಳವನಾಗಿ 'ಎಲೋ ನೀ ದಾರು! ಸತ್ತಂಥ ಅರ್ಜುನ ಬದುಕಿ ಬಂದೀಯಾ! ಅವ

ಬಂದಿಲ್ಲವಲ್ಲ! ಸುರರಾಜ ದೇವೇಂದ್ರನಲ್ಲವಲ್ಲ! ಈ ಸಮಸ್ತ ದ್ವಿಜರ ತಪಸ್ಸಿನಿಂದ ಬಂದಿಲ್ಲವಲ್ಲ! ನೀ ದಾರು, ನಿನ್ನ ಸ್ವರೂಪವೇನು? ಹೇಳು' ಎನಲಿಕ್ಕೆ, 'ನನ್ನ ಕೊಂಡು ಏನು ಮಾಡಥಿ! ಶಕ್ತಿಯಿದ್ದರೆ ನನ್ನ ಕೂಡ ಯುದ್ಧ ಮಾಡು, ಧೀರನಾಗು. ಶೂರತ್ವ ಇಲ್ಲದಿದ್ದರೆ ಹೋಗು' ಎನಲಿಕ್ಕೆ, ಕರ್ಣ ತನ್ನಿಂದ ಯುದ್ಧ ವಾಗದ ಪ್ರಯುಕ್ತ, ಬ್ರಾಹ್ಮಣರ ಕೂಡ ಯುದ್ಧ ಮಾಡಬಾರದೆಂದು, ದುರ್ಯೋಧನನ ಸಮೀಪಕ್ಕೆ ಹೋಗಿ, ಅವನ ಸಹಿತನಾಗಿ ಹಸ್ತಿನಾವತಿಗೆ ಹೋದನು.

ಕ್ಷತ್ರಿಯರು ನಿರ್ಬಂಧ ಮಾಡಿದ್ದು ಪರಿಹಾರವಾಯ್ತು. ದ್ರೌಪದೀ ಕೂಡಿಕೊಂಡು ಭೀಮಾರ್ಜುನರು ಕುಂಬಾರನ ಮನಿಗೆ ಹೋದರು. ಕರ್ಣನ ಕೂಡ ಯುದ್ಧ ಹತ್ತಿದಾಗ ಧರ್ಮರಾಯ, ನಕುಲ, ಸಹದೇವರು ಮುಂದಾಗಿ ಕುಂಬಾರನ ಸಾಲಿಗೆ ಹೋಗಿದ್ದರು. ಕರ್ಣನ ಸೋಲಿಸಿ, ಕುಂಬಾರಸಾಲಿ ಸಮೀಪದಲ್ಲಿ ಐದು ಮಂದಿ ವಿಳಿತರಾಗಿ, ದ್ರೌಪದೀ ಕೂಡಿಕೊಂಡು ಒಳಕ್ಕೆ ಹೋಗುವಾಗ, ಕುಂತೀ ಒಳಗಿಂದ ಬಂದಳು. 'ಅಮ್ಮಾ ಭಿಕ್ಷಾ ತಂದೀವಿ' ಎನಲಿಕ್ಕೆ, ಕನ್ಯಾ ತಂದ ಭಾವವನ್ನು ತಿಳಿಯದೆ ಅಂತಃಪುರದೊಳಗಿಂದ, 'ಐದು ಮಂದಿ ಭಾಗ ಮಾಡಿಕೊಂಡು ಉಣ್ಣಿರಿ' ಎಂದು ಕುಂತೀ ಪ್ರಮಾದವಶದಿಂದ ಅಡಿದಳು. ಆ ವಚನ ಸತ್ಯ ಮಾಡಬೇಕಾಗಿ ಕನ್ಯಾಭಿಕ್ಷ ತಂದೀವಿ ಎನಲಿಕ್ಕೆ, ತಾಯಿ ಮಕ್ಕಳು ಕೂಡಿ ವಿಚಾರ ಮಾಡತ, ನನ್ನ ಬಾಯಿಲಿ ಇಂಥಾ ಮಾತು ಏನುಕಾರಣ ಬಂತೆಂದು ಯೋಚನಿ ಮಾಡತಿರಲಿಕ್ಕೆ, ವಸುದೇವಸುತ ಶ್ರೀಕೃಷ್ಣನು ಬಂದನು. 'ನೀವು ಸತ್ತಿರೆಂದು ಸುದ್ದಿ ಕೇಳಿ ಒಳಿತು ಮುಟ್ಟಿಸಿ ಬಂದೆವು. ಬದುಕಿದ್ದೀರಾ!' ಎಂದು ಭಾವಮೈದುನ ವಾವೀಲಿ ವಿನೋದವಚನಗಳಾಡಿ, ಸೋದರತ್ತಿಗೆ ನಮಸ್ಕಾರ ಮಾಡಿ, ಬಹಳ ದಿವಸ ಕಳದನೆಂದು ಸತ್ಯಭಾಮಾ ಮುನಿದಾಳೆಂದು ಸ್ವಾಮಿ ದ್ವಾರಾವತಿಗೆ ಹೋದನು.

ದ್ರುಪದರಾಯಗೆ ಚಿಂತಿ ಹತ್ತಿತು. ಕನ್ಯಾರ್ಥವಾಗಿ ಬ್ರಾಹ್ಮಣರ ವೇಷ ಧರಿಸಿ ಲಕ್ಷ್ಯ ಎಸೆದು, ಹೆಣ್ಣು ತೆಗೆದುಕೊಂಡು ಎಲ್ಲಿಗೆ ಹೋದರು! ದಾವ ಕುಲದವರು ದಾರ ಮಕ್ಕಳು, ವಿಪ್ರವೇಷದಿಂದ ಬಂದಿದ್ದರು! ವಿಚಾರ ತಿಳೀಬೇಕೆಂದು ರಾತ್ರಿ ಭಾಗದಲ್ಲಿ ದಾರಿಗೂ ತಿಳೀಗೊಡಸಿ, ತನ್ನ ಮಗ ಧೃಷ್ಟದ್ಯುಮ್ನನ್ನ ಕಳುಹಿಸಿಕೊಟ್ಟನು. ಪಾಂಡವರು ಕುಲಾಲಗೃಹದಲ್ಲಿದ್ದಾರೆ. ಭಿಕ್ಷ ತಂದದ್ದು ದ್ರೌಪದೀ ವಿಭಾಗ ಮಾಡಿ ಗಂಡಂದರಿಗೆ ಬಡಸಥಾಳೆ. ಬಹಳ ಸಂತೋಷವುಳ್ಳಾಕೆಯಾಗಿ ಬಡಿಸಿದಳು. ಅದರೊಳಗೆ ಭೀಮಸೇನನ ಆಹಾರ ದೊಡ್ಡದು ಎಂದು ಕುಂತೀ ಹೇಳಿದ ಪ್ರಕಾರ, ಭೀಮಸೇನಗೆ ಬಹಳವಾಗಿ ಭಿಕ್ಷಾನ್ನ ಬಡಸಥಾಳೆ. ತಾನು ಅರಸಿನ ಮಗಳೆಂದು ಗರ್ವ ಮಾಡದೆ, ಬಹಳ ಸಂಭ್ರಮದಿಂದ ವಿಭಾಗ ಮಾಡಿ ಬಡಸಿದಳು. ಭೋಜನ ಕಾಲದಲ್ಲಿ ಯುದ್ಧಪ್ರಸಂಗ ತನ್ನೊಳಗೆ ಹೇಳಿಕೋಥಾರೆ. ಇದನ್ನೆಲ್ಲ ಧೃಷ್ಟದ್ಯುಮ್ನ

ಹೊರಗೆ ನಿಂತು ಕೇಳತಿಹ. ಇವರು ಕ್ಷತ್ರಿಯರಿದ್ದಾರೆಂದು ತಿಳದು, ದ್ರುಪದರಾಯಗೆ 'ಇವರು ಬಹುಶಃ ಕ್ಷತ್ರಿಯರಿದ್ದಾರೆ' ಎಂದು ಹೇಳಿದ. ದ್ರುಪದರಾಯಗೆ ವಿಶ್ವಾಸ ಸಾಲದು. ಆದಕಾರಣ, ತನ್ನ ಪುರೋಹಿತನ್ನ ಕರೆಕಳುಹಿದ. ಪಾಂಡವರು ಬಂದಂಥ ಬ್ರಾಹ್ಮಣಗೆ ಆಘ್ರ್ಯಾದಿ ಪೂಜಿ ಗೈದು, ತಮ್ಮ ಪುರೋಹಿತ ಧೌಮ್ಯಾಚಾರ್ಯ, ತಮ್ಮ ತಾಯಿ ಕುಂತೀ ಕೂಡಿಕೊಂಡು ಪಾಂಡವರು ರಾಜಗೃಹಕ್ಕೆ ಹೋದರು.

ಸಭ ಮಂಡಿಸಿ ಕುಳಿತದೆ ಇವರ ಪರೀಕ್ಷಾರ್ಥವಾಗಿ ಒಂದು ಮನೀಲಿ ದರ್ಭಿ ಪುಸ್ತಕ, ಒಂದು ಗೃಹದಲ್ಲಿ ಆಯುಧ ಶಸ್ತ್ರಾಸ್ತ್ರಗಳು, ಒಂದು ಮನೀಲಿ ಬೇಕಾದ ಸಾಮಗ್ರಿ, ದ್ರವ್ಯ, ಧಾನ್ಯ, ವಸ್ತುಗಳು, ಒಂದು ಮನೀಲಿ ಶೂದ್ರ ಸಾಮಗ್ರಿ— ಗೋರಸಗಳು, ಮಿಣಿ, ಕಣ್ಣಿ ಮೊದಲಾದ್ದು ಇಟ್ಟರು. ಹೀಂಗೆ ನಾಲ್ಕು ಮನಿಯಲ್ಲಿ ದಾರಿಗೂ ಅರಿಕಿಲ್ಲದ್ಹಾಂಗೆ ಇಟ್ಟಿರಲಿಕ್ಕೆ, ಆಯುಧಗಳಿಂದ ಪೂರ್ಣವಾದ ಗೃಹಮೊಳಗೆ ಪಾಂಡವರು ಹೊಕ್ಕರು. ಇವರ ಸ್ವರೂಪ, ಜೇಷ್ಟಾ ಸ್ವರಗಳಿಂದ, ಹಾಂಗೆ ಹೆದಿ ಬಿಗಬಿಗದು ಕೈ ದಡ್ಡಬಿದ್ದದೆ, ಈ ಲಕ್ಷಣಗಳಿಂದ, ಬಹುಮಾನಸ್ಥ ದೊಡ್ಡ ಸ್ಥಳ ಗಳಲ್ಲಿ ಕೂಡೋಣ, ಗುಣಕರ್ಮ ನಡಿನುಡಿಗಳಿಂದ ಶೂರತ್ವ ಔದಾರ್ಯದಿಂದ ರಾಜಪುತ್ರರಾದಾರೆಂದು ತಿಳಿದರು. ಇನ್ನು ಪ್ರತ್ಯಕ್ಷ ಅವರ ಮುಖದಿಂದ ತಿಳೀ-

---

ಬೇಕಲ್ಲ, ಅದಕ್ಕೆ ದ್ರುಪದರಾಯ ಅಳೇಂದರಿಗೆ ಕೇಳಥಾನೆ. 'ನೀವು ದಾರು? ಯಥಾರ್ಥ ಹೇಳಬೇಕು' ಎಂದಲ್ಲಿ ಧರ್ಮರಾಯ ಮುಗುಳುನಗೆಯಿಂದ ಮಾತ ನಾಡಥಾನೆ. 'ವರ್ಣ ವಿಚಾರ ಏನುಕಾರಣ ಮಾಡತಿದ್ದಿ? ಲಕ್ಷ್ಯ ಎಚ್ಚಿದವರು ಕನ್ಯಾ ಕೊಂಡುಹೋಗಬೇಕು ಎಂದು ನಿನ್ನ ಸಂಕಲ್ಪ ಇದರಂತೆ ಅದೆ. ನಿನ್ನ ಮಗ ಧೃಷ್ಟ-ದ್ಯುಮ್ನ ಹೇಳಥಾನೆ ಕೇಳು.' ಹೀಂಗೆ ಧರ್ಮರಾಯ ಮಾತನಾಡಲಿಕ್ಕೆ, 'ವಿನೋದ ಮಾಡಬ್ಯಾಡಿ, ಯಥಾರ್ಥ ಹೇಳಿ. ಎಲೌ ತಾಯೀ ನೀನು ಸತ್ಯ ನುಡಿ' ಎನಲಿಕ್ಕೆ, ಕುಂತೀದೇವಿ ಮೂಲಾರಭ್ಯ ಕಥ ವಿಸ್ತಾರವಾಗಿ ಹೇಳಿದಳು. ಕೇಳಿ ಬಹಳ ಸಂತೋಷವುಳ್ಳವನಾಗಿ ಕೃತಕೃತ್ಯನಾದ. 'ನನ್ನ ಮಗಳ ಅರ್ಜುನಗೆ ಕೊಡ-ಬೇಕೆಂದು ಸಂಕಲ್ಪ ಇತ್ತು. ಹೇ ಧರ್ಮರಾಯ, ಭೀಮಸೇನ, ನೀವು ಹಿರೇರಿದ್ದೀರಿ. ನಿಮ್ಮ ಐದು ಮಂದಿಯೊಳಗೆ ನನ್ನ ಮಗಳು ದಾರಿಗೆ ಬೇಕು, ಅವರಿಗೆ ಮದುವಿ ಮಾಡಿಕೊಡಥೀನಿ' ಎಂದನು. ಧರ್ಮರಾಯ ಮಾತನಾಡಥಾನೆ. 'ನಾವು ಐದು ಮಂದಿ ಒಬ್ಬರ ಬಿಟ್ಟು ಒಬ್ಬರು ಮದುವಿ ಮಾಡಿಕೊಂಬೋಹಾಂಗೆ ಇಲ್ಲ. ನಾವು ಐದೂ ಮಂದಿ ನಿನ್ನ ಮಗಳ ಮದುವಿ ಆವೇವು' ಎಂದನು. 'ಇದು ಲೋಕವಿರುದ್ಧ' ಎಂದು ದ್ರುಪದರಾಯ ಎಂದಲ್ಲಿ ಧರ್ಮರಾಯ ಆಂಥಾನೆ. 'ನನ್ನ ಮನಸ್ಸು ಅಧರ್ಮದಲ್ಲಿ ಹರಿಯೋದಿಲ್ಲ. ನನ್ನ ಬುದ್ಧಿ ಅಧರ್ಮದಲ್ಲಿ ರತವಾಗೋದಿಲ್ಲ.' ಹೀಂಗೆನಲಿಕ್ಕೆ, ದ್ರುಪದರಾಯ ನನ್ನ ಒಬ್ಬ ಮಗಳಿಗೆ ಐದು ಮಂದಿ ಗಂಡಂದಿರಾದರು ಏಂಟು ಚಿಂತಿಸಲಿಕ್ಕೆ, ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ, ಸರ್ವಾಂತರ್ಯಾಮಿ

ವೇದವ್ಯಾಸ ಪ್ರತ್ಯಕ್ಷನಾದನು. ದ್ರುಪದರಾಯ ಸ್ವಾಮಿಗೆ ಸಿಂಹಾಸನದಲ್ಲಿ ಕುಳ್ಳಿರಿಸಿ, ಮಧುಪರ್ಕ ಮೊದಲಾದ ಪೂಜಿ ಮಾಡಿ, ಕೈ ಮುಗಿದುಕೊಂಡು ನಮ್ರಿತನಾಗಿ ನಿಂದಿರಲಿಕ್ಕೆ, ಕೂಡ್ರು ಎಂದು ಸ್ವಾಮಿ ಆಜ್ಞೆ ಆಯಿತು. ತನ್ನ ಮರ್ಯಾದಿಯಲ್ಲಿ ಕುಳಿತನು. 'ಎಲೈ ದ್ರುಪದರಾಯ, ನಿನ್ನ ಆಳೀಂದಿರು ದೇವತೆಗಳು. ಪಾಂಡವರಾಗಿ ಹುಟ್ಟಿಹಾರೆ. ಯಮನೇ ಧರ್ಮರಾಯ. ವಾಯುದೇವರು ಭೀಮಸೇನ, ಇಂದ್ರನೇ ಅರ್ಜುನ. ಅಶ್ವಿನೀದೇವತೆಗಳೇ ನಕುಲಸಹದೇವರು. ಈ ಐದೂ ಮಂದಿಗೆ ನಿನ್ನ ಮಗಳನ್ನು ಕೊಡು. ನಿನ್ನ ಮಗಳು ಭಾರತೀ ಅವತಾರ. ಈ ದ್ರೌಪದೀಯಲ್ಲಿ ಶಚೀ, ಶ್ಯಾಮಲಾ, ಉಷಾ, ಪಾರ್ವತೀ, ಹೀಂಗೆ ನಾಲ್ಕು ಮಂದಿ ದೇವತಾಸ್ತ್ರೀಯರು ಐಕ್ಯಭಾವದಿಂದ ಇದ್ದಾರೆ. ಧರ್ಮಕ್ಕೆ ವಿರೋಧ ಬರೋದಿಲ್ಲ. ಈ ಐದು ಮಂದಿಗೆ ನಿನ್ನ ಮಗಳನ್ನ ವಿವಾಹ ಮಾಡಿಕೊಡು' ಎನಲು, ಸಾಕ್ಷಾತ್ ಸ್ವಾಮಿ ಹೇಳಿದರೂ ದ್ರುಪದರಾಯಗೆ ಸಮಾಧಾನವಾಗದು. ಆದ್ದರಿಂದ ಶ್ರೀ ವೇದವ್ಯಾಸದೇವರು ದ್ರುಪದರಾಯಗೆ ದಿವ್ಯ ಚಕ್ಷಸ್ಸು ಕೊಟ್ಟನು. ಯಮಧರ್ಮನ ಅವತಾರ ಧರ್ಮರಾಯನಲ್ಲಿ, ಶ್ಯಾಮಲಾದೇವಿ ಇದ್ದಾಳೆ. ಭೀಮಸೇನನಲ್ಲಿ ಭಾರತೀ, ಅರ್ಜುನನಲ್ಲಿ ಶಚೀ, ಇವರನ್ನೂ, ನಕುಲಸಹದೇವರಲ್ಲಿ ಉಷಾ, ಹಾಂಗೆ ಪಾರ್ವತೀ. ಹೀಂಗೆ ಐದು ಮಂದಿ ಪ್ರತ್ಯಕ್ಷ, ಪ್ರತ್ಯೇಕ ಪ್ರತ್ಯೇಕ ಗಂಡಹೆಂಡಿರು ನಿಂತಿದ್ದರು. ಅದು ಕಣ್ಣೀಲೆ ಕಂಡು ದ್ರುಪದರಾಯ ಆಶ್ಚರ್ಯವುಳ್ಳವನಾಗಿ, ಸ್ವಾಮೀ ವಚನದಲ್ಲಿ ಅವಿಶ್ವಾಸ ಮಾಡಿದೆನಲ್ಲ ಎಂದು ಬಹಳ ಖಿನ್ನನಾಗಿ ಅಂಜಿಕೊಂಡು, ತನ್ನ ಅಪರಾಧ ಕ್ಷಮಿಸಬೇಕೆಂದು ವೇದವ್ಯಾಸದೇವರ ಪಾದಗಳಮ್ಯಾಲೆ ಬಿದ್ದನು. ಆಗ ವೇದವ್ಯಾಸದೇವರು ಮಾತನಾಡಿದ. 'ಎಲೈ ದ್ರುಪದರಾಯಾ, ನಿನಗೆ ಪಾಪ ಬರಬ್ಯಾಡ. ಅಂಜಿಕಿ ಬಿಡು. ನಿನ್ನ ಮಗಳ ಮದುವೀ ಮಾಡಿಕೊಡು' ಎನಲಿಕ್ಕೆ, 'ಸ್ವಾಮೀ ಈ ಮದುವಿ ಮಹೋತ್ಸವ ನೀನೆ ಮಾಡಬೇಕು' ಎಂದಲ್ಲಿ, ಶ್ರೀ ವೇದವ್ಯಾಸ, ಪಾಂಡವರ ಪುರೋಹಿತ ಧೌಮ್ಯಾಚಾರ್ಯನ ಮುಂದುಮಾಡಿಕೊಂಡು ತನ್ನ ಮೊಮ್ಮಕ್ಕಳ ಮದುವಿ ಮಹೋತ್ಸವದಿಂದ ಮಾಡಿದನು. ದ್ರುಪದರಾಯ ಮಹಾ ಸಂತೋಷದಿಂದ ಪಾಂಡವರು ಬದುಕಿ ಬಂದರು, ನನ್ನ ಮಗಳ ಪಾಣಿಗ್ರಹಣ ಮಾಡಿದರೆಂದು ಬಹಳ ಸುಖಬಟ್ಟ. ಜನಕರಾಯ, ಜಾನಕೀ ಸ್ವಯಂವರ ಮಾಡಿ ಎಷ್ಟು ಸಂತೋಷಬಟ್ಟ, ಹಾಂಗೆ ದ್ರುಪದರಾಯ ಬಹಳ ಸಂತೋಷವುಳ್ಳವನಾದ. ಸಮಸ್ತರೂ ದ್ರುಪದರಾಯನ ಪುಣ್ಯಭಾಗ್ಯ ವರ್ಣಿಸತಿಹೋರು. ದ್ರೌಪದೀ ಮದುವಿ ಆದ ವರ್ತಮಾನ, ಕರ್ಣೋಪಕರ್ಣ ಬ್ರಾಹ್ಮಣರು ಹೋದವರು ಹೇಳಿದ್ದರಿಂದ, ಸಕಲ ಸಾಮಗ್ರಿ ಕೊಂಡು ಶ್ರೀಕೃಷ್ಣ ಪಾಂಚಾಲನಗರಿಗೆ ಬಂದನು.

ಪಾಂಡವರ ಭೆಟ್ಟೀಗೆ ಸ್ವಾಮಿ ಬಾಹೋಣ, ಪಾಂಡವರು ನೂತನ ಮದಲಗಿತ್ತಿ ದ್ರೌಪದೀ ಸಹ ನಮಸ್ಕಾರ ಮಾಡಿದರು. ನೂತನ ಒಗತನಕ್ಕೆ ಏನೇನು

ಸಾವುಗ್ರಿ ಬೇಕು, ಸ್ವಯಂಪಾಕ ಪಾತ್ರಿ, ಉದಕಪಾತ್ರಿ, ಭೋಜನಪಾತ್ರಿ ಮೊದಲಾದವಷ್ಟೂ, ಉತ್ಕೃಷ್ಟ ಅಲಂಕಾರ, ದೇವತಿಗಳು ಇಟ್ಟುಕೊಂಬೋ ಅಂಥಾವು, ಶೋಭನವಾದಂಥ ಕುಂಡಲಗಳು, ಮುತ್ತಿನ ಹಾರಗಳು, ಹತ್ತ್ರಕಡಕು, ಕಂಠಮಾಲಿಗಳು, ಕಿರೀಟ ಮುಂತಾದ ನಾನಾ ಆಭರಣಗಳು, ವಸ್ತ್ರಗಳು ಕೊಟ್ಟನು. ಸೋದರತ್ತಿ ಕುಂತೀದೇವಿ ಪತಿಹೀನಳು. ಗಂಡಹೀನರಿಗೆ ದಾವ ವಸ್ತ್ರಾಭರಣಗಳು ಕೊಡೋವೊ ಅವು ಕೊಟ್ಟನು. ದಾಸದಾಸೇರನ್ನ ವಸ್ತ್ರಾಭರಣದಿಂದ ಅಲಂಕರಿಸಿ, ಪ್ರಾಯದವರನ್ನೇ ಕೊಟ್ಟನು. ಹಾಂಗೆ ರಾಜಭೋಗಕ್ಕೆ ಬೇಕಾದ ರಥ, ಆನಿ, ಕುದರಿ, ಕಾಲಾಳುಗಳು ಏನು ಬೇಕಾದಷ್ಟು ಶ್ರೀಕೃಷ್ಣ ತಂದುಕೊಟ್ಟನು. ವೇದವ್ಯಾಸ ಏನು ಕೊಟ್ಟನೆಂದರೆ, ಈ ಲೋಕಕ್ಕೆ ಸುಖ, ಪರಲೋಕಕ್ಕೆ ಸುಖಸಾಧನ ಆಗೋಹಾಂಗೆ, ಉತ್ಕೃಷ್ಟ ಆಶೀರ್ವಾದ ಕೊಟ್ಟನು. ದ್ರುಪದರಾಯ ತನ್ನ ಅಳೀಂದರಿಗೆ ಚತುರಂಗ ಸೇನ, ದಾಸದಾಸೇರು, ದಿವ್ಯ ರತ್ನಾಭರಣವಸ್ತುಗಳು, ದಿವ್ಯ ಪಾತ್ರಿಗಳು, ದಿವ್ಯ ವಸ್ತ್ರಗಳು ವಿಶೇಷವಾಗಿ ಕೊಟ್ಟನು. ಯಾದವಪತಿ ಶ್ರೀಕೃಷ್ಣ ಪಾಂಡವರ ಸಮೀಪದಲ್ಲಿ ವಿನೋದ ವಚನಗಳು ಆಡತ, ಪಾಂಡವರಿಗೆ ಸುಖೋದ್ರೇಕ ಹೆಚ್ಚಿಸಿಕೊಡತ, ಕೆಲವು ತಿಂಗಳಿದ್ದು ಆವ್ಯಾಲೆ ಬಲರಾಮನ ಕೂಡಿ, ದ್ವಾರಾವತಿಗೆ ಹೋದನು. ಆವ್ಯಾಲೆ ವೇದವ್ಯಾಸ ಅದೃಶ್ಯನಾದ. ಹೀಂಗೆ ಒಂದು ವರುಷ ಪಾಂಡವರು ಪಾಂಚಾಲನಗರಿಯಲ್ಲಿದ್ದರು.

ದುರ್ಯೋಧನಾದಿಗಳು ಅಪ್ರತಿಷ್ಠಿತರಾಗಿಹೋದರು ಕರ್ಣ ತನ್ನ ಕೈಯ ಯುದ್ಧವಾಗದಕಾರಣ ಹಿಂದಕ್ಕೆ ತಿರುಗಿ ಹೋದನು. ಪಾಂಡವರಿಗೆ ಮದುವಿ ಆದ ವಿಚಾರ ನಿಶ್ಚಯ ತಿಳದು, ಈ ಮಾತು ಧೃತರಾಷ್ಟ್ರಗೆ ತಿಳೀಗೊಡದೆ ಕರ್ಣ, ಭೂರಿಶ್ರವ ಶಕುನಿ ದುರ್ಯೋಧನನಿಂದ ಸಹಿತನಾಗಿ ಆಲೋಚನಿ ಮಾಡಿದನು. ದ್ರುಪದರಾಯನ್ನ ಕೊಂದರೆ ಪಾಂಡವರು ತಾವಾಗಿ ಯುದ್ಧಕ್ಕೆ ಬರಥಾರೆ, ಹೀಂಗೆ ಕುಯುಕ್ತಿ ಮಾಡಿ, ದುರ್ಯೋಧನಾದಿಗಳು ಪಾಂಚಾಲದೇಶಕ್ಕೆ ಬಂದರು. ಪಟ್ಟಣವೆಲ್ಲ ಸುತ್ತುಗಟ್ಟಿ ಮರ್ದಿಸತಾ ಇರಲಾಗಿ, ದ್ರುಪದರಾಯ ತನ್ನ ಮಕ್ಕಳ ಸಹವಾಗಿ ಯುದ್ಧಕ್ಕೆ ಬಂದು, ಭಯಂಕರ ಯುದ್ಧ ಮಾಡಲಾಗಿ, ಆ ಸಂಗ್ರಾಮದಲ್ಲಿ ಚಿತ್ರ, ಚಿತ್ರಕೇತು ಅಂತ ದ್ರುಪದರಾಯನ ಇಬ್ಬರು ಮಕ್ಕಳು ಸತ್ತರು. ದ್ರುಪದರಾಯನ ಸೈನ್ಯ ನಾಲ್ಕೂ ಕಡೀಲಿ ಓಡಿಹೋಯಿತು. ಪಾಂಡವರು ಮಾವ ಕೊಟ್ಟ ಸೈನ್ಯ, ಕೃಷ್ಣನಿತ್ತ ದಂಡಿನಿಂದ ಯುಕ್ತರಾಗಿ, ಯುದ್ಧಕ್ಕೆ ಬರಲಿಕ್ಕೆ, ಮುಂಚಿತರಾಗಿ ಕರ್ಣ, ಭೂರಿಶ್ರವ ಉಭಯತರೂ ಅರ್ಜುನನ ವ್ಯಾಳಿ ಬಾಣ ಮುಳಿಗರೆದರು. ಅರ್ಜುನನ ರಥ ಛೇದಿಸಿಬಿಟ್ಟರು ಅರ್ಜುನ ವಿರಥನಾಗಲಿಕ್ಕೆ, ಭೀಮಸೇನ ದೊಡ್ಡ ವೃಕ್ಷ ಕಿತ್ತಿಕೊಂಡು ಬೆನ್ನಟ್ಟಿ ಹೋಗಲಿಕ್ಕೆ ಶಕುನಿ, ಭೂರಿಶ್ರವ, ಕರ್ಣ, ದುರ್ಯೋಧನಾದಿಗಳು ಬೆನ್ನುಕೊಟ್ಟು ಎಲ್ಲೂ ನಿಂದರದೆ, ಹಸ್ತಿನಾವತಿಪರಿಯಂತ

ಓಡಿಹೋದರು. ಈ ವಾರ್ತೀನೆಲ್ಲ ವಿದುರ ಅಂಧನೃಪಗೆ ಅರಿಕೆ ಮಾಡಿದ. 'ಎಲೈ ರಾಜೇಂದ್ರ ನಿನ್ನ ಮಕ್ಕಳು ಬಹಳ ಅಭಿವೃದ್ಧರಾದರು' ಎನಲಿಕ್ಕೆ, ಅರಸು ಬಹಳ ಸಂತೋಷ ಉಳ್ಳವನಾಗಿ ಸುವಾರ್ತಿ ಕೇಳಿದ. ದುರ್ಯೋಧನನ್ನ ದ್ರೌಪದೀ ಮದುವಿ ಆದಳೆಂಬೋ ಭಾವ ತಿಳಿದವನಾಗಿ, ವಿದುರನಿಗೋಸ್ಕರ ಯಥೇಷ್ಟ ಉಡುಗೊರಿ ಕೊಟ್ಟನು. ಆಗ ವಿದುರ ಮಾತನಾಡಿದ. 'ಎಲೈ ಧೃತರಾಷ್ಟ್ರರಾಯ ದಾಸ ಮಕ್ಕಳೆಂದು ತಿಳಿದಿ! ಪಾಂಡವರನ್ನ ದ್ರೌಪದೀ ಮದುವಿ ಆದಳು' ಎನಲಿಕ್ಕೆ, ರಾಯ ವಿಮನಸ್ಕನಾಗಿ ಮನಸ್ಸಿನಲ್ಲಿ ಖೇದಬಟ್ಟನು. ಹೊರಗೆ ದುಃಖಬಟ್ಟರೆ, ಕಪಟತನ ಹೊರಗೆ ಬೀಳತದೆ. ಆದಕಾರಣ ವಿದುರನ್ನ ಕೇಳಥಾನೆ. 'ಹೇ ವಿದುರ, ಪಾಂಡವರು ಸತ್ತರೆಂದು ಕೇಳಿದ್ದೆ. ಅವರು ಹ್ಯಾಂಗೆ ಬದುಕಿದರು, ಅವರ ಪ್ರವೃತ್ತಿ ಹೇಳು' ಎನಲಿಕ್ಕೆ, ಪಾಂಡವರು, ವಾರಣಾವತಿಗೆ ಹೋಗಿ, ಲಾಕ್ಷಾಗೃಹದೊಳಗಿಂದ ಜಯಿಸಿ, ದ್ರೌಪದೀಸ್ವಯಂವರದಲ್ಲಿ ಲಕ್ಷ್ಯ ಎಸೆದು, ದ್ರೌಪದೀನ್ನ ವಿವಾಹ ಮಾಡಿಕೊಂಡು, ಪಾಂಚಾಲದೇಶದಲ್ಲಿದ್ದಾರೆಂಬೋ ಪರಿಯಂತ ಆದ್ಯಂತಸ್ಥಿತಿ ಹೇಳಲಿಕ್ಕೆ, ಪುನಃ ವಿದುರಗೆ ಉಡುಗೊರಿ ಉತ್ಸಾಹ ಕೊಟ್ಟನು. ಸತ್ತವರು ಬದುಕಿದರೆಂದು ತಿಳಿದು ಕರೆಯಲ್ಪಡಜೇಕು. ಮತ್ತೆ ಒಂದು ವರುಷ ಉದಾಸೀನ ಮಾಡಿ ಬಿಟ್ಟುಕೊಟ್ಟ.

ಪಾಂಡವರಿಗೆ ಶ್ರೀಕೃಷ್ಣ ಉಡುಗೊರಿ ಉತ್ಸಾಹಗಳನ್ನು ಕೊಟ್ಟು, ಪಾಂಚಾಲ ದೇಶದಿಂದ ಹೋದ ವರ್ತಮಾನ, ಪಾಂಡವರ ವೈಭವ ಕೇಳಿ, ದುರ್ಯೋಧನ ತಾಳಲಾರದೆ, ಬಹಳ ಅಸಹ್ಯ ಉಳ್ಳವನಾಗಿ, ಪುನಃ ದ್ರುಪದರಾಯನ ಮ್ಯಾಲೆ ದಂಡಯಾತ್ರಿ ಮಾಡಬೇಕೆಂದು, ವಸ್ತ್ರ ಗೃಹಗಳು ಹೊರಗೆ ಕೊಟ್ಟಾನೆ. ವಿದುರ ಈ ವಾರ್ತಿ ಕೇಳಿ ಧೃತರಾಷ್ಟ್ರಗೆ ಹೇಳಿದ. 'ನಿನ್ನ ಮಕ್ಕಳು ಒಮ್ಮಿ ಪಾಂಚಾಲದೇಶಕ್ಕೆ ಹೋಗಿ, ಪೆಟ್ಟು ತಿಂದು ಬಂದಾರೆ. ನಿನ್ನ ಮಕ್ಕಳು ಶೀಘ್ರ ಮರಣ ಐದಾರು. ನೀನು ಹಿರಿಯ ಇರಲಿಕ್ಕೆ, ಕುರುಕುಲ ನಾಶವಾಗಬಾರದು. ಪಾಂಡವರನ್ನ ಕರೆಸಿ, ಅರ್ಧ ರಾಜ್ಯ ಕೊಟ್ಟದ್ದರಿಂದ ಕ್ಷೇಮವದೆ.' ಹೀಂಗಂತ ವಿದುರ ಹೇಳಲು, ಆ ಮಾತಿಗೆ ಭೀಷ್ಮ ದ್ರೋಣಾದಿಗಳು ಮತ್ತಷ್ಟು ಬಲ್ಕೀ ಕೊಟ್ಟರು. ಪಾಂಡವರನ್ನು ಕರೇಕಳುಹೆಂದು ರಾಯಗೆ ಹೇಳಿದರು. ಪಾಂಡವರನ್ನ ಕರೀಲಿಕ್ಕೆ ದಾರನ್ನ ಕಳುಹ-ಬೇಕೆಂದು ಯೋಚನಿ ಮಾಡಿ, ವಿದುರಗೆ ಕರಕೊಂಡುಬರಲಿಕ್ಕೆ ಹೇಳಿದನು. ವಿದುರ ದಿವ್ಯ ರಥ ಏರಿಕೊಂಡು ಪಾಂಚಾಲದೇಶಕ್ಕೆ ಹೋದನು. ದ್ರುಪದರಾಯ, ಬೀಗ ವಿದುರ ಬರಥಾನೆಂದು ಅವನ್ನ ಇದಿರುಗೊಂಡು, ಪಟ್ಟಣಕ್ಕೆ ಕರದುಕೊಂಡು ಹೋಗಿ ಬಹಳ ಉಪಚಾರ ಮಾಡಿದನು. ಪಾಂಡವರು ಹಸ್ತಿನಾವತಿಗೆ ತೆರಳಬೇಕು, ಅಷ್ಟರೊಳಗೆ ಯಾದವಕುಲತಿಲಕ ಶ್ರೀಕೃಷ್ಣ, ವೇದವ್ಯಾಸರು ಬಂದರು. ಪಾಂಡವರು ನೂತನ ಮದಲಗಿತ್ತಿನ್ನ ಕೂಡಿಕೊಂಡು, ಶ್ರೀಕೃಷ್ಣ ವೇದವ್ಯಾಸರಿಂದ ಯುಕ್ತರಾಗಿ,

ಸುಮುಹೂರ್ತದಲ್ಲಿ ಹಸ್ತಿನಾವತಿಗೆ ಬಂದರು. ಗಾಂಧಾರೀ, ನೂತನ ಮದಲಗಿತ್ತಿ ತನ್ನ ಸೊಸಿ ದ್ರೌಪದೀಗೆ ಉಪಚಾರ ಮಾಡಬೇಕು. ತಾನು ಮಾಡಬೇಕಾದರೆ—ಗಂಡ ಕುರುಡ, ತಾನು ಕಣ್ಣು ಉಳ್ಳಾಕಿದ್ದೀನೆಂದು—ಕಣ್ಣಿಗೆ ವಸ್ತ್ರ ಕಟ್ಟಿ ಇಳೀಬಿಟ್ಟಹೋಳು. ಆದಕಾರಣ ದುರ್ಯೋಧನನ ಹೆಂಡತೀ ಕೈಯಿಂದ ದ್ರೌಪದೀಗೆ ಅನೇಕ ಅಲಂಕಾರ, ಪೂಜಿ ಮಾಡಿಸಿದಳು. ದ್ರೌಪದೀವ್ಯಾಲೆ ದುರ್ಯೋಧನ ಕಣ್ಣಿಟ್ಟ. ತನ್ನ ಹೆಂಡತೀವ್ಯಾಲೆ ಕಣ್ಣಿಟ್ಟಾನೆಂದು, ಭೀಮಸೇನ, ದುರ್ಯೋಧನನ್ನ ಕೊಂದಾನೆಂದು ಅತ್ಯಂತ ಅಂಜಿಕೆಯುಳ್ಳಾಕಿಯಾಗಿ, ಗಾಂಧಾರೀ ಕುಂತೀ ಕೂಡ ಮಾತನಾಡಿದಳು. 'ನಿನ್ನ ಸೊಸೀನ್ನ ಕೂಡಿಕೊಂಡು ನಿನ್ನ ಗಂಡನ ಮನೀಯೊಳಗೆ ಇರಹೋಗು. ನನ್ನ ಮಗ ದುರ್ಯೋಧನ ಬಹಳ ಪಾಪಿಷ್ಠನಿದ್ದಾನೆ. ದುಷ್ಟಬುದ್ಧಿಯುಳ್ಳನ, ದ್ರೌಪದೀನ್ನ ಮೋಹಿಸ್ಯಾನೆ. ದ್ರೌಪದೀ ಪರಮ ಸುಂದರಳು. ಈಕಿ ಸವಾನ ಲಕ್ಷ್ಮೀ ಹೊರ್ತಾಗಿ ದಾರೂ ಇಲ್ಲ. ನನ್ನ ಮಗ ಕೆಟ್ಟ ಬುದ್ಧಿಯುಳ್ಳವ. ಆದಕಾರಣ ನಿನ್ನ ಸೊಸಿ, ಮಕ್ಕಳು ಸಹವಾಗಿ ಪಾಂಡುಚಕ್ರವರ್ತೀ ಮನಿಗೆ ಹೋಗು' ಎನಲಿಕ್ಕೆ, ಕುಂತೀದೇವಿ ತನ್ನ ಗಂಡನ ಮನಿಗೆ ಹೋದಳು.

ಬೃಹಸ್ಪತಿ ಒಂದು ರಾಶಿ ಮೆಟ್ಟಿದರೆ, ಒಂದು ಪರಿವತ್ಸರ ಎನಿಸತದೆ. ಅಂಥಾ ಐದು ವರುಷ ಹಸ್ತಿನಾವತ್ತೀಲಿ ಪಾಂಡವರು ತಮ್ಮ ತಂದೀ ಮನಿಯೊಳಗೆ ಇದ್ದು, ಬಹಳ ಸುಖದಿಂದ ನಾನಾ ಭೋಗಗಳ ಭೋಗಿಸಿದರು. ಒಬ್ಬ ಸ್ತ್ರೀನ್ನ ಐದು ಮಂದಿ ಹ್ಯಾಂಗೆ ಭೋಗಸ್ತಾರೆಂದರೆ, ದೇವತಾಕರ್ತವ್ಯವೆಂದು ಒಬ್ಬ ಸ್ತ್ರೀಯಲ್ಲಿ ಐದು ಮಂದಿ ಸ್ತ್ರೀಯರು ಇಹೋರು. ಮೊದಲ ದಿವಸ ಶ್ಯಾಮಲಾದೇವಿ, ಧರ್ಮರಾಯನ ಭೋಗ ಮಾಡೋಳು. ಎರಡನೇ ದಿವಸ ಭೀಮಸೇನನ್ನ ದ್ರೌಪದೀರೂಪ ಭಾರತೀ, ಮೂರನೇ ದಿವಸ ಶಚೀರೂಪದಿಂದ ಅರ್ಜುನನ್ನ, ನಾಲ್ಕನೇ ದಿವಸ ನಕುಲನ್ನ ಉಷಾರೂಪದಿಂದ, ಐದನೇ ದಿವಸ ಸಹದೇವನ್ನ ಉಷಾರೂಪದಿಂದ, ಈ ಪ್ರಕಾರ ಭಾರತೀ ಚತುರ್ವಿಧ ದೇಹವುಳ್ಳಾಕಿ, ಶ್ಯಾಮಲಾದೇವಿ ಮುಂತಾದವರು ತಮ್ಮ ದೇಹವೆಂದು ತಿಳದು ಭೋಗಮಾಡೋರು. ಪ್ರತಿದಿವಸ ಕನ್ನಿಕೆ ಅಪ್ಪಂದೆ ಆಗಿ, ತಮ್ಮ ಗಂಡರ ಕೂಡ ಭೋಗ ಮಾಡೋರು. ಮೊದಲಿನ ಅಭಿಮಾನ ನಾಶವಾಗಿಹೋದ್ದು—ಮರಣವಾದರೆ ಹ್ಯಾಂಗೆ ಅಭಿಮಾನ ಇಲ್ಲ ಹಾಂಗೆ. ಪ್ರತಿದಿನ ನೂತನ ನೂತನ ಕನ್ಯಾರೂಪಳಾಗಿ ಪತಿಭೋಗಕ್ಕೆ ಹೋಗೋಳು. ಮುಖ್ಯಪ್ರಾಣನ ಆವೇಶ ಧರ್ಮರಾಯ, ಅರ್ಜುನ, ನಕುಲ-ಸಹದೇವರಲ್ಲಿ ಇಹೋದ್ದು. ಮುಖ್ಯಪ್ರಾಣಗೆ ಭಾರತೀ ಭೋಗವಾಗೋದು. ಭಾರತೀಗೆ ಅಭಿಮಾನ ನಾಶ ಇಲ್ಲ. ಯುಧಿಷ್ಠಿರನ ದಿವಸ—ಭಾರತೀದೇವಿ ಅಭಿಮಾನ ನಾಶ ಇಲ್ಲ—ವಾಯುದೇವರ ಆವೇಶ ಧರ್ಮರಾಯಗೆ ಇಹೋದು. ವಾಯುದೇವರ ವಿಷಯಕ್ಕೆ ಶಾಮಲಾದೇವಿಯಲ್ಲಿ ಭಾರತೀ ಅಭಿಮಾನ ಇಹೋದು. ಪಾಂಡವರಲ್ಲಿ ಮುಖ್ಯಪ್ರಾಣ

ಹೊಕ್ಕು ಅವರ ಬುದ್ಧಿ ಭ್ರಮ ಮಾಡಿ, ಭಾರತೀ ಆವೇಶದಿಂದ ಶಚೀ, ಶ್ಯಾಮಲಾ, ಉಷಾದೇವೀನ್ನ ಭೋಗಸ್ತಿಹೋನು. ಶಚೀ, ಶ್ಯಾಮಲಾ, ಉಷಾದೇವೇರಿಗೆ ಮರಣಸದೃಶ ಮೋಹ ಬಾಹೋದು, ಭೂತಾವೇಶದಪ್ಪಂದೆ ಮೋಹವಲ್ಲ, ಮೂರ್ಛಿ ಅಪ್ಪಂದೆ ಮೋಹವಲ್ಲ, ಗಾಢನಿದ್ರಿ ಮೋಹವಲ್ಲ, ಮರಣಪ್ರಾಯ ಮೋಹ ಬಂದರೂ ನಾರಾಯಣನ ಸ್ಮರಣೆ ಉಳ್ಳವರಾಗಿ—ಒಂದೇ ದೇಹದೊಳಗೇ ಇದ್ದರೂ—ಶ್ಯಾಮಲಾದೇವಿ ಭೋಗದ ದಿವಸ ಮಿಗಿಲಾದವರಿಗೆ ಮೋಹ ಇಲ್ಲ. ಪ್ರತಿದಿವಸ ನೂತನ ಅಭಿಮಾನ ಹುಟ್ಟಿ, ನೂತನ ಕನ್ನಿಕೆ ಆಗಿ ಶಚೀ, ಶ್ಯಾಮಲಾ, ಉಷಾದೇವೇರು ತಮ್ಮ ಗಂಡಂದಿರ ಭೋಗ ಮಾಡೋರು, ಭಾರತೀ ಮುಖ್ಯಪ್ರಾಣನ ಭೋಗ ಮಾಡೋಳು. ಈಕೆ ಭೋಗ, ದೃಷ್ಟಿಯಿಂದ ನೋಡಿದರೆ ಅನರ್ಥಸಾಧನ ವೆಂದು, ಒಂದೇ ದೇಹದೊಳಗೆ ಇದ್ದರೂ ಭಾರತೀ ಭೋಗ ಉಳಿದವರು ನೋಡರು.

ಸುರಭುಕ್ತಿ ಬಹಳೇ ವಿಚಾರ ಮಾಡಲೊಶವಲ್ಲ. ಉಳಿದ ದೇವೇರಿಗೆ ಒಂದು ಜನ್ಮದಲ್ಲಿ ಅನ್ಯಗಾಮಿತ್ವ ಹೇಳತವೆ. ಒಂದೇ ದೇಹವೊಳಗಿದ್ದರೂ, ತಮ್ಮ ತಮ್ಮ ಗಂಡಂದಿರ ಭೋಗ ಪ್ರತ್ಯೇಕ ಮಾಡೋಣ, ಮಿಗಿಲಾದವರಿಗೆ ಅಭಿಮಾನ ಇಲ್ಲದೆ ಇದ್ದರೂ ದೇವರ ಸ್ಮರಣೆ ಇಹೋಣ ಇವೆಲ್ಲ ದೇವತಾಕರ್ತವ್ಯ. ದೇವತಾಭೋಗಕ್ಕೆ ಮನುಷ್ಯರ ದೃಷ್ಟಾಂತ ಕೊಟ್ಟೀನೆಂದರೆ ಬಾರದು. ಬಹಳೇ ವಿಚಾರ ಮಾಡಕೂಡದು. ತನ್ನ ಬುದ್ಧಿಗೆ ನಿಲುಕದಿದ್ದರೆ, ದೇವತಾಕರ್ತವ್ಯವೆಂದು ತಿಳೀಬೇಕಲ್ಲದೆ, ಸಮಾಧಾನ ಬೀಳವಲ್ಲದೆಂದು ಚಿಂತಿ ಹಚ್ಚಿಕೊಳ್ಳಬಾರದು. ಇದೇ ಸ್ವಾಮೀ ಲೀಲ ಎಂತ ತನ್ನ ಬುದ್ಧಿಬಲದಿಂದ ತಿಳಿಯಬೇಕು. ಸಮಾಧಾನಗೈಬೇಕು. ಈ ಪ್ರಕಾರ ಪಾಂಡವರು, ತಮ್ಮ ತಮ್ಮ ಸ್ತ್ರೀಯರ ಕೂಡ ಭೋಗಗಳ ಭೋಗಸ್ತಿಹೋರು.

ವಾಸಿಷ್ಠಕೃಷ್ಣ, ಯಾದವಕೃಷ್ಣ ಇವರು ಪಾಂಡವರ ಮೇಲಿನ ಸ್ನೇಹದಿಂದ, ಭಕ್ತಿಪಾಶದಿಂದ ಕಟ್ಟಿಸಿಕೊಂಡು ಅವರ ಸಮೀಪದಲ್ಲೇ ಇಹೋರು. ಗುಣಸಮುದ್ರರು, ತಮ್ಮ ವಿಶೇಷ ಜ್ಞಾನದಿಂದ ಪಾಂಡವರ ಪ್ರಶ್ನಕ್ಕೆ ಉತ್ತರಗಳ ಹೇಳಶಿಹೋರು. ಮತ್ತು ಅವರಿಗೆ ಅತ್ಯಂತ ಸುಖಬಡಸಥಾ ಹಸ್ತಿನಾವತಿಯಲ್ಲಿ ಹೋರು. ಪಾಂಡವರು ತಾವು ವಾರಣಾವತೀಲಿಂದ, ಲಾಕ್ಷಾಗೃಹ ಸುಟ್ಟು ಹಿಡಿಂಬವನಕ್ಕೆ ಹೋಗಿರಲಕ್ಕೆ, ದುರ್ಯೋಧನ ಕಾಶೀರಾಯನ ಮಗಳ ಮದುವಿ ಆಗ್ಯಾನೆ. ಕಾಶೀರಾಯ ಸ್ವಯಂವರ ಮಾಡಿ, ದೇಶದೇಶದ ರಾಯರಿಗೆಲ್ಲ ಪತ್ರ ಬರೆದಿಹ. ಪತ್ರ ನೋಡಿಕೊಂಡು ಸಮಸ್ತ ರಾಯರೂ ಕಾಶೀರಾಯನ ಪಟ್ಟಣಕ್ಕೆ ಬಂದರು. ರಾಯರುಗಳ ಬಲ, ವೀರ್ಯ ವರ್ಣಿಸಬೇಕಾಗಿ, ಮೊದಲೇ ಜರಾಸಂಧನ ಬಲ, ವೀರ್ಯ ಗುಣಗಳು ವರ್ಣಿಸಲಿಕ್ಕೆ, ದುರ್ಯೋಧನಗೆ ಬಹಳ ಸಿಟ್ಟು ಬಂತು. ನಾವು 'ಕುರುಕುಲದವರು, ದೊಡ್ಡವರು, ನಮ್ಮ ಹೆಸರುಗೊಳ್ಳದೆ ಜರಾಸಂಧನ ಹೆಸರು ಹ್ಯಾಂಗೆ ಗೊಂಡ?' ಎಂದು ಸೊಕ್ಕಿನಿಂದ ಕೋಪವುಳ್ಳವನಾಗಿ, ಬಲಾತ್ಕಾರದಿಂದ

ಕನ್ಯ ಕೊಂಡುಬರಲಿಕ್ಕೆ, ಸಮಸ್ತ ರಾಯರೂ ಮಿಳಿತರಾಗಿ ದುರ್ಯೋಧನನ್ನ ಅಡ್ಡಗಟ್ಟಿದರು. ದುರ್ಯೋಧನ, ಕರ್ಣ ತಮ್ಮಂದಿರ ಸಹವಾಗಿ ರಾಯರ ಕೂಡ ಯುದ್ಧ ಮಾಡಲಿಕ್ಕೆ, ಕರ್ಣ ದುರ್ಯೋಧನಗೆ ಅಂದ, 'ನೀನು ರಾಜಾಧಿರಾಜ ಇದ್ದಿ. ತಮ್ಮಂದಿರ ಸಹವಾಗಿ ಕನ್ಯ ಕೊಂಡು ಹಸ್ತಿನಾವತಿಗೆ ಹೋಗು. ನೀವು ಅರಸರುಗಳು ಕೈಸೆರಿ ಸಿಕ್ಕಬಾರದು. ನಾನು ನಿನ್ನ ಭೃತ್ಯ, ಸಮಸ್ತ ರಾಯರನ್ನೂ ಸೋಲಿಸಿ ಬರಥೀನಿ. ಪಟ್ಟಣಕ್ಕೆ ಬಂದು ಕನ್ಯಾ ಕಸಕೊಂಡು ಹೋದರಲ್ಲ ಎಂದಿ, ಭೀಷ್ಮ ದ್ರೋಣಾದಿಗಳು ಇರಲಿಕ್ಕೆ, ಕನ್ಯಾ ಕೊಂಡು ಹೋಗಲಿಕ್ಕೆ ವಶವಲ್ಲ. ಪಟ್ಟಣ ಹೊಕ್ಕವರ ಕೂಡ ಜರಾಸಂಧ ಯುದ್ಧ ಬಯಸುವವನಲ್ಲ. ಅದಲ್ಲದೆ ಹಸ್ತಿನಾವತಿಲಿ ರುದ್ರಾವತಾರ ಅಶ್ವತ್ಥಾಮನಿದ್ದಾನೆ. ಜರಾಸಂಧ ಶಿವಭಕ್ತ, ಮಹಾರುದ್ರನ ದ್ರೋಹ ಮಾಡಬಾರದೆಂದು, ಜರಾಸಂಧ ಯುದ್ಧಕ್ಕೆ ಬರಲರಿಯ. ಅರಸರುಗಳು, ಅರಸನ ತಮ್ಮಂದಿರು ಕೈಸೆರಿ ಸಿಕ್ಕರೆ ಕೀರ್ತಿ ಕೆಡತದೆ. ನಾವು ನಿನ್ನ ಭೃತ್ಯರು, ಜಯಾಪಜಯ ಭೃತ್ಯರಿಗಾಗೋದು ಉಂಟಾದದ್ದು. ಭೀಷ್ಮ ಅರಸಲ್ಲ, ತನ್ನ ಸದೃಶನಲ್ಲವೆಂದೂ, ದ್ರೋಣಾಚಾರ್ಯ ಬ್ರಾಹ್ಮಣನಂತ ಜರಾಸಂಧ ಯುದ್ಧ ಮಾಡೋಲ್ಲ.' ಹೀಂಗಂತ ಕರ್ಣ ದುರ್ಯೋಧನನ ಕೂಡ ಹೇಳಿ, ಕೊಟ್ಟು-ಕಳುಹಿಸಿದ. ದುರ್ಯೋಧನ ಹಸ್ತಿನಾವತಿಗೆ ತಮ್ಮಂನಿರ ಸಹವಾಗಿ ಹೋದನು.

ಕರ್ಣ ಯುದ್ಧಕ್ಕೆ ನಿಂತನು. ಕರ್ಣ ಒಬ್ಬನೇ ಎಂದು, ಪ್ರತ್ಯೇಕ ಪ್ರತ್ಯೇಕ ರಾಯರನ್ನ ಯುದ್ಧಕ್ಕೆ ಕಳುಹಿದನು. ಕರ್ಣ ಅಷ್ಟೂ ರಾಯರನ್ನ ಸೋಲಿಸಿ-ಬಿಟ್ಟನು. ಜರಾಸಂಧ ತಾನೇ ಯುದ್ಧಕ್ಕೆ ಬಂದ. ಕರ್ಣ ಸಾರಥಿ ಇಲ್ಲದೆ, ಪರಶುರಾಮದೇವರು ಕೊಟ್ಟ ಅಸ್ತ್ರಸಾಮರ್ಥ್ಯದಿಂದ ಜರಾಸಂಧನ ಕೂಡ ವಿಚಿತ್ರ ಯುದ್ಧ ಮಾಡಿದನು. ಕರ್ಣ ಜರಾಸಂಧನ್ನ ಮುಷ್ಟೀಪೆಟ್ಟಿನಿಂದ ಮರ್ದಿಸಿಬಿಟ್ಟನು. ಜರಾ ಎಂಬ ದೈತ್ಯಳು ಜರಾಸಂಧನ್ನ ಎರಡು ಹೋಳಿನಲ್ಲಿ ಸಂಧಿಸಿದ್ದಳು. ಅಂಥಾ ಮರ್ಮಸ್ಥಳಕ್ಕೆ ಪೆಟ್ಟು ಹೊಡಿಯಲಿಕ್ಕೆ, ಕರ್ಣ ತನ್ನ ಮರ್ಮಸ್ಥಳ ತಿಳಿದನು. ಬಲರಾಮನಂಥಾವ ತಿಳಿದಿದ್ದಿಲ್ಲ. ಕರ್ಣ ಬಲು ಶೂರನಿದ್ದಾನೆಂದು ತಿಳದು, ಜರಾ-ಸಂಧ ಮಾತನಾಡಿದ. 'ಎಲೈ ಕರ್ಣ ನೀನ ದೊಡ್ಡ ಪರಾಕ್ರಮಿ. ಯುದ್ಧದಲ್ಲಿ ಚತುರನಿದ್ದಿ. ನನ್ನ ಭೃತ್ಯನಾಗು. ನಾ ಕೊಲ್ಲೋಹಾಂಗೆ ಇಲ್ಲ. ನಿನ್ನ ತಂದೀ ಅಂಗರಾಜ್ಯ ಅರ್ಧ ನನ್ನ ವಶವಾಗೇದೆ. ನನ್ನ ಭೃತ್ಯನಾಗು. ರಾಜ್ಯ ಕೊಡಥೀನಿ. ನಾನು ಕರೆಕಳುಹಿದಾಗ ನನ್ನ ಸಮೀಪಕ್ಕೆ ಬಾ' ಅಂತೆನಲಿಕ್ಕೆ, ಕರ್ಣ ರಾಜ್ಯ ಕೊಡು ನಿನ್ನ ವಶನಾಗಿದ್ದೀನೆಂದನು. ಉಳವರೀ ಅರ್ಧ ಅಂಗರಾಜ್ಯ ಭೀಮಸೇನ ದಿಗ್ವಿಜಯಕಾಲದಲ್ಲಿ ತೊಗೊಂಡಿದ್ದ. ಧೃತರಾಷ್ಟ್ರನ ವಶವಾಗಿತ್ತು. ದುರ್ಯೋ-ಧನ ತನ್ನ ತಂದಿಗೆ ಹೇಳಿ ಕರ್ಣಗೆ ಅರ್ಧ ರಾಜ್ಯ ಕೊಡಿಸಿದ್ದ. ಜರಾಸಂಧನಿಂದ ಅರ್ಧ ರಾಜ್ಯ, ಕೌರವನಿಂದ ಅರ್ಧ ರಾಜ್ಯ, ಹೀಂಗೆ ಸಮಗ್ರ ಅಂಗರಾಜ್ಯ ಆಳ-

ಹೊಕ್ಕನು. ದುರ್ಯೋಧನಾದಿಗಳು ಕರ್ಣ, ಕೃಷ್ಣನಿಗಿಂತ ದೊಡ್ಡವ ಜರಾಸಂಧನ ಗೆದ್ದು ರಾಜ್ಯ ಸಂಪಾದಿಸಿದನೆಂದು ತಿಳಿದಿಹೋರು. ಹಾಂಗೇ ಪೊಗಳತಿಹೋರು. ದುರ್ಯೋಧನ ಕಾಶೀರಾಯನ ಮಗಳ ಮದುವಿ ಮಾಡಿಕೊಂಡ. ಕಾಶೀರಾಯನ ಮಗಳು ಪೂರ್ವದಲ್ಲಿ ದಾರಿಂದರೆ ಅಲಕ್ಷ್ಮೀ, ಪಾರ್ವತೀ ಅವೇಶವುಳ್ಳಾಕಿಯಾಗಿ, ಕಾಶೀರಾಯನ ಮಗಳು ಭಾನುಮತಿಯಾಗಿ ಹುಟ್ಟಿದಳು. ಅಲಕ್ಷ್ಮೀ ಅದಕಾರಣ ಕಲಿಯಾದ ದುರ್ಯೋಧನನ ಹೆಂಡತಿ ಆದಳು. ಆಕೀ ಉದರದಲ್ಲಿ ಲಕ್ಷಣ, ಲಕ್ಷಣಾ ಎಂಬ ಇಬ್ಬರು ಮಕ್ಕಳಾದರು. ಲಕ್ಷಣ ಎಂಬುವ ಗಂಡಸುಮಗ. ಪೂರ್ವದಲ್ಲಿ ರಾವಣನ ಮಗ ಅಕ್ಷಕುಮಾರನೇ ದುರ್ಯೋಧನನ ಮಗನಾಗಿ ಹುಟ್ಟಿದ್ದಾನೆ. ಲಕ್ಷಣಾ ಎಂಬ ಹೆಣ್ಣುಮಗಳು ಕಾಮನ ಹೆಂಡತಿ ರತೀದೇವಿ, ಲಕ್ಷಣಾ ಎಂಬ ನಾಮದಿಂದ ಹುಟ್ಟಿದ್ದಾಳೆ. ಲಕ್ಷಣಾ ಎಂಬುವಳನ್ನ ಕೃಷ್ಣನ ಮಗ ಜಾಂಬವತೀಯಲ್ಲಿ ಹುಟ್ಟಿದ ಸಾಂಬಗೆ ಮದುವೀ ಮಾಡಿಕೊಟ್ಟದೆ.

ದುರ್ಯೋಧನ ಅಪಾರ ಹೆಂಡಿರನ್ನ ಮದುವಿ ಆದನು. ಈತನ ತಮ್ಮಂದಿರು, ಸುಂದರ ಸ್ತ್ರೀಯರನ್ನು ಮದುವಿ ಮಾಡಿಕೊಂಡರು. ಇವರ ಮದುವಿ, ಪಾಂಡವರು ಏಕಚಕ್ರನಗರದಲ್ಲಿರಲಿಕ್ಕೆ ಆಯಿತು. ಪಾಂಡವರು ದ್ರೌಪದೀ ಮದುವಿ ಮಾಡಿ-ಕೊಂಡು ಬಂದವ್ಯಾಲೆ, ದುರ್ಯೋಧನಾದಿಗಳು ದ್ರೌಪದೀಸದೃಶ ನಮಗೆ ಹೆಂಡತಿ ಇಲ್ಲ. ಕರ್ಣನ ಕೂಡಿಕೊಂಡು ದ್ರೌಪದೀಸದೃಶ ಹೆಣ್ಣು ನೋಡಬೇಕೆಂದು ಆಲೋಚಿಸಿದರು. ಕಳಿಂಗದೇಶದಲ್ಲಿ ಸುವಜ್ರರಾಯ ತನ್ನ ಮಗಳ ಸ್ವಯಂವರ ಆರಂಭ ಮಾಡಿಹ. ಜರಾಸಂಧ ಮೊದಲಾದ ರಾಯರೆಲ್ಲ ಬಂದಿಹೋರು. ತಾವು ಕುರುಕುಲದವರು ದೊಡ್ಡವರೆಂದು, ಅಹಂಕಾರದಿಂದ ಹೋಗಿ ಕನ್ಯ ಕೇಳಲಿಕ್ಕೆ — ಸುವಜ್ರರಾಯಗೆ ಮಹಾರುದ್ರನ ವರವಿಹೋದರಿಂದ — ದುರ್ಯೋಧನನ ತಮ್ಮಂದಿರ ಸಹವಾಗಿ ಕೈಸೆರಿಹಿಡದು, ಕಾರಾಗೃಹದಲ್ಲಿ ಸಂಕಲಿ ಹಾಕಿಸಿ ಇಟ್ಟನು. ಈ ವರ್ತಮಾನ ಹಸ್ತಿನಾವತಿಗೆ ಬಂತು. ಕರ್ಣ ಕಾಶೀರಾಯನ ಸ್ವಯಂವರದಲ್ಲಿ ಜರಾಸಂಧ ಮೊದಲಾದ ರಾಯರನ್ನೆಲ್ಲ ಗೆದ್ದ. ಈಗ ಓಡಿಹೋದ. ಹ್ಯಾಂಗೆಂದರೆ ಪಾಂಡವರ ಮ್ಯಾಲೆ ಸ್ಪರ್ಧಿಯಿಂದ ದ್ರೌಪದೀಸದೃಶ ಚಲುವೀನ್ನ ತರಬೇಕೆಂಬೋ ಅಭಿಪ್ರಾಯದಿಂದ ಕರ್ಣನ ಕೂಡಿಕೊಂಡು ಹೋದ ಪ್ರಯುಕ್ತ ಕರ್ಣನ ದರ್ಪ ಭಗ್ನವಾಗಿ ದೇಶಾಂತರಕ್ಕೆ ಓಡಿಹೋದನು. ಈ ವೃತ್ತಾಂತ ಕೇಳಿ ಭೀಷ್ಮ, ದ್ರೋಣ, ಅಂಧನೃಪ ಮೊದಲಾದವರು ಪಾಂಡವರಿಗೆ ಬೇಡಿಕೊಂಡರು. 'ನಿಮ್ಮಂಥ ಅಣ್ಣ ತಮ್ಮಂದಿರಿದ್ದು ದುರ್ಯೋಧನಾದಿಗಳು ಕಳಿಂಗದೇಶದಲ್ಲಿ ಸೆರಿ ಬೀಳಬಾರದು, ಬಿಡಿಸಿ ತರಬೇಕು' ಎಂದು ಬೇಡಿಕೊಳ್ಳಲಿಕ್ಕೆ, ಧರ್ಮರಾಯ ಈ ವಿಷಯದಲ್ಲಿ ತಮ್ಮನಾದ ಭೀಮಸೇನನ್ನ ಬೇಡಿಕೊಂಡನು. ಅಣ್ಣ, ಗುರು, ಹಿರಿಯ ಇವರ ಮಾತು ಮೀರಲಿಕ್ಕೆ ಕೂಡದು ಎಂದು, ಭೀಮಸೇನ ಕಳಿಂಗದೇಶಕ್ಕೆ

ಹೋಗಿ ಸುವಜ್ರರಾಯನ ಕೊಂದು ಕೌರವಾದಿಗಳ ಸೆರಿ ಬಿಡಿಸಿ ತಂದನು. ದುರ್ಯೋಧನಾದಿಗಳು, ತಮ್ಮ ವೈರಿಜ್ಞಾತಿಗಳ ಕೈಯಿಂದ ಬಿಡಿಸಿಕೊಂಡು ಬಂದೀವಲ್ಲ ಎಂದು ಮಾರಿ ಕಪ್ಪು ಮಾಡಿಕೊಂಡು, ಕೋಪದಿಂದ ಸಡತಲೇ ಹಸ್ತಿನಾವತಿಗೆ ಬಂದರು.

ಪಾಂಡವರು ಬಲಿಷ್ಠರು. ಸಮಸ್ತ ರಾಯರನ್ನೂ ಅಂಜಿಸಿಕೊಳತಿಹೋರು. ಪ್ರಜರ ಗಳಿಗೆ ಪಾಂಡವರು ತಮಗೆ ಅರಸರಾಗಬೇಕೆಂದು ಇಚ್ಛೆ ಇಹೋದು. ಇದನ್ನೆಲ್ಲ ಕಂಡು ಪಾಂಡವರ ವೈಭವ ನೋಡಲಾರದೆ, ಇವರ ಕೀರ್ತಿ ಕೇಳಲಾರದೆ, ದೃಷ್ಟೀಲಿ ನೋಡಲಾರದೆ, ಪಾಪಿ ದುರ್ಯೋಧನಾದಿಗಳು ಸುಡತಿಹೋರು. ಇದನ್ನೆಲ್ಲ ಅಂಧನೃಪ ಕೇಳಿ, ಪಾಂಡವರಿಗೆ ಕೌರವರಿಗೆ ಸ್ಪರ್ಧಿ ಬರತದೆ, ಒಂದೇ ಕಡೀಲಿ ಇದ್ದರೆ ಸ್ನೇಹ ಹೆಚ್ಚತದೆ ಎಂದು, ಧರ್ಮರಾಯನ ಕರೆದು 'ನೀವು ಇಂದ್ರಪ್ರಸ್ಥಕ್ಕೆ ಹೋಗರಿ. ಪೂರ್ವದಲ್ಲಿ ದೇವೇಂದ್ರ ಆಳಿದ್ದ. ಹಸ್ತಿನಾವತಿ ಬಿಟ್ಟು ಹೋಗಥೀವೆಂಬೋ ವಿಕಲ್ಪ ಹಚ್ಚಿಕೋಬ್ಯಾಡರಿ. ಅರ್ಧ ರಾಜ್ಯ, ಭಂಡಾರ, ಕೋಶ ಕೊಡಥೀನಿ, ಕೊಂಡುಹೋಗರಿ.' ಹೀಂಗಂತ ಪಾಂಡವರಿಗೆ ಅಂದ. ಹಿರಿಯಪ್ಪನ ಮಾತು ಮೀರದೆ ಹಾಳುಪಟ್ಟಣ ಇಂದ್ರಪ್ರಸ್ಥಕ್ಕೆ ಪಾಂಡವರು ಹೋದರು. ಪಾಂಡವರ ಸಮೀಪದಲ್ಲಿ ಶ್ರೀಕೃಷ್ಣ, ವಾಸಿಷ್ಠಕೃಷ್ಣ ಇಹೋರು. ಪಾಂಡವರು ವಿಷಯಾಸಕ್ತರಾಗಿ, ವ್ಯರ್ಥವಾಗಿ ದಿವಸ ಕಳದಿದ್ದಿಲ್ಲ. ನಿತ್ಯ ಹರಿಕಥ ಕೇಳತಿಹೋರು. ಹರಿವಿಷಯಕ ಜ್ಞಾನ ಹಾಂಗೆ ಹರಿವಿಷಯಕ ಪ್ರಶ್ನಗಳು ಮಾಡತ, ದಾವಾಗಲೂ ಹರೀನ್ನ ನೆನಸಿಕೊಂಡು, ರಾಜ್ಯ ಪಾರುಪತ್ಯ ಮಾಡತಿಹೋರು. ನಾರಾಯಣನ ಆಜ್ಞೆದಿಂದ ಇಂದ್ರಪ್ರಸ್ಥ ಹಾಳುಪಟ್ಟಣವಾದರೂ, ಅಮರಾವತಿ ಸದೃಶ ಮಾಡಿದರು. ದಿಗ್ದೇಶದವರು, ಪಾಂಡವರು ಧರ್ಮಿಷ್ಠರು ಕೊಟ್ಟ ವಚನ ತಪ್ಪುವರಲ್ಲ, ಶ್ರೀ ವೇದವ್ಯಾಸ, ಶ್ರೀಕೃಷ್ಣ ಇವರ ಸಹಾಯವದೆಂದು ಹೊಂದಿಕೊಂಡಿಹೋರು. ಪಾಂಡವರು ರಾಜ್ಯವಾಳುವಾಗ ಇಂದ್ರ ವ್ಯಾಳವ್ಯಾಳಕ್ಕೆ ಮಳಿಗರಿತಿಹ; ಯಥೇಷ್ಟ ಬೆಳಸು; ಸುಭಿಕ್ಷ ಈ ಪ್ರಕಾರ ಇಹೋದು. ಒಬ್ಬರೂ ದರಿದ್ರರಿದ್ದಿಲ್ಲ, ಅಜ್ಞಾನಿಗಳಿದ್ದಿಲ್ಲ. ಶಿವಸರ್ವೋತ್ತಮಜ್ಞಾನವುಳ್ಳವರು, ಭೀಮಸೇನನ ಅಂಜಿಕೆಯಿಂದ, ಅಂತಃಚಿನ್ಹ ಇಲ್ಲದೇ ಇದ್ದರೂ ಬಾಹ್ಯಚಿನ್ಹವಿಡೋರು. ಭೀಮಸೇನ ವೈಷ್ಣವೋತ್ತಮರಿಗೆ ದಯಮಾಡುವ. ಅವೈಷ್ಣವರು ಸತ್ಪಕ್ಷವೇ ದಹನ ಮಾಡಗೊಡ; ಹಂದಿ ನಾಯಿ ಕತ್ತಿ ತಿಂದುಹೋಗಲಿ. ಪಾಪಿ ಅಸುರರಿಗೆ ಉತ್ತರಕರ್ಮ ಮಾಡಗೊಡ. ನಾರಾಯಣನಲ್ಲಿ ಭಕ್ತಿಯುಳ್ಳವನಾಗಿಹ. ಹರಿಭಕ್ತರಲ್ಲಿ ಸ್ನೇಹ ಮಾಡತಿಹ. ಧರ್ಮದಿಂದ ಪಾಂಡವರು ಇಂದ್ರಪ್ರಸ್ಥ ಆಳತಿಹೋರು. ದೇವರನ್ನ ಮರೆತಿದ್ದಿಲ್ಲ. ರಾಜರಾಜೇಶ್ವರ ಸರ್ವೋತ್ತಮ ದೇವತಿ ನಮ್ಮಲ್ಲಿ ಕೃಪಾದಿಂದಿಹಾನೆಂದು ತಿಳಿದಿಹೋರು. ಇಂದ್ರಪ್ರಸ್ಥದಲ್ಲಿ ಶ್ರೀ ವೇದ-

ವ್ಯಾಸ, ಶ್ರೀಕೃಷ್ಣ ಉಭಯತರೂ ಏಳು ದಿವಸ ಪರಿಯಂತ ಪಾಂಡವರ ಪಟ್ಟಾಭಿಷೇಕ ಮಾಡಿ ನಿಂತಿಹೋರು.

ಪಾಂಡವರು ಸಜ್ಜನರು, ಹಸ್ತಿನಾವತಿ ಬಿಟ್ಟು ಹೋಗಥಾರೆಂದು, ಸಮಸ್ತ ಪ್ರಜೆಗಳೂ ಧರ್ಮರಾಯನ ಬಳಿವಿಡಿದು ಬರಲಿಕ್ಕೆ, 'ನಮ್ಮ ಹಿರಿಯಪ್ಪ ಧೃತರಾಷ್ಟ್ರನಿದ್ದಾನೆ. ಆತನ ಬಿಟ್ಟು ಬರಬ್ಯಾಡಿ' ಎಂದು ತಿರುಗಿ ಕಳುಹತಿಹೋನು. ದುರ್ಯೋಧನ ಜನರನ್ನ ಶಿಕ್ಷಿಸ್ತಿಹ. ಜನರಾದರೂ ಉಭಯಪಕ್ಷ ನಿರ್ಬಂಧದಿಂದ, ಮಹಾ ಕಷ್ಟದಿಂದ ಹಸ್ತಿನಾವತೀಲಿ ನಿಂತರು. ಧೃತರಾಷ್ಟ್ರ ತನ್ನ ಮಗ ದುರ್ಯೋಧನಗೆ ರಾಜ್ಯದಲ್ಲಿ ಅಭಿಷೇಕ ಮಾಡಿದ. ದುಶ್ಶಾಸನಗೆ ಯುವರಾಜ್ಯದಲ್ಲಿ ಅಭಿಷೇಕ ಮಾಡಿದ. ಸ್ವಾಮಿ ಯಾದವಪತಿ ಶ್ರೀಕೃಷ್ಣ, ವೇದವ್ಯಾಸ ಇವರು ಧರ್ಮರಾಯಗೆ ಇಂದ್ರಪ್ರಸ್ಥದಲ್ಲಿ ರಾಜ್ಯಾಭಿಷೇಕ ಮಾಡಿದರು. ಭೀಮಸೇನಗೆ ಯುವರಾಜ್ಯದಲ್ಲೆ ಅಭಿಷೇಕ ಮಾಡಿದರು. ಸ್ವಾಮಿ ಪಾಂಡವರಿಗೆ ರಾಜ್ಯಾಭಿಷೇಕ ಮಾಡಿದನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯ-ನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ದ್ರೌಪದೀಪರಿಣಯನಿರ್ಣಯಃ' ಎಂಬ ಹತ್ತೊಂಭತ್ತನೇ ಅಧ್ಯಾಯ ಸಂಪೂರ್ಣವು.

ಶ್ರೀಮದ್ವೇಶಾರ್ಪಣಮಸ್ತು

ಅಧ್ಯಾಯ ೨೦

ಶ್ರೀಕೃಷ್ಣಚರಿತೇ ಸುಭದ್ರಾಹರಣ
ಖಾಂಡವದಹನಾದಿ ನಿರೂಪಣಂ

ಈ ಇಪ್ಪತ್ತನೇ ಅಧ್ಯಾಯದಲ್ಲಿ—ಇಂದ್ರಪ್ರಸ್ಥದಲ್ಲಿ ಪಾಂಡವರು ರಾಜ್ಯ ಆಳುವಾಗ, ಧರ್ಮರಾಯ ಯಜ್ಞದಲ್ಲಿ ದೀಕ್ಷ ಉಳ್ಳವನಾಗಿ ಅನೇಕ ಧರ್ಮಗಳ ಮಾಡತಿಹ. ಬ್ರಾಹ್ಮಣರನ್ನ ಗ್ರಾಮದಾನ, ಗಜದಾನ, ಅಶ್ವದಾನ, ದ್ರವ್ಯ ಮೊದ ಲಾದ್ದರಿಂದ ತುಷ್ಟಿಬಡಿಸತಿಹ. ಭೀಮಾರ್ಜುನರು ದ್ವಿಜರಿಗೋಸ್ಕರ ಅನೇಕ ದ್ರವ್ಯಗಳ ಕೊಡತಿಹೋರು. ಅವೆಲ್ಲ ಕ್ಷುದ್ರದಾನಗಳು, ಧರ್ಮರಾಯನ ದಾನದ ಸದೃಶವಲ್ಲ. ದೇಶದೇಶದವರೆಲ್ಲ ಧರ್ಮರಾಯನ ದರ್ಶನಕ್ಕೆ ಭೀಮಸೇನನ ಬಳಿವಿಡಿದು ಅರಸಿನ ಭೆಟ್ಟಿ ಕೊಂಬೋರು. ಭೀಮಸೇನ ರಾಯರ ಕಡಿಯಿಂದ ಬಂದವರಿಗೆ ಉಡುಗೊರಿ ಉತ್ಸಾಹಗಳ ಕೊಡಸ್ತಿಹ. ಭೀಮಸೇನ ಪ್ರಧಾನಿಪಟ್ಟ ಆಳುವಾಗ ತನ್ನಾಜ್ಞಾಚಕ್ರ ತಿರಗಸ್ತಿಹ. 'ಶ್ರುತಿಸ್ಮೃತಿಯಲ್ಲಿ ಹೇಳಿದ ಪ್ರಕಾರ ವಿಹಿತಕರ್ಮ ಮಾಡತ ಬನ್ನಿ. ದೇವಋಣ, ಪಿತೃಋಣ, ಮನುಷ್ಯಋಣ ಇಟ್ಟುಕೋಬ್ಯಾಡಿ. ಸ್ನಾನ ಸಂಧ್ಯಾ-ವಂದನ, ಯಜ್ಞಕರ್ಮ, ದೇವತಾರ್ಚನಿ, ಅತಿಥಿಪೂಜ, ದೇವ-ಋಷಿ-ಪಿತೃ ತೃಪ್ತ್ಯರ್ಥವಾಗಿ ಮಾಡತ ಬನ್ನಿ. ಜಗಜ್ಜನ್ಮಾದಿಕಾರಣ ನಾರಾಯಣನೆಂದು ತಿಳೀರಿ. ವ್ಯರ್ಥ ದಿವಸಗಳ ಕಳಿಯದೆ, ನಿಶ್ಚಯಜ್ಞಾನ ತಿಳದು, ಪರತತ್ತ್ವವಿಚಾರ ಮಾಡತ ಬನ್ನಿ. ದೇವರ ವಿಷಯಕವಾದ ಜ್ಞಾನ ಸಂಪಾದಿಸದಿದ್ದರೆ ಶಿಕ್ಷಿಸೇನು' ಎಂದು ಜಯಭೇರಿ ಹೊಡಸ್ತಿಹ. ಪ್ರಜರುಗಳನ್ನು ಸರ್ವಾಪತ್ಕಾಲದಲ್ಲಿ ರಕ್ಷಿಸತಿಹ. ಲೇಶಮಾತ್ರ ಪ್ರಜಾಪೀಡನ ಇಲ್ಲ. ದ್ರುಪದರಾಯನ ಮಗ ಧೃಷ್ಟದ್ಯುಮ್ನ ತನ್ನ ತಂಗೀವ್ಯಾಲಿನ ಸ್ನೇಹದಿಂದ ಪಾಂಡವರ ಸಮೀಪದಲ್ಲಿಹೋನು. ಆತಗೆ ಸೇನಾಪತಿ-ತನ ಕೊಟ್ಟರು.

ದ್ರೌಪದೀ, ತನ್ನ ಸ್ತ್ರೀಧರ್ಮದಿಂದ ಹರಿವಿಷಯಕವಾದ ಜ್ಞಾನ ಸಂಪಾದಿಸಿ-ಕೊಂಡು, ಪತ್ಯಂತರ್ಗತ ಪರಮಾತ್ಮನ ಧ್ಯಾನ ಮಾಡತಿಹೋಳು. ಸ್ತ್ರೀಯರಿಗೆಲ್ಲ ಧರ್ಮಾಧರ್ಮಗಳ ಶಿಕ್ಷಿಸತಿಹೋಳು. ಪತಿಗಳು ಮಾಡತಿಹ ಧರ್ಮಕ್ಕೆ ಅನುಕೂಲ-ಳಾಗತಿಹೋಳು. ಸಹದೇವ ಅರಸಾದ ಧರ್ಮರಾಯನ ಖಡ್ಗ ಹಿಡಕೊಂಡು ಸೇವಿ ಮಾಡತಿಹ. ದೇಶದೇಶದ ರಾಯರು ಧರ್ಮರಾಯನ ದರ್ಶನಕ್ಕೆ ಬಂದರೆ, ಸಹದೇವ ಸಂಗಡಲೇ ಭೆಟ್ಟಿ ಮಾಡಿಸಿ, ಪಾದಕಾಣಿಕೆ ಇಡಿಸ್ತಿಹ. ಅವರಿಗೆ ಉಡುಗೊರಿ ಕೊಡಸ್ತಿಹ. ಧೃಷ್ಟದ್ಯುಮ್ನ ತನ್ನ ತಂದಿ ದ್ರುಪದರಾಯನ ಮನೀ ಬಿಟ್ಟು, ತಂಗೀ

ಮ್ಯಾಲಿನ ಸ್ನೇಹದಿಂದ, ಇಂದ್ರಪ್ರಸ್ಥದಲ್ಲಿ ಭೀಮಸೇನನ ಗೆಳೇನಾಗಿ ಸೇನಾಪತಿತನ ಮಾಡತಿಹ.

ಭೀಮಸೇನ ಯುವರಾಜ್ಯ ಆಳೋವಾಗ ಅವೈಷ್ಣವರು ಇದ್ದಿಲ್ಲ, ದೇದ್ರರು ಇದ್ದಿಲ್ಲ. ಧರ್ಮಕ್ಕೆ ಹಾನಿ ಬರತಿದ್ದಿಲ್ಲ. ಧರ್ಮ ಮಾಡಥಾನೆಂದು ಅಸಹ್ಯ ಬಟ್ಟಿದ್ದಿಲ್ಲ. ಧರ್ಮಕ್ಕೆ ದ್ರವ್ಯ ವೆಚ್ಚ ಮಾಡಿದರೆ, ಅರಮನಿ ಅಂಜಿಕಿ ಇದ್ದಿಲ್ಲ. ದಾರೂ ರೋಗಿಷ್ಟರಿದ್ದಿಲ್ಲ. ಹಿರೇರ ಮುಂದೆ ಕಿರೇರು ಸಾಯತಿದ್ದಿಲ್ಲ. ಅಧರ್ಮ ಹೆಚ್ಚಿದ್ದಿಲ್ಲ. ಹೀಂಗೆ ಭೀಮಸೇನ ಯುವರಾಜ್ಯ ಆಳಲಿಕ್ಕೆ, ರಾಯರೆಲ್ಲ ತಮ್ಮ ಪ್ರಯೋಜನಾರ್ಥವಾಗಿ ಭೀಮಸೇನನ ಬಳಿಗೆ ಬಂದು, ತಮ್ಮ ಪ್ರಯೋಜನ ಮಾಡಿಕೊಂಡು ಹೋಗೋರು. ಬ್ರಾಹ್ಮಣರೆಲ್ಲ ಧರ್ಮರಾಯನ ಸಮೀಪಕ್ಕೆ ಹೋಗಿ, ಯಜ್ಞಾದಿ ಕರ್ಮಗಳ ಮಾಡಥೀವೆಂದು ದ್ರವ್ಯ ಇಸಕೊಂಡು ಬಾಹೋರು. ಸಾಕ್ಷಾತ್ ಪರದೇವತಿ ದ್ವಿರೂಪನಾಗಿದ್ದಾನೆಂದು ಮೂಲದೇವತಿಗಳು, ಸಿದ್ಧ, ಚಾರಣ, ಗಂಧರ್ವರುಗಳಿಂದ ಯುಕ್ತರಾಗಿ, ಭೃತ್ಯರಪ್ಪಂವೆ ವಾಲ್ಗೈಸತಿಹೋರು. ಕೃತಯುಗದಕಿಂತ ಅಧಿಕ ಧರ್ಮ ನಡೀತಿಹೋದು. ವ್ಯಾಳವ್ಯಾಳಕ್ಕೆ ಮಳೀ ಬರತಿಹೋದು. ಯಥೇಷ್ಟ ಬಿತ್ತು ಬೆಳಸು ಆಗತಿಹೋದು. ಈ ಭೂಮಿ ಸ್ವಾಮಿ ಯಿಂದ ಒಪ್ಪತಿಹೋದು.

ಶಿಶುಪಾಲನ ಮಗಳು ದೇವಕೀ ಎಂಬಾಕಿ, ಶ್ಯಾಮಲಾದೇವೀ ಅವತಾರ. ಧೃಷ್ಟಕೇತುವಿನ ತಂಗಿ ಆಗಬೇಕು. ಅಂಥಾ ದೇವಕೀನ್ನ ಯುಧಿಷ್ಠಿರ ಮದುವಿ ಆಗಿ, ಸುಹೋತ್ರನೆಂಬ ಮಗನ್ನ ಪಡದನು. ಧೃಷ್ಟಕೇತು ದಾರೆಂದರೆ, ಪ್ರಹ್ಲಾದನ ತಮ್ಮ ಅನುಹ್ಲಾದನ ಅವತಾರ. ದೇವಕಿಗೆ ಅಣ್ಣನಾಗಬೇಕು. ಸುಹೋತ್ರ ದಾರು ಎಂದರೆ ಪ್ರಾಣಿಗಳ ಪಾಪಪುಣ್ಯ ಬರೆಯುವಂಥ ಚಿತ್ರಗುಪ್ತನ ಅವತಾರ. ಕಾಶೀ-ರಾಯನ ಮಗಳು ಕಾಳೀದೇವಿ, ಅಚ್ಚ ಭಾರತೀ ಅವತಾರ. ಕಾಳೀದೇವೀ ಸ್ವಯಂ-ವರಕ್ಕೆ ಸಮಸ್ತ ರಾಯರೂ ಬಂದಿರಲಾಗಿ, ಕಾಳೀದೇವಿ ಸಮಸ್ತ ರಾಯರನ್ನೂ ನಿರಾಕರಣ ಮಾಡಿ, ಕಣ್ಣು ತೆರದು ನೋಡದೆ, ಭೀಮಸೇನನ ಸಮೀಪಕ್ಕೆ ಬಂದು, ತನ್ನ ನಿಜಪತಿಯೆಂದು ಕೊರಳಿಗೆ ಮಾಲಿ ಹಾಕಿದಳು. ಇಷ್ಟಾಗಲಿಕ್ಕೆ ಸಮಸ್ತ ರಾಯರೂ ತಮ್ಮನ್ನೆಲ್ಲ ಉದಾಸೀನ ಮಾಡಿ, ಭೀಮಸೇನಗೆ ಹ್ಯಾಂಗೆ ಮಾಲಿ ಹಾಕಿದಳೆಂದು ಮುರದೆದ್ದರು.

ಅವರಷ್ಟೂ ಶಿವಸರ್ವೋತ್ತಮತ್ವ ಜ್ಞಾನವುಳ್ಳವರು, ನಾರಾಯಣನ ದ್ವೇಷಿ-ಗಳು. ಅಂಥಾವರ ವಚನ ವಾಗ್ಯುದ್ಧದಲ್ಲಿ ನಿರಾಕರಣ ಮಾಡಿ ಭೀಮಸೇನ, ಸತ್ಸಂಪ್ರದಾಯಕ, ನಾರಾಯಣ ಸರ್ವೋತ್ತಮನೆಂದು ವೇದಗಳಲ್ಲಿ ಶಾಸ್ತ್ರಗಳಲ್ಲಿ ಹೇಳತದೆ. ಬೌದ್ಧರು ಅಪ್ರಮಾಣವಾದಿಗಳು. ನಾರಾಯಣ ಸರ್ವೋತ್ತಮನೆಂದು ಹೇಳಥಾರೆ, ಚಾರ್ವಾಕಮತದವರು ಬೃಹಸ್ಪತಿ ದೊಡ್ಡವನೆಂದು ತಿಳಿದರೂ,

ನಾರಾಯಣ ಸರ್ವೋತ್ತಮನೆಂದು ತಿಳೀಥಾತೆ. ನಾರಾಯಣ ಸರ್ವೋತ್ತಮನೆಂದು ಸರ್ವ ವೇದಗಳಲ್ಲಿ, ಪುರಾಣಗಳಲ್ಲಿ ಹೇಳಿರಲಾಗಿ, ಶಿವಸರ್ವೋತ್ತಮತ್ವ ಹ್ಯಾಂಗೆ ಕೂಡೀತು! ಸರ್ವಾಗಮಗಳು ನಾರಾಯಣ ದೊಡ್ಡವನೆಂದು ಹೇಳತವೆ. ಎಲ್ಲೆ ರಾಯರುಗಳಿರಾ, ಹರಿಭಕ್ತರ ಮಹಿಮಿ, ಯುದ್ಧದಲ್ಲಿ ಬಲಾಬಲಗಳಿಂದ ತಿಳೀತದೆ. ಪ್ರತ್ಯಕ್ಷ ನೋಡಿ, ನಾನು ಹರಿಭಕ್ತ, ನೀವು ಶಿವಭಕ್ತರು. ನನ್ನ ಕೂಡ ಯುದ್ಧ ಮಾಡಲಾಪರಿ. ನಿಮ್ಮ ಶಿವ ನನ್ನಿಂದ ಏನು ಆವಸ್ತೀಬಟ್ಟು ಹೋಗ್ಯಾನೆ! ನಾನು ಹಸ್ತಿನಾವತಿಯಲ್ಲಿ ಗಂಗಾಸ್ನಾನ ಮಾಡಿ, ವಿಷ್ಣುಪೂಜಾರತನಾಗಿರಲಿಕ್ಕೆ, ಭಾಗೀರಥೀ ತೆರಿಗಳಿಂದ ಹೊಡೀತಿಹೋಳು. ಆ ವ್ಯಾಳ್ಯಾದಲ್ಲಿ ಭಾಗೀರಥೀ ತೆರಿಗಳನ್ನು ನನ್ನ ಎಡಗೈಯಿಂದ ಒತ್ತಲಿಕ್ಕೆ, ನಾರಾಯಣನ ಪೂಜಿಗೆ ವಿಘ್ನ ಮಾಡಿದೆನಲ್ಲ ಎಂದು ಬಹು ದೂರ ಓಡಿಹೋದಳು. ಆಗ ನಿಮ್ಮ ಶಿವ, ನನ್ನ ಪರೀಕ್ಷ ಮಾಡಲಿಕ್ಕೆ ಪಾರ್ವತೀನ್ನ ಆಕಳು ಮಾಡಿ, ತಾನು ಹುಲೀ ರೂಪ ಧರಿಸಿದನು. ಆಕಳನ್ನ ತಿನ್ನಲಿಕ್ಕೆ ಬರಲಾಗಿ, ಆಕಳು ಹಂಬಾರವದಿಂದ ಒದರತಾ ಒಂದು, ನನ್ನ ಬೆನ್ನು ಬಿತ್ತು. ಆಕಳನ್ನ ಬಿಸ್ನುಹಾಕಿಕೊಳ್ಳಲಿಕ್ಕೆ, ಶಿವ ನನ್ನ ಕೂಡ ಯುದ್ಧಕ್ಕೆ ನಿಂತನು. ಗದಾಪೆಟ್ಟಿನಿಂದ ಹೊಡೆಯಲು ಹುಲಿ ಸತ್ತಿತು. ಮಹಾರುದ್ರ ನಾಚಿಕೆಯುಳ್ಳವನಾಗಿ, ಇನ್ನೇನು ಲೋಕಕ್ಕೆ ಮಾರಿ ತೋರಿಸಲೆಂದು ಲಿಂಗದೊಳಕ್ಕೆ ಹೊಕ್ಕನು. ವ್ಯಾಘ್ರೇಶ್ವರನೆಂಬ ನಾಮವುಳ್ಳವನಾಗಿದ್ದಾನೆ.

" ಇದರ ಹೊರ್ತು, ಗೋಮತೀ ತೀರದಲ್ಲಿ ಮಹಾರುದ್ರ ಸಿಂಹರೂಪ ಧರಿಸಿ, ನನ್ನ ಕೂಡ ಯುದ್ಧಕ್ಕೆ ಬಂದು ಪರಾಜಿತನಾಗಿ ಲಿಂಗದೊಳಕ್ಕೆ ಹೊಕ್ಕು, ಕೇದಾರ ಕ್ಷೇತ್ರದಲ್ಲಿ ಲಿಂಗಾಕಾರನಾಗಿದ್ದಾನೆ. ಈ ಆಖ್ಯಾನ, ಕ್ಷೇತ್ರಕ್ಕೆ ಬಂದವರು ಕೇಳ್ಯಾರು. ತನ್ನ ಪ್ರತಿಷ್ಠ ಲೋಕದೊಳಗೆ ಹರಡೀತೆಂದು, ' ಈ ಕೇದಾರಕ್ಷೇತ್ರಕ್ಕೆ ಬಂದವರು ಜ್ಞಾನಭ್ರಷ್ಟರಾಗಲಿ ' ಎಂದು ಮಹಾರುದ್ರನೇ ಶಾಪ ಕೊಟ್ಟಾನೆ. ನಿಮ್ಮ ಮಹಾ-ರುದ್ರ ಬಹು ಖ್ಯಾಪಿ ಸೋತುಹೋಗಿದ್ದಾನೆ." ಈ ಪ್ರಕಾರ ಭೀಮಸೇನ ಮಾಡಿದ ರುದ್ರನ ನಿಂದ ಶಿವಭಕ್ತರು ಕೇಳಿದರು. ಶಿವಭಕ್ತರೊಳಗೆ ಜರಾಸಂಧ ಅಗ್ರೇಸರ. ಶಿವನಿಂದ ಕೇಳಲಾರದೆ ವಾಗ್ಯುದ್ಧ ಬಿಟ್ಟುಕೊಟ್ಟು, ಭೀಮಸೇನನ ಕೂಡ ಶಸ್ತ್ರಾಸ್ತ್ರ ಯುದ್ಧ ಮಾಡಿದನು. ಭೀಮಸೇನ ಜರಾಸಂಧನ್ನ ಗದೀಲಿ ಹೊಡಿಯಲಿಕ್ಕೆ, ಬಹಳ ಮೂರ್ಛ ಉಳ್ಳವನಾಗಿ ಬಿದ್ದನು. ಭೀಮಸೇನ ಜರಾಸಂಧನ ಕೈಕಾಲು ಕಟ್ಟಿ, ಭಾಗೀರಥೀಯೊಳಗೆ ಬಿಸ್ಟುಕೊಟ್ಟನು. ಭಾಗೀರಥೀ ಹಿಮವತ್ಪರ್ವತದಿಂದ ಕೆಳಗೆ ಬೀಳುವಾಗ, ಮಹಾಶಬ್ದವಾಗತಿಹೋದು. ಭಾಗೀರಥೀಶಬ್ದ ಕಿವಿಗೆ ಕೇಳ-ಬಾರದೆಂದು ಭೇರಿ ಬಾರಸ್ತಿಹ. ಹನ್ನೆರಡು ತಿಂಗಳು ಇರಳು ಹಗಲು, ಭೇರಿ ಶಬ್ದದಿಂದ ಇಹೋ ಜರಾಸಂಧನ್ನ, ಭಾಗೀರಥೀ ಒಳಗೆ ಭೀಮಸೇನ ಬಿಷ್ಟಲಿಕ್ಕೆ, ವಿಷ್ಣುಪಾದೋದಕದಲ್ಲಿ ಬಿದ್ದೆನಲ್ಲ ಎಂದು, ಜರಾಸಂಧನ ದೇಹಕ್ಕೆ ಬೆಂಕೀ ಹಚ್ಚಿ-

ಧಾಂಗಾಯಿತು. ಜರಾಸಂಧ ಭಾಗೀರಥೀಯೊಳಗೆ ಬಿದ್ದರೂ ಸರಿಯೇ, ತಮಸ್ಸಿನ ಸರಿ ದುಃಖ ಆಯಿತು. ಅವೈಷ್ಣವರು ಭಾಗೀರಥೀ ತೀರದಲ್ಲಿದ್ದರೂ, ನಾರಾಯಣನಲ್ಲಿ ಭಕ್ತಿಯಿಲ್ಲದೇ ಇದ್ದವರು, ಅಶನ ವ್ಯಸನ ಮಾಡಿಕೊಂಡವರಾಗಿ, ಭಾಗೀರಥೀ ಏನು ಫಲ ಕೊಟ್ಟಾಳು! ಅವರಿಗೆ ಕಾಶೀಕ್ಷೇತ್ರ ಕಂಟಕ ಸದೃಶ; ಸರ್ವಥಾ ಫಲ ಕೊಡದು.

ಭೀಮಸೇನದೇವರು, ಜರಾಸಂಧ ಮೊದಲಾದ ದುಷ್ಟ ರಾಯರನ್ನೆಲ್ಲ ಲೀಲಾ-ಮಾತ್ರದಲ್ಲಿ ಸೋಲಿಸಿ, ಪಾಣಿಗ್ರಹಣ ಮಾಡಿಕೊಂಡನು. ಕಾಳೀದೇವಿ ಪರಮ-ಸುಂದರಳು. ಕಾಳೀದೇವೀಸದೃಶ, ತ್ರಿಲೋಕದಲ್ಲಿ ಲಕ್ಷ್ಮೀ ವಿನಹ, ದಾರೂ ಇಲ್ಲ. ಅಂಥಾ ಕಾಳೀ ದೇವಿಯಲ್ಲಿ ಭೀಮಸೇನಗೆ ಶರ್ವತ್ರಾತನೆಂಬ ಮಗ ಹುಟ್ಟಿದನು. ಶರ್ವತ್ರಾತ ಎಂಬ ನಾಮ ಸಮುವಾಯಿತು. ಈ ಪ್ರಕಾರ ಭಾರತದ ಆದಿಪರ್ವದ ಕಥ ನಿಂದರಿಸಿ, ಇನ್ನು ಹರಿವಂಶ ಕಥ ಹೇಳಥಾರೆ.

ಸತ್ರಾಜಿತರಾಯನ್ನ, ಶತಧನ್ವ ಕೊಂದು ಶ್ಯಮಂತಕ ಕೊಂಡಿದ್ದ. ಸತ್ಯ-ಭಾಮಾ ತನ್ನ ಗಂಡಗೆ ಹೇಳಿ, ವೈರೀನ್ನ ಕೊಲ್ಲಿಸಬೇಕೆಂದು ಹಸ್ತಿನಾವತಿಗೆ ಹೋಗ ತಿದ್ದಳು. ಮಾರ್ಗದಲ್ಲಿ ಗಂಡನ ಕಂಡು, ದ್ವಾರಾವತಿಗೆ ಬರಲಿಕ್ಕೆ, ದ್ರುಪದರಾಯ ದ್ರೌಪದೀಸ್ವಯಂವರಕ್ಕೆ ಪತ್ರ ಕಳುಹಿದಕಾರಣ, ಶತಧನ್ವನ್ನ ಕೊಂದಿದ್ದಿಲ್ಲ. ದ್ರೌಪದೀ ಸ್ವಯಂವರ ಮಾಡಿ, ಕೃಷ್ಣ ದ್ವಾರಾವತಿಗೆ ಬರಲಿಕ್ಕೆ, ಶತಧನ್ವ ಬಹಳೇ ಅಂಜಿಕೆಯುಳ್ಳವನಾಗಿ, ತನ್ನ ಕೊಂದಾನಲ್ಲ ಎಂದು, ನೂರು ಯೋಜನ ನಡೆಯುವಂಥ ಹೆಣ್ಣುಕುದರಿ ಹತ್ತಿಕೊಂಡು ಓಡಲಿಕ್ಕೆ, ಕೃಷ್ಣಬಲರಾಮರು ಶತಧನ್ವನ ಬೆನ್ನಟ್ಟಿದ್ದರು. ಕುದರಿ ನಡೇಲಾರದೆ ಸತ್ತುಬಿತ್ತು. ನಡಗೀ ಕಾಲಲ್ಲೇ ಓಡಥಾನೆ ತಾವು ರಥ ಏರಿಕೊಂಡು ಬೆನ್ನಟ್ಟಬಾರದೆಂದು, ರಥ ಕೊಂಡುಬಾ ಎಂದು ಬಲ-ರಾಮಗೆ ಹೇಳಿ, ಕೃಷ್ಣ ಶತಧನ್ವನ ಬೆನ್ನಟ್ಟಿ ಮಿಥಿಲಾಪಟ್ಟಣಕ್ಕೆ ಹೋಗಿ, ಗ್ರಾಮದ ಸಮೀಪದಲ್ಲಿ ಶತಧನ್ವನ್ನ ಕೊಂದನು. ಶ್ಯಮಂತಕಮಣಿ ಎಲ್ಲಿ ಕಟ್ಯಾನೆ ಎಂದು—ತಾ ಸರ್ವಜ್ಞನಾದರೂ—ಉಟ್ಟ ವಸ್ತ್ರ ಬಿಚ್ಚಿಬಿಚ್ಚಿ ನೋಡಥಾನೆ. ಅಷ್ಟರೊಳಗೆ ಬಲರಾಮ ಬಂದ. 'ಅಣ್ಣ, ಈ ಶತಧನ್ವನ್ನ ವ್ಯರ್ಥ ಕೊಂದಿ. ಶ್ಯಮಂತಕರತ್ನ ಇಲ್ಲ' ಎಂದು 'ಹೆಂಡತೀ ಸ್ವಾರ್ಥದಿಂದ ರತ್ನ ಬಚ್ಚಿಟ್ಟುಕೊಂಡು, ಇಲ್ಲೆಂದು ಹೇಳಿಕೊಳ್ಳಥಾನೆ,' ಹೀಂಗೆ ಸ್ವಾಮೀಮಾಲೆ ದೋಷ ಆರೋಪಿಸಿ, ಬಲರಾಮ, ಮಿಥಿಲಾಪಟ್ಟಣದ ಅರಸಿನ ಸಮೀಕ್ಕೆ ಹೋದ.

ಕೃಷ್ಣಬಲರಾಮರಿಗೆ ವಿರುದ್ಧ ಬಂದ ವಾರ್ತೆ ದುರ್ಯೋಧನ ಕೇಳಿ, ಬಲ-ರಾಮನ್ನ ತನ್ನ ಕಡೀಗೆ ಮಾಡಿಕೋಬೇಕಾದರೆ ಇದೇ ವ್ಯಾಳ್ಯ ಎಂದು, ಕೌರವ ಬಲರಾಮನ ಸಮೀಪಕ್ಕೆ ಬಂದ. ಅಲ್ಲಿ ಐದು ವರುಷ ಬಲರಾಮನಿಂದ ಗದಾವಿದ್ಯ ಕಲಿತ. ಸುಭದ್ರಾನ್ನ ತನಗೆ ಮದುವಿ ಮಾಡಿಕೊಡಲಿಕ್ಕೆ ಭಾಷ ಕೊಂಡನು.

ಕೃಷ್ಣಗೆ ತನಗೆ ಮನಸ್ತಾಪ ಇಹೋದು. ತಾನು ಹಿರಿಯ ಏನು ಮಾಡಿದ್ದು ಸಕಲರಿಗೆ ಸಮ್ಮತವೆಂದು, ಅವಶ್ಯ ಸುಭದ್ರಾನ್ನ ದುರ್ಯೋಧನಗೆ ಕೊಟ್ಟೇನೆಂದು ವಚನ ಕೊಟ್ಟ. ದುರ್ಯೋಧನಗೆ ತನ್ನ ನೇಗಿಲ ಆಣಿ ಕೊಟ್ಟ. ದುರ್ಯೋಧನ ಬಲರಾಮನ ಕೈಯ ಆಪ್ಪಣಿ ಕೊಂಡು, ತನಗೆ ಸುಭದ್ರಾ ಹೆಂಡತಿ ಆಗಥಾಳೆಂದು ಹರ್ಷವುಳ್ಳವನಾಗಿ ಹಸ್ತಿನಾವತಿಗೆ ಬಂದನು. ಸುಭದ್ರಾ ಮಹಿಮಿ ಎಂಥಾದ್ದೆಂದರೆ, ಬಹಳೆ ಚಲುವಿ. ಆಕಿ ದಾರೆಂದರೆ ತ್ರಿಜಟಾ ಎಂಬೋ ರಾಕ್ಷಸಿ. ಸೀತಾದೇವೀನ್ನ ಸೇವಿ ಮಾಡಿದ್ದಳು. ಆದಕಾರಣ ಶ್ರೀಕೃಷ್ಣನ ತಂಗಿಯಾಗಿ ಹುಟ್ಟಿದಳು. ಆಕೆಯಲ್ಲಿ ಉಮಾದೇವಿ ಆವೇಶವದೆ. ಆದಕಾರಣ ಬಹಳೆ ಚೆಲುವಿ ದೇವಕೀ ಉದರದಲ್ಲಿ ಹುಟ್ಟಿ, ರೋಹಿಣಿ ಕೈಯ ಸಾಕಿಸಿಕೊಂಡು ಇಹೋಳು. ಸಂಪಿಗೀಹೂವಿನಂಥ ಬಣ್ಣ, ಮಹಾ ಸುಂದರಳು. ಸುಭದ್ರಾ ಹುಟ್ಟುವಳಿ ಹೇಳಿದರು.

ಕೃತವರ್ಮ, ಅಕ್ರೂರ, ಇವರು ಸ್ವಾಮಿ ತಮ್ಮನ್ನ ಕೊಂದಾನೆಂದು— ಶ್ಯಮಂತಕರತ್ನ ಅಕ್ರೂರನಲ್ಲಿಹೋದು—ದೇಶಾಂತರಕ್ಕೆ ಓಡಿಹೋದರು. ಸ್ವಾಮಿ ಅಕ್ರೂರನ್ನ ಕರೆಸಿದನು. ಬಲರಾಮನ ಕಪಟತನ ಹೊರಗೆ ಹಾಕಬೇಕಾಗಿ, 'ಎಲೈ ಅಕ್ರೂರ, ಶತಧನ್ವ ಶ್ಯಮಂತಕಮಣಿ ನಿನ್ನಲ್ಲಿ ಕೊಟ್ಟು ಹೋಗ್ಯಾನೆ. ರತ್ನ ಕೊಡು' ಎನ್ನಲು, ರತ್ನ ತೆಗೆದುಕೊಂಡವ್ಯಾಲೆ ತಪ್ಪು ಹೊರಿಸದಿದ್ದರೆ ಸಾಕಲ್ಲ ಎಂದು, ಸ್ವಾಮಿ ಕೇಳಲಿಕ್ಕೆ ಪಾದದ ಮ್ಯಾಲೆ ಇಟ್ಟನು. ಅರಸು ಉಗ್ರಸೇನರಾಯ, ಶ್ಯಮಂತಕರತ್ನ ಅಪೇಕ್ಷಿಸತಿಹ. ಬಲರಾಮ, ತನಗೆ ಬೇಕೆಂದು ಅಪೇಕ್ಷಿಸತಿಹ. ಜಾಂಬವತೀ, ತನ್ನ ತಂದಿ ಕೊಟ್ಟ ರತ್ನ, ತನಗೆ ಬೇಕೆಂದು ಬೇಡಿಕೊಳ್ಳತಿಹೋಳು. ಸತ್ಯಭಾಮಾ, ಸ್ವಾಮೀ ಚಿತ್ತಾಭಿಪ್ರಾಯ ಬಲ್ಲಾಕಿಯಾದರೂ, ತಮ್ಮ ತಂದಿ ಸತ್ರಾಜಿತರಾಯನ ಬದುಕು ಹೆಣ್ಣು ಮಗಳಿಗೆ ಕೊಡತಕ್ಕದ್ದು, ಎಂದು ಬೇಡಿಕೋತಿಹೋಳು. ಅವರೆಲ್ಲರೂ ಬೇಡಿಕೊಳ್ಳಲಾಗಿ, 'ಎಲೈ ಅಕ್ರೂರ, ಅವರು ಲೋಭಿಗಳು. ಕಾರಣ ನಿನ್ನ ಬಳೀಲೆ ಇರಲಿ. ಇದರಿಂದ ನಿತ್ಯ ಎಷ್ಟು ಬಂಗಾರ ಹುಟ್ಟೀತು ಅಷ್ಟೂ ಬ್ರಾಹ್ಮಣರಿಗೋಸ್ಕರ ವೆಚ್ಚ ಮಾಡು.' ಹೀಂಗಂತ ಹೇಳಿ ಸ್ವಾಮಿ, ಶ್ಯಮಂತಕಮಣಿ ಅಕ್ರೂರಗೆ ಕೊಟ್ಟನು. ಇನ್ನು ಭಾರತ ಕಥ ಹೇಳಥಾರೆ.

ಇಂದ್ರಪ್ರಸ್ಥದಲ್ಲಿ ಪಾಂಡವರು ರಾಜ್ಯ ಆಳಥಾರೆ. ತನ್ನ ಭಕ್ತರನ್ನ ನೋಡದೆ ಬಹಳ ದಿವಸವಾಯಿತು. ಪಾಂಡವರ ಮ್ಯಾಲಿನ ಸ್ನೇಹದಿಂದ ಅವರನ್ನ ನೋಡಬೇಕಾಗಿ, ಸ್ವಾಮಿ ಇಂದ್ರಪ್ರಸ್ಥಕ್ಕೆ ಬಂದನು. ಅಲ್ಲಿ ಕೃಷ್ಣಾರ್ಜುನರು ರಥ ಏರಿಕೊಂಡು ಯಮುನಾತೀರಕ್ಕೆ ಹೋಗಲಿಕ್ಕೆ, ಕಾಳಿಂದೀ, ವಿವಸ್ವಾನ್ ಎಂಬ ಸೂರ್ಯನ ಮಗಳು, ಶ್ರೀಕೃಷ್ಣ ತನಗೆ ಗಂಡನಾಗಬೇಕೆಂದು, ತನ್ನ ಅಕ್ಕ ಯಮುನಾತೀರದಲ್ಲಿ ತಪಸ್ಸು ಮಾಡತಿದ್ದಳು. ಶ್ರೀಕೃಷ್ಣ ಅರ್ಜುನಗೆ ಹೇಳಿದ. 'ಈ ಸ್ತ್ರೀ ಮನೋಬಯಕಿ ಏನದೆ ಕೇಳಿ ಬಾ' ಎನಲಿಕ್ಕೆ, ಅರ್ಜುನನ ಮುಂದೆ

ಕಾಳಿಂದೀ ತನ್ನ ಮನೋಬಯಕೆ ಹೇಳಿದಳು. ಸ್ವಾಮಿ ಭಕ್ತಪ್ರಿಯ, ಆದೇ ಕ್ಷಣದಲ್ಲಿ ಕಾಳಿಂದೀನ್ನ ರಥದಲ್ಲಿ ಕೂಡ್ರಿಸಿಕೊಂಡು ಇಂದ್ರಪ್ರಸ್ಥಕ್ಕೆ ಬಂದನು. ನೀಲಾದೇವಿ ಮದುವಿ ಪ್ರಕಾರ ಹೇಳಥಾರೆ. ನಗ್ನಜಿತರಾಯ ನೀಲಾದೇವಿಗೆ, ದೊಡ್ಡ ಬಲಿಷ್ಠ ಏಳು ಗೂಳಿ ಕಟ್ಟಿದವರಿಗೆ, ತನ್ನ ಮಗಳನ್ನ ಕೊಟ್ಟೀನೆಂದು ಸಭೆ ಮಾಡಿಹ. ಸಮಸ್ತ ರಾಯರೂ ಏಳು ಗೂಳಿ ಕಟ್ಟಲಾರದೆ ಇರಿಸಿಕೊಂಡು ಸೋತು ಸೋತು ಹೋಗಿಹೋರು. ಸ್ವಾಮಿ ಲೀಲಾಮಾತ್ರದಲ್ಲಿ ಏಳೂ ಗೂಳಿ ಕಟ್ಟಿ, ನೀಲಾದೇವಿ ಮದುವಿ ಆದನು. ಹೆಮ್ಮಣಿತನದಲ್ಲಿ, ಯಶೋದಾದೇವೀ ಅಣ್ಣ ಕುಂಭಕನ ಏಳು ಗೂಳಿ ಕಟ್ಟಿ, ಕುಂಭಕನ ಮಗಳ ಮದುವಿ ಆಗ್ಯಾನೆ. ಆಕಿ ಈಕಿ ಒಬ್ಬಳೇ. ನಗ್ನಜಿತರಾಯನ ಮಗಳೊಳಗೆ ಕುಂಭಕನ ಮಗಳು ಹೊಕ್ಕಳು. ನೀಲಾದೇವಿ ಮದುವಿ ಆದ ತರುವಾಯ ಮಿತ್ರವಿಂದಾದೇವಿ, ತನ್ನ ಸೋದರತ್ತಿ ರಾಜಾಧಿದೇವಿ ಮಗಳು, ವಿಂದಾನುವಿಂದರ ತಂಗಿ; ವಿಂದಾನುವಿಂದರು ದುರ್ಯೋಧನಗೆ ತಂಗೀನ್ನ ಕೊಡಬೇಕಂತ ನೇಮಿಸಿಹೋರು. ಸ್ವಯಂವರಕಾಲದಲ್ಲಿ ಮಿತ್ರವಿಂದಾದೇವಿ, ಶ್ರೀಕೃಷ್ಣಗೆ ವಾಲಿ ಹಾಕಿದಳು. ಸಮಸ್ತ ರಾಯರೂ ಮುರಿದೆದ್ದು ಬರಲಿಕ್ಕೆ, ಅವಂತೀ ದೇಶದ ಅರಸರುಗಳು, ವಿಂದಾನುವಿಂದರ ಸಹ ಸಮಸ್ತ ರಾಯರು ಯುದ್ಧಕ್ಕೆ ಬರಲಿಕ್ಕೆ, ಸ್ವಾಮಿ ಲೀಲಾಮಾತ್ರದಲ್ಲಿ ಸಮಸ್ತ ರಾಯರನ್ನ ಗೆದ್ದು, ಮಿತ್ರವಿಂದಾದೇವೀನ್ನ ಮದುವಿ ಮಾಡಿಕೊಂಡಿದ್ದಾನೆ. ಇನ್ನು ಕೈಕೇಯ ದೇಶದಲ್ಲಿ, ವಿಶ್ವೇದೇವತಿಗಳ ಅವತಾರ—ಶೈಬ್ಯರಾಯನ ಮಗಳು—ಅವರ ತಂಗಿ ಭದ್ರಾದೇವಿಯನ್ನು ಸ್ವಾಮಿ ಮದುವಿ ಮಾಡಿಕೊಂಡಿದ್ದಾನೆ. ಶೈಬ್ಯರಾಯ ದಾರು ಎಂದರೆ, ಋಭು ಎಂಬ ದೇವತಿ, ಕಂಬಾರರೊಳಗೆ ಹಿರಿಯ.. ಆತನೇ ಶೈಬ್ಯರಾಯನಾಗಿ ಹುಟ್ಯಾನೆ. ಶೈಬ್ಯರಾಯನ ಮಗಳು ಭದ್ರಾದೇವಿ, ಆವಳನ್ನ ಸ್ವಾಮಿ ಮದುವಿ ಆಗ್ಯಾನೆ.

ಮದ್ರದೇಶದ ಅರಸು, ಲಕ್ಷಣಾದೇವೀ ಸ್ವಯಂವರ ಮಾಡಬೇಕಾಗಿ, ಮಹಾರುದ್ರನ ಕೈಯಿಂದ, ಪಿನಾಕ ಧನುಸ್ಸು ಸಂಪಾದಿಸಿಕೊಂಡು ಬಂದಿದ್ದ. ದ್ರೌಪದೀ-ಸ್ವಯಂವರದಲ್ಲಿ, ಐದು ಬಾಣಗಳಿಂದ ನೀರೊಳಗೆ ನೆರಳು ನೋಡಿ ಲಕ್ಷ್ಯ ಎಚ್ಚಿದಂತಲ್ಲ. ಒಂದು ಮುರುಕು ಬಾಣದಿಂದ ಲಕ್ಷ್ಯ ಎಸೀಬೇಕು. ಲಕ್ಷ್ಯ ಮುಖ ಮ್ಯಾಲಕ್ಕೆ ಇಹೋದು. ಬಾಣ ಮ್ಯಾಲಕ್ಕೆ ಹೋಗಿ ಕೆಳಗೆ ಬೀಳುವಾಗ ಲಕ್ಷ್ಯ ಕೊಂಡು ಬೀಳಬೇಕು. ಇಂಥಾ ಲಕ್ಷ್ಯ ದಾರು ಎಸೀಲಾಪರು! ಜರಾಸಂಧ ಮೊದಲಾದ ರಾಯರೆಲ್ಲ, ಕರ್ಣ, ದುರ್ಯೋಧನಾದಿಗಳು ಪಿನಾಕ ಧನುಸ್ಸಿನಿಂದ ಹೊಡಿಸಿಕೊಂಡು ಅಪ್ರತಿಷ್ಠಿತರಾದರು. ಜರಾಸಂಧ, ಕರ್ಣ, ಲಕ್ಷ್ಯ ನೋಡದೆ ಬಾಣ ಇಟ್ಟರು. ಸ್ವಾಮಿ ಮಾಡೋ ಕರ್ತವ್ಯ ತಾನು ಮಾಡಬಾರದೆಂದು, ಅರ್ಜುನ ಹಿಂದಕ್ಕಾದ. ಭೀಮಸೇನ ಸರ್ವ ಸಮರ್ಥನಾದರೂ ಪಿನಾಕಧನುಸ್ಸು

ಇಚ್ಛಿಸಲಿಲ್ಲ. ಲಕ್ಷ್ಯದ ಕಡಿಗೆ ನೋಡಿದರೆ, ಸ್ವಾಮೀ ಅಪರಾಧದೊಳಗೆ ಬಂದೇನೆಂದು ಸುಮ್ಮಗಿದ್ದನು. ನೀಲಮೇಘಶ್ಯಾಮನಾದ ಶ್ರೀಕೃಷ್ಣನು ಸಭಿಯೊಳಗಿಂದ ಎದ್ದು, ಲೀಲಾಮಾತ್ರದಲ್ಲಿ ಲಕ್ಷ್ಯ ಎಚ್ಚಿ ಕೆಡಹಿದನು. ಲಕ್ಷಣಾದೇವಿ ಸ್ವಾಮೀ ಕೊರಳಿಗೆ ಮಾಲಿ ಹಾಕಿದಳು. ಸಮಸ್ತ ರಾಯರೂ ತಮಗೆ ದೊರಕೆಲಿಲ್ಲೆಂದು, ಸ್ವಾಮೀ ಕೂಡ ಯುದ್ಧಕ್ಕೆ ನಿಂತರು. ಶ್ರೀಕೃಷ್ಣದೇವರು ಲೀಲಾಮಾತ್ರದಲ್ಲಿ ಸಮಸ್ತ ರಾಯರನ್ನ ಓಡಿಸಿ, ನಾಲ್ಕೂ ದಿಕ್ಕಿಗೆ ಹರಹಿಬಿಟ್ಟನು. ಲಕ್ಷಣಾದೇವಿ ಕೂಡಿಕೊಂಡು ಸ್ವಾಮಿ ದ್ವಾರಾವತಿಗೆ ಬಂದನು. ಹೀಂಗೆ ಅಷ್ಟಮಹಾಮಹಿಷೇರನ್ನ ಮದುವಿ ಮಾಡಿಕೊಂಡನು. ಇವರೊಳಗೆ ರುಕ್ಮಿಣೀಸತ್ಯಭಾಮ್ಯೋರು ಸಾಕ್ಷಾತ್ ಲಕ್ಷ್ಮೀ ಅವತಾರ, ಲೋಕಸುಂದರಿಯರು. ಉಳವರೀ ಷಣ್ಮಹಿಷೇರೊಳಗೆ ಜಾಂಬವತೀ ಅಧಿಕಳು. ಪ್ರೀತಿ ವಿಷಯದಲ್ಲಿ ಬಲರಾಮನ ಸರೀಕಳು. ಮಿಗಿಲಾದ ಐದು ಮಂದಿ ಸ್ತ್ರೀಯರು ಕಿಂಚಿತ್ ನೀಚರು. ಲಕ್ಷ್ಮೀ ಅವೇಶ ಬಹಳ ಇದ್ದಕಾರಣ ಸ್ವಾಮೀ ಪ್ರೀತಿಗೆ ಪಾತ್ರರಾಗಿದ್ದಾರೆ. ಲಕ್ಷ್ಮೀ ಅವೇಶ ಇಲ್ಲದಾಗ ಪ್ರದ್ಯುಮ್ನನ ನೋಡಲಿಕ್ಕೆ ಇಪ್ಪತ್ತು ಗುಣ ಅಧಿಕರು. ಅನಾದಿಕಾಲದಿಂದ ಕೇಶವನ ಭೋಗದ ಹೊರ್ತು ಮತ್ತೆ ದಾರದ್ದಿಲ್ಲ. ಈ ಪ್ರಕಾರ ಯಾದವಕುಲತಿಲಕ, ಸುಂದರಿಯರಾದ ಅಷ್ಟ-ಮಹಿಷೇರನ್ನ ಮದುವಿ ಆದನು. ಅವರ ಕೂಡ ದ್ವಾರಾವತೀಲಿ ನಾನಾ ಕ್ರೀಡಿಗಳು, ನಾನಾ ಭೋಗಗಳು ಭೋಗಸ್ತಿಹ. ಹೀಂಗೆ ಯಾದವರಿಗೆ ಇಂದಿರೇಶ ಸುಖ ಕೊಡ-ತಿರಲಾಗಿ ದುರ್ಯೋಧನ, ಪಾಂಡವರು, ನಾನಾ ದೇಶದ ರಾಯರು ಸ್ವಾಮೀ ದರ್ಶನ ತೆಗೆದುಕೊಳ್ಳಬೇಕೆಂದು ರೈವತಪರ್ವತಕ್ಕೆ ಬಂದರು.

ಸ್ವಾಮಿ ಕ್ರೀಡಾದಿಗುಣವಿಶಿಷ್ಟ, ಜಗದಂತರ್ಯಾಮಿ; ಸರ್ವ ಜಗತ್ತಿನ ವ್ಯಾಪಾರ ಬಲ್ಲ. ರಾಯರೆಲ್ಲ ರೈವತಪರ್ವತಕ್ಕೆ ಬಂದಾರೆಂದು ಕೃಷ್ಣ, ರುಕ್ಮಿಣೀ ಕೂಡಿಕೊಂಡು ಬಂದನು. ಸಮಸ್ತ ರಾಯರೂ ಸಾಷ್ಟಾಂಗ ನಮಸ್ಕಾರ ಮಾಡಿದರು. ದೇವಋಷಿ ನಾರದ ಪಾರಿಜಾತಪುಷ್ಪ ಕೊಂಡು, ಸ್ವಾಮೀ ದರ್ಶನಕ್ಕೆ ಬಂದನು. ಬ್ರಹ್ಮದೇವರ ಆಜ್ಞೆಯಿಂದ ನಾರದ, ಸಮಸ್ತ ರಾಯರಿಗೆ ಹರಿ ಸರ್ವೋತ್ತಮನೆಂದು ತಿಳಿಸಬೇಕಾಗಿ, ನಾರದ ಶ್ರೀಕೃಷ್ಣಗೆ ಅಂದ. **ತ್ವದನ್ಯಃ ಸ್ತ್ವಂ ಮಹಾಶ್ಚರ್ಯಃ. ದಕ್ಷಿಣಾಭಿಃ ಸಾಕಂ.** ಹೀಂಗೆ ಸ್ವಾಮಿ ಮಾತನಾಡಿದ್ದು ಕೇಳಿ, ಈ ಅಭಿಪ್ರಾಯ ತಮಗೆ ತಿಳಿಯದ ಕಾರಣ, ರಾಯರೆಲ್ಲ ನಾರದರನ್ನು ಕೇಳಲಾಗಿ, ಹೇಳಥಾನೆ. "ರಾಯರುಗಳಿರ್ಯಾ ಕೇಳಿ. ನಾನು ಭಾಗೀರಥೀಸ್ನಾನಕ್ಕೆ ಹೋಗಿರಲಾಗಿ ಅಲ್ಲಿ ಕೂರ್ಮನ ಕಂಡೆ. ತ್ವದನ್ಯಃ ಸ್ತ್ವಂ ಮಹದಾಶ್ಚರ್ಯಃ ಎಂದು ಕೂರ್ಮಗೆ ಅನಲಿಕ್ಕೆ 'ಎಲೈ ನಾರದ ನನ್ನ ನೋಡಲಿಕ್ಕೆ, ಭಾಗೀರಥೀ ದೊಡ್ಡಾಕಿ' ಎನ್ನಲು, ಭಾಗೀರಥೀ 'ನನ್ನ ನೋಡಲಿಕ್ಕೆ, ಜಲೇಶ ದೊಡ್ಡಾತ, ನನ್ನ ಗಂಡ' ಎಂದಳು.

ಸಮುದ್ರನ್ನ ಕೇಳಲಿಕ್ಕೆ, ' ಭೂದೇವಿ ದೊಡ್ಡಾಕಿ ' ಅಂದನು. ಭೂದೇವಿ ನೀಚಳು, ವರುಣ ದೊಡ್ಡಾತ, ಭೂಶಬ್ದವಾಚ್ಯ ಪಾರ್ವತೀ ಎಂತ ತಿಳೀಬೇಕು. ವರುಣ ಅಂಥಾನೆ, ' ನಾ ಮೊದಲು ಮಾಡಿಕೊಂಡು ದೇವೇಂದ್ರ ಮೊದಲಾದ ದೇವತಿಗಳನ್ನ ಧರಿಸಿದ್ದಾಕಿ.' ಭೂಮಿ ಅಂಥಾಳೆ ' ನನ್ನ ನೋಡಲಿಕ್ಕೆ, ಪರ್ವತಗಳು ದೊಡ್ಡವು.' ಪರ್ವತಶಬ್ದದಿಂದ ಪರಮಾತ್ಮನ ಸಮೀಚೀನ ಜ್ಞಾನವುಳ್ಳ ಗರುಡ, ಶೇಷ ರುದ್ರರ ತಗೋಬೇಕು. ಹೀಂಗೆ ಕ್ರಮದಿಂದ ಬ್ರಹ್ಮದೇವರನ್ನ ಕೇಳಲಿಕ್ಕೆ, ' ನನಗಿಂತ ವೇದ ದೊಡ್ಡದು ' ಅಂದನು. ವೇದ ಜಡ, ಹ್ಯಾಂಗೆ ಅಧಿಕತ್ವ ಕೂಡೀತು ಎಂದರೆ, ವೇದಾಭಿಮಾನಿ ಲಕ್ಷ್ಮೀ ಕೊಳ್ಳಬೇಕು. ಲಕ್ಷ್ಮೀನ್ನ ನೀ ಧನ್ಯಳೆನ್ನಲಿಕ್ಕೆ ' ನನ್ನ ನೋಡಲಿಕ್ಕೆ ಯಜ್ಞಾಭಿಮಾನಿ ದೊಡ್ಡಾಕಿ ' ಎಂದಳು. ಯಜ್ಞಾಭಿಮಾನಿ, ದಕ್ಷಿಣಾಭಿಮಾನಿ ದೊಡ್ಡವಳೆಂದಳು. ಆದಕಾರಣ ಸ್ವಾಮಿ ' ದಕ್ಷಿಣಾಭಿಃ ಸಾಕಂ ' ಎಂದ. ಸ್ವಾಮಿ ಸಮಾಧಿಕಶೂನ್ಯ, ಲಕ್ಷ್ಮೀ ಆಲಂಗಿಸಿಕೊಂಡು ಇರಥಾನೆ. ಆ ವ್ಯಾಳ್ಯಾದಲ್ಲಿ ಸ್ವಾಮೀ ಎಡಭಾಗದಲ್ಲಿ ಲಕ್ಷ್ಮೀ ಹೊಕ್ಕಿರಥಾಳೆ. ಅದರಿಂದ ಅರ್ಧ-ನಾರಾಯಣನೆಂದು ಕರಸಿಕೊಳ್ಳಥಾನೆ. ಇಷ್ಟಾದರೂ ಲಕ್ಷ್ಮೀ, ನಾರಾಯಣಗೆ ಸರಿಯಲ್ಲ. ಸ್ವಾಮೀಶಕ್ತಿ ಅನಂತ ಭಾಗ ಮಾಡಲಿಕ್ಕೆ, ಒಂದು ಭಾಗಕ್ಕೆ ಲಕ್ಷ್ಮೀ ಸರಿಬಾರಳು." ಹೀಂಗೆ ಕೂರ್ಮಪ್ರಶ್ನ ಹೇಳಿ, ' ದಕ್ಷಿಣಾಭಿಃ ಸಾಕಂ ' ಎಂದು ಸ್ವಾಮಿ ಎಂಥಾನೆ. ದಕ್ಷಿಣಾಭಿಮಾನಿ ದೇವತಿ, ರುಕ್ಮಿಣೀ ಆಗಿ ಅವತರಿಸಿದ್ದಾಳೆ. ಸಾಕ್ಷಾತ್ ಕೇಶವ, ಶ್ರೀಕೃಷ್ಣನಾಗಿ ಅವತರಿಸಿದ್ದಾನೆ ಈ ಲಕ್ಷ್ಮೀನಾರಾಯಣರು, ಜಗತ್ತಿಗೆ ಸುಖೋದ್ರೇಕ ಮಾಡಿಕೊಡಬೇಕಾಗಿ ಅವತರಿಸಿದ್ದಾರೆ.

ನಾರದ ಹೀಂಗೆ ಮಾತನಾಡಲಿಕ್ಕೆ, ಇಂಥಾ ಕೃಷ್ಣನ ಬಲಪರೀಕ್ಷ ನೋಡ, ಬೇಕೆಂದು ಕುಂತೀದೇವಿ ಸೋದರಳಿಯನಾದ ಶ್ರೀಕೃಷ್ಣಗೆ ಅಂದಳು. ' ಹೇ ಕೃಷ್ಣ, ನಿನ್ನ ಬಲ ಬಹಳ ಕೇಳಥೀನಿ. ಎಲೈ ಕಂಸಮರ್ದನ, ನಿನ್ನ ಬಲ ನೋಡ-ಬೇಕಂಥೀನಿ.' ಹೀಂಗಂತ ಕುಂತೀ ಕೇಳಲಿಕ್ಕೆ, ಸ್ವಾಮಿ ತನ್ನ ಶಕ್ತಿ ತೋರಿಸಿದ್ದಾನೆ. ಪಾಂಡವರು ಸ್ವಾಮೀ ಕೂಡ ಯುದ್ಧ ಮಾಡಿ ಸೋತಮ್ಯಾಲೆ, ದುರ್ಯೋಧ-ನಾದಿಗಳು ನೂರು ಮಂದಿ ಒಕ್ಕಟ್ಟಾಗಿ ಯುದ್ಧಕ್ಕೆ ಬರಲಾಗಿ, ಲೀಲಾಮಾತ್ರದಲ್ಲಿ ಅವರಾಯುಧಗಳ ಪುಡಿಪುಡಿ ಮಾಡಲಾಗಿ, ಸೋತುಹೋದರು. ಭೀಷ್ಮ, ದ್ರೋಣ, ಕೃಪಾಚಾರ್ಯ, ಅಶ್ವತ್ಥಾಮ ಸಮಸ್ತರೂ ಸ್ವಾಮೀಕೂಡ ಯುದ್ಧ ಮಾಡಲಾಗಿ, ಲೀಲಾಮಾತ್ರದಲ್ಲಿ ಸಮಸ್ತರನ್ನೂ ಸೋಲಿಸಿದ. ಭೀಮಸೇನ, ಅವಿಚ್ಛಿನ್ನಭಕ್ತ, ಸ್ವಾಮೀಕೂಡ ಯುದ್ಧ ಮಾಡಿದನೇ ಎಂದರೆ, ಕೃಷ್ಣನ ಎದುರಿಗೆ ಭೀಮಸೇನ ಯುದ್ಧ ಮಾಡುವಾತನಲ್ಲ. ಗದಾವಿದ್ಯ ಬಲರಾಮನಿಂದ ಕಲಿತು, ಸ್ವಾಮೀ ಎದುರಿಗೆ ಗದಾ ಹಿಡಕೊಂಡು ನಿಂತೆನೆಂದಿದ್ದ. ಸ್ವಾಮಿ ಭೀಮಸೇನಂಗೆ ' ಗದಾ ಹಿಡಕೊಂಡು ಯುದ್ಧಕ್ಕೆ ಬಾ ' ಎಂದಲ್ಲಿ ' ಸ್ವಾಮಿ ನಿನ್ನ ಕೂಡ ಯುದ್ಧಕ್ಕೆ ಬರಲಾರೆ ' ಎಂತ

ಭೀಮಸೇನ ಮಾತನಾಡಲಿಕ್ಕೆ, 'ನನ್ನ ಆಜ್ಞೆವದೆ ಯುದ್ಧ ಮಾಡು' ಎನಲಿಕ್ಕೆ, ಸ್ವಾಮೀ ಆಜ್ಞೆ ಮೀರಲಿಕ್ಕೆ ವಶವಲ್ಲದಕಾರಣ, ಶ್ರೀಶಗೆ ನಮಸ್ಕಾರ ಮಾಡಿ, ಎರಡು ಗಾಲಿ ಹಿಡದು ರಥ ಒತ್ತಲಿಕ್ಕೆ, ಅನಂತಬಲವುಳ್ಳಂಥ ಸ್ವಾಮಿ ಭೀಮಸೇನನ ಸಹ ರಥ ಎಳಕೊಂಡು ಹೋದನು. ಹೀಂಗೆ ಸ್ವಾಮಿ ಅನೇಕ ಕ್ರೀಡಿಗಳು ಮಾಡ್ಯಾನೆ. ಅವ್ಯಾಹತಷಡ್ಗುಣೈಶ್ವರ್ಯಸಂಪನ್ನ, ಕ್ರೀಡಾದಿಗುಣವಿಶಿಷ್ಟ, ಸರ್ವೋತ್ತಮ-ದೇವತಿ, ಪೂರ್ಣಕಾಮ, ಆನಂದಸಮುದ್ರ, ಚಿದಾನಂದಸ್ವರೂಪ ಇಂಥಾ ಸ್ವಾಮಿ ತನ್ನ ಅವತಾರ, ಭೂಭಾರ ಇಳಹಲಿಕ್ಕೆ ವ್ಯಕ್ತ ಮಾಡಿದ್ದಾನೆ. ಈತ ಸರ್ವೇಶ್ವರ. ನೆಂದು ಸಮಸ್ತ ರಾಯರೂ ನಮಸ್ಕಾರ ಮಾಡಿದರು. ಕುಂತೀದೇವಿ ಸ್ವಾಮೀನ್ನ ಬೇಡಿಕೊಂಡಳು. 'ಹೇ ಕೃಷ್ಣ, ನೀನು ಸರ್ವೋತ್ತಮದೇವತಿ. ನಿನ್ನ ಬಲ ಪರೀಕ್ಷ ಮಾಡಿದ್ದು, ನನ್ನ ಅಪರಾಧ. ಕ್ಷಮಿಸಬೇಕು' ಎಂದು ಬೇಡಿಕೊಂಡಳು. ನಾರದನು ರುಕ್ಮಿಣೀಗೆ ಪಾರಿಜಾತಪುಷ್ಪ ಕೊಟ್ಟು, ಕೃಷ್ಣ-ರುಕ್ಮಿಣಿಯರ ಸ್ತೋತ್ರ ಮಾಡಿ, ಸರ್ವೋತ್ತಮದೇವತಿ ಕೃಷ್ಣ ಎಂದು ಲೋಕಕ್ಕೆಲ್ಲ ತಿಳಿಸಿ, ತಾನು ಸತ್ಯ-ಲೋಕಕ್ಕೆ ಹೋದನು.

ರುಕ್ಮಿಣೀ-ಸತ್ಯಭಾಮೆಯರಿಂಗೆ ಭೇದವಿಲ್ಲ. ಆದರೂ ಲೋಕರೀತಿಯಿಂದ, ಮುನಿದಳೆಂಬೋಹಾಂಗೆ ಸ್ವಭಾವ ತೋರಿಸಿದ್ದಾಳೆ. 'ರುಕ್ಮಿಣೀ, ತನ್ನ ಹಿರೇ ಹೆಂಡತಿ ಎಂದು, ರಾಯರ ಸಭಾಕ್ಕೆ ಕರಕೊಂಡುಹೋಗಿ ಬಹುಮಾನ ಮಾಡಿಸಿದ. ನಾರದ ಪಾರಿಜಾತಪುಷ್ಪ ತಂದುಕೊಟ್ಟ. ರಾಜರ ಮಧ್ಯದಲ್ಲಿ ಸ್ತೋತ್ರ ಮಾಡಿಸಿ-ಕೊಂಡಳು' ಎಂತ, ಈ ವಾರ್ತಿ ಸತ್ಯಭಾಮಾ ಕೇಳಿ ಕ್ರೋಧದಿಂದ, ಮನಿಯೊಳಗೆ ಮುನಿದು ಮಲಗಿದಳು. ಸ್ವಾಮಿ ಸ್ಮರಣನಾದರೂ, ಕಾಮುಕಪುರುಷನಂತೆ ಅಣಕಮಾಡಿ ತೋರಿಸ್ಯಾನೆ. 'ಎಲೌ ಸತ್ಯಭಾಮಾ, ನಿನಗೆ ದೇವೇಂದ್ರಸಭಾದಲ್ಲಿ ಪೂಜಿ ಮಾಡಿಸಿ, ಪಾರಿಜಾತ ಒಂದು ಪುಷ್ಪಕ್ಕೆ ಒಂದು ವೃಕ್ಷ, ನಿನ್ನ ಅಂಗಳ-ದೊಳಗೆ ಸ್ಥಾಪಿಸಥೀನಿ. ನನ್ನವ್ಯಾಲೆ ಮುನೀಬ್ಯಾಡ' ಎಂದು ಸತ್ಯಭಾಮಾಗೆ ಸಮಾಧಾನ ಮಾಡಿದ. ಸ್ವಾಮಿ ಸತ್ಯಸಂಕಲ್ಪ, ವಚನದಲ್ಲಿ ಆಡಿದ್ದು ಸತ್ಯ ಮಾಡಿ ತೋರಿಸ್ಯಾನೆ. ಅಷ್ಟರೊಳಗೆ ದೇವೇಂದ್ರ ದ್ವಾರಾವತಿಗೆ ಬಂದು, ನರಕಾಸುರನ ಅಗ್ಗಳಿಕೆ ಬಹಳೀ ಹೇಳಿದ. 'ನರಕಾಸುರ ಬಹಳ ಪ್ರಬಲನಾಗ್ಯಾನೆ. ನಮ್ಮ ತಾಯಿ ಅದಿತೀ ಕುಂಡಲಗಳ ಒಯ್ದಾನೆ. ಬಹಳ ಬಾಧಿ ಕೊಡಥಾನೆ' ಎಂದನು. ದೇವೇಂದ್ರನ ಪ್ರೇರಣೆಯಿಂದ ಋಷಿಗಳು ಬದರಿಕಾಶ್ರಮದಿಂದ ಬಂದರು. ಸ್ವಾಮಿಗೆ ತಂತ್ರೋಕ್ತ ಪೂಜಿ ಮಾಡಿ, ಬಹಳ ಸ್ತೋತ್ರಗೈದರು. ನರಕಾಸುರನ ಅಗ್ಗಳಿಕೆ ಬಹಳೀ ಹೇಳಿದರು. 'ನಮ್ಮ ತಪಸ್ಸಿಗೆ ನರಕಾಸುರ ಬಹಳ ವಿಘ್ನ ಮಾಡಥಾನೆ. ಶೀಘ್ರ ಇವನ್ನ ಕೊಲ್ಲಬೇಕು' ಎಂದು ಹೇಳಿಕೊಂಡರು. ಸ್ವಾಮಿಗೆ ವಾಹನ ಬೇಕಲ್ಲ, ಗರುಡನ ಸ್ಮರಿಸಲಿಕ್ಕೆ ಬಂದ. ಪಕ್ಷಿರಾಜನ ವ್ಯಾಲೆ ಸತ್ಯಭಾಮಾ ಸಹ,

ಕೃಷ್ಣ ಕುಳಿತುಕೊಂಡು ನಡೆದನು. ಸತ್ಯಭಾಮಾ ಪುರುಷನ ವಶ ಮಾಡಿಕೋ-ಬೇಕಾಗಿ, ಮಾಘ ಶುದ್ಧ ಏಕಾದಶೀ ದಿವಸ ಮೃಣ್ಮಯಪಾತ್ರೀಲಿ ಕೋಟಿ ಛಿಲ್ಲೀ ಮಾಡಿ, ಮಹಾಭಿಷೇಕ ಜಲಧಾರಿಯಿಂದ ಮಾಡಿ (ಸ್ನಾನ ಮಾಡಿ), ಗಂಡನ್ನ ವಶ ಮಾಡಿಕೊಂಡಾಳೆ. ಆಂಥಾ ಸತ್ಯಭಾಮಾ ಸಮೇತ, ಗರುಡವಾಹನನಾಗಿ, ಪ್ರಾಗ್-ಜ್ಯೋತಿಷಪಟ್ಟಣಕ್ಕೆ ಬರಲಿಕ್ಕೆ, ದೇವೇಂದ್ರ ದೇವರಿಗೆ ಬೇಡಿಕೊಂಡನು. 'ಹೇ ಸ್ವಾಮಿ, ನರಕಾಸುರನ್ನ ಶೀಘ್ರವಾಗಿ ಕೊಂದು, ನಮ್ಮ ತಾಯೀ ಕುಂಡಲ ಗಳನ್ನು ಕೊಡಿಸಬೇಕು' ಎಂದು ಸ್ತೋತ್ರ ಮಾಡತ, ಬಹು ದೂರ ಕಳಸತಾ ಹೋದನು. 'ನಿಮ್ಮ ತಾಯೀ ನಮ್ಮ ತಾಯಿ. ಶೀಘ್ರ ನರಕಾಸುರನ್ನ ಕೊಂದು ಕುಂಡಲ ಕೊಟ್ಟೀನು' ಎಂದು ಹೇಳಿ, ಬಹುಪ್ರಕಾರ ದೇವೇಂದ್ರಗೆ ಸಮಾಧಾನ ಮಾಡಿ, ನರಕಾಸುರನ ಪಟ್ಟಣಕ್ಕೆ ಬರಲಾಗಿ, ನರಕಾಸುರ ಬ್ರಹ್ಮದೇವರ ವರ-ಬಲದಿಂದ ಬಹಳ ಪ್ರಬಲನಾಗಿ, ಮೂರೂ ಲೋಕಕ್ಕೆ ಧಾಳಿ ಹಾಕತಿಹ.

ವರಾಹರೂಪಿ ನಾರಾಯಣನಿಂದ, ಭೂಮಿದೇವಿಯಲ್ಲಿ ನರಕಾಸುರ ಹುಟ್ಯಾನೆ. ಶ್ರೀ ಭೂ ದುರ್ಗಾರೊಳಗೆ, ಭೂದೇವಿ ಆವೇಶ ಭೂಮಿದೇವಿಯಲ್ಲಿಹೋದು ಆದ-ಕಾರಣ ಭೂಮಿದೇವಿ ನಾರಾಯಣನ ಅಂಗಸಂಗ ಮಾಡಿ, ನರಕಾಸುರನ್ನ ಹಡದಾಳೆ. ಜಗತ್ತಿಗೆ ಕಂಟಕನಾಗಿಹ. ಪ್ರಾಗ್ಜ್ಯೋತಿಷಪಟ್ಟಣಕ್ಕೆ ಗಿರಿದುರ್ಗ, ಜಲದುರ್ಗ, ಪಾಶದುರ್ಗ, ಕತ್ತೀಧಾರಿಯಪ್ಪಂದೆ ಆರುಸಾವಿರ ಪಾಶದುರ್ಗಗಳವೆ. ಸ್ವಾಮಿ ತನ್ನ ಕೌಮೋದಕಿಯೆಂಬ ಗದಾದಿಂದ ಗಿರಿದುರ್ಗ, ವಾಯುವ್ಯಾಸ್ತ್ರದಿಂದ ಜಲದುರ್ಗ, ಚಕ್ರದಿಂದ ಪಾಶದುರ್ಗ ಛೇದಿಸಿಬಿಟ್ಟನು. ನರಕಾಸುರನ ಪ್ರಧಾನೇರಿಗೆ ಸಹ ಬ್ರಹ್ಮ-ದೇವರ ವರವಿಹೋದು. ಮೂರು ದುರ್ಗ ಛೇದಿಸಲಿಕ್ಕೆ ಪ್ರಧಾನೇರು ಪೀಠನೆಂಬುವ, ಶುಂಭ, ಹಯಗ್ರೀವ, ಪಂಚಜನ, ಮುರನೆಂಬುವ, ಹೀಂಗೆ ಐದು ಮುಂದಿ ಪ್ರಧಾನೇರು ಬಂದು ಬಾಣ ಮಳಿಗರೆದರು. ಶ್ರೀಕೃಷ್ಣ ಈ ಐದು ಮುಂದಿ ಪ್ರಧಾನೇರನ್ನೂ ಲೀಲಾಮಾತ್ರದಲ್ಲಿ ಕೊಂದುಬಿಟ್ಟನು. ಇಷ್ಟಾಗಲಿಕ್ಕೆ, ಒಬ್ಬೊಬ್ಬ ಪ್ರಧಾನೇರಿಗೆ ಏಳು ಮುಂದಿ ಮಕ್ಕಳು, ಹೀಂಗೆ ಮೂವತ್ತೈದು ಮುಂದಿ ಪ್ರಬಲರು ಶಸ್ತ್ರಾಸ್ತ್ರ ಮಳಿಗರೆದರು. ಸ್ವಾಮಿ ಲೀಲಾಮಾತ್ರದಲ್ಲಿ ಮೂವತ್ತೈದು ಮುಂದಿ ಪ್ರಬಲರನ್ನೂ ಕ್ಷಣಮಾತ್ರದಲ್ಲಿ ಕೊಂದುಬಿಟ್ಟನು.

ಈ ಪ್ರಕಾರ ಸರ್ವ ಸಂಹಾರವಾದಮ್ಯಾಲೆ, ನರಕಾಸುರ ಮೂವತ್ತು ಅಕ್ಷೋಹಿಣಿ ಒಲ ಕೊಂಡು ಸ್ವಾಮೀ ಎದುರಿಗೆ ಬರಲಾಗಿ, ಗರುಡ ತನ್ನ ಪಖ-ಗಳಿಂದ ನಾಲ್ಕರಲ್ಲಿ ಒಂದು ಪಾಲು, ಏಳು ಅಕ್ಷೋಹಿಣಿ ಕೊಂದು ಬಿಟ್ಟನು. ಉಳವರೀ ಮೂರು ಪಾಲು ಸೇನ ಶ್ರೀಕೃಷ್ಣ ಲೀಲಾಮಾತ್ರದಲ್ಲಿ ಕೊಂದನು. ಇಷ್ಟಾಗಲಿಕ್ಕೆ, ನರಕಾಸುರ ಕೋಪಾವಿಷ್ಟನಾಗಿ, ಶತಘ್ನಿ ಎಂಬ ಆಯುಧ—ಬ್ರಹ್ಮದೇವರು ಕೊಟ್ಟದ್ದು (ಗದಾ)—ಸ್ವಾಮೀಮ್ಯಾಲೆ ಈಡ್ಯಾಡಲಿಕ್ಕೆ, ಅದರಿಂದ

ಸ್ವಾಮಿ ಮೂರ್ಛಾಗತನೋಪಾದಿ ತೋರಿಸ್ಯಾನೆ. ಸ್ವಾಮಿ ಸಂಪೂರ್ಣ ಶಕ್ತಿ ಉಳ್ಳಾತ. ಶತಘ್ನಿ ಎಂಬ ಆಯುಧ ನುಂಗಿದ ಕಾರಣ ಮೂರ್ಛಾಸ್ವಭಾವ ತೋರಿಸ್ಯಾನೆ ಎಂದಲ್ಲಿ, ಬ್ರಹ್ಮದೇವರ ವರವು ಬಹಳೇ ಮುರಿದಾನೆ, ದೈತ್ಯ ದಾನವರಿಗೆ ವಿಶ್ವಾಸ ಸಾಲದೆ ಹೋದೀತು, ಆದ್ದರಿಂದ ಮೂರ್ಛಾಸ್ವಭಾವ ತೋರಿಸಿ, ತನ್ನ ಹೆಂಡತೀ ತೊಡೀಮ್ಯಾಲೆ ಮಲಗಿಕೊಳ್ಳಲಿಕ್ಕೆ, ನರಕಾಸುರ ಮೇರೆದಪ್ಪಿ ಬರಥಾನೆ. ಸ್ವಾಮಿ ಶ್ರಾಂತನಾಗಿ, ಬ್ರಹ್ಮದೇವರ ವರವು ಒಂದಾದರೂ ಖರೇ ಮಾಡಬೇಕಾಗಿ ಮಲಗಿಕೊಂಡಿರಲಿಕ್ಕೆ, ನರಕಾಸುರ ಮೇರೆದಪ್ಪಿ ಬರೋದ ಕಂಡು, ಸತ್ಯಭಾವಾ, ಸ್ವಾಮೀ ಶಾರ್ಙ್ಗಧನುಸ್ಸು ಕೊಂಡು ನರಕಾಸುರನ ಧನುರ್ಬಾಣಗಳ ಛೇದಿಸಿಬಿಟ್ಟಳು. ರಥ ಮುರದುಬಿಟ್ಟಳು. ಇಷ್ಟಾಗಲಿಕ್ಕೆ ಸ್ವಾಮಿ, ಹೆಂಡತೀ ಸಾಮರ್ಥಿ ಕಂಡು 'ಭಲಾ! ನೀ ಶೂರಳಹುದು! ನರಕಾಸುರ ಬಹಳ ಪ್ರಬಲ. ಅವನ ಕೂಡ ಯುದ್ಧ ಮಾಡಿದಿ, ಭಲಾ! ಭಲಾ!' ಎಂದು ಹೆಂಡತೀನ್ನ ಅಪ್ಪಿಕೊಂಡನು. ನರಕಾಸುರ ಮತ್ತೆ ಒಂದು ರಥ ಏರಿಕೊಂಡು ಬಹಳ ತೀಕ್ಷ್ಣನಾಗಿ ಬರಲಿಕ್ಕೆ, ಸ್ವಾಮಿ ನರಕಾಸುರನ ಶಿರಚ್ಛೇದನ ಮಾಡಿದನು. ಅವನ ಐದು ಮಂದಿ ಪ್ರಧಾನೇರು, ಅವರ ಮೂವತ್ತೈದು ಮಂದಿ ಮಕ್ಕಳು ಕಾಲಾಂತರದಲ್ಲಿ ತನುಸ್ಸಿಗೆ ಹೋಗಿ ಬಿದ್ದಾರು. ನರಕಾಸುರನಲ್ಲಿ ವಾಯುದೇವರ ಆವೇಶ ಶ.ಭಜೀವನವಿತ್ತು. ಅವನು ಕೃಷ್ಣನನ್ನು ಹೊಂದಿದನು. ಸ್ವಾಮಿ, ವೈರಿ ನರಕಾಸುರನ ಕೊಂದು ಜಯಶೀಲನಾಗಿ, ಪ್ರಾಗ್ಜ್ಯೋತಿಷಪಟ್ಟಣದೊಳಗೆ ಪ್ರವೇಶ ಮಾಡಿದನು.

ಭೂಮಿದೇವಿ, ತನ್ನ ಮೊಮ್ಮಗ ಭಗದತ್ತನ ಕೂಡಿಕೊಂಡು, ಅದಿತೀ ಕುಂಡಲಗಳ ಕೊಂಡುಬಂದು, ಸ್ವಾಮೀ ಪಾದಮೂಲದಲ್ಲಿ ಸಮರ್ಪಿಸಿ ನಮಸ್ಕಾರ ಮಾಡಿದಳು. ಸ್ವಾಮಿ ಕಿರಾತದೇಶ ಪ್ರಾಗ್ಜ್ಯೋತಿಷಪಟ್ಟಣದಲ್ಲಿ, ಭಗದತ್ತಗೆ ಪಟ್ಟಾಭಿಷೇಕ ಮಾಡಿ, ಸುಪ್ರತೀಕ ಎಂಬೋ ಆನಿ ಅವನಿಗೆ ಕೊಟ್ಟನು. ಮಿಗಿಲಾದ ಆನಿಗಳು ಚತುರ್ದಂತಯುಕ್ತವಾದಂಥಾವು, ಆರುಸಾವಿರ ಗಜಗಳು ಕ್ಷೀರಸಮುದ್ರದಲ್ಲಿ ಹುಟ್ಟಿದಂಥಾವು, ದ್ವಾರಾವತಿಗೆ ಕಳುಹಿದನು. ನರಕಾಸುರ ಬದುಕಿರಲಿಕ್ಕೆ, ದೇವ-ಕನ್ಯಾ ರಾಜಕನ್ಯಾಗಳನ್ನು ಕೊಂಡುಬಂದಿದ್ದ. ಹೇಮರಾಶಿ, ರತ್ನರಾಶಿ ಎರಡು-ನೂರು ಯೋಜನಪರಿಯಂತ ರಾಶಿ ಬಿದ್ದಿಹೋವು. ಅವನ್ನೆಲ್ಲ—ನರಕಾಸುರ ನೈರುತ್ಯ ಕೋಣಾಧಿಪತಿ ರಾಕ್ಷಸರ ಗೆದ್ದು ಕೈಸೆರಿ ಹಾಕಿದ್ದ—ಸ್ವಾಮಿ, ಅವರ ವ್ಯಾಳೆ ಹೊರೆಗಟ್ಟಿ ಹೊರಿಸಿ, ದ್ವಾರಾವತಿಗೆ ಕಳುಹಿಸಿಕೊಟ್ಟನು. ನರಕಾಸುರ ಸಮಸ್ತ ರಾಯರನ್ನೂ ಗೆದ್ದು, ಸುಂದರ ಕನ್ನಿಕೇರು, ಹದಿನಾರುಸಾವಿರದ ಒಂದು ನೂರು ಮಂದಿ ದೇವಕನ್ನಿಕೇರು, ಗಂಧರ್ವ ಕನ್ನಿಕೇರು, ರಾಜಕನ್ನಿಕೇರು ಹೀಂಗೆ ಕೈಸೆರಿ ತೆಂದು ರಾಣೀವಾಸದಲ್ಲಿಟ್ಟಿದ್ದ. ಅವರಿಗೆ ಇನ್ನೂ ರಜೋದರ್ಶನವಿದ್ದಿಲ್ಲ. ಹದಿನಾರುಸಾವಿರನೂರುಮಂದಿಯೊಳಗೆ ತ್ವಷ್ಟ್ರ ಎಂಬ ಆದಿತ್ಯನ ಮಗಳು, ಕಶೇರು

ಎಂಬಾಕೆ ಹಿರೇಯಳು. ಇವರೆಲ್ಲರೂ ಮೊದಲಿಗೆ ಅಗ್ನಿಪುತ್ರರು. ದೇವರ ಅಂಗಸಂಗ ಬಯಸಿ, ಮುಖ್ಯಪ್ರಾಣದೇವರ ಕುರಿತು ಬಹುಕಾಲ ತಪಸ್ಸು ಮಾಡಿದ್ದರು. ಹದಿನಾರುಸಾವಿರದಒಂದುನೂರುಮಂದಿ ಅಗ್ನಿಪುತ್ರರಷ್ಟರೂ ಹೆಂಗಸರಾದರು. ಗಂಡಸರು ಹೆಂಗಸರಾಗಿ ಹಾವಭಾವವಿಲಾಸ ಹ್ಯಾಂಗೆ ತೋರಿಸಲಿಕ್ಕೆ ಬರತದೆ! ರೂಪದಿಂದ ಚೆಲುವೇರು, ಹದಿನಾರುಸಾವಿರಒಂದುನೂರುಮಂದಿ ಬದರಿಕಾಶ್ರಮಕ್ಕೆ ಬಂದು, ನಾರಾಯಣನ ಕುರಿತು ತಪಸ್ಸು ಮಾಡಿ, ನರನಾರಾಯಣನ ಸೇವಿಸಿ, ಎಲ್ಲರೂ ಅಪ್ಸರಸ್ತ್ರೀಯರಾಗಿ, ಹಾವಭಾವವಿಲಾಸಗಳ ಕಲಿತರು. ಆ ಜನ ಹೋದ ಮ್ಯಾಲೆ, ದೇಶದೇಶದ ರಾಯರ ಮಕ್ಕಳಾಗಿ ಹುಟ್ಟಿದರು. ಕೈವಲ್ಯದೇವತೆಗಳು ಗಂಧರ್ವರ ಮಕ್ಕಳಾಗಿ ಹುಟ್ಟಿದರು. ನರಕಾಸುರ ಬಹಳೇ ಪ್ರಬಲ. ದೇಶದೇಶಕ್ಕೆ ಧಾಳಿ ಹಾಕಿ, ಸುಂದರ ಕನ್ನಿಕೇರ ಕಂಡು, ಅವರನ್ನೆಲ್ಲ ಹಿಡತಂದು ರಾಣೀವಾಸದಲ್ಲಿಟ್ಟಿದ್ದ. ಅವರೆಲ್ಲ ಅಜಾನ ದೇವತೆಗಳು ಸರಿಯೇ, ವಾಸುದೇವನ ಅಂಗಸಂಗವಾಗಬೇಕೆಂದು ಬಹುಕಾಲ ಬಯಕಿ ಉಳ್ಳವರು. ರಜೋದರ್ಶನವಿಲ್ಲ, ಸರ್ವರಲ್ಲಿ ಲಕ್ಷ್ಮೀ ಆವೇಶವಿಹೋದು. ಬಹುದಿವಸ, ಸ್ವಾಮೀ ಅಂಗಸಂಗವಾಗಬೇಕೆಂದು ತಪಸ್ಸು ಮಾಡಿಹೋರು. ಸ್ವಾಮಿ ರಾಣೀವಾಸದಲ್ಲಿ ಹೋಗಥಾನೆ, ಕನ್ನಿಕೇರ ಕಂಡ. ಸುಂದರ ಪುರುಷನ ಕಂಡು ಆ ಕನ್ನಿಕೇರು ಕಾವುದಲ್ಲಿ ಬಯಕೆಯುಳ್ಳವರಾದರು. ಈತನೇ ವಾಸುದೇವನಂತ ಕೇಳಿ, ಬಹಳ ಹರ್ಷವುಳ್ಳವರಾದರು. ಸ್ವಾಮಿ ಅವರಿಗೆ ಪ್ರತ್ಯೇಕ ಪ್ರತ್ಯೇಕ ಅಂದಣಗಳಲ್ಲಿ ಕೂಡ್ರಿಸಿ, ದ್ವಾರಾವತಿಗೆ ಕಳುಹಿಸಿಕೊಟ್ಟನು.

ದೇವೇಂದ್ರನ ರತ್ನಪರ್ವತ ನರಕಾಸುರ ಕೊಂಡುಬಂದಿದ್ದ. ಸ್ವಾಮಿ ಎರಡುನೂರು ಯೋಜನ ಉದ್ದ, ಅಡ್ಡಗಲ ಪರ್ವತ ಗರುಡನಮ್ಯಾಲೆ ಇಟ್ಟು, ಸತ್ಯಭಾಮಾನಿಂದ ಯುಕ್ತನಾಗಿ, ಗರುಡನಮ್ಯಾಲೆ ಕುಳಿತು, ದೇವೇಂದ್ರಗೆ ಕೊಡೋದರ ಗೋಸ್ಕರ ಲೀಲಾಮಾತ್ರದಲ್ಲಿ ಸ್ವರ್ಗಕ್ಕೆ ಹೋಗಿ, ಪಾಂಚಜನ್ಯ ಶಂಖ ಊದಿದನು. ಶಂಖಧ್ವನಿ ಕೇಳಿ, ಸ್ವಾಮಿ ಬಂದನೆಂದು ಸ್ವರ್ಗಸ್ಥರು, ಲೋಕಪಾಲಕರಿಂದ ಯುಕ್ತರಾಗಿ ದೇವೇಂದ್ರನ ಮುಂದುಮಾಡಿಕೊಂಡು ಹೋದರು. ಸ್ವಾಮೀನ್ನ ಎದುರುಗೊಂಡು ಕರಕೊಂಡು ಹೋದರು. ಸ್ವಾಮೀನ್ನ ಸಿಂಹಾಸನದಲ್ಲಿ ಕೂಡ್ರಿಸಿ, ಅರ್ಘ್ಯಾದಿ ಮಧುಪರ್ಕ ಪೂಜಿ ದೇವೇಂದ್ರ ಮಾಡಿದನು. ಸ್ವಾಮಿ ಅದಿತಿ ಕೈಯ ಪೂಜಿ ಮಾಡಿಸಿಕೊಂಡು, ಸಮೀಪಕ್ಕೆ ಹೋಗಿ, ತನ್ನ ಹೆಂಡತಿ ಸತ್ಯಭಾಮಾ ಕೈಯಿಂದ ಕುಂಡಲಗಳ ಕೊಡಿಸಿದನು. ಲಕ್ಷ್ಮೀನಾರಾಯಣರು ಅದಿತಿಗೆ ನಮಸ್ಕಾರ ಮಾಡಿದರು. ಇವರು ಜಗತ್ತಿಗೇ ತಾಯಿತಂದಿಗಳು ಅಂತ ತಿಳೀಬೇಕು, ಮೂರ್ಖಸ್ವಭಾವದಿಂದ ಅದಿತಿ ಆಶೀರ್ವಾದ ಮಾಡಿದಳು. 'ನಿಮ್ಮೊಳಗೆ ಎಂದಿಗೂ ವಿರೋಧ ಬರಬ್ಯಾಡ, ಬಹುಕಾಲ ಪ್ರೀತಿ ನಡೀಲಿ. ವಿಯೋಗವಾಗಬ್ಯಾಡ. ಬಹುಕಾಲ

ಆಯುಷ್ಯವಂತರಾಗಿರಿ, ಏಕಧರ್ಮದಲ್ಲಿ ಸುಖದಿಂದ ಇರಿ' ಎಂತ ಆಶೀರ್ವಾದ ಕೊಟ್ಟಳು. ಸ್ವಾಮಿ ಲಕ್ಷ್ಮೀಪತಿ ಆನಂದ ಜ್ಞಾನ ಉಳ್ಳಾತ, ಆಪ್ತಾಕೃತ, ಸ್ವಗತ-ಭೇದವರ್ಜಿತ, ದೋಷದೂರ, ಗುಣಪೂರ್ಣ. ಇಂಥಾ ಶ್ರೀಕೃಷ್ಣ, ಸತ್ಯಭಾವಾ ಸಮೇತ ಕ್ರೀಡಾರ್ಥ ನಂದನವನಕ್ಕೆ ಬಂದನು.

ಸತ್ಯಭಾಮಾ, ಪುಟಕ್ಕೆ ಹಾಕಿದ ಚಿನ್ನದೋಪಾದಿ ಇಹೋಳು. ಸಕಲ ಜಗತ್ತಿನಲ್ಲಿ ಸ್ವಾಮಿ ಕ್ರೀಡಸ್ತಾನೆ, ಅನಂತಶಕ್ತಿಯುಳ್ಳಾತ. ದೇವತಾವೃಕ್ಷ ಮನುಷ್ಯರಿಗೆ ಗೋಚರವಾಗೋದಿಲ್ಲ. ಸ್ವಾಮಿ ಅಖಿಳೇಶ್ವರ, ಸರ್ವ ಜಗತ್ತು ಸ್ವಾಮೀ ಅಧೀನ, ಆದಕಾರಣ ಸ್ತ್ರೀಕೂಡ ರವಿಸಬೇಕೆಂದು ನಂದನವನಕ್ಕೆ ಹೋದ. ಸತ್ಯಭಾಮಾ ಕುಂಕುಮಕೇಸರಿ ಲಿಪ್ತಳಾಗ್ಯಾಳೆ. ಕೋಟಿ ಚಂದ್ರರು ಒಂದೇ ಕಡೀಲಿ ಒದಗಿದರೆ ಎಷ್ಟು ಕಾಂತಿ, ಅದಕ್ಕೆ ಅಧಿಕ ಕಾಂತಿಯುಳ್ಳಾಕೆ, ಜಗತ್ತಿನಲ್ಲೇ ಅತ್ಯಂತ ಸುಂದರಿ. ಇಂಥಾ ಸುಂದರಿಯಿಂದ ಯುಕ್ತನಾಗಿ, ಲಕ್ಷ್ಮೀ-ನಿವಾಸ, ವನದೊಳಗೆ ವಾಸಮಾಡಲಿಕ್ಕಾಗಿ, ಆರು ಋತುಗಳು ಏಕಕಾಲದಲ್ಲಿ ಒದಗಿದವು. ಫಲಪುಷ್ಪದಿಂದ ಯುಕ್ತವಾದ ರತ್ನ, ಸುವರ್ಣದೋಪಾದಿ ವೃಕ್ಷಗಳು, ಶೋಭಿಸತವೆ. ಅಂಥಾ ವನದೊಳಗೆ ಸತ್ಯಭಾಮಾ ಪಾರಿಜಾತವೃಕ್ಷ ಕಂಡಳು. ಮೊದಲೇನು ಆರಿಯಳೆ! ನೂತನವಾಗಿ ಕಂಡಾಕೆಯಲ್ಲ, ದೇಶತಃ, ಕಾಲತಃ ವ್ಯಾಪ್ತಳು. ಆ ಪಾರಿಜಾತವೃಕ್ಷ ಕ್ಷೀರಸಮುದ್ರಮಥನಕಾಲದಲ್ಲಿ ಹುಟ್ಟಿತ್ತು. ಸರ್ವಾಭೀಷ್ಟ ಕೊಡುವಂಥ ವೃಕ್ಷದ ನೆರಳೊಳಗೆ ಕುಳಿತರೆ, ಲೇಶಮಾತ್ರ ದುಃಖ ವಾಗದು, ಸಕಲ ಮನೋಭಯಕೆ ಪೂರ್ಣವಾಗೋದು. ಇಂಥಾ ಪಾರಿಜಾತವೃಕ್ಷ ತನಗೆ ಬೇಕಾಗಿ, ಮುಗುಳುನಗೆ ನಗತ ವಿಲಾಸಗಳ ತೋರತ, ಕಣ್ಣಿಗೆ ಕಾಡಿಗ ಹಚ್ಚಾಳೆ, ಅಂಥಾ ಕಣ್ಣುಗಳ ಶಿರವತ ಚಂಚಲ ಸ್ವಭಾವ ತೋರಥಾಳೆ. ಗಲ್ಲದ ವ್ಯಾಲ ಕುಂಡಲಗಳ ಕಾಂತಿ ಬಿದ್ದದೆ, ಅಂಥಾ ಕುಂಡಲಗಳ ಅಲ್ಲಾಡಿಸತ ಸತ್ಯ-ಭಾಮಾ ಮಾತನಾಡಿದಳು. 'ಎಲೈ ಸ್ವಾಮಿ ಜಗನ್ನಾಥ, ಈ ವೃಕ್ಷ ನನ್ನ ಅಂಗಳ ದೊಳಗೆ ನೆಡಸಬೇಕು. ವೃಕ್ಷ ಒಣಗೀತಲ್ಲ ಎಂದಿ, ನೀನು ಜಗಜ್ಜೀವ ಅಚಿಂತ್ಯ-ಮಹಿಮಿಯುಳ್ಳಾತ, ಅನಂತ ಪರಾಕ್ರಮ ಉಳ್ಳಾತ.' ಹೀಂಗಂತ ಸ್ವಾಮೀ ಸ್ತೋತ್ರ ಮಾಡಲಿಕ್ಕೆ, ಬಟುವಾದ ಸ್ತನಗಳುಳ್ಳ ಸತ್ಯಭಾಮಾ ಸಲುವಾಗಿ ವೃಕ್ಷ ಕಿತ್ತಿ, ಗರುಡನ ವ್ಯಾಲೆ ಇಟ್ಟು, ಸತ್ಯಭಾಮಾ ಸಮೇತ ಗರುಡನ ವ್ಯಾಲೆ ಏರಿಕೊಂಡು ಹೋಗಲಿಕ್ಕೆ, ವನಪಾಲಕರು ಶಚೀದೇವಿಗೆ ಹೇಳಿದರು. ಶಚೀದೇವಿ ಮಹಾ ಕೋಪ ಉಳ್ಳಾಕೆಯಾಗಿ, ತನ್ನ ಗಂಡ ದೇವೇಂದ್ರಗೆ ಕೃಷ್ಣನ ಅಗ್ಗಳಿಕೆ ಹೇಳಿದಳು. ದೇವೇಂದ್ರ ಅಸುರಾವೇಶದಿಂದ ಯುಕ್ತನಾಗಿ, ಅಷ್ಟದಿಕ್ಪಾಲಕರ ಸಹಿತನಾಗಿ, ಕೃಷ್ಣನ ವ್ಯಾಲೆ ಯುದ್ಧಕ್ಕೆ ತೆರಳಿದನು.

ಇಂದ್ರಾದಿ ದೇವತೆಗಳು ಯುದ್ಧಕ್ಕೆ ಬರಲು, ಸ್ವಾಮಿ ತನ್ನ ಹೆಂಡತಿಗೆ ಅಂಥಾನೆ, 'ದೇವತಾವೃಕ್ಷ ಒಯ್ಯಬಾರದೆಂದು ಹೇಳಿದರೆ ನೀನು ಕೇಳಲಿಲ್ಲ. ನಿನ್ನ ನೆಂಟರು ಬಂಧಾರೆ. ಹ್ಯಾಂಗೆ ಸಮಾಧಾನ ಮಾಡತಿ ಮಾಡು.' ಹೀಂಗೆನಲಿಕ್ಕೆ, ಸತ್ಯಭಾವಾ ಶಾರ್ಙ್ಗಧನುಸ್ಸು ಹಿಡಕೊಂಡು ಬಾಣ ಪ್ರಯೋಗ ಮಾಡಲಿಕ್ಕೆ, ಕುಬೇರ ಬೆನ್ನಕೊಟ್ಟು ಓಡಿಹೋದ. ಗರುಡ ತನ್ನ ಪಖದಿಂದ ವರುಣನ್ನ ಈಡ್ಯಾಡಿದನು. ಅಗ್ನಿ, ಈಶಾನ ಇವರ ಅಸುರಸ್ವಭಾವ ಹೋಯಿತು. ಜಗತ್ತಿಗೇ ತಂದಿತಾಯೇರ ಕೂಡ ಯುದ್ಧ ಮಾಡಬಾರದೆಂದು ಪಲಾಯನ ಹೇಳಿದರು. ಇಷ್ಟಾಗಲಿಕ್ಕೆ, ಮಹಾರುದ್ರ ನಂದಿ ಏರಿ ಬರಲಿಕ್ಕೆ, ಶಾರ್ಙ್ಗಧನುಸ್ಸಿನಿಂದ ಹೊಡಿಸಿ-ಕೊಂಡು, ನೂರು ಧನುಸ್ಸಿನ ಪ್ರಮಾಣ, ನಂದೀಸಹಿತ ಹೋಗಿ ಬಿದ್ದನು. ದೇವೇಂದ್ರ ಬರತಲೇ ಸ್ವಾಮೀ ಮ್ಯಾಲೆ ವಜ್ರಾಯುಧ ಈಡ್ಯಾಡಲಿಕ್ಕೆ, ಸ್ವಾಮಿ ವಜ್ರಾಯುಧ ತನ್ನ ಎಡಕೈಲಿ ಹಿಡದು ಮುಗುಳುನಗೆ ನಕ್ಕನು. ವಜ್ರಾಯುಧ ಹಿಡಿಯಲಿಕ್ಕೆ, ದೇವೇಂದ್ರ ನಿರಾಯುಧನಾಗಿ ಬೆನ್ನಕೊಟ್ಟು ಓಡಲಿಕ್ಕೆ, ಜಗತ್ತಿಗೇ ಸುಂದರಿ ಸತ್ಯಭಾವಾ ನಗತಲೆ ಮಾತನಾಡಿದಳು. 'ಭಾವ ಬೆನ್ನ ಕೊಟ್ಟು ಹೋಗ-ಬ್ಯಾಡ, ಅಕ್ಕ ನಕ್ಕಾಳು. ಗಂಡ ಸೋತುಬಂದನೆಂದು ಅನಾದರ ಮಾಡ್ಯಾಳ. ವೀರನಾಗಿ ಯುದ್ಧ ಮಾಡು' ಎನಲಿಕ್ಕೆ, 'ಎಲೌ ತಾಯೀ ಅವ್ವಾ, ನಾವು ಬಾಲಿಶರು. ಶಿಶುಭಾವ ತೋರಸ್ತೀವಿ. ಕರುವು ಹಾಲು ಬಾರದಿದ್ದರೆ ಗುಮ್ಮತದೆ. ಸ್ನೇಹದಿಂದ ಅಕಳು, ಹಾಲು ತೊರೀತದೆ. ಹಾಂಗೆ ಮಕ್ಕಳ ಅಪರಾಧ, ತಾಯಿ-ತಂದೇರು ಮನಸ್ಸಿಗೆ ತಾಹೋದಿಲ್ಲ. ನಾವು ನಿನ್ನ ಮಕ್ಕಳು. ಸರ್ವಾಪರಾಧ ಕ್ಷಮಿಸ-ಬೇಕು' ಎಂದು ಬೇಡಿಕೊಂಡು, ಇನ್ನೂರು ಯೋಜನ ಉದ್ದ, ರತ್ನಪರ್ವತ—ನರಕಾಸುರ ಕೊಂಡುಹೋಗಿದ್ದ, ಕೋಡಗಲ್ಲ ಪರ್ವತದಲ್ಲಿ ಇತ್ತು, ಆ ಪರ್ವತ—ಸ್ವಾಮಿಗೆ ತಂದುಕೊಟ್ಟು ಬೇಡಿಕೋಥಾನೆ. 'ನನ್ನ ಮಗ ಅರ್ಜುನ ನಿನ್ನ ಮೈದುನನಾಗಿ ಹುಟ್ಯಾನೆ. ಅರ್ಜುನಗೆ ಸೋಲೋಣವಾಗಬಾರದು. ಸರ್ವಬಗೀ-ಲಿಂದ ರಕ್ಷಿಸಬೇಕು' ಎಂದು ಬೇಡಿಕೊಂಡು, ಸ್ವಾಮೀ ಕೂಡ ಯುದ್ಧಮಾಡಿದ್ದಕ್ಕೆ ರತ್ನಪರ್ವತ ಕೊಟ್ಟು, ಅಪರಾಧ ಕ್ಷಮಿಸಲು ಬೇಡಿಕೊಂಡನು. ಸ್ವಾಮಿ ದೇವೇಂದ್ರಗೆ ಅಂಥಾನೆ. 'ಈ ಅವತಾರ ಭೂಮೀಮ್ಯಾಲೆ ಇರೋತನಕ ಅರ್ಜುನಗೆ ಸೋಲೋಣವಿಲ್ಲ' ಎಂದು ದೇವೇಂದ್ರಗೆ ಅಭಯ ಕೊಟ್ಟು, ಕೃಷ್ಣ ದ್ವಾರಾವತಿಗೆ ಬರುವಾಗ ಚೆನ್ನಾಗಿ ಒಪ್ಪಿದನು. ನೂತನವಾಗಿ ಒಪ್ಪಿದಾತನಲ್ಲ, ಶಶ್ವದ್ಭೋಕಪ್ರಕಾರ ನಾಗಿ, ಆನಂದಪೂರ್ಣ ಭಕ್ತರಿಗೆ ಸುಖೋದ್ರೇಕ ಮಾಡಿಕೊಡತ ಜಗತ್ತಿನಲ್ಲಿ ಇರಥಾನೆ.

ಸ್ವಾಮಿ ಸತ್ಯಭಾವಾ ಸಮೇತನಾಗಿ ಗರುಡವಾಹನನಾಗಿ, ನರಕಾಸುರನ ಕೊಂದು, ಇಂದ್ರಾದಿ ದೇವತೆಗಳನ್ನೆಲ್ಲ ಸೋಲಿಸಿ, ಪಾರಿಜಾತವೃಕ್ಷ ಕೊಂಡು

ಬರುವಾಗ, ಪೀತಾಂಬರಧಾರಿಯಾಗಿದ್ದಾನೆ. ವೈಜಯಂತಿಮಾಲ ಕೊರಳೊಳಗೆ ಹಾಕಿಕೊಂಡಾನೆ. ಕೌಸ್ತುಭರತ್ನ ಸುದರ್ಶನ, ಆಯುಧ ಧರಿಸ್ಯಾನೆ. ಇಂಥಾ ಸ್ವಾಮಿ ಬರಥಾನೆಂದು, ಸಮಸ್ತ ಯಾದವರೂ ಸ್ವಾಮೀ ಎದುರುಗೊಂಡು ಕರದೊಯ್ದರು. ಕಮಲೇಕ್ಷಣ, ಸತ್ಯಭಾಮಾ ಅಂಗಳದೊಳಗೆ ಪಾರಿಜಾತವೃಕ್ಷ ನೆಡಸಿದನು. ಇನ್ನೂರು ಯೋಜನ ಕೋಡಗಲ್ಲು ರತ್ನಪರ್ವತ ಸಹ, ಸತ್ಯಭಾಮಾ ಅಂಗಳದೊಳಗೆ ನಿಲಿಸಿದನು. ನರಕಾಸುರ ಅನೇಕ ಹೇಮರತ್ನ, ಇನ್ನೂರು ಯೋಜನ ಬೀಳೋ ಅಷ್ಟು ಕೂಡಿಟ್ಟಿದ್ದ. ಆದು ದ್ವಾರಾವತಿಗೆ ಸ್ವಾಮಿ ಕಳುಹಿಸಿದ್ದ. ಅದನ್ನೆಲ್ಲ ಯಾದವರಿಗೆ ವಿಭಾಗ ಮಾಡಿಕೊಟ್ಟನು. ಸುಮುಹೂರ್ತದಿಂದ ಹದಿನಾರುಸಾವಿರದ ಒಂದುನೂರು ಕನ್ನಿಕೇರನ್ನ ಮದುವಿ ಆದನು. ತಾ ಒಬ್ಬ, ಇಷ್ಟು ಮಂದಿಗೆ ಹ್ಯಾಂಗೆ ಭೋಗ ಕೊಟ್ಟನೆಂದರೆ, ಪ್ರತ್ಯೇಕ ಪ್ರತ್ಯೇಕ ರೂಪ ಧರಿಸಿ, ಒಬ್ಬೊಬ್ಬರಿಗೆ ಇಂದ್ರನೀಲಮಣಿಗಳಿಂದ ಖಚಿತವಾದ ಮನಿ ಕಟ್ಟಿಸಿಕೊಟ್ಟನು. ಸಕಲರಿಗೂ ಭೋಗ ಕೊಟ್ಟನು. ಒಬ್ಬೊಬ್ಬರಲ್ಲಿ ಹತ್ತು ಮಂದಿ ಗಂಡಸ.ಮಕ್ಕಳು, ಒಬ್ಬ ಹೆಣ್ಣುಮಗಳು ಈ ಪ್ರಕಾರ ಮಕ್ಕಳನ್ನು ಹಡದನು. ಇದರೊಳಗೆ ಪ್ರದ್ಯುಮ್ನ, ಸಾಂಬ ಕಾಮನ ಅವತಾರ, ಭಾನು ಎಂಬುವ ವಿವಸ್ವಾನ್ ಸೂರ್ಯನ ತಮ್ಮ, ಸವಿತೃನಾಮಕ ಸೂರ್ಯನೇ ಭಾನುವಾಗಿ ಸತ್ಯಭಾಮೆಯಲ್ಲಿ ಹುಟ್ಟಿದ್ದಾನೆ. ಚಾರುದೇಷ್ಣ ಎಂಬುವನು ಗಣೇಶನು, ರುಕ್ಮಿಣೀಯಲಿ ಹುಟ್ಟಿದ್ದಾನೆ. ಸಾಂಬ ಜಾಂಬವತೀಯಲ್ಲೆ ಹುಟ್ಟಿದ್ದಾನೆ. ಪ್ರದ್ಯುಮ್ನ ರುಕ್ಮಿಣೀಯಲ್ಲೆ ಹುಟ್ಟಿದ್ದಾನೆ. ಇಷ್ಟು ಮಂದಿ ಮಕ್ಕಳೊಳಗೆ ಪ್ರದ್ಯುಮ್ನ, ಸಾಂಬ, ಚಾರುದೇಷ್ಣ, ಭಾನು ಹೀಂಗೆ ನಾಲ್ಕು ಮಂದಿ ಬಲಿಷ್ಠರು. ಉಳಿದಾದ ಕೃಷ್ಣನ ಮಕ್ಕಳು, ಅಸಾಖ್ಯಾತ ದೇವತಿಗಳು. ರೂಪದಲ್ಲಿ, ಗುಣದಲ್ಲಿ ಕೃಷ್ಣನ ಸದೃಶ ಗುಣವುಳ್ಳವರು. ಯಾದವರೆಲ್ಲ ದೇವತಿಗಳೇವೆ. ಸ್ವಾಮಿ ಸೇವಿ ಮಾಡಬೇಕಾಗಿ ಅಂಗಭೂತರಾಗಿ ಹುಟ್ಟಿದ್ದಾರೆ. ಈ ಪ್ರಕಾರ ಲಕ್ಷ್ಮೀರಮಣ ತನ್ನ ಭಕ್ತರಿಗೆ ಸುಖೋದ್ರೇಕ ಮಾಡಿಕೊಡತ, ಅವರಿಗೆ ಸಕಲಾಭೀಷ್ಟವನ್ನು ಕೊಟ್ಟು, ತಾನು ದ್ವಾರಾವತಿಯಲ್ಲಿ ಸುಖದಲ್ಲಿರಹೊಕ್ಕನು. ಶ್ರೀಕೃಷ್ಣನ ಮಕ್ಕಳು ಪ್ರದ್ಯುಮ್ನ, ಸಾಂಬ ತ್ರಿಲೋಕ ಗೆಲ್ಲಬೇಕೆಂದು ದಿಗ್ವಿಜಯಕ್ಕೆ ಹೊರಟರು. ಅತಳಾದಿ ಲೋಕಗಳ ಗೆದ್ದು, ಪಾತಾಳ ದಿಗ್ವಿಜಯ ಮಾಡಲಿಕ್ಕೆ ಹೋದರು. ಸರ್ಪಶ್ರೇಷ್ಠರು, ದೇವರ ಮಕ್ಕಳೆಂದು ಅಂಜಬೇಕು, ಅಜ್ಞಾನದಿಂದ ಧೈರ್ಯ ಉಳ್ಳವರಾಗಿ ಯುದ್ಧ ಮಾಡಲಿಕ್ಕೆ, ಸರ್ಪಗಳೆಲ್ಲ ಓಡಿಹೋದವು. ವಾಸುಕಿ ಮೊದಲಾದ ಸರ್ಪಗಳು, ರತ್ನಗಳ ಕಪ್ಪ ಕೊಟ್ಟು, ನಾವು ನಿಮ್ಮ ಭೃತ್ಯರಿದ್ದೀವೆಂದು ಬೇಡಕೊಂಡು ಕಳುಹಿಸಿಕೊಟ್ಟರು. ಮಾರ್ಗದಲ್ಲಿ ದೈತ್ಯರ ಒಡಿಗ್ಯ ಮಯನೆಂಬುವ, ಹಾದಿ ಅಡ್ಡಗಟ್ಟಿದ. ಬಾಣದ ಮಳಿಗರಿಯಲಿಕ್ಕೆ ಪ್ರದು ಮ್ನ, ಸಾಂಬ ಮಯನ ಮರ್ದಿಸಿ, ಅವನ ಕೈಯ ಅಪಾರ ಕಪ್ಪ, ಹೇಮ, ರತ್ನ ಕೊಂಡರು. ಅಲ್ಲಿಂದ ಆಕಾಶಮಾರ್ಗಕ್ಕೆ ರಥ ನಡಸ್ತ ಸ್ವರ್ಗಕ್ಕೆ ಹೋದರು.

ದೇವೇಂದ್ರನ ಮಕ್ಕಳು ಜಯಂತ, ಋಷಭ ಇವರಿಬ್ಬರೂ ಕೂಡಿ ಯೋಚನಿ ಮಾಡಿದರು. ಕೃಷ್ಣ ನಮ್ಮ ಪಾರಿಜಾತವೃಕ್ಷ ಒಯ್ದಾನೆ. ಅತನ ಮಕ್ಕಳು ಬಂದಾರೆ. ಇವರಿಗೆ ನಿರ್ಬಂಧ ಮಾಡಿದರೆ, ಸ್ವತೇವ ಪಾರಿಜಾತವೃಕ್ಷ ಕೊಟ್ಟು, ತನ್ನ ಮಕ್ಕಳನ್ನ ಬಿಡಿಸಿಕೊಂಡುಹೋದಾನೆಂದು, ಜಯಂತ ಪ್ರದ್ಯುಮ್ನನ ಕೂಡ, ಋಷಭ ಸಾಂಬನ ಕೂಡ ಯುದ್ಧ ಮಾಡಿದರು. ಅಸ್ತ್ರಸಾಮರ್ಥಿಯಿಂದ ಪ್ರದ್ಯುಮ್ನ, ಸಾಂಬರ ರಥಗಳ ಸುಟ್ಟುಬಿಟ್ಟರು. ಭಯಂಕರ ಯುದ್ಧ ಮಾಡಲಾಗಿ, ಪ್ರದ್ಯುಮ್ನ ಸಾಂಬರುಗಳಿಂದ ಪೀಡಿತರಾಗಿ ಓಡಿಹೋಗಿ, ದೇವೇಂದ್ರನ ಬೆನ್ನಬಿದ್ದರು. ಮಕ್ಕಳಿಗೆ ಬಹಳೇ ಬುದ್ಧಿವಾದ ಹೇಳಿ ' ಇಷ್ಟು ಏನುಕಾರಣ ಅನರ್ಥ ಮಾಡಿದಿರಿ ? ನಾ ಅಸುರಾವೇಶದಿಂದ ಕೃಷ್ಣನ ಕೂಡ ಯುದ್ಧ ಮಾಡಿ, ಅಪರಾಧ ಕ್ಷಮಿಸಿಸಿಕೊಂಡಿದ್ದೆ. ನೂತನ ಕಲಹ ತೆಗೆದಿರಿ.' ಹೀಂಗೆ ಸಿಟ್ಟು ಮಾಡಿ, ಪ್ರದ್ಯುಮ್ನ ಸಾಂಬರಿಗೆ ಅನೇಕ ಪೂಜಿ ಮಾಡಿ, ಕಲಹ ಬೆಳಸಬ್ಯಾಡಿರೆಂದು ಬೇಡಿಕೊಂಡನು. ಪ್ರದ್ಯುಮ್ನ ತನಗೆ ರತಿ ಕಲಿಸಿದ ವಿದ್ಯದಿಂದ, ಸುಟ್ಟುಹೋದ ರಥವನ್ನ ದೊರಕಿಸಿಕೊಂಡು, ದ್ವಾರಾವತಿಗೆ ಪ್ರದ್ಯುಮ್ನ ಸಾಂಬರು ಹೋದರು.

ನಾರದರು ಕೃಷ್ಣನ ಪ್ರವೃತ್ತಿ ನೋಡಬೇಕೆಂದು ಬರಲಿಕ್ಕೆ, ಋಷಿ ಯಾದವರ ಮನೀಲಿ ನೋಡಥಾನೆ. ಅಲ್ಲಲ್ಲಿ ಶ್ರೀಕೃಷ್ಣನ ಕಂಡು ಆಶ್ಚರ್ಯವುಳ್ಳವನಾದನು. ಅಲ್ಲಿಂದ ಕೃಷ್ಣನ ಹೆಂಡಂದಿರ ಮನಿಯಲ್ಲಿ ನೋಡಥಾನೆ. ಒಂದು ಮನೀಲಿ ದೇವತಾರ್ಚನಿ ಮಾಡಥಾನೆ. ಒಂದು ಮನಿಯಲ್ಲಿ ಪಗಡೀ ಆಡಥಾನೆ. ಒಬ್ಬಳಲ್ಲಿ ಮಂಚ ಸುಪ್ಪತ್ತಿಗೀ ಮ್ಯಾಲೆ ಮಲಗಿಕೊಂಡಾನೆ. ಒಬ್ಬಳಲ್ಲಿ ಕುಳಿಥಾನೆ. ನಾರದ ಬರಲಿಕ್ಕೆ ಅರ್ಘ್ಯಾದಿ ಪೂಜಿ ಮಾಡಿದ. ಒಬ್ಬಳಲ್ಲಿ ಅಡಿಗಳ ಕರಸಥಾನೆ. ಹೀಂಗೆ ಲಕ್ಷ್ಮೀಪತಿಯ ಅನೇಕ ರೂಪ ನಾರದ ಕಂಡು ಆಶ್ಚರ್ಯ ಉಳ್ಳವನಾಗಿ, ಸ್ವಾಮೀ ಅದ್ಭುತ ಮಹಿಮಾ ಚರಿತ್ರ ಕೊಂಡಾಡಿ, ಹದಿನಾರುಸಾವಿರದ ಒಂದುನೂರು ಹೆಂಗಸರ ಮನಿಯಲ್ಲಿ ಒಂದೊಂದು ರೂಪದಲ್ಲಿದ್ದಾನೆಂದು ತಿಳಿದನು.

ಇನ್ನು ಪಾಂಡವರು, ಒಬ್ಬ ಸ್ತ್ರೀಯಲ್ಲಿ ಹ್ಯಾಂಗೆ ಭೋಗಸ್ತಾರೆಂದು ಶಕ್ರಪ್ರಸ್ಥಕ್ಕೆ ಹೋದನು. ಪಾಂಡವರ ಕೈಯ ಅರ್ಘ್ಯಾದಿ ಪೂಜಿ ಕೊಂಡು ನಾರದ ಮಾತನಾಡಥಾನೆ. ' ನಾನು ಬ್ರಹ್ಮದೇವರ ಆಜ್ಞದಿಂದ ಬಂದಿದ್ದೀನಿ. ದ್ರೌಪದೀ ಭೋಗ ಪ್ರತಿದಿವಸ ಮಾಡಬ್ಯಾಡಿ. ಒಬ್ಬೊಬ್ಬರು ಒಂದೊಂದು ವರುಷ ಭೋಗ ಮಾಡಿ.' ಕ್ರಮದಿಂದ ಭೀಮಸೇನ ದ್ರೌಪದಿಗೆ ಆಗಬೇಕಾಗಿ, ಸುಂದೋಪಸುಂದರ ಆಖ್ಯಾನ ನಾರದ ಹೇಳಥಾನೆ. " ಸುಂದೋಪಸುಂದರು ದೈತ್ಯಶ್ರೇಷ್ಠರು, ಬ್ರಹ್ಮರಾಯನ ಕುರಿತು ಬಹುಕಾಲ ತಪಸ್ಸು ಮಾಡಿ, ಅವಧ್ಯತ್ವ ವರವು ಪಡೆದಿದ್ದರು. ' ನಿಮ್ಮೊಳಗೆ ವಿರುದ್ಧ ಬಂದರೆ ಸತ್ತೀರಿ ' ಎಂದು, ಮಾತು ಬಿಡಿಸಿ ವರವು ಕೊಟ್ಟರಲಿಕ್ಕೆ, ತಾವು ಅಣ್ಣತಮ್ಮಂದರು ಬಹಳ ಸ್ನೇಹವುಳ್ಳವರು, ತಮ್ಮೊಳಗೆ

ವಿರುದ್ಧ ಬರಬಾರದೆಂದು ತಿಳದು, ಒಬ್ಬ ಸ್ತ್ರೀ ಮಾಡಿಕೊಂಡು, ಪ್ರತಿದಿವಸ ಒಬ್ಬೊಬ್ಬರು ಭೋಗ ಮಾಡತ್ರ, ರಥ ಏರಿಕೊಂಡು ಸ್ವರ್ಗ ಅತಳಾದಿ ಲೋಕಗಳಿಗೆ ಧಾಳಿ ಹಾಕಿ, ಇಂದ್ರಾದಿ ದೇವತಿಗಳಿಗೆಲ್ಲ ದುಃಖಬಡಸ್ತಿಹೋರು. ಸುಂದೋಪ-ಸುಂದರರ ಬಾಧಿ ತಾಳಲಾರದೆ ದೇವತಿಗಳೆಲ್ಲ ಬ್ರಹ್ಮದೇವರಿಗೆ ಮೊರಿ ಇಟ್ಟರು. ಬ್ರಹ್ಮ-ದೇವರು ಛಲೋಛಲೋ ಪದಾರ್ಥಗಳೊಳಗೆ ಎಳ್ಳುಕಾಳಷ್ಟು ಚಲುವಿಕಿ ತೆಗೆದು, ಅದರಿಂದ ತಿಲೋತ್ತಮಾ ಎಂಬ ಅಪ್ಸರಸ್ತ್ರೀ ನಿರ್ಮಾಣ ಮಾಡಿ ಸುಂದೋಪಸುಂದರ ಬಳಿಗೆ ಕಳುಹಿಕೊಟ್ಟನು. ಆ ತಿಲೋತ್ತಮಾ, ತನ್ನ ಮುಖಚಲುವಿಕಿಯಿಂದ ದಿಕ್ಕು-ಗಳನ್ನೆಲ್ಲ ಪ್ರಕಾಶಿಸತಾ, ವಿಲಾಸಗಳ ತೋರಿಸತಾ ಬಂದಳು. ಆ ಕನ್ನಿಕೀ ಕಂಡು, ನಾ ಮುಂಚೆ ತಾ ಮುಂಚೆ ಭೋಗ ಮಾಡಬೇಕೆಂದು ಅಣ್ಣತಮ್ಮಂದರು ಬಡಿದಾಡ ಲಿಕ್ಕೆ, ವೀರಾವೇಶದಿಂದ ಹೊಡದಾಡಿ ಸತ್ತರು. ಅಣ್ಣತಮ್ಮಂದರ ಸ್ನೇಹ ಬಹುಕಾಲ ಇರಲಿಕ್ಕೆ ಕೂಡದು. ಸ್ತ್ರೀಭೋಗದಿಂದ ಅತ್ಯಂತ ಸ್ನೇಹ ಇದ್ದರೂ, ಮಾಯಾ ನಿಂದರೋದಿಲ್ಲ. ಕ್ಷಣಮಾತ್ರದಲ್ಲಿ ಸ್ತ್ರೀಯಿಂದ ಸತ್ತುಹೋದರು. ಆದಕಾರಣ, ನೀವು ಪಾಂಡವರು ಧರ್ಮಿಷ್ಠರು. ಪ್ರತಿದಿನ ಭೋಗ ಮಾಡಬ್ಯಾಡಿ. ವರ್ಷ ಒಬ್ಬರು ಭೋಗ ಮಾಡಿರಿ. ವರ್ಷದೊಳಗೆ ಸ್ತ್ರೀಪುರುಷರ ಭೋಗ ಕಂಡರೆ, ಒಂದು ವರುಷ ತೀರ್ಥಯಾತ್ರಿ ಮಾಡತಾ ಬನ್ನಿ.' ಈ ಪ್ರಕಾರ ನೇಮು ಮಾಡಿಕೊಟ್ಟು, ನಾರದ ಬ್ರಹ್ಮಲೋಕಕ್ಕೆ ಹೋದನು.

ಪಾಂಡವರು ಬ್ರಹ್ಮದೇವರ ಆಜ್ಞೆ ಮೀರಬಾರದೆಂದು, ಮೊದಲ ವರುಷ ದ್ರೌಪದೀಯಲ್ಲಿದ್ದ ಶ್ಯಾಮಲಾದೇವೀನ್ನ, ಧರ್ಮರಾಯ ಭೋಗ ಮಾಡಿದನು. ಆ ಹೊತ್ತು ರಾತ್ರೀಲಿ ಬ್ರಾಹ್ಮಣನೊಬ್ಬನ ಆಕಳು ಕಳ್ಳರು ಒಯ್ದರು. ಪಾಂಡವರು ಗೋಬ್ರಾಹ್ಮಣಪ್ರತಿಪಾಲಕರು, ಆಕಳಿಗೆ ಕರುವಿಗೆ ವಿಯೋಗವಾದರೆ ತಾಳಲಾರರು. ಆದಕಾರಣ ಅರ್ಜುನ ಕಳ್ಳರ ಬೆನ್ನಟ್ಟಬೇಕಾಗಿ ಖಡ್ಗ ಕೊಳ್ಳಲಿಕ್ಕೆ, ಧರ್ಮರಾಯ ಸ್ತ್ರೀಯುಕ್ತವಾದ ಗೃಹಕ್ಕೆ ಬಂದು ಖಡ್ಗ ಕೊಂಡು, ಆಕಳ ಬಿಡಿಸಿಕೊಂಡು ಬಂದು ಅಣ್ಣನ ಕೇಳಿದ. 'ನಾರದ ನೇಮು ಮಾಡಿಕೊಟ್ಟು ಹೋಗ್ಯಾನೆ. ನಾನು ತೀರ್ಥ-ಯಾತ್ರಿಗೆ ಹೋಗಥೀನಿ' ಎನಲಿಕ್ಕೆ, ಧರ್ಮರಾಯ ಮಾತನಾಡಿದ. 'ಅರ್ಜುನ ನಿನಗೆ ದೋಷವಿಲ್ಲ. ನಿನಗೆ ಪಾಪದ ಲೇಪವಿಲ್ಲ. ತೀರ್ಥಯಾತ್ರಿಗೆ ಹೋಗಬ್ಯಾಡ.' ತಮ್ಮ ಕಷ್ಟಬಡಥಾನೆಂದು ಹೇಳಥಾನೆಂದು ತಿಳದು ಅರ್ಜುನ ತೀರ್ಥಯಾತ್ರಿಗೆ ಹೋದನು. ತೀರ್ಥಕ್ಕೆ ಹೋಗಿದ್ದಾನೆ, ಸ್ನಾನ ಮಾಡಿದ್ದಾನೆ. ಗಂಡ ಸತ್ತ ನಾಗ-ಕನ್ನಿಕಿ, ತನಗೆ ಮಕ್ಕಳಾಗಬೇಕೆಂದು ಅರ್ಜುನನ್ನ ಕೊಂಡು, ಪಾತಾಳಲೋಕಕ್ಕೆ ಹೋದಳು. ಆ ನಾಗಕನ್ನಿಕಿ ಗಂಡನ್ನ ಗರುಡ ತಿಂದಿಹ. ವಿಧವಿ ಆಗಿ, ಮಕ್ಕಳಿಲ್ಲದೆ ಬಯಕಿ ಇಹೋದು. ತಾನು ಅರ್ಜುನನ್ನ ಬೇಡಿಕೊಂಡಳು. ತನ್ನ ತಂದಿಗೆ ಹೇಳಿ ಅರ್ಜುನನ್ನ ಪ್ರಾರ್ಥಿಸತಿಹೋಳು. ಬ್ರಹ್ಮಚರ್ಯವ್ರತದಿಂದ ತೀರ್ಥಯಾತ್ರಿ

ಮಾಡಬೇಕೆಂದು ಬ್ರಹ್ಮರಾಯನ ಸಂಕಲ್ಪವದೆ ನಾರದ ಹೇಳಿ ಹೋಗ್ಯಾನೆ. ವ್ರತ ಕೆಟ್ಟೀತೆಂದು ಅಂಜತಿಹ. ಪುನಃಪುನಃ ತಂದೀ ಮಗಳು ಅರ್ಜುನನ್ನ ಬೇಡಿಕೊಳ್ಳ ತಿಹೋರು. ಕನ್ನಿಕೆ ಬಹಳ ಆತುರಳಾಗಿಹೋಳು. ಸಂತಾನಾರ್ಥವಾಗಿ ಭೋಗಿಸೆಂದು ಪ್ರಾರ್ಥಿಸಲಿಕ್ಕೆ, ಯುಗಧರ್ಮಕ್ಕೆ ಮನ್ನಿಸಿ, ಪುತ್ರಾರ್ಥವಾಗಿ ಗಂಡ ಸತ್ತ ಕನ್ನಿಕೆ ಭೋಗಿಸಲಿಕ್ಕೆ, ಇರಾವಂತ ಎಂಬ ಮಗ ಹುಟ್ಟಿದನು. ಈತ ದಾರೆಂದರೆ ಮಂಗಳನ ಅಂಶ, ವರುಣನ ಆವೇಶದ್ದಿಂದ ಹುಟ್ಟಿದನು. ಗುಣದಲ್ಲಿ ಅರ್ಜುನನ ಸರಿ, ಜಾತಿಯಲ್ಲಿ ಮಾತೃಪಕ್ಷ ಹೊತ್ತಿಹ. ಹನುಮಂತ ಜಾತಿಯಲ್ಲಿ ಮಾತೃಪಕ್ಷನೇ, ತಂದೀ ಗುಣ ಹೊತ್ತಿಹೋನು. ಪ್ರದ್ಯುಮ್ನ ಮೊದಲಾದವರು, ತಂದಿತಾಯೀ ಗುಣ ಹೊತ್ತಿಹೋರು. ಅರ್ಜುನಗೆ ಇರಾವಂತ ಮೊದಲನೇ ಮಗ. ಬಹಳ ನೀತಿವಂತ, ಧರ್ಮಿಷ್ಠ, ಜ್ಞಾನಭಕ್ತಿವೈರಾಗ್ಯ ಉಳ್ಳಾತ.

ಅರ್ಜುನ ಮುಂದೆ ತೀರ್ಥಯಾತ್ರಿಗೆ ಹೋದಮ್ಯಾಲೆ, ಸರ್ಪಗಳೆಲ್ಲ ಕೂಡಿ, ನಾಗಕನ್ನಿಕೆಗೆ ದೋಷವಿಟ್ಟು, ಗಂಡ ಸತ್ತಾಕಿ, ಪರಪುರುಷನ ಭೋಗಿಸಿ ಮಗನ ಹಡದಳೆಂದು ತಾಯಿ, ಮಗನ್ನ ಹೊರಗೆ ಹಾಕಿದರು. ನಾಗಕನ್ನಿಕೆ ತನ್ನ ಮಗನ್ನ ಕೂಡಿಕೊಂಡು, ಪಾತಾಳಲೋಕ ಬಿಟ್ಟು ಸ್ವರ್ಗಕ್ಕೆ ಹೋದಳು. ಇಂದ್ರಾದಿ ದೇವತಿಗಳು, ತಮ್ಮ ಅರ್ಜುನನ ಮಗನೆಂದು ಬಹಳ ಮಾನ ಮಾಡಿ, ಸ್ವರ್ಗದಲ್ಲಿ ತಾಯಿ ಮಗನ್ನ ಇಟ್ಟುಕೊಂಡರು. ಅರ್ಜುನ ಅಪರೋಕ್ಷಜ್ಞಾನಿ, ವಿಧವಿಗೆ ಮಗನ್ನ ಹ್ಯಾಂಗೆ ಹಡದನೆಂದರೆ, ದೊಡ್ಡ ಅಪರಾಧವಲ್ಲ. ದೊಡ್ಡವರು ಇಂಥಾ ಕ್ಷುದ್ರ ಅಪರಾಧ ಮಾಡಿದರೆ, ಜ್ಞಾನಿಗಳಿಗೆ ತಪ್ಪು ಅಲ್ಲ. ಧರ್ಮರಾಯ ಮೊದಲಾದ ಅಣ್ಣ ತಮ್ಮಂದರು, ಅರ್ಜುನ ತೀರ್ಥಯಾತ್ರಿ ಹೋಗಿ, ವಿಧವಿಯಲ್ಲಿ ಹ್ಯಾಂಗೆ ಮಗನ್ನ ಹಡದನೆಂದು, ತಮ್ಮನ ಮ್ಯಾಲಿನ ಸ್ನೇಹದಿಂದ ಕೇಳಲಿಲ್ಲ. ಒಂದು ವ್ಯಾಳ್ಯಾಕ್ಕೆ ಕೇಳಿದರೆ, ಚಿತ್ತಕ್ಷೋಭವಾದೀತೆಂದು ಅಣ್ಣತಮ್ಮಂದರು ಅರ್ಜುನನ್ನ ಗುಣಸತಿದ್ದಿಲ್ಲ.

ಅರ್ಜುನ ತನ್ನ ತೀರ್ಥಯಾತ್ರಿ ಮುಂದುವರಸ್ಯಾನೆ. ಪಾಂಡ್ಯರಾಜನ ಮಗಳು ಚಿತ್ರಾಂಗದಾ—ಶಚೀದೇವಿ ಅವತಾರ. ಅಕೀ ತಂದಿ ವೀರಸೇನರಾಯ, ತಾ ದಾರು ಎಂದರೆ ತ್ವಷ್ಟ್ರುವೆಂಬ ಆದಿತ್ಯ, ಯಮದೇವರ ಆವೇಶವುಳ್ಳವ. ಆತನಿಂದ ತಾರಾದೇವಿ, ಇಲ್ಲಿ ಚಿತ್ರಾಂಗದಾ ಆಗಿ ಹುಟ್ಯಾಳೆ. ತಾರಾದೇವಿ ಗಂಡ ಸತ್ತಮ್ಯಾಲೆ ಸುಗ್ರೀವನ ಭೋಗಕ್ಕೆ ಅನುಕೂಲಳಾದಳು. ನೀಚನ ಭೋಗ ಹ್ಯಾಂಗೆ ಮಾಡಲಿ ಎಂದು ವೈರಾಗ್ಯವುಳ್ಳಾಕೆಯಾಗಿ ತಾರಾದೇವಿ ಸಾಯಲಿಲ್ಲ. ಆದಕಾರಣ ಮೂಲ ಶಚೀರೂಪ ಕೂಡದೆ, ತನ್ನ ಮೈದುನನ್ನ ಭೋಗ ಮಾಡಿದ ಕಾರಣ, ಆ ಪಾಪವಶದಿಂದ ವೀರಸೇನರಾಯನ ಮಗಳಾಗಿ ಹುಟ್ಟಿದಳು. ಆದಕಾರಣ ಗಂಡಹೆಂಡಿರು ಬಹುಕಾಲ ಕೂಡಿ ಇರಲಿಲ್ಲ. ಬಂದ ದಿವಸವೇ ಗಂಡನಾದ ಅರ್ಜುನನ ಅಂಗಸಂಗ ಮಾಡಿ ಮಗನ್ನ ಹಡದಳ್ಳಲ್ಲದೆ ಗಂಡನ ಸಾಮೀಪ್ಯ ಇಲ್ಲ. ವೀರಸೇನರಾಯ ತನ್ನ

ಮಗಳಲ್ಲಿ ಹುಟ್ಟಿದ ಮಗನ್ನ, ಪುತ್ರಿಕಾಪುತ್ರನ್ಯಾಯದಿಂದ ಮಗನ್ನ ಮೊಡಿ ಸಾಕಿದನು. ಆತನ ಹೆಸರು ಬಬ್ರುವಾಹನ. ಆತ ದಾರೆಂದರೆ ದೇವೇಂದ್ರನ ಮಗ ಜಯಂತನೇವೆ. ಕಾಮನ ಆವೇಶದಿಂದ ಅರ್ಜುನನ ಮಗ ಬಬ್ರುವಾಹನನಾಗಿ ಹುಟ್ಟಿದನು.

ಅಲ್ಲಿಂದ ಅರ್ಜುನ ಕನ್ಯಾತೀರ್ಥಕ್ಕೆ ಹೋದ. ಅಲ್ಲಿ ಸ್ನಾನ ಮಾಡಲಿಕ್ಕೆ, ಐದು ಮಂದಿ ಹೆಣ್ಣುಮಕ್ಕಳು ಅಪ್ಸರಿಯರು, ಬ್ರಾಹ್ಮಣನ್ನ ನೋಡಿ ನಕ್ಕಿದ್ದರು. ಕಾರಣ ನೆಗಳೀಜನ್ಮ ಬಂದಿತ್ತು. ಆ ತೀರ್ಥದಲ್ಲಿ ಸ್ನಾನಕ್ಕೆ ಬಂದವರನ್ನೆಲ್ಲ ಕೊಂಮು-ಬಿಡಕಿಹೋವು. ಹೀಂಗೆ ಇರಲಿಕ್ಕೆ, ಅರ್ಜುನ ಸ್ನಾನ ಮಾಡುವಾಗ ನೆಗಳಿಗಳು ಅರ್ಜುನನ ಕಾಲು ಹಿಡಿಯಲು, ತನ್ನ ಸಾಮರ್ಥಿಯಿಂದ ನೆಗಳಿಗಳ ಸಹ ಉವಕ ದಿಂದ ಹೊರಗೆಬರಲಿಕ್ಕೆ, ನೆಗಳೀಜನ್ಮ ಹೋಗಿ, ಅಪ್ಸರಸ್ತ್ರೀರೂಪ ಧರಿಸಿ ನಿಂತರು. ಅರ್ಜುನನ್ನ ಬೇಡಿಕೊಂಡರು. 'ನಾವು ಐದು ಮಂದಿ, ಒಬ್ಬ ಬ್ರಾಹ್ಮಣ ತಪಸ್ಸು ಮಾಡಿ ಒಣಗಿದ್ದ. ಆತನ ಕಂಡು ನಕ್ಕೆವು. ನಮಗೆ ನೆಗಳೀಜನ್ಮ ಬರಲೆಂದು ಶಾಪ ಕೊಟ್ಟ. ಪುನಃ ನಾವು ಬೇಡಿಕೊಳ್ಳಲಿಕ್ಕೆ, ಬಲಿಷ್ಠನ ಕೈಯಿಂದ ಹೊರಗೆ ಬರಲು ನೆಗಳೀಜನ್ಮ ಹೋಗಿ, ಅಪ್ಸರಸ್ತ್ರೀಯರಾಗಿರೆಂದು ವಿಶಾಪ ಕೊಟ್ಟಿದ್ದ. ಆ ಪ್ರಕಾರ ನೀನು ಬಲಿಷ್ಠನಾದ ಕಡೀಲಿ ನೆಗಳೀಜನ್ಮ ಹೋಯಿತು.' ಹೀಂಗಂತ ಅರ್ಜುನನ ಕೂಡ ಮಾತನಾಡಿ ಅಪ್ಸರಸ್ತ್ರೀಯರು ಸ್ವರ್ಗಕ್ಕೆ ಹೋದರು.

ಅಲ್ಲಿಂದ ಅರ್ಜುನ ಪ್ರಭಾಸಕ್ಷೇತ್ರಕ್ಕೆ ಹೋದನು. ವಾಸುದೇವನ ತಂಗೀ ಸುಭದ್ರಾನ್ನ, ದುರ್ಯೋಧನಂಗೆ ಕೊಡಥಾರೆಂದು ವಾರ್ತೆ ಕೇಳಿ, ಉಪಾಯದಿಂದ ತಾನು ಮದುವಿ ಮಾಡಿಕೊಳ್ಳಬೇಕೆಂದು, ತ್ರಿದಂಡಿಸನ್ಯಾಸಿ ವೇಷ ಧರಿಸಿ, ದ್ವಾರಾ-ವತಿಗೆ ಬಂದನು. ಸ್ವಾಮಿ ಶ್ರೀಕೃಷ್ಣ ಸರ್ವಜ್ಞ, ಸತ್ಯಭಾಮಾ ಸಹ ಪರಿಯಂಕದ ಮ್ಯಾಲೆ ಕುಳಿಥಾನೆ. ಒಮ್ಮಿಂದೊಮ್ಮಿಗೆ ನಗಹೊಕ್ಕನು. ಸತ್ಯಭಾಮಾ ತಾ ಬಲ್ಲಳೂ ಸರಿಯೆ, ಅರೀದವಳೋಪಾದಿ ಸ್ವಾಮಿ ನಕ್ಕ ಕಾರಣವೇನೆಂದು ಕೇಳಲಾಗಿ, 'ಅರ್ಜುನ ತ್ರಿದಂಡಿಸನ್ಯಾಸಿಯಾಗಿ ಬಂದಾನೆ. ಸುಭದ್ರಾನ್ನ ಕದ್ದುಕೊಂಡು ಹೋಗಬೇಕೆಂದು ಉದ್ಯುಕ್ತನಾಗ್ಯಾನೆ.' ಹೀಂಗಂತ ಸ್ವಾಮಿ ಎನಲಿಕ್ಕೆ, ಅರ್ಜುನನ್ನ ನೋಡಬೇಕೆಂದು ಶ್ರೀಕೃಷ್ಣ, ಸತ್ಯಭಾಮಾ ಕೂಡಿಕೊಂಡು ದಾರಿಗೂ ತಿರಿಚಿಲ್ಲದೆ, ರೈವತಪರ್ವತಕ್ಕೆ ಹೋದನು. ರೈವತಪರ್ವತ ಯಾದವರಿಗೆ ಕ್ರೀಡಾ-ಸ್ಥಾನ. ಅಂಥಾ ರೈವತಪರ್ವತಕ್ಕೆ ಒಂದು, ಅರ್ಜುನನ ಸಂಗಡೆ ಮಾತನಾಡಿದನು. 'ನಿನ್ನ ಅಭಿಪ್ರಾಯ ನನಗೆ ತಿಳಿದವೆ. ಸುಭದ್ರಾಗೆ ನಿನಗೆ ಪಾಣಿಗ್ರಹಣ ಆಗೋ ಹಾಂಗೆ ಮಾಡೇನು' ಎಂದು ಅರ್ಜುನನೆ ಸಮಾಧಾನ ಮಾಡಿ, ದಾರಿಗೂ ತಿಳೀ-ಗೊಡದೆ, ಸತ್ಯಭಾಮಾ ಸಮೇತನಾಗಿ ಶ್ರೀಕೃಷ್ಣ ದ್ವಾರಾವತಿಗೆ ಒಂದನು.

ಸ್ವಾಮಿ ಬಲರಾಮಗೆ ಹೇಳಿದ. 'ರೈವತಪರ್ವತಕ್ಕೆ ಒಬ್ಬ ಸನ್ಯಾಸಿ ಬಂದಾನೆ. ಆತನ್ನ ಎದುರುಗೊಂಡು ಕರತಾ' ಎನಲಿಕ್ಕೆ, ಬಲರಾಮ ಯಾದವರಿಂದ ಯುಕ್ತ ನಾಗಿ, ಸನ್ಯಾಸಿ ದರ್ಶನಕ್ಕೆ ಹೋಗಿ ನಮಸ್ಕಾರ ಮಾಡಲಿಕ್ಕೆ, ಸನ್ಯಾಸಿ ಬಲರಾಮಗೆ ಅಂಥಾನೆ. 'ನೀನು ಜ್ಯೇಷ್ಠ. ಸಾಕ್ಷಾತ್ ಶೇಷನ ಅವತಾರ. ನಾವು ಕಾಷಾಯ-ವಸ್ತ್ರ ಧರಿಸಿದೆವಂತ ದೊಡ್ಡವರಲ್ಲ.' ಹೀಂಗಂದ ಸನ್ಯಾಸಿ ಮಾತು ಕೇಳಿ, ಬಲರಾಮ ಬಹಳೇ ಉಬ್ಬಿ, ಸನ್ಯಾಸಿ ಸರ್ವಜ್ಞನಿದ್ದಾನೆ, ತನ್ನ ಸ್ವರೂಪ ತಿಳದನೆಂದು ಬಹಳ ಸಂತೋಷ ಉಳ್ಳವನಾಗಿ, ಚಾತುರ್ಮಾಸ್ಯಕ್ಕೆ ಕೂಡ್ರಸಬೇಕೆಂದು, ದ್ವಾರಾವತಿಗೆ ಕರಕೊಂಡು ಬಂದನು.

'ಸನ್ಯಾಸೀ ಸೇವಿ, ಕನ್ನಿಕೇರು ಮಾಡಬೇಕು. ನಮ್ಮ ಸೋದರತ್ತಿ ಕುಂತೀ-ದೇವಿಯೋಪಾದಿ, ಸುಭದ್ರಾನ್ನ ಸೇವಿ ಮಾಡಲು ಇಡಬೇಕು' ಎಂದು ಬಲರಾಮ ಆಲೋಚನಿ ಮಾಡಲಿಕ್ಕೆ, ಶ್ರೀಕೃಷ್ಣ ಅಂದ, 'ಅಣ್ಣ ಕನ್ನಿಕೇರು ಇದ್ದ ಸ್ಥಳದಲ್ಲಿ ಸನ್ಯಾಸಿ ಕೂಡ್ರಸಕೂಡದು. ಬೇರೆ ಒಂದು ಮಠದಲ್ಲಿ ಹೊರಗೆ ಕೂಡ್ರಸಬೇಕು. ಸನ್ಯಾಸಿ ಪ್ರಾಯದವನಿದ್ದಾನೆ, ಕೃಶನಾಗಿಲ್ಲ, ಘಟ್ಟಿಮುಟ್ಟಾಗಿದ್ದಾನೆ. ಮತ್ತೆ ಚಲುವ, ಚಪಲನಿದ್ದಾನೆ. ಇಂಥಾ ಸನ್ಯಾಸೀನ್ನ ಕನ್ಯಾಗಾರದಲ್ಲಿಡಬಾರದು' ಎಂದನು. 'ಕೃಷ್ಣ ನೀನು ಬಾಲಕನಿದ್ದೀಯ! ಯತಿಗಳ ನಿಂನ ಮಾಡಬಾರದು. ಮಾಡಿದ ಪಕ್ಷವೇ ಕುಲಕ್ಷಯವಾಗತದೆ! ಸನ್ಯಾಸಿಮ್ಯಾಲೆ ದೋಷಾರೋಪಣೆ ಮಾಡಬಾರದು. ಅನರ್ಥಕ್ಕೆ ಸಾಧನವಾಗ್ತದೆ. ಈ ಸನ್ಯಾಸಿ ಜ್ಞಾನಿ ಇದ್ದಾನೆ. ಪಾಪ ಪುಣ್ಯ ಬಲ್ಲ. ಪಾಪದಲ್ಲಿ ಮನಸ್ಸು ಇಡುವಾತನಲ್ಲ.' ಹೀಂಗಂತ ಬಲರಾಮ ಲೋಕನಾಥನ ಕೂಡ ಮಾತನಾಡಲಿಕ್ಕೆ, 'ನಾ ಚಿಕ್ಕವ ನನಗೆ ತಿಳಿದಷ್ಟು ಹೇಳಿದೆ. ನೀನು ಹಿರಿಯನಿದ್ದಿ, ನಿನ್ನ ಮನಸ್ಸಿಗೆ ಬಂದಂತೆ ಮಾಡು.' ಹೀಂಗಂತ ಸ್ವಾಮಿ ಮಾತನಾಡಿದನು. ನಂತರದಲ್ಲಿ ಸುಭದ್ರಾ ಕೂಡ ಶ್ರೀಕೃಷ್ಣ ಮಾತನಾಡಥಾನೆ. 'ಬಲರಾಮನ್ನ ಠಕ್ಕಿಸಲಿಕ್ಕೆ ಮಾತನಾಡಿದ್ದೀನಿ. ಈ ಸನ್ಯಾಸಿ ದೊಡ್ಡಾತ, ಯತೀಶ್ವರ. ಕಾಯ, ವಾಚ, ಮನಸಾ ಸನ್ಯಾಸೀ ಸೇವಿ ಬಹಳ ಮಾಡು. ಸೇವಿಗೆ ಬಹಳ ಸನ್ನದ್ಧಳಾಗಿರು. ಸನ್ಯಾಸೀ ಸೇವಿಗೆ ಲೇಶಮಾತ್ರ ಅಂತರ ಬೀಳಬ್ಯಾಡ.' ಹೀಂಗೆ ಏಕಾಂತದಲ್ಲಿ ತನ್ನ ತಂಗೀಗೆ ಹೇಳಿದನು. ಸ್ವಾಮೀ ಆಜ್ಞದಿಂದ, ಸುಭದ್ರಾ ಸನ್ಯಾಸೀ ಸೇವ ಬಹಳೇ ಮಾಡತಿಹೋಳು. ಅರ್ಜುನ ತನ್ನ ಸನ್ಯಾಸಿತನ ಲೋಕಕ್ಕೆ ತಿಳಸಬೇಕಾಗಿ, ಶಿಷ್ಯರನ್ನ ಸಂಪಾದಿಸಿಕೊಂಡು ವಿದ್ಯ ಹೇಳತಿಹ. ಸತ್ಕಥಿಗಳ ಹೇಳತಿಹ. ಅರ್ಜುನ ಕೃಷ್ಣನ ವಚನ ನಂಬಿ, ಸುಭದ್ರಾ ತನ್ನ ಹೆಂಡತೀ ಆದಾಳಿಂದು ಘಟ್ಯಾಗಿ ನಂಬಿಹ. ಕೃಷ್ಣ ಅರ್ಜುನನಿಂದ ಯೋಚಿತನಾಗಿಹ. ಈ ವರ್ತಮಾನ ಯಾದವರಿಗೆ ಅರಿಕಿಲ್ಲ. ಸುಭದ್ರಾನ್ನ ಅರ್ಜುನಗೆ ಕೊಡಬೇಕೆಂದು ವಸುದೇವ ದೇವಕಿ ಇವರಿಗೆ ಹೇಳಿಹ. ಸಾತ್ಯಕಿ ಅರ್ಜುನನ ಶಿಷ್ಯ, ತನ್ನ, ಗುರುಗಳ ಮಾತು ಹೊರಚೆಲ್ಲ-

ನೆಂಬೋದು ಬಲ್ಲನಾದಕಾರಣ, ಸಾತ್ಯಕಿಗೆ ಈ ವರ್ತಮಾನ ಹೇಳಿಹ. ಮಿಗಿಲಾದ ದಾರಿಗೂ ಅರಿಕಿಲ್ಲ.

ಬಲರಾಮನ್ನ ಅನುಸರಿಸಿ ಉದ್ಧವ, ಅಕ್ರೂರ, ಕೃತವರ್ಮ ಮೊದಲಾದವರಿಗೆಲ್ಲ, ಸುಭದ್ರಾನ್ನ ಅರ್ಜುನಗೆ ಕೊಡೋದು ಮನಸ್ಸಿದ್ದಿಲ್ಲ. ಕೃಷ್ಣನ ಅಭಿಪ್ರಾಯ ಬಲ್ಲವರು, ಅಸುರಾವೇಶದಿಂದ ಬಲರಾಮನ ಪಕ್ಷವಿಹೋರು. ಕೃಷ್ಣ ಸುಭದ್ರಾನ್ನ ಅರ್ಜುನಗೆ ಕೊಡೋದು ಭಾವ ಮಕ್ಕಳಿಗೆ ಹೇಳಿದ್ದಿಲ್ಲ. ಹೀಂಗಿರಲಿಕ್ಕೆ, ಪರ್ವಕಾಲ ಬಂತು. ವಸುದೇವ, ದೇವಕೀ, ಕೃಷ್ಣ, ಬಲರಾಮ ಹೀಂಗೆ ಸಮಸ್ತ ಯಾದವರೂ ಪಿಂಡೋದ್ಧಾರ ಕ್ಷೇತ್ರಕ್ಕೆ ಹೋದರು. ಸನ್ಯಾಸಿ ಸೀಮೋಲ್ಲಂಘನ ಮಾಡಬಾರದೆಂದು, ಸನ್ಯಾಸೀನ್ನ ಬಿಟ್ಟು, ಅವನ ಸೇವಿಗೆ ಸುಭದ್ರಾನ್ನ ಇಟ್ಟು ಹೋದರು. ಸನ್ಯಾಸೀ ಕೂಡ ದಾರೂ ಇಲ್ಲದ್ದು ಕಂಡು, ಸುಭದ್ರಾ ಮಾತನಾಡಥಾಳೆ. 'ಎಲ್ಯೆ ಯತೀಶ್ವರ, ನೀನು ಬಹು ದೇಶ ತಿರುಗಿ ಬಂದಿದ್ದಿ. ಬಹು ತೀರ್ಥಯಾತ್ರಿ ಮಾಡಿದ್ದಿ. ನಮ್ಮ ಪ್ರಿಯಕರ ಪಾಂಡವರನ್ನ ಕಂಡೀಯಾ? ನಮ್ಮ ಸೋದರತ್ತಿ ಕುಂತೀನ ಕಂಡಿದ್ಯ?' ಎನಲಿಕ್ಕೆ, ಸನ್ಯಾಸಿ 'ಸಮಸ್ತರನ್ನೂ ಕಂಡೀನಿ' ಎಂದ. ಹೀಂಗೆನಲಿಕ್ಕೆ, 'ನಿನ್ನ ವಚನ ಹುಸೀ ತೋರಥದೆ. ಅರ್ಜುನ ತೀರ್ಥಯಾತ್ರೀಗೆ ಹೋಗಿದ್ದಾನೆಂದು ಬ್ರಾಹ್ಮಣರ ಮುಖದಿಂದ ಕೇಳಿದ್ದೆ. ನೀನು ಅರ್ಜುನನ್ನ ಎಲ್ಲಿ ಕಂಡಿದ್ದೀ?' ಎನಲಿಕ್ಕೆ, 'ಅರ್ಜುನನ್ನ ಒಂದು ತೀರ್ಥದ ಬಳೀಲಿ ಕಂಡಿದ್ದೆ' ಎನಲಿಕ್ಕೆ, 'ದಾವ ತೀರ್ಥದಲ್ಲಿ ಕಂಡಿ ಹೇಳು?' ಎನಲಿಕ್ಕೆ, ಅರ್ಜುನ ಮುಗುಳುನಗೆ ನಗತ 'ಇಲ್ಲೀ ಕಂಡಿದ್ದೆ' ಎಂದು, ತ್ರಿದಂಡಿ ಸನ್ಯಾಸಿ ಮಾತನಾಡಲಿಕ್ಕೆ, ಪುನಃ 'ಎಲ್ಲಿ ಕಂಡಿದ್ದಿ?' ಎನಲಿಕ್ಕೆ, 'ಎಲೌ ಶೋಭನಾಂಗಿ ಉನ್ಮತ್ತಳಾಗಿದ್ದಿ. ನನ್ನ ಮಾತಿನ ಅಭಿಪ್ರಾಯ ತಿಳೀಲಿಲ್ಲ. ಇಷ್ಟೂ ತಿಳೀಲಿಲ್ಲೀ! ಅರ್ಜುನನೆಂಬಾತ ನಾನೇವೆ' ಎನಲಿಕ್ಕೆ, ಸುಭದ್ರಾ ನಾಚಿಕೆಯುಳ್ಳಾಕೆಯಾಗಿ, ಮಾತು ಬಿಟ್ಟುಕೊಟ್ಟು, ತನ್ನ ಮನೋಬಯಕೆ ಪೂರ್ಣವಾಯಿತೆಂದು, ಕಮಲಪೋಪಾದಿಯ ಕಣ್ಣುಗಳ ತಿರುವತ, ಮುಗುಳುನಗೆ ನಗತಿಹೋಳು.

ಅರ್ಜುನ ಕಾಮಾತುರನಾಗಿ ಮಾತನಾಡಿದನು. 'ನನಗೆ ನಿನಗೆ ಗಂಧರ್ವ-ವಿವಾಹವಾಗಿ ಅಂಗಸಂಗವಾಗಬೇಕು' ಎಂದನು. 'ವಸುದೇವ ನನ್ನ ನಿನಗೆ ಕೊಟ್ಟೀನೆಂದು ಹೇಳಿದ್ದಾನೆ. ನಿನಗೂ ಹೇಳಿದ್ದಾನಾಗಿದ್ದೀತು. ಕೃಷ್ಣನ ಉಲ್ಲಂಘನ ಯುಕ್ತವಲ್ಲ. ತಾಯಿತಂದೇರು, ಬಾಂಧವರು ಇಲ್ಲದೇ ವಿವಾಹ ಮಾಡಿಕೊಂಬೋ ಹಾಂಗೆ ಇಲ್ಲ. ಮಹಾ ಸಂಭ್ರಮದಿಂದ ವಿವಾಹವಾಗಬೇಕು. ನಮ್ಮ ತಂದೀತಾಯಿ ಕಾಲು ತೊಳದು, ವಿವಾಹ ಮಾಡಿಕೊಡಬೇಕು. ಧಾರೀ ಎರದು ಕೊಡಬೇಕು. ನಿಮ್ಮ ಬಳಗ, ನಮ್ಮ ಬಳಗ ವಿಳಿತವಾಗಿ ಪಾಣಿಗ್ರಹಣವಾಗಬೇಕು.' ಹೀಂಗಂತ

ಸುಭದ್ರಾ ಮಾತನಾಡಲು, ಅರ್ಜುನ ಕೃಷ್ಣನ್ನ ಸ್ಮರಿಸಿದನು. ಸ್ವಾಮಿ ಅರ್ಧ-ರಾತ್ರೀಲಿ ದಾರಿಗೂ ತಿಳೀಗೊಡದೆ ದ್ವಾರಾವತಿಗೆ ಬಂದನು. ಇನ್ನು ಅರ್ಜುನನ ತಾಯಿ ತಂದಿ ಬೇಕಲ್ಲ, ದೇವೇಂದ್ರನ ಸ್ಮರಿಸಲಿಕ್ಕೆ, ತನ್ನ ಮಗನ ಮದುವಿ ಎಂದು ತಿಳದು ಸಹಕುಟುಂಬ, ಸಿದ್ಧರು, ಚಾರಣರು, ಗಾಯಕರು, ವಾದ್ಯದವರ ಸಹ, ಅದೇ ಘಳಿಗಿಯಲ್ಲಿ ಅರ್ಧರಾತ್ರೀಲಿ ದ್ವಾರಾವತಿಗೆ ಬಂದನು. ನಾನಾ ವಾದ್ಯಗಳಿಂದ ಬಹಳ ಸಂಭ್ರಮದಿಂದ ಸುಭದ್ರಾ ಮದುವಿ ಆಯಿತು. ಯಾದವರನ್ನ ದಾರೂ ಗೆದ್ದವರಿಲ್ಲ. ಅವರನ್ನೆಲ್ಲ ಗೆದ್ದು ಹೋಗಬೇಕೆಂದು ಸ್ವಾಮಿ, ಅಸ್ತ್ರದಿಂದ ಪೂರ್ಣ ವಾದಂಥ ತನ್ನ ರಥ ಮುಂದಿಟ್ಟು, ಅದೇ ರಾತ್ರೀಲಿ ವಸುದೇವ ದೇವಕೀ ಕೂಡಿ-ಕೊಂಡು, ಪಿಂಡೋದ್ಧಾರ ಕ್ಷೇತ್ರಕ್ಕೆ ಬಂದನು.

ಕೃಷ್ಣ ರಾತ್ರೀಲಿ ದ್ವಾರಾವತಿಗೆ ಹೋಗಿದ್ದು, ಅರ್ಜುನಗೆ ಸುಭದ್ರಾನ್ನ ಮದುವಿ ಮಾಡಿಕೊಟ್ಟಿದ್ದು, ಬಲರಾಮು ಮೊದಲಾದವರಿಗೆ ತಿಳಿಲ್ಲ. ದೇವತಿಗಳಿಂದ ಸಹಿತ ದೇವೇಂದ್ರ, ಲಗ್ನ ತೀರಿಸಿಕೊಂಡು ಸ್ವರ್ಗಕ್ಕೆ ಹೋದ. ಅರ್ಜುನನು ಮನಿ ತುಂಬಿಸಕೋಬೇಕಲ್ಲ, ಶ್ರೀಕೃಷ್ಣ ಕೊಟ್ಟಂಥ ರಥದವ್ಯಾಲೆ ಸುಭದ್ರಾನ್ನ ಕೂಡ್ರಿಸಿ-ಕೊಂಡು, ಧನುರ್ಬಾಣಗಳ ಹಿಡಕೊಂಡು ಹೋಗಲಿಕ್ಕೆ, ದ್ವಾರಪಾಲಕರು ಕೇಳಿದರು. ತ್ರಿದಂಡಿ ಸನ್ಯಾಸಿ ಸುಭದ್ರಾನ್ನ ಕೊಂಡುಹೋಗಥಾನೆಂದು, ಮಾರ್ಗ ಅಡ್ಡಗಟ್ಟ-ಬೇಕೆಂದು ಉದ್ಯುಕ್ತರಾಗಲಿಕ್ಕೆ, ಅರ್ಜುನ ದೇವೇಂದ್ರ ಕೊಟ್ಟ ಕುಂಡಲಗಳಿಟ್ಟಾನೆ, ದಿವ್ಯ ಹಾರಗಳ ಹಾಕಿಕೊಂಡಾನೆ, ವಸ್ತ್ರಾಭರಣಗಳ ಧರಿಸ್ಯಾನೆ, ಮದಲಗಿತ್ತಿ ಕೂಡಿಕೊಂಡು ಹೋಗಥಾನೆ. ಹೋಗಲಿಕ್ಕೆ ಅಪ್ಪಣಿ ಇಲ್ಲವೆಂದು ಮಾರ್ಗ ಅಡ್ಡ-ಗಟ್ಟಿದರು. ಅರ್ಜುನ ತನ್ನ ಬಾಣಗಳಿಂದ ದಿಕ್ಕುಗಳನ್ನೆಲ್ಲ ಬೆಳಕು ಮಾಡತ, ನಾಲ್ಕು ಮೂಲಿಗಳಲ್ಲಿ ಬಾಣಗಳ ತುಂಬಿಹಾನೆ. ಒಬ್ಬರಿಗೂ ಗಾಯವಿಲ್ಲ. ಹೀಂಗೆ ವಿಚಿತ್ರ ಬಾಣಗಳ ಪ್ರಯೋಗ ಮಾಡಥಾನೆ. ಆ ವ್ಯಾಳ್ಯಾದಲ್ಲಿ ಸುಭದ್ರ ರಥ ನಡಸ್ತಾಳೆ. ಸಾರಥ್ಯಕರ್ಮ ಹೆಂಗಸು ತಾನು ಏನು ಬಲ್ಲಳೆಂದರೆ, ಚಿಕ್ಕತನದಲ್ಲಿ ಸಾರಥ್ಯಕರ್ಮ ಶ್ರೀಕೃಷ್ಣ ಕಲಿಸಿದ್ದ. ದೇವರಿಂದ ಶಿಕ್ಷಿತಳಾಗಿಹೋಳು. ಪರಮ ತೀವ್ರಗತಿಯಿಂದ, ಸುಭದ್ರಾ ರಥ ನಡಸ್ತಾಳೆ. ಗಂಡಗೆ ಬೇಡಿಕೋತಿಹೋಳು. 'ನನ್ನ ಪಾಣಿಗ್ರಹಣ-ಕಾಲದಲ್ಲಿ ಪ್ರಾಣಿಮಾತ್ರಕ್ಕೂ ದುಃಖವಾಗಬಾರದು, ಗಾಯವಾಗಬಾರದು. ದಾರನ್ನೂ ಕೊಲ್ಲಬ್ಯಾಡ' ಎಂದು ಪುನಃಪುನಃ ಬೇಡಿಕೋತಿಹೋಳು. ಅರ್ಜುನ ದ್ರೋಣಾಚಾರ್ಯರ ಶಿಕ್ಷಾದಿಂದ ಕಲಿತಂಥ ಬಾಣಗಳಿಂದ, ಸಕಲರನ್ನೂ ಓಡಿಸಿಬಿಟ್ಟ.

ದ್ವಾರಾವತಿಯಿಂದ ಅರ್ಜುನ ಹೊರಗೆ ಬರಲಿಕ್ಕೆ, ವಿಪೃಥನೆಂಬ ಯಾದವ ಬಲದಿಂದ ಯುಕ್ತನಾಗಿ ಬಂದ. ಬಲರಾಮು ಪಟ್ಟಣ ಕಾಯಲಿಕ್ಕೆ ವಿಪೃಥನ್ನ ಇಟ್ಟು ಹೋಗಿದ್ದ. ಕೃಷ್ಣನ ಅಜ್ಞಾ ಇದ್ದರೂ, ಬಲಡಾಮು ತನಗೆ ತಪ್ಪು ಹೊರಿಸ್ಯಾನು ಎಂದು, ಹುಸಿಗಾರ ಕೈಲಿ ತನ್ನ ಸೇನಾಬಲನೆಲ್ಲ ಅರ್ಜುನಗೆ ಸುತ್ತು-

ಗಟ್ಟಿಹ. ಅರ್ಜುನನ್ನ ನಿರ್ಬಂಧ ಮಾಡಬಾರದೆಂದು ಕೃಷ್ಣನ ಆಜ್ಞೆ ಇಹೋದು. ವಿಪೃಥ ತಾ ದಾರೆಂದರೆ ನಲವತ್ತೊಂಭತ್ತು ಮರುತ್ತರೊಳಗೆ ಸೌಮ್ಯನೆಂಬ ಮರುತ್ತನು. ಕೃಷ್ಣನ ಆಜ್ಞೆಕ್ಕೆ ಅನುಕೂಲನಲ್ಲ. ಅರ್ಜುನ ವಿಪೃಥನ ಸರ್ವಾಂಗಕ್ಕೆ ಬಾಣಗಳ ಪೋಣಿಸಿಬಿಟ್ಟ. ಆದರೂ ಲೇಶಮಾತ್ರ ಗಾಯವಿಲ್ಲ, ಕೆತ್ತಿದರೆ ವ್ಯಥಿ ಆಗಲಿಕ್ಕಿಲ್ಲ, ಅಂಥಾ ಹಸ್ತಲಾಘವದಿಂದ ಅರ್ಜುನ ಬಾಣಗಳ ಪೋಣಿಸಿಹ. ವಿಪೃಥನ ರಥ ಛೇದಿಸಿ, ನಿರಾಯುಧನ್ನ ಮಾಡಿದ. ದೇಹಕ್ಕೆ ಬಾಧಿ ಆಗಿದ್ದಿಲ್ಲ. ಆದ್ದರಿಂದ ಅರ್ಜುನಗೆ ಪ್ರೀತನಾಗಿ, ದೂರದಿಂದಲೇ ಓಡಿಹೋದರೆ ಬಲರಾಮ ತಪ್ಪು ಹೊರಿಸ್ಯಾನೆಂದು, ಅರ್ಜುನನ ಸಂಗಡ ಕಿವಿ ಮಾತನಾಡಿ, ವಿಪೃಥ ಬಲರಾಮನ ಸವೀಪಕ್ಕೆ ಹೋಗಿ, ತನ್ನ ಅವಸ್ಥೀನೆಲ್ಲ ಹೇಳಿದನು. ಬಲರಾಮ ಸಿಟ್ಟೀಲಿ ಅದೇ ಕ್ಷಣದಲ್ಲಿ ದ್ವಾರಾವತಿಗೆ ಬಂದು, ವಿಮನಸ್ಕನಾಗಿ ಮಾರಿ ತಗ್ಗಿಸಿ ಕುಳಿತನು. ಕೃಷ್ಣನು ಬಂದು, ಅರ್ಜುನನ ಪರಾಕ್ರಮ ಕೇಳಿ 'ಸುಭದ್ರಾ ಕೊಂಡು ಕ್ಷೇಮದಿಂದ ಹೋದನ! ದಾರೂ ನಿವಾರಿಸಲಿಲ್ಲಪೆ?' ಎಂದು ಧರ್ಮಸಭಾದೊಳಗೆ ಕೇಳಿ, ಬಹಳ ಖಿನ್ನನಾಗಿ, ಬಲರಾಮನಕಿಂತ ಹೆಚ್ಚು ಚಿಂತಿ ಹಚ್ಚಿಕೊಂಡು ಕುಳಿತನು.

ಕೃಷ್ಣಬಲರಾಮರು ಬಹಳ ಖಿನ್ನರಾಗಿ ಕುಳಿಥಾರೆ. ಆಗ ಯಾದವರು ಮಾತನಾಡಿದರು. 'ಅರ್ಜುನನ ಸೋಲಿಸಿ, ಸುಭದ್ರಾ ಕೊಂಡುಬರೋದಕ್ಕೆ ಚಿಂತಿ ಏನು ಕಾರಣ ಮಾಡಥೀರಿ! ನಮಗೆ ಅಪ್ಪಣಿ ಆದರೆ, ಸುಭದ್ರಾನ್ನ ಕೊಂಡುಬಂದೇವು' ಎನಲಿಕ್ಕೆ, ಬಲರಾಮ ಮಾತನಾಡಿದ. 'ಇನ್ನುವ್ಯಾಲೆ ನನ್ನ ಕೇಳಬ್ಯಾಡಿ. ಸ್ವಾಮೀ ಆಜ್ಞೆದ ಹೊರ್ತು, ನಾ ಮಾಡಿದ್ದಕ್ಕೆ ಈ ಅವಸ್ಥಿ ಆಯಿತು. ಇಷ್ಟು ಫಲ ಉಂಡೆ. ನನ್ನ ಬುದ್ಧಿ ಭ್ರಾಮಕವಾಗೇದೆ. ಏನು ಕೇಳೋದು ಶ್ರೀಕೃಷ್ಣನ ಕೇಳರಿ' ಎನಲಿಕ್ಕೆ, ಸಮಸ್ತರೂ ಶ್ರೀಕೃಷ್ಣನ ಸವೀಪಕ್ಕೆ ಬಂದರು. ಕೃಷ್ಣ ಮಾತನಾಡಥಾನೆ. 'ಕಪಟಸನ್ಯಾಸಿ ಎಂದು ಅಣ್ಣಗೆ ಮೊದಲೇ ಹೇಳಿದ್ದೆ. ಅಣ್ಣ ನನ್ನ ಮಾತು ಕೇಳಲಿಲ್ಲ. ಅಣ್ಣನ ಆಜ್ಞೆ ಮೀರಲಿಕ್ಕೆ ವಶವಲ್ಲ ಎಂದು ಸುಮ್ಮಗಿದ್ದೆ. ನಾವೆಲ್ಲ ತೀರ್ಥಯಾತ್ರಿಗೆ ಹೋಗಿರಲಾಗಿ, ದಾರೂ ಇಲ್ಲದ ವ್ಯಾಳ್ಯಾದಲ್ಲಿ, ಸುಭದ್ರಾನ್ನ ಅರ್ಜುನ ಕೊಂಡುಹೋದ. ನಾವು ಇದ್ದ ವ್ಯಾಳ್ಯಾದಲ್ಲಿ ಅರ್ಜುನ ಕೊಂಡುಹೋಗಿದ್ದರೆ, ನಮಗೆ ದೋಷ ಬರತಿತ್ತು. ನಾವು ಇಲ್ಲದ ವ್ಯಾಳ್ಯಾದಲ್ಲಿ ಕೊಂಡುಹೋಗ್ಯಾನೆ. ನಮ್ಮ ವ್ಯಾಲೆ ಶಬ್ದ ಇಲ್ಲ. ಕನ್ನಿಕಿ ಬೆಳದಿದ್ದಳು. ನಾವೇ ಹುಡುಕಿ ಮದುವಿ ಮಾಡಬೇಕಿತ್ತು. ಕಾರ್ಯವಾದರೂ ಮೀರಿಹೋಯಿತು. ಅರ್ಜುನ ಕೊಂಡುಹೋದನೆಂದು ಕೇಳಥೀವಿ. ಅರ್ಜುನ ಶೂರ, ಮಹಾ ಪರಾಕ್ರಮಿ, ಮಹಾ ವೀರ, ಆತನ ಸದೃಶ ದಾರೂ ಇಲ್ಲ. ಹೀನಕುಲವೆಂದೀರ್ಯಾ, ಸಮಸ್ತ ರಾಯರು ಕುರುಕುಲದವರ ಕೂಡ ನೆಂಟತನ ಮಾಡ್ಯಾರೆ. ನೆಂಟತನಕ್ಕೆ ಯೋಗ್ಯರು. ನೂತನ ನೆಂಟತನವೆಂದೀರ್ಯಾ, ಪರಂಪರ ಕುರುಕುಲದವರಿಗೆ, ನಮಗೆ ನೆಂಟತನ

ನಡೀತಾ ಬಂದದೆ. ದೂರವಿಲ್ಲ, ನಮ್ಮ ಸೋದರತ್ತಿ ಕುಂತೀ ಮುಡ. ಅದಲ್ಲದೇ ಸಾಕ್ಷಾತ್ ವೇದವ್ಯಾಸನ ಮೊಮ್ಮಗ. ನಿರ್ಬಲನಲ್ಲ, ಬಲವೀರ್ಯ ಉಳ್ಳಾತ, ಗುಣಾಧಿಕ. ಬೀಗ ಸದೃಶವಲ್ಲವೆಂದೀರ್ಯಾ, ತ್ರಿಲೋಕಪತಿ ದೇವೇಂದ್ರ ನಮಗೆ ಬೀಗನಾಗ್ಯಾನೆ. ಸುರಪತಿ ಕೂಡ ನಮಗೆ ಬೀಗತನವಾಯಿತು. ಇಂಥಾ ವರಕ್ಕೆ ನಾವಾಗಿ ಕನ್ಯಾ ಕೊಡಬೇಕಾಗಿತ್ತು. ತಾನೇ ಕೊಂಡುಹೋದ ಅಷ್ಟಾಗಿ ಬೆನ್ನಟ್ಟಿ ಹೋಗಿ ಸುಭದ್ರಾನ್ನ ಕೊಂಡುಬಾಹೋದಕ್ಕೆ, ಅರ್ಜುನ ಶೂರನಿದ್ದಾನೆ. ಬಾಣಗಳಿಂದ ಸೋಲಿಸಿದ ಪಕ್ಷವೇ, ಯಾದವರು ಸೋತರೆಂದು ಅಪಕೀರ್ತಿ ಬರತದೆ. ಇಷ್ಟೂ ಮೀರಿ ಯಾದವರು ನಾವು ಸೋಲದಿದ್ದರೆ, ನಮ್ಮ ಪರಾಕ್ರಮದಿಂದ ಅರ್ಜುನನ್ನ ಸೋಲಿಸಿ, ಸುಭದ್ರಾನ್ನ ಕೊಂಡುಬಂದರೆ, ಕನ್ನಿಕೇನ್ನ ದಾರೂ ಪಾಣಿ-ಗ್ರಹಣ ಮಾಡದೇಹೋದಾರು. ಕಾಶೀರಾಯನ ಮಗಳು ಅಂಬಾ ಅವಸ್ಥಿ ಆದೀತು. ನನಗೆ ತಿಳಿದಷ್ಟು ಹೇಳಿದೆ. ಇನ್ನು ನಿಮಗೆ ಸರಿಬಂಧಾಂಗೆ ಮಾಡಿ' ಎನಲಿಕ್ಕೆ, ಕೃಷ್ಣನ ಅಭಿಪ್ರಾಯ ತಿಳದು, ಯಾದವರೆಲ್ಲ ಸ್ವಾಮೀ ಅನುಸರಿಸಿ ಇರಬೇಕೆಂದು ಸುಮ್ಮಗಾದರು. ಅರ್ಜುನನಮ್ಯಾಲೆ ಉದ್ವೇಗ ಉಳ್ಳವರಾಗಲಿಲ್ಲ.

ಕೃಷ್ಣನ ರಥದಮ್ಯಾಲೆ ದಾರು ಕುಳಿತಾನು, ಅವರಿಗೆ ಸರ್ವ ಜಗತ್ತು ಗೆಲ್ಲೋ ಸಾಮರ್ಥಿ ಬರತದೆ. ರಥದ ಮಹಿಮಿ ಇಂಥಾದ್ದು. ಅಂಥಾ ಕೃಷ್ಣನ ರಥ ಏರಿಕೊಂಡು ಸುಭದ್ರಾನ್ನ ಕೊಂಡು, ಅರ್ಜುನ ಇಂದ್ರಪ್ರಸ್ಥಕ್ಕೆ ಬಂದನು. ಅರ್ಜುನ ತೀರ್ಥಯಾತ್ರಿ ಮಾಡಿಕೊಂಡು ಬಂದನೆಂದು ಧರ್ಮರಾಯ ಎದುರು-ಗೊಂಡು ಕರಕೊಂಡುಹೋಗಲಿಕ್ಕೆ, ಅರ್ಜುನ ತನ್ನ ವೃತ್ತಾಂತ, ನಾಗಕನ್ನಿಕೆಯಲ್ಲಿ ಇರಾವಂತ ಮಗ ಹುಟ್ಟಿದ್ದು, ಪಾಂಡ್ಯರಾಯನಲ್ಲಿ ಹೋಗಿ ಬಬ್ರುವಾಹನನೆಂಬ ಮಗನ್ನ ಹಡದು, ಐದು ನೆಗಳಿಗಳನ್ನ ಉದ್ಧಾರ ಮಾಡಿದ್ದು, ತ್ರಿದಂಡಿಸನ್ಯಾಸಿ ಆಗಿ ದ್ವಾರಾವತಿಗೆ ಹೋಗಿ, ಸುಭದ್ರಾ ಮದುವಿ ಮಾಡಿಕೊಂಡು ಬಂದದ್ದು ಆದ್ಯಂತ ವರ್ತಮಾನ, ತನ್ನ ಅಣ್ಣತಮ್ಮಂದರ ಮುಂದೆ ಹೇಳಿದನು.

ಇತ್ತಕಡೀಲಿ ಕೃಷ್ಣ ಬಲರಾಮಗೆ ಅಂಥಾನೆ 'ಅಣ್ಣ ಸುಭದ್ರಾನ್ನ ಅರ್ಜುನ ಕೊಂಡುಹೋದ. ಮೀರಿಹೋದ ಕೆಲಸಕ್ಕೆ ಇನ್ನುಮ್ಯಾಲೆ ವೈರತ್ವ ಹೆಚ್ಚಿಸಬಾರದು. ನಮ್ಮ ತಂಗೀ ಮದುವಿ ಸಂಭ್ರಮದಿಂದ ಮಾಡಬೇಕು. ಬೀಗರಿಗೆ ವಿಹಿತ ಉಪಚಾರ, ಕನ್ನಿಕೇಗೆ ಆಭರಣ ಇಟ್ಟು, ವರದಕ್ಷಿಣಿ ಕೊಟ್ಟು, ಅರ್ಥಿಯಿಂದ ಮದುವಿ ಮಾಡಬೇಕು.' ಹೀಂಗಂತ ಅಣ್ಣನ ಕೂಡ ಮಾತನಾಡಿ, ಬಂಡಿಗಳ ಮ್ಯಾಲೆ ರತ್ನಗಳ ಹೇರಿ, ನೂತನ ಪ್ರಾಯವುಳ್ಳ ದಾಸೇರು, ನಾನಾ ಆಭರಣಗಳು, ಆನಿ ಕುದರಿಗಳು, ದಿವ್ಯ ವಸ್ತ್ರಗಳು, ಹೇರಿಕೊಂಡು ಇಂದ್ರಪ್ರಸ್ಥಕ್ಕೆ ಬಂದು, ತಾನು ಚಿಕ್ಕಾತನೆಂದು, ಅಣ್ಣ ಬಲರಾಮನ ಕೈಯ ಅರ್ಜುನಗೆ ವಸ್ತ್ರಾಭರಣಗಳ ಕೊಡಿಸಿದನು. ತಂಗೀ ನಿಮಿತ್ತ ಏನೇನು ಆಭರಣಗಳ ತಂದಿದ್ದ ಅವನ್ನೆಲ್ಲ

ದ್ರೌಪದೀ ಹಿರಿಯಳೆಂದು ಅಣ್ಣನ ಕೈಲಿ ಕೊಡಿಸಿದನು. ತನ್ನ ತಂಗೀ ಸುಭದ್ರಾಗೆ ಯಥೇಷ್ಟ ರತ್ನಾಭರಣಗಳು, ದಿವ್ಯ ವಸ್ತ್ರಗಳನ್ನ ಕೊಡಿಸಿದನು. ಬಹಳ ಉತ್ಸಾಹದಿಂದ ಕೆಲವು ದಿವಸ ಇಂದ್ರಪ್ರಸ್ಥದಲ್ಲಿದ್ದು, ಯಾದವರ ಸಹಿತನಾಗಿ ದ್ವಾರಾವತಿಗೆ ಬಂದನು. ಕೆಲವು ದಿವಸ ದ್ವಾರಾವತಿಯಲ್ಲಿದ್ದು, ಶ್ರೀಕೃಷ್ಣ ಪುನಃ ಇಂದ್ರಪ್ರಸ್ಥಕ್ಕೆ ಒಂದನು. ಬಲರಾಮ ದ್ವಾರಾವತೀಲೆ ನಿಂತನು. ಶ್ರೀಕೃಷ್ಣ ಸತ್ಯಭಾಮಾ ಸಮೇತ ಬಹು ವರುಷ ಇಂದ್ರಪ್ರಸ್ಥದಲ್ಲಿದ್ದನು. ಕೃಷ್ಣ ಎಷ್ಟು ದಿವಸ ಇದ್ದರೂ ಪಾಂಡವರಿಗೆ ಬ್ಯಾಸರಿಕೆ ಇಲ್ಲ. ಒಂದೇ ಕಡಿ ಬಹು ದಿವಸ ಇದ್ದರೆ ಬ್ಯಾಸರಿಕೆ ಆಗತದೆ. ಆದರೆ ಹಾಂಗೆ ಸ್ನೇಹ ಕೊರತಿ ಆಗಲಿಲ್ಲ. ಪ್ರತಿ ವರುಷದಲ್ಲಿ ಅಧಿಕಾಧಿಕ ಸ್ನೇಹ ಉಳ್ಳವರಾಗಿ, ಪಾಂಡವರು ಶ್ರೀಕೃಷ್ಣನಲ್ಲಿ ಅತಿಶಯ ಭಕ್ತಿಯಿಂದ ಇಹೋರು.

ಹೀಂಗೆ ಶ್ರೀಕೃಷ್ಣ, ಪಾಂಡವರು ಕೂಡಿ ಇರಲಿಕ್ಕೆ, ಪಾಂಡವರು ಐದು ಮಂದಿ ದೆಸಿಯಿಂದ, ದ್ರೌಪದೀಯಲ್ಲಿ ಐದು ಮಂದಿ ಮಕ್ಕಳಾದರು. ಇವರು ಗುಣಾಢ್ಯರು, ಜ್ಞಾನಭಕ್ತಿವೈರಾಗ್ಯಸಂಪನ್ನರು. ಈ ಐದು ಮಂದಿ ಮಕ್ಕಳಲ್ಲಿ ಗಂಧರ್ವರ ಆವೇಶವದೆ. ಅವರ ಹೆಸರೇನೆಂದರೆ ಪ್ರತಿವಿಂದ್ಯ, ಶ್ರುತಸೋಮ, ಶ್ರುತಾಖ್ಯಕೀರ್ತಿ, ಶ್ರುತಾನೀಕ, ಶ್ರುತಕೀರ್ತಿಯ. ಈ ಐದು ಮಂದಿಯೂ ಪೂರ್ವದಲ್ಲಿ ವಿಶ್ವೇದೇವತೆಗಳು.* ಇನ್ನು ಸುಭದ್ರಾ ಹೊಟ್ಟೀಲಿ, ಚಂದ್ರನ ಮಗ ಬುಧನ ಅಂಶದಿಂದ ಅಭಿಮನ್ಯು ಹುಟ್ಟಿದನು. ಅಭಿಮನ್ಯುವಿನಲ್ಲಿ ಯಮ, ಮುಖ್ಯಪ್ರಾಣ, ದೇವೇಂದ್ರ, ಅಶ್ವಿನೀದೇವತೆಗಳ ಆವೇಶವದೆ ಮತ್ತು ಶ್ರೀಕೃಷ್ಣನ ವಿಶೇಷ ಸನ್ನಿಧಾನವದೆ. ಹೀಂಗೆ ಪಾಂಡವರಿಗೆ ಅಭಿಮನ್ಯು ಸಹವಾಗಿ, ಏರು ಮಂದಿ ಮಕ್ಕಳು ದೊಡ್ಡ ಪರಾಕ್ರಮಿಗಳು, ಮಹಾ ಚಲುವರು, ವಿಷ್ಣುಭಕ್ತರು, ಜ್ಞಾನಭಕ್ತಿವೈರಾಗ್ಯ ಉಳ್ಳವರು. ಇಂಥಾ ಮಕ್ಕಳನ್ನ ಕಂಡು, ಪಾಂಡವರು ಬಹಳೀ ಸಂತೋಷ ಉಳ್ಳವರಾದರು. ಅಭಿಮನ್ಯುನ ಬಹಳೀ ಲಾಲಿಸ್ತಿಹೋರು.

ಹೀಂಗೆ ಇರಲಿಕ್ಕೆ, ವಸಂತಕಾಲ ಬಹಳ ಉಷ್ಣ ಮನಿಯೊಳಗೆ ಆಗತದೆಂದು, ಯಮುನಾತೀರದಲ್ಲಿ ಖಾಂಡವವನವಿತ್ತು, ಸತ್ಕಾಲವೆಂದು ಕೃಷ್ಣ ಸತ್ಯಭಾಮಾ ಕೂಡಿಕೊಂಡು, ಅರ್ಜುನ ಸುಭದ್ರಾ ಕೂಡಿಕೊಂಡು, ಈ ಪ್ರಕಾರ ಕೃಷ್ಣ-ಅರ್ಜುನರು ಛತ್ರ, ಚಾಮರ, ಚತುರಂಗಸೇನಿಯಿಂದ ಯುಕ್ತರಾಗಿ, ಖಾಂಡವವನಕ್ಕೆ ಕ್ರೀಡಾದಿಗೋಸ್ಕರ ಹೋದರು. ಗಂಧರ್ವರು ಗಾಯನ ಮಾಡಥಾರೆ. ಮುನಿಗಳು ಸ್ತೋತ್ರ ಮಾಡತಿಹೋರು. ಕೃಷ್ಣಾರ್ಜುನರು ತಂತಮ್ಮ ಹೆಂಡಂದ

* ಧರ್ಮರಾಯನಲ್ಲಿ ಪ್ರತಿವಿಂದ್ಯನೂ, ಭೀಮಸೇನನಲ್ಲಿ ಶ್ರುತಸೋಮನೂ, ಅರ್ಜುನನಲ್ಲಿ ಶ್ರುತಾಖ್ಯಕೀರ್ತಿಯೂ, ನಕುಲನಲ್ಲಿ ಶ್ರುತಾನೀಕನೂ, ಸಹದೇವನಲ್ಲಿ ಶ್ರುತಕೀರ್ತಿಯನೂ ಹುಟ್ಟಿದರು. ಇವರಲ್ಲಿ ಕ್ರಮವಾಗಿ ಚಿತ್ರರಥ, ಅಭಿತಾಮ್ರ, ಕಿಶೋರ, ಗೋಪಾಲ, ಬಲ ಎಂಬ ಗಂಧರ್ವರುಗಳ ಆವೇಶವಿದೆ.

ರಿಂದ ಯುಕ್ತರಾಗಿ, ವಸ್ತ್ರಗೃಹದಲ್ಲಿ ಕ್ರೀಡಿ ಮಾಡತಿಹೋರು. ಎಳೇ ಎಲಿಗಳಿಂದ ವನವೂಲ ಬಹಳ ರಮ್ಯವಾಗಿತ್ತು. ಸುಳಿಗಾಳಿಯಿಂದ ಪರಿಮಳ ವಾಸನಿ ಬರತಿಹೋದು. ವನದ ಸಮೀಪದಲ್ಲಿ ಯಮುನಾನದಿ ಹರೀತಿಹೋದು. ಹೀಂಗೆ ಹನ್ನೆರಡು ಯೋಜನ ಖಾಂಡವವನವಿತ್ತು. ಅಲ್ಲಿ ಅಗ್ನಿ, ಬ್ರಾಹ್ಮಣವೇಷ ಧರಿಸಿಕೊಂಡು, ಅನ್ನಾರ್ಥಿಯಾಗಿ ಕೃಷ್ಣಾರ್ಜುನರ ಬಳೀಲಿ ಬಂದು, ಅನ್ನ ಕೊಡಬೇಕೆಂದು ಬೇಡಿಕೊಂಡನು. ಚತುರ್ವಿಧಾನ್ನ ಭೋಜನ ಮಾಡು, ಕೊಟ್ಟೀನಂತ ಸ್ವಾಮಿ ಅನಲಿಕ್ಕೆ, "ನನಗೆ ಬ್ರಾಹ್ಮಣರ ಆಹಾರವಲ್ಲ. ನಾನು ಅಗ್ನಿ ಇದ್ದೀನಿ. ನನಗೆ ಅಜೀರ್ಣರೋಗೋಪದ್ರವವದೆ. ಈ ಖಾಂಡವವನದಲ್ಲಿ ಗಿಡಮೂಲಿಕೆಗಳು ಬಹಳೇ ಅವೆ. ಅದರ ರಸಪಾನದಿಂದ ರೋಗ ಪರಿಹಾರವಾದೀತು. ನನಗೆ ರೋಗ ಏನುಕಾರಣ ಪ್ರಾಪ್ತವಾಯಿತೆಂದರೆ, ದೇವತಿಗಳ ಕೂಡ ಅಹಂಕಾರ ಮಾಡಿದ್ದೆ. ನನ್ನಿಂದ ದೇವತಿಗಳಿಗೆ, ಆಹುತಿ ಮುಟ್ಟತದೆ. ನಾನು ದೇವತಿಗಳಿಗೆ ಮುಖ. ನನ್ನ ಕಷ್ಟ ಬಹಳ. ನನಗೆ ಸಂಬಳ ಹೆಚ್ಚಿಗಿ ಒಂದು ಆಹುತಿ ಕೊಡಿರೆಂದು ಬೇಡಿಕೊಳ್ಳಲಾಗಿ, ನನ್ನ ಗರ್ವ ದೇವತಿಗಳು ತಿಳಿದರು. ಒಂದು ಆಹುತಿಯಿಂದ ಪ್ರೀತನಾಗಿರಲಿಲ್ಲ. ಇದೂ ಸೇರಿ ಪ್ರಯಾಜ ಅನುಯಾಜ ಎಂಬ ಎರಡು, ಒಟ್ಟು ಮೂರು ಆಹುತಿ ಕೊಟ್ಟರು. 'ನಿನಗೆ ಎರಡು ಆಹುತಿ ದಕ್ಕಬ್ಯಾಡ. ಜೀರ್ಣವಾಗಬ್ಯಾಡ. ನಿನ್ನ ಬಲ ಹ್ರಾಸವಾಗಲಿ' ಎಂದು ಶಾಪ ಕೊಟ್ಟರು. ಒಂದು ಆಹುತಿದಾನದಿಂದ ಪ್ರೀತನಾಗಿರಲಿಲ್ಲ. ಆಹುತಿ ಸಾಲದ ಕಾರಣ ಅರೇದೆ ಬೇಡಿಕೊಂಡೆ, ಅವದಾನ ಕೊಟ್ಟರು. ಶಾಪಾನೂ ಕೊಟ್ಟರು. ಅನಂತರ ನನ್ನ ಬಲ ಪರಿಪೂರ್ಣವಾಗಬೇಕಾಗಿ, ಜಗತ್ತಿಗೇ ಗುರುವಾದಂಥ ಬ್ರಹ್ಮರಾಯನ ಸಮೀಪಕ್ಕೆ ಹೋಗಿ ನನ್ನ ವೃತ್ತಾಂತವನ್ನೆಲ್ಲ ಹೇಳಿಕೊಳ್ಳಲಾಗಿ. ಖಾಂಡವವನ ಸುಟ್ಟರೆ ಬಲ ಪರಿಪೂರ್ತಿ ಆದೀತೆಂದನು. ಬ್ರಹ್ಮದೇವರ ಆಜ್ಞದಿಂದ, ಬಲ ಪರಿಪೂರ್ತಿ ಆಗಬೇಕಾಗಿ ಬಹು ಕಾಲ ಈ ವನ ಸುಡಲಿಕ್ಕೆ ಬಂದೆನು. ದೇವೇಂದ್ರ ತನ್ನ ವನವೆಂದು ವಿಘ್ನ ಆಚರಿಸಥಾನೆ." ಈ ಪ್ರಕಾರ ಅದೃಶ್ಯ ಹೇಳಿ ಇನ್ನು ತನ್ನ ದೃಶ್ಯ ಹೇಳಥಾನೆ.

"ಶ್ವೇತರಾಯನೆಂಬ ಚಕ್ರವರ್ತಿ, ಯಜ್ಞದಲ್ಲಿ ದೀಕ್ಷ ಕಟ್ಟಿಕೊಂಡು, ಬಹು ಕಾಲ ಯಜ್ಞ ಮಾಡತಿಹ. ಋತ್ವಿಜರು, ಅಧ್ವರ್ಯು, ಹೋತ, ಉದ್ಗಾತ ಇವರೆಲ್ಲರೂ ತಮ್ಮ ಹೆಂಡಿರ ಮಾರಿ ಕಾಣದೆ, ಅಗ್ನಿಹೊಗೆಯಿಂದ ಬಹಳ ಸಂತಾಪಯುಕ್ತ ಮನಸ್ಸುಳ್ಳವರಾಗಿಹೋರು. ಹೋಗಲಿಕ್ಕೆ ಅಪ್ಪಣಿ ಕೊಡ. ಹೀಂಗೆ ಯಜ್ಞ ಮಾಡಿ, ಬ್ರಾಹ್ಮಣರು ಬ್ಯಾಸತ್ತುಹೋದರು. ಯಜ್ಞ ನಿಂತಿತು. ಯಜ್ಞಕ್ಕೆ ಒಬ್ಬಾನೊಬ್ಬ ಬ್ರಾಹ್ಮಣ ಬರಲಿಲ್ಲ. 'ನಾನಾದರೂ ದೀಕ್ಷ ಉಳ್ಳಾತನಾಗಿದ್ದೀನಿ, ಏನು ಉಪಾಯ ಮಾಡಬೇಕು' ಎಂದು ಮಹಾರುದ್ರನ ಕುರಿತು ತಪಸ್ಸು ಮಾಡಲಾಗಿ, ಮಹಾರುದ್ರ ಹೇಳಿಕೊಟ್ಟ, 'ಅಗ್ನಿಯಲ್ಲಿ ತುಪ್ಪ ಹಾಕತಾ

ಬಾ' ಎಂತ. ಶ್ವೇತರಾಯಗೆ ಮುಂತ್ರ ಬಾರದು. ನನ್ನಲ್ಲಿ ಮನಬಂದಂತೆ ತುಪ್ಪ ಹೋಮಿಸಲಾಗಿ, ನನಗೆ ಅಜೀರ್ಣವಾಯಿತ್ತು. ಅಮುಂತ್ರಹೋಮದಿಂದ ನನಗೆ ಉಪದ್ರವ ಆಗೇದೆ. ಆದಕಾರಣ ಖಾಂಡವವನ ದಹನ ಮಾಡಬೇಕಂತ ಮಾಡಿದರೆ, ದೇವೇಂದ್ರ ವಿಘ್ನ ಆಚರಿಸಥಾನೆ. ನನ್ನ ಉಪದ್ರವ ಶಾಂತ ಮಾಡು. ಖಾಂಡವವನ ದಹನ ಮಾಡಿಸು" ಎಂದು ಅಗ್ನಿ ಬೇಡಿಕೊಳ್ಳಲಾಗಿ, ದೇವೇಂದ್ರನ ಗೆಳ್ಳೋದ-ಕ್ಕೋಸ್ಕರ ಅಗ್ನೀನ್ನ ಅರ್ಜುನ ರಥ, ಧನುಸ್ಸು, ಅಕ್ಷಯಬತ್ತಳಿಕೆ ಬೇಡಿದನು. 'ಹೇ ಅಗ್ನಿ, ಧನುರ್ಬಾಣ ಕೊಂಡುಬಾ. ದೇವೇಂದ್ರ ನನ್ನ ಕೂಡ ವಿರೋಧ ಆಚರಿಸಿದರೂ, ನನ್ನ ಪ್ರತಿಜ್ಞಾ ಸತ್ಯ ಮಾಡೇನು.' ಹೀಂಗಂತ ಅರ್ಜುನ ಕೃಷ್ಣಾ-ವೇಶದಿಂದ ಅಗ್ನಿಗೆ ಅಭಯ ಕೊಟ್ಟನು. ಅಗ್ನಿ ಬದರಿಕಾಶ್ರಮಕ್ಕೆ ಹೋಗಿ, ಸುದರ್ಶನಚಕ್ರ ಕೃಷ್ಣಗೆ ತಂದುಕೊಟ್ಟ. ಗೋವುಂತಪರ್ವತಕ್ಕೆ ಸ್ವಾಮೀ ಆಯುಧ ಗಳು ಬಂದಿದ್ದವು. ಚಕ್ರ ಬಂದಿತ್ತೆ ಇಲ್ಲೆ ಎಂದರೆ, ಕೃಷ್ಣನ ಚಕ್ರಕ್ಕೆ ಬಹು ರೂಪಗಳು ಆಗಲು ಸಾಮರ್ಥಿ ಇಹೋದು. ಅಗ್ನಿ ಕೊಟ್ಟ ಚಕ್ರ ಮೊದಲಿನ ಚಕ್ರದಪ್ಪಂದೆ. ಅರ್ಜುನಗೆ ಗಾಂಡೀವಧನುಸ್ಸು ತಂದುಕೊಟ್ಟನು. ಆ ಗಾಂಡೀವ-ಧನುಸ್ಸು ಬ್ರಹ್ಮದೇವರು ಹಿಡಿಯೋ ಅಂಥಾದ್ದು. ಅಂಥಾ ಬಿಲ್ಲು ಹಿಡಕೊಂಡು, ಬ್ರಹ್ಮರಾಯ ವ್ಯಾಪಾರ ಮಾಡಥಾನೆ. ಆ ಧನುಸ್ಸು ಮಹಾರುದ್ರಗೆ ಕೊಟ್ಟಿದ್ದ. ರುದ್ರ, ಇಂದ್ರಗೆ ಕೊಟ್ಟಿದ್ದ. ಇಂದ್ರ ಚಂದ್ರಗೆ, ಚಂದ್ರ, ವರುಣಗೆ ಕೊಟ್ಟಿದ್ದ. ಈ ಪ್ರಕಾರ ಒಂದಂಶದಿಂದ ಇವರಿಗೆಲ್ಲ ಬಂದಿತ್ತು. ಬ್ರಹ್ಮರಾಯನ ಅನುಗ್ರಹದಿಂದ ಜಯಶೀಲರಾಗಿಹೋರು. ಅಂಥಾ ಗಾಂಡೀವಧನುಸ್ಸು, ವರುಣನಿಂದ ಅಗ್ನಿ ಅರ್ಜುನಗೋಸ್ಕರ ತಂದುಕೊಟ್ಟನು. ಬಿಳೀ ಕುದರಿಗಳ ಕಟ್ಟಿದಂಥ ದಿವ್ಯ ರಥ, ಅಕ್ಷಯಬತ್ತಳಿಕೆ, ಧ್ವಜಸ್ತಂಭದಲ್ಲಿ ಹನುಮಂತನ ಚಿನ್ಹ ಇಹೋದು ಇಂಥಾ ರಥ, ಅಕ್ಷಯಬತ್ತಳಿಕೆ ವರುಣನಲ್ಲಿಹೋದು, ವರುಣನ ಕೈಯಿಂದ ಇಸಗೊಂಡು ತಂದು-ಕೊಟ್ಟನು. ಮಿಂಚಿನೋಪಾದಿ ಗಾಂಡೀವಧನುಸ್ಸು ಹೊಳೀತಿಹೋದು. ಶ್ರೀಕೃಷ್ಣನ ಅನುಗ್ರಹದಿಂದ, ಗಾಂಡೀವಧನುಸ್ಸು ಅರ್ಜುನ ಧರಿಸಿದನು. ರುದ್ರ, ಇಂದ್ರ, ಚಂದ್ರ, ವರುಣ ಇವರೆಲ್ಲ ಬ್ರಹ್ಮದೇವರ ವರಬಲದಿಂದ ಧರಿಸಿದ್ದರು.

ಅರ್ಜುನನು ಶ್ರೀಕೃಷ್ಣನ ಅನುಗ್ರಹದಿಂದ ಈ ಗಾಂಡೀವಧನುಸ್ಸನ್ನು ಧರಿಸಿ, ತನ್ನ ಸಾಮರ್ಥಿಯಿಂದ ಬಾಣಗಳಿಂದ ಹನ್ನೆರಡು ಯೋಜನಗಳ ಪರಿಯಂತ ಶರಶಾಲಿ ಕಟ್ಟಿಬಿಟ್ಟನು. ಮಳಿಧಾರಿ ತಟಕು ಬೀಳಬಾರದಂತೆ ಹನ್ನೆರಡು ಯೋಜನ ಶರಪಂಜರ ಕಟ್ಟಿದನು. ಕೃಷ್ಣಾರ್ಜುನರು ಖಾಂಡವವನ ಸುಡೆಂದು ಅಗ್ನಿಗೆ ಅಪ್ಪಣಿ ಕೊಟ್ಟರು. ದೇವೇಂದ್ರಗೆ ತನ್ನ ವನ ಸುಡತದೆಂದು ಬಹಳೀ ದುಃಖ ವಾಯಿತು. ಕೋಪಾವಿಷ್ಟನಾಗಿ ಪ್ರಳಯಕಾಲದ ಮೇಘಗಳಿಗೆ ಅಪ್ಪಣಿ ಕೊಟ್ಟ. ಆನೀ ಸೊಂಡಿಲಧಾರಿ ಆಪ್ಪಂದೆ ಮಳೀ ಬೀಳಹೊಕ್ಕಿತು. ದೇವೇಂದ್ರ ಅಷ್ಟ

ದಿಕ್ಪಾಲಕರ ಸಹಿತನಾಗಿ, ದೇವತೆಗಳ ಕೂಡಿಕೊಂಡು ಯುದ್ಧಕ್ಕೆ ಬಂದನು. ಅರ್ಜುನ ಪ್ರಳಯಕಾಲದ ಮೇಘಗಳನ್ನು ವಾಯುವ್ಯಾಸ್ತ್ರದಿಂದ ಹಾರಿಸಿಬಿಟ್ಟನು. ಅರ್ಜುನ ತನ್ನ ಗಾಂಡೀವಧನುಸ್ಸು ಹೆದಿ ಏರಿಸಿ, ಬಾಣಗಳ ಮಳಿಗರಿಯಲಿಕ್ಕೆ, ದೇವೇಂದ್ರ ಪರಾಜಿತನಾದ. ಮಗನ ಕೈಯ ಸೋತೆನೆಂದು ಸಂತೋಷ ಉಳ್ಳವನಾದನು. ಸ್ವಾಮಿ ಶ್ರೀಕೃಷ್ಣ ಸ್ವರ್ಗಕ್ಕೆ ಬಂದಿರಲಾಗಿ, ಪಾರಿಜಾತವೃಕ್ಷ ಭೂಮಿಗೆ ಕೊಂಡುಬಾಹಾಗ, ತನ್ನ ಮಗ ಅರ್ಜುನನ ನಿಮಿತ್ತ ದೇವೇಂದ್ರ ಸ್ವಾಮಿಗೆ ಬಹಳೇ ಬೇಡಿಕೊಂಡಿಹ. ಕೃಷ್ಣಾರ್ಜುನರ ಮಹಿಮೆ ಕಂಡು, ತನ್ನ ಯತ್ನ ಏನೂ ನಡೇದ ಕಾರಣ, ಹನ್ನೆರಡು ಯೋಜನ ಶರಪಂಜರ ಮುನಿ ಕಟ್ಯಾನೆಂದು ಬಹಳೇ ಆಶ್ಚರ್ಯ ಉಳ್ಳವನಾಗಿ, ದೇವೇಂದ್ರ ಕೃಷ್ಣಗೆ ನಮಸ್ಕಾರ ಮಾಡಿ, ತನ್ನ ಮಗನ್ನ ಅಪ್ಪಿಕೊಂಡು ಬಹಳೇ ಪ್ರೀತನಾದ.

ಉಪೇಂದ್ರನಾಮಕ ನಾರಾಯಣ ದೇವೇಂದ್ರನ ಸಂಗಡ ಬಂದಿದ್ದ. ಕೃಷ್ಣನ ಅಪ್ಪಿಕೊಂಡು ತನ್ನ ಕ್ರೀಡಾನೆಲ್ಲ ನೋಡತಿಹ. ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳು ಅರ್ಜುನನ ಪರಾಕ್ರಮ ಕಂಡು, ಅರ್ಜುನಗೆ 'ಕೃಷ್ಣ' ಎಂದು ನಾಮಕರಣ ಮಾಡಿ, ದೇವತೆಗಳೆಲ್ಲ ತಮ್ಮ ಸ್ವಸ್ಥಾನಕ್ಕೆ ಹೋದರು. ಅರ್ಜುನ ಸ್ವರ್ಗಕ್ಕೆ ಬಂದ ಪಕ್ಷವೇ, ತಮ್ಮ ಆಯುಧಗಳೆಲ್ಲ ಕೊಟ್ಟೇವೆಂದು ದೇವತೆಗಳೆಲ್ಲ ಆಡಿದರು. ಮಗ ತನ್ನ ಸೋಲಿಸಿದನೆಂದು ದೇವೇಂದ್ರಗೆ ಬಹಳೇ ಸಂತೋಷವಾಯ್ತು.

ವನದಲ್ಲಿ ಸರ್ವ ದೈತ್ಯರು ಸೇರಿಕೊಂಡಿದ್ದರು. ನಾಗಸರ್ಪಗಳು, ಪಿಶಾಚಗಳು ಇದ್ದರು. ಅಗ್ನಿಭಯ ತಾಳಲಾರದೆ ಹೊರಗೆ ಬರಲು, ಕೃಷ್ಣ ತನ್ನ ಚಕ್ರದಿಂದ ಕಡಿದು ಬಿಷ್ಟು, ಅಗ್ನಿಯಲ್ಲಿ ಹಾಕತಿಹ. ಅರ್ಜುನ ತನ್ನ ಗಾಂಡೀವಧನುಸ್ಸಿನಿಂದ ಕಡಿದುಕಡಿದು ಬಿಷ್ಟತಿಹ. ಈ ಪ್ರಕಾರ ಸರ್ವ ಸಂಹಾರವಾಗಲಿಕ್ಕೆ, ಆರು ಜೀವಗಳು ಉಳಿದವು. ಇದರೊಳಗೆ ಶಾರ್ಙ್ಗಪಕ್ಷಿ, ಮಂದಪಾಲನೆಂಬೋ ಬ್ರಾಹ್ಮಣ, ತನಗೆ ಮಕ್ಕಳಿಲ್ಲದ ಕಾರಣ ಪಕ್ಷಿರೂಪ ಧರಿಸಿ, ಮಕ್ಕಳ ಹಡೆದನು ಖಾಂಡವವನದಲ್ಲಿ ತನ್ನ ಮಕ್ಕಳನ್ನ ಹೆಂಡತೀ ಸಮೀಪದಲ್ಲಿಟ್ಟಿದ್ದನು. ಮಾರ್ಗದಲ್ಲಿ ಮಂದಪಾಲ ಬ್ರಾಹ್ಮಣ ಅಗ್ನಿಯನ್ನ ಕಂಡು, 'ನೀ ಎತ್ತ ಹೋಗತಿದ್ದಿ?' ಎನಲಿಕ್ಕೆ, 'ಖಾಂಡವವನ ಸುಡಲಿಕ್ಕೆ ಹೋಗಥೀನಿ' ಎಂದು ಹೇಳಿದ. 'ಖಾಂಡವವನದಲ್ಲಿ ನನ್ನ ಮಕ್ಕಳು ಇದ್ದಾರೆ, ಸುಡಬ್ಯಾಡ' ಎಂದು ಕೇಳಿಕೊಂಡಿದ್ದ. ಅಗ್ನಿ ವನ ಸುಡತಾ ಬಾಹಾಗ, ತನ್ನ ಮಕ್ಕಳ ಕಚ್ಚಿಕೊಂಡು ತಾಯಿ ಶಾರ್ಙ್ಗಪಕ್ಷಿ ಹೋಗಬೇಕೆನಲು, ಮಕ್ಕಳನ್ನ ಕರೆದರೆ ಬರವಲ್ಲರು. 'ಹೊರಗೆ ಬಾರದೆ ಇಲ್ಲೇ ಇದ್ದೇವೆಂತೀರಿ. ಇಲ್ಲೇ ಇದ್ದರೆ ಅಗ್ನಿ ಸಂಸ್ಕಾರ ಮಾಡ್ಯಾನು' ಎಂದಳು. 'ನೀ ಪ್ರಾಯದಾಕಿ, ಹೊರಗೆ ಹೋಗು. ನಾವು ಬಾಲಕರು, ನಮಗೆ ಬಾಹೋ ಶಕ್ತಿ ಇಲ್ಲ' ಎಂದು ಮಕ್ಕಳು ಹೇಳಲಿಕ್ಕೆ, ಹೆಣ್ಣು ಶಾರ್ಙ್ಗಪಕ್ಷಿ ತನ್ನ ಮಕ್ಕಳನ್ನು ಬಿಟ್ಟುಕೊಟ್ಟು, ತನ್ನ ಜೀವ

ಬಿದ್ದು ಸುಟ್ಟು ಸತ್ತಿತು. ಶಾರ್ಙ್ಗಪಕ್ಷಿ ನಾಲ್ಕು ಮಕ್ಕಳು ಅಗ್ನಿಯನ್ನು ಸ್ತೋತ್ರ ಮಾಡಿದರು. ಅಗ್ನೀನ್ನ ಹಾದಿಯೊಳಗೆ ಮುಂದಪಾಲ ಬ್ರಾಹ್ಮಣ ಬೇಡಿಕೊಂಡಿದ್ದ. ಆದಕಾರಣ ಕೊಂದಿದ್ದಿಲ್ಲ.

ತಕ್ಷಕನ ಮಗ, ಅಶ್ವಸೇನನೆಂಬುವ ಒಬ್ಬ ಬದುಕಿದ. ಹ್ಯಾಂಗೆಂದರೆ, ಅವನ ತಾಯಿ, ಮಗನ ಮ್ಯಾಲಿನ ಮೋಹದಿಂದ ಅವನ ತಿರುವು ಮುರುವು ಮಾಡಿ, ಹೊಟ್ಟೆಯೊಳಗೆ ಇಟ್ಟುಕೊಂಡು ಆಕಾಶಮಾರ್ಗದಿಂದ ಹಾರಿಹೋಗಲಿಕ್ಕೆ, ಅರ್ಜುನ ಶರಚ್ಛೇದ ಮಾಡಿದ. ತಾಯಿ ಸತ್ತಿತು. ಅಶ್ವಸೇನನ ಬಾಲ ತಾಯೀ ಶರಸ್ಸಿನ ಕಡಿ ಇದ್ದದು ಕಡಿದು ಬಿತ್ತು. ಅಶ್ವಸೇನ ಪುಚ್ಛಭಾಗಹೀನನಾದ. ಅಶ್ವಸೇನನ್ನ ಕೊಲ್ಲ-ಬ್ಯಾಡೆಂದು ದೇವೇಂದ್ರ ನಿವಾರಿಸಿದ. ದೇವೇಂದ್ರನ ಅಪ್ಪಣೆಯಿಂದ ವಾಯು ಗಾಳಿ ಬೀಸಿದ. ಏನುಕಾರಣ ದೇವೇಂದ್ರ ನಿವಾರಿಸಿದನೆಂದರೆ, ತಕ್ಷಕ ದೇವೇಂದ್ರನ ಗೆಳಿಯನಾಗಬೇಕು. ತನ್ನ ಗೆಳಿಯನ ಮಗಗೆ ಕ್ಷೇಮವಾಗಬೇಕೆಂದು ಗಾಳಿ ಬೀಸಲಿಕ್ಕೆ, ಅಶ್ವಸೇನ ಬದುಕಿದ, ತಾಯಿ ಸತ್ತಳು, ಪುಚ್ಛಭಾಗ ಛೇದಿಸಿಹೋಯಿತು. ಕರ್ಣಾರ್ಜುನರಿಗೆ ವೈರಿತನ ಹುಟ್ಟೀದೆಂದು ತಿಳಿದು, ಕರ್ಣನ ಬತ್ತಳಿಕೆಯೊಳಗೆ ಸರ್ಪಬಾಣರೂಪನಾಗಿ ಹೊಕ್ಕಿದನು. ದೈತ್ಯರ ಬಡಿಗ್ಯ ಮಯನೆಂಬವ ಹಾರಿ-ಹೋಗತಿಹ. ಕೃಷ್ಣ ಚಕ್ರಧಾರಿಯಾಗಿ ನಿಂತಾನೆ, ಅರ್ಜುನ ಬಿಲ್ಲುಗಾರನಗ್ಯಾನೆ. ಮಯಾಸುರ ಕೃಷ್ಣನ್ನ ಶರಣುಹೋಗದೆ, ಅರ್ಜುನನ್ನ ಶರಣುಹೊಕ್ಕನು. ಅರ್ಜುನ ಕೃಷ್ಣನ್ನ ಬೇಡಿಕೊಳ್ಳಲಾಗಿ, ಶ್ರೀಶ, ಮಯನ್ನ ಕೊಲ್ಲದೆ ಬಿಟ್ಟನು. ಅರ್ಜುನನ ಪ್ರತಿಜ್ಞೆ ಗೆಲ್ಲಿಸಿದನು. ಮುಂದೆ ಸಭಾ ತಂದುಕೊಡಬೇಕಾಗಿ, ವಿದ್ಯದಲ್ಲಿ ಕುಶಲ ನಿದ್ದಾನೆಂದು ಬಿಟ್ಟುಕೊಟ್ಟ. ಶ್ರೀಕೃಷ್ಣನ ಬಿಟ್ಟು, ಅರ್ಜುನನ್ನ ಏನುಕಾರಣ ಶರಣುಹೊಕ್ಕನೆಂದರೆ, ಮಯಾಸುರ ದೈತ್ಯರ ಬಡಿಗ್ಯ. ತಾವೆಲ್ಲ ದೇವಾರಿಗಳು. ದೇವರ ಸಂಕಲ್ಪ ದೇವಾರಿಗಳನ್ನು ಕೊಲ್ಲಬೇಕೆಂದದೆ. ಆದಕಾರಣ ಕೃಷ್ಣನ್ನ ಶರಣು ಹೋಗದೆ, ಗುರುದ್ವಾರದಿಂದ ಹರಿಗೆ ಶರಣುಹೋಗಬೇಕು, ಆದ್ದರಿಂದ ಅರ್ಜುನನ ಮುಖಾಂತರ ಶರಣುಹೊಕ್ಕ, ಸ್ವಾಮೀ ದಯೆ ಸಂಪಾದಿಸಿದ. ಮಯಾಸುರ ಅರ್ಜುನನ್ನ ಪ್ರಾರ್ಥಿಸಿದ 'ನನ್ನ ಪ್ರಾಣ ಉಳುಹಿದಿ. ಇದಕ್ಕೇನು ಪ್ರತ್ಯುಪಕಾರ ಮಾಡಲಿ?' 'ಸರ್ವರಕ್ಷಕ ಸ್ವಾಮಿ ಕೃಷ್ಣನಿದ್ದಾನೆ, ಕೃಷ್ಣನ್ನೇ ಕೇಳು' ಎಂದು ಅರ್ಜುನ ಹೇಳಲು, ಅವನ ಆಜ್ಞೆದಿಂದ ಕೃಷ್ಣನ ಸಮೀಪಕ್ಕೆ ಹೋಗಿರಲಿಕ್ಕೆ, ಸ್ವಾಮಿ ದೈತ್ಯಬಡಿಗ್ಯಗೆ ಆಜ್ಞಾಪಿಸಿದ. 'ಧರ್ಮರಾಯನ ನಿಮಿತ್ತವಾಗಿ ಒಂದು ಸಭಾ ತಂದುಕೊಡು' ಎಂಬುದಾಗಿ ಹೇಳಿದನು. ಹೀಂಗೆ ಖಾಂಡವವನದಹನದಲ್ಲಿ ಆರು ಮಂದಿ ಬದುಕಿದರು. ಸಮಸ್ತ ಸ್ಥಾವರ ಜಂಗಮ ಪ್ರಾಣಿಗಳನ್ನು ಅಗ್ನಿ-ಮುಖದಲ್ಲಿ ಹಾಕಿ ಸುಡಿಸಿ, ಅಗ್ನೀ ಉಪದ್ರವ ಪರಿಹಾರ ಮಾಡಿದರು. ಅಗ್ನಿ ಗಿಡ-ಮೂಲಿಕೆರಸ ಕೊಂಡು, ನಾನಾ ರಸಗಳ ಪಾನ ಮಾಡಿ, ಸಂತೋಷ ಉಳ್ಳವನಾದನು.

ಕೃಷ್ಣಾರ್ಜುನರು ಹೋಗಿ, ಖಾಂಡವವನ ದಹನ ಮಾಡಿದರೆಂದು ಧರ್ಮರಾಯಾದಿಗಳಿಗೆ ಅರಿಕೆ ಆಯಿತು. ಬಹಳ ಅದ್ಭುತಕರ್ಮ ಮಾಡಿದರೆಂದು ಅತಿ ಪ್ರೀತರಾದರು. ಸ್ವಾಮಿ, ಸುಖಜ್ಞಾನ ಉಳ್ಳಾತ, ಉದಯಪೂರ್ಣ, ಆನಂದ ಸಮುದ್ರ, ಇಂಥಾ ಸ್ವಾಮಿ ತನ್ನ ಭಕ್ತರ ಕೈಯಿಂದ ವಿಚಿತ್ರ ಕರ್ಮಗಳ ಮಾಡಿಸತ, ತನ್ನ ಲೀಲಾ ಪ್ರಕಾಶ ಮಾಡಿದ. ತನ್ನ ಭಕ್ತರಿಗೆ ಸುಖೋದ್ರೇಕ ನೀಡತ ಈ ಪ್ರಕಾರ ರವಿಸಥಾನೆ. ಹನ್ನೊಂದನೇ ಅಧ್ಯಾಯ ಆರಂಭ ಮಾಡಿ, ಇಪ್ಪತ್ತನೇ ಅಧ್ಯಾಯ ಪರಿಯಂತ ಆದಿಪರ್ವ ಭಾರತಕಥ ಹೇಳಿದ್ದಾರೆ. ಪಾಂಡವರ ಚರಿತ್ರ ಆದಿಪರ್ವ ಭಾರತ ಹೇಳತಲೇ ಬಂದದೆ, ಅಲ್ಲಲ್ಲೆ ಹರಿವಂಶ ಕಥ. ನಾರಾಯಣನ ಅವತಾರ, ಕೃಷ್ಣಾರ್ಜುನರ ಮಹಿಮಿ, ಆಸ್ತಿಕತನದಿಂದ ಹೇಳಿಕೇಳಿದವರಿಗೆ, ಅಷ್ಟು ಮಾತ್ರದಿಂದ ಅರಿಷ್ಟನಿವೃತ್ತಿ, ಇಷ್ಟಪ್ರಾಪ್ತಿಯಾಗತದೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಸುಭದ್ರಾಹರಣ ಖಾಂಡವದಹನಾದಿ ನಿರೂಪಣಂ' ಎಂಬಂಥ ಇಪ್ಪತ್ತನೇ ಅಧ್ಯಾಯ ಸಂಪೂರ್ಣವು.

ಶ್ರೀಮದ್ವೇಶಾರ್ಪಣಮಸ್ತು

ಅಧ್ಯಾಯ ೨೧
ಶ್ರೀಕೃಷ್ಣಚರಿತೇ ಪಾಂಡವ ವನಪ್ರವೇಶಃ

ಈ ಇಪ್ಪತ್ತೊಂದನೇ ಅಧ್ಯಾಯದಲ್ಲಿ ಸಭಾಪರ್ವ ಭಾರತಕಥ ಹೇಳಥಾರೆ. ಜನಾರ್ದನನ ಆಜ್ಞೆಯಿಂದ, ಮಯನೆಂಬುವ ತನಗೆ ಪ್ರಾಣೋಪಕಾರ ಮಾಡಿದ್ದರಿಂದ, ಇಂದ್ರನೀಲರತ್ನದಿಂದ ನಿರ್ಮಿತವಾದ ಸಭಾ ತಂದು ಧರ್ಮರಾಯನಿಗೆ ಕೊಟ್ಟನು. ಸಭಾದಲ್ಲಿ ಬಂಗಾರದ ಕಮಲಗಳು, ಸ್ಫಟಿಕರತ್ನದ ಗೋಡಿಗಳು, ದಿವ್ಯ ಸರೋವರಗಳು, ಮಣಿಗಳುಳ್ಳ ಥಲೋ ಸಭಾ, ದೈತ್ಯರ ಬಡಿಗ್ಯ ಮಯ, ಧರ್ಮರಾಯಗೆ ತಂದುಕೊಟ್ಟನು. ಭೀಮಸೇನಗೆ ಗದಾ ಕೊಟ್ಟ, ಇದು ವಾಯುದೇವರ ಮೂಲಗದಾ. ಮಯಗೆ ಈ ಗದಾ ಹ್ಯಾಂಗೆ ಬಂತೆಂದರೆ, ಮುಚುಕುಂದರಾಯು ದೇವತೆಗಳಿಗೆ ಸಹಕಾರಿಯಾಗಿ, ದೈತ್ಯರ ಕೂಡ ಯುದ್ಧ ಮಾಡಲಿಕ್ಕೆ ಹೋಗುವಾಗ, ವಾಯುದೇವರು ತಮ್ಮ ಗದಾ ಮುಚುಕುಂದರಾಯಗೆ ಕೊಟ್ಟಿದ್ದರು. ಮುಚುಕುಂದರಾಯ ದೈತ್ಯರನ್ನೆಲ್ಲ ಸೋಲಿಸಿ ಜಯಶೀಲನಾಗಿ, ನಿದ್ರಿ ಬೇಡಿಕೊಂಡಿದ್ದ. ಮುಚುಕುಂದನ ಆಶ್ರಮದಿಂದ ಮಯ ತಂದುಕೊಟ್ಟ. ಸ್ವಾಮಿ ಶ್ರೀಕೃಷ್ಣ ಪಾಂಡವರ ಅಪ್ಪಣಿ ಕೇಳಿ, ಇಂದ್ರಪ್ರಸ್ಥದಿಂದ ದ್ವಾರಾವತಿಗೆ ಹೋದನು.

ದ್ವಾರಾವತಿಯಲ್ಲಿ ಇಂದಿರೇಶ ಇರಲಿಕ್ಕೆ, ಸೂರ್ಯಗ್ರಹಣ ಬಂತು. ಸ್ವಾಮಿ ತನ್ನ ಹದಿನಾರುಸಾವಿರದಒಂದುನೂರಾಎಂಟು ಮಂದಿ ಹೆಂಡರು, ಒಬ್ಬೊಬ್ಬರಿಗೂ ಹತ್ತುಹತ್ತು ಗಂಡುಮಕ್ಕಳು, ಒಬ್ಬ ಹೆಣ್ಣುಮಗಳು, ಹೀಂಗೆ ಮಕ್ಕಳು ಮೊಮ್ಮಕ್ಕಳನ್ನು ಕೂಡಿಕೊಂಡು, ವಸುದೇವ ದೇವಕಿ, ಸಮಸ್ತ ಯಾದವರಿಂದ ಯುಕ್ತನಾಗಿ, ಕುರುಕ್ಷೇತ್ರಕ್ಕೆ ಬಂದನು. ಕುಂತೀದೇವಿ ತನ್ನ ಮಕ್ಕಳು ಮೊಮ್ಮಕ್ಕಳ ಸಹವಾಗಿ ಬಂದಳು. ಸಮಸ್ತ ದೇಶದ ರಾಯರು, ಚತುರಂಗಸೇನಾ ಸಹ ಕುಟುಂಬಯುಕ್ತರಾಗಿ ಬಂದಾರೆ. ನಂದಗೋಪ, ಯಶೋದಾದೇವಿ, ಗೋಪಿಕಾಸ್ತ್ರೀಯರು, ಗ್ರಹಣಸಿವಿತ್ತವಾಗಿ ಬಂದು, ಲಕ್ಷ್ಮೀಪತಿಯನ್ನು ಕಂಡೆವೆಂದು ಬಹಳೇ ಪ್ರೀತರಾದರು. ಸ್ವಾಮಿ ವಸುದೇವ ದೇವಕೀ ಕೈಯಿಂದ ಯಜ್ಞ ಮಾಡಿಸಿ, ತ್ರಿಗುಣಾತ್ಮಕ ದಕ್ಷಿಣಿ ಕೊಟ್ಟನು. ಪರ್ವಕಾಲ ಮುಗಿದಮ್ಯಾಲೆ, ಸ್ವಾಮಿ ಪಾಂಡವರನ್ನು ಕೂಡಿಕೊಂಡು ದ್ವಾರಾವತಿಗೆ ಹೋದನು.

ಶ್ರೀಕೃಷ್ಣನು ಒಂದು ದಿನಕ್ಕೆ ಮುಗಿಯುವಂಥ (ಅಶ್ವಮೇಧ) ಯಜ್ಞ ಆರಂಭಿಸಿದ್ದ. ಒಂದು ದಿವಸಕ್ಕೆ ಲಕ್ಷಯೋಜನ ನಡೆಯುವಂಥ ಕುದರಿ ಭೀಮಾರ್ಜುನರಿಗೆ ಕೊಟ್ಟನು. ಭೀಮಾರ್ಜುನರು ಮೂರು ಮುಹೂರ್ತದೊಳಗೆ ಅಶ್ವ ತಿರಿಗಿಸಿ ತಂದರು. ಮಾರ್ಗದಲ್ಲಿ ಜರಾಸಂಧ ಮೊದಲಾದ ರಾಯರೆಲ್ಲ ಅಡ್ಡ ಗಟ್ಟಿದರು.

ಅವರನ್ನೆಲ್ಲ ಕೃಷ್ಣನ ರಥಸಾಮರ್ಥ್ಯಿಂದ ಸೋಲಿಸಿ, ಭೀಮಸೇನ ಭಂಟನಾದ-ಕಾರಣ ಕಪ್ಪ ಕೊಂಡುಬಂದರು. ಸ್ವಾಮಿ ಯಜ್ಞ ಮಾಡಥಾನೆ. ಅಲ್ಲಿ ತೃಷ್ಣಾವಹ ಬ್ರಾಹ್ಮಣ ಬಂದು ಬೇಡಿಕೊಂಡ. 'ನನ್ನ ಮಕ್ಕಳು ಬದುಕೋಹಾಂಗೆ ಮಾಡು, ಹುಟ್ಟತಲೇ ಅದೃಶ್ಯವಾಗತವೆ.' ಹೀಂಗಂತ ಹೇಳಲು, ಅರ್ಜುನ ಮಾತನಾಡಿದ. 'ಎಲೈ ಬ್ರಾಹ್ಮಣ, ನಿನ್ನ ಮಕ್ಕಳ ರಕ್ಷಿಸೇನು' ಎಂದಲ್ಲಿ, 'ಎಲೈ ಪಾರ್ಥ ನನ್ನ ಮಕ್ಕಳು ಕೃಷ್ಣ, ಬಲರಾಮ, ಪ್ರದ್ಯುಮ್ನ ಇವರಿಂದ ರಕ್ಷಿತವಾಗಲಿಲ್ಲ. ನಿನ್ನಿಂದ ಏನು ಆದೀತು!' ಎಂದನು. ಹೀಂಗನಲು ಅರ್ಜುನ ಅಪುರಾವೇಶದಿಂದ, 'ನನ್ನ ಕೇಶವರಾಮರೋಪಾದಿ ಕಂಡಿದ್ಯ! ನಾನು ದೊಡ್ಡ ಶೂರನಿದ್ದೀನಿ. ಖಾಂಡವವನ ದಹನ ಮಾಡೀನಿ. ಅಗ್ನೀನ್ನ ಪ್ರೀತಿಬಡಿಸೀನಿ, ಖಾಂಡವನವನ ದಹನಕಾಲವಲ್ಲಿ ಇಂದ್ರಾದಿ ದೇವತಿಗಳನ್ನ ಸೋಲಿಸೀನಿ. ಪೌಲೋಮ, ಕಾಲಕೇಯ ದೈತ್ಯರನ್ನ ಸೋಲಿಸೀನಿ. ಮುಂದೆ ನಿವಾತಕವಚನಾಮಕ ದೈತ್ಯರನ್ನ ಸೋಲಿಸಥೀನಿ.' ಈ ಪ್ರಕಾರ ತನ್ನ ಪೌರುಷ, ಪರಾಕ್ರಮ ಹೇಳಿಕೊಂಡು, ಕೃಷ್ಣನ ಸಮೀಪಕ್ಕೆ ಹೋಗಿ ಮಾರಿ ತಗಿಸ್ತ ಇರಲಿಕ್ಕೆ, 'ಶಕ್ತಿ ಇನ್ನರೆ ಹೋಗು' ಎಂದು ಶ್ರೀಕೃಷ್ಣನು ಹೇಳುತ್ತಿರಲಾಗಿ, 'ಬ್ರಾಹ್ಮಣನ ಮಕ್ಕಳನ್ನು ರಕ್ಷಿಸಲಾರದೆಹೋದರೆ, ಅಗ್ನಿಪ್ರವೇಶ ಮಾಡಿಕೊಂಡೇನು' ಎಂದು ಶಪಥ ಮಾಡಿಕೊಂಡು ಅರ್ಜುನ ಹೋದ.

ಬಲರಾಮ, ಪ್ರದ್ಯುಮ್ನ ದಾರೂ ಹೋಗಲಿಲ್ಲ. 'ಸೋತಪಕ್ಷವೇ ಕೀರ್ತಿ ಕೆಡತದೆ, ಹೋಗಬ್ಯಾಡ' ಎಂದು ಕೃಷ್ಣನ ಆಜ್ಞೆ ಆಯಿತು ಅನಿರುದ್ಧ ತಾ ದಾರಿಂದರೆ, ಕಾಮಪುತ್ರ. ಅನಿರುದ್ಧನಾಮಕ ನಾರಾಯಣನ ಆವೇಶದಿಂದ ಪ್ರದ್ಯುಮ್ನನ ಹೆಂಡತಿ ರುಗ್ಮವತೀಯಲ್ಲಿ ಹುಟ್ಟಿದ್ದಾನೆ. ಪ್ರದ್ಯುಮ್ನ ತನ್ನ ಸೋದರ ಮಾವನ ಮಗಳು ರುಗ್ಮವತಿಯನ್ನು ಮದುವಿ ಆದ. ಆಕೆಯ ಲ್ಲಿ ಮೂಲ ಅನಿರುದ್ಧನೇ ಹುಟ್ಯಾನೆ. ಬ್ರಾಹ್ಮಣ ಅರ್ಜುನಗೆ ಹೇಳಿದ, 'ಪ್ರಸೂತಿ ಕಾಲವದೆ ಸನ್ನದ್ಧನಾಗು' ಎನಲಿಕ್ಕೆ, ಅರ್ಜುನ ತನ್ನ ಬಾಣಗಳಿಂದ ದಿಗ್ಬಂಧನ ಮಾಡಿ ಶರಪಂಜರ ಕಟ್ಟಿಬಿಟ್ಟ. ಪ್ರಸೂತನಾದಕೂಡಲೇ ಬಾಲಕ ಅದೃಶ್ಯನಾದ. ಬ್ರಾಹ್ಮಣ ಬಹಳ ಕೋಪಾವಿಷ್ಟನಾಗಿ, 'ಎಲೋ ಅರ್ಜುನ! ನಿನ್ನ ಪೌರುಷ ಬಹಳೇ ಹೇಳಿಕೋತಿದ್ದಿ. ನಿನ್ನ ಪರಾಕ್ರಮ ಎತ್ತ ಹೋಯಿತು! ಎಲೋ ಮೂರ್ಖ! ನಿನ್ನಿಂದ ಏನೂ ಕೆಲಸವಾಗಲಿಲ್ಲ' ಎನಲಿಕ್ಕೆ, ಅರ್ಜುನ ಬಹಳೇ ಖಿನ್ನನಾಗಿ, ತನ್ನ ಶಪಥ ಸತ್ಯ ಮಾಡ ಬೇಕಾಗಿ, ಅಗ್ನಿಯೊಳಗೆ ಬೀಳಲಿಕ್ಕೆ ಉದ್ಯುಕ್ತನಾದನು.

ಅಗ್ನಿಪ್ರವೇಶಕ್ಕೆ ಉದ್ಯುಕ್ತನಾದ ಅರ್ಜುನನನ್ನು ಶ್ರೀಕೃಷ್ಣನು ನಿವಾರಿಸಿ, ಬ್ರಾಹ್ಮಣನ್ನ ರಥದಲ್ಲಿ ಕೂಡ್ರಿಸಿಕೊಂಡು, ಅರ್ಜುನನಿಂದ ಯುಕ್ತನಾಗಿ, ಸಪ್ತ-ದ್ವೀಪ, ಸಪ್ತ ಸಮುದ್ರಗಳ ದಾಟಿ ಹೋಗತಿರಲಿಕ್ಕೆ, ಪರ್ವತಗಳು, ಸಮುದ್ರಗಳು ಮಾರ್ಗ ಕೊಡತಿರಲಿಕ್ಕೆ, ಸುವರ್ಣಭೂಮಿ ಲೋಕಾಲೋಕ ಪರ್ವತಗಳ ದಾಟಿ,

ತನ್ನ ಸುದರ್ಶನಚಕ್ರದಿಂದ ಅಂಧಂತಮಸ್ಸನ್ನು ಛೇದಿಸಿ, ಏಳುಕೋಟಿ ಅಂಧಂತಮಸ್ಸು ದಾಟಿ, ಹದಿನಾಲ್ಕು ಕೋಟಿ ಘನೋದಕ ದಾಟಿ, ಸ್ವಾಮಿ ಅನಂತಾಸನನ ಸಮೀಪಕ್ಕೆ ಹೋಗಿ, ಅಮುಕ್ತಸ್ಥಳದಲ್ಲಿ ರಥ ನಿಂದರಸಿ, ರಥದೊಳಗೆ ಅರ್ಜುನ ಬ್ರಾಹ್ಮಣನ್ನ ಕೂಡ್ರಿಸಿ, ತಾನು ಮುಕ್ತಸ್ಥಳಕ್ಕೆ ಹೋದನು. ಅಲ್ಲಿ ಮೂಲನಾರಾಯಣ ಅಷ್ಟಭುಜ, ದಿವ್ಯ ಭೂಷಣದಿಂದ ಜ್ಞಾನಾನಂದಸಮುದ್ರನಾದಂಥ ಸ್ವಾಮಿ, ಮಹಾಶೇಷನ ಮ್ಯಾಲೆ ಮಲಗಿಕೊಂಡಾನೆ. ಲಕ್ಷ್ಮೀದೇವಿ ವಾಲ್ಗೈಸ ಥಾಳೆ. ಅನಂತಸೂರ್ಯರು ಒಂದೇ ಕಡೀಲಿ ಒದಗಿದರೆ ಎಷ್ಟು ಕಾಂತಿ, ಅದಕ್ಕೂ ಅಧಿಕ ಕಾಂತಿಯಿಂದ ಹೊಳೀಥ ಕುಳಿತಿದ್ದಾನೆ. ಮುಕ್ತಬ್ರಹ್ಮನ ಕೈಯ ಸ್ತೋತ್ರ ಮಾಡಿಸಿಕೊಳ್ಳಥಾನೆ. ಅಂಥಾ ಮೂಲನಾರಾಯಣನ ರೂಪದೊಳಗೆ ಶ್ರೀಕೃಷ್ಣ ಐಕ್ಯನಾಗಿ, ಅಲ್ಲಿ ಮುಹೂರ್ತಪರಿಯಂತ ಇದ್ದು—ನಂದ ಸುನಂದ ಮೊದಲಾದ ಪಾರ್ಷದರು ಪ್ರಾರಬ್ಧಕರ್ಮದಿಂದ ಗರ್ಭವಾಸದುಃಖ ಉಣಬೇಕಾಗಿತ್ತು. ಬ್ರಾಹ್ಮಣನ ಉದರದಲ್ಲಿ ಅದೃಶ್ಯರಾಗಿ ಬಂದಿದ್ದರು—ಬ್ರಾಹ್ಮಣ ಮಕ್ಕಳನ್ನು ಅಮುಕ್ತಸ್ಥಳಕ್ಕೆ ಕೊಂಡುಬಂದು, ಅತನಿಗೆ ತೋರಿಸಿದನು. ಇಷ್ಟೇನುಕಾರಣ ಮಾಡಬೇಕು ಎಂದರೆ, ಅರ್ಜುನನ ಸೊಕ್ಕು ಮುರಿಯೋದರಗೋಸ್ಕರ ಮಾಡಬೇಕಾಗಿ, ವಿಪ್ರನ ಮಕ್ಕಳನ್ನ ಕೊಂಡುಬಂದು, ಅರ್ಜುನನ ದರ್ಪ ಮುರಿದು—ಆತ ತನ್ನ ಭಕ್ತನಾದ್ದರಿಂದ—ಅಹಂಕಾರದಿಂದ ಕೆಟ್ಟುಹೋದಾನು, ಆ ಅಹಂಕಾರ ಇರಬಾರದು, ಅನರ್ಥಸಾಧನವಾದೀತು, ಸನ್ಮಾರ್ಗಕ್ಕೆ ತರಬೇಕು, ಅರ್ಜುನ ತನ್ನ ಗೆಳಿಯ, ಶಿಕ್ಷೆಯಿಂದ ರಕ್ಷಿಸಬೇಕಾಗಿ ಇಷ್ಟೂ ಮಾಡಿ, ಅಪಾಕೃತ ಮನಿಯಿಂದ ಕೃಷ್ಣ ಹೊರಟುಬಂದನು.

ಅಪ್ರಾಕೃತ ಮನಿ ಅನಂತಾಸನ ಎಂಥಾದ್ದೆಂದರೆ, ಲಕ್ಷ ಸೂರ್ಯರು ಒಂದೇ ಕಡೀಲಿ ಕೂಡಿದರೆ ಎಷ್ಟು ಕಾಂತಿ, ಅದಕ್ಕೂ ಅಧಿಕ ಕಾಂತಿ, ಮಿಂಚಿನಪ್ಪಂದೆ ಹೊಳೀತಿಹೋದು. ಅಂಥಾ ಅನಂತಾಸನಕ್ಕೆ ಸ್ವಾಮಿ ಘಳಿಗೀ ಒಳಗೆ ಹೋಗಿದ್ದು, ಅನಂತಾಸನದಲ್ಲಿ ಮೂಲನಾರಾಯಣನಲ್ಲಿ ಎರಡು ಘಳಿಗಿ ಐಕ್ಯನಾಗಿದ್ದ. ಹೀಂಗೆ ಮೂರು ಘಳಿಗೀಯೊಳಗೆ ಹೋಗಿ, ದ್ವಾರಾವತಿಗೆ ಬಂದ. ಸ್ವಾಮಿ ಯಜ್ಞ ಮಾಡತಿದ್ದ. ಚಲನವಾಯಿತೆಂದು ಲೋಕಶಿಕ್ಷಾರ್ಥವಾಗಿ, ಪ್ರಾಯಶ್ಚಿತ್ತ ಮಾಡಿಕೊಂಡನು. ಬ್ರಹ್ಮಾದಿ ದೇವತಿಗಳು ಸ್ವಾಮೀನ ಕಳುಹತ ದ್ವಾರಾವತಿಗೆ ಬಂದು, ಸ್ವಾಮೀ ಆಜ್ಞ ಕೊಂಡು, ತಮ್ಮತಮ್ಮ ಲೋಕಕ್ಕೆ ಹೋದರು. ಸ್ವಾಮಿ ಯಜ್ಞ ಮುಗಿಸಿ, ಯಥೇಷ್ಟ ದ್ರವ್ಯ ದಕ್ಷಿಣೆ, ಗೋದಾನ ಭೂದಾನಾದಿಗಳ ಕೊಟ್ಟು, ಅವಭೃತಸ್ನಾನಕ್ಕೆ ಪ್ರಭಾಸಕ್ಷೇತ್ರಕ್ಕೆ ಹೋಗಿ, ದ್ರವ್ಯದಕ್ಷಿಣೆಗಳಿಂದ ಬ್ರಾಹ್ಮಣರ ತುಷ್ಟಿಬಡಿಸಿ, ಸೆಲಿ (ವಸ್ತ್ರಗಳು) ಇತ್ತು, ದ್ವಾರಾವತಿಗೆ ಬರಥಾನೆ. ದಂತವಕ್ರ ಮಾರ್ಗದಲ್ಲಿ ಅಡ್ಡಗಟ್ಟಿದ. ವಿಡೂರಥನೂ ಬಂದಿದ್ದ. ಸ್ವಾಮಿ ತನ್ನ ಪರಾಕ್ರಮ

ದಿಂದ ಲೀಲಾಮಾತ್ರದಲ್ಲಿ ವಿಡೂರಥನ್ನ ಕೊಂದು, ತಮಸ್ಸಿನಲ್ಲಿ ಕೆಡಹಾಕಿದನು. ದಂತವಕ್ರನೂ ಸಂಹರಿಸಲ್ಪಟ್ಟನು. ಇವನಲ್ಲಿದ್ದಂಥ ವಿಜಯನೆಂಬ ದ್ವಾರಪಾಲಕನು ಸ್ವಾಮೀ ಉದರದೊಳಗೆ ಹೊಕ್ಕನು. ಶ್ರೀಕೃಷ್ಣನು ಪರಂಧಾಮಕ್ಕೆ ಹೋದಮ್ಯಾಲೆ, ವಿಜಯನು ತನ್ನ ಮೂಲರೂಪದಲ್ಲಿ ಕೂಡಥಾನೆ.

ಶ್ರೀಶ ದ್ವಾರಾವತಿಗೆ ಬಂದು ಅರ್ಜುನನ್ನ ಕೇಳಥಾನೆ. 'ಎಲ್ಲೆ ಪಾರ್ಥ, ಅನಂತಾಸನಕ್ಕೆ ಹೋಗಿ ಬರುವಾಗ ಮಾರ್ಗಮಧ್ಯದಲ್ಲಿ ಏನೇನು ಕಂಡಿ?' ಎನಲಿಕ್ಕೆ, 'ಸ್ವಾಮಿ ನನಗೆ ತಿಳೇದು. ನನ್ನ ಮ್ಯಾಲೆ ಅನುಗ್ರಹ ಮಾಡಿ, ನೀನೇ ಹೇಳು' ಎಂದು ಅರ್ಜುನ ನುಡಿದನು. ಶ್ರೀಕೃಷ್ಣ ಅರ್ಜುನಗೆ ಹೇಳಥಾನೆ. 'ಎಲ್ಲೆ ಅರ್ಜುನ ನಾವು ಇದ್ದದ್ದು ಈ ಜಂಬೂದ್ವೀಪ, ಲಕ್ಷ ಯೋಜನ. ಮೇರುಪರ್ವತ ಜಂಬೂದ್ವೀಪದ ಮಧ್ಯದಲ್ಲಿ ಅದೆ. ಜಂಬೂದ್ವೀಪ ಮೇರುಪರ್ವತಕ್ಕೆ ಒಡ್ಯಾಣವಾಗೇದೆ. ದ್ವಿಗುಣ ಇಕ್ಷುಸಮುದ್ರ. ಲವಣಸಮುದ್ರ, ಇಕ್ಷುಸಮುದ್ರ, ಸುರಸಮುದ್ರ, ಸರ್ಪಿಃಸಮುದ್ರ, ದಧಿಸಮುದ್ರ, ಕ್ಷೀರಸಮುದ್ರ, ಶುದ್ಧೋದಕಸಮುದ್ರ ಹೀಂಗೆ ಸಪ್ತಸಮುದ್ರ, ಸಪ್ತದ್ವೀಪಗಳು. ಅದರಾಚೀಲಿ ಸುವರ್ಣಭೂಮಿ, ತೊಂಭತ್ತಾರು ಲಕ್ಷ. ಇದರೊಳಗೆ ವಜ್ರದ ಕಟ್ಟು ಹದಿನೈದು ಲಕ್ಷದ ಐವತ್ತುಸಾವಿರ. ಹೀಂಗೆ ಮೂರೂವರಿಕೋಟಿ ಯೋಜನ ಎನಿಸತದೆ. ಅಲ್ಲೀ ಪರ್ಯಂತ ಸೂರ್ಯನ ಪ್ರಕಾಶ ಬೀಳತದೆ. ಇದಷ್ಟೂ ಲೋಕವೆನಿಸತದೆ. ಲೋಕ ನೋಡಲಿಕ್ಕೆ ದ್ವಿಗುಣ ಅಂಧಂತಮಸ್ಸು, ಬಹಳ ಘೋರವಾದುದು. ಪ್ರತಿದಿವಸ ಅತಿಶಯ ದುಃಖ. ಅಲ್ಲಿಗೆ ದಾರು ಹೋಗಥಾರೆಂದರೆ, ವಿಶ್ವ ಮಿಥ್ಯ, ಪರಮಾತ್ಮ ನಿರ್ಗುಣ, ನಿರಾಕಾರ ಅಂತ ತಿಳಿದವರು, ಜೀವೇಶ್ವರರಿಗೆ ಐಕ್ಯ ತಿಳಿದವರು, ಇಂಥಾ ಮಿಥ್ಯಾಜ್ಞಾನಿಗಳು. ಉಗ್ರ ತಮಸ್ಸಿನಲ್ಲಿ ಬೀಳಥಾರೆ. ಈ ಪ್ರಕಾರ ಭೂಗೋಳ ಪಂಚಾಶತ್ಕೋಟಿ ವಿಸ್ತೀರ್ಣ. ಜಂಬೂದ್ವೀಪ ಒಂದು ಲಕ್ಷ ಯೋಜನ, ಲವಣಸಮುದ್ರ ಒಂದು ಲಕ್ಷ ಯೋಜನ ವಡ್ಯಾಣ ಆಗೇದೆ. ಪ್ಲಕ್ಷದ್ವೀಪ ಎರಡು ಲಕ್ಷ ಯೋಜನ, ಇಕ್ಷುಸಮುದ್ರ ಎರಡು ಲಕ್ಷ ಯೋಜನ, ಶಾಲ್ಮಲೀದ್ವೀಪ ನಾಲ್ಕುಲಕ್ಷ ಯೋಜನ, ಸುರಸಮುದ್ರ ನಾಲ್ಕು ಲಕ್ಷ ಯೋಜನ, ಕುಶದ್ವೀಪ ಎಂಟುಲಕ್ಷ ಯೋಜನ, ಸರ್ಪಿಃಸಮುದ್ರ ಎಂಟುಲಕ್ಷ ಯೋಜನ, ಕ್ರೌಂಚದ್ವೀಪ ಹದಿನಾರು ಲಕ್ಷ, ಶಾಲ್ಮಲೀದ್ವೀಪ ಮೂವತ್ತೆರಡು ಲಕ್ಷ, ಕ್ಷೀರಸಮುದ್ರ ಮೂವತ್ತೆರಡು ಲಕ್ಷ, ಪುಷ್ಕರದ್ವೀಪ ಅರುವತ್ತನಾಲ್ಕು ಲಕ್ಷ, ಸ್ವಾದೋದಕಸಮುದ್ರ ಅರುವತ್ತನಾಲ್ಕು ಲಕ್ಷ, ಸುವರ್ಣಭೂಮಿ ತೊಂಬತ್ತನಾಲ್ಕುಲಕ್ಷದ ಐವತ್ತುಸಾವಿರ, ರತ್ನದ ಕಟ್ಟು ಲಕ್ಷದ ಐವತ್ತುಸಾವಿರ, ಹೀಂಗೆ ಮೂರೂವರಿಕೋಟಿ ಯೋಜನ ಲೋಕವೆನಿಸತದೆ. ಸೂರ್ಯರಶ್ಮಿ ಲೋಕಾಲೋಕ ಪರಿಯಂತ ಬೀಳತದೆ. ಸಪ್ತಸಮುದ್ರ, ಸಪ್ತದ್ವೀಪಗಳು, ಸುವರ್ಣಭೂಮಿ ವಜ್ರದ ದಡಿ ಸಹವಾಗಿ ಮೂರುವರಿಕೋಟಿ ಯೋಜನ. ಇದರ ದ್ವಿಗುಣ ಏಳುಕೋಟಿ

ಅಂಧಂತಮಸ್ಸು. ಇದರ ದ್ವಿಗುಣ ಘನೋದಕ. ಅದರ ಆಚೀಲಿ ನನ್ನ ಮನಿ ಅದೆ.

'ಅನಂತಾಸನದಲ್ಲಿ, ನೀನೂ ಬ್ರಾಹ್ಮಣನೂ ದೂರದಲ್ಲಿ ನನ್ನ ರಥದೊಳಗೆ ಕುಳಿತಿದ್ದಿರಿ. ನಾನು ಹೋದ್ದು ನನ್ನ ಪರಮನಿ. ಅಲ್ಲಿ ನಾನೇ ನಾರಾಯಣನಾಗಿರ ಥೀನಿ. ಮುಕ್ತಬ್ರಹ್ಮರ ಕೈಲಿ ವಾಲ್ಗೈಸಿಕೋಥೀನಿ. ಲೋಕಾಲೋಕ ಐವತ್ತುಲಕ್ಷ ಸಹವಾಗಿ, ಇಪ್ಪತ್ತೈದುಕೋಟಿ. ಮೇರುಪರ್ವತ ಆರಂಭ ಮಾಡಿಕೊಂಡರೆ, ಲೋಕಾಲೋಕಪರ್ವತ ಐವತ್ತುಲಕ್ಷ ಐವತ್ತುಸಾವಿರ ತಿಳೀಬೇಕು. ಹೀಂಗೆ ಆರಂಭ ಮಾಡಿ, ನಾಲ್ಕು ದಿಕ್ಕು, ನಾಲ್ಕು ಕೋಣಕ್ಕೆ ಇಪ್ಪತ್ತೈದುಕೋಟಿ ಒಳಗೆ, ಇಪ್ಪತ್ತೈದುಕೋಟಿ ವ್ಯಾಲೆ, ಈ ಪ್ರಕಾರ ಪಂಚಾಶತ್ಕೋಟಿ ಬ್ರಹ್ಮಾಂಡ. ನೂರು ಕೋಟಿ ಪೃಥ್ವೀ, ಉದಕ ಹತ್ತುನೂರುಕೋಟಿ, ಅಗ್ನಿ ಹತ್ತುಸಾವಿರಕೋಟಿ, ವಾಯು ಒಂದುಲಕ್ಷಕೋಟಿ, ಆಕಾಶ ಹತ್ತುಲಕ್ಷಕೋಟಿ, ಅಹಂಕಾರತತ್ತ್ವ ನೂರು ಲಕ್ಷಕೋಟಿ. ಮಹತ್ತತ್ತ್ವ ಸಾವಿರಲಕ್ಷಕೋಟಿ, ಗುಣತ್ರಯ ಹತ್ತುಸಾವಿರಲಕ್ಷ ಕೋಟಿ, ಪೃಥ್ವೀ ಹೊರತುಮಾಡಿದರೆ, ಹೀಂಗೆ ಸಪ್ತಾವರಣಕ್ರಮದಿಂದ ಸುತ್ತು-ಕೊಂಬೋದು. ಗುಣತ್ರಯದಲ್ಲಿ ತಮಸ್ಸಿನ ದ್ವಿಗುಣ ರಜೋಗುಣ. ಅದರ ದ್ವಿಗುಣ ಸತ್ತ್ವಗುಣ, ಹೀಂಗೆ ಅದರ ಆಚೀಲಿ ವಿರಜಾನದಿ, ಅವ್ಯಾಕೃತಾಕಾಶ. ಅದರ ಆಚೀಲೆಲ್ಲ ನನ್ನ ವ್ಯಾಪ್ತಿ. ದೇಶಕಾಲಪರಿಚ್ಛೇದಶೂನ್ಯನಾಗಿ ಸರ್ವತ್ರ ವ್ಯಾಪ್ತ ನಾಗಿದ್ದೀನಿ. ಅನಂತಶೀರ್ಷ, ಅನಂತಬಾಹು, ಅನಂತಚಕ್ಷು, ಅನಂತನಾಮ, ಅನಂತಲೀಲಗಳು, ಅನಂತಾವತಾರಗಳು, ಒಂದಕ್ಕೊಂದು ಭೇದವಿಲ್ಲ, ಅಷ್ಟೂ ಜ್ಞಾನಾನಂದ ಶರೀರ. ಎಲೈ ಅರ್ಜುನ ನೀವೆಲ್ಲ ನನ್ನ ಅಧೀನರು. ನನ್ನ ಪ್ರಸಾದ ದಿಂದ ಸಾಮರ್ಥ್ಯ ಉಳ್ಳವರೆನಿಸಥೀರಿ. ನನ್ನ ಅನುಗ್ರಹ ಆದರೆ, ಜ್ಞಾನಭಕ್ತಿ-ವೈರಾಗ್ಯ ಬರತದೆ. ನನ್ನ ಕಟಾಕ್ಷ ನಿಮ್ಮವ್ಯಾಲೆ ಆದರೆ, ಜಯಶೀಲರಾಗಥೀರಿ. ನೀನು ಬಲಿಷ್ಠತನದಿಂದ ನನ್ನ ಅವಜ್ಞ ಮಾಡಿ, ಅಹಂಕಾರದಿಂದ ಬ್ರಾಹ್ಮಣನ ಮಕ್ಕಳನ್ನು ಬದುಕೆಸೇನೆಂದರೆ, ನಿನ್ನ ಗರ್ವ ಪರಿಹಾರ ಮಾಡಿದೆ. ಇನ್ನಾದರೂ ನಾನೇ ಸರ್ವೋತ್ತಮನೆಂದು ತಿಳಿ. ಏನು ಕರ್ಮ ಮಾಡಲ್ಯಾಕೆ, ನನಗೆ ಅರ್ಪಿಸಿದಿ ಎಂದರೆ, ನಿನಗೆ ಸಾಧ್ಯವಾದೀತು. ಈ ಪ್ರಕಾರ ಕೃಷ್ಣನ ಮಾತು ಕೇಳಿ ಅರ್ಜುನ ಬಹಳೇ ಭಯವುಳ್ಳವನಾಗಿ, 'ಸ್ವಾಮಿ ನನ್ನ ಸರ್ವಾಪರಾಧ ಕ್ಷಮಿಸಬೇಕು' ಎಂದು ಸ್ವಾಮಿಗೆ ನಮಸ್ಕಾರ ಮಾಡಿದನು. ಪಾಂಡವರು ಕೆಲಸದ ಉದ್ದಿಶ್ಯ ದ್ವಾರಾ-ವತಿಯಲ್ಲದ್ದು, ಭಕ್ತಿಯಿಂದ ಬಹಳ ನಿಷ್ಠಾ ಉಳ್ಳವರಾಗಿ, ಕೆಲಸ ಆದಮ್ಯಾಲೆ ಯಾದವಪತಿ ಅಪ್ಪಣೆ ಕೊಂಡು, ಇಂದ್ರಪ್ರಸ್ಥಕ್ಕೆ ಬಂದರು.

ಮಯಾಸುರ ಕೊಟ್ಟಂಥ ದಿವ್ಯ ಸಭಾದೊಳಗೆ, ಧರ್ಮರಾಯ ಸಮಸ್ತ ರಾಯರಿಂದ ಕೂಡಿ, ತನ್ನ ಭೃತ್ಯರ ಸಹವಾಗಿ ಕುಳಿತಿದ್ದಾನೆ. ಅಲ್ಲಿಗೆ ದೇವಋಷಿ

ನಾರದನು ಬಂದನು. ಮಹರ್ಷಿ ಬಂದನೆಂದು ಧರ್ಮರಾಯ ಅರ್ಘ್ಯಾದಿಪೂಜೆ ಮಾಡಿ, ಸಿಂಹಾಸನದಲ್ಲಿ ನಾರದನ್ನ ಕೂಳ್ಳಿರಿಸಿ ಕೇಳ್ತಾನೆ. 'ಸ್ವಾಮಿ ನಾರದ-ಮಹರ್ಷಿ, ನೀನು ಹದಿನಾಲ್ಕು ಲೋಕ ತಿರಗತಿದ್ದಿ. ಬಹು ಸಭಾಗಳನ್ನ ನೋಡಿದ್ದಿ. ಇಂಥಾ ಸಭಾ ಎಲ್ಲಾದರೂ ಕಂಡಿದ್ಯಾ?' ಎಂದು ಕೇಳಲಾಗಿ, ನಾರದ ರಾಯನ ಪ್ರಶ್ನವಚನಕ್ಕೆ ಸಭಾ ವರ್ಣಿಸಿದ. ಬ್ರಹ್ಮ, ರುದ್ರ, ಇಂದ್ರ, ವರುಣ ಮೊದಲಾದ ದಿಕ್ಪಾಲಕರ ಸಭಾ, ಈ ಪ್ರಕಾರ ವರ್ಣನಾ ಸಭಾಪರ್ವದಲ್ಲಿ ಬಹಳೇ ಹೇಳಿದ್ದಾರೆ. ಶ್ರೀಮದಾಚಾರ್ಯರು ಸಭಾವರ್ಣನ ಸಂಗ್ರಹಿಸಿ ಹೇಳಬೇಕಾಗಿ, ಕೆಳಗಿನ ಏಳು ಲೋಕ, ಮೇಲಿನ ಏಳು ಲೋಕ ಹೀಂಗೆ ಹದಿನಾಲ್ಕು ಪರಿಮಿತಿ ಹೇಳಬೇಕಾಗಿ, ಮೊದಲಿಗೆ ಹೇಳಿದ್ದಲ್ಲದೆ ಸಭಾವರ್ಣನ ಹೇಳಬೇಕಾಗಿ ಮೇಲಿನ ಲೋಕ ಹೇಳಥಾರೆ.

ಭೂಮಿ ಆರಂಭ ಮಾಡಿಕೊಂಡು, ಮೇಲಿನ ಏಳು ಲೋಕ ಇಪ್ಪತ್ತೈದು ಕೋಟಿ ಯೋಜನ. ಅಂತರಿಕ್ಷಲೋಕ, ಒಂದುಲಕ್ಷ ಯೋಜನ; ಸ್ವರ್ಗಲೋಕ ಐವತ್ತುಲಕ್ಷ ಯೋಜನ; ಅಂತರಾಳ ಐವತ್ತುಸಾವಿರ ಯೋಜನ; ಮಹರ್ಲೋಕ ಎಪ್ಪತ್ತೈದುಲಕ್ಷ ಯೋಜನ; ಅಂತರಾಳ ಒಂದುಕೋಟಿ ಇಪ್ಪತ್ತೈದುಲಕ್ಷ; ಜನೋಲೋಕ ಒಂದುಕೋಟಿ ಹನ್ನೆರಡುಲಕ್ಷ; ಅಂತರಾಳ ಒಂದುಕೋಟಿ ಐವತ್ತುಲಕ್ಷ; ತಪೋಲೋಕ ಒಂದುಕೋಟಿ ಆರವತ್ತುಲಕ್ಷವಪ್ಪತ್ತೈದುಸಾವಿರ ಯೋಜನ; ಅಂತರಾಳ ಒಂದುಕೋಟಿಐವತ್ತುಲಕ್ಷ ಯೋಜನ; ಸತ್ಯಲೋಕ ನಾಲ್ಕುಕೋಟಿ ಆರವತ್ತುಲಕ್ಷ ಇಪ್ಪತ್ತೈದುಸಾವಿರ; ಅಂತರಾಳ ಐವತ್ತುಲಕ್ಷ; ವೈಕುಂಠ ಎಂಟುಕೋಟಿಹನ್ನೆರಡುಲಕ್ಷಐವತ್ತುಸಾವಿರ; ಅಂತರಾಳ ಎರಡುಕೋಟಿ ತೊಂಭತ್ತೆಂಟುಲಕ್ಷ ಐವತ್ತುಸಾವಿರ ಯೋಜನ; ಅಂತೂ ಇಪ್ಪತ್ತೈದುಕೋಟಿ. ಈ ಪ್ರಕಾರ ಸ್ವರ್ಗ, ಇಲ್ಲಿಗೆ ಐವತ್ತುಲಕ್ಷದೊಳಗೆ ಸಪ್ತಋಷಿಮಂಡಲ, ಸೂರ್ಯ, ಚಂದ್ರ, ಗ್ರಹಮಂಡಲ ತೆಗೆದುಕೋಬೇಕು. ಅಂತರಿಕ್ಷಲೋಕ, ಸ್ವರ್ಗಲೋಕ ಅಡ್ಡಗಲಕ್ಕೆ ಕೋಟಿ ಯೋಜನ ವಿಸ್ತಾರ. ಇನ್ನು ಮಹರ್ಲೋಕ, ಸ್ವರ್ಗ ಅರ್ಧ ತೆಗೆದುಕೋಬೇಕು. ಇಪ್ಪತ್ತೈದುಲಕ್ಷ ಅಂತರಾಳ. ಈ ಪ್ರಕಾರ ಒಂದನ್ನ ನೋಡಲಿಕ್ಕೆ ಅದೇ ಅರ್ಧ ತಿಳಿಯಬೇಕು. ಮಹರ್ಲೋಕ ಮೊದಲು ಮಾಡಿ-ಕೊಂಡು ಇವೆಲ್ಲ ಅಡ್ಡಗಲ ಬ್ರಹ್ಮಾಂಡಖರ್ಪರಕ್ಕೆ ಹತ್ತಿಕೊಂಡವೆ. ತಪೋಲೋಕ ಪರ್ಯಂತ ಅದೇ ಅರ್ಧ ಹೇಳಿ, ಈ ನಾಲ್ಕು ಲೋಕ ಕೂಡಿದರೆ ಎಷ್ಟು, ಅಷ್ಟರ ದ್ವಿಗುಣ ಸತ್ಯಲೋಕ. ಸತ್ಯಲೋಕದಲ್ಲಿ ಬ್ರಹ್ಮರಾಯ ತನ್ನ ಪದವಿ ಆಳಥಾನೆ. ಸಮಸ್ತ ದೇವತಿಗಳ ಕೈಯಿಂದ ವಾಲ್ಗಿಸಿಕೊಳ್ಳಥಾನೆ.

ಸತ್ಯಲೋಕ ದ್ವಿಗುಣ ವೈಕುಂಠಲೋಕ. ಅಲ್ಲಿ ಸಾಕ್ಷಾತ್ ಲಕ್ಷ್ಮೀಪತಿ ಶಶ್ವದೇಕಪ್ರಕಾರನಾಗಿ ಮುಕ್ತಬ್ರಹ್ಮರ ಕೈಯ ಸೇವಿ ಕೊಳ್ಳಥಾನೆ. ವೈಕುಂಠಕ್ಕೆ ನಾಶವಿಲ್ಲ. ಅಲ್ಲಿ ನಾರಾಯಣ ಇರಥಾನೆ. ಸ್ವರ್ಗಸುಖ ನೋಡಲಿಕ್ಕೆ ಮಹ-

ಎನಿಸೋದಿಲ್ಲ. ನಾನಾ ಕಾಮಭೋಗಗಳು, ನಾನಾ ಸುಖಗಳು ವೈಕುಂಠದಲ್ಲಿ ಆಗತವೆ. ಅಲ್ಲಿ ದಿವ್ಯ ಸ್ತ್ರೀಯರಿದ್ದಾರೆ. ಇವರೆಲ್ಲ ಚಿದಾನಂದದೇಹ ಉಳ್ಳವರು, ವೈಕುಂಠದಲ್ಲಿ ಸ್ವಾಮೀ ಪಾದಕಮಲ ವಾಲ್ಸ್ಲ್ಯಸಥಾ, ಬಹಳ ಸುಖ ಉಳ್ಳವರಾಗಿರ ಥಾರೆ. ಹೀಂಗೆ ವ್ಯಾಲಿನ ಇಪ್ಪತ್ತೈದು ಕೋಟಿ.

ಇನ್ನು ಅತ್ತಳ ವಿತಳ, ಸುತಳ, ಮಹಾತಳ, ತಳಾತಳ, ರಸಾತಳ, ಪಾತಾಳ ಹೀಂಗೆ ಏಳು ಲೋಕ, ಒಂದಕ್ಕೆ ಹನ್ನೆರಡುಸಾವಿರ ಯೋಜನ. ಭೂತಳ ಸಹವಾಗಿ ಹೀಂಗೆ ಎಂಭತ್ತುನಾಲ್ಕುಸಾವಿರ ಯೋಜನ, ಅಂತು ಲಕ್ಷ ಯೋಜನ. ಉಳವರಿ ಇಪ್ಪತ್ತನಾಲ್ಕು ಕೋಟಿ ತೊಂಭತ್ತೊಂಭತ್ತುಲಕ್ಷ ಯೋಜನ ಉದಕಮಯ. ಕೆಳಗಿನ ಏಳು ಲೋಕಗಳಲ್ಲಿ ನಾನಾ ಭೋಗಗಳವೆ. ಪಾತಾಳದಲ್ಲಿ ಶೇಷನಿದ್ದಾನೆ— ವಾಯು ಕೂರ್ಮನಾಧಾರದಲ್ಲಿದ್ದಾನೆ. ಈ ಭೂಮಿ ಹೊತ್ತಾನೆ. ಅಂಡೋದಕದ ವ್ಯಾಲಿ ನಾರಾಯಣಕೂರ್ಮ, ಅದರವ್ಯಾಲಿ ವಾಯುಕೂರ್ಮ, ಅದರವ್ಯಾಲೆ ಶೇಷ ಭೂಮಿ ಹೊತ್ತಾನೆ. ಈ ಪ್ರಕಾರ ತಿಳಿಯಬೇಕು. ಇದಿಷ್ಟೂ ನಾರದನಿಂದ ಹೇಳಲ್ಪಟ್ಟದೆ.

ಧರ್ಮರಾಯ ನಾರದನ ಕೇಳಥಾನೆ ' ಎಲ್ಲೈ ನಾರದನೇ ಈ ಕೆಳಗಿನ ಲೋಕ-

ವಲ್ಲದೆ, ವ್ಯಾಲಿನ ಲೋಕ ಕ್ಷೀರಸಾಗರ ಶ್ವೇತದ್ವೀಪವದೆ. ಅಲ್ಲಿ ಮುಕ್ತಬ್ರಹ್ಮರು ನಾರಾಯಣನ ಪೂಜಿ ಮಾಡಥಾರೆಂದು ಹೇಳಿದಿ. ಪಾತಾಳಲೋಕಗಳು, ಸಪ್ತ ದ್ವೀಪಗಳು, ನವಖಂಡ ಪೃಥಿವೀ, ಸ್ವರ್ಗಗಳು, ಮೇಲಣ ಸ್ವರ್ಗದಲ್ಲಿ ಅಲ್ಲಲ್ಲಿ ದೇವತಿಗಳು ತಮ್ಮ ಸ್ತ್ರೀಯರಿಂದ ಕೂಡಿ ಕ್ರೀಡಾ ಮಾಡಥಾರೆ, ಇದಕ್ಕೆಲ್ಲ ನಾರಾಯಣ ಮುಖ್ಯನೆಂದು ಹೇಳಿದಿ. ನಮ್ಮ ತಂದಿ ಪಾಂಡುಚಕ್ರವರ್ತಿ ಯಮ-ಲೋಕದಲ್ಲಿಹಾನೆಂದು ಹೇಳಿದಿ. ಸತ್ಯಲೋಕದಲ್ಲಿ ಯಜ್ಞಾಭಿಮಾನಿ ದೇವತಿಗಳಿ ಇದ್ದಾರೆ, ಸ್ವರ್ಗದಲ್ಲಿ ಮುನಿಗಳಿದ್ದಾರೆ, ಹರಿಶ್ಚಂದ್ರರಾಯನಿದ್ದಾನೆಂದು ಹೇಳಿದಿ. ಯಮದೇವರ ಕೈಯ ರಾಮ ಪೂಜಿ ಕೊಳ್ಳಥಾನೆಂದು ಹೇಳಿದಿ. ಇಂದ್ರನ ಕೈಯ ಉಪೇಂದ್ರ ಪೂಜಿ ಕೊಳ್ಳಥಾನೆಂದು ಹೇಳಿದಿ. ನಾರಾಯಣನ ಅನಂತಾನಂತ ಅವ. ತಾರಗಳು ಬ್ರಹ್ಮದೇವರು ಪೂಜಿ ಮಾಡಥಾನೆಂದು ಹೇಳಿದಿ. ಗಂಧರ್ವರು ಕುಬೇರ ನಿಂದ ಯುಕ್ತರಾಗಿ, ಕಲ್ಕಿನಾಮಕ ನಾರಾಯಣನ ಪೂಜಿ ಮಾಡಥಾರೆ; ನರಸಿಂಹ-ದೇವರ ಪೂಜಿ, ಮಹಾರುದ್ರ ತನ್ನ ಭೂತಗಣಗಳಿಂದ ಯುಕ್ತನಾಗಿ ಮಾಡಥಾನೆ; ಈ ಪ್ರಕಾರ ಭೂಗೋಳ ವಿಸ್ತಾರ, ಪೂಜ್ಯರು ಪೂಜಕರು, ಅವರವರ ಲೋಕ, ಅಲ್ಲಿದ್ದಂಥ ಸಭಾವರ್ಣನಿ ನನಗೋಸ್ಕರ ಹೇಳತಾ ಬಂದಿ. ಎಲ್ಲೈ ನಿರ್ದೋಷಿ ನಾರದನೇ, ಇದರೊಳಗೆ ನನಗೆ ಸಂಶಯ ತೋರತದೆ. ಹರಿಶ್ಚಂದ್ರರಾಯ ನೀಚ, ಅತಗೆ ಸ್ವರ್ಗವಾಗೋಣ, ನಮ್ಮ ತಂದೀ ಪಾಂಡುಚಕ್ರವರ್ತಿ ದೊಡ್ಡಾತ, ಯಮ-ಲೋಕದಲ್ಲಿದ್ದಾನೆಂತ ಹೇಳಿದಿ. ಈ ವಿಪರೀತ ಏನುಕಾರಣ ಆಯಿತು ಹೇಳು' ಎಂದನು.

ಹೀಂಗೆ ಧರ್ಮರಾಯ ಕೇಳಲಿಕ್ಕೆ, ನಾರದ ಮಾತನಾಡಥಾನೆ " ಕೇಳಯ್ಯ ಧರ್ಮರಾಯ, ಹರಿಶ್ಚಂದ್ರ ನೀಚನಾದರೂ, ರಾಜಸೂಯ ಯಾಗ ಮಾಡಿದ್ದ ಕಾರಣ ಸ್ವರ್ಗದಲ್ಲಿದ್ದಾನೆ. ನಿಮ್ಮ ತಂದೀ ಯಾಗ ಮಾಡಿದ್ದಿಲ್ಲ. ಆದಕಾರಣ ಯಮಧರ್ಮನ ಲೋಕದಲ್ಲಿದ್ದಾನೆ. ನಾನು ಹದಿನಾಲ್ಕು ಲೋಕ ತಿರಗತ ಯಮ-ಧರ್ಮಲೋಕಕ್ಕೆ ಹೋಗಿದ್ದೆ. ಆಲ್ಲಿ ನಿಮ್ಮ ತಂದೀ ಕಂಡಿದ್ದೆ. ನಿಮ್ಮ ತಂದೀ ನನಗೆ ಹೇಳಿದ. ' ಧರ್ಮರಾಯಗೆ ಹೇಳಿ ರಾಜಸೂಯ ಯಾಗ ಮಾಡಿಸು ' ಎಂದು ಹೇಳಿದ. ರಾಜಸೂಯ ಯಾಗ ಸಮಸ್ತ ರಾಯರ ಗೆಲ್ಲದ ಹೊರ್ತು ಹ್ಯಾಂಗೆ ಆಗತದೆಂದು ಕೇಳಿದೆ. ' ಧರ್ಮರಾಯಗೆ ತಮ್ಮಂದರು ಭೀಮಾರ್ಜುನರು ಬಲಿಷ್ಠರಿದ್ದಾರೆ. ಅಣ್ಣನ ಆಜ್ಞಾಧಾರಕರಿದ್ದಾರೆ. ವಾಸುದೇವನಿಂದ ಪಾಲಿತರಾಗ್ಯಾರೆ. ರಾಜಸೂಯ ಯಾಗ ಮಾಡಲಿಕ್ಕೆ ಅವರಿಂದ ಅಸಾಧ್ಯವಲ್ಲ. ನೀನು ಹೋಗಿ ನನ್ನ ಹಿರೇಮಗ ಧರ್ಮರಾಯಗೆ ಹೇಳು ' ಎಂದು ಪಾಂಡುಚಕ್ರವರ್ತಿ ಬಹಳವಾಗಿ ಹೇಳಿದ. ದೈವೇಚ್ಛೆಯಿಂದ ನಿನ್ನ ಸಮೀಪಕ್ಕೆ ಬಂದೆ. ನಿಮ್ಮ ತಂದೀ ಆಜ್ಞೆ, ನೀನು ಜ್ಯೇಷ್ಠಮಗನಿದ್ದಿ, ತಂದೀ ಅಭಿಪ್ರಾಯ ಮಾಡಬೇಕು. ಆಲಸ್ಯರಹಿತನಾಗಿ ಶೀಘ್ರ ಯಾಗ ಮಾಡು " ಎಂದು ಹೇಳಲಿಕ್ಕೆ, ಧರ್ಮರಾಯ, ರಾಜಸೂಯ ಯಾಗ ತನ್ನಿಂದ ಹ್ಯಾಂಗೆ ಆದೀತೆಂದು ವಿಚಾರಕ್ಕೆ ಬಿದ್ದ. ರಾಯ, ತನ್ನ ತಮ್ಮಂದರನ್ನ ಕೇಳಿದ. ' ರಾಜಸೂಯ ಯಾಗ ಆಗತ್ಯ ಮಾಡಬಹುದು ' ಎಂದರು. ' ನಿನ್ನ ಭರವಸಿ ಆಗದು. ಶ್ರೀಕೃಷ್ಣನ್ನ ಕರೆಸಬೇಕು ' ಎಂದು ಶೀಘ್ರ ಸಾರಥಿಯನ್ನು ಕಳುಹಿದನು.

ಈ ಕಡೀಲಿಂದ ಧರ್ಮರಾಯನ ದೂತ ಹೋದ. ಆ ಕಡೀಲಿಂದ ಮಗಧ ದೇಶದಿಂದ ಸಮಸ್ತ ರಾಯರ ದೂತರು ಬಂದರು. ಆ ರಾಯರಷ್ಟೂ ಮುಂದಿ, ಸ್ವಾಮಿಗೆ ಹದಿನಾರುಸಾವಿರದಒಂದುನೂರಾಎಂಟು ಮುಂದಿ ಹೆಂಡಂದಿರ ಬಾಂಧವರಾಗಬೇಕು. ಕೆಲವರು ಕೃಷ್ಣಗೆ ಭಾವಮೈದುನರು, ಮೂವಂದಿರಾಗಬೇಕು. ಅವರನ್ನೆಲ್ಲ ಜರಾಸಂಧ ಕೈಸೆರಿ ತಂದು, ಪರ್ವತದ ಹೊದರಿನಲ್ಲಿ ಹಾಕಿಹ. ಹೀಂಗೆ ಇಪ್ಪತ್ತೆಂಟುಸಾವಿರದಎಂಟುನೂರು ಮುಂದಿ ರಾಯರನ್ನು, ಬಹಳೀ ನಿರ್ಬಂಧ ಮಾಡಿ ಇಟ್ಟಿಹ. ಮಹಾರುದ್ರನಿಗೋಸ್ಕರ ರಾಯರನೆಲ್ಲ ಹೋಮಿಸಬೇಕಂತ ಮಾಡಿಹ. ಜರಾಸಂಧನ ಅಗ್ಗಳಿಕೆಗಳನ್ನೆಲ್ಲ ದೂತರ ಕೈಯ, ಸ್ವಾಮಿಗೆ ಹೇಳಿ ಕಳುಹಿಸಿಕೊಟ್ಟರು. ರಾಯರ ದೂತರು ಬಂದು ವಾರ್ತಿ ಹೇಳಥಾರೆ. ' ಸ್ವಾಮಿ ನೀನು ಇರಲಿಕ್ಕೆ ಇಂಥಾ ಅನ್ಯಾಯ! ಜರಾಸಂಧ ಪುರುಷಪಶು ಮಾಡೇನೆಂಥಾನೆ. ಪುರುಷಪಶು ವೇಧಕ್ಕೆ ವಿರುದ್ಧ. ಇಂಥಾ ಯಜ್ಞ ಮಾಡೇನೆಂಥಾನೆ. ನೀನು ಸರ್ವೇಶ್ವರ, ವಿವಾಹಬಾಂಧವನಿದ್ದಿ. ಜರಾಸಂಧನ ಯಜ್ಞ ಖಂಡಿಸಿ, ನಿನ್ನ ವಿವಾಹ-ಬಾಂಧವರ ಕೈಸೆರಿ ಬಿಡಿಸು.' ಹೀಂಗೆ ರಾಜದೂತರು ಮಾತನಾಡಥಾರೆ. ಅಷ್ಟರೊಳಗೆ

ಧರ್ಮರಾಯನ ಸಾರಥಿ ಬಂದ. 'ಸ್ವಾಮಿ ರಾಜಸೂಯ ಯಾಗ ಮಾಡಲಿಕ್ಕೆ ಬರಬೇಕು' ಎಂದು ಹೇಳಲಿಕ್ಕೆ, ಇನ್ನು ದಾವ ಕಡಿಗೆ ಹೋಗಬೇಕೆಂದು ನೀತಿಜ್ಞಾನ ಉಳ್ಳ ಉದ್ಧವನ್ನ ಕೇಳಿದ್ದಾನೆ. 'ಪಾಂಡವರ ಕಡಿ ಹೋದರೆ ಎರಡೂ ಕಾರ್ಯ ಸಾಧಿಸಿ ಬರತದೆ' ಎಂದು ಉದ್ಧವ ಹೇಳಲಿಕ್ಕೆ ಸ್ವಾಮಿ, ಇಂದ್ರಪ್ರಸ್ಥಕ್ಕೆ ಬಂದನು.

ಪಾಂಡವರು ಸ್ವಾಮೀನ್ನ ಎದುರುಗೊಂಡು ಕರಕೊಂಡು ಹೋಗಿ, ದಿವ್ಯ ಸಭಿ ಮಾಡಿ ಸಿಂಹಾಸನದಲ್ಲಿ ಕುಳ್ಳಿರಿಸಿ, ಅರ್ಘ್ಯಾದಿ ಮಧುಪರ್ಕ ಪೂಜಿ ಮುಗಿದ ವ್ಯಾಲೆ, ಸ್ವಾಮೀ ಕೂಡ ಧರ್ಮರಾಯ ಮಾತನಾಡಥಾನೆ. ನಾರದನ ಮುಖದಿಂದ ಪಾಂಡುಚಕ್ರವರ್ತಿ ಹೇಳಿಕಳುಹಿಸಿದ ವೃತ್ತಾಂತ ಸ್ವಾಮೀ ಮುಂದೆ ಹೇಳಲಾಗಿ, "ರಾಯ ಅವಶ್ಯ ರಾಜಸೂಯ ಯಜ್ಞ ಮಾಡಬೇಕು. ಯಜ್ಞ ಮಾಡಿದ್ದರಿಂದ ಋಜುಗಣದವರಿಗೆ ಬ್ರಹ್ಮಪದವಿ ಬರತದೆ. ಬ್ರಹ್ಮಪದವಿಗೆ ಅಯೋಗ್ಯನಾದವ ರಾಜಸೂಯ ಯಜ್ಞ ಮಾಡಿದ ಪಕ್ಷವೇ, ಯಜ್ಞಪ್ರಭಾವದಿಂದ ಸಾಮಾನ್ಯ ಯೋಗ್ಯತಿ ಉಳ್ಳವರಿಗಿಂತ ಶ್ರೇಷ್ಠನಾಗಥಾನೆ. ಈ ಯಾಗ ಮಾಡಿದವ ಪ್ರಾರಬ್ಧ-ಕರ್ಮದಿಂದ ದಾವ ಯೋನಿಯಲ್ಲಾದರೂ ಹುಟ್ಟಿದ ಪಕ್ಷವೇ, ಆ ಜಾತೀಲಿ ಶ್ರೇಷ್ಠನಾಗಥಾನೆ, ತ್ರಿಶಂಕು, ಭರತ, ಹರಿಶ್ಚಂದ್ರರಾಯರೊಳಗೆ ಎಣಿಕೆಗೆ ಬರಥಾನೆ. ಹರಿಶ್ಚಂದ್ರ, ಪಾಂಡುಚಕ್ರವರ್ತಿ ಹಾಂಗೆ ದೇವಾಂಶನಲ್ಲ; ನೀಚನಾದರೂ ರಾಜ-ಸೂಯ ಯಾಗ ಮಾಡಿದ ಕಾರಣ ಸ್ವರ್ಗಕ್ಕೆ ಹೋದ. ರಾಜಸೂಯ ಯಾಗ ಮಾಡದಕಾರಣ, ದೇವಾಂಶನಾದರೂ ನಿಮ್ಮ ತಂದೀ ಯಮಲೋಕದಲ್ಲಿದ್ದಾನೆ. ಇನ್ನು ದೃಷ್ಟಕಾರಣ ಹೇಳಥೀನಿ. ನಿಮ್ಮ ತಂದಿ ಪಾಂಡುಚಕ್ರವರ್ತಿ, ನಾಲ್ವತ್ತೊಂಭತ್ತು ಮರುತ್ತರೊಳಗೆ ಒಬ್ಬ ಮ್ಮರುತ. ತಾ ಸ್ನಾನ ಮಾಡಿ ಕುಳಿತಿರಲಾಗಿ, ಅಲ್ಲಿಗೆ ದೇವೇಂದ್ರ ಬಂದ. ದೊಡ್ಡವರು ಬಂದರೆ ನಿಂದರಬೇಕು. ತಪಸ್ಸಿನ ಆಸನದಲ್ಲಿ ಚಲನಿ ಮಾಡಬಾರದೆಂದು ಸುಮ್ಮಗೆ ಕುಳಿತಿದ್ದ. ತಪಸ್ಸು ಬಿಟ್ಟು ದೇವೇಂದ್ರನ ವಾಲ್ಗೈಸಲಿಕ್ಕೆ ಹೋಗಿದ್ದಿಲ್ಲ. ಆದಕಾರಣ ದೇವೇಂದ್ರನ ಶಾಪ ವಾಯಿತು. 'ಮನುಷ್ಯನಾಗಿ ಹುಟ್ಟಿ ಸಾಮ್ರಾಜ್ಯ ಕೆಲವು ದಿನ ಆಳಿ ನಿನ್ನ ಮೂಲರೂಪ ಕೂಡಬ್ಯಾಡ. ಯಮಲೋಕದಲ್ಲಿರು. ನೀಚನಾದಂಥ ತ್ರಿಶಂಕುವಿನ ಮಗ ಹರಿಶ್ಚಂದ್ರ, ಸ್ವರ್ಗಕ್ಕೆ ಹೋದನೆಂದು ಅವನ ಕಂಡು ದುಃಖಪಡು' ಹೀಂಗೆಂದು ದೇವೇಂದ್ರನ ಶಾಪವಾಗಲಿಕ್ಕೆ ನಮಸ್ಕಾರ ಮಾಡಿ ಬೇಡಿಕೊಂಡ. 'ನಿನ್ನ ಮಕ್ಕಳು ಪಾಂಡವರು ರಾಜಸೂಯ ಯಾಗ ಮಾಡಿದ ಪಕ್ಷವೇ, ನಿನ್ನ ಮೂಲರೂಪ ಕೂಡು' ಎಂದು ಇಂದ್ರನ ವರವು ಅದೆ. ರಾಜಸೂಯ ಯಾಗ ಮಾಡಿದವರಿಗೆ ಮಹಾ ಫಲ' ಎಂದು ಶ್ರೀಕೃಷ್ಣ ಧರ್ಮರಾಯಗೆ ಹೇಳಿ, ಆ ಸಾಧನಕ್ಕೆ ಭೀಮಸೇನನ್ನ ಮಾಡಬೇಕಾಗಿ, ಧರ್ಮರಾಯಗೆ ವಾಯುವಾಹನನು ಅಂಜಿಕಿ ಹುಟ್ಟಿಸಿಕೊಟ್ಟ. ಸ್ವಾಮಿ, ಗರುಡವಾಹನ, ವಾಯುವಾಹನ ಹ್ಯಾಂಗೆಂದರೆ,

ಪ್ರಾಣಿಗಳ ದೇಹದಿಂದ ಬಿಟ್ಟು ಹೋಗುವಾಗ ವಾಯುವಾಹನನಾಗಿ ಹೋಗಥಾನೆ. ಅಂಥಾ ವಾಯುವಾಹನ ಶ್ರೀಕೃಷ್ಣ ಧರ್ಮರಾಯನ ಕುರಿತು ಮಾತನಾಡಿದ. 'ರಾಯಾ, ಜರಾಸಂಧ ಬದಿಕಿರಲಿಕ್ಕೆ ರಾಜಸೂಯ ಯಾಗ ಹ್ಯಾಂಗಾದೀತು! ಯುದ್ಧ ಮಾಡಿ ದಾರು ಜರಾಸಂಧನ ಗೆಲ್ಲಲಾಪರು! ನಮ್ಮ ಬಲರಾಮ ಮೊದಲಾಗಿ ಜರಾಸಂಧನ ಸೋಲಿಸದೇ ಹೋದರು. ಜರಾಸಂಧಗೆ ಬ್ರಹ್ಮ-ರುದ್ರದೇವರ ವರವದೆ. ಜರಾಸಂಧ ಬದುಕಿರೋ ಪರಿಯಂತ ನೀನು ರಾಜಸೂಯ ಯಾಗ ಮಾಡಲಾರಿ.'

ಈ ಪ್ರಕಾರ ಕೃಷ್ಣ ಮಾತನಾಡಲಿಕ್ಕೆ, ಧರ್ಮರಾಯ ಮಾತನಾಡಿದ. 'ಎಲ್ಲೆ ಕೃಷ್ಣಪ್ರಭುವೇ, ನಮಗೆ ಯಜ್ಞ ಹತ್ತದು. ಜರಾಸಂಧನ ಕೊಲ್ಲುವ ಸಾಮರ್ಥಿ ನಮಗಿಲ್ಲ. ನಿನ್ನಂಥ ಪರಮ ಸಮರ್ಥನ ಕೂಡ ದ್ವೇಷ ಕಟ್ಟಿ, ಹವಿ. ನೆಂಟಾವರ್ತಿ ಯುದ್ಧಕ್ಕೆ ಬಂದಿದ್ದ. ನಮ್ಮಿಂದ ಜರಾಸಂಧನ ಕೊಲ್ಲುವ ಸಾಮರ್ಥಿ ಆಗುವ್ರದಿಲ್ಲ. ಮೊದಲೇ ಇದ್ದ ದುಷ್ಯಂತರಾಯ ಮೊದಲಾದವರು ರಾಜಸೂಯ ಯಾಗ ಮಾಡಲಿಲ್ಲವೆ ಎಂದಲ್ಲಿ, ಆಗ್ಗೆ ಜರಾಸಂಧನಂಥ ಪ್ರಬಲ ರಾಯರಿದ್ದಿಲ್ಲ. ಕ್ಷುದ್ರ ರಾಯರ ಗೆದ್ದು ರಾಜಸೂಯ ಯಾಗ ಮಾಡಿದರು.' ಹೀಂಗೆ ಧರ್ಮರಾಯ ಧೈರ್ಯಭ್ರಷ್ಟನಾಗಿ ಮಾತನಾಡಲಿಕ್ಕೆ, ಭೀಮಸೇನ ಎದ್ದುನಿಂತು ಮಾತನಾಡಥಾನೆ. 'ಅಣ್ಣಾ, ಧೈರ್ಯ ಬಿಡಬೇಡ, ಯಜ್ಞ ಮಾಡಲೇಬೇಕು. ನಮ್ಮ ವ್ಯಾಳೆ ಶ್ರೀಕೃಷ್ಣನನುಗ್ರಹವದೆ. ದೇಹದಲ್ಲಿ ಬಲ ಸಾಮರ್ಥಿ ಅದೆ. ಇಷ್ಟೂ ಇರಲಿಕ್ಕೆ, ಧೈರ್ಯಭ್ರಷ್ಟನಾಗಬಾರದು. ಯತ್ನ ಮಾಡಬೇಕು. ಯತ್ನದಿಂದ ಮಹದೈಶ್ವರ್ಯ ಸಂಪಾದಿಸೇವು. ರಾಯಾ ಅಂಜಬ್ಯಾಡ' ಎಂದು ಭೀಮಸೇನ ಪ್ರಧಾನೋದ್ಯೋಗಕ್ಕೆ ನಿಂದರಲಿಕ್ಕೆ, ಕೃಷ್ಣ ಪುನಃ ಜರಾಸಂಧನ ಬಲ ಹೊಗಳಥಾನೆ. 'ಜರಾಸಂಧ ಸಜ್ಜನರ ವೈರಿಗಳಿಗೆ ಬಲಪ್ರದ. ಮಹಾಬಲಿಷ್ಠ. ಕಲೀತರುವಾಯ ಜರಾಸಂಧ ಮಹಾ ದೊಡ್ಡವ, ಶಿವಭಕ್ತರೊಳಗೆ ಅಗ್ರೇಸರ. ಸಮಸ್ತ ರಾಯರನೂ ಸೋಲಿಸ್ಯಾನೆ. ಇಂಥಾವನ ಕೊಲ್ಲೋಣ ವೈಷ್ಣವೋತ್ತಮನ ವ್ಯತಿರಿಕ್ತ ಆಗದು. ಜರಾಸಂಧ ಮಹಾ ಪರಾಕ್ರಮಿ. ಹೀಂಗೆ ಶ್ರೀಕೃಷ್ಣ ಹೊಗಳಲಿಕ್ಕೆ, ಧರ್ಮರಾಯ, 'ಜರಾಸಂಧನ್ನ ಕೊಲ್ಲಲಿಕ್ಕೆ ಇಂಥಾ ದೊಡ್ಡವನ್ನ ನಾನು ಎಲ್ಲಿ ಹುಡುಕಿ ತರಲಿ! ಸಾಕು ರಾಜಸೂಯ ಯಾಗ' ಎನಲಿಕ್ಕೆ, ಭೀಮಸೇನ ಮಾತನಾಡಿದ. 'ರಾಯಾ ಕೃಷ್ಣನ ಅಭಿಪ್ರಾಯ ನೀ ಇನ್ನೂ ತಿಳಿಯಲಿಲ್ಲ. ಏನು-ಕಾರಣ ಅಂಜತಿದ್ದಿ! ಜರಾಸಂಧನ ಕೊಲ್ಲಥೀನಿ' ಎನ್ನಲು, ಕೃಷ್ಣ ಮಾತನಾಡಥಾನೆ. 'ಇಂಥಾ ಪ್ರಬಲನ ಎದುರಿಗೆ ಭೀಮಸೇನ ಒಬ್ಬನ್ನೇ ಕಳುಹಬಾರದು. ಭೀಮ, ಅರ್ಜುನ, ನಾನು ಮೂರೂ ಮಂದಿ ಕೂಡಿ ಹೋಗಬೇಕು.' ಹೀಂಗಂತ ಅನಲಿಕ್ಕೆ, ಧರ್ಮರಾಯ ಅಂದ, 'ಸ್ವಾಮಿ ನೀನು ಜರಾಸಂಧನ ಉಪದ್ರವದಿಂದ ಜಲದುರ್ಗ

ಕಟ್ಟಿಸಿದ್ದಿ. ನನ್ನ ನಿಮಿತ್ತ ನೀನು ಹೋಗಬ್ಯಾಡ. ನನ್ನ ಭೀಮಾರ್ಜುನರನ್ನ ಕೊಡಲಾರೆ. ಭೀಮಾರ್ಜುನರು ನನಗೆ ಎರಡು ಕಣ್ಣು, ನೀನು ನನ್ನ ಮನಸ್ಸು. ಹೀಂಗೆ ಮೂವರೂ ಹೋದವ್ಯಾಲೆ, ನನ್ನ ಬದುಕೋಣ ಯಾತಕ್ಕೆ ಬಂದೀತು!' ಹೀಂಗೆ ಧರ್ಮರಾಯ ಬಹಳೇ ಚಿಂತಿಯಿಂದ ಮಾತನಾಡಿದ.

ವೈರಿಗಳನ್ನು ಸುಡುವಂಥ ಭೀಮಸೇನ ಹೇಳಥಾನೆ. 'ರಾಯಾ, ನಮ್ಮ ಸ್ವಾಮಿಗೆ ಅಂಜಿಕಿ ತಿಳಿದ್ಯಾ! ರಮಾಬ್ರಹ್ಮಾದಿ ಜಗತ್ತು ಉಸಿರು ಬಿಡೋ ವ್ಯಾಪಾರ ನಮ್ಮ ಸ್ವಾಮೀ ಅಧೀನ. ಸುರಾಸುರ ಬಲವೆಲ್ಲ ಈತನ ಕೈಯೊಳಗೆ ಅದೆ. ಜರಾಸಂಧ ದೊಡ್ಡ ವೈರಿ ಎಂತ ತಿಳಿದಿದ್ದಿ. ನಾವೆಲ್ಲ ಕೃಷ್ಣನಾಯಕತ್ವದಿಂದ ಇದ್ದೀವಿ. ನನ್ನಂಥ ಭೃತ್ಯರು, ಅನಂತಮಂದಿ ಇದ್ದಾರೆ. ನನ್ನ ಬಲ ನೋಡು! ಈ ಸ್ವಾಮೀ ಅನುಗ್ರಹದಿಂದ ಬ್ರಹ್ಮಾಂಡ ಪುಡಿಪುಡಿ ಮಾಡೇನು! ಕೃಷ್ಣನ ಅನುಗ್ರಹಕ್ಕೆ ಅರ್ಜುನ ಪಾತ್ರನಾಗ್ಯಾನೆ. ಕೃಷ್ಣ, ಅರ್ಜುನ, ನಾನು ಮೂರು ಮಂದಿ ಹೋಗಿ ಅವನ್ನ ಕೊಂದುಬಿಟ್ಟೀವು. ಲೇಶಮಾತ್ರ ಅಂಜಬ್ಯಾಡ. ಮೂರು ಮಂದಿ ಹೋಗಥೇವು' ಎಂದು ಹೇಳಲು, ಕೃಷ್ಣ ಧರ್ಮರಾಯಗೆ ಅಂಥಾನೆ 'ಜರಾಸಂಧ ಮಹಾರುದ್ರನ ಭಕ್ತ, ಶಿವಭಕ್ತರೊಳಗೆ ಅಗ್ರೇಸರ. ನನ್ನ ಭಕ್ತರೊಳಗೆ ಭೀಮಸೇನ ಅಗ್ರೇಸರ. ಈತನ ಕೈಯ ಕೊಲ್ಲಿಸಬೇಕೆಂದು ಅಂದಿಗೇ ನಾನು ಕೊಂದಿದ್ದಿಲ್ಲ. ಜರಾಸಂಧಗೆ ಅಂಜಿ, ನಾನು ಜಲದುರ್ಗ ಆಶ್ರಯಿಸಲಿಲ್ಲ. ಭೀಮ-ಅರ್ಜುನರನ್ನ ತಂದುಕೊಟ್ಟೀನು. ಎಲೈ ಭೂಪಾಲ! ಅಂಜಬ್ಯಾಡ' ಎಂದು ಕಮಲೇಕ್ಷಣ ಧರ್ಮರಾಯಗೆ ಭರವಸ ಕೊಟ್ಟ, ಭೀಮಾರ್ಜುನರ ಸಹ ಮಗಧ-ದೇಶಕ್ಕೆ ಹೋದನು.

ಶಿವನಾಮ ಪರ್ವತ ಲಿಂಗಾಕಾರವಾಗಿಹೋದು. ಜರಾಸಂಧ ಮುಷ್ಟಕ್ಕೆ ಪೂಜಿ ಮಾಡಿ ಹೋಗಿದ್ದ, ಅಲ್ಲಿಗೆ ಹೋದರು. ಭೃತ್ಯರು, ಕಾವಲುಗಾರರು ಬಹು-ವಾಗಿಹೋರು. ಅವರನ್ನ ಲೆಕ್ಕಿಸದೇ, ತೋಳುಗಳಿಂದ ಪರ್ವತ ಕಿತ್ತುಬಿಟ್ಟರು. ಪರ್ವತನೆಲ್ಲ ತುಣುಕುತುಣುಕು ಮಾಡಿದರು. ತರುವಾಯ ಪಟ್ಟಣಕ್ಕೆ ಬಂದು, ತಮ್ಮ ಕಾಲಪೆಟ್ಟೀನಿಂದ ಕೋಟೆ ಕೆಡಹಾಕಿ, ಮೂರು ಭೇರಿ ಒಡದು ಬಿಟ್ಟರು. ಆ ಭೇರಿಗಳಿಗೆ, ಮಾಷನಾಮಕ ಅಸುರನ ಚರ್ಮ ಬಿಗಿದಿಹೋದು. ಮೂರು ಭೇರಿ, ಜಯಶೀಲ ಉಳ್ಳವು. ಜರಾಸಂಧನ ಕೀರ್ತಿ ಪರಾಕ್ರಮ ಕೊಂಡಾಡತಿಹೋವು. ಭೇರಿ ಒಡೀಬ್ಯಾಡಿರೆಂದು ಸೇನಾನಾಯಕರು ಭೃತ್ಯರು ಎನಲಿಕ್ಕೆ, ಅವರನ್ನ ಲೆಕ್ಕಿಸದೆ ಮೂರೂ ಭೇರಿ ಒಡದು ಬಿಟ್ಟರು. ರಾಜಬೀದೀಲಿ ಬರತ ಅಂಗಡಿ, ಮುಂಗಡಿ ಸೆರಿಸೂರಿ ಮಾಡತ, ಪುಷ್ಪ ಕೊರಳೊಳು ಧರಿಸತ, ಪರಿಮಳದ್ರವ್ಯದಿಂದ ಯುಕ್ತರಾಗಿ, ತಾಂಬೂಲ ಚರ್ವಣ ಮಾಡತ, ಪಟ್ಟಣವೆಲ್ಲ ಲಯಲೂಟಿ ಮಾಡತ, ಬೆನ್ನ ಗೋಡಿ ಒಡದು 'ಎಲೋ ಜರಾಸಂಧ, ಎಲ್ಲಿದ್ದೀ! ಎದುರಿಗೆ ಬಾ!' ಎಂದು,

ಬ್ರಾಹ್ಮಣರ ವೇಷ ಧರಿಸಿ, ನಿರಾಯುಧರಾಗಿ ಹೋದರು. ಜರಾಸಂಧನ ಸ್ವಭಾವ, ಬ್ರಾಹ್ಮಣರು ಏನು ಅನ್ಯಾಯ ಮಾಡಿದರೂ, ಅವರ ಅಗ್ಗಳಿಕೆ ತಾಳಿಕೊಂಬ. ಮೂರು ಜನರೂ ಬ್ರಾಹ್ಮಣರಿದ್ದಾರೆಂದು ಸುಮ್ಮಗಾದ. 'ಬ್ರಾಹ್ಮಣರಪ್ಪಂದೆ ಕಾಣಥಾರೆ. ಭುಜಬಲ ಉಳ್ಳವು, ಹೆದಿ ಬಿಗದು ದಡ್ಡಬಿದ್ದದೆ. ಬಹಳವಾಗಿ ಕ್ಷತ್ರಿಯರೀದ್ದಾರು, ಸ್ನಾತಕವ್ರತ ಉಳ್ಳವರಾಗಿ ಬ್ರಾಹ್ಮಣರ ವೇಷ ಧರಿಸಿದ್ದಾರೆ. ಮುಖದ ಕಾಂತಿಯಿಂದ ಕ್ಷತ್ರಿಯರಪ್ಪಂದೆ ಕಾಣಸಥಾರೆ.' ಈ ಪ್ರಕಾರ ತನ್ನಲ್ಲಿ ತಾನು ವಿಚಾರ ಮಾಡಿಕೊಂಡು, ಜರಾಸಂಧ ಮಾತನಾಡಥಾನೆ. 'ಲಿಂಗಪರ್ವತವನ್ನು ಏನುಕಾರಣ ಛಿನ್ನಭಿನ್ನ ಮಾಡಿದಿರಿ? ಬೆನ್ನು ಗೋಡಿ ಒಡೆದ ಕಾರಣವೇನು? ನಾವು ಕ್ಷತ್ರಿಯರಾದಕಾರಣ, ನೀವು ಬ್ರಾಹ್ಮಣರೆಂದು ನಿಮ್ಮ ಅಗ್ಗಳಿಕೆ ತಾಳಿಕೊಂಡೆ' ಎಂತ ಜರಾಸಂಧ, ಇವರನ್ನ ತಿಳೀದೆ ಮಾತನಾಡಲಾಗಿ, ಕೃಷ್ಣ ಮಾತನಾಡಿದ. 'ನಾನು ವಾಸುದೇವ, ಇವರು ಭೀಮಾರ್ಜುನರು. ನೀನು, ರಾಕ್ಷಸಕರ್ಮ ಪುರುಷಪಶು ಮಾಡಥೇನೆಂತಿದ್ದಿ. ಅವರಷ್ಟೂರು ನಮ್ಮ ವಿವಾಹಬಾಂಧವರು. ನೀನು ವೇದವಿರುದ ಕರ್ಮ ಮಾಡತಿದ್ದಿ. ನಿನ್ನ ಅನ್ಯಾಯ, ಉನ್ಮತ್ತತನ ಕೇಳಿ, ನಿನ್ನ ಶಿಕ್ಷಿಸಬೇಕಾಗಿ, ನಾವು ಮೂರೂ ಮಂದಿ ಬಂದೀವಿ. ಇಪ್ಪತ್ತೆಂಟುಸಾವಿರದಎಂಟನೂರು ಮಂದಿ ರಾಯರು, ನಮ್ಮ ಬಾಂಧವರಿದ್ದಾರೆ, ನಮ್ಮ ಸ್ವಜನ. ಇವರನ್ನ ಬಿಟ್ಟುಕೊಡು, ಇಲ್ಲವೇ ಯುದ್ಧಕ್ಕೆ ಬಾ' ಎಂದು ಕರಿಯಲಿಕ್ಕೆ, 'ಮಹಾರುದ್ರಗೆ ನೇಮಿಸಿದಂಥ ಪುರುಷರನ್ನ, ಅಂಜಿಕೊಂಡಾತನೋಪಾದಿ ನಾ ಬಿಡುವಂತೆ ಇಲ್ಲ. ಮೂರೂ ಮಂದಿ ಕೂಡಿ ಯುದ್ಧಕ್ಕೆ ನಿಂತರೂ, ನಾ ಒಬ್ಬನೇ ಬಂದೇನು. ನಿವುಗೆ ಆಯುಧಗಳು ಬೇಕಾದರೆ ಕೊಟ್ಟೀನು. ನಿಮ್ಮ ಮೂರು ಮಂದಿಯೊಳಗೆ ಒಬ್ಬನೇ ಯುದ್ಧಕ್ಕೆ ಬಂದರೆ, ನಾ ಒಬ್ಬನೇ ಬಂದೇನು.' ಹೀಂಗಂತ ಜರಾಸಂಧ ಪರಾಕ್ರಮ ಹೇಳಿಕೊಳ್ಳಲಿಕ್ಕೆ, ಭೀಮಸೇನನ ಬಲ ಹೆಚ್ಚಿಸಿಕೊಡಬೇಕಾಗಿ ಕೃಷ್ಣ ಮಾತನಾಡಿದ್ದಾನೆ. 'ಜರಾಸಂಧ, ನಿಮ್ಮ ಮನೀಲಿ ಇದ್ದ ಸರ್ವ ಸೇನಾಬಲದಿಂದ ಯುದ್ಧಕ್ಕೆ ಬರಲ್ಯಾಕೆ, ಈ ಭೀಮಸೇನ ನಿನ್ನ ಒಬ್ಬನ್ನ ನಿರಾಯುಧನಾಗಿ ಕೊಲ್ಲಲಾಪ.'

ಈ ಮೂರು ಮಂದಿ, ಆಯುಧಪೂರ್ಣರಾಗಿ ಏನುಕಾರಣ ಹೋಗಲಿಲ್ಲ ಎಂದರೆ, ಜರಾಸಂಧನ ನಿರಾಕರಣ ಮಾಡಬೇಕಾಗಿ, ಬ್ರಾಹ್ಮಣರ ವೇಷ ಧರಿಸಿ ನಿರಾಯುಧರಾಗಿಹೋರು. ಅರ್ಜುನನ್ನ ಏನುಕಾರಣ ಕರಕೊಂಡುಹೋದನೆಂದರೆ, ಅರ್ಜುನನ ಅಹಂಕಾರ, ಜರಾಸಂಧನಿಂದ ಖಂಡಿಸಬೇಕಾಗಿ ಕರಕೊಂಡುಹೋದನು. ಜರಾಸಂಧ ಅರ್ಜುನನ್ನ ಯುದ್ಧಕ್ಕೆ ಕರೆಯಲಿಲ್ಲ. ಏನುಕಾರಣವೆಂದರೆ, ಅರ್ಜುನ ದುರ್ಬಲ ಬಾಲಕನಿದ್ದಾನೆ. ಈತನ ಕೂಡ ಯುದ್ಧಮಾಡಿ ಗೆದ್ದ ಪಕ್ಷವೇ, ಕೃಷ್ಣ-ಭೀಮರು ತನ್ನ ಕೊಂದಾರು. ಅಷ್ಟಾಗಿ ಅರ್ಜುನನ ಕೈಲಿ ಸೋತರೆ, ನೀಚನ ಕೈಲಿ

ಸತ್ತರೆ ತನ್ನ ಕೀರ್ತಿ ಕೆಡತದೆ. ಆದಕಾರಣ ಅರ್ಜುನ ಬಾಲಕನೆಂದು ಯುದ್ಧ ಮಾಡಲಿಲ್ಲ. ಅರ್ಜುನಗೆ ಐವತ್ತೈದು ವರುಷ, ಬಾಲಕ ಹ್ಯಾಂಗೆಂದರೆ, ನಿರ್ಬಲ ಉಳ್ಳವ ಬಾಲಕನ ಸರಿ ಎಂದು ತಿಳದು, ಅರ್ಜುನನ್ನ ತುಚ್ಛೀಕರಿಸಿಬಿಟ್ಟನು. ಹಾಂಗಾದರೆ ಅರ್ಜುನ, ತುಚ್ಛೀಕರಿಸಿದನೆಂದು ಜರಾಸಂಧನ ಮ್ಯಾಲೆ ಕೋಪಾವಿಷ್ಟನಾಗಿ ಹೋಗಬೇಕಾಗಿತ್ತು ಎಂದಲ್ಲಿ, ಜರಾಸಂಧ ಪ್ರಬಲನಿದ್ದಾನೆಂದು ತುಚ್ಛೀಕರಣ ತಾಳಿಕೊಂಡು ಸುಮ್ಮಗಿದ್ದ. ಕೃಷ್ಣ ಮಹಾಬಲ ಉಳ್ಳಾತನಾದರೂ, ತನ್ನ ಸರೀಕನಲ್ಲ ಕ್ಷತ್ರಿಯನಲ್ಲ, ಗೋಪಾಲಕನ ಕೂಡ ಯುದ್ಧ ಮಾಡಬಾರದೆಂದು ಭಯದಿಂದ ಕರೆಯಲಿಲ್ಲ. ಭೀಮಸೇನನ್ನ ಯುದ್ಧಕ್ಕೆ ಕರೆದನು.

ಭೀಮಸೇನ ಜರಾಸಂಧನ ಸಂಗಡ ಯುದ್ಧಕ್ಕೆ ಪ್ರಾಪ್ತನಾಗಬೇಕು, ಅಷ್ಟರೊಳಗೆ—ಪತ್ರತಾಪನೆಂಬುವ ಜರಾಸಂಧಗೆ ಮಗನಾಗಿ ಹುಟ್ಟಿದ್ದ—ಜರಾಸಂಧ, ಭೀಮಸೇನನ ಕೈಯ ಸತ್ತರೆ, ರಾಜ್ಯಕ್ಕೆ ದಾರಿಲ್ಲಾದೀತೆಂದು ತನ್ನ ಮಗ ಸಹದೇವಗೆ, ರಾಜ್ಯದಲ್ಲಿ ಪಟ್ಟಾಭಿಷೇಕ ಮಾಡಿ, ಯುದ್ಧಕ್ಕೆ ತೆರಳಿದ. ಪಟ್ಟಣದೊಳಗೆ ಯುದ್ಧ ಮಾಡಿದರೆ, ಕಾಲಪೆಟ್ಟಿನಿಂದ ಪುಡಿಪುಡಿ ಆದೀತೆಂದು, ಪಟ್ಟಣದ ಹೊರಗೆ ಹೋದರು. ಭೀಮಸೇನನ ಬಲ, ಬಾಹುಗಳ ಮುಷ್ಟೀಪೆಟ್ಟು ತಾಳಲಾರೆನೆಂದು—ಗದಾವಿದ್ಯದಲ್ಲಿ ಜರಾಸಂಧ ಚತುರನಾದಕಾರಣ—ತಾ ಒಂದು ಗದಾ ಕೊಂಡು, ಭೀಮಸೇನಗೆ ಒಂದು ಕೊಟ್ಟನು. ಮೊದಲಿಗೆ ವಾಗ್ಯುದ್ಧವಾಯಿತು. 'ಎಲೋ ಜರಾಸಂಧ! ನಿಮ್ಮ ಶಿವ ನಮ್ಮ ಕೆಳಗೆ, ನಮ್ಮ ಸ್ವಾಮೀ ಕೆಳಗೆ, ಎಷ್ಟು ಬ್ಯಾಸತ್ತು ಹೋದ!' ಈ ಪ್ರಕಾರ ವಾಗ್ಯುದ್ಧದಲ್ಲಿ ಜರಾಸಂಧನ ಸೋಲಿಸಿ, ತರುವಾಯ ಗದಾಯುದ್ಧ ಪ್ರಾರಂಭ ಮಾಡಿದನು. ಭೀಮ-ಜರಾಸಂಧರು, ದೇವೇಂದ್ರನ ವಜ್ರಾಯುದ್ಧಕ್ಕೆ ಸಮವಾದಂಥ ಗದಾ ಹಿಡಕೊಂಡು ಹೊಡದಾಡಲಾಗಿ, ಗದಾ ಭೀಮ-ಜರಾಸಂಧರ ಎದಿಗಳಿಗೆ ತಾಕಿ ಪುಡಿಪುಡಿ ಆದವು. ಅನಂತರ ಇಬ್ಬರು ಪರಾಕ್ರಮವರೂ ಮುಷ್ಟಿಯುದ್ಧ ಮಾಡಹೊಕ್ಕರು.

ಈ ಮುಷ್ಟಿಯುದ್ಧ ಮಾಡುವಾಗ, ಬ್ರಹ್ಮಾಂಡ ಒಡೆದರೆ ಎಷ್ಟು ಶಬ್ದ ಆಗತದೆ, ಹಾಂಗೆ ಶಬ್ದವಾಗತಿಹೋದು. ನಾರಾಯಣಗೆ, ಕೈಟಭಾಸುರಗೆ ಹ್ಯಾಂಗೆ ಯುದ್ಧವಾಯಿತೋ, ಹಾಂಗೆ ಭೀಮ-ಜರಾಸಂಧರಿಗೆ ಯುದ್ಧವಾಯಿತು. ಭೂಮಿ ಚಂಚಲವಾಗಿ, ಕಾಲಪೆಟ್ಟಿನಿಂದ ತಗ್ಗು ಬೀಳತಿಹೋದು. ಚಿಕ್ಕಚಿಕ್ಕ ಪರ್ವತಗಳು, ಭೂಮೀವ್ಯಾಲೆ ಬಿದ್ದು ಪುಡಿಪುಡಿ ಆದವು. ಮೇರುಪರ್ವತ, ಕುಲಪರ್ವತ, ಮಂದರಾಚಲ ಸಹವಾಗಿ ಅಲ್ಲಾಡಿದವು. ಸಮುದ್ರಗಳೆಲ್ಲ ಒಣಗಿದವು. ಉಭಯರ ಯುದ್ಧ ನೋಡಲಿಕ್ಕೆ, ದೈತ್ಯರೂ ದೇವತಿಗಳೂ ಬಂದಿದ್ದರು. 'ಜಯ ಭೀಮಸೇನ!' ಎಂದು ದೇವತಿಗಳು, 'ಜಯ ಜರಾಸಂಧ!' ಎಂದು ದೈತ್ಯರು ಪೊಗಳತಿಹೋರು. ಭೀಮಸೇನ, ಅವತಾರಬಲ ಸಾಲದ ಕಾರಣ ಮೂಲವಾಯುದೇವರ

ಬಲಗೊಂಡನು. ಬ್ರಹ್ಮದೇವರ ವರಬಲ ಸಂರಕ್ಷಿಸಬೇಕಾಗಿ, ಹದಿನ್ನೆದು ದಿವಸ ಜರಾಸಂಧನ ಕೂಡ ಏಕಪ್ರಕಾರವಾಗಿ ಭೀಮಸೇನ ಯುದ ಮಾಡಿದನು. 'ಸೀಳಿ ಬಿಷ್ಟು' ಎಂದು ವಾಸುದೇವನ ಆಜ್ಞೆ ಆಯಿತು. ಆ ವ್ಯಾಳ್ಯಾದಲ್ಲಿ ಭೀಮಸೇನ, ಹೃಷೀಕೇಶಗೆ ನಮಸ್ಕಾರ ಮಾಡಿ, ಸ್ವಾಮಿಗೆ ಮಂಗಳಾಚರಣೆ ಗೈದು, 'ಇವತ್ತು ವೈಷ್ಣವದ್ರೋಹಿಯನ್ನ ಕೊಲ್ಲಥೀನಿ' ಎಂದು ಬಹಳೇ ಹರ್ಷವುಳ್ಳವನಾಗಿ, ಅರ್ಜುನನ್ನ ಅಪ್ಪಿಕೊಂಡ. ಬಹಳ ಸಂತೋಷ ಉಳ್ಳವನಾಗಿ, ಜರಾಸಂಧನ ಮುಕುಟ ಹಿಡದು, ಕಟಿಪ್ರದೇಶದಲ್ಲಿ ತನ್ನ ಕಾಲಿಂದ ಮರ್ದಿಸಿ, ಜರಾಸಂಧನ ಸೀಳಿ ಬಿಷ್ಟನು.

ಕಟಿಪ್ರದೇಶದಲ್ಲಿ ಏನುಕಾರಣ ಮರ್ದಿಸಬೇಕಾಗಿತ್ತು, ಮೊದಲಿಗೇ ಸೀಳ. ಬಾರದಾಗಿತ್ತೆ ಎಂದಲ್ಲಿ, ಶೂರರ ಧರ್ಮವಲ್ಲ, ಮರ್ಮಸ್ಥಳಕ್ಕೆ ಮೊದಲಿಗೇ ಹೊಡಿಯಬಾರದೆಂದು, ಜರಾಸಂಧನ ಕೂಡ- ಯುದ್ಧ ಮಾಡಿದ. ಜರಾಸಂಧನ್ನ ಸೀಳುವಾಗ, ಬ್ರಹ್ಮಾಂಡ ಒಡೆದರೆ ಎಷ್ಟು ಶಬ್ದ, ಅಂಥಾ ಮಹಾದ್ಭುತ ಶಬ್ದ ಕೇಳಿ ಲೋಕದವರು ಬಹಳೇ ಅಂಜಿದರು. ಜರಾಸಂಧನ್ನ ಭೀಮಸೇನ ಕೊಂದು ಶ್ರೀಕೃಷ್ಣಗೆ ಅರ್ಪಿಸಿದ. ರಾಜಸೂಯಯಾಗಕ್ಕಿಂತಲೂ ಅಧಿಕ ಪ್ರೀತಿ, ಇವನ ಕೊಂದು ಅರ್ಪಿಸಿದ್ದರಿಂದ, ಸ್ವಾಮಿಗೆ ಆಯಿತು. ಪ್ರತ್ಯೇಕವಾಗಿ ಭೀಮಸೇನನ ಪೂಜಿ ಸ್ವೀಕಾರ ಮಾಡಿದನು. ಜನ್ಮಜರಾದಿ ದೋಷಗಳು ಮರ್ದಿಸೋ ಅಂಥಾ ಸ್ವಾಮೀ ಅಪ್ಪಣಿ ಕೊಂಡು, ಭೀಮಸೇನ ಜರಾಸಂಧನ್ನ ಸೀಳಿದ. ಹೋಳುಗಳು ಮತ್ತೆ ಕೂಡತಿಹೋವು. ಸ್ವಾಮಿ, ಕಡ್ಡಿ ಮುರದು ಅಪಸವ್ಯದಿಂದ ತೋರಿಸಿದ್ದರಿಂದ, ಭೀಮಸೇನ ಜರಾಸಂಧನ್ನ ಸೀಳಿ, ಅದರಂತೆ ಹಾಕಿದನು. ತರುವಾಯ ಭೀಮಸೇನ, ಸ್ವಾಮಿಗೆ ಸಾಷ್ಟಾಂಗ ನಮಸ್ಕಾರ ಹಾಕಿದನು. ಅರ್ಜುನ, ಭೀಮ-ಸೇನಗೆ ಸಾಷ್ಟಾಂಗ ನಮಸ್ಕಾರ ಹಾಕಿದನು. ಪಾಪಿ ಜರಾಸಂಧ ಸತ್ತನೆಂದು ದೇವತೆಗಳು ಬಹಳ ಹರ್ಷಯುಕ್ತಚಿತ್ತರಾಗಿ, ತಮ್ಮ-ತಮ್ಮ ಸ್ಥಾನಕ್ಕೆ ಹೋದರು. ಕೆಲವು ರಾಕ್ಷಸರು, ತಮ್ಮ ಬಲ ಮುರಿಯಿತೆಂದು ಬಹಳ ಖಿನ್ನ ಮನಸ್ಸುಳ್ಳವರಾಗಿ, ತಮ್ಮ ಸ್ಥಳಕ್ಕೆ ಹೋದರು.

ಇಷ್ಟಾಗಲಿಕ್ಕೆ ಜರಾಸಂಧನ ಮಗ ಸಹದೇವ, ವಸುರಾಯನ ರಥ ತೆಗೆದು ಕೊಂಡು, ತನ್ನ ತಂಗೀನ್ನ ಕೂಡ್ರಿಸಿಕೊಂಡು, ಸ್ವಾಮಿಗೆ ಅರ್ಪಿಸಿ ನಮಸ್ಕಾರ ಮಾಡಿದನು. ಆ ರಥ, ಮೂಲನಾರಾಯಣ, ವಸುರಾಯನಿಗೋಸ್ಕರ ದೇವೇಂದ್ರನ ಕೈಯ ಕಳಿಸಿದ್ದ. ವಸುರಾಯ ದೇವೇಂದ್ರಗೆ ಗೆಳಿಯನಾಗಬೇಕು. ಖೇಚರ-ಮಾರ್ಗದಿಂದ ರಥ ನಡೀತಿಹೋದು. ಅಂಥಾ ರಥ, ವಸುರಾಯ ಏರಿಕೊಂಡು, ಸಮಸ್ತ ರಾಯರಿಗೆ ಅಧಿಪತಿಯಾಗಿಹೋನು. ಜರಾಸಂಧ ವಸುರಾಯನ ವಂಶ-ದಾತ. ಆದಕಾರಣ ಮೂಲನಾರಾಯಣನ ರಥ ಜರಾಸಂಧನ ಸಮೀಪದಲ್ಲಿತ್ತು.

'ಸ್ವಾಮಿ, ನಿನ್ನ ರಥ ನೀ ತೊಗೋಬೇಕು' ಎಂದು ಕೊಡಲಿಕ್ಕೆ, ಧ್ವಜಸ್ತಂಭ ಬೇಕಲ್ಲ, ಗರುಡನ ಸ್ಮರಿಸಲಿಕ್ಕೆ, ಅವನು ಬಂದು ಧ್ವಜಸ್ತಂಭದಲ್ಲಿ ನಿಂತ. ಭೀಮಸೇನ ಜರಾಸಂಧನ ಮಗಳನ್ನು ಸಹದೇವಗೆ ಬೇಕೆಂದು ಕೊಂಡನು. ನಕುಲಗೆ ಮದುವಿ ಇಲ್ಲದೆ, ಸಹದೇವ ಚಿಕ್ಕವಗೆ ಮದುವಿ ಆಯಿತೆಂದರೆ, ನಕುಲಗೆ ಶಲ್ಯನ ಮಗಳನ್ನು ಕೊಟ್ಟು ಮದುವಿ ಆಗಿತ್ತು. ಈ ಇಬ್ಬರೂ ಅಶ್ವಿನೀದೇವತೆಗಳ ಹೆಂಡರು. ಪಾಂಡವರ ಮದುವಿ ಪ್ರತ್ಯೇಕ ಆದಮ್ಯಾಲೆ, ಅರ್ಜುನ, ನಕುಲ, ಸಹದೇವ ಈ ಮೂರು ಮಂದಿ ದ್ರೌಪದೀ ಭೋಗ ಬಿಟ್ಟುಕೊಟ್ಟರು. ಅಣ್ಣನ ಹೆಂಡತಿಯನ್ನು, ತಾಯೀ ಸಮಾನ ಬಹುಮಾನ ಮಾಡಹೊಕ್ಕರು. ಧರ್ಮರಾಯ ವನವಾಸಕ್ಕೆ ಹೋದಮ್ಯಾಲೆ ದ್ರೌಪದೀ ಭೋಗ ತ್ಯಾಗಮಾಡ್ಯಾನೆ.

ಜರಾಸಂಧನ ಮಗ ಸಹದೇವ, ಕೃಷ್ಣ ಭೀಮಾರ್ಜುನರಿಗೆ ರತ್ನಕಾಣಿಕೆಗಳ ಕೊಟ್ಟು, ಅನೇಕ ಪೂಜಿ ಮಾಡಿದನು. ತರುವಾಯ ಕೃಷ್ಣ ಸಹದೇವಗೆ ಹೇಳಿದ್ದನು. 'ಹೇ ಸಹದೇವ, ನನ್ನ ವಿವಾಹಬಂಧುಗಳು, ಇಪ್ಪತ್ತೆಂಟುಸಾವಿರದ ಎಂಟುನೂರು ಮಂದಿ ರಾಯರನ್ನೆಲ್ಲ ಶೀಘ್ರ ಬಿಟ್ಟುಕೊಡು. ನಿಮ್ಮ ತಂದೀ ಉತ್ತರಕ್ರಿಯ ಮಾಡಲಿಕ್ಕೆ ಹೋಗು' ಎಂದು ಸ್ವಾಮಿ ಅಪ್ಪಣಿ ಆಯಿತು. ಸಹದೇವ, ಶ್ರೀಕೃಷ್ಣನ ಅಪ್ಪಣಿಮ್ಯಾಲೆ ಇಪ್ಪತ್ತೆಂಟುಸಾವಿರದ ಎಂಟುನೂರು ಮಂದಿ ರಾಯರನ್ನೆಲ್ಲ ಬಿಟ್ಟು, ಮಜ್ಜನ ಮಾಡಿಸಿ, ಅನೇಕ ಭಕ್ಷ್ಯಭೋಜ್ಯ, ವಸ್ತ್ರಾಭರಣಗಳಿಂದ ಪೂಜಿ ಮಾಡಿ, ಸ್ವಾಮೀ ಸಮೀಪಕ್ಕೆ ರಾಯರನ್ನೆಲ್ಲ ಕಳುಹಿಸಿಕೊಟ್ಟನು. ತಾನೂ ಸ್ವಾಮೀ ಸಮೀಪಕ್ಕೆ ಬಂದು, ಭೀಮಸೇನನ್ನ ಪೊಗಳಿದನು. ರಾಯರೆಲ್ಲ ಸಹದೇವನಿಂದ ಪೂಜಿ ಮಾಡಿಸಿಕೊಂಡು, ಭೀಮಸೇನನ್ನ ಪೊಗಳಿದರು. ಸ್ವಾಮಿ ಶ್ರೀಕೃಷ್ಣ, ತಮ್ಮನ್ನ ಬಿಡಿಸಿದನೆಂದು ಬಹಳೇ ಸಂತೋಷವುಳ್ಳವರಾಗಿ, ಸ್ವಾಮೀ ಸ್ತೋತ್ರ ಮಾಡಿ, ತಮ್ಮ ತಮ್ಮ ದೇಶಕ್ಕೆ ಹೋದರು. ಜರಾಸಂಧ ನರಕಾದ್ಯನರ್ಥ ಉಂಡು, ಕ್ರಮದಿಂದ ತವುಸ್ಸಿಗೆ ಹೋಗಿ ಬಿದ್ದಾನು.

ಶ್ರೀಕೃಷ್ಣ ಭೀಮಾರ್ಜುನರು ರಥ ಏರಿಕೊಂಡು, ಶಂಖಧ್ವನಿ ಮಾಡತ, ಇಂದ್ರಪ್ರಸ್ಥಕ್ಕೆ ಬಂದರು. ಜಯಶಂಖ ಶಬ್ದವಾಗತದೆಂದ ಧರ್ಮರಾಯ ಪ್ರೀತನಾಗಿ, 'ಜರಾಸಂಧ ಎಂಥಾ ಪ್ರಬಲನಿದ್ದ! ಅಂಥಾವನ್ನ ಕೊಂದರು. ಇನ್ನು ರಾಜಸೂಯಯಾಗ ಮಾಡಲಿಕ್ಕೆ ಅನುಮಾನವೇನು!' ಅಂದನು. ಅಸಾಧ್ಯವೇನದೆ! ವೇದವ್ಯಾಸನ ಅನುಗ್ರಹದಿಂದ, ಏನೇನು ಸಾಧನ ಬೇಕು. ಯಜ್ಞಸಾಮಗ್ರಿ ಮುಂತಾದ್ದು, ಸಂಗ್ರಹಿಸಲಿಕ್ಕೆ ಆರಂಭ ಮಾಡಿದರು. ರಾಜಸೂಯಯಾಗ ಮಾಡಿದವರು ಪರಮೇಷ್ಠಿಪದ ಐದಥಾರೆ. ಬ್ರಹ್ಮಪದವಿಗೆ ಬಾಹೋಂಥಾವರು ರಾಜಸೂಯಯಾಗದಿಂದ ಬ್ರಹ್ಮಪದವಿ ಆಳಥಾರೆ. ಭೀಮಸೇನ ಭಾವಿಬ್ರಹ್ಮನಾದ ಕಾರಣ ಅಸಾಧಾರಣ ಫಲಕ್ಕೆ ಪಾತ್ರನಾದ. ಭೀಮಸೇನನ್ನ ನೋಡಲಿಕ್ಕೆ, ಶ್ರೀಕೃಷ್ಣ

ಅಸಾಧಾರಣ ಫಲಕ್ಕೆ ಕಾರಣನಲ್ಲ ಅಂದರೆ. ನಾರಾಯಣ ಅಸಾಧಾರಣ ಫಲಕ್ಕೆ ಕಾರಣನಾದರೂ; ಸ್ವಾಮಿ ಶ್ರೀಕೃಷ್ಣ ಫಲರಹಿತ ಜಗದ್ವ್ಯಾಪಾರ ಮಾಡಿದರೂ, ಅದರ ಪಾಪಪುಣ್ಯ ಸ್ವಾಮಿಗೆ ಇಲ್ಲ. ಯಜ್ಞಾದಿ ಕರ್ಮಗಳ ಮಾಡುವಾತ, ತಾತ್ತ್ವಿಕದೇವತೆಗಳಿಗೆ ಬೇಡಿಕೋಬೇಕು. ತನಗೆ ಧರ್ಮದಲ್ಲಿ ಬುದ್ಧಿ ಎಸಗಸರೀ ಹೀಂಗಂತ ಬೇಡಿಕೋಬೇಕು. ದೇವತೆಗಳು ಒಮ್ಮೊಂದೊಮ್ಮೆಗೆ ಪಾಪದಲ್ಲಿ ಬುದ್ಧಿ ಪ್ರೇರಿಸಿದರೂ, ದೇವತೆಗಳಿಗೆ ಪಾಪದ ಲೇಪವಿಲ್ಲ, ದೈತ್ಯರು ಉಣಥಾರೆ.* ದೈತ್ಯರು ಒಂದು ವ್ಯಾಳ್ಯಾಕ್ಕೆ ಧರ್ಮ ಪಾಲಿಸಿದರೂ, ಪುಣ್ಯಫಲ ಉಂಬುವದಿಲ್ಲ. ದ್ಯುನಾನು ಎಸುವಿನ ಹೆಂಡತಿ ತನ್ನ ಗಂಡಗೆ ಪಾಪಬುದ್ಧಿ ಪ್ರೇರಿಸ್ಯಾಳೆ. ಪಾಪಫಲ ಸಂಪೂರ್ಣ ತಾನೇ ಉಂಡಾಳೆ. ರಾವಣಾದಿಗಳಿಗೆ ಮಹಾರುದ್ರ ವರವು ಕೊಟ್ಟಾನೆ. ಕಿಂಚಿತ್ ಪಾಪಫಲಕ್ಕೆ ಪಾತ್ರರಾಗ್ಯಾರೆ. ಕಂಸ ಅಕ್ರೂರಗೆ ಪ್ರೇರಿಸ್ಯಾನೆ. ಬಿಲ್ಲುಹಬ್ಬಕ್ಕೆ ಕೃಷ್ಣನ್ನ ಕರಕೊಂಡು ಬಾ ಎಂದು ಕಳುಹಿಸಿಕೊಟ್ಟ. ಕೃಷ್ಣದರ್ಶನದಿಂದ ಅಕ್ರೂರಗೆ ಪುಣ್ಯ ಬಂದದೆ, ಕಂಸಗೆ ಪುಣ್ಯ ಬರಲಿಲ್ಲ. ಈ ರಾಜಸೂಯ ಯಜ್ಞಕ್ಕೆ ಅಸಾಧಾರಣ ಕಾರಣ ಭೀಮಸೇನ ಒಬ್ಬನೇ, ಜರಾಸಂಧನ್ನ ಕೊಂದಾನೆ. ಕರ್ಣ ಕೀಚಕ ಮೊದಲಾದ ಪ್ರಬಲರ ಗೆದ್ದು, ಕಪ್ಪ ಕೊಂಡುಬಂದಾನೆ. ಮುಖ್ಯಫಲಕ್ಕೆ ಭೀಮಸೇನ ಪಾತ್ರ. ಎರಡನೇ ಕಾರಣ ಅರ್ಜುನ, ಮೂರನೇ ಕಾರಣ ಧರ್ಮರಾಯ, ನಾಲ್ಕನೇ ಕಾರಣ ನಕುಲ, ಐದನೇ ಕಾರಣ ಸಹದೇವ. ರಾಜಸೂಯಯಾಗ ಮಾಡಲಿಕ್ಕೆ ಮುಖ್ಯಕಾರಣ ವೇದವ್ಯಾಸ.

ಅರ್ಜುನಗೆ ಗರ್ವ ಬಹಳೇ ಇಹೋದು. ತನಗೆ ಗಾಂಡೀವಧನುಸ್ಸು ಅದೆ, ಅಕ್ಷಯಬತ್ತಳಿಕೆ ಇಹೋದು, ದಿವ್ಯರಥ, ಹನುಮಂತನ ಚಿನ್ಹಧ್ವಜವದೆ. ಪೂರ್ವದಿಕ್ಕಿಗೆ ತಾ ಹೋಗಬೇಕು, ಅದು ತಮ್ಮ ತಂದೀ ದೇವೇಂದ್ರನ ದಿಕ್ಕು. ತಾನು ಅಲ್ಲಿಗೆ ಹೋಗಿ, ಜಯಶೀಲನಾಗಿ ಬರಬೇಕೆಂದು ಮನಸ್ಸಿನಲ್ಲಿ ಬಹಳೆ ಗರ್ವ ಇಹೋದು. ವೇದವ್ಯಾಸ ಅರ್ಜುನಗೆ ಅಂದ, 'ನೀನಾದರೂ ಪೂರ್ವದಿಕ್ಕಿಗೆ ಹೋಗಬೇಕೆಂದಿದ್ದೀ. ಯುದ್ಧಸಾಮಗ್ರಿ, ಗಾಂಡೀವಧನುಸ್ಸು, ಅಕ್ಷಯಬತ್ತಳಿಕೆ ಸಕಲವೂ ಅದೆ. ಕೀಚಕ ಮೊದಲಾದವರು ನಿನ್ನ ವಶರಾಗರು. ಪೂರ್ವದಿಕ್ಕಿನಲ್ಲಿ ಕರ್ಣ ಬಲಿಷ್ಠನಿದ್ದಾನೆ. ಭೀಮಸೇನನ ಹೊರ್ತು, ನಿನಗೆ ಮಣಿದು ಬರಲಾರರು ಮತ್ತು ಕರ್ಣ ನಿನಗಿಂತ ಅಶಕ್ತ, ಹಾಂಗೂ ನಿನಗೆ ನರಾವೇಶವದೆ. ಕರ್ಣ ತಾ ಸಾಯದ ಹೊರ್ತು, ನಿನಗೆ ದ್ರವ್ಯ ಕೊಡ. ಈಗ್ಗೆ ಕರ್ಣ, ನಿನ್ನ ಎದುರಿಗೆ ಸ್ಪರ್ಧಿ

---

* ಪ್ರಾಯಶಃ ಪಾಪದ ಲೇಪವಿಲ್ಲ.

ವಿನಾ ವಿಷ್ಣುಂ ನಿರ್ಣಯೋಽಯಂ ಸಹಿ ಕರ್ಮಫಲೋಜ್ಝಿತಃ।
ಹೇತವೋಽಪಿ ಹಿ ಪಾಪಸ್ಯ ನ ಪ್ರಾಯಃ ಫಲಭಾಗಿನಃ॥

—ಮ. ಭಾ. ತಾ. ನಿ. ಅ. ೨೧, ಶ್ಲೋ. ೧೭೯

ಯಿಂದ ಬಂದರೆ ಯುದ್ಧದಲ್ಲಿ ಸೋತಾನಲ್ಲದೆ, ಸ್ಪರ್ಧಿ ಇಲ್ಲದ ವ್ಯಾಳ್ಯಾದಲ್ಲಿ ನೀ ಸೋಲಿಸಲಾರಿ. ಅದಲ್ಲದೇ ಕರ್ಣಗೆ ಸಹಜ ಕವಚಕುಂಡಲ ಅದೆ. ಕರ್ಣನ ಕೊಲ್ಲಲಿಕ್ಕೆ ನೀ ಶಕ್ತನಲ್ಲ. ಎಲೈ ಅರ್ಜುನ, ನೀ ಪೂರ್ವದಿಕ್ಕಿಗೆ ಹೋದರೆ ಜಯವಾಗದು. ಭೀಮಸೇನ ಪೂರ್ವದಿಕ್ಕಿಗೆ ಹೋದರೆ, ಜರಾಸಂಧನ್ನ ಕೊಂದು ಬಂದಾನೆಂದು ಕೀಚಕ, ಶಿಶುಪಾಲ, ದಂತವಕ್ರ, ಪೌಂಡ್ರಕ ವಾಸುದೇವ, ಮೊದಲಾದವರು ಭೀಮಸೇನನ ಕೂಡ ಯುದ್ಧ ಮಾಡದೆ, ಸುಮ್ಮಗೆ ಕಪ್ಪ ಕೊಟ್ಟಾರು. ಉತ್ತರದಿಕ್ಕಿಗೆ ಉದ್ದಂಡದೇಶವದೆ, ಕುಬೇರನಿಂದ ಪಾಲಿತವಾಗೇದೆ. ಸಪ್ತದ್ವೀಪಗಳವೆ, ಉತ್ತರದಿಕ್ಕಿಗೆ ಹೋಗಿ, ಪಾತಾಳಾದಿ ಲೋಕಗಳಲ್ಲಿಲಿವು ಹೋಗಿ ದ್ರವ್ಯ ಕೊಂಡು, ಶೀಘ್ರ ಯಜ್ಞಕ್ಕೆ ಬಾ. ನಿನ್ನ ರಥ ಆಕಾಶಮಾರ್ಗದಲ್ಲಿ ನಡೀತದೆ. ನೀ ಬಲಿಷ್ಠನಾದರೂ, ಉತ್ತರದಿಕ್ಕಿನಲ್ಲಿ ಬಾಣಾಸುರನಿದ್ದಾನೆ, ಬಾಣಾಸುರನ್ನ ತಡಿಬ್ಯಾಡ. ಬಾಣಾಸುರನ ಕೈಯಿಂದ ಭೀಮಸೇನ ಕಪ್ಪ ಕೊಂಡುಬಂದಾನು. ದೇವಾಸುರರು ಈತಗೆ ಕಪ್ಪ ಕೊಟ್ಟಾರು. ಭೀಮಸೇನ ಪೂರ್ವದಿಕ್ಕಿಗೆ ಹೋಗಲಿ. ನೀನು, ಉತ್ತರದಿಕ್ಕಿಗೆ ಹೋಗು. ನಕುಲ, ಪಶ್ಚಿಮದಿಕ್ಕಿಗೆ ಹೋಗಲಿ. ಸಹದೇವ, ದಕ್ಷಿಣದಿಕ್ಕಿಗೆ ಹೋಗ್ಗಲಿ.' ಈ ಪ್ರಕಾರ ಸತ್ಯವತೀ ಮಗ ವೇದವ್ಯಾಸ ಹೇಳಿದ. ತರುವಾಯ ನಾಲ್ವರೂ ವೇದವ್ಯಾಸಗೆ ನಮಸ್ಕಾರ ಮಾಡಿ ಹೊರಟರು.

ಭೀಮಸೇನ ಪೂರ್ವದಿಕ್ಕಿಗೆ ಹೋಗಿ, ವಿರಾಟರಾಯನ ಪಟ್ಟಣದಲ್ಲಿ ಕೀಚಕನ್ನ ಸೋಲಿಸಿ, ಅಪಾರ ದ್ರವ್ಯ ಕೊಂಡು, ಅಲ್ಲಿಂದ ಚೈದ್ಯದೇಶಕ್ಕೆ ಹೋಗಲಾಗಿ, ಶಿಶುಪಾಲನ ತಾಯಿ ಮಗಗೆ ಹೇಳಿದಳು, 'ಭೀಮಸೇನ ನಿನ್ನ ಅಬಚಿ ಮಗನಿದ್ದಾನೆ, ಮಹಾ ಬಲಿಷ್ಠ. ಭೀಮಸೇನನ ಕೂಡ ಯುದ್ಧ ಮಾಡಬ್ಯಾಡ. ಎದುರುಗೊಂಡು ಕರಕೊಂಡುಬಂದು, ಬಹುಮಾನ ಮಾಡಿ ಕಪ್ಪ ಕೊಡು.' ಹೀಂಗಂತ ತಾಯಿ ಶಿಶುಪಾಲಗೆ ಹೇಳಲಿಕ್ಕೆ, ಆಕೀ ಮಾತು ಕೇಳಿ, ಭೀಮಸೇನಗೆ ಅದರ ಬಹುಮಾನಗಳ ಮಾಡಿದನು. ಭೀಮಸೇನ ತನ್ನ ಅಬಚೀ ಮನೀಲಿ ಕೆಲವು ದಿನ ಇದ್ದು, ದ್ರವ್ಯ ಕೊಂಡು ಮುಂದಕ್ಕೆ ಹೋಗಥಾನೆ. ಪೌಂಡ್ರಕ ವಾಸುದೇವ ಶ್ರೀಕೃಷ್ಣನ ಮಲಣ್ಣನಾಗಬೇಕು. ವಸುದೇವನ ದೆಸಿಯಿಂದ ಹುಟ್ಟಿದ್ದ. ಸ್ವಾಮಿಯಲ್ಲಿ ದ್ವೇಷವುಳ್ಳಾತ. ಅಂಥಾ ಪೌಂಡ್ರಕವಾಸುದೇವನ್ನ ಸೋಲಿಸಿ ಅಪಾರ ದ್ರವ್ಯ ಕೊಂಡು, ಅಲ್ಲಿಂದ ಕರ್ಣನ ದೇಶಕ್ಕೆ ಬಂದು ಕರ್ಣನ ರಥ ಛೇದಿಸಿ, ಅವನ ಕೈಯ ಅಪಾರ ಕಪ್ಪ ಕೊಂಡು, ಹಿಮವತ್ಪರ್ವತಕ್ಕೆ ಹೋದ. ಕೋಡಗಲ್ಲು ಏರಲಿಕ್ಕೆ, ದೇವತೆಗಳು ಭೀಮಸೇನನ ಬಲಪರೀಕ್ಷ ಮಾಡಬೇಕಾಗಿ, ಸಿಂಹ ವ್ಯಾಘ್ರರೂಪ ಧರಿಸಿ, ಅವನ ಕೂಡ ಯುದ್ಧಕ್ಕೆ ಬಂದರು. ಯುದ್ಧ ಮಾಡಲಾಗಿ, ಭೀಮಸೇನ ತನ್ನ ಕ್ರೀಡಾದಿಂದ ದೇವತಿಗಳನ್ನೆಲ್ಲ ಸೋಲಿಸಿಬಿಟ್ಟನು. ದೇವತಿಗಳು ತೃಪ್ತರಾಗಿ ರತ್ನದ ರಾಶಿ ಕೊಟ್ಟರು. ಶೇಷ, ಗರುಡ ಯುದ್ಧಕ್ಕೆ ಬಂದರು. ಬಾಹುಬಲದಿಂದ ಶೇಷನ್ನ ಭೂಮೀ

ವ್ಯಾಲೆ ಅಪ್ಪಳಿಸಿ, ಗರುಡನ್ನ ಕೆಡಹಾಕಲಿಕ್ಕೆ, ಅವರು ತನ್ನ ಅಪರಾದ ಕ್ಷಮಿಸ-
ಬೇಕೆಂದು ಭೀಮಸೇನನ್ನ ಬೇಡಿಕೊಂಡರು. ರತ್ನದ ಕಪ್ಪಗಳ ಕೊಟ್ಟರು. ಅಲ್ಲಿಂದ
ಬಾಣಾಸುರನ್ನ ಗೆಲ್ಲಬೇಕೆಂದು ಸಮುದ್ರದೊಳಗೆ ಈಸಿ, ಶೋಣಿತಪುರಕ್ಕೆ ಹೋಗಲಿಕ್ಕೆ,
ಮಹಾರುದ್ರ ದೊಡ್ಡ ಮದಾ ನಿರೂಪ ಧರಿಸಿ ಬಂದ. ಭೀಮಸೇನ ಮುಷ್ಟೀಪೆಟ್ಟಿನಿಂದ
ಮಹಾರುದ್ರನ ಸೋಲಿಸಲಿಕ್ಕೆ, ಮಹಾರುದ್ರ ಪ್ರೀತಿಯುಳ್ಳವನಾಗಿ ಮೂಲರೂಪ
ಧರಿಸಿ, ' ಇಲ್ಲಿಗೇನುಕಾರಣ ಬಂದಿದ್ದಿ? ' ಎಂದು ಕೇಳಲಿಕ್ಕೆ, ಭೀಮಸೇನ ಮಾತ
ನಾಡಿದ. 'ಧರ್ಮರಾಯ ರಾಜಸೂಯಯಜ್ಞ ಮಾಡಥಾನೆ. ದಿಗ್ವಿಜಯಕ್ಕೆ ಬಂದೆ'
ಎಂದು ಹೇಳಲಿಕ್ಕೆ, ರುದ್ರ ಬಾಣಾಸುರಗೆ ಆಜ್ಞಾಪಿಸಿದ. ಬಾಣಾಸುರ ಯಥೇಷ್ಟ
ದ್ರವ್ಯ ಕೊಟ್ಟನು. ತರುವಾಯ ಭೀಮಸೇನ ಮಾತನಾಡಿದ. ' ಹಿಮವತ್ಪರ್ವತದಲ್ಲಿ
ದೇವತಿಗಳು ಸಿಂಹ, ವ್ಯಾಘ್ರರೂಪ ಧರಿಸಿ ಬಂದಿದ್ದರು ಅವರನ್ನ ಸೋಲಿಸಿದೆ.
ಅನಂತರ ಗರುಡ, ಶೇಷರು ಬಂದರು. ಅವರನ್ನ ಗೆದ್ದೆ. ಹೇ ಮಹಾರುದ್ರ! ನೀನು
ಮದ್ದಾನಿರೂಪ ಧರಿಸಿ ಬಂದಿದ್ದಿ. ನಿನ್ನ, ಮುಷ್ಟೀಪೆಟ್ಟಿನಿಂದ ಸೋಲಿಸಿದೆ.'
ಹೀಂಗೆ ಭೀಮಸೇನ ತನ್ನ ಕಥ ಎಲ್ಲ ಹೇಳಿದ. ಶಂಕರನು ಕೇಳಿ, ಬಹಳ ಖಿನ್ನ
ಮನಸ್ಸುಳ್ಳವನಾಗಿ, ಹರಿಭಕ್ತರ ದ್ರೋಹ ಮಾಡಿದೆನೆಂದು ಬಹಳ ಪಶ್ಚಾತ್ತಾಪ
ಉಳ್ಳವನಾಗಿ, ಭೀಮಸೇನನ ಕೈಯ ಅಪರಾಧ ಕ್ಷಮ ಮಾಡಿಸಿಕೊಂಡು, ಬಲಿ
ಚಕ್ರೇಶ್ವರನ ಮಗ ಬಾಣಾಸುರಗೆ ಪ್ರೇರಿಸಿ, ಅಪಾರ ಕಪ್ಪಗಳ ಕೊಡಿಸಿದನು.
ಭೀಮಸೇನ ಮಹಾಮಹಾಬಲಿಷ್ಠರ ಸೋಲಿಸಿ, ಅಪಾರ ಕಪ್ಪಗಳ ಕೊಂಡು
ಹಸ್ತಿನಾಪುರಕ್ಕೆ ಬಂದನು. ಬ್ರಾಹ್ಮಣರಿಗೆ, ಯಾದವಶ್ರೇಷ್ಠನಿಗೆ, ತನ್ನ ಅಣ್ಣನಾದ
ಧರ್ಮರಾಯಗೆ ನಮಸ್ಕಾರ ಮಾಡಿ, ಅವರ ಮುಂದೆ ದಿಗ್ವಿಜಯವೃತ್ತಾಂತ
ತಿಳಿಸಿದನು. ' ಏಕಲವ್ಯ, ಪೌಂಡ್ರಕ ವಾಸುದೇವ ಮೊದಲಾದವರನ್ನ ಸೋಲಿಸಿದೆ.
ದೇವತಿಗಳು ಸಿಂಹ, ವ್ಯಾಘ್ರರೂಪ ಧರಿಸಿ ಬಂದಿದ್ದರು. ಮಹಾರುದ್ರ, ಮದ್ದಾನಿ
ರೂಪ ಧರಿಸಿ ಬಂದಿದ್ದ. ಅವರನ್ನೆಲ್ಲ ಸೋಲಿಸಿದೆ. ಮಹಾರುದ್ರ ನನ್ನಿಂದ ಸೋತು,
ಬಾಣಾಸುರನ ಕೈಯ ಕಪ್ಪ ಕೊಡಿಸಿದನು.' ಈ ವೃತ್ತಾಂತವನ್ನೆಲ್ಲ ಹೇಳಿಕೊಂಡು,
ತಂದ ಕಪ್ಪ ಒಪ್ಪಿಸಿದನು. ಬ್ರಹ್ಮದೇವರಿಗೆ ' ಸರ್ವಜಯ ' ಎಂತ ನಾಮವದೆ.
ಭಾವಿ ಬ್ರಹ್ಮನಾದಕಾರಣ ಭೀಮಸೇನಗೆ ' ಸರ್ವಜಯ ' ಎಂತ ನಾಮವದೆ.

ಸಹದೇವ ದಕ್ಷಿಣದಿಕ್ಕಿಗೆ ಹೋಗಿ, ರುಕ್ಮೀ ಕೈಯ ಕಪ್ಪ ಕೊಂಡನು. ರುಕ್ಮಿ
ಮಹಾಬಲಿಷ್ಠ, ಹ್ಯಾಂಗೆ ಕಪ್ಪ ಕೊಂಡ ಎಂದರೆ, ರುಕ್ಮಿ ಮಹಾರುದ್ರನ ಕುರಿತು
ತಪಸ್ಸು ಮಾಡಿ, ಪಿನಾಕಧನುಸ್ಸು ಸಂಪಾದಿಸಿಹ. ಮಹಾರುದ್ರ ಪಿನಾಕಧನುಸ್ಸು
ಕೊಡುವಾಗ ಮಾತು ಬಿಡಿಸಿಕೊಟ್ಟಿಹ. ' ನನ್ನ ಧನುಸ್ಸಿನಿಂದ ಬಲಿಷ್ಠರನ್ನ
ಗೆದ್ದೀಯ. ಕೃಷ್ಣನ ಭಕ್ತರ ವಿರುದ್ಧ ಆಚರಿಸಿದ ಪಕ್ಷವೇ, ನನ್ನ ಧನುಸ್ಸು ನನ್ನಲ್ಲಿಗೆ
ಬಂದೀತು ' ಎಂದು ಹೇಳಿ ಧನುಸ್ಸು ಕೊಟ್ಟಿದ್ದರಿಂದ ಸಹದೇವನ ಕೂಡೆ ಯುದ್ಧ

ಮಾಡದೆ, ಕಪ್ಪ ಕೊಟ್ಟನು. ಸಹದೇವನ ಕೂಡ ಯುದ್ಧ ಮಾಡಿದರೆ ತನ್ನ ತಂಗಿ ರುಕ್ಮಿಣೀ ಮನಸ್ಸು ನೊಂದೀತೆಂದೂ, ಧನುಸ್ಸು ಹೋದೀತೆಂದೂ, ಕೃಷ್ಣನ ಕಡಿಯವರೆಂದೂ ತಿಳಿದು, ಬಂದಂಥಾವರಿಗೆ ಪರೀಕ್ಷೆ ಮಾಡಿ ಆದರ, ಬಹುಮಾನ ಮಾಡತಿಹ. ಮತ್ತೂ ಒಂದು ಕಾರಣ, ಸಹದೇವನ್ನ ಕೈಸೆರಿ ಹಿಡದು ಹಾಕಿದರೆ, ಭೀಮಾರ್ಜುನರು ಬಲಿಷ್ಠರು, ತನ್ನ ಕೊಂದಾರೆಂದು ಯುದ್ಧ ಮಾಡದೆ ಕಪ್ಪ ಕೊಟ್ಟನು. ಈ ಎರಡುಮೂರು ಕಾರಣಗಳಿಂದ ಸಹದೇವಗೆ ಕಪ್ಪ ಕೊಟ್ಟ ಕಳುಹಿದನು. ಅಲ್ಲಿಂದ ಸಮುದ್ರ ಅಡ್ಡ ಬಿದ್ದದೆ, ಹೋಗಲಿಕ್ಕೆ ಶಕ್ತಿ ಇಲ್ಲ. ಆದ-ಕಾರಣ ಘಟೋತ್ಕಚನ್ನ ನೆನೆಸಿದನು—ಪಾಂಡವರ ಐದೂ ಮಂದಿಯೊಳಗೆ ದಾರು ನೆನೆಸಾರು, ಅವರ ಬಳಿಗೆ ಘಟೋತ್ಕಚ ಬರಬೇಕು. ಹೀಂಗಂತ ಇಹೋದು. ಅದರಂತೆ ಸಹದೇವ ನೆನಸಲಾಗಿ, ಘಟೋತ್ಕಚ ಬಂದು ನಿಂತನು. ಘಟೋತ್ಕಚ-ನಿಂದ ಕೂಡಿ, ಆಕಾಶಮಾರ್ಗದಿಂದ ಲಂಕಾಪಟ್ಟಣಕ್ಕೆ ಹೋಗಿ, ಕಪ್ಪ ಕೊಂಡನು. ಅದು ಹ್ಯಾಂಗೆಂದರೆ, ಘಟೋತ್ಕಚ ವಿಭೀಷಣನ ಸಮೀಪಕ್ಕೆ ಹೋಗಿ ಹೇಳಿದನು. 'ಶ್ರೀಕೃಷ್ಣ ಇಂದ್ರಪ್ರಸ್ಥದಲ್ಲಿ ಪಾಂಡವರಿಂದ ರಾಜಸೂಯಯಾಗ ಮಾಡಿಸಥಾನೆ. ಧರ್ಮರಾಯನ ಕಡಿಯಿಂದ ಸಹದೇವ ಬಂದು ಸಮುದ್ರತೀರದಲ್ಲಿದ್ದಾನೆ. ಕಪ್ಪ ಬೇಡ ಕಳಿಸ್ಯಾನೆ' ಎಂದು ಹೇಳಿದನು. ಸ್ವಾಮಿ ರಾಮಾವತಾರದಲ್ಲಿ ವಿಭೀಷಣಗೆ ಹೇಳಿದ್ದ. 'ನಾನು ಕೃಷ್ಣಾವತಾರ ಮಾಡೇನು. ದೇವತಿಗಳೇ ಪಾಂಡವರಾಗಿ ಹುಟ್ಟ್ಯಾರು. ಅವರ ಕೈಯ ರಾಜಸೂಯಯಾಗ ಮಾಡಲೋಸುಗ, ದ್ರವ್ಯಕ್ಕೆ ಹೇಳಿಕಳುಹಿಸಿದರೆ ಅದನ್ನು ಕೊಡು, ಪ್ರತಿಕೂಲನಾಗಬ್ಯಾಡ.' ಹೀಂಗಂತ ರಾಮ-ಚಂದ್ರ ವಿಭೀಷಣಗೆ ಹೇಳಿದ್ದ. ರಘುನಾಥನ ಮಾತು ಸ್ಮರಿಸಿ, ಅಪಾರ ರತ್ನ, ಹೇಮರಾಶಿ ಕೊಟ್ಟನು. ಘಟೋತ್ಕಚ ಆ ದ್ರವ್ಯ ಸಹದೇವಗೆ ತಂದುಕೊಟ್ಟನು. ತರುವಾಯ ಘಟೋತ್ಕಚ, ಖೇಚರಮಾರ್ಗದಿಂದ ಸಹದೇವನ್ನ ಪೂರ್ವಸ್ಥಳದಲ್ಲಿ ತಂದು ಇಳಿಸಿ, ತಾನು ತನ್ನ ಸ್ಥಳಕ್ಕೆ ಹೋದನು. ಈ ಪ್ರಕಾರ ಸಹದೇವ ದಕ್ಷಿಣ-ದಿಕ್ಕನ್ನು ಗೆದ್ದು, ಅಪಾರ ಕಪ್ಪ ಕೊಂಡುಬಂದನು.

ನಕುಲ ಪಶ್ಚಿಮದಿಕ್ಕಿಗೆ ಹೋಗಿದ್ದ. ಸಮಸ್ತ ರಾಯರನ್ನೂ ಸೋಲಿಸಿ ಅಪಾರ ಕಪ್ಪ ಕೊಂಡು, ಮದ್ರದೇಶಕ್ಕೆ ತೆರಳಿದನು. ಮದ್ರದೇಶದ ಅರಸು ಶಲ್ಯರಾಯ ಮಹಾ ಬಲಿಷ್ಠ, ತನ್ನ ಸೋದರಳಿಯ ಬಂದಾನೆಂದು ಸ್ನೇಹದಿಂದ ಕಪ್ಪ ಕೊಟ್ಟನು. ಈ ಪ್ರಕಾರ ನಕುಲ ಪಶ್ಚಿಮದಿಕ್ಕು ಗೆದ್ದು, ಅಪಾರ ಕಪ್ಪ ಕೊಂಡುಬಂದನು.

ಅರ್ಜುನ ಉತ್ತರದಿಕ್ಕಿಗೆ ಗಾಂಡೀವಧನುರ್ಧಾರಿಯಾಗಿ ಹೋಗಲಿಕ್ಕೆ, ಪರ್ವತದೇಶದವರು, ತ್ರಿಗರ್ತದೇಶದವರು ಮಾರ್ಗದಲ್ಲಿ ಅಡ್ಡಗಟ್ಟಿ, ವಿರುದ್ಧ ಆಚರಿಸಿದರು. ಅರ್ಜುನ ತನ್ನ ಪರಾಕ್ರಮದಿಂದ ಸಮಸ್ತರನ್ನೂ ಸೋಲಿಸಿ, ಅಪಾರ ಕಪ್ಪ ಕೊಂಡು, ಭಗದತ್ತನ ಸಮೀಪಕ್ಕೆ ಹೋದನು. ಭಗದತ್ತ ಕಪ್ಪ

ಕೊಡವಲ್ಲ. ಕುಬೇರನ ಆನಿ, ಸುಪ್ರತೀಕ ಎಂಬೋದು, ಏರಿಕೊಂಡು, ತಾನು ಕುಬೇರನ ಅವತಾರ ಆದಕಾರಣ, ಭಯಂಕರ ಯುದ್ಧ ಮಾಡಿದ. ಎಂಟು ದಿವಸ ಅರ್ಜುನನ ಕೂಡ ಯುದ್ಧ ಮಾಡಿದನು. ಅರ್ಜುನನ ತೀಕ್ಷ್ಣ ಪೆಟ್ಟು ತಾಳಲಾರದೆ, ಸೋತೆನೆಂದು ಸ್ವಭಾವ ತೋರಿಸದೆ, 'ಅರ್ಜುನ ಏನುಕಾರಣ ಬಂದಿದ್ದಿ? ದೇವೇಂದ್ರನನ್ನ ಗೆಳೇನಾಗಬೇಕು, ನನ್ನ ಗುರುವೂ ಆಗಬೇಕು, ನೀನು ಗುರುಪುತ್ರನಿದ್ದಿ. ನಿನಗೆ ಏನಾಗಬೇಕು ಹೇಳು' ಎಂದಲ್ಲಿ, 'ಧರ್ಮರಾಯ ರಾಜಸೂಯಯಾಗ ಮಾಡಥಾನೆ, ಕಪ್ಪ ಕೊಡು' ಎನಲು, ಭಗದತ್ತ ಮಾತನಾಡಿದ. 'ಅರ್ಜುನ, ನನಗೆ ಮಹಾದೇವರ ವರವದೆ. ಮಂತ್ರಸಾಮರ್ಥ್ಯ ನನ್ನಲ್ಲದೆ. ನೀನು ನನ್ನ ಸೋಲಿಸಲಾರಿ. ಗುರುಪುತ್ರನ ಕೂಡ ಯುದ್ಧ ಮಾಡಬಾರದೆಂದು ಕಪ್ಪ ಕೊಟ್ಟಿ' ಎನಲಿಕ್ಕೆ, ಭಗದತ್ತನ ಕೈಯ ಕಪ್ಪ ಕೊಂಡು, ಉಳಿದ ಕೆಂಪುರುಷಖಂಡ, ಕೇತುಮಾಲಾಖಂಡ ಮೊದಲಾದ ನವಖಂಡ ಪೃಥ್ವೀ ಗೆದ್ದು, ಅಪಾರ ದ್ರವ್ಯ ಸಂಪಾದಿಸಿ, ದೇಶದೇಶದ ರಾಯರನ್ನೆಲ್ಲ ಸೋಲಿಸಿ, ಪಾತಾಳಾದಿ ಸಪ್ತ ಲೋಕಗಳ ಗೆದ್ದು, ದೈತ್ಯದಾನವರ ಸೋಲಿಸಿ, ಅವರ ಕೈಯ ಕಪ್ಪ ಕೊಂಡು, ಸಪ್ತ ದ್ವೀಪಗಳ ಗೆದ್ದು, ಸುತಳ ಲೋಕಕ್ಕೆ ಬಲಿಚಕ್ರೇಶ್ವರನ ಸಮೀಪಕ್ಕೆ ಹೋಗಿದ್ದ. ಅಲ್ಲಿ ಕಪಿಲಮಹಾಮುನಿಯನ್ನು ಕಂಡನು. ಕಪಿಲನಾಮಕ ಪರಮಾತ್ಮ, ಬಲಿರಾಯಗೆ ಹೇಳಿ ಅರ್ಜುನಗೆ ಕಪ್ಪ ಕೊಡಿಸಿದನು. ಅಲ್ಲಿಂನ ಕಪಿಲದೇವರ ಆಜ್ಞೆ ಕೊಂಡು, ತಳಾತಳ, ರಸಾತಳ, ಮಹಾತಳ ಮೊದಲಾದ ಲೋಕದಲ್ಲಿದ್ದವರನ್ನೆಲ್ಲ ಗೆದ್ದು ಕಪ್ಪ ಕೊಂಡು, ವಾಸುಕಿ ಮೊದಲಾದ ಸರ್ಪಗಳ ಸೋಲಿಸಿ, ಅವರ ಕೈಯ ಕಪ್ಪ ಕೊಂಡು, ಒಂದು ವರುಷಕ್ಕೆ ಯಥೇಷ್ಟ ದ್ರವ್ಯ ಹೊರಿಸಿಕೊಂಡು ಬಂದನು ಈ ಪ್ರಕಾರ ನಾಲ್ಕು ದಿಕ್ಕು ನಾಲ್ಕು ಮಂದಿ ತಮ್ಮಂದರು ಗೆದ್ದುಕೊಂಡು ಬಂದರು.

ದಾರುದಾರು, ಎಷ್ಟೆಷ್ಟು ದ್ರವ್ಯ ತಂದರೆಂದರೆ — ಪಶ್ಚಿಮದಿಕ್ಕಿಗೆ ನಕುಲ ಹೋಗಿ, ಹತ್ತು ಯೋಜನ ಅಡ್ಡಗಲ, ಹತ್ತು ಯೋಜನ ಉದ್ದ ದ್ರವ್ಯ ಕೊಂಡುಬಂದನು. ದಕ್ಷಿಣದಿಕ್ಕಿಗೆ ಸಹದೇವ ಹೋಗಿ, ಮೂವತ್ತು ಯೋಜನ ಉದ್ದ, ಮೂವತ್ತು ಯೋಜನ ಅಡ್ಡಗಲ ದ್ರವ್ಯ ತಂದನು. ಪೂರ್ವದಿಕ್ಕಿಗೆ ಭೀಮಸೇನ ಹೋಗಿ, ನೂರು ಯೋಜನ ಅಡ್ಡಗಲ, ನೂರು ಯೋಜನ ಉದ್ದ ದ್ರವ್ಯ ಕೊಂಡು ಬಂದನು. ಅರ್ಜುನ ಉತ್ತರದಿಕ್ಕಿಗೆ ಹೋಗಿ. ನಾಲ್ನೂರು ಯೋಜನ ಉದ್ದ, ನಾಲ್ನೂರು ಯೋಜನ ಅಡ್ಡಗಲ ದ್ರವ್ಯ ಕೊಂಡುಬಂದನು. ಅರ್ಜುನ ಒಂದು ವರುಷ ಪರಿಯಂತ ಹೋಗಿ, ಬಹು ದೇಶಗಳ ತಿರುಗಿ, ಸಮಸ್ತ ರಾಯರ ಕೈಯ ಬಹಳ ಕಪ್ಪ ದೊರಕಿಸಿ ತಂದ. ಭೀಮಸೇನ ಥೋಡೇದಿವಸ ಹೋಗಿ, ನೂರು ಯೋಜನ ಉದ್ದ, ನೂರು ಯೋಜನ ಅಡ್ಡಗಲ ದ್ರವ್ಯ ತಂದನು. ಇಷ್ಟು ದ್ರವ್ಯ ಇಂದ್ರಪ್ರಸ್ಥದಲ್ಲಿ ಹ್ಯಾಂಗೆ ಹಿಡಿಸಿತೆಂದರೆ ವಿಶ್ವಕರ್ಮನಿಂದ ನಿರ್ಮಿತವಾಗಿದ್ದಂಥ ಪಟ್ಟಣವಾದ್ದರಿಂದ, ಇಷ್ಟೂ ದ್ರವ್ಯ ಅಡಕವಾಗಿ ಹಿಡಿಸಿತ್ತು.

ವೇದವ್ಯಾಸದೇವರು, ಧರ್ಮರಾಯನ್ನ ದೀಕ್ಷಾಬದ್ಧನ್ನ ಮಾಡಿ ಕೂಡ್ರಿಸಿದನು. ಭೀಮಾರ್ಜುನ ಮೊದಲಾದವರೂ ದೀಕ್ಷಾ ಕಟ್ಟಿಕೊಂಡು ಕುಳಿತರು. ಸರಸ್ವತೀಪದಯೋಗ್ಯಳಾದ ದ್ರೌಪದೀ ಯಜ್ಞದಲ್ಲಿ ದೀಕ್ಷಾ ಕಟ್ಟಿಕೊಂಡು, ಗಂಡನ ಸಮೀಪದಲ್ಲಿ ಕುಳಿತಳು. ವೇದವ್ಯಾಸ-ಪರಶುರಾಮರ ಆಜ್ಞೆಯಿಂದ ಉಳಿದ ಹೆಂಡರು ದೀಕ್ಷಾ ಕಟ್ಟಿಕೊಂಡು ಕೂಡ್ರಲಿಲ್ಲ. ಯಜ್ಞಮಂಟಪವೆಲ್ಲ ಬಂಗಾರದ ಕುಸುರು, ರತ್ನ ಎಂಬ ಕಲ್ಲುಗಳಿಂದ ನಿರ್ಮಿತವಾಗಿಹೋದು. ಕೈನುತ್ಯನ್ಯಾಯದಿಂದ, ಸುವರ್ಣಪಾತ್ರಿ ಇದ್ದವೆಂದು ಏನು ಹೇಳಬೇಕು! ರಾಜಸೂಯಯಾಗಕ್ಕೆ ಕಪ್ಪ ಕೊಂಡುಬಾಹಾಗ, ಸಮಸ್ತ ರಾಯರನ್ನೂ ಬನ್ನಿ ಎಂದು ಹೇಳಿ ಬಂದಿದ್ದರು. ಸ್ವಾಮಿ, ದ್ವಿರೂಪನಾಗಿ ಪಾಂಡವರ ಕೈಯ ಯಜ್ಞ ಮಾಡಿಸಥಾನೆಂದು, ಬ್ರಹ್ಮಾದಿ ದೇವತೆಗಳು ಬಂದಿದ್ದರು. ರಾಯರುಗಳು ಬಾಹಾಗ, ಪುನಃ ಕಪ್ಪಗಳ ಕೊಂಡು-ಬಂದಿಹೋರು. ಧೃತರಾಷ್ಟ್ರ, ಭೀಷ್ಮ ಮೊದಲಾದ ರಾಯರು, ಹಾಂಗೆ ದುರ್ಯೋಧನಾದಿ ನೂರು ಮಂದಿ ಅಣ್ಣತಮ್ಮಂದಿರು, ಹೆಂಡಂದಿರಿಂದ ಯುಕ್ತರಾಗಿ ಬಂದಿಹೋರು. ಬಾಹ್ಲೀಕರಾಯ, ಭೂರಿಶ್ರವ ಮೊದಲಾದವರು ಬಂದಿಹೋರು. ಸಮಸ್ತ ಯಾದವರೂ, ಬಲರಾಮ, ವಸುದೇವ, ಕೃಷ್ಣನ ಹದಿನಾರುಸಾವಿರದ ಒಂದುನೂರಾಎಂಟು ಮಂದಿ ಮಡದಿಯರು, ಪ್ರದ್ಯುಮ್ನ, ಸಾಂಬ ಮೊದಲಾದ ಕೃಷ್ಣನ ಮಕ್ಕಳು, ಸಮಸ್ತ ಜಗತ್ತೂ ಬಂದಿಹೋದು. ಅಹುದೋ ಅಲ್ಲವೋ ಎಂದು, ವಾಸುದೇವ ಗುಣಪೂರ್ಣನೆಂದು ಊಹಿಸ್ತಿಹೋರು. ಈ ಪ್ರಕಾರ ವೇದ-ವ್ಯಾಸ, ಪರಶುರಾಮ ಉಭಯತರೂ ಪಾಂಡವರ ಕೈಯ ಯಜ್ಞ ಮಾಡಿಸಿದರು. ಯಜ್ಞ ಮುಗಿಯಿತು.

ಇನ್ನು ಅಗ್ರಪೂಜಿ ದಾರಿಗೆ ಮಾಡಬೇಕೆಂದು, ಧರ್ಮರಾಯ ಕೃಷ್ಣನ ಮಹಿಮಿ ಬಲ್ಲರೂ ಸರಿಯೇ, ಕೃಷ್ಣನಿಗೋಸ್ಕರ ಕುರುವೃದ್ಧನ್ನ ಕೇಳಬೇಕೆಂದು, ಭೀಷ್ಮನ್ನ ಕೇಳಿದ್ದಾನೆ. ಬಾದರಾಯಣ, ಭೃಗೋತ್ತಮರನ್ನ ಪೂಜಿ ಮಾಡಿದರೆ, ರಾಯರಿಗೆಲ್ಲ ಸಮ್ಮತವಾದೀತು. ಏಕೆಂದರೆ, ನಾಲ್ಕು ವರ್ಣದೊಳಗೆ ಬ್ರಾಹ್ಮಣರು ದೊಡ್ಡವರು. ಪರಶುರಾಮ, ವೇದವ್ಯಾಸರ ಪೂಜಿ ಮಾಡಿದ್ದರಿಂದ ಎಲ್ಲರೂ ಸುಪ್ರೀತರಾದಾರು. ಕೃಷ್ಣನ ಸರ್ವೋತ್ತಮತ್ವ ಸ್ಥಾಪಿಸಬೇಕಾಗಿ, ಧರ್ಮರಾಯ ಭೀಷ್ಮನ್ನ ಕೇಳಿದ್ದಾನೆ. ಬ್ರಹ್ಮಾದಿ ದೇವತೆಗಳನ್ನ ಕೇಳಬಾರದಿತ್ತೆ ಎಂದಲ್ಲಿ, ಬ್ರಹ್ಮಾದಿ ದೇವತೆಗಳು ಮನುಷ್ಯಚಿನ್ಹ ಧರಿಸಿ ಬಂದಿಹೋರು. ಯಾದೃಶ, ತಾದೃಶ ಕೇಳಿದ್ದರಿಂದ ರಾಯರಿಗೆ ಸಮ್ಮತವಾಗದು ಋಷಿಗಳಿಗೆ ಕೇಳಬಾರದೇ ಎಂದಲ್ಲಿ, ರಾಯರೂ, ಋಷಿಗಳೂ ಕೃಷ್ಣನ ಮಹಿಮಿ ಅರೇರು. ಭೀಷ್ಮ ಬಹುದಿವಸದಾತ, ಇತ ಹೇಳಿದ್ದು ಸಕಲರಿಗೆ ಸಮ್ಮತವದೆಂದು, 'ಅಗ್ರಪೂಜಿ, ಈ ರಾಜಸೂಯ-ಯಾಗದಲ್ಲಿ ದಾರಿಗೆ ಮಾಡಬೇಕು? ಈ ಯಜ್ಞದಲ್ಲಿ ಬ್ರಹ್ಮಾದಿ ದೇವತೆಗಳಿದ್ದಾರೆ.

ರಾಯರೆಲ್ಲ ಇದ್ದಾರೆ. ಹೇಳು' ಎನಲಿಕ್ಕೆ, ಭೀಷ್ಮ 'ಕೃಷ್ಣನಿಗೆ ಅಗ್ರಪೂಜಿ ಮಾಡು' ಎಂದು ಹೇಳಿದನು. ಬಾದರಾಯಣ ಭೃಗೋತ್ತಮರಿರಲಿಕ್ಕೆ ಕೃಷ್ಣಗೆ ಪೂಜಿ ಯಾಕೆ ಮಾಡಬೇಕೆಂದಲ್ಲಿ, ನಾರಾಯಣ ತಾ ಒಬ್ಬನೇ, ಮೂರು ರೂಪದಲ್ಲಿದ್ದಾನೆ. ಅದರಲ್ಲಿ ವೇದವ್ಯಾಸ, ಪರಶುರಾಮ ಹೀಂಗೆ ಬ್ರಾಹ್ಮಣರೂಪದಲ್ಲಿ ದ್ವಿರೂಪ-ನಾಗಿದ್ದಾನೆ. ರಾಯರ ಪೂಜಿ ಮಾಡಿದ್ದರಿಂದ ರಾಯರು ವಿರುದ್ಧ ಮಾಡಾರು, ವಿವಾದ ಹುಟ್ಟಿಸಬೇಕಾಗಿ, ರಾಯರ ಮಧ್ಯದಲ್ಲಿ ವಾಸುದೇವನ ಕೀರ್ತಿ ಪಸರಿಸ-ಬೇಕಾಗಿ, ಮೊದಲೇ ಕೃಷ್ಣಗೆ ಆಘ್ರ್ಯಾದಿ ಪೂಜಿಗಳಿಂದ ಅಭಿಷೇಕ, ದಿವ್ಯ ವಸ್ತ್ರ ಗಳಿಂದ ಅಗ್ರಪೂಜಿ ಆಯಿತು. ಅದರ ತರುವಾಯ ವೇದವ್ಯಾಸ, ಭಾರ್ಗವರಾಮರ ಪೂಜಿ ಆಯಿತು. ಹೀಂಗೆ ಮೂರು ಮಂದಿ ಅವತಾರ ಒಂದೇ ಆದ್ದರಿಂದ ಮನ ಮುನಿಸು ಆಗಲಿಲ್ಲ.

ತರುವಾಯ ಋಷಿಗಳ ಪೂಜಿ ಮಾಡಲಾಗಿ, ಶಿಶುಪಾಲಗೆ ಬಹಳ ಸಿಟ್ಟು ಬಂತು. ಶಿಶುಪಾಲ ರೋಷದಿಂದ ಮಾತನಾಡಿದ. ' ಹೇ ಧರ್ಮರಾಯ, ಭೀಷ್ಮನ ಮಾತು ಕೇಳಿ, ಮೊದಲಿಗೆ ಗೋಪಾಲಕನ ಪೂಜಿ ಮಾಡಿದಿ. ಭೀಷ್ಮ ಬಹಳ ಮುದುಕ, ಬಾಲಕನ ಸರಿ, ಏನೂ ಅರಿತವನಲ್ಲ. ಗೋಪಾಲಕನ ಪೂಜಿ ಧರ್ಮ-ರಾಯನ ಕೂಡ ಹ್ಯಾಂಗೆ ಮಾಡಿಸಿದ! ಪರಶುರಾಮ, ವೇದವ್ಯಾಸ ಇಬ್ಬರೂ ಹಿರೇರು, ದ್ವಿಜಕುಲೋತ್ತಮರು. ಇವರಿರಲಿಕ್ಕೆ ಗೋವಳ, ತಾ ಚಿಕ್ಕನ ಪೂಜೀ-ನಾದರೂ ಹ್ಯಾಂಗೆ ತೆಗೆದುಕೊಂಡ! ಇಷ್ಟಾಗಿ ತಾ ಶುದ್ಧನೇ! ಚಿಕ್ಕಂದಿನಾರಭ್ಯ ದುರಾಚಾರಿ, ಕಳ್ಳ; ನಾನು ಮದುವಿ ಮಾಡಿಕೊಂಬೋ ರುಕ್ಮಿಣೀಯನ್ನು ತಾನು ಮದುವಿ ಆಗ್ಯಾನೆ. ಧೀರನಲ್ಲ, ಜರಾಸಂಧಗೆ ಅಂಜಿ ಜಲದುರ್ಗ ಆಶ್ರಯಿ-ಸಿದ್ದಾನೆ. ತಾಯೀ ತಮ್ಮ, ಪೂಜ್ಯಮಾನ ಪ್ರತ್ಯಕ್ಷ ಮಾವನ್ನ ಕೊಂದಾನೆ.' ಹೀಂಗೆ ಕೃಷ್ಣನ ನಿಂದ ಮಾಡಹೊಕ್ಕ.

ಶಿಶುಪಾಲ ದಮಘೋಷರಾಯನಲ್ಲಿ ಹುಟ್ಟಿರಲಿಕ್ಕೆ, ಮೂರು ಕಣ್ಣು, ನಾಲ್ಕು ತೋಳು ಉಳ್ಳವನಾಗಿ ಹುಟ್ಟಿದನು. ಆಗ ಅಶರೀರವಾಕ್ಯವಾಯಿತು. ' ಈ ಶಿಶು-ಪಾಲನು ದಾರ ತೊಡಿಯ ಮ್ಯಾಲೆ ಕುಳಿತಾನು, ಕೂಡ್ರಲಿಕ್ಕೆ ಎರಡು ತೋಳು ಒಂದು ಕಣ್ಣು ಕಳಚಿಬಿದ್ದಾವು, ಅವರಿಂದ ಶಿಶುಪಾಲಗೆ ಮರಣ ' ಎಂದು ಅಶರೀರ ವಾಣಿ ಆಯಿತು. ಇದರ ಪರೀಕ್ಷ ಮಾಡಬೇಕಲ್ಲ, ಸಮಸ್ತ ರಾಯರೂ ದಮ-ಘೋಷರಾಯಗೆ ಪುತ್ರೋತ್ಸವವಾಯಿತೆಂದು, ಉಡುಗೊರಿ ಉತ್ಸಾಹಗಳ ಕೊಡಲಿಕ್ಕೆ ಬಂದಿಹೋರು. ಬಂದಂಥಾವರ ತೊಡೀಮ್ಯಾಲೆಲ್ಲ ತಾಯಿ ಶಿಶುಪಾಲನ್ನ ಕೂಡ್ರಿ-ಸೋಳು. ಈ ಪ್ರಕಾರ ಪರೀಕ್ಷ ಮಾಡಲಾಗಿ, ಕೃಷ್ಣ ಬಲರಾಮರು ಬಂದಿದ್ದರು. ತಮ್ಮ ಸೋದರತ್ತಿ ಚತುರ್ಭುಜ, ತ್ರಿನೇತ್ರವುಳ್ಳ ಮಗನ್ನ ಹಡದಾಳೆಂದು ನೋಡ-ಬೇಕೆಂದು ಬರಲಿಕ್ಕೆ, ತಾಯಿ ಬಲರಾಮನ ತೊಡೀಮ್ಯಾಲೆ ಶಿಶುಪಾಲನ್ನ ಕೊಡಲು,

ಕಣ್ಣು ತೋಳುಗಳು ಕಳಚಿಬೀಳಲಿಲ್ಲ. ಶ್ರೀಕೃಷ್ಣನ ತೊಡೀನ್ಯಾಲೆ ಬಾಲಕನ್ನ ಕೊಡಲಿಕ್ಕೆ, ಒಂದು ಕಣ್ಣು ಎರಡು ತೋಳುಗಳು ಕಳಚಿಬಿದ್ವವು. ತನ್ನ ಮಗಗೆ ಕೃಷ್ಣನೇ ವೈರಿ ಎಂದು ತಿಳದು, ಸೋದರಳಿಯನ ಬೇಡಿಕೊಂಡಳು. 'ನನ್ನ ಮಗನ್ನ ಕೊಲ್ಲಬ್ಯಾಡ' ಎಂದು ಬೇಡಿಕೊಂಡಲ್ಲಿ, 'ನಿನ್ನ ಮಗನ ನೂರು ಅಪರಾಧ ತಾಳೀನು. ನೂರು ಆದಮ್ಯಾಲೆ ವಧಿಗೆ ಯೋಗ್ಯನು. ಪುನಃ ನನ್ನ ದ್ರೋಹ ಮಾಡಲಿಕ್ಕೆ, ನಿನ್ನ ಮಗನ್ನ ಕೊಂದೇನು.' ಹೀಂಗಂತ ಶ್ರೀಕೃಷ್ಣ ಹೇಳಿದ್ದ. ತನ್ನ ಹೆಂಡತಿ ರುಕ್ಮಿಣೀಗೆ ಬಳಲಿಸಿದ್ದು, ಇಂಥಾ ಅಪರಾಧ ಬಹಳೇ ತಾಳಿಕೊಂಡಿದ್ದ. ರಾಜಸೂಯಯಾಗದಲ್ಲಿ ರಾಯರ ಮಧ್ಯದಲ್ಲಿ, ಕೃಷ್ಣನ ನಿಂದ ಮಾಡಿದ್ದು ಭೀಮಸೇನ ಕಂಡು, ಸ್ವಾಮೀ ನಿಂದ ತಾಳಲಾರದೆ, ಶಿಶುಪಾಲನ ನಾಲಿಗಿ ಕಿತ್ತೀನೆಂದು ಮಹಾವೇಗದಿಂದ ಹೋಗಲಿಕ್ಕೆ, ಭೀಷ್ಮ ಭೀಮಸೇನನ್ನ ಬಿಗಿಹಿಡದು ಅಪ್ಪಿಕೊಂಡು, 'ಕೃಷ್ಣನ ಅಭಿಪ್ರಾಯ ಬಲ್ಲೆ, ಮೂರು ಜನ್ಮದಲ್ಲಿ ತಾನೇ ಕೊಲ್ಲಬೇಕೆಂಬೋದು. ದೇವರು ಮಾಡುವ ಕಾರ್ಯ ನೀನು ಮಾಡಬಾರದು.' ಹೀಂಗಂತ ಭೀಷ್ಮ ಹೇಳಲಿಕ್ಕೆ, ಆತನ ಮ್ಯಾಲೆ ಉಪಕಾರ ಹೊರಿಸಿ, ಮಾತು ಕೇಳಿ ಭೀಮಸೇನ ಹಿಂದಕ್ಕೆ ತಿರುಗಿದನು.

ಕೃಷ್ಣ ಸರ್ವೋತ್ತುಮನೆಂದು ಪೂಜೆ ಮಾಡಲಿಕ್ಕೆ, ರಾಜಸೂಯಯಾಗದಲ್ಲಿ ತ್ರಿವಿಧ ಪ್ರಾಣಿಗಳು ಬಂದಿದ್ದರು. ಸಜ್ಜನರು ಕೇಶವನ ಪೂಜೆ ಕಂಡು ಬಹಳ ಪ್ರೀತರಾದರು. ನಿತ್ಯ ಸಂಸಾರಿಗಳು ಸುಖನೂ ಪಡಲಿಲ್ಲ, ದುಃಖನೂ ಹಚ್ಚಿಕೊಳ್ಳಲಿಲ್ಲ. ತಪೋಯೋಗ್ಯರು ಕೃಷ್ಣನ ಪೂಜೆ ಕಂಡು ವಿಮನಸ್ಕರಾದರು. ಶಿಶುಪಾಲ ಕೃಷ್ಣನ ನಿಂದ ಮಾಡಿದ. ನೂರು ಅಪರಾಧ ಮುಗಿಯಿತು. 'ಎಲೋ ಗೋಪಾಲ ಮೊದಲಿಗೆ ಪೂಜಿಗೊಂಡಿ. ನನ್ನ ಕೂಡ ಯುದ್ಧಕ್ಕೆ ಬಾ' ಎಂದು ಕರಿಯಲಿಕ್ಕೆ ಹಾಂಗೂ ಬಾಣದ ಮುಳಿಗರಿಯಲಾಗಿ, ಸ್ವಾಮಿ ತನ್ನ ಸುದರ್ಶನಚಕ್ರದಿಂದ ಶಿಶುಪಾಲನ ಶಿರಚ್ಛೇದನ ಮಾಡಿದನು. ಅಸುರ ಹಿರಣ್ಯಕಶಿಪು ಮಹಾತಮಸ್ಸು ಐದಿದನು. ಜಯನೆಂಬಾತ ಸ್ವಾಮಿಯ ಉದರದೊಳಗೆ ಹೊಕ್ಕನು.

ರಾಜಸೂಯಯಜ್ಞ ಸಮಾಪ್ತಿ ಆಯಿತು. ಸಮಸ್ತರ ಪೂಜೆ ಆಯಿತು. ಇನ್ನು ಬ್ರಾಹ್ಮಣರಿಗೆ ದ್ರವ್ಯ ದಕ್ಷಿಣೆ ಕೊಡಬೇಕಲ್ಲ. ಧರ್ಮರಾಯನ ಭೆಟ್ಟಿಗೆ ಸಮಸ್ತದೇಶದ ರಾಯರುಗಳು ಪಾದಕಾಣಿಕೆ ಅನೇಕ ದ್ರವ್ಯ ತಂದಿಹೋರು. ಧರ್ಮರಾಯ ಯಜ್ಞದಲ್ಲಿ ದೀಕ್ಷ ಕಟ್ಟಿಕೊಂಡಿಹ. ಆದಕಾರಣ ದುರ್ಯೋಧನನ್ನ ದ್ವಾರದಲ್ಲಿ ಕೂಡ್ರಿಸಿ, ರಾಯರು ಏನು ದ್ರವ್ಯ ತಂದದ್ದು ಎಣಿಸಿಕೊಂಡು, ದ್ರವ್ಯ ತೆಗೆದುಕೊಂಡು ಒಳಗೆ ಇಡತಿಹ. ಇದರಂತೆ ಧರ್ಮರಾಯ ದುರ್ಯೋಧನಗೆ ಆಜ್ಞಾಪಿಸಿಹ. ಸಮಸ್ತ ರಾಯರು ರಾಯನ ಭೆಟ್ಟಿಗೆ ದ್ರವ್ಯ, ರತ್ನಾಭರಣ ಬಹಳವಾಗಿ ತಂದಿಹೋರು. ತಂದ ದ್ರವ್ಯ ರಾಯರು ಹ್ಯಾಂಗೆ ಹ್ಯಾಂಗೆ ತಂದಿದ್ದರು ಹಾಂಗೇ

ಸಮಸ್ತ ದ್ರವ್ಯ ವಿಭಾಗ ಮಾಡದೆ ಬ್ರಾಹ್ಮಣರಿಗೆ ಕೊಟ್ಟನು. ಬ್ರಾಹ್ಮಣರಿಗೆ ಷಡ್ರಸೋಪೇತವಾದಂಥ ಅನ್ನಗಳಿಂದ, ದ್ರವ್ಯ ದಕ್ಷಿಣೆಗಳಿಂದ ಧರ್ಮರಾಯ ಬಹಳ ತುಷ್ಟಿಬಡಿಸಿದನು. ಅವರಿಗೆಲ್ಲ ಭೂರಿ ದಕ್ಷಿಣೆ ಕೊಟ್ಟನು. ಏನೇನು ಅಭೀಷ್ಟ ಬೇಕಾಗಿತ್ತು ಅಷ್ಟೂನು, ವಿಪ್ರರಿಗೆ ಕೊಟ್ಟು ತುಷ್ಟಿಬಡಿಸಿದನು. ತರುವಾಯ ಅವಭೃತಸ್ನಾನಕ್ಕೆ ಭಾಗೀರಥೀಗೆ ಹೋದರು. ಅಲ್ಲಲ್ಲಿ ಗಂಧರ್ವರು ಗಾಯನ ಮಾಡೋರು. ಅಪ್ಸರಸ್ತ್ರೀಯರು ನೃತ್ಯಮಾಡೋರು. ಸೂತ ಮಾಗಧ ವಂದಿಗಳು ಸ್ತೋತ್ರ ಮಾಡತಿಹೋರು, ನಾನಾವಾದ್ಯಗೈತಿಹೋರು. ಈ ಪ್ರಕಾರ ರಾಜಸೂಯ-ಯಾಗ ಮುಗಿದಮ್ಯಾಲೆ, ಧರ್ಮರಾಯನ ಕೈಯ ಬಹುಮಾನ ಮಾಡಿಸಿಕೊಂಡು, ರಾಯರುಗಳು ತಮ್ಮತಮ್ಮ ರಾಜಧಾನಿಗೆ ಹೋದರು. ಭೀಷ್ಮ, ದ್ರೋಣ, ಕೃಪಾಚಾರ್ಯ, ಅಶ್ವತ್ಥಾಮ, ಧೃತರಾಷ್ಟ್ರ ಮೊದಲಾದವರು ನಾಗಪುರಕ್ಕೆ ಹೋದರು. ದೇವತಿಗಳು ತಮ್ಮತಮ್ಮ ಲೋಕಕ್ಕೆ ಹೋದರು. ವ್ಯಾಪಾರಸ್ಥರು ಹೋಗಲಿಕ್ಕೆ ಬಾರದು. ಆದಕಾರಣ ದುರ್ಯೋಧನ ಹಸ್ತಿನಾವತಿಗೆ ಹೋಗಿದ್ದಿಲ್ಲ.

ಪಾಂಡವರು ಅವಭೃತಸ್ನಾನ ಮಾಡಿ, ತಮ್ಮ ದಿವ್ಯ ಸಭಿಯಲ್ಲಿ ಕುಳಿಥಾರೆ. ರುಕ್ಮಿಣೀ, ಸತ್ಯಭಾಮಾ ದ್ರೌಪದೀ ಸಮೀಪದಲ್ಲಿ ಕುಳಿಥಾರೆ. ಬಲರಾಮ ಸಾತ್ಯಕಿ ಧರ್ಮರಾಯನ ಸಮೀಪದಲ್ಲಿ ಕುಳಿಥಾರೆ. ಕೃಷ್ಣನ ಸಮೀಪದಲ್ಲಿ ಭೀಮಾರ್ಜುನರು ಕುಳಿಥಾರೆ. ಕೃಷ್ಣನ ಮಕ್ಕಳು, ಹದಿನಾರುಸಾವಿರದ ನೂರಾಎಂಟು ಮುಂದಿ ಹೆಂಡರು, ಮಿಗಿಲಾದ ಸ್ತ್ರೀಯರು ಸ್ತ್ರೀಸಭಿಯಲ್ಲಿ ಕುಳಿತುಕೊಂಡಾರೆ. ನಾನಾ ಆಭರಣಗಳ ಹಾರಗಳ ಹಾಕಿಕೊಂಡಾರೆ. ದಿವ್ಯ ವಸ್ತ್ರಾಭರಣಗಳಿಂದ ಅಲಂಕೃತ-ರಾಗ್ಯಾರೆ. ಗಂಧಕಸ್ತೂರಿ ಪರಿಮಳಗಳಿಂದ ತಾಂಬೂಲಗಳನ್ನ ಚರ್ವಿಸತ, ದಿವ್ಯ ಸಭಿಯೊಳಗೆ ಕುಳಿತು, ವಿನೋದವಚನಗಳಾಡಥಾರೆ. ಆ ಸಭಿಗೆಲ್ಲ ತಿಲಕಸ್ಥಾನ, ಜಗತ್ತಿಗೆ ಪ್ರಭು, ಶ್ರೀಕೃಷ್ಣ ಚೆನ್ನಾಗಿ ಒಪ್ಪತಿಹೋನು. ಸಮಸ್ತರೂ ಕೃಷ್ಣನ್ನ ಪಾಲೆ ನೋಡತಿಹೋರು. ದುರ್ಯೋಧನ, ತನ್ನ ಕರಿಕಳುಹಲಿಲೆಂದು ತನ್ನ ತಮ್ಮಂದಿರ ಸಹವಾಗಿ ಖಡ್ಗ ಹಿಡಕೊಂಡು ಬರಥಾನೆ. ರತ್ನಕಾಂತಿಯಿಂದ, ಸ್ಫಟಿಕರತ್ನಕಾಂತಿಯಿಂದ ಬಾಗಿಲ ಒಳಗಿನವರು ಹೊರಗೆ ಕಾಣತಿಹೋರು. ಬಾಗಿಲು ತಿಳಿಯದೆ ದುರ್ಯೋಧನ ಹೋಗಲಿಕ್ಕೆ—ಇಂದ್ರನೀಲಕಾಂತಿಯಿಂದ ಬಾಗಿಲು ತಿಳೀದೆ—ಗೋಡಿ ಹಾಯ್ದ. ಧರ್ಮರಾಯ ದುರ್ಯೋಧನನ ಈ ಅವಸ್ಥಿಯನ್ನು ಕಂಡು ನಕುಲ-ಸಹದೇವರಿಗೆ ಆಜ್ಞಾಪಿಸಿದ. ನಕುಲ-ಸಹದೇವರು ದುರ್ಯೋಧನನ್ನ ಕರಕೊಂಡು ಬಂದು ಸಭಾದೊಳಗೆ ಕೂಡ್ರಿಸಿದರು. ದುರ್ಯೋಧನ ಪಾಂಡವರ ಮಹದ್ಐಶ್ವರ್ಯಸಂಪತ್ತು, ಸಭಾ ಚೆಲುವಿಕೆ ನೋಡಿ, ಇವರ ಭಾಗ್ಯ ನೋಡಲಾರದೆ, ಸಭಿ ಒಳಗಿಂದ, ತನ್ನ ಮೂರ್ಖತ್ವ ತೋರಿಸಬೇಕಾಗಿ, ಬಂದ ಮಾರ್ಗ ಬಿಟ್ಟುಕೊಟ್ಟು, ಮತ್ತೊಂದು ಮಾರ್ಗದಲ್ಲಿ ನಡದನು. ಇಂದ್ರನೀಲರತ್ನ ಭೂಮಿಗೆ

ಕಟ್ಟಿಹೋದು, ಬಂಗಾರದ ಕವಚಗಳು ರಚಿಸಿಹೋದು. ಜಲವೆಂದು ತಿಳದು, ಭೂಮಿ ಎಂದು ತಿಳೀದೆ, ನೀರೊಳಗೆ ಹ್ಯಾಂಗೆ ನಡೀಥಾರೆ ಹಾಂಗೆ, ಭೃತ್ಯರ ಕೈಯ ವಸ್ತ್ರ ಹಿಡಿಸಿಕೊಂಡು ದುರ್ಯೋಧನ ಹೋಗಥಾನೆ. ಜಲವಿಲ್ಲ ಎಂದು ತಿಳದು ಹೀಂಗೆ ಹೋಗಲಕ್ಕ, ಭೂಮಿ ಎಂದು ತಿಳದು ಮುಂದಮುಂದಕ್ಕೆ ಹೋಗಲಿಕ್ಕೆ, ಅಲ್ಲಿ ಸರೋವರವಿತ್ತು, ದುರ್ಯೋಧನ ನೀರೊಳಗೆ ಬಿದ್ದನು. ಕೃಷ್ಣನ ಸಂಜ್ಞೆಯಿಂದ ಭೀಮಸೇನ ದೊಡ್ಡ ನಗೆ ನಗಹೊಕ್ಕನು. ದ್ರೌಪದೀ ಮೊದಲಾದ ಸ್ತ್ರೀಯರೂ ನಗಹೊಕ್ಕರು. ನಗೆಶಬ್ದದಿಂದ ಎರಡನೇ ಶಬ್ದಾಂತರ ಕೇಳಿಸದು. ಕೃಷ್ಣ ತಾ ಮುಗುಳುನಗೆ ನಗತಿದ್ದ, ದುರ್ಯೋಧನನ್ನ ನೋಡಿ ಮುಖಚಂದ್ರ ಅರಳಿಹೋದು. ಮಂದಿ ಎಲ್ಲ ನಗೋದು ಕಂಡು, ಧರ್ಮರಾಯಗೆ ಸಿಟ್ಟು ಬಂತು. ಭೃತ್ಯರ ಕಳುಹಿಸಿ ನಗಬ್ಯಾಡಿರೆಂದು ಹೇಳಿಕಳುಹಿಸಿದ. 'ಬಿದ್ದಾತಗೆ ಯಾರಾದರೂ ನಗಥಾರೆ! ಗದ್ದಲ ಎಬ್ಬಿಸಬ್ಯಾಡಿರಿ' ಎಂದು ಹೇಳಿಸಿ, ದುರ್ಯೋಧನನ ವಸ್ತ್ರ ತೊಯ್ದುವೆಂದು, ಅವನಿಗೆ ವಸ್ತ್ರ, ಗಂಧಮಾಲ್ಯ ಆಭರಣಗಳ ಧರ್ಮರಾಯ ಕಳುಹಿಸಿಕೊಟ್ಟನು.

ದುರ್ಯೋಧನ, ವಸ್ತ್ರಾಭರಣಗಳು, ಗಂಧಮಾಲ್ಯಗಳು ಕೊಳ್ಳದೆ, ನಾಚಿಕೆಯುಳ್ಳವನಾಗಿ, ದ್ರೌಪದೀಮ್ಯಾಲೆ ಬಹಳ ಕೋಪಾವಿಷ್ಟನಾಗಿ ಸಭಿಯೊಳಗಿಂದ ಹೊರಟು, ಬಹಳ ಸಂತಾಪ ಉಳ್ಳವನಾಗಿ, ತನ್ನ ಮಾವ ಶಕುನೀ ಸಮೀಪಕ್ಕೆ ಹೋದ. 'ಮಾವ, ನಾನು ಇನ್ನು ಬದುಕುವ ಹಾಂಗೆ ಇಲ್ಲ. ನಾನು ಬದುಕಬೇಕೆಂಬ ಅಪೇಕ್ಷಿ ಇದ್ದರಿ, ಭೀಮಸೇನ ದ್ರೌಪದೀ ಇವರನ್ನ ಐಶ್ವರ್ಯಭ್ರಷ್ಟರನ್ನ ಮಾಡು: ಮಾವ, ನನಗೆ ಶಕ್ತಿ ಇದ್ದ ಪಕ್ಷವೇ ಪಾಂಡವರ ಐಶ್ವರ್ಯ ಕಸಗೊಂಡು, ರಾಜ್ಯ-ಭ್ರಷ್ಟರನ್ನ ಮಾಡುವೆ. ಪಾಂಡವರ ಭಾಗ್ಯ ಎಷ್ಟಂತ ತಾಳಲಿ! ಪೃಥ್ವೀಪತಿ, ಅರಸರುಗಳು, ಕೋಮಟಿಗೇರು ಕಪ್ಪ ತಂದುಕೊಡಥಾರೆ. ಹಾಂಗೆ ಭೂಪಾಲಕರು ಕಪ್ಪ ತಂದುಕೊಡತಿಹೋರು. ಅಸಂಖ್ಯ ದ್ರವ್ಯ ತಂದುಕೊಟ್ಟರು. ಮತ್ತೆ ಪಾಂಡವರು ಸಮಸ್ತ ರಾಯರನ್ನ ಬಿಟ್ಟು, ತಮ್ಮ ಸೋದರಮಾವನ ಮಗ ಕೃಷ್ಣಗೆ ಅಗ್ರಪೂಜಿ ಮಾಡಿದರು. ಪಾಂಡವರ ಐಶ್ವರ್ಯ ನಾನು ಸಹಿಸಲಾರೆ. ನಾನು ಬದುಕೋಹಾಂಗೆ ಇಲ್ಲ.' ಈ ಪ್ರಕಾರ ತನ್ನ ದುಃಖ ಕಷ್ಟದಿಂದ ಹೇಳಲಾಗಿ, ಶಕುನಿ ತಾ ಪಾಪಿ, ದುರ್ಯೋಧನಗೆ ಕೋಪ ಹೆಚ್ಚಿಸಿಕೊಡಬೇಕಾಗಿ ಮಾತನಾಡಥಾನೆ. 'ಎಲೋ ಅಪ್ಪ ದುರ್ಯೋಧನ! ಪಾಂಡವರು ಬಲಿಷ್ಠರು, ಅವರ ಕೂಡ ವೈರತ್ವ ಕಟ್ಟಿದರೆ ನಿನಗೆ ಕ್ಷೇಮವಿಲ್ಲ. ಪಾಂಡವರ ಕೂಡ ಒಳಿತು ಬಳಸು. ಪಾಂಡವರ ಐಶ್ವರ್ಯ ಕಂಡು ಅಸಹ್ಯ ಬಡಬ್ಯಾಡ.' ಹೀಂಗಂತ ಶಕುನಿ ಹೇಳಲಿಕ್ಕೆ, ದುರ್ಯೋಧನ ಮಾತನಾಡಿದ. 'ಮಾವ ಪಾಂಡವರ ಗೆಲ್ಲಲಿಕ್ಕೆ ನನಗೆ ಸಾಮರ್ಥಿ ಇಲ್ಲ. ಸಮಸ್ತ ಭೂಪಾಲಕರು ಅವರ ಭೃತ್ಯರಾಗಿದ್ದಾರೆ. ಪಾಂಡವರ ಐಶ್ವರ್ಯ

ನಾ ತಾಳಲಾರೆ. ನಾ ಸಾಯುಥೀನಿ' ಎಂದು ನಿಷ್ಕರ್ಷ ಮಾತನಾಡಲಿಕ್ಕೆ, ಸೋದರಳಿಯ ವ್ಯರ್ಥ ಸತ್ತಾನೆಂದು ಶಕುನಿ, ದುರ್ಯೋಧನನ್ನ ಸಮಾಧಾನ ಮಾಡಿದ. 'ಧೈರ್ಯಭ್ರಷ್ಟನಾಗಬ್ಯಾಡ. ಉಪಾಯದಿಂದ, ಪಾಂಡವರನ್ನ ಐಶ್ವರ್ಯಭ್ರಷ್ಟರನ್ನ ಮಾಡಥೀನಿ. ನನಗೆ ಪಾಂಡವರನ್ನ ಸೋಲಿಸೋವಲ್ಲಿ ಯುದ್ಧದಲ್ಲಿ ಸಾಮರ್ಥಿ ಇಲ್ಲ. ಅಕ್ಷವಿದ್ಯ ನನಗೆ ಬರತದೆ. ಪಾಶವಿದ್ಯದಿಂದ ಜೂಜಾಡಿ, ಅವರ ರಾಜ್ಯೈಶ್ವರ್ಯ ನಿನಗೆ ತಂದುಕೊಟ್ಟೀನು.' ಹೀಂಗೆ ದುರ್ಯೋಧನನ್ನ ಸಮಾಧಾನ ಮಾಡಿದನು.

ಅನಂತರ ಶಕುನಿ, ದುರ್ಯೋಧನ ಧೃತರಾಷ್ಟ್ರರಾಯನ ಸವೀಪಕ್ಕೆ ಹೋದರು. ಶಕುನಿಗೆ ಗುರುವಿಲ್ಲ, ದೇವತಿ ಇಲ್ಲ, ಅಂಥಾ ಪಾಪಿ. ಇವನು ಸುಬಲರಾಯನ ಮಗ. ಶಕುನಿ ಧೃತರಾಷ್ಟ್ರರಾಯನ್ನ ಕುರಿತು ಮಾತನಾಡಥಾನೆ. 'ನಿನ್ನ ಮಗ ದುರ್ಯೋಧನ ಬಹಳ ಬಡವಾಗಿದ್ದಾನೆ. ಬಹಳ ಬಿಳಚುನಡದಾನೆ' ಎನಲಿಕ್ಕೆ, ಏನುಕಾರಣ ಹೇಳೆನಲಿಕ್ಕೆ, ಶಕುನಿ ಹೇಳಥಾನೆ. 'ಪಾಂಡವರ ಐಶ್ವರ್ಯ ತಾಳಲಾರದೆ ದುಃಖ ಹಚ್ಚಿಕೊಂಡಾನೆ' ಎಂದನು. ಧೃತರಾಷ್ಟ್ರ 'ದುರ್ಯೋಧನ, ಹಸ್ತಿನಾವತಿ ರಾಜಧಾನಿ ತನಗಾಗಬೇಕೆಂದು ಉಪಾಯದಿಂದ ಪಾಂಡವರನ್ನ ಹೊರಗೆ ಹಾಕಿಸಿದ. ತಿನಲಿಕ್ಕೆ ಉಣಲಿಕ್ಕೆ ರಾಜ್ಯಕ್ಕೆ ಕೊರತಿ ಇಲ್ಲ. ಏನುಕಾರಣ ಬಡವಾಗಬೇಕು? ಪಾಂಡವರು ತಮ್ಮ ಬಾಹುಬಲದಿಂದ, ಹಾಳುಪಟ್ಟಣ ಇಂದ್ರಪ್ರಸ್ಥ ತುಂಬಿಸಿ, ಸಮಸ್ತ ರಾಯರನ್ನು ಪಾದಾಕ್ರಾಂತರನ್ನ ಮಾಡಿಕೊಂಡು, ಐಶ್ವರ್ಯ ಸಂಪಾದಿಸಿದ್ದಾರೆ. ಪಾಂಡವರು ಬಲಿಷ್ಠರು. ಜರಾಸಂಧನಂಥ ಪ್ರಬಲನ್ನ ಕೊಂದು ರಾಜಸೂಯಯಾಗ ಮಾಡಿದ್ದಾರೆ. ಅಂಥವರ ಐಶ್ವರ್ಯ ಕಂಡು ಅಸಹ್ಯ ಬಡಬಾರದು. ನಿಮ್ಮ ಕುಮಂತ್ರದಿಂದ ಕುರುಕುಲ ವಿನಾಶವಾದೀತು. ಇಂಥಾ ದುರ್ಬುದ್ಧಿ ಮಾಡಬ್ಯಾಡ. ನೀವು ನಿಮ್ಮ ಬಾಹುಬಲದಿಂದ ಸಮಸ್ತ ರಾಯರನ್ನ ದಂಡಿಸಿ, ರಾಜಸೂಯಯಾಗ ಮಾಡಿ, ಅಪರ ಕೈಯ ಕಪ್ಪ ಸಂಪಾದಿಸಿರಿ. ನೀವು ಪಾಂಡವರ ಐಶ್ವರ್ಯ ನೋಡಿ ದುಃಖಬಡೋ ಕಾರಣವಿಲ್ಲ.' ಈ ಪ್ರಕಾರ ಧೃತರಾಷ್ಟ್ರ ಮಾತನಾಡಲಿಕ್ಕೆ ದುರ್ಯೋಧನ ಹೇಳಥಾನೆ. 'ನಾನು ನಿನ್ನ ಮಗನಿದ್ದೀನಿ. ನಾ ಬದುಕಬೇಕೆಂಬೋ ಇಚ್ಛ ಇದ್ದರೆ, ಪಾಂಡವರನ್ನ ಇಲ್ಲಿಗೆ ಕರಸು. ನಮ್ಮ ಮಾವ ಶಕುನಿ ಪಾಶವಿದ್ಯದಲ್ಲಿ ಚತುರನಿದ್ದಾನೆ. ಜೂಜಾಡಿ ಪಾಂಡವರ ಸೋಲಿಸಿ, ಅವರ ಐಶ್ವರ್ಯ ಸಂಪಾದಿಸೇನೆಂಥೀನಿ. ಶೀಘ್ರ, ದ್ರೌಪದೀಸಹವಾಗಿ, ಪಾಂಡವರನ ಇಲ್ಲಿಗೆ ಕರಸೋದಕ್ಕೆ ಅನುಕೂಲನಾಗು. ಇಲ್ಲವೇ ನಾನು ಸಾಯುಥ್ತೀನಿ.' ಹೀಂಗಂತ ದುರ್ಯೋಧನ, ಮೂಲಕಲಿ ಮಾತನಾಡಿ—ಗತಲೋಚನನಲ್ಲಿ ಮೂಲಕಲಿ ಒಂದು ತಿಂಗಳು ಇದ್ದ. ಅಂದಾರಭ್ಯ

ಅಂಧಗೆ ಮೂಲಕಲ್ಯಾವೇಶವದೆ*—ಮಗನ ಮ್ಯಾಲಿನ ಸ್ನೇಹದಿಂದ ಧೃತರಾಷ್ಟ್ರನ ಅಂತಃಕರಣ ತನ್ನ ಕಡೀ ಎಳಕೋಬೇಕಾಗಿ, ಮ್ಯಾಲಿಮ್ಯಾಲೆ ನೀತಿಗಳ ಹೇಳಥಾನೆ. 'ರಾಯ, ಬ್ರಾಹ್ಮಣರು ವೇದೋಪಜೀವನ ಮಾಡಬೀಕು. ಕ್ಷತ್ರಿಯರು ಶಸ್ತ್ರೋಪಜೀವನ ಮಾಡಬೇಕು, ವೈರಿಗಳ ಗೆಲ್ಲಬೇಕು. ದಾವ ಪ್ರಕಾರದಿಂದಲಾದರೂ ವೈರಿಗಳ ತಿರಸ್ಕಾರ ಮಾಡಬೀಕು.' ಹೀಂಗಂತ ದುರ್ಯೋಧನ ಮಾತನಾಡಲಿಕ್ಕೆ, ಕಲ್ಯಾವೇಶದಿಂದ ಧೃತರಾಷ್ಟ್ರಗೆ ಭೂತ ಹಿಡಿಥಾಂಗಾಯಿತು. ಮಗನ ಮ್ಯಾಲಿನ ಸ್ನೇಹದಿಂದ 'ಪಾಂಡವರ ಕರಕೊಂಡು ಬಾ' ಎಂದು ಹೇಳಲು ವಿದುರನ್ನ ಕರೆಕಳುಹಿ ಹೇಳಿದನು.

ಅಂಶದಿಂದ ಅಂಧನ ಉದರದಲ್ಲಿ ಕಲಿ ಸೇರಿದ್ದಾನೆ. ಕಲಿ ಎಂದು ಹೋದ ಎಂದರೆ, ದುರ್ಯೋಧನಾದಿಗಳು ಸತ್ತ್ವಮ್ಯಾಲೆ, ಭೀಮಸೇನನಿಂದ ನಿಷ್ಠುರವಚನಗಳ ಆಡಿಸಿಕೊಂಡು ಧೃತರಾಷ್ಟ್ರ ವನಕೆ ಹೋಗ್ಯಾನೆ, ಅಂದೇ ಕಲಿ ಬಿಟ್ಟು ಹೋಗ್ಯಾನೆ. ವಿದುರ ಅಂಧಗೆ ಅಂದ 'ರಾಯ, ಈ ಉದ್ಯೋಗದಿಂದ ನಿನ್ನ ಕುಲ ನಾಶವಾಗತದೆ. ಪಾಂಡವರನ್ನ ಕರೆಯಲಟ್ಟಬ್ಯಾಡ. ಬಹಳ ಅನರ್ಥಸಾಧನವಾಗತದೆ.' ಹೀಂಗೆ ವಿದುರ ನಿವಾರಿಸಿದರೂ ಧೃತರಾಷ್ಟ್ರ ವಿದುರಗೆ ಅಂದ. 'ತಮ್ಮಾ, ಇಷ್ಟು ಏನು-ಕಾರಣ ಅಂಜತಿದ್ದಿ! ನಾವು ಹಿರೇರು ಇರಲಿಕ್ಕೆ, ಕಲಹ ಬೆಳಿಸೋಹಾಂಗೆ ಇಲ್ಲ. ನನ್ನ ಮಕ್ಕಳು ಜೂಜಾಡಿದ್ದು ಕಣ್ಣಲ್ಲಿ ನೋಡೇನೆಂದರೆ ಕಣ್ಣಿಲ್ಲ. ಕವಿಯಲ್ಲಾದರೂ ಕೇಳಿ ಸುಖಬಟ್ಟೀನೆಂಥೀನಿ.' ಹೀಂಗಂತ ಹೇಳಿ, ವಿದುರನ್ನ ಇಂದ್ರಪ್ರಸ್ಥಕ್ಕೆ ಕಳುಹಿದನು. ಸಭಾಪರ್ವ ಕಥ ಹೇಳತಲೇ ನಿಂದರಿಸಿ, ಹರಿವಂಶ ಕಥ ಹೇಳಥಾರೆ.

ದುರ್ಯೋಧನ ಅಪ್ರತಿಷ್ಟಿತನಾಗಿ ಸಭಿಗೆ ಮಾರಿ ತೋರಿಸದೇ ಹೋದಮ್ಯಾಲೆ ನಾರದ ಬಂದ. ನಾರದನ್ನ ಧರ್ಮರಾಯ ಕೇಳಥಾನೆ. 'ಎಲೈ ನಾರದನೇ, ಬಹಳ ದೇಶ ತಿರಗಿ ಬಂದಿದ್ದೀ, ವರ್ತಮಾನ ಏನು?' ಎಂದಲ್ಲಿ, ನಾರದ ಹೇಳಥಾನೆ. 'ಸಾಲ್ವರಾಯ ಮಹಾ ಪ್ರಬಲನಾಗಿ ಬಂದು ದ್ವಾರಾವತಿಗೆ ಮುತ್ತಿಗಿ ಹಾಕಿದ್ದಾನೆ.' ಹೀಂಗಂತ ಧರ್ಮರಾಯಗೆ ಹೇಳಲಿಕ್ಕೆ, 'ಜರಾಸಂಧನಂಥ ಪ್ರಬಲನ್ನ ಕೊಂದಿದ್ದೆವು. ಸಾಲ್ಕು ದಿಕ್ಕುಗಳನ್ನೆಲ್ಲಾ ಗೆದ್ದು ದಿಗ್ವಿಜಯ ಮಾಡಿ ಬಂದೆವು. ಈ ಸಾಲ್ವ ಎಲ್ಲಿಂದ ಬಂದ! ನಮಗೆ ಮೃತ್ಯುವೈರಿ ಇದ್ದಾನೆ', ಎಂದು ಕೇಳಲಾಗಿ, 'ದಿಗ್ವಿಜಯ ಮಾಡೋಕಾಲದಲ್ಲಿ ಸಾಲ್ವ ತಪಸ್ಸಿಗೆ ಹೋಗಿದ್ದ. ರುಕ್ಮಿಣೀಸ್ವಯಂವರದಲ್ಲಿ ಕೃಷ್ಣನ ಕೈಯಲ್ಲಿ ಪೆಟ್ಟು ತಿಂದು, ಕೃಷ್ಣನ ಸಹ ಯಾದವಕುಲ ವಿನಾಶ ಮಾಡ-

---

* ದುರ್ಯೋಧನನಾಗಿ ಅವತಾರ ಮಾಡಲು, ಕಲಿಯು ಮಾತೃಗರ್ಭವನ್ನು ಪ್ರವೇಶ ಮಾಡುವ ಒಂದು ತಿಂಗಳು ಮುಂಚೆಯೇ, ಪಿತೃನಾದ ಧೃತರಾಷ್ಟ್ರನಲ್ಲಿ ಪ್ರವೇಶ ಮಾಡಿ ಆವಾಸವಾಗಿದ್ದನು. ಆಗ ಪ್ರವೇಶ ಮಾಡಿದ ಕಲಿ ಒಂದು ಅಂಶದಿಂದ ಮಾತೃಗರ್ಭವನ್ನು ಪ್ರವೇಶ ಮಾಡಿ, ಒಂದಂಶದಿಂದ ಧೃತರಾಷ್ಟ್ರನಲ್ಲೆ ಇರುತ್ತಿದ್ದನು.

ಜೀಕೆಂದು, ಪುಷ್ಪೀತುಂಬ ಧೂಳು ಮುಕ್ಕಿ, ಮಹಾರುದ್ರನ ಕುರಿತು ತಪಸ್ಸು ಮಾಡಿದ. ಈಗ ಕೃಷ್ಣನ್ನ ಕೊಲ್ಲಬೇಕೆಂದು ಬಂದಾನೆ. ಸಾಲ್ವ, ಹಂಸ ಡಿಬಿಕರ ಅಣ್ಣನಾಗಬೇಕು. ಕೃಷ್ಣ ಭೀಮಸೇನನ ಕೈಯ ಜರಾಸಂಧನ್ನ ಕೊಲ್ಲಿಸಿದ್ದಾನೆ. ಪಾಂಡವರ ರಾಜಸೂಯಯಾಗದಲ್ಲಿ ತಮ್ಮ ಪ್ರಾಣಪ್ರಿಯ ಶಿಶುಪಾಲನ್ನ ಕೊಂದಾನೆ. ಇದನ್ನೆಲ್ಲ ವಾರ್ತೆ ಕೇಳಿ ಕೃಷ್ಣನ ಪಟ್ಟಣ ಕೊಂಡು ಸೆರಿಸೂರಿ ಮಾಡಬೇಕಂತ ಸುತ್ತುಗಟ್ಯಾನೆ.' ಹೀಂಗಂತ ನಾರದ ಹೇಳಲಿಕ್ಕೆ, ಧರ್ಮರಾಯ ಖಿನ್ನ ಮನಸ್ಸುಳ್ಳವನಾಗಿ 'ನಮ್ಮ ಸ್ವಾಮಿ ನಮ್ಮ ಕಡಿಗೆ ಸಹಕಾರಿಯಾಗಿ ಬಂದಿರಲಿಕ್ಕೆ, ಅತ್ತಕಡಿಯಿಂದ ಸಾಲ್ವ ಏನು ಅನರ್ಥ ಮಾಡ್ಯಾನೋ' ಎಂದು ಚಿಂತಿಯಿಂದ ಯುಕ್ತನಾಗಿ, ಕೃಷ್ಣನ ಮಾರಿ ನೋಡಲಿಕ್ಕೆ, ಕೃಷ್ಣ ಚಂದ್ರಮಂಡಲ ಡೋಪಾದಿ ಮಾರಿ ಅರಳಿಸಿಕೊಂಡು 'ಧರ್ಮರಾಯ, ಏನುಕಾರಣ ಚಿಂತಿ ಹಚ್ಚಿ-ಕೊಂಡಿದಿ' ಎಂದು ಸಮಾಧಾನ ಮಾಡಿ, ಪ್ರದ್ಯುಮ್ನ ಮೊದಲಾದ ಯಾದವ-ರನ್ನೆಲ್ಲ ದ್ವಾರಾವತಿಗೆ ಕಳುಹಿ, ಸ್ವಾಮಿ ಶ್ರೀಕೃಷ್ಣ, ಕೆಲವು ದಿವಸ ಇಂದ್ರಪ್ರಸ್ಥದಲ್ಲಿ ನಿಂತು, ಅದರವ್ಯಾಲೆ ಶ್ರೀಕೃಷ್ಣಬಲರಾಮರು ದ್ವಾರಾವತಿಗೆ ಹೋದವ್ಯಾಲೆ, ವಿದುರ ಇಂದ್ರಪ್ರಸ್ಥಕ್ಕೆ ಬಂದಾನೆ.

ಅಂಧನೃಪನ ಆಜ್ಞೆ ವಿದುರ, ಧರ್ಮರಾಯಗೆ ಹೇಳಿದ. 'ನಾನಾದರೂ ಅಣ್ಣನ ಮಾತು ಮೀರಲಿಕ್ಕೆ ಬಾರದೆಂದು, ನಿನ್ನ ಕರಿಯಲಿಕ್ಕೆ ಬಂದೀನಿ. ನೀವು ಹಸ್ತಿನಾವತಿಗೆ ಬರೋದು ನನ್ನ ಮನಸ್ಸಿಗೆ ಬರೋದಿಲ್ಲ. ಹಿರೇರ ಮಾತು ಮೀರ-ಬಾರದೆಂದು ನಿರ್ಬಂಧ ಇದ್ದ ಪಕ್ಷವೇ, ಬರಬೇಕಾದರೆ ಬಾ.' ಹೀಂಗಂತ ವಿದುರ ಮಾತನಾಡಲಿಕ್ಕೆ, ಕುಂತೀದೇವಿ, ಭೀಮು, ಅರ್ಜುನ, ನಕುಲ, ಸಹದೇವ, ದ್ರಾಪದೀ ಮೊದಲಾದವರೆಲ್ಲ ಧರ್ಮರಾಯಗೆ ಹಸ್ತಿನಾವತಿಗೆ ಹೋಗಬ್ಯಾಡೆಂದು ನಿವಾರಿಸಿದರು. ಧರ್ಮರಾಯನ ಸಂಕಲ್ಪ ಕರೆದರೆ ಹೋಗಬೇಕೆಂದು ಇಹೋದು. ಸಮಸ್ತರು ನಿವಾರಿಸಿದರೂ, ಕರೆದಾಗ ಹೋಗದಿದ್ದರೆ ಯುದ್ಧಪ್ರಸಕ್ತಿ ಆದೀತೆಂದು ವೇದವ್ಯಾಸನ ವಚನ ಮನಸ್ಸಿನಲ್ಲಿ ಇಟ್ಟುಕೊಂಡಿಹ. ರಾಜಸೂಯಯಾಗದಲ್ಲಿ ಬಹುಮಂದಿ ರಾಯರು ನೆರೆದಿರಲಿಕ್ಕೆ, ವೇದವ್ಯಾಸ ಮಾತನಾಡಿದ್ದ. 'ಇಷ್ಟೂ ಸಮಸ್ತ ರಾಯರು ಸತ್ತಾರು. ಇದಕ್ಕೆ ನಿಮಿತ್ತಕಾರಣನು ನೀನೆ ಆದಿ' ಅಂತ ಕಾಳೀದೇವಿ ಮಗ ಹೇಳಿದ್ದ. ಆ ಮಾತು ನೆನೆಸಿಕೊಂಡು, ಹೋಗದಿದ್ದರೆ ಯುದ್ಧ-ಪ್ರಸಕ್ತಿ ಆದೀತೆಂದೂ, ಮ್ಯಾಲೆ ಹಿರಿಯಪ್ಪ ಕರೆಕಳುಹಿದ್ದಾನೆ, ಹಿರೇರ ಆಜ್ಞೆ ಮೀರಿದನೆಂದು ದೋಷಕ್ಕೆ ಪಾತ್ರನಾಗಬಾರದೆಂದು ಧರ್ಮರಾಯ ನಾಗಪುರಕ್ಕೆ ಹೋದನು.

ಜೂಜು ಎಂಬುದು ನಿಂದಿತಕರ್ಮವಾದರೂ, ಹಿರೇರ ಆಜ್ಞೆ ಮೀರಬಾರದೆಂದು, ಅಸ್ತಮಾನಕ್ಕೆ ಧರ್ಮರಾಯ ಹಸ್ತಿನಾವತಿಗೆ ಹೋದ. ಸಮಸ್ತರ ಭೆಟ್ಟಿ

ಕೊಂಡ. ಮರುದಿನ ಬೆಳಗಾದಮ್ಯಾಲೆ, ಸಭಿಯೊಳಗೆ ಕುಳಿತರು. ಅಂಧನೃಪ ವಿದುರನಿಂದ ಯುಕ್ತನಾಗಿ ಕುಳಿತನು. ಸಭಿಗೆ ಕರ್ಣ, ಶಕುನಿ, ದುರ್ಯೋಧನಾದಿಗಳು ಬಂದರು. ಸುಬಲರಾಯನ ಮಗ ಶಕುನಿ ಪಾಶ ಆಡಲಿಕ್ಕೆ ಕರದನು. ಸಮುಸ್ತರಿಗೂ ಕಲ್ಯಾವೇಶವಿಹೋದು. ದ್ರೌಪದೀ, ಭೀಮು, ಅರ್ಜುನ, ನಕುಲ, ಸಹದೇವ, ಕುಂತೀ, ವಿದುರ ಇವರಷ್ಟು ಮುಂದಿಗೆ ಕಲ್ಯಾವೇಶವಿದ್ದಿಲ್ಲ. ಭೀಷ್ಮ, ದ್ರೋಣ ಮೊದಲಾದವ್ರಗೆ ಮೊದಲೇ ಕಲ್ಯಾವೇಶವಿಹೋದು. ಆದ್ದರಿಂದ ಜೂಜು ಬ್ಯಾಡವೆಂದು ನಿವಾರಿಸಲಿಲ್ಲ. ಧರ್ಮರಾಯ ತನ್ನ ಸಕಲ ಸಾಮ್ರಾಜ್ಯ, ಮಹದೈಶ್ವರ್ಯ ಪಣಕ್ಕೆ ಇಕ್ಕಿದ. ಪಾಶವಿದ್ಯಾದಿಂದ ಶಕುನಿ ಅಷ್ಟೂ ಗೆದ್ದನು: ಇನ್ನೇನು ಪಣಕ್ಕೆ ಇಡಬೇಕು, ನಕುಲನ್ನ ಪಣಕ್ಕೆ ಹಾಕಿದ, ಸೋತ. ತರುವಾಯ ದಲ್ಲಿ ಸಹದೇವ, ಅರ್ಜುನ, ಭೀಮಸೇನ ಇವರನ್ನ ಪಣಕ್ಕೆ ಹಾಕಿ ಸೋತ. ಇವರೆಲ್ಲ ಭೃತ್ಯರಾಗಬೇಕೆಂದು ಮಾತು ಮಾಡಿ, ಜೂಜು ಆರಂಭಿಸಿ ಸೋಲತಿಹ. ಕಡೀಲಿ ದ್ರೌಪದೀಯನ್ನ ಪಣಕ್ಕೆ ಹಾಕಿದ. ಆಕಿಯನ್ನೂ ಸೋತ. ಇನ್ನೇನು ಇಟ್ಟಾನು! ಧರ್ಮರಾಯ ತನ್ನನ್ನ ತಾನೇ ಪಣಕ್ಕೆ ಇಟ್ಟು ಜೂಜನಾಡಲಿಕ್ಕೆ ತನ್ನನ್ನೂ ಸೋತನು. ದುರ್ಯೋಧನ ತನ್ನ ಸಾರಥಿಗೆ ಆಜ್ಞಾಪಿಸಿದ. 'ಪಾಂಡವರ ರಾಜ್ಯ, ಐಶ್ವರ್ಯ ನಮಗೆ ಬಂತು. ಇವರು ಭೃತ್ಯರಾದರು, ದ್ರೌಪದೀ ನಮ್ಮ ದಾಸಿ ಆದಳು. ಈ ಸಭಿಗೆ ದ್ರೌಪದೀ ಎಳಕೊಂಡು ಬಾ' ಎಂದು ಹೇಳಲಿಕ್ಕೆ— ದ್ರೌಪದೀ ರಜಸ್ವಲಳಾಗಿ ಉಟ್ಟ ವಸ್ತ್ರ ಕಳೀದಲೇ ಇದ್ದಳು—ಸಾರಥಿ ಹೋಗಿ ದುರ್ಯೋಧನನ ಆಜ್ಞಾ ಹೇಳಲಿಕ್ಕೆ, 'ನಾನು ಸ್ತ್ರೀ, ಮ್ಯಾಲೆ ರಜಸ್ವಲಳು, ಗುರುಗಳ ರಾಜರ ಸಭಿಗೆ ಬರಬಾರದು' ಎಂದಳು. ಬಲಾತ್ಕಾರದಿಂದ ಎಳಕೊಂಡು ಹೋಗ-ಬೇಕಾದರೆ, ಈಕಿ, ಕೋಪದ ದೃಷ್ಟಿಯಿಂದ ನೋಡಿದರೆ ತಾನು ಸತ್ತಾನು, ಅದೂ ಅಲ್ಲದೆ ಭೀಮಸೇನ ತನ್ನ ಕೊಂದಾನೆಂದು, ದ್ರೌಪದೀ ಸಭಿಗೆ ಬಾಹೋಹಾಂಗೆ ಇಲ್ಲವೆಂದು ಸಾರಥಿ ವಾರ್ತೆ ತಂದನು. 'ಭೀಮಸೇನಗೆ ಅಂಜಿ ಇವ ಬಿಟ್ಟು-ಬಂದಾನೆ. ದುಶ್ಶಾಸನಾ, ನೀ ಹೋಗಿ ಎಳಕೊಂಡು ಬಾ, ದ್ರೌಪದೀ ನಮ್ಮ ದಾಸಿ ಇದ್ದಾಳೆ' ಎಂದು, 'ಬಿಟ್ಟು ಬರಬ್ಯಾಡ, ಕೊಂಡು ಬಾ' ಎಂದು ದುರ್ಯೋಧನ ಎನಲಿಕ್ಕೆ, ದುಶ್ಶಾಸನ ಪರಮ ಪಾಪಿ, ಹೋಗತೇ ಹೋಗಿ ಬಲಾತ್ಕಾರ ಮಾಡಿ, ದ್ರೌಪದೀ ತುರುಬು ಹಿಡದು ಎಳಕೊಂಡು ಬಂದನು.

ದ್ರೌಪದೀ ಉಟ್ಟ ಮಲಿನವಸ್ತ್ರ ಸಹವಾಗಿ ಸಭಿಯಲ್ಲಿ ನಿಂತಳು. 'ನಾ ಸ್ತ್ರೀ, ನನ್ನನ್ನು ಈ ಸಭಿಯೊಳಗೆ ಎಳತರಬಹುದೇ! ಈ ಕಪಟಾತ್ಮಕ ಜೂಜನಾಡೋದು ಧರ್ಮವಲ್ಲ. ದೊಡ್ಡವರು ಭೀಷ್ಮದ್ರೋಣಾದಿಗಳು ಕುಳಿತಿದ್ದೀರಿ. ನನ್ನ ಎಳ-ತಾಹೋದು ಅಧರ್ಮವೆಂಬುನದಿಲ್ಲ! ನೀವು ಜ್ಞಾನವೃದ್ಧರು, ಧರ್ಮ ನೀತಿ-ಗಳುಳ್ಳವರು, ಶ್ರೇಷ್ಠರು, ಧರ್ಮಶಿಕ್ಷಕರು, ನಿಮ್ಮಂಥಾವರು ಕುಳಿತು ಹೀಂಗೆ

ಅನ್ಯಾಯವಾಗಬಹುದೇ! ಬಾಲಕರೋಪಾದಿ ಅನ್ಯಾಯ ಮಾಡಥೀರಿ. ನಾ ಸ್ತ್ರೀ, ನನಗೆ ಸ್ವಾತಂತ್ರ್ಯವಿಲ್ಲ. ನನ್ನ ಹ್ಯಾಂಗೆ ಸೋತರಿ? ನನ್ನ ಗಂಡಂದಿರು ಸೋತಪಕ್ಷವೇ ಹೆಂಡತಿ ಸೋತಾಕೀನೆ. ಪ್ರತ್ಯೇಕ ನನಗೆ ಸೋಲೋಣವಿಲ್ಲ, ಗಂಡನಾದವ ಉದರ-ನಿಮಿತ್ತ ಒಬ್ಬ ಒಡಿಯನ ಸೇವಿ ಮಾಡಥಾನೆ. ಅತನ ಹೆಂಡತಿಯ ಮ್ಯಾಲೆ ಒಡಿಯ ಸ್ವಾಮಿತ್ವ ಮಾಡುವುದಿಲ್ಲ. ಹಾಂಗೆ ನೀವೂ ನನ್ನ ಮ್ಯಾಲೆ ಸ್ವಾಮಿತ್ವ ಮಾಡುವ ಕಾರಣವಿಲ್ಲ. ಗಂಡ ಕಷ್ಟಬಡಥಾನೆಂದು ಹೆಂಡತಿ ಆದಾಕಿ ತನ್ನ ಮನಸ್ಸಿನಲ್ಲಿ ನೊಂದಾಳಲ್ಲದೆ, ಪ್ರತ್ಯೇಕವಾಗಿ ಸ್ತ್ರೀಮ್ಯಾಲೆ ಸ್ವಾಮಿತ್ವ ಮಾಡೋ ಕಾರಣವಿಲ್ಲ.' ಈ ಪ್ರಕಾರ, ನ್ಯಾಯದ ಮಾತು ದ್ರೌಪದೀ ಹೇಳಿಕೊಳ್ಳಲಾಗಿ, ಭೀಷ್ಮದ್ರೋಣಾದಿಗಳು 'ಎಲೌ ದ್ರೌಪದೀ, ದಾರ ಮುಂದೆ ಪ್ರಲಾಪ ಮಾಡಥಿ? ನ್ಯಾಯಾನ್ಯಾಯ ನನುಗೇನೂ ಹೇಳಬ್ಯಾಡ. ನಿನ್ನ ಧರ್ಮರಾಯನ ಕೇಳಿಕೊ' ಅಂದರು.

ಭೀಷ್ಮ ದ್ರೋಣಾದಿಗಳು, ಅಧರ್ಮವೆಂದ ಪಕ್ಷವೇ ದುರ್ಯೋಧನಗೆ ಅಪ್ರೀತಿ ಆದೀತೆಂದು, ದ್ರೌಪದೀ ಮಾತು ಮನಸ್ಸಿಗೆ ತರಲಿಲ್ಲ. ಆ ಸಭಿಯೊಳಗೆ ವಿದುರ ಮಾತ್ರ 'ಬಹಳ ಅನ್ಯಾಯ ಆಗತದೆ. ದುರ್ಯೋಧನಾದಿಗಳು ಅನ್ಯಾಯದಲ್ಲಿ ರತರಾಗ್ಯಾರೆ. ಈ ಪಾಪಿಗಳಿಗೆ ದಂಡಿಸಲಿಕ್ಕೆ ನನಗೆ ಶಕ್ತಿ ಇಲ್ಲ. ನಾನು ದಾರಿಗೆ ಹೋಳಲಿ! ನನಗೆ ಶಕ್ತಿ ಇದ್ದ ಪಕ್ಷವೇ ಇಷ್ಟೂ ಪಾಪಿಗಳಿಗೆ ಶಿಕ್ಷಿಸುವೆ. ದಾರಿಗೆ ಹೇಳಲಿ!' ಎಂದು, ತೋಳುಗಳ ಮ್ಯಾಲಕ್ಕೆ ಎತ್ತಿ 'ದೇವತಿಗಳಿರ್ಯಾ ನೀವಾದರೂ ನೋಡರಿ, ಅನ್ಯಾಯ!' ಎಂದು ಒದರಹೊಕ್ಕನು. ವಿಕರ್ಣ ಹೀನನಾದರೂ, ಡಂಭಾರ್ಥವಾಗಿ ಲೋಕಸೊಳಗೆ ತಾನು ಧರ್ಮಿಷ್ಠನೆನಿಸಬೇಕಾಗಿ, 'ಎಲ್ಲೆ ವಿದುರ, ದುರ್ಯೋಧನಾದಿಗಳು ಮಾಡುವುದು ಅನ್ಯಾಯ ಆಹುದು' ಎಂದು ವಿಕರ್ಣ ಅನಲಿಕ್ಕೆ, ಕರ್ಣ ವಿಕರ್ಣಗೆ ಜಬರಿಸಿಕೊಂಡ. 'ಎಲೋ ನನ್ಮಮವನಾಗಿ ವೈರಿ ಪಕ್ಷಪಾತ ಮಾಡತಿದ್ದಿ' ಎಂದು ಜಬರಿಸಿಕೊಳ್ಳಲಿಕ್ಕೆ, ವಿಕರ್ಣ ಸುಮ್ಮಗಾದ. ದ್ರೌಪದೀ ಉಟ್ಟ ವಸ್ತ್ರ ಸಹವಾಗಿ ಸಭಿಯೊಳಗೆ ನಿಂತಾಳೆ. ಕ್ಲೇಶ ಬಡಥಾಳೆ. ಭೀಮಸೇನ ಕೋಪಾವಿಷ್ಟನಾಗಿ 'ಅಣ್ಣಾ, ಹೆಂಗಸನ್ನು ಪಣಕ್ಕೆ ಇಟ್ಟ. ನಿನ್ನ ಬುದ್ಧಿಗೆ ಏನು ಹೇಳಲಿ! ನಿನ್ನ ತೋಳುಗಳ ಸುಡಬೇಕು!' ಈ ಪ್ರಕಾರ ನಿಷ್ಠುರವಚನಗಳಾಡಲಿಕ್ಕೆ, 'ಹಿರೇರಿಗೆ ನಿಷ್ಠುರವಚನಗಳಾಡಬಾರದು' ಎಂದು ಅರ್ಜುನ ಅಂದನು. 'ಎಲೋ ನೀನೂ ಒಬ್ಬವ, ನನಗೆ ಬುದ್ಧಿ ಹೇಳುವವನೇ! ಹಿರೇರು ತಪ್ಪಿದರೆ, ವಚನದಲ್ಲಿ ಶಿಕ್ಷಿಸಬೇಕು, ಕಾರ್ಯ ಮಾಡಿ ತೋರಿಸಬಾರದು. ತನ್ನ ಸರೀಕರು ಅನ್ಯಾಯ ಮಾಡಿದರೆ, ವಿತ್ತಾಪಹಾರ ಮಾಡಬೇಕು. ತನಗಿಂತ ಅಧಮ ಅನ್ಯಾಯ ಮಾಡಿದರೆ, ದೇಹದಂಡನಿ ಮಾಡಬೇಕು.' ಈ ಪ್ರಕಾರ ಭೀಮಾರ್ಜುನರಿಗೆ ವಾದ ಹತ್ತಿತು. ಅದೇ ವ್ಯಾಳ್ಯಾದಲ್ಲಿ ಕರ್ಣ ದ್ರೌಪದೀಗೆ ಅಂಥಾನೆ. 'ಎಲೌ ದ್ರೌಪದೀ, ನಿನಗೆ ಐದು ಮಂದಿ ಗಂಡಂದರಿದ್ದೂ ಪತಿರಹಿತಳಾಗಿದ್ದೀ. ಇನ್ನು ನಿನಗೆ ಗಂಡಂದ-

ರಿಲ್ಲ, ದುರ್ಯೋಧನನ ಹೆಂಡತಿ ಆಗಿ ಶೀಘ್ರ ಮನಿಯೊಳಗೆ ನಡಿ' ಎನಲಿಕ್ಕೆ, ದುರ್ಯೋಧನ ಅಂಥಾನೆ, "ದ್ರೌಪದೀ, ನಿನ್ನ ದುಃಖಕ್ಕೆ ಕಾರಣ ಧರ್ಮರಾಯ. ನಾಲ್ವರು ತಮ್ಮಂದಿರ ಪೈಕಿ ದಾರಾದರೂ 'ಧರ್ಮರಾಯ ಅಣ್ಣನಲ್ಲ. ಧರ್ಮರಾಯನ ಮಾತು ನಾವು ಅಂಗೀಕಾರ ಮಾಡೋದಿಲ್ಲ', ಹೀಂಗಂದ ಪಕ್ಷವೇ ನಿನ್ನನ್ನ ಬಿಟ್ಟುಕೊಡಥೇನು. ಭೀಮಾರ್ಜುನರು ಬಲಿಷ್ಠರು. ಆದರೂ ಸರಿಯೇ, ಅಥವಾ ನಕುಲಸಹದೇವರು ಅಂಜಿಕೊಂಡು 'ಧರ್ಮರಾಯ ಅಣ್ಣನಲ್ಲ' ಎನಲಿ, ನಿನ್ನ ಬಿಟ್ಟು ಕಳುಹಥೀನಿ." ಈ ಮಾತು ಭೀಮಸೇನ ಕೇಳಿ, 'ನಾವು ಪಾಂಡವರು, ಏಕಮತ ಉಳ್ಳವರು, ನಾಲ್ವರೂ ಧರ್ಮರಾಯನ ಹೊರ್ತಿಲ್ಲ, ಅಣ್ಣನ ಆಜ್ಞಾಧಾರಕರು. ನಾವು ಕ್ಷತ್ರಿಯರು, ಬಲಿಷ್ಠರು. ನೀವು ಸರ್ವರೂ ಒಕ್ಕಟ್ಟಾಗಿ ನನ್ನ ಎದುರಿಗೆ ಬಂದರೂ ಸರಿಯೇ, ಅಷ್ಟೂ ಮಂದೀನ್ನ ನನ್ನ ಅಂಗಾಲ ಪೆಟ್ಟಿನಿಂದ ಒರಸಿಬಿಡಥೀನಿ.' ಹೀಂಗಂತ ಮಾತನಾಡಿ, ಭೀಮಸೇನ ಗದಿ ಎತ್ತಿಕೊಂಡು ನಿಂತು, ಸಿಂಹನಾದ ಮಾಡಲಿಕ್ಕೆ, ಕೌರವಸೇನಿ ಬಹಳ ಭಯವುಳ್ಳದ್ದಾಯಿತ್ತು. ಇಷ್ಟಾಗಲಿಕ್ಕೆ ಭೀಷ್ಮ ದ್ರೋಣ ಮೊದಲಾದವರು ಭಯಗ್ರಸ್ತರಾದರು. ಧರ್ಮರಾಯನು ಭೀಮಸೇನನ ಕೈಹಿಡದು ನಿಂದರಸಲಿಕ್ಕೆ, ದುರ್ಯೋಧನಾದಿಗಳು ಸ್ವಸ್ಥ ಅಂತಃಕರಣ ಉಳ್ಳವರಾದರು. ಭೀಮಸೇನ ಅಣ್ಣನ ಆಜ್ಞಾ ಮೀರಲಿಲ್ಲ. ಪಾಪಿಗಳ ಪಾಪ ಪೂರ್ಣವಾಗಬೇಕಾಗಿ, ಹಿರೇರ ಮಾತು ನಡೆಸಿದನು, ದುರ್ಯೋಧನಾದಿಗಳನ್ನು ಕೊಲ್ಲಲಿಲ್ಲ.

ಇಷ್ಟಾದರೂ ದುರ್ಯೋಧನನ ಸೊಕ್ಕು ಮುರಿಯಲಿಲ್ಲ. ಪುನಃ ಸೊಕ್ಕಿ 'ದ್ರೌಪದೀ, ತೊಡಿಯ ಮ್ಯಾಲೆ ಕೂಡ್ರು ಬಾ' ಎಂದು ನುಡಿದು, ತೊಡಿ ತೋರಸ್ತಿಹ. ಭೀಮಸೇನ 'ಎಲೋ ಪಾಪಿ! ಆದೇ ತೊಡಿ ಗದಿಯಿಂದ ಸೀಳುವೆ' ಅಂತ ಅಂದ. ಅದಕ್ಕೆ ದುರ್ಯೋಧನ 'ನೀವು ಐದೂ ಮಂದಿ ನಮ್ಮ ಭೃತ್ಯರಾದಿರಿ. ಇನ್ನೊಮ್ಮ ಜೂಜನಾಡೀರ್ಯಾ! ದ್ರೌಪದೀ ನಮ್ಮ ದಾಸಿ ಆದಳು. ಇನ್ನು ಪಣಕ್ಕೆ ಏನು ಇಡಥೀರಿ! ಇನ್ನೊಮ್ಮ ಜೂಜಾಡಿ, ನಿಮ್ಮ ಕೃಷ್ಣನ ಪಣಕ್ಕೆ ಇಡರಿ, ನಮ್ಮ ದಾಸನಾಗಲಿ!' ಹೀಂಗಂತ ಪಾಪಿ ದುರ್ಯೋಧನನೆನಲಿಕ್ಕೆ, ಭೀಮಸೇನ ಅಚ್ಚಿನ್ನ ಭಕ್ತ, ಸ್ವಾಮೀ ನಿಂದ ಹ್ಯಾಂಗೆ ತಾಳ್ಯಾನು! ಹಿರೇರ ನಿಂದ, ಗುರುನಿಂದ ಕೇಳಬಾರದಂದು, ತನ್ನ ತುಟಿಗಳ ನಡಗಸ್ತ 'ಎಲೋ ಪಾಪಿಗಳಿರ್ಯಾ! ಈಗಲೇ ನಿಮ್ಮನ್ನೆಲ್ಲ ಕೊಲ್ಲಬೇಕು. ಆದರೂ ಪಾಪಿಗಳ ಪಾಪ ಪೂರ್ಣವಾಗಬೇಕಾದ ಕಾರಣ ಕೊಲ್ಲುವುದಿಲ್ಲ. ಎಲೋ ದುರ್ಯೋಧನಾ! ನಿನ್ನ ತಲಿ ರಣರಂಗದಲಿ ನನ್ನ ಕಾಲೀಲೆ ಒರಿಸೇನು.' ಹೀಂಗೆನಲಿಕ್ಕೆ ಕರ್ಣ ದ್ರೌಪದೀಗೆ ಅಂತಾನೆ, 'ಇನ್ನು ಪಾಂಡವರ್ಗೆ ಉದ್ಧಾರವಿಲ್ಲ, ವಿನಾಶವಾದರಂತ ತಿಳಿ. ಇನ್ನು ನಮ್ಮ ಅರಸು ದುರ್ಯೋಧನನ ಮನಿಗೆ ನಡಿ' ಎಂದನು. ಈ ಮಾತು ಭೀಮಸೇನ ಕೇಳಿ,

ಸಿಂಹನಾದ ಮಾಡತ ಗದಿ ತಿರವುತ ನಿಂದಿರಲಿಕ್ಕೆ, ಭೀಷ್ಮದ್ರೋಣಾದಿಗಳು ಸಮಾಧಾನ ಮಾಡಿದರು. ಹಾಂಗೆ ಧರ್ಮರಾಯ ಸಮಾಧಾನ ಮಾಡಿದನು. 'ಅವರು ತಲದೂರಿಗಳು ಬಳ್ಳಿಟ್ಟು ಬೊಗಳತಿಹೋರು. ನಿಷ್ಠುರವಚನಗಳ ಆಡೋರು. ತಮ್ಮ ಮನಸ್ಸಿಗೆ ಬಂಧಾಂಗೆ ಅಂದುಕೋವಲ್ಲರ್ಯಾಕೆ, ನೀನು ಕೋಪ ಮಾಡಬ್ಯಾಡ. ಕ್ಷಮ ಎಂಬ ಖಡ್ಗ ಹಿಡಕೊಂಡಮ್ಯಾಲೆ, ವೈರಿಗಳು ಏನು ಮಾಡ್ಯಾರು! ಬರೇ ನೆಲದ ಮ್ಯಾಲೆ ಬೆಂಕಿ ಬಿದ್ದು ತನಗೆ ತಾನೇ ಆರಿಹೋದೀತಲ್ಲದೆ, ಆ ಬೆಂಕಿಯಿಂದ ಏನು ಆಗುವುದು!' ಈ ಪ್ರಕಾರ ಭೀಮಸೇನಗೆ ಪುನಃ ಸಮಾಧಾನ ಮಾಡಿದನು.

ಅಷ್ಟರೊಳಗೆ ಪಾಪಿ ದುರ್ಯೋಧನಾದಿಗಳು ಮಾತನಾಡಿದರು. 'ನಾವು ಅರಸೆರುಗಳು, ರಾಜಾಧಿರಾಜರು, ನೀವು ದಾಸದಾಸರು. ನಮ್ಮ ಸರಿ ವಸ್ತ್ರಾಭರಣಗಳ ಇಟ್ಟುಕೋಬಾರದು.' ಹೀಂಗಂತ ಪಾಪಿಗಳು ಮಾತನಾಡಲಿಕ್ಕೆ, ಪಾಂಡವರು ತಮ್ಮ ಮನಸ್ಸಿನಲ್ಲಿ ಅಂಥಾರೆ, 'ಈ ಪಾಪಿಗಳು ನಮ್ಮ ಚಲೋ ವಸ್ತ್ರಾಭರಣಗಳ ಕಂಡು ತಾಳಲಾರರು. ಇವರ ದುರ್ಬುದ್ಧಿ ಲೋಕಕ್ಕೆ ತೋರಿಸಬೇಕು' ಎಂದು, ಅದೇ ಕ್ಷಣದಲ್ಲಿ ವಸ್ತ್ರಾಭರಣಗಳ ಬಿಚ್ಚಿಟ್ಟು, ಚೀರವಸ್ತ್ರ ಉಟ್ಟುಕೊಂಡು ಸಭೆಯಲ್ಲಿ ಕುಳಿತರು. ಪಾಂಡವರು ಕ್ಷಮ ಎಂಬ ಖಡ್ಗ ಧರಿಸಿಕೊಂಡು ಕುಳಿತರು. ದ್ರೌಪದೀ ವ್ಯಸನಪಡಲಿಲ್ಲವೆಂದು, ಪಾಪಿ ದುರ್ಯೋಧನ ದುಶ್ಶಾಸನಗೆ ಪ್ರೇರಿಸಲು, ದ್ರೌಪದೀ ಸೀರಿ ಸೆಳಿಯಲಿಕ್ಕೆ, ಪಾಪಿ ದುಶ್ಶಾಸನ, ದ್ರೌಪದೀ ಸಮೀಪಕ್ಕೆ ಬಂದನು. ದ್ರೌಪದೀ ಬಹಳ ಭಯವುಳ್ಳವಳಾಗಿ, ಆವಾಗಲೇ ಹರಿಸ್ಮರಣ ಉಳ್ಳವಳಾದಳು. ಆಪತ್ಕಾಲಕ್ಕೆ ವಿಶೇಷವಾಗಿ ಕೃಷ್ಣನ ಸ್ಮರಣೆ ಮಾಡಲಿಕ್ಕೆ, ಸುವರ್ಣಮಯ ವಸ್ತ್ರ ಉಟ್ಟಳು. ಆ ದಿವ್ಯ ವಸ್ತ್ರ, ಪುನಃಪುನಃ, ಕುರುಕುಲಕ್ಕೆ ಧೂಳೀಕರನಾದಂಥ ದುಶ್ಶಾಸನ, ಸೆಳೀಥಾನೆ. ಇಂಥಾ ಕುಕರ್ಮ ಕಂಡು, ಭೀಮಸೇನ ಪ್ರತಿಜ್ಞೆ ಮಾಡಥಾನೆ. 'ರಣರಂಗದಲ್ಲಿ ನಿನ್ನ ಸಂಹಾರ ಮಾಡಿ, ಕರಳು ಬಗೆದು ರಕ್ತಪಾನ ಮಾಡೇನು!' ಎಂದು ಪ್ರತಿಜ್ಞೆ ಮಾಡಿದ. ಸ್ವಾಮಿ ಶ್ರೀಕೃಷ್ಣ ದ್ರೌಪದೀ ಲಜ್ಜಾ ಕಾಯ್ದ. ದುಶ್ಶಾಸನ ಸೀರಿ ಸೆಳೀಥಾನೆ. ಒಳಗೆ ಸ್ವಾಮಿ ದಿವ್ಯದಿವ್ಯ ವಸ್ತ್ರಗಳ ನಿರ್ಮಾಣ ಮಾಡಥಾನೆ! ಎಷ್ಟಂತ ಸೀರಿ ಸೆಳದಾನು! ಕೈಕಾಲು ಸೋತು ಬೆವತು ಬಿದ್ದ. ಪರ್ವತಸದೃಶ ಅಮೌಲಿಕವಸ್ತ್ರಗಳು ಬಿದ್ದವೆ. ದ್ರೌಪದೀನ್ನ ನಗ್ನ ಮಾಡಲಿಕ್ಕೆ ಶಕ್ತನಾಗಲಿಲ್ಲ. ತರುವಾಯ 'ದ್ರೌಪದೀ ನಮ್ಮ ದಾಸಿ. ಈಕೀನ ಏನುಕಾರಣ ಸೆಳಿಯಬೇಕು. ಮನಿಗೆ ಕೊಂಡು ನಡಿಯಿರಿ' ಎಂದನು. ದ್ರೌಪದೀ ಮಾತನಾಡಿದಳು. 'ಎಲೋ ಪಾಪಿಗಳಿರ್ಯಾ, ನಿಮಗೆ ವಿನಾಶಕಾಲ ಪ್ರಾಪ್ತವಾಗೇದೆ. ಕಾಲಾಂತರದಲ್ಲಿ ಸಾಯುವಿರಂತೆ. ನನ್ನ ಬಲಾತ್ಕಾರದಿಂದ ಕೊಂಡುಹೋದ ಪಕ್ಷವೇ ಭೀಮಸೇನ, ದುರ್ಯೋಧನಾದಿ ಸಮಸ್ತರನ್ನೂ ಪುಡಿಪುಡಿ ಮಾಡಿ ಕೊಂದು

ಬಿಷ್ಟಥಾನೆ. ಅರ್ಜುನ, ಕರ್ಣನ್ನ ಕೊಂದಾನು. ಸಹದೇವ ಶಕುನೀನ್ನ ಕೊಂದಾನು. ಉಲೂಕನ್ನ, ನಕುಲ ಕೊಂದಾನು. ನನ್ನ ಎಳದಾಡಬ್ಯಾಡಿರಿ. ಈಗಲೇ ವಿನಾಶವಾದೀರಿ.' ಹೀಂಗಂತ ದ್ರೌಪದೀ ಮಾತನಾಡಲಿಕ್ಕೆ, 'ಎಲೌ ದ್ರೌಪದೀ, ನನ್ನ ಅಭಿಪ್ರಾಯ ತಿಳಿದೇ ಮಾತನಾಡಿದಿ. ನೀನು ಆಡಿದ ಪ್ರಕಾರ ಕಾರ್ಯ ಮಾಡಿತೋರಿಸೇವು.' ಹೀಂಗಂತ ಭೀಮಸೇನ ಮಾತನಾಡತಿರಲಿಕ್ಕೆ, ಪಾಪಿ ದುರ್ಯೋಧನಾದಿಗಳು ದ್ರೌಪದೀನ್ನ ಎಳದಾಡತಿಹೋರು.

ಆ ವ್ಯಾಳ್ಯಾದಲ್ಲಿ ಭೀಮಸೇನ ಅರ್ಜುನಗೆ ಅಂತಾನೆ. 'ಹೇ ಅರ್ಜುನಾ, ಈ ದೇಹ ಎಂದಿಗಾದರೂ ಬೀಳೋದೆ. ದೇಹಕ್ಕೆ ದಿಕ್ಕಿದ್ದರೆ, ಕಡಿಗೆ ವೇವಟ ಆಗತದೆ. ದಿಕ್ಕಿಲ್ಲದೇ ಹೋಯಿತೇ, ಅಶುದ್ಧ ಆಗತದೆ. ಮೃಗಗಳು ತಿನ್ನದಿದ್ದರೆ, ಹುಳ ಆಗತದೆ. ದೇಹ ಸಂಪಾದಿಸಿರಲಿಕ್ಕೆ, ಅವನ ಕೀರ್ತಿ ಯಾತರಿಂದ ನಿಂದಿರತದೆಂದರೆ, ವಿದ್ಯದಿಂದ ಅಥವಾ ಮುಕ್ಕಳಿಂದ, ಬಾಹುಪರಾಕ್ರಮದಿಂದ ನಿಂದರತದೆ. ಸ್ತ್ರೀಯಳ ಕೊಂಡು, ಈ ಪಾಪಿಗಳು ಹೋದಮ್ಯಾಲೆ ನಮಗೆ ಮುಕ್ಕಳಿಲ್ಲದಾಂಗಾಗತದೆ. ನಮ್ಮ ಕೀರ್ತಿ ಲೋಕದಲ್ಲಿ ನಿಂದರೋದಿಲ್ಲ. ತನ್ನ ಸ್ತ್ರೀ ಅರ್ಧಾಂಗೀನ್ನ ಪರಪುರುಷರಿಂದ ಮುಟ್ಟಿಸಬಾರದು. ಸ್ತ್ರೀಗೆ ದೂಷಣೆ ಬಂದರೆ ಅರ್ಧ ದೇಹಕ್ಕೆ ಬರತದೆ. ತಾನು ಇಲ್ಲದ ವ್ಯಾಳ್ಯಾದಲ್ಲಿ ಹೆಂಡತಿ ಕೆಟ್ಟರೆ, ಆ ಹೆಂಡತೀನ್ನ ತ್ಯಾಗ ಮಾಡಬೇಕು. ನಮ್ಮ ಕಣ್ಣಮುಂದೇ ಎಳಕೊಂಡುಹೋದರೆ, ಇದರಿಂದ ಸ್ತ್ರೀಗೆ ದೋಷವಿಲ್ಲ. ನಾವು ರಕ್ಷಿಸದೇಹೋದರೆ ಸ್ತ್ರೀ ಏನು ಮಾಡ್ಯಾಳು! ಈ ಹೊತ್ತು ಈ ದುರ್ಯೋಧನಾದಿಗಳು ನೂರು ಮಂದಿಯನ್ನ ಕೊಲ್ಲಥೀನಿ' ಎಂದು ಲಾಳಮುಂಡಿಗಿ ಕೊಂಡು ನಿಂದರಲಿಕ್ಕೆ, ನಲಿಗಳು ಹಗಲೇ ಒದರಹೊಕ್ಕವು. ಅಗ್ನಿಹೋತ್ರದ ಮನಿಯೊಳಗೆ ರಕ್ತಮಾಂಸದ ಮಳಿ ಬಿತ್ತು.

ಈ ಪ್ರಕಾರ ದುರ್ನಿಮಿತ್ತಗಳಾಗುವುದು ಕೇಳಿ, ಧೃತರಾಷ್ಟ್ರರಾಯ ವಿದುರಗೆ ಕೇಳಿದ. 'ಈ ಪ್ರಕಾರ ಅವುಂಗಳ ಏನುಕಾರಣ ಆಗತದೆ?' ಎಂದಲ್ಲಿ 'ರಾಯಾ, ಈ ಕ್ಷಣದಲ್ಲೇ ನಿನ್ನ ಮುಕ್ಕಳು, ಭೀಮಸೇನನೆಂಬ ಅಗ್ನಿಯಿಂದ ಸುಟ್ಟುಹೋಗಥಾರೆ. ನಿನಗೆ ಚಿಕ್ಕತನ ಬಂದದೆ' ಎಂದು ವಿದುರ ಹೇಳಿದನು. 'ಮುಕ್ಕಳು ಏನು ಗದ್ದರು, ಏನು ಸೋತರು? ಎಂದು ಕೇಳಥಿ, ತಳುವರಿ ಅಪ್ಪಂದೆ. ಅನರ್ಥವಾಯಿತು! ಶೀಘ್ರ ಭೀಮಸೇನ ಎಂಬ ಅಗ್ನಿ ಶಮನ ಮಾಡು. ನಿನ್ನ ಮುಕ್ಕಳು ಕಪಟದಿಂದ ಪಾಂಡವರ ರಾಜ್ಯೈಶ್ವರ್ಯ ಅಪಲಾಪ ಮಾಡಿದರು. ಇದನ್ನೆಲ್ಲಾ ಪಾಂಡವರಿಗೆ ತಿರುಗಿಸಿ ಕೊಡಬಹುದು. ಕಾಮಾತುರದಿಂದ ಸ್ತ್ರೀಗೆ ಕೊಟ್ಟಿದ್ದು ತಿರುಗಿ ತಗೋಬಹುದು. ತಾ ಹುಚ್ಚನಾಗಿ ಒಬ್ಬರಿಗೆ ತಂದುಕೊಟ್ಟಿದ್ದರೆ, ಅದನ್ನ ಕಸಗೋಬಹುದು. ನಿನ್ನ ಮುಕ್ಕಳು ಕಪಟ ಜೂಜನಾಡಿ ಪಾಂಡವರ ಐಶ್ವರ್ಯ ಕೊಂಡಿದ್ದಾರೆ. ಇದನ್ನೆಲ್ಲ ಕಸಗೊಂಡು ಪಾಂಡವರಿಗೆ ಕೊಡಬಹುದು. ಆದರೂ

ಮೂ 21-372 ನೋಡಿರಿ
" ಉಕ್ತಾಃ ಶತಂ ಚ ವಿಪ್ರೌಯಾ ಧರ್ಮೇ ಭಾಗವತೇ ತತಃ "

ಪಾಂಡವರು ಧರ್ಮಿಷ್ಠರು. ನಿನ್ನ ಮಕ್ಕಳ ಹಿತ ಸಂಪಾದಿಸಬೇಕಾಗಿ, ಪಾಂಡವರ ರಾಜ್ಯೈಶ್ವರ್ಯ ತಿರುಗಿ ಕೊಡು. ನಿನ್ನ ಮಕ್ಕಳು ಸಾಯಧಾಂಗೆ ಶೀಘ್ರ ಉಪಾಯ ಚಿಂತಿಸು' ಈ ರೀತಿ ಹೇಳಿದನು.

ಅಂಧನೃಪ ಮಕ್ಕಳನ್ನು ಕರೆದು ಜಬರಿಸಿಕೊಂಡನು. 'ಎಲೋ ಅಣ್ಣ, ನೀನು ದ್ರೌಪದೀನ್ನ ಕರೆಸಿ, ನಿನ್ನ ಸಮೀಪದಲ್ಲಿ ಕೂಡ್ರಿಸಿಕೊಂಡು ಏನು ಬೇಡಿದ್ದು ವರವು ಕೊಡು. ಈಗ್ಗೇ ನಿನ್ನ ಮಕ್ಕಳಿಗೆ ಕ್ಷೇಮವಾಗತದೆ' ಹೀಂಗಂತ ವಿದುರ ಹೇಳಲಿಕ್ಕೆ, ಗತಲೋಚನ ತನ್ನ ಮಕ್ಕಳಿಗೆ ಸಿಟ್ಟುಮಾಡಿ ಹೇಳಿದ. 'ಎಲೋ ಪಾಪಿಗಳಿರ್ಯಾ, ಧರ್ಮರಾಯ ತನ್ನ ಸಾಮರ್ಥಿಯಿಂದ ಕಣ್ಣು ತೆರದು ನಿಮ್ಮ-ನಮ್ಮನೆಲ್ಲ ನೋಡಲಿಕ್ಕೆ, ವ್ಯರ್ಥ ಸುಟ್ಟು ಸತ್ತೇವು. ಧರ್ಮರಾಯ ಇನ್ನೂ ಕೋಪಕ್ಕೆ ಬಂದಿಲ್ಲ. ಭೀಮಸೇನ ತನ್ನ ಬಾಹುಬಲದಿಂದ ನಿಮ್ಮನ್ನೆಲ್ಲ ಪುಡಿಪುಡಿ ಮಾಡಿಬಿಟ್ಟಾನು. ದ್ರೌಪದೀನ್ನ ಏನುಕಾರಣ ಎಳೆಯತಿದ್ದೀರಿ? ವ್ಯರ್ಥ ಸಾಯ-ಬ್ಯಾಡಿರಿ!' ಎಂದು ಬಹಳವಾಗಿ ಜಬರಿಸಿಕೊಂಡು, ತನ್ನ ಸಮೀಪಕ್ಕೆ ದ್ರೌಪದೀನ್ನ ಕರೆಸಿಕೊಂಡ. 'ಅಮ್ಮಾ ತಾಯೀ, ಏನು ಬೇಡತಿದ್ದಿ ಬೇಡು' ಎನಲಿಕ್ಕೆ, ದ್ರೌಪದೀ ಭಗವದ್ಭಕ್ತಳು, ತನಗೋಸ್ಕರ ವರ ಬೇಡಿಕೊಂಬಾಕಿ ಅಲ್ಲ. ಯುಧಿಷ್ಠಿರ ತನ್ನ ಅನುಜರಿಂದ ಯುಕ್ತನಾಗಿ ಕ್ಷೇಮದಲ್ಲಿರಲಿ. ಹೆಂಡತಿ ಆದಂಥಾಕಿ ಗಂಡನ ಕೈಯ ವರವು ಸಂಪಾದಿಸಬೇಕು. ಕ್ಷತ್ರಿಯ ಹೆಂಗಸು ಮಾವನ ಕೈಯಿಂದ ಮೂರು ವರವು ತಗೋಬೇಕು ಬ್ರಾಹ್ಮಣಸ್ತ್ರೀ ಮಾವನ ಕೈಯ ಮೂರು ವರವು ಬೇಡಿಕೋಬೇಕು. ದ್ರೌಪದೀ ಕ್ಷತ್ರಿಯಳಾದ ಕಾರಣ ಧೃತರಾಷ್ಟ್ರನಿಂದ ಪ್ರತ್ಯೇಕ ವರವು ಕೊಳ್ಳದೆ ಲೌಕಿಕ ವರವು ಬೇಡಿಕೊಂಡಳು. ಧರ್ಮರಾಯನಿಗೆ ಕ್ಷೇಮ, ಭ್ರಾತ್ರರಿಗೆ ಕುಶಲ, ರಾಜ್ಯೈಶ್ವರ್ಯಕ್ಕೆ ಸಂತೋಷ ಹೀಂಗೆ ಮೂರು ವರವು ಬೇಡಿಕೊಂಡಳು.

ದ್ರೌಪದೀ ಮಾವನ ಕೈಯ ವರವಿಸಕೊಂಡು 'ಇನ್ನು ಇಂದ್ರಪ್ರಸ್ಥಕ್ಕೆ ನಡೀರಿ' ಎಂದು ತನ್ನ ಪತಿಗಳಿಗೆ ಹೇಳಲಿಕ್ಕೆ, ಪಾಂಡವರು, ಭೀಷ್ಮದ್ರೋಣಾದಿಗಳಿಗೆ ನಮಸ್ಕಾರ ಮಾಡಿ ತೆರಳಲಿಕ್ಕೆ, ದುರ್ಯೋಧನ ತನ್ನ ತಮ್ಮಂದರ ಸಹವಾಗಿ ನಗಹೊಕ್ಕನು. ಹೆಂಡತಿಯಿಂದ ಉಧೃತರಾಗಿ ಇಂದ್ರಪ್ರಸ್ಥಕ್ಕೆ ಹೋಗಥಾರೆಂತ, ದುಶ್ಶಾಸನ ಗತಲೋಚನನಲ್ಲಿಗೆ ಬಂದು, 'ಪಾಂಡವರ ಸಂಪತ್ತು ನಮ್ಮ ಕೈಕೆಳಗೆ ಬಂದಿತ್ತು, ವ್ಯರ್ಥ ಬಿಟ್ಟುಕೊಟ್ಟೆ. ನಿನ್ನ ಬುದ್ಧಿಗೇನೆಂಬುವೆ! ಭೀಮಸೇನ ನಮ್ಮ ಮ್ಯಾಲೆ ಬಹಳ ಕೋಪವುಳ್ಳವನಾಗ್ಯಾನೆ. ಭೀಮಸೇನನಿಂದ ನಾವು ಬದುಕೋಹಾಂಗೆ ಇಲ್ಲ. ಬದುಕಬೇಕೆಂಬೋ ಇಚ್ಛಿ ಇದ್ದರೆ, ಇನ್ನೊಮ್ಮೆ ಪಾಂಡವರನ್ನ ಕರೆಸಿ, ಅಣುಜೂಜು ಆರಂಭಿಸಿ, ದಾರು ಸೋತಾರು, ಅವರು, ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮಾಡಬೇಕು.'

ಹೀಂಗಂತ ದುಶ್ಶಾಸನ ಹೇಳಲಿಕ್ಕೆ, ಮಕ್ಕಳ ವ್ಯಾಲಿನ ಸ್ನೇಹದಿಂದ, ಕಲ್ಯಾವೇತ ಉಳ್ಳವನಾಗಿ, ಮೋಹದಿಂದ, ಹೋಗುವಂಥ ಪಾಂಡವರನ್ನ ಪುನಃ ಜೂಜನ್ನಾಡ-ಬೇಕೆಂದು ಕರೆಕಳುಹಿದನು. ಭೀಮಸೇನ, ದ್ರೌಪದೀ ಮೊದಲಾದವರು ಇನ್ನು ಹೋಗಬಾರದೆಂದು ನಿವಾರಿಸಿದರೂ ಕೇಳದೆ, ಧರ್ಮರಾಯ ಪುನಃ ಜೂಜನ್ನಾಡಲಿಕ್ಕೆ ಹಿರೇರ ಆಜ್ಞೆ ಮೀರಬಾರದೆಂದು ಬಂದನು.

ಮೊದಲೇ ಪಣ ಮಾಡಿದರು. ಸೋತಪಕ್ಷನೇ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮಾಡಬೇಕು. ಅಜ್ಞಾತವಾಸದಲ್ಲಿ ದಾರು ದೃಷ್ಟಿಗೆ ಬಿದ್ದರೂ, ಮರಳಿ ಇದೇ ಪ್ರಕಾರ ಹೋಗಬೇಕೆಂದು ಪಣ ಮಾಡಿ, ಜೂಜು ಆರಂಭಿಸಿ ಆಡಲಿಕ್ಕೆ, ಪಾಂಡವರು ಸೋತರು. ತಮ್ಮ ವಚನ ಮೀರಗೊಡ-ಬಾರದೆಂದು ದ್ರೌಪದೀ ಸಹವಾಗಿ ವನಕ್ಕೆ ತೆರಳಿದರು. ಪಾಂಡವರು ವನಕ್ಕೆ ಹೋಗೋದು ಕಂಡು ದುರ್ಯೋಧನ, ತಮ್ಮಂದರು ಗೋಪಾಲಕರಪ್ಪಂದೆ ಡೋ ಹಾಕತಿಹೋರು. ಪಾಪಿಗಳು ಬಹಳೇ ಸಂತೋಷವುಳ್ಳವರಾಗಿ ಸಭಿಯುಲ್ಲಿ ನೃತ್ಯ ಮಾಡತಿಹೋರು. ಆ ವ್ಯಾಳ್ಯಾದಲ್ಲಿ ದುಶ್ಶಾಸನ ದ್ರೌಪದೀಗೆ ಅಂತಾನೆ. 'ಎಲೌ ದ್ರೌಪದೀ! ಕಲ್ಯಾಣೀ! ನೀನು ರಾಜಪುತ್ರಿ ಇದ್ದಿ. ಮನೋಹರ ಸ್ತ್ರೀ, ಪರಮ ಚಲುವಿ, ಬಹಳೇ ಸುಂದರಳು, ವನಕ್ಕೆ ಹೋಗಿ ಬಹಳ ಕಷ್ಟಬಟ್ಟೀಯ, ಕಷ್ಟಕ್ಕೆ ತಕ್ಕಾಕಿ ಅಲ್ಲ. ಆದಕಾರಣ ನಮ್ಮರಸು ದುರ್ಯೋಧನನ್ನ ಒಲಿಸು. ನಿನ್ನ ಗಂಡಂದರು ಷಂಡತಿಲವುಳ್ಳವರು. ಹೊಟ್ಟ ಹ್ಯಾಂಗೆ ಹಾರತದೆ, ಹಾಂಗೆ ರಾಜ್ಯಭ್ರಷ್ಟರಾಗಿ, ಈ ಸಾಮ್ರಾಜ್ಯದಿಂದ ಹಾರಿಹೋಗಥಾರೆ. ಇನ್ನು ಉದ್ಧಾರವಿಲ್ಲ. ಅಂಧಂತವುಸ್ಸಿನ ದುಃಖಸದೃಶವಾಯಿತು.' ಈ ಪ್ರಕಾರ ದುಶ್ಶಾಸನ ದ್ರೌಪದೀಗೆ ಅಂತಿಹ. ಭೀಮ-ಸೇನನ್ನ ಅಣಕಸ್ತಿಹ. ದುರ್ಯೋಧನಾದಿ ನೂರು ಮಂದಿ ನಗಹೊಕ್ಕರು. ಭೀಮ-ಸೇನ ಓರಿದೃಷ್ಟಿಯಿಂದ ನೋಡಿ 'ಎಲೋ ಪಾಪಿಗಳಿರ್ಯಾ, ನಿಮ್ಮ ನೂರು ಮಂದಿಯನ್ನ ನನ್ನ ಅಂಗಾಲಪೆಟ್ಟಿನಿಂದ ಒರಸಿಬಿಟ್ಟೀನು!' ಹೀಂಗೆ ಪ್ರತಿಜ್ಞೆ ಮಾಡಲಿಕ್ಕೆ, ಈತನ ಪ್ರತಿಜ್ಞೆ ಸತ್ಯವಾದೀತೆಂದು, ದುರ್ಯೋಧನಾದಿಗಳು ಭೀಷ್ಮಾದಿಗಳಿಗೆ ಮೊರಿಹೊಕ್ಕರು. 'ಭೀಮಸೇನನಿಂದ ರಕ್ಷಿಸಬೇಕು' ಎಂದಲ್ಲಿ ದ್ರೋಣ ಮಾತನಾಡಿದ. 'ನಿನ್ನ ನಿಮಿತ್ತ ನನ್ನ ಮಗ ಅಶ್ವತ್ಥಾಮ ಸಹವಾಗಿ, ನನ್ನ ಮೈದುನ ಕೃಪಾಚಾರ್ಯ ಸಹ, ನಾವು ಬ್ರಾಹ್ಮಣರಾದರೂ ಕ್ಷತ್ರಿಯಕರ್ಮ ಮಾಡೇವು.' ಹೀಂಗಂತ ಅಭಯ ಕೊಟ್ಟನು. ಪಾಂಡವರು ಮಹಾಶೂರರಾದರೂ ಸರಿಯೆ, ತಮ್ಮ ಪ್ರತಿಜ್ಞೆ ಹುಸಿ ಮಾಡಬಾರದೆಂದು ವನಕ್ಕೆ ತೆರಳಿದರು. ಭೀಮ-ಸೇನ, ಪ್ರಾಯದ ಸಿಂಹನೋಪಾದಿ ನಡಿಗಿ ನಡಿಯಲಿಕ್ಕೆ, ಪಾಪಿ ದುರ್ಯೋಧ-ನಾದಿಗಳು, ನಡಿಗಿ ಅಣಕಸ್ತಿಹೋರು. ಭೀಮಸೇನ ಓರಿದೃಷ್ಟಿಲೆ ನೋಡಿ, 'ಎಲೋ ದುರ್ಯೋಧನ, ದ್ರೌಪದೀಗೆ ತೊಡಿ ತೋರಿಸಿದ್ದಿಯಲ್ಲ ಅದೇ ತೊಡಿ

ಖಂಡ್ರಿಸೇನು' ಎಂದು ಪ್ರತಿಜ್ಞೆ ಮಾಡಿ, 'ಈಗ ನನಗೆ ಅಣಕಿಸಿದ್ದಕ್ಕೆ ಎರಡು ತೊಡೀನೂ ಕಡದುಹಾಕಥೀನಿ' ಎಂದು ಭೀಮ ಹೇಳುತ್ತಿರಲು, ಪಾಂಡವರು ಮಾತನಾಡತಾ ಪಟ್ಟಣದಿಂದ ಹೊರಗೆ ಹೋದರು. ಕುಂತೀದೇವಿ, ತನ್ನ ಗಂಡ ಸತ್ತ, ಮಕ್ಕಳು ಅರಣ್ಯಕ್ಕೆ ಹೋಗಥಾರೆ, ಬದುಕ್ಯೇನು ಫಲ ಎಂದು ಅನೇಕ ಪ್ರಕಾರ ಅಳತಿಹೋಳು. ವಿದುರ ಕುಂತೀನ್ನ ಅನೇಕ ಪ್ರಕಾರ ಸಮಾಧಾನ ಮಾಡಿ, ತನ್ನ ಸಮೀಪದಲ್ಲಿ ನಿಂದರಿಸಿಕೊಂಡ.

ಧರ್ಮರಾಯ ಬಹಳ ದೊಡ್ಡ ತಪಸ್ವಿ. ತಪಸ್ಸಾಮರ್ಥ್ಯವೆಲ್ಲ ಮುಚ್ಚಿ-ಕೊಂಡು, ಮಾರಿ ತಗ್ಗಿಸಿಕೊಂಡು ಹೋದನು. ಭೀಮಸೇನ ಎರಡು ತೋಳುಗಳ ಮೇಲಕ್ಕೆ ಎತ್ತಿಕೊಂಡು ಹೋದನು. ಇದರ ಸೂಚನಿ ಏನೆಂದರೆ, ಸಮಸ್ತ ವೈರಿಗಳ ಕೊಂದೇನೆಂದು ಹೋದನು. ದ್ರೌಪದೀ ಕೂದಲು ಬಿಚ್ಚಿಕೊಂಡು ಇಹೋಳು. ದುಶ್ಶಾಸನ ತುರುಬು ಹಿಡದು ಎಳತಂದಿದ್ದ. ಪುನಃ ಕೂದಲು ಕಟ್ಟಿ-ಕೊಂಡಿದ್ದಿಲ್ಲ. ಕೂದಲು ಚಾವುರ ಜೆಲ್ಲಿಕೊಂಡು ಹೋಗೋದು ಕಂಡು ಸಮಸ್ತರೂ ಬಹಳ ಖಿನ್ನಮುಖವುಳ್ಳವರಾಗಿಹೋರು. ಇದರ ಸೂಚನಿ ಏನೆಂದರೆ, ವಿದುರ ಧೃತರಾಷ್ಟ್ರರಾಯಗೆ ಹೇಳಥಾನೆ. 'ರಾಯ, ಇದರ ಅಭಿಪ್ರಾಯ ಹೇಳಥೀನಿ ಕೇಳು. ರಣರಂಗದಲ್ಲಿ ನಿನ್ನ ಮಕ್ಕಳು ಭೀಮಸೇನನ ಕೈಯ ಸತ್ತುಹೋದಾರು. ನಿನ್ನ ಸೊಸೇರು, ಗಂಡಂದಿರು ಸತ್ತಮ್ಯಾಲೆ ಕೂದಲು ಬಿಟ್ಟುಕೊಂಡು, ಗಂಡಂದರ ಅಪ್ಪಿಕೊಂಡು ಅಳಬೇಕೆಂಬೋ ಅಭಿಪ್ರಾಯದಿಂದ ಹೋದಳು. ಅರ್ಜುನ ಹ್ಯಾಂಗೆ ಹೋದನೆಂದರೆ, ಧೂಳಿ ತ್ತೂರತಲೇ ಹೋದ. ಅದರ ಸೂಚನಿ ಏನೆಂದರೆ, ಧೂಳಿನಿಂದ ರೇಣುಗಳು ಹ್ಯಾಂಗೆ ಎಣಿಕೇ ಮಾಡಲಿಕ್ಕೆ ವಶವಲ್ಲ, ಹಾಂಗೆ ತನ್ನ ಬಾಣಗಳು, ಪರಮಾಸ್ತ್ರಗಳು ಹಿಂಡುಹಿಂಡುಗಟ್ಟಿ ಪ್ರಯೋಗ ಮಾಡಿ, ವೈರಿಗಳ ಕೊಂದೇನೆಂದು ಹೋಗಥಾನೆ. ನಕುಲ ಸಹದೇವರು ಕೆಳಗೆ ಮಾರಿ ತಗ್ಗಿಸಿಕೊಂಡು ಹೋಗಥಾರೆ. ಅದರ ಅಭಿಪ್ರಾಯವೇನೆಂದರೆ, ತಾವು ವೈರಿಗಳ ಕೊಂದೇ ಮಾರಿ ಎತ್ಯಾಲಕ್ಕೆ ಮಾಡುವರು, ಎಂದು ಹೋದರು. ಧೌಮ್ಯಾಚಾರ್ಯ ಪುರೋಹಿತ ಪ್ರೇತಸಂಸ್ಕಾರಸೂತ್ರ ಜಪಿಸತ ಹೋದ. ಅದರ ಸೂಚನಿ ಏನೆಂದರೆ, ನಿನ್ನ ಮಕ್ಕಳು ರಣರಂಗದಲ್ಲಿ ಭೀಮಸೇನನ ಕೈಯ ಸತ್ತಾರು, ಕರ್ಮ ಮಾಡಿಸೇನೆಂದು ಪ್ರೇತಸಂಸ್ಕಾರಸೂತ್ರ ಅಂದುಕೋತಾ ಹೋದ. ದುರ್ಯೋಧನನ ಕರ್ಮ, ಧರ್ಮರಾಯನ ಕೈಯ ಮಾಡಿಸೇನೆಂದು ಪುರೋಹಿತನ ಅಭಿಪ್ರಾಯ.' ಹೀಂಗೆ ವಿದುರನು, ಪಾಂಡವರು ಹ್ಯಾಂಗೆ ಹೋದರು ಅದರ ಅಭಿಪ್ರಾಯ ಹೇಳಿದ.

ಪಾಂಡವರ ಸಂಗಡ ನಾಲ್ಕು ರಥ ಹೊರಟವು. ಶೂದ್ರರು, ಗೋಪಾಲಕರು, ಸ್ವಯಂಪಾಕ ಮಾಡುವವರು, ಕೆಲವು ಅವಶ್ಯಕರು, ಭೃತ್ಯರು ಪಾಂಡವರ ಸಂಗಡ ಹೊರಟರು. ಈ ಪ್ರಕಾರ ಜಾನ್ಹವೀ ತೀರ, ವಟವೃಕ್ಷದ ಸಮೀಪಕ್ಕೆ ಬಂದಿಳಿದರು.

ಪಾಂಡವರು ಧರ್ಮಿಷ್ಠರು, ವನಕ್ಕೆ ಹೋಗವಲ್ಲರ್ಯಾಕೆ, ಅವರ ಸಂಗಡ ನಾವೂ ವನದಲ್ಲಿದ್ದೀವೆಂದು ಸಮಸ್ತ ಪ್ರಾಣಿಗಳೂ, ಸಕಲ ಪ್ರಜೆಗಳೂ ಪಾಂಡವರ ಬೆನ್ನು-ಗೊಂಡು ಬರಲಿಕ್ಕೆ, 'ಅಪ್ಪಗಳಿರ್ಯಾ, ನಮ್ಮ ಧೃತರಾಷ್ಟ್ರರಾಯ ಇದ್ದಾನೆ. ರಾಯನ ಚಿತ್ತಕ್ಷೋಭ ಮಾಡಬ್ಯಾಡಿರಿ. ಪಟ್ಟಣದಲ್ಲಿ ನಮ್ಮ ರಾಯನ ಸಮೀಪ-ದಲ್ಲಿರಹೋಗರಿ' ಎಂದು, ಧರ್ಮರಾಯ ತಿರುಗಿ ಅಟ್ಟಿದನು. ಪಾಂಡವರು ತಾವು ಮಾಡಿದ ಸುಕರ್ಮ ಶ್ರೀಕೃಷ್ಣಗೆ ಅರ್ಪಿಸಿದರು. ದಾವಾಗಲೂ ಹರಿಸ್ಮರಣೆವುಳ್ಳವರು. ಏನು ಆಪತ್ತು ಬಂದರೂ ಸ್ವಾಮಿಗೆ ವಿರೋಧರಾಗಲಿಲ್ಲ, ಭಕ್ತಿ ಕೆಡಕಮಾಡಿದ್ದಿಲ್ಲ. ಸ್ವಾಮಿ ತಾ ಎಂಥಾತ, ಭಕ್ತವತ್ಸಲ. ತನ್ನಲ್ಲಿ ದಾರು ಭಕ್ತಿ ಮಾಡ್ಯಾರು, ಅವರ ಅನಾದಿಕಾಲದ ಸಂಸಾರದ ಭಯ ಪರಿಹರಿಸಥಾನೆ. ಈ ಪಾಂಡವರು ಸ್ವಾಮಿಗೆ ಕೇವಲ ಭಕ್ತರು. ಕಾರಣ ಇವರ ಅನಾದಿಕಾಲದ ಸಂಸಾರದ ಭಯ ಪರಿಹಾರ-ವಾಗತದೆ. ಭಕ್ತಿಯುಳ್ಳವರು, ಸಂಸಾರಭಯ ಪರಿಹಾರಮಾಡಿಕೊಂಡು ಹೋದಾ-ರೆಂಬೋದು ಏನು ಹೇಳಬೇಕು! ಆದಕಾರಣ ವನವಾಸ ಪ್ರಾಪ್ತವಾದರೂ ಸರಿಯೆ, ಆದಷ್ಟೂ ವನಭೋಗ ಕೊಂಡಾರೆ. ಪಾಂಡವರು ಸ್ವಾಮಿ ಪಾದಾಂಬುಜದಲ್ಲಿ ಭಕ್ತಿಯುಳ್ಳವರು. ಇಂಥಾ ಕ್ಷುದ್ರ ಆಪತ್ತು ಪರಿಹರಿಸಿಕೊಂಡಾರೆ. ಶ್ರೀಕೃಷ್ಣನಲ್ಲಿ ಭಕ್ತಿಯುಳ್ಳವರಾಗಿ ಸಕಲ ಸಾಮ್ರಾಜ್ಯ ಅನುಭವಿಸಥಾರೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಪಾಂಡವ ವನಪ್ರವೇಶಃ' ಎಂಬ ಇಪ್ಪತ್ತೊಂದನೇ ಅಧ್ಯಾಯ ಸಂಪೂರ್ಣವು.

ಶ್ರೀ ಮಧ್ವೇಶಾರ್ಪಣಮಸ್ತು

ಅಧ್ಯಾಯ ೨೨

ಶ್ರೀಕೃಷ್ಣಚರಿತೇ ಅರಣೀಪ್ರಾಪ್ತಿಃ

ಈ ಇಪ್ಪತ್ತೆರಡನೇ ಅಧ್ಯಾಯದಲ್ಲಿ ಅರಣ್ಯಪರ್ವ ಭಾರತ ಕಥ, ಶ್ರೀಮದಾಚಾರ್ಯರು ತಾತ್ಪರ್ಯಪೂರ್ವಕ ಸಂಗ್ರಹಿಸಿ ಹೇಳಥಾರೆ. ಪಾಂಡವರು ಜೂಜನಾಡಿ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಈ ಪ್ರಕಾರ ಸಂಖ್ಯೆಮಾಡಿ ವನವಾಸಕ್ಕೆ ಹೊರಟರು. ಪಟ್ಟಣಸ್ಥರು, ಧರ್ಮರಾಯ ಬಹಳ ಧರ್ಮಿಷ್ಠನೆಂದು, ಈತನ ಸಂಗಡ ವನವಾಸದಲ್ಲಿದ್ದೇವೆಂದು ಬರಲಾಗಿ, ಧರ್ಮರಾಯ ಅವರಿಗೆ ಬಹಳೆ ಸಮಾಧಾನ ಮಾಡಿ, ತನ್ನ ಹಿರಿಯಪ್ಪ ಧೃತರಾಷ್ಟ್ರನ ಸಮೀಪದಲ್ಲಿರಹೋಗಿರೆಂದು ಬಹು ಪ್ರಕಾರದಿಂದ ಹೇಳಿ ನಿಂದರಿಸಿದನು. ಮುಂದಮುಂದಕ್ಕೆ ಹೋಗಥಾರೆ. ರಾತ್ರೀಲಿ ಕೆರ್ಮೀರ ದೇಶದಲ್ಲಿ ವನಾಂತರದಲ್ಲಿ ಇಳೆದರು. ಆ ವನ ಎಂಥಾದ್ದೆಂದರೆ, ಅಗಾಧ ವನ, ದಾರೂ ಅಲ್ಲಿಗೆ ಹೋಗತಿದ್ದಿಲ್ಲ. ಆ ವನದಲ್ಲಿ ಮನುಷ್ಯರನ್ನ ತಿಂಬೋ ರಾಕ್ಷಸ, ಬಕಾಸುರನ್ನ ತಮ್ಮ ಕೆರ್ಮೀರ ಪಾಂಡವರನ್ನ ಕಾಣಲಿಕ್ಕೆ, ಇವರು ನಮ್ಮ ವೈರಿಗಳು, ಬಕಾಸುರನ ಕೊಂದ ಭೀಮಸೇನ ಬಂದಾನೆಂದು, ಭುಜಗಳ ಚಪ್ಪರಿಸಿಕೊಳತ, ಮಹಾರುದ್ರನ ವರಬಲದಿಂದ ಬಹಳ ಸಂತೋಷ ಉಳ್ಳವನಾಗಿ ತಕ್ಷಣ ನಿಂತು, ಪಾಂಡವರ ವಿನಾಶ ಮಾಡಬೇಕೆಂದು ಪರ್ವತ, ವೃಕ್ಷಗಳ ಕಿತ್ತಿಕೊಂಡು, ಭೀಮಸೇನನ ಸಮೀಪಕ್ಕೆ ಬಂದು, ಪರ್ವತದ ಮಳಿಗರೆದನು. ಇಷ್ಟು ಮಾಡಲಿಕ್ಕೆ ಭೀಮಸೇನ ಪರ್ವತ ವೃಕ್ಷಗಳ ಪ್ರತಿ ಈಡ್ಯಾಡಿದನು. ಈ ಶಬ್ದದಿಂದ ಎರಡನೇ ಶಬ್ದ ಕೇಳಿಸದು. ಪಾಪೀ ಸಂಗಡ ಯುದ್ಧ ಮಾಡಬಾರದೆಂದು, ಕೆರ್ಮೀರನ ತುರುಬು ಹಿಡಕೊಂಡು ಕೊಂದು ಬಿಷ್ಟನು. ರಣಯಜ್ಞದಲ್ಲಿ ಕೆರ್ಮೀರನೆಂಬೋ ಪಶುಮಾಡಿ ಹೋಮಿಸಿದ. ಎಲ್ಲಿಂದರೆ, ಯುದ್ಧ ಎಂಬೋ ಅಗ್ನಿಯಲ್ಲಿ ಹೋಮಿಸಿಬಿಟ್ಟ. ವೃಕ್ಷಗಳನ್ನೆಲ್ಲ ಪರಿಸ್ತರಣ ಮಾಡಿದ. ಇನ್ನು ದೇವತಿ ಬೇಕಲ್ಲ, ಶ್ರೀಕೃಷ್ಣಗೆ ಯಜ್ಞ ಅರ್ಪಿಸಿದನು. ರಾಕ್ಷಸನ ಕೊಲ್ಲಲಿಕ್ಕೆ, ವನವೆಲ್ಲ ನಿರಾತಂಕವಾಯಿತು. ಈ ವಾರ್ತೆ ದೇಶದೇಶದವರೆಲ್ಲ ಕೇಳಿ, ಭೀಮಾರ್ಜುನರು ಬಹಳ ಬಲಿಷ್ಠರು ಎಂದು ತಿಳಿದರು. ಮೊದಲಿಗೆ ಜನರು ತೀರ್ಥಯಾತ್ರಿಗೆ ಹೋಗಬೇಕಾದರೆ, ರಾಕ್ಷಸನ ಭಯ, ಹುಲಿ ಕರಡಿಗಳ ಭಯದಿಂದ ಆಂಜಕಿದ್ದರು. ಕೆರ್ಮೀರನ ಕೊಲ್ಲಲಿಕ್ಕೆ ಸಮಸ್ತರೂ ಪಾಂಡವರ ಸಂಗಡ ತೀರ್ಥಯಾತ್ರಿಗೆ ನಡೆದರು.

ಇಂದ್ರಪ್ರಸ್ಥದಲ್ಲಿ ಧರ್ಮರಾಯ ಸಾಮ್ರಾಜ್ಯ ಆಳುವಾಗ ಸನ್ಯಾಸಿಗಳು ಋಷಿಗಳು ಇದ್ದರು. ಅವರೆಲ್ಲ ಧರ್ಮರಾಯ ತೀರ್ಥಯಾತ್ರಿಗೆ ಹೋಗಥಾನೆಂದು,

ತಾವೂ ಯಾತ್ರಿ ಮಾಡಬೇಕಾಗಿ, ಹತ್ತುಸಾವಿರ ಸನ್ಯಾಸಿಗಳು, ಎಂಭತ್ತೆಂಟು-ಸಾವಿರ ಋಷಿಗಳು, ಅವರ ಸಂಗಡ ಒಬ್ಬೊಬ್ಬರಿಗ ದಾಸೆದಾಸೇರು ಮೂವತ್ತು ಮೂವತ್ತು ಮುಂದಿ, ಈ ಪ್ರಕಾರ ಧರ್ಮರಾಯನ ಸವೀಪಕ್ಕೆ ಬಂದರು. ಇಷ್ಟೂ ಮುಂದಿಗೆ ಅನ್ನ ಬೇಕಲ್ಲ, 'ನಾ ದೊಡ್ಡ ಅರಸು, ವನಕ್ಕೆ ಹೊರಟೀನೆಂದು ಋಷಿಗಳು, ಸನ್ಯಾಸಿಗಳು ನನ್ನ ಸಹವಾಸದಿಂದ ತೀರ್ಥಯಾತ್ರಿ ಮಾಡೇವೆಂದು ಬಂದಾರೆ. ಅನ್ನ ಹ್ಯಾಂಗೆ ಮಾಡಲಿ!' ಎಂದು ಧರ್ಮರಾಯ ಚಿಂತಿಸಹೊಕ್ಕ. ದೇವರಿಗೆ ಶರಣು ಹೋಗಬೇಕೆಂದು ಸೂರ್ಯಾಂತರ್ಗತ ನಾರಾಯಣನ ಆರಾಧನಿ ಮಾಡಲಿಕ್ಕೆ, ಧರ್ಮರಾಯನ ತಪಸ್ಸಿಗೆ ತುಷ್ಟನಾಗಿ, ಸ್ವಾಮಿ ಅಕ್ಷಯಪಾತ್ರಿ ತಂದುಕೊಟ್ಟನು. ದ್ರೌಪದೀ ಉಂಬೋಪರಿಯಂತ, ಷಡ್ರಸೋಪೇತವಾದಂಥಾದ್ದು, ಚತುರ್ವಿಧಾನ್ನ ಪಾತ್ರೀ ಒಳಗಿಂದ ಹೊರಟುಬರಬೇಕು. ಬರೇ ಅನ್ನಪಾನವೇ ಅಲ್ಲ. ಹಾಂಗೆ ದ್ರವ್ಯ, ದಕ್ಷಿಣಿಗಳು, ರತ್ನಗಳು, ಗೋದಾನ ಮಾಡಲಿಕ್ಕೆ ದಿವ್ಯ ಆಕಳುಗಳು, ವಸ್ತ್ರಾಭರಣ ಸಕಲವೂ ಏನು ಬೇಡಿದ್ದು ಬಯಸಿದ್ದು ಹೊರಟುಬರಬೇಕು. ಋಷಿಗಳು ಸನ್ಯಾಸಿಗಳು ಬಂಗಾರದ ಪಾತ್ರೀಯೊಳಗೆ, ಇಂದ್ರಪ್ರಸ್ಥದಲ್ಲಿ ಉಂಡವರು. ಅವರಿಗೆ ಬಂಗಾರದ ಪಾತ್ರಿಗಳು ಮೊದಲಾದವು ಹೊರಟುಬಾಹೋವು. ಇದನ್ನೆಲ್ಲ ದೇಶದೇಶದ ಬ್ರಾಹ್ಮಣರು ಕೇಳಿ, ಧರ್ಮರಾಯನ ಸಂಗಡ ತೀರ್ಥಯಾತ್ರಿ ಆದೀತೆಂದು ಕುಟುಂಬಸಹವಾಗಿ ಬರತಿಹೋರು. ಈ ಪ್ರಕಾರ ಕಿರ್ಮೀರವನದಲ್ಲಿ, ಸಕಲ ಸಾಮ್ರಾಜ್ಯ ತುಚ್ಛೀಕರಿಸಿ, ಬ್ರಾಹ್ಮಣಸಮುದಾಯದಲ್ಲಿ ಪರಮಾತ್ಮನ ತತ್ತ್ವವಿಚಾರ ಮಾಡತ, ದೇವತಿಗಳು ಹ್ಯಾಂಗೆ ಸುಖದಲ್ಲಿರಥಾರೆ, ಹಾಂಗೆ ಪಾಂಡವರು ವನದಲ್ಲಿ ಸುಖ ಅನುಭವಿಸತಿಹೋರು. ಧರ್ಮರಾಯ ದಿನ ಲಕ್ಷ ಗೋದಾನ, ಸುವರ್ಣ ಶೃಂಗ, ರೌಪ್ಯಖುರ, ಪಟ್ಟೀ ವಸ್ತ್ರ ಸಹವಾಗಿ ಅಲಂಕರಿಸಿ ದಾನ ಕೊಡುವ. ನೂರು ಭಾರ ಸುವರ್ಣ ಬ್ರಾಹ್ಮಣರಿಗೋಸ್ಕರ ಕೊಡತಿಹೋನು. ತನ್ನ ತಮ್ಮಂದರ ಸಹವಾಗಿ,, ಬ್ರಾಹ್ಮಣರಿಂದ ಸಹಿತನಾಗಿ ದೇವೇಂದ್ರನ ಸದೃಶ ಸುಖ ಭೋಗಸ್ತ ಇಹೋನು.

ಹಸ್ತಿನಾವತಿಯಲ್ಲಿ ಗತಲೋಚನರಾಯ ವಿದುರನ್ನ ಕೇಳಥಾನೆ. 'ನಮ್ಮ ಪಾಂಡವರು ವನಕ್ಕೆ ಹೋದರು. ದುರ್ಯೋಧನನ ಮನೋಬಯಕಿ ಪೂರ್ಣ ವಾಯಿತು. ಮುಂದೇನು ಕರ್ತವ್ಯ ಮಾಡಬೇಕು' ಎಂದು ಕೇಳಲಿಕ್ಕೆ, ವಿದುರ ಮಾತನಾಡಿದ. 'ರಾಯ, ಪಾಂಡವರನ್ನ ಕರಸಿ ರಾಜ್ಯ ಕೊಡು' ಎನಲಿಕ್ಕೆ, ಧೃತರಾಷ್ಟ್ರಗೆ ಬಹಳ ಸಿಟ್ಟು ಬಂತು. 'ಎಲೋ ವಿದುರ, ನೀನು ಪಾಂಡವರ ಪಕ್ಷಪಾತಿ. ನನ್ನ ಮಕ್ಕಳ ಹಿತ ಚಿಂತಿಸೋದಿಲ್ಲ. ಕಡಿಗೆ ನನ್ನ ಮಕ್ಕಳ ಕೂಡ ವೈರತನ ಮಾಡತಿದ್ದಿ. ನೀನು ಬಹುಮಾನಕ್ಕೆ ಯೋಗ್ಯನಲ್ಲ. ನನ್ನ ತಮ್ಮನೆಂದು ಕರೆಸಿಕೊಂಡದ್ದಕ್ಕೆ, ಅನ್ನ ತಿಂದುಕೊಂಡು ಬಿದ್ದಿರಬೇಕಿತ್ತು. ಬಿದ್ದಿರು, ಇಲ್ಲವೇ

ನಿನ್ನ ಮೂರಿ ಕಪ್ಪು ಮಾಡಿಕೊಂಡು ಹೋಗು' ಎಂದು ನಿಷ್ಠುರವಚನಗಳಾಡಲಿಕ್ಕೆ, ಕಿರ್ಮೀರವನಕ್ಕೆ ಪಾಂಡವರ ಸಮೀಪ, ವಿದುರ ಬಂದನು. 'ವಿದುರ ನೀತಿಜ್ಞ, ವನದಲ್ಲಿ ಪಾಂಡವರಿಗೆ ಛತ್ರಾ ಎತ್ತಿಸಿ ಸಾಮ್ರಾಜ್ಯ ಲಿಳಿಸ್ಯಾನು. ಇಂಥಾ ಬುದ್ಧಿವಂತನ ಪಾಂಡವರ ಸಮೀಪದಲ್ಲಿಡಬಾರದು' ಎಂದು ವಿದುರ ಎತ್ತ ಹೋದನೆಂದು ಕೇಳಲು, ಪಟ್ಟಣ ಬಿಟ್ಟುಹೋದದ್ದು ಕೇಳಿ, ಧೃತರಾಷ್ಟ್ರ ಮೂರ್ಛಾ ಉಳ್ಳವನಾದನು. ಒಂದಿಷ್ಟು ಎಚ್ಚರಿಕೆ ಮಾಡಿಕೊಂಡು, ಸಂಜಯಗೆ ಆಜ್ಞಾಪಿಸಿದ. 'ವಿದುರನ್ನ ಕೂಡಿಕೊಂಡು ಬಂದ ಪಕ್ಷವೇ ನಾ ಬದುಕಥೀನಿ, ಇಲ್ಲವೆ ದೇಹವಿಯೋಗ ಮಾಡಥೀನಿ.' ಹೀಂಗಂತ ಸಂಜಯಗೆ ಹೇಳಿ ಕಳುಹಲು, ಸಂಜಯ ರಥ ಓಡಿಸತಲೇ ಹೋಗಿ, ವಿದುರಗೆ ಧೃತರಾಷ್ಟ್ರನಾಜ್ಞ ಹೇಳಲಿಕ್ಕೆ, ವಿದುರ ಅಣ್ಣನಲ್ಲಿ ಸ್ನೇಹ ಉಳ್ಳಾತ, ಅಣ್ಣನ ಆಜ್ಞ ಮೀರಬಾರದೆಂದು ಪುನಃ ಹಸ್ತಿನಾವತಿಗೆ ಬಂದನು. ವಿದುರ ಬಂದನೆಂದು ಸ್ನೇಹದಿಂದ ತನ್ನ ತೊಡಿಯ ಮ್ಯಾಲೆ ಕೂಡ್ರಿಸಿಕೊಂಡು, ತಲಿ ಆಘ್ರಾಣಿಸಿ, 'ಹೀಂಗೆ ನನ್ನ ಬಿಟ್ಟುಹೋಗಥಾರೆ!' ಎಂದು ಸಮಾಧಾನವಚನಗಳಾಡಿ, ತಮ್ಮನ ಸಮಾಧಾನ ಮಾಡಿದನು. ದುರ್ಯೋಧನಾದಿಗಳು, ವಿದುರ ಹೋದನೆಂದು ಸಂತೋಷಬಟ್ಟಿದ್ದರು, ಪುನಃ ಬಂದನೆಂದು ಖೇದಬಟ್ಟರು.

ಪಾಂಡವರು ಐದು ಮಂದಿಯೊಳಗೆ ಒಬ್ಬನನ್ನಾದರೂ ಕಪಟತನದಿಂದ ಕೊಲ್ಲಬೇಕೆಂದು ಕರ್ಣ, ಶಕುನಿ, ದುರ್ಯೋಧನ, ದುಶ್ಶಾಸನ ಇವರು ಯೋಚನಿ ಮಾಡಲಿಕ್ಕೆ, ಬ್ರಹ್ಮರುದ್ರಾದಿಗಳಿಗೆ ಈಶನಾದಂಥ ಸರ್ವಾಂತರಾತ್ಮಕ ವೇದವ್ಯಾಸದೇವರು, ಧೃತರಾಷ್ಟ್ರನ ಸಮೀಪಕ್ಕೆ ಬಂದು 'ಹೇ ರಾಯಾ, ನಿನ್ನ ಮಕ್ಕಳು ಈಗಲೇ ವಿನಾಶ ಐದ್ಯಾರು. ಕಪಟತನದಿಂದ ಪಾಂಡವರನ್ನ ಕೊಲ್ಲಬೇಕೆಂದು ಹೋಗಥಾರೆ. ಕರ್ಣನಿಂದ ಸಹಿತನಾಗಿ ನಿನ್ನ ಮಗ ಸತ್ತುಹೋದಾನು, ಶೀಘ್ರ ನಿವಾರಿಸು' ಎನ್ನಲು, ಧೃತರಾಷ್ಟ್ರ ಅಂಥಾನೆ. 'ಸ್ವಾಮಿ, ಮಗನ ಅಗ್ಗಳಿಕೆ ಇದ್ದ ಪಕ್ಷವೇ, ದುರ್ಯೋಧನಾದಿಗಳಿಗೆ ನೀನು ಹೇಳಬಾರದೆ?' ಎಂದನು. 'ಇಂಥಾ ಪಾಪಿ ಕೂಡ ನಾನು ಮಾತನಾಡುವ ಹಾಂಗೆ ಇಲ್ಲ. ಮೈತ್ರೇಯಋಷಿ ಥೋಡೇ ದಿವಸದಲ್ಲಿ ಈ ಹಸ್ತಿನಾವತಿಗೆ ಬಂದಾನು. ಪಾಂಡವರನ್ನು ಕರೆಸಿ ಸಾಮ್ರಾಜ್ಯ ಕೊಡೆಂದು ಹೇಳ್ಯಾನು. ನಿನ್ನ ಮಕ್ಕಳು ಕೇಳದಿದ್ದರೆ ಹದಿಮೂರು ವರುಷಕ್ಕೆ ವಿನಾಶವಾಗಲೆಂದು ಶಾಪ ಕೊಟ್ಟಾನು' ಎಂತ ಹೇಳಿದನು. ವೇದವ್ಯಾಸ ಅನಂತ ಶಕ್ತಿಯುಳ್ಳಾತ, ಪಾಪಿಗಳ ಆಗಲೇ ಸಂಹರಿಸಲಾಪ. ಆಂದೇವೆ, ಕಪಟತನದಿಂದ ಕೊಂದಪಕ್ಷವೇ, ಭೀಮಸೇನನಿಂದ ವಿನಾಶವಾಗುವುದು ಸತ್ಯಸಂಕಲ್ಪ ಉಂಟು. ಇಷ್ಟೇನು ಕಾರಣ ಮಾಡಬೇಕೆಂದರೆ ಪಾಪಿಗಳ ಪಾಪ ಪೂರ್ಣವಾಗಬೇಕು ಹದಿನೆಂಟು ಅಕ್ಷೋಹಿಣಿ ಮಹರ್ಬಲ ಕುರುಕ್ಷೇತ್ರದಲ್ಲಿ ಮಡಿಯಬೇಕು. ಮುಂದೆ ಭೂಭಾರ ಇಳುಹಬೇಕು. ಆದಕಾರಣ ವೇದವ್ಯಾಸ ನಿವಾರಿಸಿದನು. ಈ ಪ್ರಕಾರ

ಪರಬ್ರಹ್ಮ ಲೋಕೋಪಕಾರ ಮಾಡಥಾನೆ. ಲೋಕಕ್ಕೆ ಅಣಕವಾಡಿ ತೋರಿಸಿದ್ದಾನೆ. ಈ ಪ್ರಕಾರ ವೇದವ್ಯಾಸ ಅಂಧನೃಪಗೆ ಹೇಳಿದನು.

ತರುವಾಯ ಕೆಲವು ದಿವಸಗಳು ಹೋದಮ್ಯಾಲೆ, ಮೈತ್ರೇಯಋಷಿ ಹಸ್ತಿನಾವತಿಗೆ ಬಂದನು. ಅಂಧನೃಪನ ಕೈಯ ಪೂಜಿ ಕೊಂಡು ಸಿಂಹಾಸನದಲ್ಲಿ ಕುಳಿಥಾನೆ. ಅಲ್ಲಿಗೆ ಕರ್ಣ, ಶಕುನಿ, ದುರ್ಯೋಧನ, ದುಶ್ಶಾಸನ ಮೊದಲಾದವರು ಬಂದರು. ಮೈತ್ರೇಯಋಷಿ ಅಂತಾನೆ, 'ಪಾಂಡವರು ಮಹಾ ಬಲಿಷ್ಠರು. ಹೇ ಧೃತರಾಷ್ಟ್ರ, ಸಿಂಹಗಳನ್ನ ಹೊರಗೆ ಹಾಕಿ, ನರಿಗಳ ಸಂಪಾದಿಸಿದ್ದಿ. ನಿನ್ನ ರಾಜ್ಯಕ್ಕೆ ಹ್ಯಾಂಗೆ ಕ್ಷೇಮವಾದೀತು! ಭೀಮಸೇನ ವನಕ್ಕೆ ಹೋಗತಲೇ ಬಕಾಸುರನ ತಮ್ಮ ಕಿರ್ಮೀರನ ಕೊಂದ. ಧರ್ಮರಾಯ ಅಕ್ಷಯಪಾತ್ರಿ ಸಂಪಾದಿಸ್ಯಾನೆ. ಹತ್ತುಸಾವಿರ ಸನ್ಯಾಸಿಗಳು, ಎಂಭತ್ತೆಂಟು ಸಾವಿರ ಋಷಿಗಳು, ಒಬ್ಬೊಬ್ಬರಿಗೆ ಮೂವತ್ತು-ಮೂವತ್ತು ಮಂದಿ ದಾಸ-ದಾಸೇರು, ಇಷ್ಟೂ ಮಂದೀನ್ನ ಅನ್ನಪಾನದಿಂದ ತುಷ್ಟಿ ಒಡಿಸಿದ್ದಾನೆ. ನಿತ್ಯ ಲಕ್ಷ ಗೋದಾನಗಳ ಕೊಡಥಾನೆ. ನೂರು ಭಾರ ಸುವರ್ಣದಾನ ಕೊಡಥಾನೆ. ಈ ರಾಜ್ಯದ ಮಹದೈಶ್ವರ್ಯಕ್ಕಿಂತ ಅನೇಕ ವೈಭವ ಭೋಗಸ್ತಾನೆ.' ಹೀಂಗಂತ ಮೈತ್ರೇಯಋಷಿ ಅನಲಿಕ್ಕೆ, ದುರ್ಯೋಧನ ಅಂಥಾನೆ, 'ನಾವು ರಾಜಾಧಿರಾಜರು! ನಮ್ಮ ಮುಂದೆ ಆ ವನಚಾರಿ ಪಾಂಡವರನ್ನ ಹೊಗಳಥಾನೆ' ಎಂದು ತೊಡಿ ಚಪ್ಪರಿಸಿಕೊಂಡು ನಕ್ಕಂಥಾವನಾಗಿ ದುರ್ಯೋಧನ ಅಂಥಾನೆ ಮತ್ತೆ ನಗಥಾನೆ. ಹೀಂಗೆ ದುರ್ಯೋಧನ ನಗಲಿಕ್ಕೆ, ಮೈತ್ರೇಯಋಷಿ ಕೋಪವುಳ್ಳವನಾಗಿ, 'ಎಲೋ ಪಾಪಿ ದುರ್ಯೋಧನ! ನನ್ನ ಮುಂದೆ ನೀನು ತೊಡಿ ಚಪ್ಪರಿಸಿ ನಕ್ಕಿ. ಭೀಮಸೇನ ಬಂದು ನಿನ್ನ ತೊಡಿ ಸೀಳಲಿ!' ಹೀಂಗೆ ಮೈತ್ರೇಯಋಷಿ ಕೋಪಾವಿಷ್ಟನಾಗಿ ಹೋಗಲಿಕ್ಕೆ, ಇದೇನು ಅನರ್ಥವಾಯಿತೆಂದು 'ಹೇ ದ್ವಿಜಶ್ರೇಷ್ಠಾ, ನಮ್ಮ ಅಪರಾಧ ಕ್ಷಮಿಸಬೇಕು' ಎಂದು ಅಂಧನೃಪ ಸಾಷ್ಟಾಂಗ ನಮಸ್ಕಾರ ಹಾಕಿ ಬೇಡಿಕೊಂಡನು. ಭೀಮಸೇನ ಕಿರ್ಮೀರನ ಕೊಂದ ವಾರ್ತಿ ವಿದುರ ಹೇಳಿದ್ದ. ಅಂಥವನ ಕೊಂದ, ಇನ್ನು ತನ್ನ ಮಕ್ಕಳಿಗೆ ಕ್ಷೇಮವಿಲ್ಲೆಂದು ಅಂಧನೃಪ ತಿಳಿದನು.

ಪಾಂಡವರು ವನವಾಸಕ್ಕೆ ಹೋದರೆಂದು ಕರ್ಣೋಪಕರ್ಣ ಬ್ರಾಹ್ಮಣರು, ಕೃಷ್ಣ ಬಲರಾಮರಿಗೆ ಹೇಳಿದರು. ಪಾಂಡವರಿಗೆ ವನವಾಸವಾಯಿತು ಎಂತ ವರ್ತಮಾನ ಕೇಳಿ, ಶ್ರೀಕೃಷ್ಣ, ಸತ್ಯಭಾಮಾ ಕೂಡಿಕೊಂಡು ಮಹಾವೇಗದಿಂದ ಪಾಂಡವರ ಸಮೀಪಕ್ಕೆ ಬಂದನು. ಹಾಂಗೆ ಪಾಂಚಾಲದೇಶದ ದ್ರುಪದರಾಯ, ಧೃಷ್ಟದ್ಯುಮ್ನ ಮೊದಲಾದವರು ಬಂದರು. ಭಗವಂತ ಪಾಂಡವರಿಗೆ ಅಂದನು. 'ನಾಸಿದ್ದ ಪಕ್ಷವೇ, ಇಷ್ಟೊಂದು ಆಗತಿದ್ದಿಲ್ಲ' ಎಂದು ಮಾತನಾಡಿ ಹಸ್ತಿನಾವತಿಗೆ ನಡಿಯಲಕ್ಕ 'ಸ್ವಾಮೀ ನಾವು ಪಣ ಮಾಡಿ ಬಂದೀವಿ. ನಮ್ಮ ಪ್ರತಿಜ್ಞಾ ಭ್ರಷ್ಟವಾಗಬಾರದು. ನೀನು ಸುದರ್ಶನಚಕ್ರ ತೆಗೆದುಕೊಂಡು ಈಗಲೇ ಹೋಗಬ್ಯಾಡ.

ನಮ್ಮ ವನವಾಸ ಅಜ್ಞಾತವಾಸ ಮುಗಿದಮ್ಯಾಲೆ, ನಿನ್ನನುಗ್ರಹದಿಂದ ದುರ್ಯೋಧನಾದಿಗಳನ್ನು ನಾವು ಸಂಹರಿಸೇವು.' ಈ ಪ್ರಕಾರ ಬೇಡಿಕೊಳ್ಳತಿಹೋರು. ಸ್ವಾಮಿ ಹರಹರದು ಹೋಗತಿಹ. ಬಹಳ ಕಷ್ಟದಿಂದ ಶ್ರೀಕೃಷ್ಣನ್ನ ನಿಂದರಿಸಿದರು. ಇಷ್ಟಾದಮ್ಯಾಲೆ ದ್ರೌಪದೀ ಕೂದಲು ಬಿಟ್ಟುಕೊಂಡು ಅಳತಲೇ ಸ್ವಾಮಿಗೆ ನಮಸ್ಕಾರ ಮಾಡಿದಳು. 'ಸ್ವಾಮಿ ಅಚಿಂತ್ಯಮಹಿಮಾ, ಚತುರ್ವಿಧನಾಶರಹಿತಾ, ಸದ್ಗುಣಸಮುದ್ರಾ, ಅಖಿಲದೋಷದೂರ, ಬ್ರಹ್ಮಾದಿ ಜಗತ್ತಿಗೆ ಒಡಿಯಾ, ಸಕಲ ಇಷ್ಟಪ್ರದಾ, ಸಮಸ್ತ ಲಿಂಗಭಂಗವುಳ್ಳವರಿಗೆ ಮುಖ್ಯಾಶ್ರಯ ಸ್ವಾಮೀ, ನನ್ನ ಅಭಿಮಾನ ಕಾಯ್ದಿ. ಪಾಪಿ ದುಶ್ಶಾಸನ ನನ್ನ ತುರುಬು ಹಿಡದು ಎಳೆದ. ವಸ್ತ್ರಾಪಹಾರ ಮಾಡಿದ. ನೀನು ಸರ್ವೇಶ್ವರ ಸಕಲವನ್ನೂ ಬಲ್ಲಿ. ನನ್ನ ದುಃಖ ಹೇಳಕೋಥೀನಿ. ಸ್ವಾಮೀ, ನೀನು ರಮಾಬ್ರಹ್ಮಾದಿಗಳ ಒಡಿಯ' ಎಂದು ತನ್ನ ದುಃಖವನ್ನ ಹೇಳಿಕೊಂಡಳು. ಇಂಥಾ ಅಖಿಲೇಶ್ವರನ ಕೂಡ ಹೆಂಗಸು, ಇಷ್ಟೊಂದು ಏನು-ಕಾರಣ ಹೇಳಬೇಕೆಂದರೆ, ಕೃಷ್ಣನ ಅಚ್ಚಿನ್ನ ಭಕ್ತಳು, ಗರುಡಶೇಷರುದ್ರಾದಿಗಳಿಗೆ ಈಶನಾದ ಸ್ವಾಮೀ ಪ್ರೀತಿಗೆ ವಿಶೇಷ ಪಾತ್ರಳು. ಆದಕಾರಣ ತನ್ನ ದುಃಖವನ್ನೆಲ್ಲ ಹೇಳಿಕೋಥಾಳೆ. 'ಸ್ವಾಮೀ, ದುರ್ಯೋಧನಾದಿಗಳು ಕಪಟತನದಿಂದ ಜೂಜಾಡಿ ನಮ್ಮನ್ನ ರಾಜ್ಯೈಶ್ವರ್ಯಭ್ರಷ್ಟರನ್ನ ಮಾಡಿದರು. ಧರ್ಮರಾಯನು ನನ್ನ ಪಣಕ್ಕೆ ಇಕ್ಕಿಹ. ನಾನು ರಜಸ್ವಲಳಾಗಿದ್ದೆ. ಪಾಪಿ ದುಶ್ಶಾಸನ ನನ್ನ ತುರುಬು ಹಿಡದು ಸಭಿಗೆ ಎಳತಂದ. ದುರ್ಯೋಧನ ತನ್ನ ತೊಡೀ ತೋರಸ್ತಿಹ. ಕರ್ಣ ಇನ್ನು ಪಾಂಡವರಿಗೆ ಉದ್ಧಾರವಿಲ್ಲ, ದುರ್ಯೋಧನನ್ನ ಒರಿಸೆಂದನು. ಪಾಪಿ ದುರಾತ್ಮರು ಈ ಪ್ರಕಾರ ನೀಚವಚನಗಳಾಡಿದರು. ವಸ್ತ್ರಾಪಹಾರ ಮಾಡಿದರು, ಸ್ವಾಮಿ ಗೋವಿಂದಾ ಎಂದು ನಿನ್ನ ಸ್ಮರಿಸಲಿಕ್ಕೆ, ವಸ್ತ್ರದಮ್ಯಾಲೆ ವಸ್ತ್ರ ಅಕ್ಷಯ ಕೊಟ್ಟ, ನನ್ನ ಅಭಿಮಾನ ಕಾಯ್ದಿ' ಎಂದು ಕಥ ಹೇಳಿಕೊಂಡು, ಕೂದಲುಗಳ ಜಾಮಕ ಚೆಲ್ಲಿಕೊಂಡು, ದೊಡ್ಡ ಧ್ವನಿಯಿಂದ ರೋಧನಗೈದಳು. 'ಎಲೌ ಅಮ್ಮಾ ದ್ರೌಪದೀ, ನಾನು ನಿನಗೆ ತೋರಿಸೇನಂತೆ. ತಾಯಿ ಅಳಬ್ಯಾಡ. ರಣರಂಗದಲ್ಲಿ ದುರ್ಯೋಧನಾದಿಗಳು ಸತ್ತು, ಅವರ ಹೆಂಡರು ತಮ್ಮ ಗಂಡಂದರ ಅಪ್ಪಿಕೊಂಡು, ತಲೀ ಕೂದಲು ಬಿಟ್ಟುಕೊಂಡು ಅಳೋದು, ಮುಂದೆ ನಿನಗೆ ದೃಷ್ಟಿಗೋಚರ ಮಾಡಿಸೇನು' ಎಂದು ಶ್ರೀಕೃಷ್ಣ ದ್ರೌಪದೀಗೆ ಹೇಳಿದ.

ದ್ರೌಪದೀಗೆ ಈ ಪ್ರಕಾರ ಸಮಾಧಾನ ಮಾಡಿ ಕೃಷ್ಣ, ಧರ್ಮರಾಯನ ಕೂಡ ಮಾತನಾಡಥಾನೆ. 'ರಾಯಾ, ನಾನು ದ್ವಾರಾವತೀಲಿ ಇದ್ದ ಪಕ್ಷವೇ ನಿಮಗೆ ವನವಾಸವಾಗದೇ ಇಹೋದು. ಜೂಜು ಆರಂಭಿಸಲಿಕ್ಕೆ, ಅತಿ ವೇಗದಿಂದ ಬಂದು, ಪಾಪಿಗಳಿಗೆ ಅಜ್ಞಾನ ಕವಿಸಿ, ನಿಮಗೆ ಸಾಮ್ರಾಜ್ಯ ಪ್ರಾಪ್ತಿ ಮಾಡಿಕೊಡತಿದ್ದೆ. ನಾನು ದ್ವಾರಾವತಿಯಲ್ಲಿ ಇದ್ದಿಲ್ಲ. ಸಾಲ್ವನ ಕೊಲ್ಲಲಕ್ಕೆ ಹೋಗಿದ್ದೆ.

ಅವನ್ನ ಕೊಂದು ದ್ವಾರಾವತಿಗೆ ಬರಲಿಕ್ಕೆ ನಿಮಗೆ ವನವಾಸವಾಯಿತೆಂದು ಕೇಳಿ, ನಿಂದರದೇ ಇಲ್ಲಿಗೆ ಬಂದೆ' ಎಂದು ಹೇಳಿದನು. ಸ್ವಾಮಿ ಸರ್ವತ್ರ ವ್ಯಾಪ್ತ, ಅವ್ಯಾಪಿ ಕೂಡದು. ಪ್ರಾಣಿಗಳಿಗೆ ಅತಿ ದೂರ, ಸಮೀಪ ಕಾಣಿಸುವುದಿಲ್ಲ, ಸ್ವಾಮಿಗೆ ಹಾಂಗಲ್ಲ. ಅತೀತ ಅಗಮ್ಯ ಭೂತಭವಿಷ್ಯದ್ವರ್ತಮಾನ ಸಕಲವನ್ನೂ ಬಲ್ಲ, ದೇಶಕಾಲಪರಿಚ್ಛೇದಶೂನ್ಯ, ಲಕ್ಷ್ಮೀನಿವಾಸ, ಲಕ್ಷ್ಮೀ ಅಪ್ಪಂದೆ ಅಲ್ಲ. ಗುಣವ್ಯಾಪ್ತಿ ಸ್ವಾಮಿಗೆ ಅದೆ. ನರಲೋಕ ವಿಡಂಬನಿ ಈ ಪ್ರಕಾರ ಮಾಡಿ ತೋರಸ್ತಾನೆ. ಈ ಮಾತು ಭೀಮಾದಿಗಳು ತಿಳೀಥಾರೆ. ಧರ್ಮರಾಯ ತಿಳಿದ, ಸ್ವಾಮಿ ಇದ್ದ ಪಕ್ಷವೇ ತಮಗೆ ವನವಾಸ ಆಗದೇ ಇಹೋದು ಎಂದು. ಹೀಂಗೆ ಸ್ವಾಮಿಗೆ ಅವ್ಯಾಪ್ತಿ ತಿಳಿದ ಕಾರಣ, ಧರ್ಮರಾಯ ರಾಜಸೂಯಯಾಗ ಮಾಡಿ, ಯೋಗ್ಯತಿ ಮೀರಿ ಪುಣ್ಯ ಬಹಳ ಒದಗಿದ್ದು, ಅದಷ್ಟೂ ಹ್ರಾಸವಾಗಿ, ಭೀಮಸೇನ ದ್ರೌಪದೀ ಅರ್ಜುನಾದಿಗಳಿಗೆ, ಅವರವರ ಯೋಗ್ಯತಾನುಸಾರಕ್ರಮದಿಂದ ಹಂಚಿಕಿ ಬಿತ್ತು. 'ಪಾಂಡವರನ್ನ ನನಕ್ಕೆ ಅಪ್ಪಿ, ನನಗೆ ಅಪ್ರಿಯ ಮಾಡಿದಿ' ಹೀಂಗೆ ವೇದವ್ಯಾಸ ಧೃತರಾಷ್ಟ್ರನನ್ನು ಕುರಿತು ಮಾತನಾಡಥಾನೆ. ವೇದವ್ಯಾಸ ಅಪ್ರೀತಿ ಮಾಡಿ ಕೇಳಥಾನೆಂದು ಭೀಷ್ಮದ್ರೋಣಾದಿಗಳು, ಧೃತರಾಷ್ಟ್ರ ಮೊದಲಾದವರು ತಿಳಿದರು. ವೇದವ್ಯಾಸ ಸರ್ವೋತ್ತಮದೇವತಿ ಎಂದು ತಿಳಿದಿದ್ದಿಲ್ಲ. ಈ ಅಜ್ಞಾನದಿಂದ ಭೀಷ್ಮಾದಿಗಳಿಗೆ ಅಧಿಕ ಪುಣ್ಯ ಏನು ಒದಗಿತ್ತು, ಅದಷ್ಟೂ ಹ್ರಾಸವಾಗಿ, ಭೀಮಾದಿಗಳಿಗೆ ಬಂತು. ದುರ್ಯೋಧನಾದಿಗಳು ಈ ಬ್ರಾಹ್ಮಣ ವೇದವ್ಯಾಸ ಏನು ಮಾತನಾಡಥಾನೆಂದು ದೂಷಿಸಿದರು. ಅವರಿಗೆ ಪಾಪ ಅಭಿವೃದ್ಧಿ ಆಯಿತು. ಪಾಂಡವರು ತನ್ನವರೆಂದು ಹೇಳಲಿಕ್ಕೆ ಪಾಂಡವರಿಗೆ ಜ್ಞಾನಭಕ್ತಿವೈರಾಗ್ಯ ಹೆಚ್ಚಿತು. ಧರ್ಮರಾಯ ಜೂಜಾಡುವಾಗ, ಅರ್ಜುನ ದುರ್ಯೋಧನಾದಿಗಳ ವ್ಯಾಲೆ ಕ್ಷಮ ಮಾಡಿಕೊಂಡ. ಅದಷ್ಟೂ ಅರ್ಜುನಗೆ ಗುಣ ತೋರಿತು. ಏನುಕಾರಣವೆಂದರೆ, ಭೀಮಸೇನನಪ್ಪಂದೆ ಬಲವೀರ್ಯ ಉಳ್ಳಾತನಲ್ಲ. ಆದಕಾರಣ ಕ್ಷಮ ಮಾಡಿಕೊಂಡ. ಭೀಮಸೇನ ಕೋಪಕ್ಕೆ ಬಂದು, ಕಾರ್ಯ ಮಾಡಿ ತೋರಿಸಲಾಪ. ದ್ರೌಪದೀನ್ನ ಸಭೆಗೆ ಎಳತಂದು ಭಂಗ ಮಾಡಿಸುವಾಗ ದ್ರೌಪದೀ ತಾಳಿಕೊಂಡಕಾರಣ ದ್ರೌಪದೀಗೆ ಮಹಾಧರ್ಮ ಬಂತು. ದೇವರ ಚಿತ್ತ, ಭೀಮಸೇನನ ಭಾವ ಬಲ್ಲಳು. ದುರ್ಯೋಧನಾದಿಗಳ ಪಾಪ ಪೂರ್ಣವಾಗಿ, ಹದಿನೆಂಟು ಅಕ್ಷೋಹಿಣಿ ಬಲ ಮುಂದೆ ಸಂಹಾರವಾಗಬೇಕಾದ ಕಾರಣ ಆಗ್ಗೆ ತಾಳಿಕೊಂಡಳು. ಸ್ವಾಮಿ ಸಾಲ್ವನ ಕೊಲ್ಲಲಿಕ್ಕೆ ಹೋಗಿದ್ದೆನಂತ ಹೇಳಿಕೊಂಡದ್ದಕ್ಕೆ, ಸ್ವಾಮೀ ಸನ್ನಿಧಾನಕ್ಕೆ ತಾತ್ಪರ್ಯ ಹೇಳಿ ಇನ್ನು ಕಥಾಸಂಗತಿ ಹೇಳಥಾರೆ.

ಧರ್ಮರಾಯ ರಾಜಸೂಯಯಾಗ ಮಾಡಿ ಇಂದ್ರಪ್ರಸ್ಥದಲ್ಲಿ ಸಭಿಯೊಳಗೆ ಕುಳಿತಿರಲಿಕ್ಕೆ, ನಾರದ ಬಂದು ಸಾಲ್ವನ ಅಗ್ಗಳಿಕೆ ಹೇಳಿದ್ದ. ಕೃಷ್ಣ ಧರ್ಮರಾಯನ

ಕೂಡ ಮಾನಾಡಥಾನೆ. "ನಿನ್ನ ಕಣ್ಣಮುಂದೆ ಪ್ರದ್ಯುಮ್ನ ಮೊದಲಾದವರನ್ನ ದ್ವಾರಾವತಿಗೆ ಯುದ್ಧಕ್ಕೆ ಕಳುಹಿದ್ದೆ. ಸಾಲ್ವ ವಿಮಾನ ಏರಿಕೊಂಡು ದ್ವಾರಾವತಿ ಮರ್ದಿಸಲಿಕ್ಕೆ, ಚಾರುದೇಷ್ಣ ಮೊದಲಾದವರಿಂದ ಕೂಡಿಕೊಂಡು, ಪ್ರದ್ಯುಮ್ನ ಸಾಲ್ವನ ಕೂಡ ಯುದ್ಧ ಮಾಡಿದನು. ಸಾಲ್ವ ಶಸ್ತ್ರಾಸ್ತ್ರ ಮಳಿಗರೆದನು. ಪ್ರದ್ಯುಮ್ನ ತನ್ನ ಬಾಣಗಳಿಂದ ಅಷ್ಟೂನೂ ಛೇದಿಸಿಬಿಡತಿಹ. ಪ್ರದ್ಯುಮ್ನಗೆ ಒಂದು ಬಾಣ ಕೊಟ್ಟಿದ್ದೆ, ಅಮೋಘವೀರ್ಯ ಉಳ್ಳದ್ದು. ಅಂಥಾ ಬಾಣ ತೊಡಲು ಮುಖ್ಯ-ಪ್ರಾಣನಿಂದ ಅಶರೀರವಾಣಿ ಆಯಿತು. 'ಮೂಲನಾರಾಯಣ ಕೃಷ್ಣಾವತಾರ ಮಾಡ್ಯಾನೆ. ಸ್ವಾಮಿ, ತಾನು ಕೊಲ್ಲಬೇಕಲ್ಲದೆ — ಪರಶುರಾಮಾವತಾರದಲ್ಲಿ ಓಡಿಸಿದ್ದನಲ್ಲದೆ, ಕೊಂದಿದ್ದಿಲ್ಲ. ಸಾಲ್ವನ್ನ ಕೃಷ್ಣ ಕೊಲ್ಲಬೇಕು —ನಿನ್ನಿಂದ ಸಾಲ್ವ ವಧ್ಯನಲ್ಲ!' ಹೀಂಗಂತ ಹೇಳಿ, 'ಸಾಲ್ವನ ಹೃದಯದೊಳಗೆ ಹೊಕ್ಕು, ಅವನಿಗೆ ಪ್ರೇರಿಸಿ ಓಡಿಸಿಬಿಡಥೀನಿ. ನಿನ್ನ ಬಾಣ ವ್ಯರ್ಥ ಮಾಡಬ್ಯಾಡ!' ಹೀಂಗಂತ ಮುಖ್ಯಪ್ರಾಣನ ಅಶರೀರವಾಣಿ ಆಯಿತು. ಕೇಳು ಧರ್ಮರಾಯ, ಪ್ರದ್ಯುಮ್ನ ಅಶರೀರವಚನ ಕೇಳಿ, ನಾನು ಕೊಟ್ಟ ಬಾಣ ಹಿಂದಕ್ಕೆ ತೆಗೆದುಕೊಂಡನು. ಮುಖ್ಯಪ್ರಾಣನ ಪ್ರೇರಣೆಯಿಂದ, ಬಹಳ ಕಲಹ ಏನು ಪ್ರಯೋಜನವೆಂದು, ಸಾಲ್ವ ತನ್ನ ಪಟ್ಟಣಕ್ಕೆ ಹೋದ. ಪ್ರದ್ಯುಮ್ನ, ಸಾಲ್ವನ ತಮ್ಮ ಗದ, ಸಾರಣ, ಚಾರುದೇಷ್ಣ ಮೊದಲಾದ ನನ್ನ ಮಕ್ಕಳು, ಸಾಲ್ವನ ಸೇನಾನೆಲ್ಲ ಸಂಹರಿಸಿ, ಸಂತೋಷದಿಂದ ದ್ವಾರಾವತಿಗೆ ಬಂದರು. ನನ್ನ ಬಾಣದ ಮಹಿಮಿ, ಇಂಥಾದ್ದು. ನಾನು ನಿಮ್ಮ ಕೈಲಿ ಅಪ್ಪಣೆ ಕೊಂಡು, ಇಂದ್ರಪ್ರಸ್ಥದಿಂದ ದ್ವಾರಾವತಿಗೆ ಹೋಗಥೀನಿ.

"ಸಾಲ್ವ ಬಂದು ಪ್ರದ್ಯುಮ್ನನ ಕೂಡ ಯುದ್ಧ ಮಾಡಿದನೆಂದು ಕೇಳಿ, ದ್ವಾರಾವತಿಗೆ ಹೋಗದೆ, ಸಾಲ್ವನ ಬೆನ್ನಟ್ಟಿ ಹೋಗಲಿಕ್ಕೆ, ಸಾಲ್ವ ವಿಮಾನ ಏರಿಕೊಂಡು ಆಕಾಶಮಾರ್ಗದಿಂದ ಸಮುದ್ರ ದಾಟಿಹೋಗಲಿಕ್ಕೆ, ನನ್ನ ಕಂಡು ಹಿಂದಕ್ಕೆ ತಿರುಗಿ ಶಸ್ತ್ರಾಸ್ತ್ರ ಮಳಿಗರೆದನು. ಅವಷ್ಟೂ ಪರಿಹರಿಸಿದೆ. ಸಾಲ್ವ ಅಶಕ್ತನಾದಕಾರಣ ಮಾಯಾಸರ್ಜನಿ ಮಾಡಿದ. ವಸುದೇವನ ತಲಿ ಕಡದು ರಣರಂಗದಲ್ಲಿ ಬಿಟ್ಟ. ಇಂಥಾ ಮಾಯ ಮಾಡಿದ! ಜ್ಞಾನಾಸ್ತ್ರದಿಂದ ಅಷ್ಟೂ ನಿವಾರಿಸಿಬಿಟ್ಟೆ. ಸುದರ್ಶನಚಕ್ರದಿಂದ ವಿಮಾನಕ್ಕೆ ಹೊಡಿಯಲಿಕ್ಕೆ, ವಿಮಾನ ಎರಡು ತುಣುಕು ಆಗಿ ಸಮುದ್ರದೊಳಗೆ ಬಿತ್ತು. ಅದರ ತರುವಾಯ ರಥ ಏರಿಕೊಂಡು ಭೂಮೀ ಮ್ಯಾಲೆ ಬರುವಾಗ ಸಾಲ್ವನ ಭುಜಗಳು ಚಕ್ರದಿಂದ ಕಡದು ಬಿಟ್ಟೆ. ಕೌಮೋದಕಿ ಗದಾದಿಂದ ಸಾಲ್ವನ ಶಿರಚ್ಛೇದನ ಮಾಡಲಿಕ್ಕೆ, ದೊಡ್ಡ ಪಾಪಿ ಸತ್ತನೆಂದು, ಬ್ರಹ್ಮಾದಿ ದೇವತಿಗಳು ಹೂವಿನ ಮಳಿಗರೆದರು. ನನ್ನ ಸ್ತೋತ್ರ ಮಾಡಹೊಕ್ಕರು. ಸಾಲ್ವನ ಕೊಂದು ದ್ವಾರಾವತಿಗೆ ಬರಲಿಕ್ಕೆ, ನಿಮಗೆ ವನವಾಸ

ಒಂತೆಂದು ವಾರ್ತೆ ಕೇಳಿ, ನಿಂದರದೆ ಅತಿ ವೇಗದಿಂದ ನಿಮ್ಮ ಸಮೀಪಕ್ಕೆ ಬಂದೆ." ಈ ಪ್ರಕಾರ ಧರ್ಮರಾಯಗೆ ಸ್ವಾಮಿ ಎಂದನು.

ಶ್ರೀಕೃಷ್ಣದೇವರು, ದ್ರೌಪದೀ ಪಾಂಡವರ ಸಮಾಧಾನಾರ್ಥವಾಗಿ ಅವರ ಜೊತೆಯಲ್ಲೇ ಕೆಲವು ದಿನ ಇದ್ದನು. ಸತ್ಯಭಾಮಾ ದ್ರೌಪದೀಗೆ ಬಹಳ ಸಮಾಧಾನ ಮಾಡಿದಳು. ಪಾಂಡವರ ಮಿತ್ರಬಾಂಧವರು, ಪಾಂಡವರ ಮಕ್ಕಳೂ ಸಹ, ಕೃಷ್ಣನ ಗಮನದ ಪರಿಯಂತ ಇದ್ದರು. ಧೃಷ್ಟದ್ಯುಮ್ನ ತನ್ನ ತಂಗಿಗೆ ಬಹಳ ಸಮಾಧಾನ ಮಾಡಿ, ದ್ರೌಪದೀಯ ಐದು ಮಂದಿ ಮಕ್ಕಳು ಪ್ರತಿವಿಂಧ್ಯ ಮೊದಲಾದ ಸೋದರಳೀರ ಕೂಡಿಕೊಂಡು ತನ್ನ ಪಾಂಚಾಲಪಟ್ಟಣಕ್ಕೆ ಹೋದ. ಧೃಷ್ಟಕೇತುರಾಯ—ಧರ್ಮರಾಯ ಮೈದುನನಾಗಬೇಕು—ತನ್ನ ತಂಗಿ ದೇವಕೀ, ಧರ್ಮರಾಯನ ಹೆಂಡತಿಯನ್ನು ತವರುಮನಿಗೆ ಕರಕೊಂಡುಹೋದ. ನಕುಲ-ಸಹದೇವರಿಗೆ ಮೂರು ಮಂದಿ ಹೆಂಡಂದರು. ಮದ್ರದೇಶದ ಅರಸು ಶಲ್ಯನ ಮಗಳು, ನಕುಲನ ಹೆಂಡತಿ. ಜರಾಸಂಧನ ಮಗಳು, ಸಹದೇವನ ಹೆಂಡತಿ. ನಕುಲನಿಗೆ ಮತ್ತೊಬ್ಬ ಹೆಂಡತಿ ಪಾರ್ವತೀ ಎಂಬಾಕೆ. ಈಕೆ ಪೂರ್ವದಲ್ಲಿ ದಾರೆಂದರೆ, ತಿಲೋತ್ತಮಾ ಎಂಬ ಅಪ್ಸರಸ್ತ್ರೀ, ಅನುರಾಯನ ಮಗಳಾಗಿ, ಪಾರ್ವತೀ ಎಂಬ ನಾಮದಿಂದ ಹುಟ್ಟಿದಳು, ಈಕೆನ್ನ ನಕುಲ ಮದುವಿ ಆಗ್ಯಾನೆ. ಹೀಂಗೆ ಮೂರು ಮಂದಿ, ಅತ್ತೀ ಕುಂತೀ ಸಮೀಪದಲ್ಲಿ ಹಸ್ತಿನಾವತಿಯಲ್ಲೇ ನಿಂತಿದ್ದರು, ವನವಾಸಕ್ಕೆ ಬಂದಿದ್ದಿಲ್ಲ. ಸುಭದ್ರಾ, ಅರ್ಜುನನ ಹೆಂಡತಿ. ಶ್ರೀಕೃಷ್ಣದೇವರು ತಂಗೀನ್ನ, ಸೋದರಳೀಯ ಅಭಿಮನ್ಯುನ್ನ ಕರಕೊಂಡು ದ್ವಾರಾವತಿಗೆ ಹೋದನು. ಸ್ವಾಮಿ ಸತ್ಯಭಾಮಾನಿಂದ ಯುಕ್ತನಾಗಿ ತೆರಳಲಿಕ್ಕೆ, ದ್ರೌಪದೀ ಐದು ಮಂದಿ ಮಕ್ಕಳು, ತಮ್ಮ ಸೋದರಮಾವ ಧೃಷ್ಟದ್ಯುಮ್ನನ ಮನಿಯೊಳಗೆ ನಿಂದರಲಿಕ್ಕೆ ಮನಸ್ಸು ಬಾರದೇ, ಅಭಿಮನ್ಯುನಲ್ಲಿ ವಾತ್ಸಲ್ಯವುಳ್ಳವರಾಗಿ ದ್ವಾರಾವತಿಗೆ ಬಂದರು.

ಧರ್ಮರಾಯ ವನದಲ್ಲಿ, ಸನ್ಯಾಸಿ ಋಷಿಗಳಿಂದ ಯುಕ್ತನಾಗಿ ವನಭೋಗ ಕೊಳ್ಳತಿಹ. ದ್ರೌಪದೀ ಭೋಗ ಮಾಡಬಾರದೆಂದು ಯುಧಿಷ್ಠಿರ ವ್ರತವುಳ್ಳವನಾದ. ದ್ರೌಪದೀ ತನ್ನ ನಾದಿನಿ, ಭೀಮಸೇನನ ಹೆಂಡತಿಯೆಂದು ಬಹುಮಾನ ಮಾಡತಿಹೋನ್ನು. ವನವಾಸ ಅಜ್ಞಾತವಾಸ ಮುಗಿದಮ್ಯಾಲೆ, ತನ್ನ ಹೆಂಡತಿ ದೇವಕೀ ಭೋಗ ಮಾಡಿದರೇನು, ಮಾಡದಿದ್ದರೇನು, ದ್ರೌಪದೀ ಭೋಗ ಇನ್ನು ಮಾಡವಲ್ಲೆನೆಂದು ವ್ರತವುಳ್ಳವನಾದ. ಪಾಂಡವರು ನಿರಂತರ ಅಕ್ಷಯಪಾತ್ರೆಯಿಂದ ಬಂದ ಸುಭೋಜ್ಯ ಋಷಿಗಳಿಗೆ, ಸನ್ಯಾಸಿಗಳಿಗೆ ಭೋಜನ ಮಾಡಿಸಿ, ತರುವಾಯ ಧರ್ಮರಾಯನ ಆಜ್ಞೆಂದ ಭೀಮಾರ್ಜುನರು, ನಕುಲಸಹದೇವರು ಭೋಜನ ಮಾಡೋರು. ಅದರ ತರುವಾಯ ಧರ್ಮರಾಯ ಭೋಜನ ಮಾಡುವ. ಕಟ್ಟ-

. ಕಡೀಲಿ ದ್ರೌಪದೀ ಭೋಜನ ಮಾಡೋಳು. ದ್ರೌಪದೀ ಉಂಡಮ್ಯಾಲೆ ಅನ್ನ ಬರಲಿಕ್ಕಿಲ್ಲ. ವಿಷ್ಣುಪರಾಯಣರಾಗಿ, ನಿತ್ಯ ದೇವರಿಗೆ ಸಮರ್ಪಿಸಿ, ಬ್ರಾಹ್ಮಣರ ಭೋಜನ ಮಾಡಿಸತಿಹೋರು. ಒಂದು ವರುಷವಾಯಿತು.

ಭೀಮಸೇನ ದ್ರೌಪದೀಗೆ ಯುಕ್ತಿ ಹೇಳಿ, ಹದಿನಾಲ್ಕು ವರುಷಕ್ಕಾದರೂ ಧರ್ಮರಾಯನ ಕೈಯಿಂದ ರಾಜ್ಯ ಆಳೋಹಾಂಗೆ ಮಾಡಬೇಕೆಂದು ದ್ರೌಪದೀ ಕೂಡ ಮಾತನಾಡಥಾನೆ. 'ಧರ್ಮರಾಯಗೆ ನೀನು ಹೋಗಿ ಹೇಳು, ಹಿಂಗಳು ವರುಷದಪ್ಪಂದೆ ಹನ್ನೆರಡು ವರುಷವಾಯಿತು. ಇನ್ನು ಒಂದು ವರುಷ ಅಜ್ಞಾತವಾಸವಾಯಿತೆಂದರೆ ರಾಜ್ಯ ಆಳಲಿಕ್ಕೆ ನಡಿ ಎನ್ನು. ಈಗಾಲೇ ಧರ್ಮರಾಯನ ಕೈಯ ಪ್ರತಿಜ್ಞೆ ಮಾಡಸಬೇಕು. ರಾಯ, ರಾಜ್ಯ ಇಚ್ಛಿಸದೇ ಹೋದಾನು. ವನವಾಸದಲ್ಲಿ ಉಂಡುಕೊಂಡು ಋಷಿಗಳಿಂದ ವನವಾಸದಲ್ಲೇ ಇದ್ದಾನು. ಏನುಕಾರಣ ಇಚ್ಛಿಸದೇ ಹೋದಾನು ಎಂದರೆ, ಭೀಷ್ಮದ್ರೋಣಾದಿಗಳು ತನ್ನ ಗುರುಗಳು; ಹಿರೇರ ಎದುರಿಗೆ ಯುದ್ಧ ಮಾಡಬಾರದೆಂದು ಆತನ ಅಭಿಪ್ರಾಯವದೆ. ಆದಕಾರಣ ಹದಿನೂರು ವರುಷ ತಿದವ್ಯಾಲಾದರೂ, ಹದಿನಾಲ್ಕು ವರುಷಕ್ಕಾದರೂ ಸಾಮ್ರಾಜ್ಯ ಆಳಸೋಹಾಂಗೆ ಮಾಡಿಸಬೇಕು' ಎಂದು, ಭೀಮಸೇನ ಧರ್ಮರಾಯನ ಸಮೀಪಕ್ಕೆ ದ್ರೌಪದೀನ್ನ ಕಳುಹಿದ. ದ್ರೌಪದೀ ಧರ್ಮರಾಯಗೆ ಅಂಥಾಳೆ. 'ಹೇ ರಾಯ, ಅರಸರುಗಳಲ್ಲಿ ಕ್ಷಮಾಗುಣ ಬಹಳೇ ಇರಬಾರದು.' ಮೊದಲೇ ನಿಷ್ಕುರಕ್ಕೆ ಬರಬಾರದೆಂದು ಕ್ರಮದಿಂದ ಹಠವಾದ ಮಾಡಥಾಳೆ. 'ರಾಯನಾದಾತ ಪಾಪಿಗಳ ಅನ್ಯಾಯ ತಾಳಿಕೊಳ್ಳಬಾರದು. ನಿನ್ನಲ್ಲಿ ಕ್ಷಮಾ ಎಂಬ ಕೆಟ್ಟ ಗುಣ ಸೇರೇದೆ. ಇದರಿಂದ ಅನರ್ಥಸಾಧನವದೆ.' ಆದಕ್ಕೆ ಧರ್ಮರಾಯ ಮಾತನಾಡಿದ. 'ಎಲೌ ದ್ರೌಪದೀ, ಭೂಮಿಯಲ್ಲಿ ಹ್ಯಾಂಗೆ ಕ್ಷಮಾಗುಣವದೆ, ಅದರಂತೆ ಕ್ಷಮಾಗುಣ ಅರಸರುಗಳೆಲ್ಲಿರಬೇಕು.' ಹೀಂಗಂತ ಧರ್ಮರಾಯ ಮಾತನಾಡಥಾನೆ. 'ದುರ್ಯೋಧನ ನಮಗೆ ದುಃಖ ಕೊಟ್ಟಾನಲ್ಲ ಎಂದೀ. ಸುಖದುಃಖ ಕೊಡೋಣ ಸರ್ವೇಶ್ವರನ ಅಧೀನ. ದುರ್ಯೋಧನ ದುಃಖ ಕೊಡಲಿಕ್ಕೆ ಎಷ್ಟರವ! ಕ್ಷಮಾ ಎಂಬ ಖಡ್ಗ ತನ್ನಲ್ಲಿರಬೇಕು, ಕ್ಷಮಾ ದೊಡ್ಡದು' ಎಂದು ಅಡಲಿಕ್ಕೆ, ದ್ರೌಪದೀ ಮಾತನಾಡಥಾಳೆ. 'ರಾಯ, ಅನ್ಯಾಯ ಮಾಡಿದವರಿಗೆ ದಂಡನಿ ಮಾಡಬೇಕು. ದಂಡನಿ ಇಲ್ಲದ ಭೂಪಾಲಕನ ಕೊಂಡು ಏನು ಮಾಡಬೇಕು! ಹೀನ ಪುರುಷರಿಂದ ಜಗತ್ತೆಲ್ಲ ಅನಾಯಕವಾದೀತು. ಲೋಕವ್ಯವಹಾರ ನಡೀದೆ ಹೋದೀತು. ಈ ಜಗತ್ತಿಗೆ ಸುಖದುಃಖ ಕೊಡೋ ಆತ ಸ್ವಾಮಿ ಅಹುದು. ಬ್ರಹ್ಮರುದ್ರಾದಿಗಳು ಕ್ರಮದಿಂದ ಸ್ವಾಮೀ ಅಧೀನರು. ಬ್ರಹ್ಮಾದಿಗಳು ಉಸಿರು ಬಿಡೋ ವ್ಯಾಪಾರ ಸ್ವಾಮೀ ಅಧೀನ. ಚಿಂತಾಮಣಿ ರತ್ನ ಜಡ, ಜಡಕ್ಕೆ ಚೇತನಥಾಂಗೆ ಶಕ್ತಿ ಕೊಟ್ಟಾನೆ, ಚೇತನಕ್ಕೆ ಜಡ ಪ್ರಚುರ

ಮಾಡಥಾನೆ. ಚಿಂತಾಮಣಿ ರತ್ನ ಜಡವಾದರೂ ಚೇತನ ವ್ಯವಹಾರ ಮಾಡಿಸ ಥಾನೆ. ಸ್ವಾಮಿ ಇಂಥಾ ಶಕ್ತಿಯುಳ್ಳಾತ. ಲೋಕಕ್ಕೆ ಶ್ರುತಿ ಸ್ಮೃತಿ ಮಾಡಿ ಕೊಟ್ಟಾನೆ. ಆದಕಾರಣ ಸ್ವಾಮೀ ಆಜ್ಞಾನುಸಾರ ವಿಹಿತ ಮಾಡಬೇಕು. ನಿಷಿದ್ಧ ಬಿಡಬೇಕು. ಶ್ರುತಿ ಸ್ಮೃತಿಯಲ್ಲಿ ಹೇಳಿದ ಪ್ರಕಾರ ಜೀವ ಪರಾಧೀನ ಕರ್ತೃವಾಗಿ ಆತ್ಮಾನಾತ್ಮ ವಿಚಾರ ಮಾಡಬೇಕು. ಸುಕರ್ಮ ಅಕರ್ಮಕ್ಕೂ ಜೀವನೇ ಶುಭಾಶುಭ ಫಲ ಉಣಥಾನೆ. ರಾಯ, ವಿಧಿಪೂರ್ವಕ ಮಾಡಬೇಕು. ನಿಷಿದ್ಧ ಬಿಡಬೇಕು. ಇದೆಲ್ಲ ಜೀವಕ್ಕೆ ಹೇಳಥದೆ. ಸ್ವಾಮಿ ಸರ್ವತಂತ್ರಸ್ವತಂತ್ರ, ಸ್ವಾಮಿಗೆ ಪಾಪಪುಣ್ಯ ಲೇಪವಿಲ್ಲ. ಸ್ವಾಮಿ ವಿಧಿನಿಷಿದ್ಧ ಗೋಚರನಲ್ಲ. ರಾಯ, ನಿನ್ನ ವಚನಗಳಿಂದ ನಾರಾಯಣಗೆ ದೋಷ ತಂದುಕೊಡತಿದ್ದಿ.'

ಹೀಂಗೆ ದ್ರೌಪದೀ ಮಾತು ಕೇಳಿ ಧರ್ಮರಾಯ ನಿರುತ್ತರನಾಗಿ, ತನಗೆ ಪ್ರತಿ ಉತ್ತರ ಹೊರಡದ ಕಾರಣ ದ್ರೌಪದೀಗೆ ಜಬರಿಸಿಕೊಂಡ. 'ನಿನ್ನ-ತರ್ಕ, ಕುತರ್ಕ. ನಾರಾಯಣ ಸರ್ವೋತ್ತಮನೆಂದು ಸ್ಥಾಪಿಸಿದ್ದೀನಿ. ನೀನು ಅಂತಿದ್ದಿ, ನಾರಾಯಣನ ತರುವಾಯ ಜೀವ ಸ್ವತಂತ್ರನೆಂದು. ಹೀಂಗೆ ಸ್ಥಾಪಿಸಿದ್ದೀಯ.' ಈ ಪ್ರಕಾರ ದ್ರೌಪದೀ ಮಾತು ಧರ್ಮರಾಯ ಹಾರಿಸಲಿಕ್ಕೆ, ಹಿರೇರಿಗೆ ತನ್ನ ವಿವೇಕತನ ತೋರಿಸಬಾರದೆಂದು, ಸ್ತ್ರೀಧರ್ಮ ತೋರಿಸಬೇಕಾಗಿ, ರಾಯ ತನ್ನ ತಪ್ಪು ಕ್ಷಮಿಸಬೇಕಾಗಿ, ಸ್ತ್ರೀ ಆದಾಕಿ ಗಂಡನ ಎದುರಿಗೆ ವಚನಚಾತುರ್ಯ ತೋರಿಸಿ, ಗಂಡನ್ನ ನಿರುತ್ತರ ಮಾಡಬಾರದೆಂದು ಸ್ತ್ರೀಸ್ವಭಾವ ತೋರಿಸಲು, ಭೀಮಸೇನ, ಧರ್ಮರಾಯನ ಸಮೀಪಕ್ಕೆ ಬಂದು 'ಹೆಂಗಸನ್ನ ಏನುಕಾರಣ ಅಂಜಿಸಿಕೊಳತಿದ್ದಿ?' ಎಂದು, ದ್ರೌಪದೀ ಮಾತಿಗೆ ಬಲಿಕೆ ಕೊಟ್ಟು, ಭೀಮಸೇನ ಯುಧಿಷ್ಠಿರನ ಸಂಗಡ ಮಾತನಾಡಥಾನೆ. 'ನಾರಾಯಣ ಸರ್ವಸ್ವತಂತ್ರನಹುದು. ಜೀವ, ಶ್ರುತಿಸ್ಮೃತೀಲಿ ಹೇಳಿದ ಪ್ರಕಾರ ನಿತ್ಯಕರ್ತವ್ಯ ಮಾಡಬೇಕು. ತಾತ್ತ್ವಿಕ-ದೇವತಿಗಳಿಗೆ ನಿತ್ಯ ಬೇಡಿಕೊಳ್ಳಬೇಕು. ಧರ್ಮಮಾರ್ಗದಲ್ಲಿ ಬುದ್ಧಿ ಎರಗಿಸಿರೆಂದು ಪ್ರಾರ್ಥನೆ ಮಾಡಬೇಕು. ಪಾಪದಲ್ಲಿ ಉದಾಸೀನತ ಮಾಡಬೇಕು. ಪುಣ್ಯಕ್ಕೆ ತೀವ್ರತ್ವ ಇರಬೇಕು. ಜೀವ ಮಾಡುವ ಕರ್ಮ ಪ್ರತ್ಯಕ್ಷವಾಗೇದೆ. ದೇವರು ಪ್ರೇರಿಸಥಾನೆಂದು ಅನುಮಾನದಿಂದ ತಿಳಿಯಬೇಕು. ಆಗಮದಿಂದ ವಿಹಿತ ಮಾಡ-ಬೇಕು, ನಿಷಿದ್ಧ ಬಿಡಬೇಕು. ಜೀವ, ವಿಹಿತಕರ್ಮ ಮಾಡಿ ದೇವರಿಗೆ ಅರ್ಪಿಸ-ಬೇಕು. ದೇವರು ಪ್ರೇರಿಸಿದ, ತಾನು ವಿಹಿತಕರ್ಮ ಮಾಡಿದನೆಂದು ತಿಳಿಯಥಾನೆ, ಆದ್ದರಿಂದ ಜೀವನಿಗೆ ಒಮ್ಮಿ ಗತಿಯಾಗತದೆ. ಜೀವ ಪರಮಾತ್ಮನ ಅಧೀನ. ಜೀವ ಪರಾಧೀನಕರ್ತನು. ಆದಕಾರಣ ಜೀವ, ಕೆಟ್ಟ ಕರ್ಮ ಬಿಟ್ಟು, ಸುಕರ್ಮ ಮಾಡಿ ದೇವರಿಗೆ ಅರ್ಪಿಸಬೇಕು. ಜೀವನಿಗೆ ಪರಾಧೀನತ್ವ ಪ್ರತ್ಯಕ್ಷಸಿದ್ಧವಾಗೇದೆ. ಬಾಯಿ ಒಳಗೆ ತುತ್ತು ಹಾಕಿಕೊಳ್ಳಥಾನೆ. ದೇವರು, ತಿನ್ನದಿದ್ದರೆ ಸುಮ್ಮಗೆ

ಇರೋದಿಲ್ಲ. ಅನ್ನ ಬಿಸಿ ಇದ್ದರೆ, ಕೈಹಾಕಿ ತೆಗೀಥಾನೆ. ಇವೆಲ್ಲ ದೇವರಿಗೆ ಅನುಮಾನದಿಂದ ತಿಳೀಬೇಕು. ಆದಕಾರಣ ದೇವರು ಮುಖ್ಯ ಕರ್ತ; ಜೀವ ಸ್ವಾಮಿಭೃತ್ಯ, ಪರಾಧೀನಕರ್ತ ಎಂದು ತಿಳೀಬೇಕು.

'ಪ್ರತ್ಯಕ್ಷ ಆಗಮ ಅನುಮಾನಕ್ಕೆ ವಿರುದ್ಧ ಆಗದಹಾಂಗೆ ಕಾರ್ಯದಲ್ಲಿ ಪ್ರವರ್ತಿಸಬೇಕು. ಮುಖ್ಯಕರ್ತ ನಾರಾಯಣನಾದರೂ ಭೋಜನಾದಿ ಕ್ರಿಯೆಗಳು ಮಾಡೋದಕ್ಕೆ ಜೀವನಿಗೆ ಸ್ವತಂತ್ರತ ಕೊಟ್ಟಾನೆ. ಪ್ರತ್ಯಕ್ಷಾದ್ಯಷ್ಟಕರ್ತ ನಾರಾಯಣ, ಜೀವ ತಾ ಪರಾಧೀನಕರ್ತ. ಹೀಂಗೆ ತಿಳಿಯೋದು ಉತ್ತಮ. ಇನ್ನು ಮಧ್ಯಮ ಪ್ರಮಾಣ, ಭೋಜನಾದಿ ಕರ್ಮಗಳಲ್ಲಿ ಜೀವ ಕರ್ತ, ಮುಖ್ಯಕರ್ತ ನಾರಾಯಣ ಹೀಂಗೆ ತಿಳಿಯೋದು ಮಧ್ಯಮ ಪ್ರಮಾಣ. ಜೀವ ಕರ್ತನಲ್ಲ, ನಾರಾಯಣನೇ ಕರ್ತ, ಪಾಪ ಪುಣ್ಯ ಜೀವನಿಗಿಲ್ಲ ಎಂಬೋದು ಅಧಮಪ್ರಮಾಣ. ಮೂರ್ಖನಾದವ ಅಧಮಪ್ರಮಾಣ ಅಂಗೀಕಾರ ಮಾಡ್ಯಾನು. ಮಧ್ಯಮಪ್ರಮಾಣ ಅಂಗೀಕಾರ ಮಾಡಬಾರದು. ಉತ್ತಮ ಪ್ರಮಾಣ ಜೀವನು ಪರಾಧೀನಕರ್ತ, ಮುಖ್ಯಕರ್ತ ನಾರಾಯಣನೆಂದು ತಿಳಿಯೋಣ ಮುಖ್ಯಪಕ್ಷ. ಅಜ್ಞಾನಿಯಾದವ ವಿಹಿತಕರ್ಮ ಬಿಟ್ಟು ನಿಷಿದ್ಧಕರ್ಮ ಮಾಡಥಾನೆ. ಜ್ಞಾನಿ ಆದವ, ಮುಖ್ಯಕರ್ತ ನಾರಾಯಣ ತಾನು ಪರಾಧೀನಕರ್ತ ಎಂದು ತಿಳಿದು, ವಿಹಿತಕರ್ಮ ಮಾಡಥಾನೆ, ನಿಷಿದ್ಧ ಬಿಡಥಾನೆ. ಆದಕಾರಣ ಹಠ ಮಾಡಬಾರದು.

'ಜೀವಕ್ಕೆ ಯೋಗ್ಯತಾಕರ್ಮ ಸಿದ್ಧವಾಗೇದೆ. ಜೀವನ ಯೋಗ್ಯತಾಕರ್ಮ ದೇವರ ಅಧೀನ. ದೇವರು ದಾರ ಪಶನೂ ಆಲ್ಲ, ಸರ್ವಸ್ವತಂತ್ರ. ಲಕ್ಷ್ಮೀಬ್ರಹ್ಮಾದಿ ಜಗತ್ತಿಗೆ ಅತ್ಯುತ್ತಮ. ಆಬ್ರಹ್ಮಸ್ಥಂಬಪರಿಯಂತ ಅವರವರ ಯೋಗ್ಯತಿ ಸ್ವಾಮಿ ಬಲ್ಲ. ಅವರವರ ಯೋಗ್ಯತಾನುಸಾರ ಅವರವರ ಕೈಯಿಂದ ಕರ್ಮ ಮಾಡಿಸಿ ಫಲ ಕೊಡಥಾನೆ. ಹಾಂಗೆ, ಕಲಿ ಮೊದಲಾಗಿ ತೃಣ ಕಡಿಯಾಗಿ, ತಮೋಯೋಗ್ಯರಿಗೆ ಅವರವರ ಕರ್ಮಾನುಸಾರ ಫಲ, ದುಃಖ, ಯೋಗ್ಯತಿ ನೋಡಿ ಕೊಡಥಾನೆ. ರಾಯ, ಯತ್ನ ಇಲ್ಲದೇ ಇದ್ದರೆ ಯೋಗ್ಯತಿ ಕರ್ಮ ತಿಳೀದೆಹೋದೀತು. ಯೋಗ್ಯತಾ ಕರ್ಮಕ್ಕೆ ಸಂಪೂರ್ಣ ಫಲಪ್ರದ ವಾಸುದೇವ, ಸರ್ವತಂತ್ರಸ್ವತಂತ್ರ ಶಕ್ತಿ ಉಳ್ಳಾತ. ಜೀವ ತಾ ಮಾಡಿದ ಸುಕರ್ಮ ಅತಗೆ ಒಪ್ಪಿಸಬೇಕು. ಡೊಂಬ ಏಕಾಂತದಲ್ಲಿ ಆಡಿದರೆ ಅವಗೇನು ಕೊಡಥಾರೆ! ರಾಜರಲಿ ಆಡಿದರೆ ಅವಗೆ ಫಲ ವಾಗತದೆ. ಹಾಂಗೆ ತಾನು ಮಾಡಿದ ಕರ್ಮ ಸ್ವಾಮಿಗೆ ಅರ್ಪಿಸಿದರೆ ಸುಖ ವೃದ್ಧಿ ಆಗತದೆ ಪ್ರಾಣಿಗಳು ಮಾಡೋ ಕರ್ಮ ಸ್ವಾಮಿ ತಾ ಬಲ್ಲರೂ ಸರಿಯೇ ತನ್ನಿಷ್ಟಕ್ಕೆ ಶ್ರೀಶಗೆ ಅರ್ಪಿಸಬೇಕು. ದುಷ್ಕರ್ಮ ಮಾಡಿದ್ದರಿಂದ ನರಕಾದ್ಯನರ್ಥವಾಗತದೆ. ಸ್ವಾಮಿ ಜಗತ್ಸೃಷ್ಟಿ ಮಾಡಿ, ನಾಲ್ಕು ವರ್ಣದವರಿಗೂ ಧರ್ಮಮಾರ್ಗ ತೋರಿಸಿ ಕೊಟ್ಟಾನೆ. ಬ್ರಾಹ್ಮಣರು ವೇದ ಓದಬೇಕು. ಮಂತ್ರಾರ್ಥ ತಿಳಿಯಬೇಕು.

ಶಿಷ್ಯರಿಗೆ ವಿದ್ಯ ಹೇಳಬೇಕು. ಬ್ರಾಹ್ಮಣರು ನಾರಾಯಣನ ಮುಖದಿಂದ ಹುಟ್ಟಿದ-ಕಾರಣ, ಬ್ರಾಹ್ಮಣರು ತವ ಮುಖದಿಂದಲೇ ಪಾಠಾಗಬೇಕು. ಕ್ಷತ್ರಿಯ ನಾರಾಯಣನ ಬಾಹುದೆಸಿಯಿಂದ ಹುಟ್ಟ್ಯಾನೆ. ಪ್ರಾಣಿಗಳು ಪಾಪ ಮಾಡಿದ ಪಕ್ಷವೇ ಕ್ಷತ್ರಿಯನಾದವ ತನ್ನ ಬಾಹುಪರಾಕ್ರಮದಿಂದ ದಂಡಿಸಬೇಕು. ಮುಖಕ್ಕೆ ತೋಳಿಗೆ ಸಮೀಪ ಇದ್ದದ್ದರಿಂದ ವೇದ ಓದಬೇಕು, ಯಜ್ಞಾದಿ ಕರ್ಮಗಳ ಮಾಡಬೇಕು. ದೇವರ ತೊಡಿ ದೆಸಿಯಿಂದ ವೈಶ್ಯರು ಹುಟ್ಟ್ಯಾರೆ. ಅವರು ಪ್ರಜಾ-ವೃದ್ಧಿ ಮಾಡಬೇಕು. ಉದ್ದಿಮಿ, ವ್ಯವಹಾರ, ಗೋರಕ್ಷಣೆ, ಕೃಷಿ ಮಾಡಬೇಕು. ತೊಡಿಗೆ ತೋಳಿಗೆ ಸಮೀಪ ಇದ್ದಕಾರಣ ವೇದ ಓದಬೇಕು. ನಾರಾಯಣನ ಪಾದದ ದೆಸಿಯಿಂದ ಶೂದ್ರರು ಹುಟ್ಟ್ಯಾರೆ. ಶೂದ್ರನಾದವ ಬ್ರಹ್ಮ, ಕ್ಷತ್ರಿಯ, ವೈಶ್ಯ ಈ ಮೂರೂ ಮಂದಿ ಮಾತು ಕೇಳಬೇಕು, ಸೇವಿ ಮಾಡಬೇಕು. ಕ್ಷತ್ರಿಯರಿಗೆ ಹೃದಯ ಜ್ಞಾನಸಾಧನ; ತೋಳುಗಳು ಬಲಕ್ಕೆ ಸಾಧನ. ಹೀಂಗೆ ಶಾಸ್ತ್ರಾರ್ಥ-ವಿಹಿತಕರ್ಮ ಮಾಡಬೇಕು.

'ಇನ್ನು ಪ್ರಧಾನ ಧರ್ಮ, ಸಕಲರೂ ಪ್ರಜಾವೃದ್ಧಿ ಮಾಡಬಹುದು. ಸಂತಾನ ಪಡೆಯಬಹುದು. ಹೇ ಧರ್ಮರಾಯ, ನಾವು ದೇವಾಂಶರು, ಕ್ಷತ್ರಿಯರಲ್ಲಿ ಹುಟ್ಟೀವಿ, ನಾಲ್ಕು ವರ್ಣಾಶ್ರಮಧರ್ಮವೂ ನಾವು ಮಾಡಬಹುದು. ಆದರೂ ನಾವು ಕ್ಷತ್ರಿಯರು, ಒಲಾಧಿಕರು, ಕ್ಷಪಾವೃತ್ತಿ ಮಾಡಬಾರದು. ಒಬ್ಬರನ್ನ ದೇಹಿ ಎಂದು ಬೇಡಬಾರದು. ಈ ಧರ್ಮಗಳೆಲ್ಲ ಮೂಲನಾರಾಯಣ ಆದಿಸೃಷ್ಟಿಯಲ್ಲಿ ಮಾಡಿದ್ದಾನೆ. ಅಂಥಾ ನಾರಾಯಣನ ಪೂಜಿ ನಾಲ್ಕು ವರ್ಣಾಶ್ರಮದವರೂ ತಾರ-ತಮ್ಯಜ್ಞಾನ ತಿಳದು, ವಿಷ್ಣುಸರ್ವೋತ್ತಮ, ರಮಾ ಬ್ರಹ್ಮಾದಿ ದೇವತಿಗಳು ತಾರತಮ್ಯಾನುಸಾರ ತದ್ದಾಸರೆಂದು ತಿಳದು, ಪೀಠಾವರಣ ಪೂಜಿ ಹ್ಯಾಂಗೆ ಹೇಳತದೆ ಹಾಂಗೆ ಜೆನ್ನಾಗಿ ಪೂಜಿ ಮಾಡಬೇಕು. ಸಾಧಾರಣಧರ್ಮ ಮಾಡಲಿಕ್ಕೆ ಮುಖ್ಯಜ್ಞಾನ ನಾರಾಯಣ ಸರ್ವೋತ್ತಮ, ಬ್ರಹ್ಮಾದಿಗಳು ಪರಿವಾರದೇವತಿಗಳೆಂದು ತಿಳದು, ನಿರಂತರ ಪೂಜಿ ಮಾಡಬೇಕು. ಇಂಥಾ ದಿವ್ಯಜ್ಞಾನ ದಾರು ಹೇಳ್ಯಾರು ಅವರೇ ತಂದಿತಾಯಿಗಳು. ತಾಯಿತಂದಿಗಳು ಹಡೆದರೂ, ಜ್ಞಾನಮಾರ್ಗ ತೋರಿಸಲಿಲ್ಲ, ಅವರು ತಾಯಿತಂದಿಗಳು ಅಲ್ಲ. ಜ್ಞಾನೋಪದೇಶ, ಸನ್ಮಾರ್ಗ ತೋರಿಸಿಕೊಟ್ಟವನೇ ತಾಯಿತಂದಿ.

'ಎಲೈ ಧರ್ಮರಾಯ ಇಂಥಾ ಸ್ವಚ್ಛಜ್ಞಾನ ಸಂಪಾದಿಸಿ, ನಾರಾಯಣನ ಪೂಜಿ ಮಾಡಿದ್ದರಿಂದ, ಜಗನ್ನಿವಾಸ ಮುಕ್ತಿ ಕೊಡಥಾನೆ. ಸ್ವಾಮೀ ಪೂಜಾ ದಾರು ಮಾಡೋದಿಲ್ಲ ಅವರು ನರಕಾದ್ಯನರ್ಥ ಉಣಥಾರೆ. ಸಂಸಾರದಲ್ಲಿ ಪುನಃ-ಪುನಃ ಹುಟ್ಟಿ, ಅನಂತ ದುಃಖ ಅನುಭವಿಸಥಾರೆ. ಸ್ವಾಮಿ ಆನಂದಪೂರ್ಣ, ಪ್ರಾಣಿಗಳು ಮಾಡೋ ಪೂಜಿಯಿಂದ ತನಗೆ ಏನೂ ಪ್ರಯೋಜನ ಇಲ್ಲದಿದ್ದರೂ

ಭಕ್ತರ ಅಭೀಷ್ಟ ಪೂರ್ತಿ ಮಾಡಿಕೊಡಬೇಕಾಗಿ ಪೂಜಿಗೊಳ್ಳಥಾನೆ. ಇಂಥಾ ಸರ್ವೇಶ್ವರ ಪ್ರಾಣಿಗಳ ಕರ್ಮಾನುಸಾರ ಸುಖದುಃಖ ಕೊಡಥಾನೆ. ಆದ್ದರಿಂದ ಪಾರತಂತ್ರ್ಯಾದಿ ದೋಷಗಳು ಸ್ವಾಮಿಗಿಲ್ಲ. ಸ್ವಾಮಿ ನಿರ್ದೋಷವಸ್ತು, ವೀರ್ಯ ಶೌರ್ಯ ಪ್ರಭಾ ಉಳ್ಳಾತ. ಅನಂತ ಶಕ್ತಿ ಉಳ್ಳಾತ. ಇಂಥಾ ಶ್ರೀಹರಿಯಲ್ಲಿ ದಾರು ದ್ವೇಷ ಮಾಡಥಾರೆ, ಆಂಥಾವರನ ಕೊಂದರೆ ದೋಷವಿಲ್ಲ, ಮಹಾ ಪುಣ್ಯ ಬರತದೆ. ಲಿಂಗಭಂಗವುಳ್ಳವನಾಗಿ ಚಿದಾನಂದದೇಹದಲ್ಲಿ ಮುಕ್ತಿಯಲ್ಲಿ ಆನಂದ ಅನುಭವಿಸಥಾನೆ. ದುರ್ಯೋಧನಾದಿಗಳು ಪರಮ ಪಾಪಿಗಳು, ವಿಷ್ಣುವೈಷ್ಣವ ದ್ವೇಷಿಗಳು, ದ್ರೋಹಿಗಳು. ಇಂಥಾವರನ್ನ ಕೊಂದದ್ದರಿಂದ ನಾರಾಯಣ ಪ್ರೀತ-ನಾಗಥಾನೆ. ಅವರೊಳಗೆ ಶಕುನಿ ಮಹಾಕಪಟಿ. ಪಾಶವಿದ್ಯದಿಂದ ರಾಜ್ಯ ಅಪಹಾರ ಮಾಡಿದ. ಅವನಿಂದಲೇ ನಮಗೆ ವನವಾಸ ಪ್ರಾಪ್ತಿ ಆಯಿತು. ಅಂಥಾ ಪರಮ ಪಾಪೀನ್ನ ತನ್ನ ಕೈಯಿಂದ ತಾನು ಕೊಲ್ಲಬಾರದು. ಒಬ್ಬಗೆ ಸೆರಿಹಿಡದು ತಂದಿರಥಾರೆ, ಅವನ್ನ ತಾ ಕೊಲ್ಲಬಾರದು. ರಾಯನಾದವ ರಾಯರನ್ನೇ ಕೊಲ್ಲ-ಬೇಕು. ಹಾಂಗೆ ರಾಯರ ತಮ್ಮಂದರನ್ನ ಕೊಲ್ಲಬೇಕು. ರಾಯರ ಮಕ್ಕಳನ್ನ, ಮುದುವಿ ಇಲ್ಲದವರನ್ನ ತಾ ಕೊಲ್ಲಬಾರದು.' ಈ ಧರ್ಮವು ಅರಣ್ಯಪರ್ವದಲ್ಲಿ ಹೇಳಲಿಲ್ಲ. ಮತ್ತೆಲ್ಲಿ ಹೇಳೀದೆಂದರೆ ಸಾಂಚರಾತ್ರಾಗಮದಲ್ಲಿ ಹೇಳೀದೆ. ' ರಾಯಾ ನೀನು ಬಹಳೀ ಪಾಪಕರ್ಮ ಮಾಡೀದಿ. ಪಾಶವಿದ್ಯಾನೆ ತಿಳಕೊಬಾರದು. ಅಂಥಾ ಪಾಶವಿದ್ಯ ನಿನ್ನ ಕೈಮುಟ್ಟಿ ನೀ ಆಡೀದಿ. ಲೋಕವೆಲ್ಲ ನಿನ್ನ ಬಹಳ ನಿಂದಸತದೆ. ಪಾಶ ಆಡಬೇಕೆಂದು ಎಲ್ಲೂ ಹೇಳಲಿಲ್ಲ. ನೀನು ಪಾಶವಿದ್ಯಾ ಆಡಿ, ಜೂಜು-ಕಾಲದಲ್ಲಿ ರಾಜ್ಯೈಶ್ವರ್ಯ ಹೋಗಾಡಿಸಿದ್ದೀ. ಜೂಜಿನಲ್ಲಿ ಕೊಟ್ಟದ್ದು ಬಾಯಿ-ಮ್ಯಾಲೆ ಹೊಡದು ಕಸಗೋಬಹುದು. ಕಾಮುಕನಾಗಿ ಸ್ತ್ರೀಗೆ ಎಷ್ಟೇಷ್ಟ ದ್ರವ್ಯ ಸೇರಿಸಿರಥಾನೆ. ಆ ಸ್ತ್ರೀಗೆ ಕೊಟ್ಟದ್ದು ಕಸಗೋಬಹುದು. ತಾ ಗಳಿಸಿದ ಗಳಿಕೆಲ್ಲ ಹೆಂಡತೀ ವಶವಾಗಿರತದೆ. ತನ್ನ ಅಣ್ಣತಮ್ಮಂದರಿಗೆ ಕೊಟ್ಟೀನೆಂದರೆ ಸ್ತ್ರೀ ಕೊಡ-ಪಲ್ಲಳು. ಭ್ರಾತೃಗಳಾದವರು ಅನ್ನವಸ್ತ್ರದಿಂದ ವಿಭಾಗ ತಾವು ತೊಗೋಬಹುದು.' ಈ ಪ್ರಕಾರ ನೀತಿಗಳು ಹೇಳಿ, ಇನ್ನು ಪ್ರಕೃತಸಂಗತಿ ಹೇಳಥಾನೆ.

' ಪಾಪಿ ದುರ್ಯೋಧನಾದಿಗಳು ಕಪಟತನದಿಂದ ಜೂಜನಾಡಿ ರಾಜ್ಯ ಕಸ-ಗೊಂಡಿದ್ದಾರೆ. ನಮ್ಮ ಐಶ್ವರ್ಯ ಪಾಪಿಗಳ ಕೈಯಿಂದ ಕಸಗೋಬಹುದು. ಜೂಜನಾಡುವ ಕಾಲದಲ್ಲಿ, ಅಂದೇವೆ ಏನುಕಾರಣ ಕಸಗೊಳ್ಳಲಿಲ್ಲ ಎಂದೀ, ಅಣ್ಣನಾಜ್ಞೆ ವೀರಲಿಕ್ಕೆ ವಶವಲ್ಲಾದ ಕಾರಣ ನಾವೆಲ್ಲ ಸುಮ್ಮಗಿದ್ದೆವು. ಈಗ್ಗೆ ಏನಾಯಿತು, ನಮಗೆ ಆಪ್ಪಣೆ ಕೊಡಬೇಕು. ದುರ್ಯೋಧನಾದಿಗಳ ಕೊಂದು ನಿನಗೋಸ್ಕರ ಮಹದೈಶ್ವರ್ಯ ತಂದುಕೊಟ್ಟೀವು. ಹನ್ನೆರಡು ವರ್ಷ ವನವಾಸ ಒಂದು ವರುಷ ಅಜ್ಞಾತವಾಸ ಅದೆ ಅಂತ ಅಂದೀ. ಪಾಪಿಗಳ ಸಂಗಡ ಅನೃತ

ಮಾಡಿದರೂ ದೋಷವಿಲ್ಲ. ಅಷ್ಟಾಗಿ ವೇದದಲ್ಲಿ ಒಂದು ಮಾಸಕ್ಕೆ ಒಂದು ವರುಷ ಅಂತ ಹೇಳತದೆ. ಸಾವಿರ ವರುಷ ಯಜ್ಞ ಮಾಡಬೇಕು ಎಂತ ಹೇಳಿದ್ದಕ್ಕೆ, ಮನುಷ್ಯಗೆ ನೂರು ವರುಷ ಆಯುಷ್ಯ, ಸಾವಿರ ವರುಷ ಯಜ್ಞ ಎಲ್ಲಿಂದ ಮಾಡಥಾನೆ! ಅದಕಾರಣ ಒಂದು ವರುಷ ಎಂಬೋದು ಒಂದು ತಿಂಗಳು. ಓಪಾಸನಾದಿ ಕರ್ಮಗಳು ಸಾವಿರ ತಿಂಗಳು ಮಾಡಿದ ಪಕ್ಷವೇ, ಸಾವಿರ ವರುಷ ಫಲ ಬರತದೆ. ನಮಗೆ ಹನ್ನೆರಡು ತಿಂಗಳು ವನವಾಸ ಇಂದಿಗೆ ಆಯಿತು. ಇನ್ನು ಒಂದು ತಿಂಗಳು ಅಜ್ಞಾತವಾಸ ಮುಗಿಸಿದರೆ ನಿನ್ನ ವಚನ ಸತ್ಯ ಆಗತದೆ, ನಮ್ಮ ಕಾರ್ಯವೂ ಸಾಧಿಸಿ ಬರತದೆ. ನಮಗೆ ಹನ್ನೆರಡು ತಿಂಗಳು ವನವಾಸ ಆದ್ದರಿಂದ ಮಿತ್ರ-ಬಾಂಧವರಿಗೆ ದುಃಖವಾಗೇದೆ. ದುರ್ಯೋಧನಾದಿ ವೈರಿಗಳಿಗೆ ಬಹಳ ಸುಖ ಹೆಚ್ಚೀದೆ. ರಾಯ, ಶೀಘ್ರ ರಾಜ್ಯ ಸಂಪಾದಿಸಬೇಕು. ವೈರಿಗಳ ತಲೀಮ್ಯಾಲೆ ಕಾಲು ಕೊಟ್ಟು ಸಾಮ್ರಾಜ್ಯ ಆಳಿ, ಸಜ್ಜನರಿಗೆ ಸುಖೋದ್ರೇಕ ಮಾಡಿಕೊಡು. ಬ್ರಹ್ಮಾದಿಗಳ ವರಬಲದಿಂದ, ಜರಾಸಂಧ ಮೊದಲಾದ ದೈತ್ಯರು ಬಹಳೇ ಬಲವಂತ ರಾಗಿದ್ದರು. ನಮ್ಮ ಸ್ವಾಮಿ ಶ್ರೀಕೃಷ್ಣ ಪಾಪಿಗಳನ್ನ ಕೊಂದನೋ ಇಲ್ಲವೋ! ಕೃಷ್ಣ-ವೇದವ್ಯಾಸರ ಅನುಗ್ರಹ ನಮ್ಮ ಮ್ಯಾಲೆ ಬಹಳವದೆ. ಪಾಂಚಾಲನಗರದಲ್ಲಿ ದ್ರೌಪದೀ ಸಮಿತ್ತ ದ್ರುಪದರಾಯ ಮೊದಲಾದವರಿಗೂ, ನಮಗೆಲ್ಲರಿಗೂ ದಿವ್ಯ ಚಕ್ಷುಸ್ಸನ್ನ ಕೊಟ್ಟು, ನಮ್ಮನಮ್ಮ ಹೆಂಡಿರು ನಮ್ಮನಮ್ಮ ಸಮೀಪದಲ್ಲಿ ತೋರಿಸಿದ್ದಾನೆ. ಸ್ವಾಮೀ ಮಹಿಮ ಪ್ರತ್ಯಕ್ಷಸಿದ್ಧವಾಗೇದೆ, ನಿನಗೇ ಅನುಭವವದೆ. ರಾಯ, ಪಾಪಿಗಳ ಕೊಲ್ಲೋದಕ್ಕೆ ಆಲಸ್ಯ ಮಾಡಬ್ಯಾಡ. ಶೀಘ್ರ ಸಾಮ್ರಾಜ್ಯ ಇಚ್ಛ ಮಾಡು' ಹೀಂಗಂತ ಭೀಮಸೇನ ಧರ್ಮರಾಯಗೆ ಹೇಳಿದ.

ಭೀಮಸೇನ ಆಡಿದ ವಚನಗಳನ್ನು ಧರ್ಮರಾಯ ಕೇಳಿ 'ಎಲೋ ಅಪ್ಪ ಭೀಮಸೇನ, ನನ್ನ ವಚನ ಹುಸಿ ಮಾಡಬ್ಯಾಡ. ನೀನು ಹೇಳೋದು ಶಾಸ್ತ್ರಾರ್ಥ ಅಹುದು. ಲೋಕವಿರುದ್ಧ ತೋರತದೆ. ನಿನ್ನ ವಚನಗಳು ನನ್ನ ಮರ್ಮಸ್ಥಳ ಛೇದಿಸಿ ಬಹಳ ದುಃಖ ಕೊಡತವೆ. ನನ್ನ ಕರುಳ ಕಡೀಬ್ಯಾಡ. ಅಣ್ಣನೆಂದು ಬಹುಮಾನ ಕೊಡತಿದೀ, ವಚನದಿಂದ ದುಃಖಬಡಸ್ತಿದೀ. ಅಂದೇವೆ ಜೂಜ ನಾಡುವ ಕಾಲದಲ್ಲಿ, ನೀವು ಧರ್ಮರಾಯನ ಆಜ್ಞದೊಳಗಿಲ್ಲ ಎಂದು ಏನುಕಾರಣ ಅನ್ನಲಿಲ್ಲ! ಅಂದೇ ನನಗೆ ಬುದ್ಧಿ ಹೇಳಬಾರದಿತ್ತೆ! ನನ್ನ ವಚನ ಹುಸೀ ಮಾಡ-ಬ್ಯಾಡ ಹನ್ನೆರಡು ವರುಷ ವನವಾಸ. ಒಂದು ವರುಷ ಅಜ್ಞಾತವಾಸ ಮಾಡಿ ರಾಜ್ಯ ಇಚ್ಛಿಸೇನು. ಇದಕ್ಕೆ ತಪ್ಪಿದರೆ ನನ್ನಾಣೆ! ಎಲೋ ಅಪ್ಪ ಭೀಮಸೇನ, ನಿನ್ನ ಮಾತು ವೀರೋಹಾಂಗೆ ಇಲ್ಲ. ಹದಿಮೂರು ವರುಷ ತಿದಮ್ಯಾಲೆ, ಅವಶ್ಯ ರಾಜ್ಯ ಇಚ್ಛಿಸೇನು.' ಈ ಪ್ರಕಾರ ಪ್ರತಿಜ್ಞ ಮಾಡಿದನು. 'ಹದಿಮೂರು ವರುಷ ತಿದಮ್ಯಾಲೆ, ಭೀಷ್ಮ-ದ್ರೋಣಾದಿಗಳು ಮಹಾ ಬಲಿಷ್ಠರು, ದಾರು ಗೆಲ್ಲಬೇಕು!

ದ್ರೋಣ-ಭೀಷ್ಮರು ಪರಶುರಾಮ ಕೊಟ್ಟಂಥ ಮಂತ್ರದಿಂದ ಮಹಾಅಸ್ತ್ರಜ್ಞರಾಗ್ಯಾರೆ. ಎಲೈ ಭೀಮಸೇನ, ನೀನು ಅಸ್ತ್ರದಿಂದ ಯುದ್ಧ ಮಾಡೋವನಲ್ಲ. ಅವರಿಗೆ ಪ್ರತಿ-ವೀರರು ದಾರಿದ್ದಾರೆ! ಗುರುಹಿರೇರ ಕೂಡ ಯುದ್ಧ ಮಾಡಲಿಕ್ಕೆ, ಕೊಲ್ಲಲಿಕ್ಕೆ ಬಾರದು. ಅಸ್ತ್ರದಿಂದ ಕೊಲ್ಲಬೇಕು. ನೀನಾದರೂ ಅಸ್ತ್ರಜ್ಞನಹುದು. ಆದರೂ ಶಸ್ತ್ರಾಸ್ತ್ರದಿಂದ, ದೇವರ ಆಜ್ಞೆ ಆದಹೊರ್ತು ಯುದ್ಧ ಮಾಡುವಾತನಲ್ಲ. ಈ ಮಹಾ ಕರ್ತವ್ಯ ಅರ್ಜುನನಿಂದ ಪ್ರತಿಜ್ಞೆ ಮಾಡಿಸಬೇಕು' ಎಂದು ಧರ್ಮರಾಯ ಚಿಂತಿ ಹಚ್ಚಿಕೊಂಡು ಕುಳಿತಿರಲಿಕ್ಕೆ, 'ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದಂಥ ಸ್ವಾಮಿ ಇದ್ದಾನೆ. ಚಿಂತಿ ಮಾಡಬ್ಯಾಡ' ಈ ಪ್ರಕಾರ ಭೀಮಸೇನ ಹೇಳಿ, ಉತ್ತರಕ್ಕೆ ಪ್ರತಿಉತ್ತರ ನಡಸಬೇಕಾದರೆ ಸ್ನೇಹಭಂಗವಾದೀತು, ತಾ ಬಂದ ಪ್ರಯೋಜನವಾಯಿತು, ಹದಿನಾಲ್ಕು ವರುಷಕ್ಕೆ ರಾಜ್ಯ ಆಳಬೇಕೆಂಬೋ ಹಾಂಗೆ ಧರ್ಮರಾಯನ ಕೂಡ ಪ್ರತಿಜ್ಞೆ ಮಾಡಿಸಿ, 'ರಾಯ ಇನ್ನು ಸರಿಬಂಧಾಂಗೆ ಮಾಡು' ಎಂದು ಭೀಮಸೇನ ತನ್ನ ಸ್ಥಳಕ್ಕೆ ಹೋದನು.

ಧರ್ಮರಾಯ ಚಿಂತಾತುರನಾಗಿ 'ಭೀಷ್ಮದ್ರೋಣಾದಿಗಳು ಮಹಾ ಬಲಿಷ್ಠರಿದ್ದಾರೆ. ಅರ್ಜುನನ್ನ ಪ್ರತಿವೀರನ ಮಾಡಬೇಕಾದರೆ, ಯುದ್ಧಕ್ಕೆ ಸಿಂದರಸಬೇಕಾದರೆ ಸಂಪೂರ್ಣ ವಿದ್ಯ ಅರಿತವನಲ್ಲ.' ಹೀಂಗೆ ಧರ್ಮರಾಯ ಚಿಂತಿಸತಾ ಕುಳಿತಿರಲಿಕ್ಕೆ, ಸಾಕ್ಷಾತ್ ವೇದವ್ಯಾಸನು ಪ್ರತ್ಯಕ್ಷನಾದನು. 'ರಾಯ, ಏನುಕಾರಣ ಚಿಂತಿಸತಿದ್ದಿ! ನಾನು ಮಂತ್ರ ಕೊಡಥೀನಿ. ಆ ಮಂತ್ರಸಾಮರ್ಥ್ಯಯಿಂದ ಸರ್ವದೇವತಿಗಳ ದರ್ಶನವಾದೀತು. ಅಷ್ಟದಿಕ್ಪಾಲಕರು ತಮ್ಮ ಅಸ್ತ್ರಗಳ ಕೊಟ್ಟಾರು' ಎಂದು ಹೇಳಿದನು. ಅರ್ಜುನ ಬ್ಯಾರೆ ದೂರ ಹೋಗಿದ್ದಿಲ್ಲ, ಸಮೀಪದಲ್ಲೇ ಇರಲಿಕ್ಕೆ, ಅರ್ಜುನಗೆ ಏನುಕಾರಣ ಉಪದೇಶ ಮಾಡಲಿಲ್ಲ ಎಂದರೆ ದೊಡ್ಡ ದೇವತಿ, ಪ್ರತ್ಯಕ್ಷ ವೇದವ್ಯಾಸ ತಾನೇ ಹೇಳಬೇಕಾದರೆ, ಅದರಿಂದ ಅಧಿಕ ಫಲವಾದೀತು. ಅರ್ಜುನ ಭೀಷ್ಮದ್ರೋಣಾದಿಗಳ ಗೆಲ್ಲುವಲ್ಲಿ ತಾತ್ಪರ್ಯವದೆ. ಆದಕಾರಣ, ಅರ್ಜುನನ ಯೋಗ್ಯತ ಇಷ್ಟೇ ಎಂದು ತಿಳದು, ಧರ್ಮರಾಯಗೆ ಮಂತ್ರ ಹೇಳಿ, ವೇದವ್ಯಾಸ ಬದರಿಕಾಶ್ರಮಕ್ಕೆ ಹೋದನು. ವೇದವ್ಯಾಸ ಹೋದವ್ಯಾಲೆ ಫಲ್ಗುಣನ ಕರೆದು, ಧರ್ಮರಾಯ ವೇದವ್ಯಾಸ ಕೊಟ್ಟ ಮಂತ್ರೋಪದೇಶ ಮಾಡಿದನು. ಅರ್ಜುನ ಮಂತ್ರಸಿದ್ಧಿ ಮಾಡಿಕೋಬೇಕೆಂದು, ಧರ್ಮರಾಯಗೆ ಭೀಮಸೇನಗೆ ನಮಸ್ಕಾರ ಮಾಡಿ, ನಕುಲ ಸಹದೇವರನ್ನ ಅಪ್ಪಿಕೊಂಡು, ತಪಸ್ಸು ಮಾಡಲಿಕ್ಕೆ ಇಂದ್ರಕೀಲಕ ಪರ್ವತಕ್ಕೆ ಹೋದನು.

ಅರ್ಜುನ, ಅಲ್ಲಿ ಆರು ತಿಂಗಳು ಒಂದೇ ಕಾಲೀಲಿ ನಿಂತು, ಗಾಳಿ ಆಹಾರ ಮಾಡಿಕೊಂಡು, ತೀವ್ರ ತಪಸ್ಸು ಮಾಡಲಿಕ್ಕೆ, ಮೂಕನೆಂಬ ಅಸುರ ವರಾಹರೂಪ ಧರಿಸಿ, ತನ್ನ ಕೋರೆದಾಡಿಯಿಂದ ಅರ್ಜುನನ್ನ ಸೀಳೇನೆಂದು ಬರಲಿಕ್ಕೆ, ಕಾಡು-

ಹಂದಿ ತನ್ನಮ್ಯಾಲೆ ಬರತದೆಂದು ಗಾಂಡೀವಧನುಸ್ಸು ಹೆದಿಗೂಡಿಸಿ, ವಜ್ರಕ್ಕೆ ಸರಿಯಾದ ಬಾಣಗಳಿಂದ ಎಚ್ಚಿದನು. ಮಹಾರುದ್ರ ಪಾರ್ವತೀಯುಕ್ತನಾಗಿ ಕಿರಾತರೂಪ ಧರಿಸಿ, ಧನುರ್ಬಾಣಗಳ ಹಿಡಕೊಂಡು ವರಾಹನ್ನ ಬೆನ್ನಟ್ಟಿ ಬಾಣಪ್ರಯೋಗ ಮಾಡಥಾನೆ. ತ್ರಿಯಂಬಕ, ಅರ್ಜುನ ಇವರುಗಳ ಬಾಣಗಳಿಂದ ಮೂಕಾಸುರ ಸತ್ತುಹೋದನು. 'ಈ ವರಾಹನ್ನ ಬೆನ್ನಟ್ಟಿ ನಾನು ಬಂದಿರಲಿಕ್ಕೆ, ನಾ ಲಕ್ಷ್ಯ ಮಾಡಿದಂಥ ಕಾಡುಹಂದಿಗೆ ನೀನು ಹ್ಯಾಂಗೆ ಹೊಡದಿ?' ಈ ಪ್ರಕಾರ ಕಿರಾತರೂಪಿ ಮಹಾರುದ್ರ ಮಾತನಾಡಿ ಅರ್ಜುನನ್ನ 'ಯುದ್ಧಕ್ಕೆ ಬಾ' ಎಂದನು. ಮಹಾರುದ್ರ ಎಂದು ತಿಳೀದೆ 'ಎಲೋ, ನಿನಗೆ ಇಷ್ಟು ಅಹಂಕಾರವೆ! ನನ್ನ ಗಾಂಡೀವಧನುಸ್ಸಿನಿಂದ ವಿನಾಶ ಮಾಡಥೀನಿ!' ಎಂದು ಅರ್ಜುನ ಮಾತನಾಡಿದನು. ತರುವಾಯ ಪರಸ್ಪರ, ಪುರುಷಶ್ರೇಷ್ಠರು ಯುದ್ಧ ಮಾಡಹೊಕ್ಕರು. ಅರ್ಜುನ ಅಸ್ತ್ರ ಅಭಿಮಂತ್ರಿಸಿ ಬಾಣಪ್ರಯೋಗ ಮಾಡಲಿಕ್ಕೆ, ಮಹಾರುದ್ರ ಅಷ್ಟೂ ಅಸ್ತ್ರ ನುಂಗಿಬಿಟ್ಟ. ಅಸ್ತ್ರಗಳು ಅಕ್ಷಯ ಬತ್ತಳಿಕೆಯೊಳಗೆ ತೀರಿದವು. ಇಷ್ಟಾಗಲಿಕ್ಕೆ ಅರ್ಜುನ ತನ್ನ ಗಾಂಡೀವಧನುಸ್ಸಿನಿಂದ ಮಹಾರುದ್ರನ್ನ ಹೊಡೆಯ. ಹೊಕ್ಕ. ಮಹಾರುದ್ರ ಗಾಂಡೀವಧನುಸ್ಸು ನುಂಗಿಬಿಟ್ಟ. ಆದರ ತರುವಾಯ ಉಭಯತರಿಗೂ ದ್ವಂದ್ವಯುದ್ಧವಾಯಿತು. ಮಹಾರುದ್ರ ಅರ್ಜುನನ್ನ ಕೈಕಾಲು ಕಟ್ಟಿ ದೂರದಲ್ಲಿ ಈಡ್ಯಾಡಲಿಕ್ಕೆ, ಅರ್ಜುನ ಮೂರ್ಛಿ ಉಳ್ಳವನಾಗಿ ಬಿದ್ದನು.

ಅರ್ಜುನಗೆ ಸೋಲೋಣವಾಗಬಾರದೆಂದು, ದೇವೇಂದ್ರ ಪಾರಿಜಾತಹರಣಕಾಲದಲ್ಲಿ ಬೇಡಿಕೊಂಡಿದ್ದ. ಅರ್ಜುನಗೆ ಹ್ಯಾಂಗೆ ಸೋಲೋಣವಾಯಿತೆಂದರೆ, ಮಹಾರುದ್ರ ಮೂಲನಾರಾಯಣನ್ನ, ತನ್ನಕಿಂತ ನೀಚನ ಕೈಯ ಸೋಲೋಣವಾಗಬಾರದೆಂದು ಬೇಡಿಕೊಂಡಿದ್ದ. ಮಹಾರುದ್ರ ಮುಂದಾಗಿ, ಸ್ವಾಮೀ ಅನುಗ್ರಹದಿಂದ ತಾನೇ ಜಯಿಸಬೇಕೆಂದು ವರವು ಬೇಡಿಕೊಂಡಿದ್ದ. ಆದಕಾರಣ ಆ ವರವು ಸತ್ಯ ಮಾಡಬೇಕಾಗಿ ಉಮಾಪತಿ ಶಂಕರ ಶ್ವೇತವಾಹನನ್ನ ಗೆದ್ದ. ವೇದವ್ಯಾಸ ಕೇವಲ ವೈಷ್ಣವಮಂತ್ರ ಹೇಳಿದ್ದಿಲ್ಲ. ಉಭಯಾತ್ಮಕಮಂತ್ರ ಯುಧಿಷ್ಟಿರನ ಕೈಯ ಹೇಳಿಸಿದ್ದ. ಕೇವಲ ವೈಷ್ಣವಮಂತ್ರ ಹೇಳಿದ್ದರೆ, ಅರ್ಜುನನ ಕೈಯ ಮಹಾರುದ್ರ ಸೋಲಬೇಕಾಗಿತ್ತು. ಸರ್ವಜಯವುಳ್ಳವನಾಗಿ ಧರ್ಮ ಉಳ್ಳವನಾದಾನು, ಶ್ರೇಷ್ಠಾಪರಾಧದಿಂದ ಅರ್ಜುನ ಕೆಟ್ಟುಹೋದಾನೆಂದು ಕೇವಲ ವೈಷ್ಣವ ಮಂತ್ರ ಕೊಟ್ಟದ್ದಿಲ್ಲ. ಅರ್ಜುನನು ಮೂರ್ಛಿ ಉಳ್ಳವನಾಗಿ ಬಿದ್ದು, ಎಚ್ಚರ ಉಳ್ಳವನಾಗಿ ನದಿಯಲ್ಲಿ ಸ್ನಾನ ಮಾಡಿ, ವೇದವ್ಯಾಸ ಹೇಳಿದ ಮಂತ್ರದಿಂದ ಮಹಾರುದ್ರನ ಪೂಜಿ ಮಾಡಲಾಗಿ, ಗಂಧಪುಷ್ಪ ಮೊದಲಾದ ಪೂಜಾದ್ರವ್ಯಗಳನ್ನು ಕಿರಾತರೂಪೀ ಶಿವನ ದೇಹದಮ್ಯಾಲೆ ಕಂಡ. ಆಗ ತಿಳಿದ, ಮಹಾರುದ್ರ ಕಿರಾತರೂಪ ಧರಿಸಿಬಂದಾನೆಂದು. ಅರ್ಜುನ ಶಂಕರಗೆ ನಮಸ್ಕಾರ ಮಾಡಲಿಕ್ಕೆ, ಮಹಾ-

ರುದ್ರ ಅರ್ಜುನನಿಗೆ ತುಷ್ಟನಾಗಿ ತನ್ನ ಪಾಶುಪತಾಸ್ತ್ರ ಕೊಟ್ಟ. ಗಾಂಡೀವ ಮೊದ ಲಾದುವು ತಿರುಗಿ ಕೊಟ್ಟ. ಅಲ್ಲೇ ಅಷ್ಟದಿಕ್ಪಾಲಕರು ಬಂದಿದ್ದರು, ತಮ್ಮತಮ್ಮ ಅಸ್ತ್ರಗಳ ಅರ್ಜುನನಿಗೆ ಕೊಟ್ಟರು.

ದೇವೇಂದ್ರ ತನ್ನ ಮಗನ ಪರಾಕ್ರಮ ಕಂಡು ಸ್ನೇಹದಿಂದ ತಿಪ್ಪಿಕೊಂಡನು. 'ನೀನು ಶೂರನಹುದು. ಯುದ್ಧದಿಂದ ಮಹಾರುದ್ರನ್ನ ತುಷ್ಟಿಬಡಿಸಿದಿ. ಇನ್ನು ನನ್ನ ಸ್ವರ್ಗಕ್ಕೆ ಬಾ. ಹ್ಯಾಂಗೆ ಬರಲೆಂದೀ, ನನ್ನ ರಥ ಕೊಟ್ಟು ಸಾರಥಿಯನ್ನ ಕಳಸಥೀನಿ, ಬಾ' ಎಂದು ಹೇಳಿಹೋಗಿ, ಸಾರಥಿ ಮಾತಲಿ ಸಂಗಡ ರಥ ಕಳುಹಲು, ಅರ್ಜುನ ಐವತ್ತುಲಕ್ಷ ಯೋಜನ ಸ್ವರ್ಗಕ್ಕೆ ಹೋದನು. ಸಮಸ್ತ ದೇವತಿಗಳೂ ದೇವೇಂದ್ರನ ಮಗನ್ನ ಎದುರುಗೊಂಡು ಕರಕೊಂಡುಹೋಗಿ, ದೇವೇಂದ್ರನ ಸಿಂಹಾಸನದಲ್ಲಿ ಕುಳ್ಳಿರಿಸಿದರು. ದೇವೇಂದ್ರ, ಪರಮ ಪ್ರೀತಿಯಿಂದ ಕುರುಪ್ರವೀರನ್ನ ತಿಪ್ಪಿಕೊಂಡು, ಮಗನ ಮುಖಚೆಲುವಿಕೆ ನೋಡಿ ಮಹಾಸಂತೋಷವುಳ್ಳವನಾದ. ಅರ್ಜುನ ತನ್ನ ತಂದೀ ಸಮೀಪದಲ್ಲಿ, ಐದು ವರುಷ ಸ್ವರ್ಗದಲ್ಲಿದ್ದು ವಿದ್ಯ ಕಲಿತನು. ಸಕಲ ವಿದ್ಯ ಸಂಪಾದಿಸಿದ. ಅರ್ಜುನ ನರಾವೇಶದಿಂದ ಬಹಳೇ ಚಲುವ. ಇಂಥಾ ಸುಂದರ ಪುರುಷನ್ನ ಭೋಗಿಸಬೇಕೆಂದು ಊರ್ವಶೀ ಇಚ್ಛಿಸಿದಳು. ವಾಲ್ಗೈಸಲಿಕ್ಕೆ ಬಂದು ಊರ್ವಶೀ ತನ್ನ ಹಾವಭಾವಗಳ ತೋರಿಸಿ, ಅರ್ಜುನನ ತೊಡೀ ವ್ಯಾಲೆ ಕೂಡ್ರಲಿಕ್ಕೆ ಬಂದಳು. ಊರ್ವಶೀ ಕೂಡ ಅರ್ಜುನ ಮಾತನಾಡಿದ. 'ನಾವು ಮನುಷ್ಯರು, ನೀನು ದೇವತಾ ಅಪ್ಸರಸ್ತ್ರೀ, ನಮ್ಮ ಕುಲಕ್ಕೆ ತಾಯಿ. ನಿನ್ನ ದೆಸಿಯಿಂದ ನಮ್ಮ ಪೂರ್ವಜರು ಹುಟ್ಟ್ಯಾರೆ. ನಿನ್ನ ನಾನು ಭೋಗ ಮಾಡಬಾರದು. ಅದಲ್ಲದೆ, ನಮ್ಮ ತಂದೀ ದೇವೇಂದ್ರನ ಭೋಗಸ್ತಿದ್ದೀ. ನಿನ್ನ ಭೋಗ ಮಾಡಿದ್ದರಿಂದ ಬಹಳ ದೋಷ ಬಂದೀತು. ಹೀಂಗಂತ ಅರ್ಜುನ ಮಾತ-ನಾಡಲಿಕ್ಕೆ 'ನಾನು ಕಾಮಾತುರಳಾಗಿ ಬಂದಿರಲಿಕ್ಕೆ ನನ್ನ ಭೋಗಿಸವಲ್ಲಿ. ಆದ-ಕಾರಣ ಹೇ ಅರ್ಜುನ, ನೀನು ಷಂಡನಾಗು' ಹೀಂಗಂತ ಶಾಪ ಕೊಟ್ಟಳು. ಈ ವಾರ್ತೆ ದೇವೇಂದ್ರ ಕೇಳಿ ತನ್ನ ಮಗಗೆ ಕೊಟ್ಟಂಥ ಶಾಪ ಪರಿಹರಿಸಲಾಪ ಷಂಡತ್ವ ಮುಂದೆ ಕಾರ್ಯಕ್ಕೆ ಬಂದೀತೆಂದು, ಅರ್ಜುನನ ವ್ಯಾಲೆ ದೇವೇಂದ್ರ ಅನುಗ್ರಹ ಮಾಡಿ 'ಒಂದು ವರುಷ ಷಂಡರೂಪ ಧರಿಸು, ಅಜ್ಞಾತವಾಸದಲ್ಲಿ ಕೆಲಸಕ್ಕೆ ಬಂದೀತು.' ಹೀಂಗಂತ ದೇವೇಂದ್ರ ವರವು ಕೊಟ್ಟ. ಚಿತ್ರಸೇನ ಗಂಧರ್ವ ಮೊದಲೇ ಅರ್ಜುನನಿಂದ ಆಗ್ನ್ಯಾಸ್ತ್ರ, ಅಂಗಾರವರ್ಣನಾಗಿ ಸಂಪಾದಿಸಿದ್ದ. ತನ್ನ ಗಂಧರ್ವವಿದ್ಯ ಹೇಳೇನೆಂದರೆ, ಕಾಲಾಂತರದಲ್ಲಿ ಹೇಳುವಿಯಂತೆ ಅಂತ ಅರ್ಜುನ ಅಂದಿದ್ದ. ಅರ್ಜುನ ಸ್ವರ್ಗಕ್ಕೆ ಹೋದಾಗ ಗಂಧರ್ವವಿದ್ಯ ಚಿತ್ರಸೇನನಿಂದ ಕಲಿತನು. ಸ್ವರ್ಗದಲ್ಲಿ ದೇವೇಂದ್ರನ ಅರ್ಧಾಸನದಲ್ಲಿ ಪೂಜಿಗೊಳತ ಐದುವರುಷ ಅರ್ಜುನ ವಿದ್ಯ ಕಲಿತನು. ಇನ್ನು ಹರಿವಂಶ ಕಥ ಹೇಳಥಾರೆ.

ಶ್ರೀಕೃಷ್ಣ ಧರ್ಮರಾಯನ ಮಾತನಾಡಿಸಲಿಕ್ಕೆ ಅರಣ್ಯಕ್ಕೆ ಬಂದ. ತನ್ನ ತಂಗಿ ಸುಭದ್ರಾನ್ನ, ಸೋದರಳಿಯ ಅಭಿಮನ್ಯುವನ್ನ ಕರಕೊಂಡು ದ್ವಾರಾವತಿಗೆ ಹೋಗಿದ್ದ. ಸ್ವಾಮಿ ಭಕ್ತರ ಜನ್ಮಜರಾದಿ ದೋಷಗಳ ಪರಿಹರಿಸೋ ಅಂಥಾ ಜನಾರ್ದನ ದ್ವಾರಾವತಿಗೆ ಹೋದವ್ನ್ಯಾಲೆ, ಲೋಕಮೋಹನಾರ್ಥ ಒಂದು ವಿಚಿತ್ರ-ಕರ್ಮ ತೋರಿಸ್ಯಾನೆ. ಪೂರ್ವದಲ್ಲಿ ಮಹಾರುದ್ರಗೆ ವರವು ಕೊಟ್ಟಿದ್ದ. " ನಾನು ದ್ವಾಪರಯುಗದಲ್ಲಿ ಕೃಷ್ಣಾವತಾರ ಮಾಡ್ತೀನು. ನೀನು ಮೂಲದೇವತಿ, ನೀನು ಕೈಲಾಸದಲ್ಲಿ ಇದ್ದಾಗಲೇ ಅಸುರರ ಮೋಹಿಸಬೇಕಾಗಿ, ನನ್ನ ಹೆಂಡತಿಯಿಂದ ಯುಕ್ತನಾಗಿ, ಮಕ್ಕಳಾಗಬೇಕೆಂದು ನಿನ್ನ ಕೈಲಾಸಪರ್ವತಕ್ಕೆ ಬಂದೇನು. ನಾನು ಸರ್ವೋತ್ತಮ ದೇವತಿ ಆದರೂ ನಿನ್ನ ಆರಾಧನಿ ಮಾಡಿ ವರವು ಬೇಡೀನು. 'ನಾನು ಭೃತ್ಯ, ಸರ್ವೋತ್ತಮ ದೇವತಿಗೆ ಹ್ಯಾಂಗೆ ವರವು ಕೊಡಲಿ' ಎಂದು ಅಂಜಬ್ಯಾಡ. ನನಗೆ ವರವು ಕೊಡು" ಎಂದಿದ್ದ. ಸ್ವಾಮಿ ಯಾದವಕುಲದಲ್ಲಿ ಮನುಷ್ಯಜನ್ಮದಿಂದ ಕೃಷ್ಣಾವತಾರ ಮಾಡಿ, ಮಹಾರುದ್ರನ ಸಮೀಪಕ್ಕೆ ಬಂದಾನೆ. ಮೂಲನಾರಾಯಣ ಮೊದಲಿಗೆ ಮಹಾರುದ್ರಗೆ ಹೇಳಿದ್ದ. 'ಲೋಕದೊಳಗೆ ಸಕಲರಿಗೆ ನೀನೆ ಸರ್ವೋತ್ತಮನೆಂದು ಹೇಳಿಕೊ. .ನನ್ನ ಮಹಿಮ ಲೋಕದೊಳಗೆ ಪ್ರಕಟ ಆಗದಹಾಂಗೆ ಮಾಡು. ದುರ್ಜನರು ಏನಂತ ತಿಳಿದಾರು, ಉತ್ತಮ-ದೇವತಿಗಳು ನೀಚರು, ನೀಚದೇವತಿಗಳು ಉತ್ತಮರು, ಹೀಂಗೆ ಲೋಕದೊಳಗೆ ದುರ್ಜನರಿಗೆ ವಿಥ್ಯಾಜ್ಞಾನ ತಿಳಿಸು.' ಹೀಂಗೆಂದು ಮೂಲನಾರಾಯಣ ಶಂಕರಗೆ ಹೇಳಿದ್ದ. ಸ್ವಾಮೀ ಆಜ್ಞ ಮೀರಲಿಕ್ಕೆ ಬಾರದು ಎಂದು, ಮಹಾರುದ್ರ ಕೇವಲ ವೈಷ್ಣವನಾದರೂ, ಶಿವ ಸರ್ವೋತ್ತಮನೆಂದು, ಅಜ್ಞಾನಿಜನರಿಂದ ತಿಳಿದಿಹೋನು. ಅಜ್ಞಾನಿಗಳು ವಿಥ್ಯಾಜ್ಞಾನ ಸಂಪಾದಿಸಬೇಕಾಗಿ, ರುಕ್ಮಿಣೀದೇವಿ ಸ್ವಾಮೀ ಅಭಿಪ್ರಾಯ ಬಲ್ಲಾಕೆಯಾದ್ದರಿಂದ, ತನಗೆ ಪ್ರದ್ಯುಮ್ನ ಮಗ ಇದ್ದರೂ, ಬಲಿಷ್ಠ ಮಗನಾಗಬೇಕೆಂದು ಬೇಡಿಕೊಂಡಳು. ಸ್ವಾಮಿ ದೈತ್ಯರ ಮೋಹಿಸಬೇಕಾಗಿ, ಗರುಡವಾಹನನಾಗಿ ಬದರಿಕಾಶ್ರಮಕ್ಕೆ ಬಂದನು. ದೇವರ ಆಜ್ಞದಿಂದ ಮಹಾರುದ್ರ ಮೋಹಶಾಸ್ತ್ರಗಳ ಲೋಕಕ್ಕೆ ಮಾಡಿಕೊಟ್ಟಿಹ. ಜೀವ-ಪರಮಾತ್ಮ ಐಕ್ಯ, ಜಗತ್ತು ವಿಥ್ಯಾಭೂತ, ಇಂಥಾ ದುಶ್ಶಾಸ್ತ್ರದಿಂದ ಲೋಕದ ದುರ್ಜನರೆಲ್ಲ ಮೋಹಿತ-ರಾದರು. ಶಿವ ಸರ್ವೋತ್ತಮನೆಂದು ತಿಳಿದಿಹೋರು. ಇದನ್ನೇ ಬಲಿಸಬೇಕಾಗಿ, ದುಷ್ಟಜನರಿಗೆ ಶಕ್ಕಿಸೋ ಸಲುವಾಗಿ ಬದರಿಕಾಶ್ರಮಕ್ಕೆ ಬಂದನು. ಏನುಕಾರಣ ಬಂದನೆಂದು ಮುನಿಗಳು ಸ್ವಾಮಿಗೆ ಅರ್ಘ್ಯಾದಿ ಪೂಜಿ ಮಾಡಿದರು. ಕೃಷ್ಣ ದ್ವಾರಾವತಿಯಲ್ಲಿದ್ದಾನೆಂದು ಘಂಟಾಕರ್ಣ, ಕರ್ಣನೆಂಬ ಎರಡು ಪಿಶಾಚಿಗಳು ಮಹಾರುದ್ರನ ಅಪ್ಪಣಿ ಕೊಂಡು ದ್ವಾರಾವತಿಗೆ ಹೋಗಥಾರೆ. ಮಾರ್ಗದಲ್ಲಿ ಬದರಿಕಾಶ್ರಮದಲ್ಲಿ ಋಷಿಗಳ ಮಧ್ಯದಲ್ಲಿ ಕೃಷ್ಣ ಕುಳಿಥಾನೆ. ಕೃಷ್ಣ ಸರ್ವೋತ್ತಮ

ದೇವತಿ ಎಂದು ತಿಳೀದೆ, ತಮ್ಮ ಪಿಶಾಚಜೇಷ್ಟ ಮಾಡಿದರು. ತರುವಾಯ ಜ್ಞಾನದಿಂದ ಧ್ಯಾನವುಳ್ಳವರಾಗಲಿಕ್ಕೆ, ಹೃತ್ಕಮಲದಲ್ಲಿ ಕೃಷ್ಣ ಪರಮಾತ್ಮನೆಂದು ತಿಳದುಕೊಂಡರು. 'ಸ್ವಾಮಿ, ನಿನ್ನ ಮಹಿಮಿ ತಿಳೀದು. ನಿನ್ನ ಕೂಡ, ನಾವು ಪಿಶಾಚಿಗಳು, ಪಿಶಾಚಜೇಷ್ಟ ಮಾಡಿದೆವು' ಎಂದು ಸರ್ವಾಪರಾಧ ಕ್ಷಮಿಸಲೋಸುಗ ಶ್ರೀಕೃಷ್ಣಗೆ ನಮಸ್ಕಾರ ಮಾಡಲಿಕ್ಕೆ, ಸ್ವಾಮಿ ತನ್ನ ಕೈಕಮಲ ಅವರ ಮ್ಯಾಲೆ ಎಳಿಯಲಿಕ್ಕೆ, ಪಿಶಾಚಜನ್ಮ ಹೋಯಿತು. ತಮ್ಮ ಮೂಲರೂಪ ಗಂಧರ್ವದೇಹದಿಂದ ಗಂಧರ್ವವಿದ್ಯ ತೋರಿಸಿದರು. ಸ್ವಾಮಿ ಅಪ್ಪಣಿ ಕೊಂಡು ಕೈಲಾಸಶಿಖರಕ್ಕೆ ಹೋದರು.

ಸ್ವಾಮಿ ಬದರಿಕಾಶ್ರಮದಿಂದ ಕೈಲಾಸ ಶಿಖರಕ್ಕೆ ಹೋಗಿ, ಕೈಲಾಸಪರ್ವತಕ್ಕೆ ಲೋಕಮೋಹನಾರ್ಥ ನಮಸ್ಕಾರ ಮಾಡಿ, ತಪಸ್ಸು ಮಾಡಿ, ದುರ್ಜನರ ಮೋಹಿಸಿಬಿಟ್ಟ. ಹನ್ನೆರಡು ವರುಷ ತಪಸ್ಸು ಮಾಡೇವೆಂದಿದ್ದ. ಇನ್ನು ಮಾಡಬೇಕಲ್ಲ. ಒಂದು ಹಗಲಿನ ಮುಹೂರ್ತದಲ್ಲಿ ಬೃಹಸ್ಪತೀನ್ನ ಹನ್ನೆರಡು ರಾಶೀಲೂ ತೀರಿಸಿ ತಂದ. ಹನ್ನೆರಡು ವರುಷ ಉಪವಾಸ ಉಳ್ಳವನಾಗಿ ತಪಸ್ಸು ಮಾಡೇನು ಎಂದಿದ್ದ. ಸ್ವಾಮಿ ಅಸ್ತಮಾನಪರಿಯಂತ ಉಪವಾಸ ಮಾಡಿದ. ಮನಸ್ಸಿನಿಂದ ನೇಮಗಳು ಮಾಡಿ, ವ್ರತಗಳು ಮಾಡಿ—ಒಂದು ದಿವಸಕ್ಕೆ ಇಪ್ಪತ್ತೊಂದುಸಾವಿರದಾರುನೂರು ಶ್ವಾಸೋಚ್ಛ್ವಾಸ ಆಗತದೆ—ಒಂದು ನೂರುಐವತ್ತು ಶ್ವಾಸ ಒಂದೇ ಕ್ಷಣದಲ್ಲಿ ಮಾಡಿಬಿಟ್ಟನು. ಆದ್ದರಿಂದ ಮಾಸವ್ರತಗಳು ಆದವು. ಸ್ವಾಮಿ ತಪಸ್ಸು ಮಾಡೋವಾಗ ಗರುಡ ಶೇಷ ಮೊದಲಾದವರು ವಾಲ್ಮೀಕಿಸಟಂದಿಹೋರು. ಸ್ವಾಮಿ ಯಾದವೇಂದ್ರ ತನ್ನ ಕುರಿತು ತಾನೇ ಹೋಮಗಳು ಕ್ರಿಯಗಳು ಮಾಡತಿಹೋನು. ಅಸುರರು, ಕೃಷ್ಣ ಶಿವನ ಕುರಿತು ತಪಸ್ಸು ಮಾಡತಿಹೋನೆಂದು ತಿಳಿದಿಹೋರು. ಅಸುರರು ಮಿಥ್ಯಾಜ್ಞಾನ ಉಳ್ಳವರಾದರು. ಇವರೆಲ್ಲ ತಮಸ್ಸಿಗೆ ಹೋಗಿ ಬೀಳಥಾರೆಂದು ದೇವತಿಗಳು ಸಂತೋಷವುಳ್ಳವರಾದರು. ಕೃಷ್ಣ ಇದ್ದ ಸ್ಥಳಕ್ಕೆ ಬ್ರಹ್ಮಾದಿ ದೇವತಿಗಳು, ಸಿದ್ಧಚಾರಣರು, ಗಂಧರ್ವರು ಬಂದಿಹೋರು. ಮಹಾರುದ್ರ ತನ್ನ ಭೂತಗಣಗಳಿಂದ ಯುಕ್ತನಾಗಿ, ಪೂಜಾಸಾಧನದ್ರವ್ಯ ಕೊಂಡು, ಸ್ವಾಮಿ ತನ್ನ ಮನಿಗೆ ಬಂದಾನೆಂದು ಪೂಜಿ ಮಾಡಿದನು. 'ಸ್ವಾಮಿ ಜಗನ್ನಾಥ, ಅವ್ಯಾಹತಷಡ್ಗುಣೈಶ್ವರ್ಯಸಂಪನ್ನ, ದೋಷರಹಿತ, ನಿರ್ದೋಷವಸ್ತು' ಎಂತ ಈ ಪ್ರಕಾರ, ಮಹಾರುದ್ರ ಸ್ತೋತ್ರ ಮಾಡಲಿಕ್ಕೆ, ಅಯೋಗ್ಯಜನಕ್ಕೆ ಮೋಹಿಸಬೇಕಾಗಿ, ಮಹಾರುದ್ರನ ಕುರಿತು ಸ್ವಾಮಿ ಮಾತನಾಡಥಾನೆ. 'ಏನಯ್ಯ ಮಹಾರುದ್ರ, ನೀನು ಕೈಲಾಸಪತಿ, ನಾವು ಗೋಪಾಲಕರು. ನಿನ್ನ ಕೈಯ ವರವು ಸಂಪಾದಿಸಲಿಕ್ಕೆ ಬಂದೀವಿ' ಈ ರೀತಿಯಿಂದ ರುದ್ರಾಂತರ್ಗತ ಸಂಕರ್ಷಣನ ಸ್ತೋತ್ರ ಮಾಡಲಿಕ್ಕೆ, ಮಹಾರುದ್ರ ದೇವತಿಗಳಿಗೆ ಅಂಥಾನೆ,

‘ನೋಡಿರೈ ದೇವತಿಗಳಿರ್ಯಾ ಸ್ವಾಮೀ ಧೈರ್ಯ! ದುರ್ಜನರ ಮೋಹಿಸಬೇಕಾಗಿ ನನ್ನ ಸಮೀಪ ಬಂದಾನೆ. ಕೃಷ್ಣ ಸರ್ವೋತ್ತಮದೇವತಿ. ಸರ್ವತ್ರ ವ್ಯಾಪ್ತ, ಈತನ ಮಹಿಮ ವೇದಗಳಲ್ಲಿ ಹೇಳೀದೆ. ವೇದಾರ್ಥಗಳು ಕೃಷ್ಣನ್ನ ಕೊಂಡಾಡಥಾವೆ. ಸಕಲಸಾರ ಹೇಳಥೀನಿ. ಸಂಸಾರಸಮುದ್ರದಿಂದ ಕಡಿಗೆ ಬೀಳಬೇಕೆಂಬುವರು, ಈ ನಾರಾಯಣಗೆ ಶರಣುಹೋಗಬೇಕು. ಅಥವಾ ಮುಖ್ಯಪ್ರಾಣ, ಲಕ್ಷ್ಮೀದ್ವಾರ-ದಿಂದಲಾದರೂ ಸ್ವಾಮಿಗೆ ಶರಣುಹೋಗಬೇಕು. ಈ ಕೃಷ್ಣ ಸರ್ವೋತ್ತಮದೇವತಿ, ಸರ್ವತ್ರ ವ್ಯಾಪ್ತ. ಬ್ರಹ್ಮಾದಿ ಜಗತ್ತಿಗೆ ಒಡಿಯ. ಈ ರಮಾಪತಿ ಸರ್ವತಂತ್ರ. ಸ್ವತಂತ್ರ, ಬ್ರಹ್ಮಾದಿ ಜೀವಗಳು ಪರತಂತ್ರ. ತತ್ತ್ವಾರ್ಥ ನಿಮಗೆ ಚೆನ್ನಾಗಿ ನೆಲೆಗೊಂಡು ನಿಂದರಲಿಲ್ಲ.’ ಹೀಂಗೆಂದು ಮಹಾರುದ್ರ ದೇವತಿಗಳಿಗೆ ಹೇಳಲಕ್ಕೆ, ದೇವತಿಗಳು ಕೃಷ್ಣ ರಮೇಶನೆಂದು ತಿಳಿದರು. ರುದ್ರನ ವಚನ ತಮ್ಮ ಹೃತ್ಕಮಲ ದಲ್ಲೆಟ್ಟುಕೊಂಡು, ಕೃಷ್ಣ ಸರ್ವೋತ್ತಮನೆಂದು ತಿಳಿದವರಿಗೆ ರುದ್ರ, ತಾರಕ ಉಪದೇಶ ಕೊಟ್ಟು, ಜೀವರುಗಳ ಉದ್ಧರಿಸಥಾನೆ. ಯುಕ್ತಿಶಾಸ್ತ್ರಗಳಿಂದ ದೇವತಿಗಳ ಸಂಶಯಜ್ಞಾನವೆಲ್ಲ, ಮಹಾರುದ್ರನ ವಾಕ್ಯದಿಂದ ಪರಿಹಾರವಾಗಿ ಸ್ವಚ್ಛಜ್ಞಾನ ಉಳ್ಳವರಾದರು.

ತದನಂತರ ಕೃಷ್ಣ ಮಹಾರುದ್ರನ ಕುರಿತು ಮಾತನಾಡಥಾನೆ. ‘ಎಲೈ ಉಮಾಪತಿ ಮಗನ್ನ ಕೊಡು’ ಎನಲಿಕ್ಕೆ, ‘ನನ್ನನುಗ್ರಹದಿಂದ ನಿನಗೆ ಪ್ರದ್ಯುಮ್ನ ಮಗನಾಗಥಾನೆ. ಪ್ರದ್ಯುಮ್ನ ನಿನ್ನ ಮಗನಾಗಿ ಹುಟ್ಟಲಿಕ್ಕೆ ಕಾರಣ ಹೇಳಥೀನಿ. ಕಾಮ, ನನ್ನ ನೇತ್ರಾಗ್ನಿಯಿಂದ ಸುಟ್ಟು ಸತ್ತನು. ರತೀ ತನ್ನ ಗಂಡನ್ನ ಕೊಡೆಂದು ಬೇಡಿಕೊಂಡಳು. ವಾಸುದೇವನಿಂದ ಅವಳ ಗಂಡ ಹುಟ್ಟ್ಯಾನು, ಅವಳಿಗೆ ಗಂಡನಾದಾನು ಎಂದು ನಿನ್ನಾಜ್ಞದಿಂದ ರತೀದೇವಿಗೆ ವರವು ಕೊಟ್ಟೀನಿ. ಎಲೈ ದೇವಶ್ರೇಷ್ಠ, ನಾನು ನಿನ್ನ ಭೃತ್ಯನಿದ್ದೀನಿ. ಪ್ರದ್ಯುಮ್ನ, ಬಲವೀರ್ಯ ಉಳ್ಳಂಥ ಮಗನಾಗಿ ಇದ್ದೂ, ಅಂಥಾ ಮಗನ್ನ ಹೊಟ್ಟೆ ಒಳಗೆ ಇಟ್ಟುಕೊಂಡು, ದುರ್ಜನರ ಮೋಹಿಸಬೇಕಾಗಿ ಮಗನ್ನ ಬೇಡಿಕೋತಿದ್ದಿ. ಏನು ಕಾರಣವೆಂದರೆ, ವಕ್ರಾಸುರ ಬ್ರಹ್ಮದೇವರ ವರಬಲದಿಂದ ನನ್ನ ಕೈಲಾಸಗಿರಿಯಲ್ಲಿ ಅವಧ್ಯನಾಗಿದ್ದ. ಕೃಷ್ಣನ ಹೊಟ್ಟೀಲಿ ಹುಟ್ಟಿದಂಥ ಕೂಸಿನ ಕೈಯ ಸಾಕಬೇಕಿಹೋದು. ಕಾಮ ನೀವೆ, ನನ್ನ ನೇತ್ರಾಗ್ನಿಯಿಂದ ಸತ್ತು ಕೃಷ್ಣನ ಉದರದಲ್ಲಿದ್ದ. ಸ್ವಾಮಿ, ಪ್ರದ್ಯುಮ್ನನ ಕೈಯಿಂದ ವಕ್ರಾಸುರನ್ನ ಕೊಲ್ಲಿಸಿ, ಪುನಃ ಪ್ರದ್ಯುಮ್ನನ್ನ ನಿನ್ನ ಹೊಟ್ಟೀಯೊಳಗೆ ಇಟ್ಟುಕೊಂಡು ಇಲ್ಲಿಗೆ ಬಂದೀಯ. ವಕ್ರಾಸುರನ ದೇಹವೆಲ್ಲ ಸುಟ್ಟದೆ. ಇನ್ನೂ ಬೆಂಕಿ ಆರಿಲ್ಲ. ದೇವತಿಗಳಿರ್ಯಾ ನೋಡಿ! ಅದೇ ಮಗನ್ನ ತನ್ನ ಉದರದೊಳಗಿಟ್ಟುಕೊಂಡು ಇಲ್ಲಿಗೆ ಬಂದ. ಅಸುರಮರ್ದನ ಲೋಕಕ್ಕೆ ಮೋಹಿಸ ಬೇಕಾಗಿ ಮಗನ್ನ ಬೇಡಥಾನೆ. ಏನಾಶ್ಚರ್ಯ! ದುಷ್ಟಜನರಿಗೆ ಮತ್ತಷ್ಟು ಅಜ್ಞಾನ

ಹೆಚ್ಚಿಸಬೇಕಾಗಿ, ನನ್ನ ಕೈಯ ವರವು ಸಂಪಾದಿಸಿಕೊಂಡು ಆದೇ ಪ್ರದ್ಯುಮ್ನ ರುಕ್ಮಿಣೀ ಉದರದಲ್ಲಿ ಹಡದನು. ಇಂಥಾ ಕೃಷ್ಣಜ್ಯೇಷ್ಟ ದಾರು ಬಲ್ಲರು ಎಂದರೆ, ನಾರದ ಬಲ್ಲ. ಸ್ವಾಮಿ ಪೂರ್ಣೈಶ್ವರ್ಯ ಉಳ್ಳಾತನಾದಕಾರಣ, ತನ್ನ ಮನ ಬಂಧಾಂಗೆ, ಇಂಥಾ ಜೇಷ್ಟಗಳು ನಾನಾ ಕ್ರೀಡಿಗಳು ಮಾಡಥಾನೆ.' ಈ ಪ್ರಕಾರ ಮಹಾರುದ್ರ ಸ್ತೋತ್ರ ಮಾಡಲಿಕ್ಕೆ ಸ್ವಾಮಿ, ದುಷ್ಟಜನರ ಮೋಹಿಸಬೇಕಾಗಿ, ಇಂಥಾ ಚರಿತ್ರಗಳ ತೋರಿಸಥಾನೆಂದು ದೇವತಿಗಳಿಲ್ಲ ಆಶ್ಚರ್ಯ ಉಳ್ಳವರಾಗಿ, ಜಗದೀಶನ ಸ್ತೋತ್ರ ಮಾಡಿದರು. ದೇವತಿಗಳ ಕೈಯ ಸ್ತೋತ್ರ ಮಾಡಿಸಿಕೊಂಡು ಶ್ರೀಕೃಷ್ಣ ದ್ವಾರಾವತಿಗೆ ಬಂದನು.

ಸ್ವಾಮಿ ಯಾದವಶ್ರೇಷ್ಠ ಕೈಲಾಸಕ್ಕೆ ಹೋದದ್ದು ಕಂಡು ಪೌಂಡ್ರಕ-ವಾಸುದೇವನು—ಕೃಷ್ಣನ ಮಲಣ್ಣನಾಗಬೇಕು—ತನ್ನ ಸಾಕಿದ ತಾಯಿತಂದಿ ಕಾಶೀರಾಯನ ಕೂಡಿಕೊಂಡು, ಮೂರು ಅಕ್ಷೌಹಿಣಿ ಸೈನ್ಯಬಲದಿಂದ, ತನ್ನ ಪ್ರಧಾನಿ ಏಕಲವ್ಯನಿಂದಲೂ ಯುಕ್ತನಾಗಿ ದ್ವಾರಾವತಿಗೆ ಬಂದು ಪಟ್ಟಣವೆಲ್ಲ ಮರ್ದಿಸಹೊಕ್ಕನು. ಬಲರಾಮ ಮೊದಲಾದವರು ಶಸ್ತ್ರಾಸ್ತ್ರ ಮಳಿಗರೆದರು. ಏಕಲವ್ಯ ಮಹಾ ಬಲಿಷ್ಠನಾದಕಾರಣ, ಯುದ್ಧದಲ್ಲಿ ಅವನೆದುರಿಗೆ ನಿಂದರಲಾರದೆ ಯಾದವರೆಲ್ಲ ಓಡಿಬಂದು ದ್ವಾರಾವತಿಯನ್ನು ಹೊಕ್ಕರು. ಏಕಲವ್ಯ ಬಲರಾಮಗೆ ಬಹಳ ಭಯಂಕರ ಯುದ್ಧವಾಯಿತು. ಪೌಂಡ್ರಕವಾಸುದೇವಗೆ ಸಾತ್ಯಕಿಗೆ ಯುದ್ಧ ಹತ್ತಿತು. ಯುದ್ಧದ ಶಬ್ದ ಹೊರತು ಎರಡನೇ ಶಬ್ದ ಕೇಳಿಸದು. ಹೀಂಗೆ ಪರಸ್ಪರ ವಾಗಿ ಮೂರು ದಿವಸ ಏಕಪ್ರಕಾರ ಯುದ್ಧವಾಗಲಿಕ್ಕೆ ವಿತಥರಾದರು. ರಣರಂಗದಲ್ಲಿ ಯಾದವರು ಈ ಪ್ರಕಾರ ಯುದ್ಧ ಮಾಡತಿರಲಿಕ್ಕೆ, ಸ್ವಾಮಿ ಕೈಲಾಸದಿಂದ ಬಂದು ಪಾಂಚಜನ್ಯ ಶಂಖ ಊದಿದನು. ಸ್ವಾಮಿ ಶಂಖ ಊದಲಿಕ್ಕೆ ಬಲರಾಮ ಬಹಳ ಬಲವುಳ್ಳವನಾಗಿ, ಏಕಲವ್ಯನ ಕೊಲ್ಲಲಿಕ್ಕೆ ಉದ್ಯುಕ್ತನಾದ. ಏಕಲವ್ಯ ತನ್ನ ಜೀವ ಉಳುಹಿಕೊಂಡು ಬಹುದೂರ ಓಡಿಹೋದನು. ಬಲರಾಮ ಸಮುದ್ರಪರಿಯಂತ ಬೆನ್ನಟ್ಟಿ ಹೋಗಲಿಕ್ಕೆ, ನದಿಯಲ್ಲಿ ಬಿದ್ದನು. ನೀರಲ್ಲಿ ಬಿದ್ದವನ್ನ ಕೊಲ್ಲಬಾರದೆಂದು ತಿರುಗಿಬಾಹೋನು. ಬಲರಾಮ ಬೆನ್ನು ಹತ್ತಿದ್ದಾನಾದೀತೆಂದು ತಿರುಗಿ ನೋಡದೆ, ಎಂಬತ್ತು ಯೋಜನ ನೀರೊಳಗೆ ಈಸಿಹೋಗಿ ತಿರುಗಿ ನೋಡಥಾನೆ. ಬಲರಾಮ ಬೆನ್ನುಗೊಂಡು ಬಾಹೋದಿಲ್ಲವೆಂದು ತಿಳದು, ಒಂದು ಗಡಿ ಯೊಳಗೆ ಹತ್ತಿ ನಿಂತ. ಪೌಂಡ್ರಕವಾಸುದೇವಗೆ ಸಾತ್ಯಕಿಗೆ ಯುದ್ಧ ಹತ್ತಿತ್ತಲ್ಲಾ, ನೀಚ ಸಾತ್ಯಕಿ ಕೂಡ ಯುದ್ಧ ಮಾಡಬಾರದೆಂದು, ಪೌಂಡ್ರಕವಾಸುದೇವ ಜಗನ್ನಾಥನ ಕೂಡ ಯುದ್ಧಕ್ಕೆ ಬಂದನು. ಸಾತ್ಯಕಿ ತನ್ನ ಕೂಡ ಯುದ್ಧ ಮಾಡೆಂದು ಒದರತಿಹ. ಕೃಷ್ಣಗೆ ಪೌಂಡ್ರಕವಾಸುದೇವಗೆ ಯುದ್ಧ ಹತ್ತಿತು. ಸ್ವಾಮಿ ತನ್ನ ಬಾಣದಿಂದ ಅವನ ಬಾಣಗಳು ರಥ ಕುದರಿ ಛೇದಿಸಿ ಬಿಟ್ಟನು. ಇನ್ನು ನಾನು ಏನು ಯುದ್ಧ ಮಾಡಿ ಮಾರಿ ತೋರಿಸಲೆಂದು, ತನ್ನ ಪಟ್ಟಣಕ್ಕೆ ಹೋದನು.

ಪೌಂಡ್ರಕವಾಸುದೇವ ತನ್ನ ಪಟ್ಟಣ ಸೇರಿದಮ್ಯಾಲೆ, ದ್ವಾರಾವತಿಗೆ ಹೇಳಿ ಕಳುಹಿಸಿಕೊಟ್ಟ. 'ನಾನು ವಾಸುದೇವ, ನನ್ನ ಚಿನ್ಹ ಧರಿಸಲಿಕ್ಕೆ ಕಾರಣವೇನು? ಶೀಘ್ರ ನನ್ನ ಸುದರ್ಶನಚಕ್ರ, ಕೌಮೋದಿಕವೆಂಬ ಗದ ಕಳುಹಿಸಿಕೊಟ್ಟು ನನಗೆ ಶರಣು ಬಾ. ನಾನು ಅನಂತನಿದ್ದೀನಿ.' ಹೀಂಗೆ ದೂತನ ಕೈಯ ಶ್ರೀಕೃಷ್ಣಗೆ ಹೇಳಿಕಳುಹಲಿಕ್ಕೆ, ಈ ಮಾತು ಕೇಳಿ ಯಾದವರೆಲ್ಲ ದೊಡ್ಡ ನಗೆಯಿಂದ ನಗ. ಹೊಕ್ಕರು. ಕೃಷ್ಣ ತಿರುಗಿ ಹೇಳಿ ಕಳುಹಿಸಿಕೊಟ್ಟ. 'ನನ್ನ ಸುದರ್ಶನಚಕ್ರ ಮೊದಲಾದ ಆಯುಧಗಳೆಲ್ಲ ನಿನ್ನ ಮಾಂಸದಿಂದ ರಕ್ಷಿತವಾಗೇವೆ.' ಈ ರೀತಿ ಬಂದ ದೂತನ ಸಂಗಡ ಹೇಳಿಕಳುಹಿ, ಕಮಲೇಕ್ಷಣ ಯಾದವರಿಂದ ಯುಕ್ತನಾಗಿ ಕಾಶಿ-ಪಟ್ಟಣಕ್ಕೆ ಹೋದ. ಕೃಷ್ಣ ಬಂದನೆಂದು ಸುದ್ದಿ ಕೇಳಿ, ತನಗೆ ಗರುಡ ಬೇಕೆಂದು ಬಂಗಾರದ ಗರುಡನ್ನ ಮಾಡಿ ರಥದೊಳಗೆ ಇಟ್ಟ. ಶ್ರೀವತ್ಸ ಚಿನ್ಹ ಬೇಕು, ತನ್ನ ಎದಿ ತಾನೇ ಸುಟ್ಟುಕೊಂಡ. ಈ ಪ್ರಕಾರ ಅಮಂಗಳನಾಗಿ ಬರಲಿಕ್ಕೆ, ಕೃಷ್ಣ ಯಾದವರಿಂದ ಕೂಡಿ ನಗಹೊಕ್ಕ. ಪೌಂಡ್ರಕ ಯಾದವರ ಮ್ಯಾಲೆ ಶಸ್ತ್ರಾಸ್ತ್ರ ಮಳಿಗರಿಯಲಿಕ್ಕೆ, 'ಎಲೋ ಪೌಂಡ್ರಕ, ನನ್ನ ಚಕ್ರ ಬೇಡತಿದ್ದಿ, ಕೋ' ಎಂದು ಕೃಷ್ಣ ಕೊರಳ ಕುಣಿಕೆಗೆ ಹೊಡಿಯಲಿಕ್ಕೆ, ಪೌಂಡ್ರಕವಾಸುದೇವನ ಶಿರಚ್ಛೇದನ ವಾಯಿತು. ಇಷ್ಟಾಗಲಿಕ್ಕೆ ಕಾಶೀರಾಯನ ಮಸ್ತಕಕ್ಕೆ ಬಾಣದಿಂದ ಹೊಡೆಯಲು, ತಲಿ ಸಿಡದುಹೋಗಿ ಕಾಶೀರಾಯನ ಪಟ್ಟಣದೊಳಗೆ ಬಿತ್ತು. ಹೀಂಗೆ ಸಹಾಯ ವಾಗಿ ಬಂದವಗೆ, ಭಗವದ್ವೈಷಿಗೆ ಅವಶ್ಯ ಕೊಲ್ಲಬೇಕೆಂದು ದೇವತಾಸಂಕಲ್ಪ. 'ಅಹಂ ಬ್ರಹ್ಮ' ಎಂದು ಪೌಂಡ್ರಕವಾಸುದೇವ ಕರಸಿಕೊಳ್ಳತಿಹ. ಅಂಥಾವ ಸ್ವಾಮಿಯಿಂದ ಹೊಡಿಸಿಕೊಂಡು ಅಂಧಂತಮಸ್ಸಿಗೆ ಹೋಗಿ ಬಿದ್ದನು. ಕಾಶೀ-ರಾಯಗೆ ಏನು ಗತಿ ಆಯಿತೆಂದರೆ, ಹಿಡಿಂಬ ಸಾಲ್ವ ಕಿರ್ಮೀರ ಇವರಿಗೆಲ್ಲ ಏನು ಗತಿ ಆಯಿತೋ ಅಂಥಾ ತಮಸ್ಸು ಆಯಿತು. ಸ್ವಾಮಿ ಯಾದವಶ್ರೇಷ್ಠ, ಪೌಂಡ್ರಕ-ವಾಸುದೇವ, ಕಾಶೀರಾಯನ್ನ ಕೊಂದು ದ್ವಾರಾವತಿಗೆ ಬಂದಮ್ಯಾಲೆ, ಮಹದೇವ ನಿಂದ ಸಂಪಾದಿಸಿದ ವರದಿಂದ ಪ್ರದ್ಯುಮ್ನನೆಂಬ ಮಗನ್ನ ಹಡದನು.

ಏಕಲವ್ಯ, ಬಲರಾಮಗೆ ಅಂಜಿ ಸಮುದ್ರದ ಗಡ್ಡೀ ಒಳಗೆ ಇದ್ದ. ಅವನ ಗತಿ ಏನಾಯಿತೆಂದರೆ, ಕೃಷ್ಣನ ಕೂಡ ವಿರೋಧ ಆಚರಿಸಿ, ಈ ಕೃಷ್ಣ ತನ್ಮ ಶಿವನ ವರವು ಸಂಪಾದಿಸಿಕೊಂಡು ಬಂದಾನೆ, ಶಿವ ದೊಡ್ಡವನೆಂದು ತಿಳದು, ಶಿವನ ಕುರಿತು ತಪಸ್ಸು ಮಾಡಿ ಅವಧ್ಯತ್ವ ಐದಿ, ಸೊಕ್ಕಿನಿಂದ ಕೃಷ್ಣನ ಕೂಡ ಯುದ್ಧಕ್ಕೆ ಬಂದನು. ಸ್ವಾಮಿ ಯಾದವಪತಿ ಲೀಲಾಮಾತ್ರದಲಿ ಏಕಲವ್ಯನ ಶಿರಚ್ಛೇದನ ಮಾಡಿದನು. ಏಕಲವ್ಯ ಸ್ವಾಮೀ ಕೂಡ ಯುದ್ಧ ಮಾಡಿದ್ದರಿಂದ, ನಿತ್ಯದುಃಖ ವಾದಂಥ ತಮಸ್ಸಿಗೆ ಹೋಗಿ ಬಿದ್ದನು. ಕಾಶೀರಾಯನ ತಲಿ ಪಟ್ಟಣದೊಳಗೆ ಬಿದ್ದಿತ್ತು. ಈತನ ಮಗ ಸುದಕ್ಷಿಣನೆಂಬುವ, ತನ್ನ ತಂದೀ ತಲೀ-ಕಂಡು ದುಃಖ

ಉಳ್ಳವನಾಗಿ, ಕೃಷ್ಣನ ಅಭಾವ ಇಚ್ಛೈಸಿ, ಕಾಶೀ ವಿಶ್ವೇಶ್ವರನ ಕುರಿತು ಶೀಘ್ರ ತಪಸ್ಸು ಮಾಡಿದನು. ಮಹಾರುದ್ರ ಪ್ರೀತನಾಗಿ 'ಏನು ವರವು ಬೇಡಥಿ ಬೇಡು' ಎನಲಿಕ್ಕೆ, 'ಶ್ರೀಕೃಷ್ಣ, ನಮ್ಮ ಸೋದರಮಾವ ಪೌಂಡ್ರಕವಾಸುದೇವ ಅವನ ಅಣ್ಣನಾಗಬೇಕು, ಅತನ್ನ ಕೊಂದ. ಹಾಂಗೆ ನಮ್ಮ ತಂದೀ ಕಾಶೀರಾಯನ್ನ ಕೊಂದಾನೆ.' ಹೀಂಗೆಂದು ಹೇಳಿ, 'ಕೃಷ್ಣ ಭೂಮೀಮ್ಯಾಲೆ ಇಲ್ಲಧಾಂಗೆ ಮಾಡು' ಎನಲಿಕ್ಕೆ, ಮಹಾರುದ್ರ ದಕ್ಷಿಣಾಗ್ನಿಯಲ್ಲಿ ಭೂತ ಹುಟ್ಟಿಸಿ ದ್ವಾರಾವತಿಗೆ ಕಳುಹಿಸಿಕೊಟ್ಟನು. ದಕ್ಷಿಣಾಗ್ನಿ ಒಳ್ಳೇವ, ಮಹಾರುದ್ರನ ಕೇವಲ ಭಕ್ತ, ಸ್ವಾಮೀ ಕೂಡ ಯಾಕೆ ವಿರೋಧ ಮಾಡಿದನೆಂದರೆ, ಅಸುರಾವೇಶದಿಂದ ಯುಕ್ತನಾಗಿ ರುದ್ರ ಭೂತ ಹುಟ್ಟಿಸಿದನು. ದ್ವಾರಾವತಿಗೆ ಭೂತ ಬರಲಿಕ್ಕೆ, ಸ್ವಾಮಿ ಸುದರ್ಶನ ಚಕ್ರಕ್ಕೆ ಅಪ್ಪಣೆ ಕೊಟ್ಟನು. ಪ್ರಧಾನಾಗ್ನಿ ಮಗ ಭೂತಾತ್ಮವನ್ನಿ, ಭೂತವೇಷ ಉಳ್ಳವನಾಗಿ ಬಂದಾನೆ. ಸ್ವಾಮಿ, ಭೂತ ಸಂಹರಿಸೆಂದು ಚಕ್ರಕ್ಕೆ ಅಪ್ಪಣೆ ಕೊಟ್ಟಿದ್ದ. ಚಕ್ರ ಜ್ವಲಸ್ತಾ ಹೋಗಿ ಭೂತನ್ನ ಬೆನ್ನಟ್ಟಿ ಬರಲಿಕ್ಕೆ, ಭೂತ ಹಿಂದಕ್ಕೆ ಹೋಗಲಾಗಿ, ಸುದಕ್ಷಿಣನ ಕುಟುಂಬ ಸಹವಾಗಿ ಸುಟ್ಟುಬಿಟ್ಟತು. ಚಕ್ರ ಹೋಗಿ ಸಂಪೂರ್ಣ ವಾರಣಾಸಿ ಪಟ್ಟಣವೆಲ್ಲ ಸುಟ್ಟುಬಿಟ್ಟು, ಮಹತ್ಕಾರ್ಯ ಮಾಡಿ, ಸ್ವಾಮೀಪಾದಕ್ಕೆ ತಿರುಗಿ ಬಂತು. ಸುದಕ್ಷಿಣ ಮಹಾ ಪಾಪಿ. ಸ್ವಾಮೀ ವಿರೋಧದಿಂದ ತಮಸ್ಸಿಗೆ ಹೋಗಿ ಬಿದ್ದನು. ಸ್ವಾಮಿ ಕಮಲೇಕ್ಷಣ ಸಂಪೂರ್ಣ ಶಕ್ತಿ ಉಳ್ಳಾತ, ನಿತ್ಯಾನಂದ, ಹೀಂಗೆ ದ್ವಾರಾವತಿಯಲ್ಲಿ ಮನಬಂಧಾಂಗೆ ಕ್ರೀಡಿಸಥಾನೆ.

ಹೀಂಗಿರಲಿಕ್ಕೆ, ಒಂದು ದಿವಸ ಸ್ವಾಮಿ ವೈದರ್ಭೀ ಕೂಡ ಪ್ರೇಮಕಲಹ ತೆಗೆದಾನೆ. ರುಕ್ಮಿಣೀದೇವಿ ದಾಸದಾಸೇರಿಂದ ಯುಕ್ತಳಾಗಿ, ಸ್ವಾಮೀನ ವಾಲ್ಗೈಸ. ಲೋಸುಗ ಕೈಲಿ ಬೀಸಣಗಿ ಹಿಡಕೊಂಡು ಭೋಗಸ್ಥಳ ಏಕಾಂತಕ್ಕೆ ಒಬ್ಬಳೇ ಬರಥಾಳೆ. ಆಗ ಸ್ವಾಮಿ ರುಕ್ಮಿಣಿಗೆ ಅಂದ, 'ಎಲೌ ವೈದರ್ಭಿ, ನೀನು ರಾಜಪುತ್ರಿ. ಅರಸರುಗಳು ನಿನ್ನ ಒಲಿಸಬೇಕು. ನಾವು ಗೋಪಾಲಕರು, ರಾಯರಿಗೆ ಅಂಜಿ ಈ ಸಮುದ್ರದಲ್ಲಿ ಮನಿ ಮಾಡಿದ್ದೀವಿ. ಇಷ್ಟಾಗಿ ನೀನು ನಮಗೆ ಬೇಕಾಗಿಲ್ಲ. ಎಲೌ ಮನೋಹರಸ್ತ್ರೀ, ನನ್ನ ಕೊಂಡು ಏನು ಮಾಡಿ!' ಈ ಪ್ರಕಾರ ಲೋಕವಿಡಂಬನಿ ಮಾಡಲಿಕ್ಕೆ, ರುಕ್ಮಿಣೀ ದೇಶತಃ ಕಾಲತಃ ವ್ಯಾಪ್ತಳು, ನಿರ್ದೋಷ ಗುಣ ಉಳ್ಳವಳು, ಸ್ವಾಮೀ ಅಭಿಪ್ರಾಯ ಬಲ್ಲರೂ ಸರಿಯೆ, ಸ್ತ್ರೀ ಆದಾಕಿ ಗಂಡಗೆ ಅಂಜಬೇಕು, ಇದಿರಿಟ್ಟು ಮಾತನಾಡಬಾರದು ಎಂದು ಅಂಜಿಕಿ ಸ್ವಭಾವ, ದುಃಖಿಷ್ಟ ಳೋಪಾದಿ, ಭೂತಳದಲ್ಲಿ ಬೀಳಲಿಕ್ಕೆ, ಕಾಮುಕಪುರುಷ ಸ್ತ್ರೀಯನ್ನ ಹ್ಯಾಂಗೆ ಸಮಾಧಾನ ಮಾಡಥಾನೆ, ಹಾಂಗೆ ಸ್ವಾಮಿ, ತಾನು ಸ್ವರಮಣನಾದರೂ ಸರಿಯೆ, ಲೋಕವಿಡಂಬನಿಯಿಂದ ಸಮಾಧಾನ ಮಾಡಥಾನೆ. ಸ್ವಾಮಿ ಆಡಿದ ವಚನಗಳ ಗರ್ಭಾಭಿಪ್ರಾಯ ತಿಳದು ಸ್ವಾಮೀ ಸ್ತೋತ್ರ ಮಾಡಿದ್ದಾಳೆ. ಈ ಪ್ರಕಾರ ಲಕ್ಷ್ಮೀ-ನಾರಾಯಣರು ಕ್ರೀಡ ಮಾಡಿದ್ದಾರೆ.

ಬಲರಾಮ, ಸ್ವಾಮೀ ಆಜ್ಞಾದಿಂದ ಗೋಕುಲಕ್ಕೆ ಹೋಗಿ ನಂದಗೋಪ, ಯಶೋದಾದೇವಿ, ಗೋಪಿಕಾಸ್ತ್ರೀಯರಿಗೆ ಕೃಷ್ಣನ ಅದ್ಭುತ ಚರಿತ್ರ, ದೈತ್ಯರ ಕೊಂದ ಯಾವತ್ತೂ ವೃತ್ತಾಂತ ಹೇಳಿ, ಸುಖಬಡಿಸಿದ್ದಾನೆ. ಎರಡು ತಿಂಗಳು ಗೋಪಿಕಾಸ್ತ್ರೀಯರ ಕೂಡ ಕ್ರೀಡ ಮಾಡತ ಇರಲಿಕ್ಕಾಗಿ, ಒಂದು ಡಿವಸ ಮದ್ಯ-ಪಾನ ಮಾಡಿ, ಯಮುನಾದೇವಿಗೆ, ಬಲರಾಮ ಸಮೀಪಕ್ಕೆ ಕರದ. ಬಲರಾಮ ಮದ್ಯಪಾನ ಮಾಡಿ ತನ್ನ ಕರದಾನೆ, ಮದ ಸೊಕ್ಕಿದ ವ್ಯಾಳ್ಯಾದಲ್ಲಿ ಸ್ತ್ರೀ ಆದಾಕಿ ಹೋಗಬಾರದೆಂದು, ಯಮುನಾ ಬಲರಾಮನ ಸಮೀಪಕ್ಕೆ ಹೋಗಲಿಲ್ಲ. 'ನಾನು ಕರಿಯಲಿಕ್ಕೆ ಹ್ಯಾಂಗೆ ಬರಲಿಲ್ಲ' ಎಂದು ಬಲರಾಮ ಕೋಪಾವಿಷ್ಟನಾಗಿ, ತನ್ನ ನೇಗಿಲ ಹಾಕಿ ಎಳಿಯಲಿಕ್ಕೆ, ಅತಿ ವೇಗದಿಂದ ಓಡತ ಬಂದಳು. 'ನಾನು ಉನ್ಮತ್ತಳು. ನಿನ್ನ ಮಹಿಮ ಅರಿತಾಕಿ ಆಲ್ಲ' ಎಂದು ಸ್ತೋತ್ರ ಮಾಡಲಿಕ್ಕೆ, ಮೊದಲಿನ ಪ್ರವಾಹ ತಿರುಗಿ ಹೋಗಿ ಗೋಕುಲದ ಮುಂದೆ ಪ್ರವಾಹ ಆಗೇದೆ. ಬಲರಾಮ ಎರಡು ತಿಂಗಳು ಗೋಕುಲದಲ್ಲಿದ್ದು, ಸಮಸ್ತರಿಗೆ ಸಮಾಧಾನ ಮಾಡಿ ಅವರಪ್ಪಣಿ ಪಡದು, ದ್ವಾರಾವತಿಗೆ ಬಂದು, ಅವರ ಭಕ್ತೀನೆಲ್ಲ ಕೃಷ್ಣನ ಮುಂದೆ ಹೇಳಿದನು.

ವಿವಿದ, ಮೈಂದ ಅಶ್ವಿನೀದೇವತಿಗಳ ಅವತಾರ, ರಾಮಾವತಾರದಲ್ಲಿ ಕಪಿಗಳಾಗಿ ಹುಟ್ಟಿದರು. ರಾವುನ ಸಂಗಡ ಪರಂಧಾವುಕ್ಕೆ ಹೋಗದೆ, ಬಹಳ ಪ್ರಬಲರಾಗಿರತಿಹೋರು. ಅವರಿಗೆ ನರಕಾಸುರ ಗೆಳಿಯನಾಗಬೇಕು. ತಮ್ಮ ಗೆಳಿಯನ್ನ ಕೃಷ್ಣ ಕೊಂದಾನೆಂದು, ಕ್ರೋಧದಿಂದ ರಾಷ್ಟ್ರವೆಲ್ಲ ವಿನಾಶ ಮಾಡಹೊಕ್ಕರು. ಈ ಕಪಿಗಳು ತಮ್ಮ ದೇಶವೆಲ್ಲ ವಿನಾಶ ಮಾಡಥಾರೆಂದು ಯಾದವರೆಲ್ಲ ಕೋಪ ಉಳ್ಳವರಾಗಿಹೋರು. ವಿವಿದ ಮೈಂದರಿಗೆ ಬ್ರಹ್ಮದೇವರ ವರವಿಹೋದು. ಅಮೃತ ಪಾನ ಮಾಡಿ ಅವಧ್ಯರಾಗಿಹೋರು. ಮಹಾ ಬಲಿಷ್ಟರು, ದಾರಿಂದಲೂ ಸೋಲಿಸಲಿಕ್ಕೆ ಶಕ್ಯರಲ್ಲೆಂದು, ಕಮಲನಾಭ ಬಲರಾಮಗೆ ಶಕ್ತಿಕೊಟ್ಟು ಕಳುಹಿದನು. ವಿವಿದ ರೈವತಪರ್ವತಕ್ಕೆ ಬಂದಿರಲಾಗಿ, ಕೃಷ್ಣ ಕೊಟ್ಟ ಸಾವರ್ಥಿಯಿಂದ ಬಲರಾಮ ಅವನ್ನ ಕೊಂದುಬಿಟ್ಟನು. ತನ್ನ ತಮ್ಮನ್ನ ಬಲರಾಮ ಕೊಂದನೆಂಬ ವಾರ್ತಿ ಕೇಳಿ, ಮೈಂದ ರೈವತಪರ್ವತದವ್ಯಾಲೆ ಕುಳಿತು, ದ್ವಾರಾವತಿಯ ವ್ಯಾಲೆ ಕಲ್ಲಿನ ಮಳಿಗರೆದನು. ಬಲರಾಮ ಸ್ವಾಮೀ ಶುಕ್ಲ ಕೇಶಾವೇಶದಿಂದ ಮೈಂದನ ಹೊಡದು ಕೊಂದುಬಿಟ್ಟನು. ವಿವಿದ ಮೈಂದ ತಮಸ್ಸಿಗೆ ಹೋಗಿ ಬಿದ್ದರು. ಅಶ್ವಿನೀದೇವತಿಗಳು ಶುದ್ಧರಾದರು. ಹೀಂಗೆ ಬಲರಾಮ ಎರಡು ಪರಾಕ್ರಮ ತೋರಿಸ್ಯಾನೆ. ಇನ್ನು ಮೂರನೇ ಪರಾಕ್ರಮ—ದುರ್ಯೋಧನಗೆ ಲಕ್ಷಣಾ ಎಂಬ ಹೆಣ್ಣುಮಗಳು, ರತೀ ಅವತಾರ, ಆಕೀ ಸ್ವಯಂವರ ಆಗತಿತ್ತು. ದೇಶದೇಶದ ರಾಯರೆಲ್ಲ ಸ್ವಯಂವರಕ್ಕೆ ಬಂದಿದ್ದರು. ಕೃಷ್ಣನ ಮಗ ಸಾಂಬ, ಜಾಂಬವತೀಲಿ

ಹುಟ್ಟಿದವ. ಲಕ್ಷಣಾ ಸ್ವಯಂವರ ಆಗತದೆಂದು ಕೇಳಿ ದ್ವಾರಾವತಿಯಿಂದ ಹಸ್ತಿನಾವತಿಗೆ ಹೋಗಿ, ತನ್ನ ನಿಜಸ್ತ್ರೀ ಆದಕಾರಣ ಸಮಸ್ತ ರಾಯರೂ ನೋಡ ನೋಡತಿರಲಿಕ್ಕೇ ಲಕ್ಷಣಾನ್ನ ಕೊಂಡುಬರಲು, ಸಾಂಬ ತನ್ನ ನಿಜಪತಿ ಎಂದು ತಿಳದು ಸುಮ್ಮಗೆ ಇದ್ದಳು. ಗಂಡನಿಗೆ ಅನುಕೂಲಳಾದಳು. ಸಮಸ್ತ ರಾಯರೂ ನೋಡಲಿಕ್ಕೇ, ಸಾಂಬ ಲಕ್ಷಣಾನ್ನ ದ್ವಾರಾವತಿಗೆ ಕೊಂಡುಬರಲಿಕ್ಕೆ, ಕರ್ಣ ಭೂರಿಶ್ರವ ಮೊದಲಾದವರೆಲ್ಲ, ಗೋಪಾಲಕನ ಮಗ ನಮ್ಮ ಅರಸನ ಮಗಳನ್ನು ಕೊಂಡುಹೋಗಥಾನೆಂದು, ಅರಸನ ಮಗಳನ್ನ ಅರಸನ ಮಗನಿಗೇ ಮದುವಿ ಮಾಡಿಕೊಡಬೇಕೆಂದು, ಸೈನ್ಯದಿಂದ ಯುಕ್ತರಾಗಿ ಸಾಂಬನ ಬೆನ್ನಟ್ಟಿಹೋಗಿ, ಕೈಸೆರಿ ಹಿಡದು ತಂದರು. ಯಾದವರು ದಾರಿಂದಲೂ ಸೋಲಲಿಕ್ಕೆ ಶಕ್ಯರಲ್ಲ. ಕರ್ಣ, ಭೂರಿಶ್ರವ ಮೊದಲಾದವರು ಬಲಶಕ್ತಿಯಿಂದ ಸಾಂಬನ್ನ ಹಿಡಕೊಂಡು ಹೋದರೆಂಬ ವಾರ್ತಿ ದ್ವಾರಾವತಿಗೆ ಬಂತು. ಯಾದವಸೇನ, ಸಾಂಬನ್ನ ಬಿಡಿಸಿ ತರಬೇಕಾಗಿ ಹಸ್ತಿನಾವತಿಗೆ ಹೋಗಲಿಕ್ಕೆ, ಬಲರಾಮ ಯಾದವರನ್ನೆಲ್ಲ ನಿವಾರಿಸಿದ. ಏನು ಕಾರಣವೆಂದರೆ, ದುರ್ಯೋಧನ ತನ್ನ ಶಿಷ್ಯ, ತಾನು ಅವನ ಪಕ್ಷಪಾತಿ ಆದ-ಕಾರಣ ಯಾದವರಿಗೆಲ್ಲ ಹೇಳಿದ. 'ಬೀಗರ ಸಂಗಡ ದ್ವೇಷ ಕಟ್ಟಬಾರದು. ಒಬ್ಬರಿಂದಾದರು ಬಂದರೂ ವಿವೇಕಿಯಾದವ ಕ್ಷಮಿಸಿಕೊಂಡು ಒಳ್ಳೇತನ ಬಳಸಬೇಕು, ವೈರಿತನ ಕಟ್ಟಬಾರದೆಂದು ನೀತಿಗಳು ಹೇಳಿ, ಸಾಂಬನ ಹೆಂಡತೀ ಸಹ ಬಿಡಸಿ ತರಥೀನಿ' ಎಂದು, ಯಾದವರಿಂದ ಯುಕ್ತನಾಗಿ, ಹಸ್ತಿನಾವತಿಗೆ ಹೋದನು.

ಬಲರಾಮ ಬಂದ ವಾರ್ತಿ ಕೇಳಿ, ದುರ್ಯೋಧನ ಪೂಜಾಸಾಧನದ್ರವ್ಯದಿಂದ ಯುಕ್ತನಾಗಿ ಬಂದು ಪೂಜಿ ಮಾಡಿದನು. ಪೂಜಿ ಮುಗಿದಮ್ಯಾಲೆ, ಬಲರಾಮ ಉಗ್ರಸೇನರಾಯನ ಆಜ್ಞಾಪತ್ರ ಕೊಟ್ಟು ಮಾತನಾಡಿದ. 'ನಮ್ಮ ಅರಸು ಉಗ್ರಸೇನರಾಯ ಹೇಳಿ ಕಳುಹಿಕೊಟ್ಟಾನೆ, ನಮ್ಮ ಚಿಕ್ಕ ಸಾಂಬನ್ನ ಶೀಘ್ರ ಬಿಡಿರೆಂದು. ರಾಯನ ಅಪ್ಪಣಿ ಶಿರಸಾವಹಿಸಿಕೊಂಡು ಸಾಂಬನ್ನ ಬಿಡು' ಎನಲಿಕ್ಕೆ, ದುರ್ಯೋಧನಗೆ ಬಹಳ ಸಿಟ್ಟು ಬಂತು. 'ನಾವು ಕುರುಕುಲದವರು ಅರಸರು. ಉಗ್ರಸೇನರಾಯ ಏಕದೇಶದ ರಾಯ. ನಮಗೆ ಆಜ್ಞಾಪತ್ರ ಕಳಿಸೋಣ ಯೋಗ್ಯವಲ್ಲ. ಯಾದವರು ನಮ್ಮ ಪಾದಾಕ್ರಾಂತರು, ನಮ್ಮ ಕೈಕೆಳಗಿನವರು. ಪಾದರಕ್ಷೇ ತಲೀಮ್ಯಾಲೆ ಏರಿಧಾಂಗಾಯಿತು. ನಾವು ರಾಜಾಧಿರಾಜರು ಕುರುಕುಲದವರು.' ಹೀಂಗಂತ ದುರ್ಯೋಧನ ಸಿಟ್ಟಿನಿಂದ ಮಾತಾಡಲಿಕ್ಕೆ, ಬಲರಾಮ ಹಸ್ತಿನಾವತೀಲಿದ್ದರೂ ನಿರ್ಭಯದಿಂದ ಕೋಪಾವಿಷ್ಟನಾಗಿ, ತನ್ನ ನೇಗಿಲಿನಿಂದ ಹಸ್ತಿನಾವತಿಗೆ ಹಾಕಿ ಎಳಿಯಲಿಕ್ಕೆ. ಹಸ್ತಿನಾವತಿ ತಲಿಕೆಳಗಾಗಿ ಭಾಗೀರಥೀಯೊಳಗೆ ಬೀಳಹೊಕ್ಕಿತು. ಕುರುಕುಲೋತ್ತಮರು, ತಾವು ಗ್ರಾಮಸಹವಾಗಿ ನಾಶವಾದೇವು ಎಂದು ಬಲರಾಮಗೆ ಶರಣು ಬಂದು ಪ್ರಾರ್ಥನ ಮಾಡಿದರು. 'ಸ್ವಾಮಿ ನಿಮ್ಮ

ಪರಾಕ್ರಮ ಅರಿತವರಲ್ಲ. ಪಟ್ಟಣ ಸಹ ನಮ್ಮನ್ನ ರಕ್ಷಿಸು' ಎಂದು ಬೇಡಿಕೊಳ್ಳಲು, ನೇಗಿಲು ಹಿಂದಕ್ಕೆ ತೆಗೆದುಕೊಂಡನು. ಪಟ್ಟಣ ಡೊಂಕಾಗಿ ನಿಂತಿತು. ಹೀಂಗೆ ಬಲರಾಮನ ಪರಾಕ್ರಮ ಕಂಡು, ಅನೇಕ ಪ್ರಕಾರ ಬಹುಮಾನ ಮಾಡಿ; ಸಾಂಬನಿಗೆ ಲಕ್ಷಣಾ ವಧುವಿ ಮಾಡಿಕೊಟ್ಟು, ಅಳಿಯನಿಗೆ ವರದಕ್ಷಿಣೆ, ಚದುರಂಗಸೇನ, ದಾಸದಾಸೇರು, ವಸ್ತ್ರಾಭರಣ ರತ್ನಗಳು ಕೊಟ್ಟನು. ಹಾಂಗೆ ಕೃಷ್ಣಗೆ ಉಡುಗೊರಿ ಉತ್ಸಾಹಗಳು, ದಿವ್ಯ ರತ್ನಗಳು ಸಮಸ್ತ ಯಾದವರಿಗೂ ಕಳುಹಿಕೊಟ್ಟ. ಬಲರಾಮ ಯಶಸ್ವಿಳ್ಳವನಾಗಿ, ಜಯಶೀಲನಾಗಿ, ಸಾಂಬನ್ನ ಕೂಡಿಕೊಂಡು ದ್ವಾರಾವತಿಗೆ ಬಂದನು. ಇಂಥಾ ಬಲರಾಮನೇವೆ ಸ್ವಾಮೀ ಶುಕ್ಲಕೇಶಾವೇಶವುಳ್ಳವನಾಗಿ ಸಾಂಬನ್ನ ಕೂಡಿಕೊಂಡು ಮತ್ತೂ ಅದ್ಭುತ ಚರಿತ್ರ ತೋರಿಸ್ಯಾನೆ. ಬಲರಾಮ ಅಚ್ಯುತನ ಆವೇಶ ಇಲ್ಲದೇ ಇದ್ದ ವ್ಯಾಳ್ಯಾದಲ್ಲಿ ಭೀಮಸೇನನ ಕೈಯ ಸೋಲುವ. ಆವೇಶ ಇದ್ದ ವ್ಯಾಳ್ಯಾದಲ್ಲಿ, ಬಲರಾಮನ ಎದುರಿಗೆ ಭೀಮಸೇನ ನಿಂದರತಿದ್ದಿಲ್ಲ, ಮುಷ್ಟಿಪೆಟ್ಟು ತಿಂದು ಸುಮ್ಮನಿರುವ, ಬಾಲಕತನದಲ್ಲಿ ಆವೇಶ ಇದ್ದಾಗಲೇ, ಸ್ವಾಮೀ ದ್ರೋಹ ಪ್ರಾಪ್ತವಾದೀತೆಂದು ಸೋಲುವನಲ್ಲದೆ, ಭೀಮಸೇನ ತನ್ನ ಸಾಮರ್ಥ್ಯ ತೋರಿಸತಿದ್ದಿಲ್ಲ. ಆವೇಶ ಇಲ್ಲದ ವ್ಯಾಳ್ಯಾದಲ್ಲಿ ಬಲರಾಮ ಸೋಲುವ. ಈ ಪ್ರಕಾರ ಕೃಷ್ಣ-ರಾಮರು ದ್ವಾರಾವತಿಯಲ್ಲಿ ಕ್ರೀಡಿಸತಿಹೋರು.

ಹೀಂಗಿರಲಿಕ್ಕೆ, ಬಾಣಾಸುರನ ಮಗಳು ಉಷಾದೇವಿ, ಸ್ವಪ್ನದಲ್ಲಿ ಅನಿರುದ್ಧನ್ನ ಭೋಗಿಸತಿದ್ದಳು. ಬೆಳಗಾದಮ್ಯಾಲೆ ತನ್ನ ಗೆಳತಿ ಚಿತ್ರಲೇಖಾಗೆ ಹೇಳಿದಳು. 'ಸ್ವಪ್ನದಲ್ಲಿ ಸುಂದರಪುರುಷ ಭೋಗಿಸ್ಯಾನೆ. ಆ ಪುರುಷನ್ನ ಕೊಂಡುಬಾ' ಎಂದಳು. 'ಪುರುಷನ್ನ ಎಲ್ಲಿ ಹುಡುಕಿ ತರಬೇಕು? ದಾವ ಪುರುಷನ್ನ ತರಲಿ' ಎಂದು ಭುವನತ್ರಯ ಚಿತ್ರದಲ್ಲಿ ಉತ್ತಮವಾಗಿ ಬರೆದಳು. ಆ ಚಿತ್ರದಲ್ಲಿ ದ್ವಾರಾವತಿ ಬರೆದಿತ್ತು. ಆ ಪಟ್ಟಣದಲ್ಲಿ ಕೃಷ್ಣ ಬಲರಾಮ ಪ್ರದ್ಯುಮ್ನ ಅನಿರುದ್ಧ ಮೊದಲಾದವರನ್ನೆಲ್ಲ ಬರೆದಿರಲಿಕ್ಕೆ, ಅನಿರುದ್ಧನ್ನ ಕಂಡು, 'ಈ ಪುರುಷನ್ನ ಕೋಡುಬಾ' ಎಂದು ಆಜ್ಞಾಪಿಸಿದಳು. 'ಈ ಪುರುಷ ದಾರ ಮಗ?' ಎಂದು ಕೇಳಿದಳು. 'ಕೃಷ್ಣನ ಮೊಮ್ಮಗನೆಂದು ಹೇಳಲು, ಕೊಂಡುಬಾರೆಂದು ಉಷಾದೇವಿ ಹೇಳಿದಳು. ಚಿತ್ರಲೇಖಾ ರಾತ್ರೀಲಿ ಮಾಯದಿಂದ ಅನಿರುದ್ಧನ್ನ ಆಕಾಶಮಾರ್ಗದಿಂದ ಕೊಂಡುಬಂದು, ಬಾಣಾಸುರನ ಮಗಳ ಸಮೀಪದಲ್ಲಿಟ್ಟಳು. ಸ್ತ್ರೀಪುರುಷರು ಭೋಗ ಮಾಡಲಿಕ್ಕೆ, ದ್ವಾರಪಾಲಕರು, ಕನ್ಯಾಸಂರಕ್ಷಣೆ ಮಾಡುವವರಿಗೆ ತಿಳಿಯಿತು. ಈ ವಾರ್ತೆ ಹ್ಯಾಂಗೆ ಹೇಳಲಿಲ್ಲೆಂದು ಬಾಣಾಸುರ ದಂಡಿಸ್ಯಾನೆಂದು, 'ರಾತ್ರೀ ವ್ಯಾಳ್ಯಾದಲ್ಲಿ ಪುರುಷ ಬಂದು ನಿನ್ನ ಮಗಳನ್ನ ಭೋಗಿಸ ಥಾನೆ' ಎಂದು ದೂತರು ಹೇಳಲಿಕ್ಕೆ ಬಾಣಾಸುರ 'ಉಷಾದೇವಿಯನ್ನ ಭೋಗಿಸುವಂಥ ಜಾರಪುರುಷನ್ನ ಕೊಂಡುಬನ್ನಿ' ಎಂದು ತನ್ನ ಬಲ ಕಳುಹಿದನು.'

ಅನಿರುದ್ಧ ಆ ಸೈನ್ಯ ಕಂಡು ಲಾಳಮುಂಡಿಗಿ ಹಿಡಕೊಂಡು ಮಹರ್ಬಲನೆಲ್ಲ ಕೊಂದು, ಕೆಲವು ಸೈನ್ಯ ಓಡಿಸಿಬಿಟ್ಟ. ಇಷ್ಟಾಗಲಿಕ್ಕೆ, ಸಾವಿರ ತೋಳುಳ್ಳ ಬಾಣಾಸುರ ತಾ ಬಂದು ನಾಗಾಸ್ತ್ರ ಪ್ರಯೋಗ ಮಾಡಲಿಕ್ಕೆ, ಸರ್ಪಗಳು ಹೋಗಿ ಕೈಕಾಲು ಬಿಗಿದು ಹಿಡಿದವು. ಅನಿರುದ್ಧ ಮಹಾಪ್ರಬಲ, ಅಂಥಾವಗೆ ಹಿಡದು ಕೈಸೆರಿ ಕೊಂಡು ಸೆರಿಮನಿಯೊಳಗೆ ಹಾಕಿದನು. ಈ ವಾರ್ತಿ ದ್ವಾರಾವತಿಗೆ ಹೋಯಿತು. ಸ್ವಾಮಿ ಗರುಡವಾಹನನಾಗಿ, ಮೊಮ್ಮಗನ್ನ ಬಾಣಾಸುರ ಸೆರಿಹಾಕಿದನೆಂದು, ಬಲರಾಮ ಮುಂತಾದವರಿಂದ ಯುಕ್ತನಾಗಿ ಬಾಣಾಸುರನ ಪಟ್ಟಣಕ್ಕೆ ಬರಥಾನೆ. ಮಾರ್ಗದಲ್ಲಿ ದಾರಿಗೂ ಬಿಡಗೊಡದೆ ಅಗ್ನಿ ಕಾದುಕೊಂಡಿದ್ದ. ಆತನ ಸೋಲಿಸಿದ ತರುವಾಯ, ಅಂಗೀರಸನಾಮಕ ಅಗ್ನಿ ಅಡ್ಡ ಬರಲಿಕ್ಕೆ, ಲೀಲಾಮಾತ್ರದಲ್ಲಿ ಓಡಿಸಿಬಿಟ್ಟ.

ಮಹಾರುದ್ರ, ಬಾಣಾಸುರ ತನ್ನ ಭಕ್ತನೆಂದು ಬಾಗಿಲಲ್ಲಿ ವಾಸಮಾಡಿಕೊಂಡಿಹ, ತನ್ನ ಭೂತಗಣಗಳಿಂದ ಯುಕ್ತನಾಗಿ ಸ್ವಾಮೀ ಕೂಡ ಯುದ್ಧಕ್ಕೆ ಬಂದನು. ಸ್ವಾಮಿ ಶ್ರೀಕೃಷ್ಣ ಲೀಲಾಮಾತ್ರದಲ್ಲಿ ಭೂತಗಳನ್ನೆಲ್ಲ ಓಡಿಸಿಬಿಟ್ಟ. ಶಿವನ ಭೃತ್ಯರು ಶೈವಜ್ವರ, ಬಲರಾಮನ ಮ್ಯಾಲೆ ಬೆಂವಟು ಚಿಂವಟಿ ಚಲ್ಲಲಿಕ್ಕೆ, ತಾಪಜ್ವರದಿಂದ ಬಲರಾಮ ಬಹಳೇ ದುಃಖಬಡಹೊಕ್ಕ. ಜ್ವರದಿಂದ ಮೂರ್ಛಿ ಉಳ್ಳವನಾಗಿ ಬೀಳಲಿಕ್ಕೆ, ಸ್ವಾಮಿ ಬಲರಾಮನ್ನ ಅಪ್ಪಿಕೊಂಡ. ಸ್ವಾಮೀ ಅಂಗಸ್ಪರ್ಶವಾಗಲಿಕ್ಕೆ ತಾಪಜ್ವರದಿಂದ ರಹಿತನಾಗಿ ಸ್ವಸ್ಥ ಅಂತಃಕರಣ ಉಳ್ಳವನಾದ. ಸ್ವಾಮಿ ಶೈವಜ್ವರ ಕೊಲ್ಲಬೇಕಾದರೆ ಭೃತ್ಯನ ಭೃತ್ಯನ್ನ ತಾ ಕೊಲ್ಲಬಾರದೆಂದು, ತಾನು ವೈಷ್ಣವಜ್ವರ ಹುಟ್ಟಿಸತ, ಭೃತ್ಯನಿಗೆ ಭೃತ್ಯನಿಂದ ಸೋಲಿಸಬೇಕೆಂದು, ಆ ಕ್ಷಣ ಶೈವಜ್ವರನ ಮ್ಯಾಲೆ ಬಿಡಲಿಕ್ಕೆ, ವೈಷ್ಣವಜ್ವರ ಶೈವಜ್ವರವನ್ನ ನುಂಗಲಿಕ್ಕೆ ಹೋಯಿತು. ಶೈವಜ್ವರ ಕೃಷ್ಣಗೆ ಶರಣು ಬಂತು. ಜ್ವರಸ್ತೋತ್ರ ಹರಿವಂಶದಲ್ಲಿ ಬಹಳ ಹೇಳೀದೆ. ಸ್ವಾಮಿ, ಶೈವಜ್ವರನ ಸ್ತೋತ್ರಕ್ಕೆ ಮೆಚ್ಚಿ, ಕೊಲ್ಲೋದು ನಿವಾರಿಸಿದ. ಸ್ವಾಮಿ ಸರ್ವೇಶ, ಸರ್ವಸಮರ್ಥ ತಾನಾದರೂ ನೀಚನ ಕೂಡ ತಾನು ಯುದ್ಧ ಮಾಡದೆ, ಪರಸ್ಪರ ಗೆದ್ದನೆಂಬೋ ಹಾಂಗೆ ತೋರಿಸಿದನು. ಇದರಿಂದ ದುಷ್ಟಜನಕ್ಕೆ ಮಿಥ್ಯಾಜ್ಞಾನ, ಮಿಥ್ಯಾಮೋಹ ಹೆಚ್ಚಿಸೋಣ, ಬೆಳಸೋಣ ಈ ರೀತಿ ಲೀಲಾ ತೋರಿಸಥಾನೆ.

ಇಷ್ಟಾಗಲಿಕ್ಕೆ ಮಹಾರುದ್ರ ತಾನೇ ಬಂದ. ಸ್ವಾಮಿ ವಿಜೃಂಭಣಾಸ್ತ್ರ ಬಿಟ್ಟ. ಅಸ್ತ್ರಸಾವ ರ್ಥಿಯಿಂದ, ಮಹಾರುದ್ರ ಎಚ್ಚರಿಲ್ಲದೆ, ತ್ರಿಶೂಲ ಬಿಟ್ಟುಕೊಟ್ಟ, ಕಲ್ಲಿನೋಪಾದಿ ನಿಂತ. ಇದನ್ನೆಲ್ಲ ಬ್ರಹ್ಮರಾಯ ತಿಳದು, ಮಗನಾದ ರುದ್ರ ಮಾಡಿದ ಅನ್ಯಾಯ ತನಗೆ ಬಂದೀತಾಗಿ, 'ಇದೇನನರ್ಥ ಮಾಡಿದಿ! ಸರ್ವೇಶ್ವರನ ಕೂಡ ಯುದ್ಧ ಆಚರಿಸೋಣ ಆಯುಕ್ತ.' ಈ ಪ್ರಕಾರ, ಮಹಾರುದ್ರಗೆ ಬಹಳೇ

ಬುದ್ಧಿ, ಯುಕ್ತಿ ಹೇಳಿದ. 'ನಾವೆಲ್ಲ ಸ್ವಾಮೀ ಅಧೀನರು. ಮೂಗು ಪೋಣಿಸಿದ ಎತ್ತಿನಂತೆ ರಮಾಬ್ರಹ್ಮಾದಿ ಜಗತ್ತು ಸ್ವಾಮಿ ಅಧೀನ. ಸ್ವಾಮೀ ದ್ರೋಹ ಮಾಡ. ಬಾರದು' ಎಂದು, ಬ್ರಹ್ಮರಾಯ ದೃಷ್ಟಾಂತ ತೋರಿಸಬೇಕಾಗಿ, ಮಗನ್ನ ಕೂಡಿಕೊಂಡು ಕೃಷ್ಣನ ಉದರದೊಳಗೆ ಹೋಗಲು, ಶಿವ ಅಲ್ಲಿ ಸ್ಥಂಬದೋಪಾದಿ ನಿಂತದ್ದು ತೋರಿಸಿ, 'ಎಲೋ ಅಪ್ಪ, ನೀನು ರುದ್ರಪದವಿಗೆ ಬರಬೇಕಾದರೆ ನಾಲ್ವತ್ತು ಕಲ್ಪ ತಪಸ್ಸು ಮಾಡಿ ಈ ಪದವಿಗೆ ಬಂದಿಡಿ.' ಈ ರೀತಿ ಅನೇಕ ನೀತಿಗಳು ಹೇಳಿ, ಉದರದಿಂದ ಹೊರಗೆ ಬರಲಿಕ್ಕೆ, ಮಹಾರುದ್ರಗೆ ಎಚ್ಚರಿಕೆ ಆಗಿ, 'ಇದೇನು ಅನರ್ಥ ಮಾಡಿಕೊಂಡು ಸ್ವಾಮೀ ದ್ರೋಹಕ್ಕೆ ನಾ ಪಾತ್ರನಾದೆ!' ಎಂದು ಸ್ವಾಮಿಗೆ ನಮಸ್ಕರಿಸಿ ಸ್ತೋತ್ರ ಮಾಡಿ, ಮಹಾರುದ್ರ ಸಮೀಪದಲ್ಲಿ ನಿಂದರಲಿಕ್ಕೆ, ಬಾಣಾಸುರ ಕೃಷ್ಣನ ಕೂಡ ಯುದ್ಧ ಮಾಡಬೇಕೆಂದು ತಾನೇ ಬಂದ. ಸ್ವಾಮಿ ಬಾಣಾಸುರನ ಸಾವಿರ ತೋಳುಗಳ ಛೇದಿಸಿ, ಎರಡು ಭುಜ ಉಳ್ಳವನ್ನ ಮಾಡಿದ. ಆಗ ಶಿವನು 'ಸ್ವಾಮಿ, ಬಾಣಾಸುರ ನನ್ನ ಭೃತ್ಯ, ಭಕ್ತನಿದ್ದಾನೆ. ಚಕ್ರ ಉಪಸಂಹಾರ ಮಾಡಬೇಕು. ಇವನ್ನ ಕೊಲ್ಲಬ್ಯಾಡ' ಎಂದು ಬೇಡಿಕೊಂಡ. ಸ್ವಾಮಿ ಚಕ್ರದಿಂದ ಶಿರಚ್ಛೇದನ ಮಾಡದೆ ಬಿಟ್ಟು-ಕೊಟ್ಟನು. ಈ ಪ್ರಕಾರ, ಕೃಷ್ಣ ಅನಂತ ಪರಾಕ್ರಮ ಉಳ್ಳಾತ, ಸ್ಕಂದ, ರುದ್ರ, ಅಗ್ನಿ, ಶೈವಜ್ವರ ಮೊದಲಾದ ಶೈವಭಕ್ತರನ್ನ ಸೋಲಿಸಿ, ಉಷಾದೇವಿ ಅನಿರುದ್ಧನ್ನ ಕೂಡಿಕೊಂಡು ದ್ವಾರಾವತಿಗೆ ಯಾದವರಿಂದ ಯುಕ್ತನಾಗಿ ಬಂದನು.

ಸ್ವಾಮಿ ಪ್ರಳಯಕಾಲದಲ್ಲಿ ಏನೂ ಅಸಾಧ್ಯವಿಲ್ಲದೆ ಮಹಾರುದ್ರನ ತಿಂಥಾನೆ. ಇಂಥಾ ಅನಂತ ಮಹಾರುದ್ರರನ್ನ ಗೆದ್ದಾನೆ; ರುದ್ರನ ಭೃತ್ಯರನ್ನ ಗೆದ್ದದ್ದು ಆಶ್ಚರ್ಯವಲ್ಲ. ಸ್ವಾಮಿ ಲಕ್ಷ್ಮೀರಮಣ ಬ್ರಹ್ಮಾದಿ ಜಗತ್ತಿಗೆ ಒಡಿಯ, ಉಸಿರು ಬಿಡೋ ವ್ಯಾಪಾರ ಸ್ವಾಮೀ ಅಧೀನ. ಜ್ಞಾನಾನಂದ ಪರಿಪೂರ್ಣ, ದೇಶತಃ ಕಾಲತಃ ವ್ಯಾಪ್ತಳು, ಲಕ್ಷ್ಮೀದೇವಿಗೆ ಸಹ ಸ್ವಾತಂತ್ರ್ಯವಿಲ್ಲ. ಸ್ವಾಮಿ ಸರ್ವತಂತ್ರ-ಸ್ವತಂತ್ರ ಅನಂತಶಕ್ತಿ ಉಳ್ಳಾತಗೆ, ಶಿರೋವ್ಯಾಧಿ ಇದ್ದ ಶಿವನ್ನ ಸೋಲಿಸಿದ್ದು ಏನಾಶ್ಚರ್ಯ. ಸ್ವಾಮಿ, ಚಿತ್ರಲೇಖಾ ಎಂಬ ದಾಸಿ ಸಹ ಉಷಾದೇವಿ ಕೂಡಿ-ಕೊಂಡು, ಅನಿರುದ್ಧನ್ನ ಕೂಡಿಕೊಂಡು ದ್ವಾರಾವತಿಗೆ ಬಂದನು. ಪ್ರದ್ಯುಮ್ನ, ಬಲರಾಮ, ಯಾದವರಿಂದ ಕೂಡಿಕೊಂಡು ಕಮಲೇಕ್ಷಣ ತನ್ನ ಮನ ಬಂದ-ಹಾಂಗೆ ಕ್ರೀಡಿಸತಿಹ. ಹೀಂಗೆ ಸ್ವಾಮಿಯ ಅನಂತ ಅದ್ಭುತ ಕರ್ಮಗಳು ಅಗಣ್ಯ ಅವೆ. ಇಂಥಾ ಸ್ವಾಮೀ ಚರಿತ್ರ ನಿರಂತರ ಬ್ರಹ್ಮಾದಿ ದೇವತಿಗಳು ಕೊಂಡಾಡಥಾರೆ. ಇಂಥಾ ಕೃಷ್ಣನ ಮಹಿಮ, ಆಸ್ತಿಕತನದಿಂದ ನಿತ್ಯ ಕೇಳಿದ ಪಕ್ಷವೇ ಶ್ವೇತದ್ವೀಪ ದರ್ಶನದಿಂದ ಏನು ಸುಖ ಆಗತದೆ ಅಂಥಾ ಸುಖ, ಹರಿಕಥಾಮೃತ ಕೇಳಿದ್ದರಿಂದ ಆಗತದೆ. ಈ ರೀತಿ ಹರಿವಂಶ ಕಥ ನಿಂದರಸಿ, ಇನ್ನು ಭಾರತ ಕಥ ಹೇಳಥಾರೆ.

ಅರ್ಜುನ ವಿದ್ಯ ಕಲಿಯಲಿಕ್ಕೆ ಐದು ವರುಷ ಸ್ವರ್ಗಕ್ಕೆ ಹೋಗಿದ್ದ. ತನ್ನ ಅಣ್ಣ ಧರ್ಮರಾಯ, ತನ್ನ ವಿಯೋಗದಿಂದ ಬಹಳ ದುಃಖಬಡಶಾಲಿದ್ದಾನು, 'ಒಂದೇ ಕಡಿ ವನವಾಸ ಇದ್ದರೆ ಕ್ಲೇಶಕ್ಕೆ ಕಾರಣ. ತೀರ್ಥಯಾತ್ರಿಗೆ ಹೋಗೆಂದು ಹೇಳಿಕಳುಹಿಸಬೇಕು' ಎಂದು, ಅರ್ಜುನ ಇಂದ್ರಗೆ ಹೇಳಿದನು. ದೇವೇಂದ್ರ ಲೋಮಶನ ಕರೆದು, 'ಧರ್ಮರಾಯನ ಸಮೀಪಕ್ಕೆ ಹೋಗಿ ತೀರ್ಥಯಾತ್ರಿ ಮಾಡೆಂದು ಹೇಳು.' ಹೀಂಗಂತ ದೇವೇಂದ್ರನ ಆಜ್ಞವಾಗಲಿಕ್ಕೆ, ಲೋಮಶ ಬ್ರಾಹ್ಮಣ, ಸ್ವರ್ಗಪತಿ ಆಜ್ಞ ಕೊಂಡು ಧರ್ಮರಾಯನ ಸಮೀಪಕ್ಕೆ ಬಂದು, ಅರ್ಘ್ಯಾದಿ ಪೂಜಿ ಕೊಂಡು, ಅರ್ಜುನನ ಪರಾಕ್ರಮ, ದೇವೇಂದ್ರನ ಅರ್ಧಾಸನ ದಲ್ಲಿ ಕುಳಿತು ವಿದ್ಯ ಕಲಿಯೋಣ ಇದನ್ನೆಲ್ಲ 'ನಿನಗೆ ಹೇಳಿಕಳುಹಿಕೊಟ್ಟಾನೆ. ನಿಮಗೆ, ತೀರ್ಥಯಾತ್ರಿ ಮಾಡೋದರಗೋಸ್ಕರ ಹೇಳೋದರ ಸಲುವಾಗಿ ನಿಮ್ಮ ಬಳಿಗೆ ನನ್ನ, ಅರ್ಜುನ, ದೇವೇಂದ್ರ ಕಳುಹಿಕೊಟ್ಟಾರೆ' ಎಂದು ಲೋಮಶ ಬ್ರಾಹ್ಮಣ ಹೇಳಲಿಕ್ಕೆ, ಧರ್ಮರಾಯ ಅರ್ಜುನನ ಮ್ಯಾಲೆ ಸ್ನೇಹ ಉಳ್ಳಾತ, ಅವರ ದೇವೇಂದ್ರ ಸಹ ಹೇಳಿಕಳುಹ್ಯಾನೆಂದು, ಲೋಮಶಬ್ರಾಹ್ಮಣನ್ನ ಕೂಡಿ-ಕೊಂಡು, ಈ ಭೂಮಿಯಲ್ಲಿ ನಾಲ್ಕೂ ದಿಕ್ಕುವಿದಿಕ್ಕುಗಳಲ್ಲಿ ಎಷ್ಟು ತೀರ್ಥಗಳವೆ, ಅಷ್ಟೂ ಯಾತ್ರಿ ಮಾಡಲಿಕ್ಕೆ ನಡದನು. ಧರ್ಮರಾಯನ ಸಂಗಡ ಎಂಭತ್ತೆಂಟು ಸಾವಿರ ಋಷಿಗಳು, ಹತ್ತು ಸಾವಿರ ಸನ್ಯಾಸಿಗಳು ನಡದರು. ಒಂದೊಂದು ಕ್ಷೇತ್ರದಲ್ಲಿ ಒಂದೊಂದು ರಾತ್ರಿ ನಿಂತು, ತೀರ್ಥಗಳಲಿ ಮೂರು ಸಂಧ್ಯಾವಂದನ ಮಾಡಿ, ವಿಶ್ವೇಶ್ವರನಲ್ಲಿ ಭಕ್ತಿಯುಳ್ಳಾತನಾಗಿ, ಪ್ರಭಾಸಕ್ಷೇತ್ರಕ್ಕೆ, ತಾವು ಮಾಡಿದ ತೀರ್ಥಯಾತ್ರಿಯ ಫಲ ಕೃಷ್ಣಗೆ ಅರ್ಪಿಸಲೋಸುಗ ಬಂದನು.

ಪಾಂಡವರು ಬಂದರೆಂದು ವಾರ್ತಿ ಕೇಳಿ, ಬಲರಾಮ ಯಾದವರಿಂದ ಯುಕ್ತನಾಗಿ, ಶ್ರೀಕೃಷ್ಣ, ಪ್ರಭಾಸಕ್ಷೇತ್ರಕ್ಕೆ ಬಂದನು. ಪಾಂಡವರು ದೊಡ್ಡ ದೊಡ್ಡ ಯಾತ್ರಿ ಮಾಡಿ ಬಂದಾರೆಂದು ಸರ್ವರೂ ನಮಸ್ಕರಿಸಿದರು. ಭೀಮಸೇನ ತಪೋವೇಷ ಧರಿಸಿಕೊಂಡು, ಜಟಾ ಬೆಳಸಿಕೊಂಡು ವಲ್ಕಲಧಾರಿಯಾಗಿದ್ದಾನೆ. ದೇಹದಮ್ಯಾಲೆ ಮಣ್ಣು ಕುಳಿತದೆ. ಭೀಮಸೇನನ ಕಷ್ಟ ಕಂಡು, ಬಲರಾಮ ದುರ್ಯೋಧನನ್ನ ನಿಂದಿಸಹೊಕ್ಕ. ನೋಡಿದರೆ ಕೌರವರ ಪಕ್ಷಪಾತಿ, ಪಾಂಡವರನ್ನ ಕಂಡು ಮರುಗಥಾನೆ! ಇಂಥಾ ಬಲರಾಮನ ಕಂಡು ಸಾತ್ಯಕಿ ಮಾತನಾಡಿದ. 'ಬಲರಾಮ, ನಿನ್ನ ಅಪ್ಪಣೆ ಆದಕ್ಷಣವೇ ಕರ್ಣನ ಸಹವಾಗಿ ದುರ್ಯೋಧನಾದಿಗಳ ಕೊಂದು, ಸಕಲ ಸಾಮ್ರಾಜ್ಯ ಕಸಗೊಂಡು ಬರಥೀನಿ. ಧರ್ಮರಾಯ ವನವಾಸ ಆಗುವ ಪರಿಯಂತ ರಾಜ್ಯ ಆಳವಲ್ಲನೆಂದರೆ, ನಮ್ಮ ಅಭಿಮನ್ಯುವಿಗೆ ಪ್ರತ್ಯವಾಯ ಬ್ಯಾರೆ ಇಲ್ಲ. ಅಭಿಮನ್ಯುವಿನ ಕೈಯ ರಾಯು ಬರುವ ಪರಿಯಂತ ರಾಜ್ಯ ಪದವಿ ಆಳಿಸುವ. ಸಿಂಹನ ಪದವಿ ಸಿಂಹನ ಮರಿಗೆ ಕೊಡುವ. ರಾಯು ತನ್ನ

ವ್ರತ ಮುಗಿಸಿದ ಮ್ಯಾಲೆ ರಾಜ್ಯಪದವಿ ಆಳಲಿ.' ಈ ಪ್ರಕಾರ ಸಾತ್ಯಕಿ ಮಾತನಾಡಲಿಕ್ಕೆ, ಕೃಷ್ಣ ಪಾಂಡವರ ಕಡಿಗೆ ನೋಡಿದ. 'ಸ್ವಾಮಿ ಜಗನ್ನಿವಾಸ, ಸಮುಸ್ತರ ಹೃತ್ಕಮಲದಲ್ಲಿರತಿದ್ದಿ, ನಮ್ಮ ಚಿತ್ತಾಭಿಪ್ರಾಯ ಬಲ್ಲಿ.' ಹೀಂಗಂತ ಪಾಂಡವರು ಅನಲಿಕ್ಕೆ, 'ಎಲ್ಲೆ ಸಾತ್ಯಕಿ, ಪಾಂಡವರು ಅಸಮರ್ಥರಲ್ಲ, ಪರಮ ಸಮರ್ಥರು. ಪರರ ಬಾಹುಬಲದಿಂದ ರಾಜ್ಯ ಸಂಪಾದಿಸುವವರಲ್ಲ. ತಮ್ಮ ಭುಜ-ಪರಾಕ್ರಮದಿಂದ ವೈರಿಗಳ ಸೋಲಿಸಿ ಕೊಂದು, ಸಾಮ್ರಾಜ್ಯ ಆಳ್ತಾರು.' ಹೀಂಗೆಂದು ಶ್ರೀಕೃಷ್ಣ ಮಾತನಾಡಲಿಕ್ಕೆ, 'ಸ್ವಾಮಿ ನಮ್ಮ ಅಭಿಪ್ರಾಯ ತಿಳಿದಿ' ಅಂತ ಮಾತನಾಡಿ, ತಾವು ಮಾಡಿದ ತೀರ್ಥಯಾತ್ರಿ ಫಲ, ಪಾಂಡವರು ಶ್ರೀ-ಕೃಷ್ಣಗೆ ಅರ್ಪಿಸಿದರು.

ಪ್ರಭಾಸಕ್ಷೇತ್ರದಿಂದ ಸಾವಿರ ಯೋಜನ ದೂರ ಹಿಮವತ್ಪರ್ವತವದೆ. ಅಲ್ಲಿಗೆ, ದ್ರೌಪದೀ ರಾಜಪುತ್ರಿ ಹೆಂಗಸು, ಹ್ಯಾಂಗೆ ಏರಬೇಕು! ಪರ್ವತ ಹ್ಯಾಂಗೆ ಇಳಿಯಬೇಕು! ಪರ್ವತ ಏರಲಾರಳೆಂದು ಘಟೋತ್ಕಚನ್ನ ನೆನಸಿದರು. ಘಟೋತ್ಕಚ ಬಹುಮಂದಿ ರಾಕ್ಷಸರನ್ನ ಕೂಡಿಕೊಂಡು ಬಂದನು. ತನ್ನ ತಾಯಿ ದ್ರೌಪದೀನ್ನ ಹೆಗಲಮ್ಯಾಲೆ ಕೂಡ್ರಿಸಿಕೊಂಡನು. ಮಿಗಿಲಾದ ರಾಕ್ಷಸರು ಪಾಂಡವರನ್ನ ಹೆಗಲಮ್ಯಾಲೆ ಕೂಡ್ರಿಸಿಕೊಂಡರು. ಹೀಂಗಬದರಿ ವೇದವ್ಯಾಸಾಶ್ರಮಕ್ಕೆ ಬಂದು, ವೇದವ್ಯಾಸನ ಪೂಜಿಗೈದು ಅಪ್ಪಣಿ ಕೊಂಡು, ಮಹಾರುದ್ರನ ಮಾವ ಹಿಮವತ್ಪರ್ವತ ದಾಟಿ, ಅಲ್ಲಿಂದ ನಿಷದಪರ್ವತ ಉಲ್ಲಂಘಿಸಿ, ಮೇರುಪರ್ವತದ ಪೂರ್ವಭಾಗ, ಗಂದಮಾದನ ಪರ್ವತಕ್ಕೆ ಹೋದರು. ಅಲ್ಲಿ ನರ ನಾರಾಯಣ ಇದ್ದಾರೆ. ಮುನಿಗಳಿಂದ ವಾಲ್ಮೀಕಿಸಿಕೋಥಾರೆ. ಅಂಥಾ ನರ ನಾರಾಯಣರ ಕಂಡು, ಒಹಳ ಭಕ್ತಿಯಿಂದ ಪೂಜಿ ಮಾಡಹೊಕ್ಕರು. ಹೀಂಗಿರಲಿಕ್ಕೆ, ದ್ರೌಪದೀ ಭೀಮ-ಸೇನ ಏಕಾಂತದಲ್ಲಿ ಕುಳಿತಿರಲು, ಗರುಡ ದೊಡ್ಡ ಸರ್ಪನ್ನ ಕೊಂಡುಹೋಗಲಿಕ್ಕೆ, ಪಕ್ಷದ ಗಾಳಿಯಿಂದ ಕಮಲ ಹಾರಿ ದ್ರೌಪದೀ ಸಮೀಪಕ್ಕೆ ಬಂತು. ಅದೆಂಥಾದ್ದು ಎಂದರೆ ಉದಯಿಸುವ ಸೂರ್ಯನೋಪಾದಿ ಕೆಂಪು ವರ್ಣ ಉಳ್ಳದ್ದು. ಸುವಾಸನಿ ಉಳ್ಳದ್ದು. ಇಂಥಾ ಕಮಲ ಕಂಡು ದ್ರುಪದಾತ್ಮಜಳು, ಬಹಳ ಸಂಭ್ರಮದಿಂದ ಮಾತನಾಡಿದಳು. 'ಒಂದು ಕಮಲ ನನಗೆ ಸಾಲದು. ಇಂಥಾ ಸೌಗಂಧಿಕಾ ಕುಸುಮ ಒಹಳೇ ಮುಡಿಗೆ ಮುಡಕೊಂಡೇನು.' ಗಂಡನ ಸಾಮರ್ಥಿ ಬಲ್ಲಳಾದ ಕಾರಣ, ಭೀಮಸೇನನ್ನ ಬೇಡಿಕೊಂಡಳು. ದೇವದಾನವರು ಒಕ್ಕಟ್ಟಾಗಿ ಬಂದರೂ ಭೀಮಸೇನನ್ನ ಸೋಲಿಸಲಿಕ್ಕೆ ಶಕ್ತರಲ್ಲ ಎಂಬೋದು ಬಲ್ಲಳಾದಕಾರಣ ಪುಷ್ಪ ಬೇಕೆಂದು ಬೇಡಿಕೊಂಡಳು. ದೇವಶಾಕಾರ್ಯವಾಗಬೇಕಾಗಿ ದ್ರೌಪದೀಯಿಂದ ಪ್ರಾರ್ಥಿತನಾಗಿ, ಕೈಲಿ ಗದ ಕೊಂಡು ಭೀಮಸೇನ ಗಂದಮಾದನ ಪರ್ವತ ಏರಿದನು. ಭೀಮಸೇನ ದೈತ್ಯರ ಸಂಹರಿಸಲಿಕ್ಕೆ ಮ್ಯಾಲಕ್ಕೆ ಹೋಗಥಾನೆಂದು

ದೇವತಿಗಳೆಲ್ಲ ಸ್ತೋತ್ರ ಮಾಡತಿಹೋರು. ದಾನವರು ಸಿಂಹ, ವ್ಯಾಘ್ರ, ಕರಡೀ-ರೂಪ ಧರಿಸಿ ಭೀಮಸೇನನ ಎದುರಿಗೆ ಬರತಿಹೋರು. ಭೀಮಸೇನ ತನ್ನ ಕಾಲ ಪೆಟ್ಟಿನಿಂದ ಸಿಂಹ ಶಾರ್ದೂಲನೆಲ್ಲ ಕೊಂದು ಬಿಷ್ಟತಿಹ. ಪರ್ವತದಲ್ಲಿದ್ದ ಪೈಕ್ಷ ತನ್ನ ತೊಡೀ ಗಾಳಿಯಿಂದ ಹಾರಿಸಿಬಿಡತಿಹ.

ಹೀಂಗೆ ಹೋಗತಿರಲಿಕ್ಕೆ ಹನುಮಂತ ತನ್ನ ಬಾಲ ಅಡ್ಡ ಹಾಕಿಕೊಂಡು ಕುಳಿಥಾನೆ, ಮಾರ್ಗ ಬಿಡವಲ್ಲ. ಹನುಮಂತ ಭೀಮ ಒಂದೇ ಅವತಾರವಾದರೂ, ಭೀಮಸೇನ ತಾ ಸರ್ವಜ್ಞ ಬಲ್ಲರೂ ಸರಿಯೆ, ಅಜ್ಞಾನಿಯೋಪಾದಿ ಹನುಮಂತನ್ನ ಕೇಳಥಾನೆ. ಏನುಕಾರಣ ಕೇಳಬೇಕೆಂದಲ್ಲಿ, ದೇವತಿಗಳು ಮನುಷ್ಯರಾಗಿ ಹುಟ್ಟಿದ ಪಕ್ಷವೇ, ಮೂಲರೂಪ ಅರಿತರೂ ಮನುಷ್ಯಸ್ವಭಾವ ತೋರಿಸೋಣ ದೊಡ್ಡ ಧರ್ಮ. ಹನುಮಂತ ಕೃತಯುಗದಲ್ಲಿ ಹುಟ್ಟ್ಯಾನೆ. ಭೀಮಸೇನ ದ್ವಾಪರಾಂತ್ಯದಲ್ಲಿ ಹುಟ್ಟ್ಯಾನೆ. ಹನುಮಂತನ ನೋಡಲಿಕ್ಕೆ ಭೀಮಸೇನನ ಬಲ ಕೊರತಿ. ಮುಖ್ಯ-ಪ್ರಾಣನ ಅವತಾರಗಳಿಗೆ ತಮ್ಮ ಮೂಲಶಕ್ತಿ ಕೊಂಡೇನೆಂದರೆ ಬರತದೆ. ಆದರೂ ತಮ್ಮ ಸ್ವರೂಪ ಪ್ರಕಟ ಮಾಡೋದಿಲ್ಲ. ಯುಗಾನುಸಾರ ಜ್ಞಾನ ಕೊರತಿ ಮಾಡಿಕೊಂಡು ಮನುಷ್ಯರಂತೆ ಪ್ರವರ್ತಿಸಥಾರೆ. ಋಜುಗಣದವರಿಗೆ ತಮ್ಮ ಮೂಲಶಕ್ತಿ ಕೊಂಡೇನೆಂದರೆ ಬರತದೆ. ಮಿಗಿಲಾದ ರುದ್ರ ಮೊದಲಾದ ದೇವತಿಗಳಿಗೆ ಕ್ರಮದಿಂದ ಬರತದಲ್ಲದೆ, ಸಂಪೂರ್ಣ ಮೂಲಶಕ್ತಿ ಬಾಹೋದಿಲ್ಲ. ಇದರಪ್ಪಂದೆ ನಾರಾಯಣಗೆ ತಿಳಿಯಬಾರದು. ಹರಿಯ ಮೂಲರೂಪಕ್ಕೆ, ಮತ್ಸ್ಯಾದಿ ಅವತಾರಕ್ಕೆ ಭೇದ ತಿಳೀಬಾರದು. ಸನ್ನುತ್ತ ಶಕ್ತಿ ಸಂಪೂರ್ಣ ಜ್ಞಾನ ಬಲ ವೀರ್ಯ ಸಕಲವೂ, ಸ್ವಾಮೀ ಮೂಲರೂಪಕ್ಕೆ ಇದ್ದಂಥಾದ್ದು ಅವತಾರಕ್ಕೆ ಉಂಟು. ಬಲರಾಮ ಅರ್ಜುನ ಇವರಿಗೆ ನರಾವೇಶದಿಂದ ಬಲ ಹೆಚ್ಚತದೆ ಭೀಮ-ಸೇನ ಬಲ ವೀರ್ಯ ಉಳ್ಳಾತನಾದರೂ, ಅಸುರರ ಮೋಹಿಸೋದರಗೋಸ್ಕರ ಸ್ವಲ್ಪೀ ಶಕ್ತಿ ತೋರಿಸಥಾನೆ.

ಹನುಮಂತ ತನ್ನ ಬಾಲ ಎತ್ತವಲ್ಲ. ಭೀಮಸೇನ ತನ್ನ ಅಶಕ್ತತನ ತೋರಿಸಲಿಕ್ಕೆ, ಹನುಮಂತ ತನ್ನ ಬಾಲ ಸುತ್ತಿಕೊಂಡು ಕುಳಿತನು. ಭೀಮಸೇನ ಹನುಮಂತನ್ನ ಬೇಡಿಕೋಥಾನೆ. 'ಸೀತಾ ಶೋಧನಾರ್ಥ ಎಂಥಾ ರೂಪ ಧರಿಸಿದ್ದಿ ಅಂಥಾ ರೂಪ ನನಗೆ ತೋರಿಸಬೇಕು' ಎಂದಲ್ಲಿ, ತನ್ನ ಅದ್ಭುತರೂಪ, ತನ್ನ ದ್ವಿತೀಯಾವತಾರ ಉಳ್ಳವನಿಗೋಸ್ಕರ ತೋರಿಸಿ, ಶತಕೋಟಿ ರಾಮಾಯಣ ಮಹಾ ಚರಿತ್ರ ಭೀಮಸೇನಗೆ ಹೇಳಿದನು. ನಾಲ್ಕು ಯುಗದ ಧರ್ಮ ಹೇಳಿದ. 'ನಮ್ಮ ಸ್ವಾಮಿ ರಘುನಾಥ, ನಿಮ್ಮ ಭಾವನಾಗಿ ಕೃಷ್ಣಾವತಾರ ಮಾಡಿದ್ದಾನೆ' ಎಂದು ಹನುಮಂತನ ಮುಖದಿಂದ ಕೇಳಿ, ಭೀಮಸೇನ ಬಹಳೀ ಪ್ರೀತನಾಗಿ, ಹನುಮಂತನ್ನ ತನ್ನ ತಮ್ಮ ಅರ್ಜುನನ ಧ್ವಜಸ್ಥಂಬದಲ್ಲಿ ಕೂಡ್ರಬೇಕೆಂದು

ಬೇಡಿಕೊಂಡ. 'ನಿನ್ನ ಗರ್ಜನಿಯಿಂದ ಶತ್ರುಗಳು ಪರಾಜಿತರಾದಾರು.' ಹೀಂಗೆಂದು ಸ್ಪಾರ್ಥಿಸಲಿಕ್ಕೆ 'ಅವಶ್ಯ ನಿನ್ನ ತಮ್ಮ ಅರ್ಜುನನ ಧ್ವಜಸ್ಥಂಬದಲ್ಲಿ ಕುಳಿತು, ಗರ್ಜನಿ ಮಾಡೇನು' ಎಂದು ವರವು ಕೊಟ್ಟನು. ಭೀಮಸೇನ ಹನುಮಂತನ ಅಪ್ಪಣಿ ಕೊಂಡು, ಗಂದಮಾದನ ಪರ್ವತ ಏರಲಿಕ್ಕೆ ಉದ್ಯುಕ್ತನಾದ.

ಭೀಮಸೇನ ಪರ್ವತ ಏರಲಿಕ್ಕೆ ಅಲ್ಲಿ ದಿವ್ಯ ಸರೋವರ, ಮನುಷ್ಯರಿಂದ ಅಗಮ್ಯ, ಬಂಗಾರದ ಕಮಲಗಳು ಯಥೇಷ್ಟ, ಸರೋವರದಲ್ಲಿ ಅವೆ. ತನ್ನ ಮದವಣಗಿತ್ತಿ ದ್ರೌಪದೀ ನಿಮಿತ್ತ ಕಮಲಗಳ ಕೊಯ್ಯಬೇಕು. ಅಷ್ಟರೊಳಗೆ, ಕುಬೇರನ ಭೃತ್ಯರು ನಿವಾರಿಸಿದರು. 'ಕುಬೇರನ ವನ, ಕಮಲಗಳ ಹಿಡಿದ ಪಕ್ಷವೇ ನಿನಗೆ ಕುಬೇರನ ಆಣಿ ಆದೆ. ಕಮಲ ಒಯ್ಯಬ್ಯಾಡ' ಎಂದು ಸಾರತಿಹೋರು. ಇಷ್ಟಾಗಲಿಕ್ಕೆ ಕ್ರೋಧನಾಮಕ ರಾಕ್ಷಸರು ಹತ್ತುಸಾವಿರ ಲಕ್ಷ ವೆಂಬೋದು, ನೂರು ಕೋಟಿ, ರುದ್ರನ ವರಬಲದಿಂದ ಬಂದರು. ಮೊದಲೇ ವಾಗ್ಯುದ್ಧದಿಂದ ಶಿವನ್ನ ದೂಷಿಸಿ ಸೋಲಿಸಿದ. ತದನಂತರ ಕ್ರೋಧನಾಮಕ ರಾಕ್ಷಸರು ಶಸ್ತ್ರಾಸ್ತ್ರದಿಂದ ಮಳಿಗರೆಯತ ಬರೆ, ಭೀಮಸೇನ, ಪರಾಕ್ರಮರನ್ನ ಆರಿಸಿ ಆರಿಸಿ, ಒಂದು ಲಕ್ಷ ಮಂದೀನ್ನ ಲೀಲಾಮಾತ್ರದಲ್ಲಿ ಕೊಂದುಬಿಟ್ಟನು. ವೀರರೆಲ್ಲ ಸಾಯಲಿಕ್ಕೆ, ಕೆಲವರು ಓಡಿಹೋದರು. ವಾಯುಕುಮಾರನಾದಂಥ ಭೀಮಸೇನ ಶಿವಶಾಸ್ತ್ರನೆಲ್ಲ ಹೊಟ್ಟು ಮಾಡಿ ಹಾರಿಸಿಬಿಟ್ಟು, ನಾರಾಯಣ ಸರ್ವೋತ್ತಮನೆಂದು ಸ್ಥಾಪಿಸಿ, ಆ ದಿವ್ಯ ಸರೋವರದಲ್ಲಿ ಹೊಕ್ಕು, ದಿವ್ಯಾಂಬು ಪಾನ ಮಾಡಿ, ದ್ರೌಪದೀ ನಿಮಿತ್ತ ದಿವ್ಯ ಕಮಲಗಳ ಕೊಂಡನು.

ಧರ್ಮರಾಯಗೆ ದುಶ್ಚಿನ್ಹ, ಎಡಗಣ್ಣು ಹಾರೋಣ, ಎಡಭುಜ ಅಲ್ಲಾಡೋಣವಾಗಲಿಕ್ಕೆ, ಧರ್ಮರಾಯ ದ್ರೌಪದೀನ 'ಭೀಮಸೇನ ಎಲ್ಲಿಹಾನೆ? ಎಲ್ಲಿ ಹೋಗ್ಯಾನೆ?' ಎಂದು ಕೇಳಲು, 'ಸೌಗಂಧಿಕಾಪುಷ್ಪ ತರಲೋಸುಗ, ಗಂದಮಾದನ ಪರ್ವತಕ್ಕೆ ಹೋಗ್ಯಾನೆ' ಎಂದು ದ್ರೌಪದೀ ಹೇಳಲಾಗಿ, ಭೀಮಸೇನಗೆ ಏನೋ ಆಗ್ಯದೆಂದು ಘಟೋತ್ಕಚನ್ನ ಸ್ಮರಿಸಲಿಕ್ಕೆ, ಅವನು ಅಪಾರ ರಾಕ್ಷಸರನ್ನ ಕರಕೊಂಡು ಬಂದನು. ರಾಕ್ಷಸರ ಹೆಗಲಮ್ಯಾಲೆ ಕುಳಿತು, ಧರ್ಮರಾಯ ಭೀಮಸೇನನ್ನ ಹುಡಕತ ಬರಲಾಗಿ, ಭೀಮಸೇನ ಕ್ರೋಧನಾಮಕ ದೈತ್ಯರನ್ನ ಕೊಂದು, ಜಯಶೀಲನಾಗಿ, ಸೌಂಗಧಿಕಾಕುಸುಮ ಕೊಂಡುಬರಥಾನೆ. ಮಾರ್ಗದಲ್ಲಿ ಭೆಟ್ಟಿ ಆಯಿತು. ವರ್ತಮಾನ ಹೇಳಲಾಗಿ, ರಾಯ ಭೀಮಸೇನಗೆ ಬುದ್ಧಿದೋಷ ಇಟ್ಟನು. ಭೀಮಸೇನನ ಕೈಯ ಹೊಡಿಸಿಕೊಂಡುಹೋದ ದೈತ್ಯರು, ಕುಬೇರನ ಮುಂದೆ ಭೀಮಸೇನನ ಆಗ್ಗಳಿಕೆ ಹೇಳಲು, ಕುಬೇರಗೆ ಆಸುರಾವೇಶ ಇದ್ದಿಲ್ಲಾದಕಾರಣ, ಭೀಮಸೇನನ ಆಗ್ಗಳಿಕೆ ಕ್ಷಮಿಸಿಕೊಂಡ. ಧರ್ಮರಾಯ ಭೀಮಸೇನಗೆ ಬುದ್ಧಿದೋಷ ಇಡತಿಹ. ಕುಬೇರ ಬಹಳ ಪ್ರಬಲ. ಮಹಾರುದ್ರ

ಆತಗೆ ಗೆಲಿಯನಾಗಬೇಕು. ದೈತ್ಯರೆಲ್ಲ ದೇವತೆಗಳಿಗೆ ಅಂಜಿ ಕುಬೇರನ್ನ ಶರಣು-ಹೊಕ್ಕರು. ಆ ದೈತ್ಯರು ಕುಬೇರನ ವನ ಕಾದುಕೊಂಡು ಸರೋವರ ಆಶ್ರಯಿಸಿ-ಕೊಂಡಿದ್ದರು. ಅಂಥಾ ದೈತ್ಯರನ್ನ ಕೊಂದಿದ್ದಾನೆಂದು ರಾಯ, ತಮ್ಮ ಭೀಮಸೇನಗೆ ಅನಲಿಕ್ಕೆ, ಭೀಮಸೇನನ ಯಶಸ್ಸು ಹೆಚ್ಚಿಸಬೇಕಾಗಿ ಕುಬೇರನ ಅರಮನಿಯಲ್ಲಿರುವ ಪಂಚವರ್ಣದ ಪುಷ್ಪ, ವಾಯು ತನ್ನ ಗಾಳಿಯಿಂದ ಕೊಂಡು ಬಂದು, ದ್ರೌಪದೀ ಭೀಮಸೇನರ ಮಧ್ಯೆ ಬಿಟ್ಟನು. ಪಂಚವರ್ಣದ ಪುಷ್ಪ ಕಂಡು ದ್ರೌಪದೀ ಭೀಮಸೇನಗೆ ಬೇಡಿಕೊಂಡಳು. 'ಹೇ ನಾಥ, ನನಗೆ ಪಂಚವರ್ಣದ ಪುಷ್ಪ ತಂದುಕೊಡು' ಎಂದು ಬೇಡಿಕೊಳ್ಳಲಿಕ್ಕೆ, ದ್ರೌಪದೀ ವ್ಯಾಲಿನ ಸ್ನೇಹದಿಂದ ಕೈಲಿ ಗದ ಹಿಡಕೊಂಡು, ಧನುರ್ಬಾಣ ಧರಿಸಿ, ಮನುಷ್ಯರಿಂದ ಅಸಾಧ್ಯವಾದಂಥ ಪರ್ವತ ಏರಿ ಕುಬೇರನ ಅರಮನಿ ಹೊಕ್ಕು, ಸೌಗಂಧಿಕ, ಪಂಚವರ್ಣದ ಪುಷ್ಪ ಕೊಳ್ಳಲಿಕ್ಕೆ, ಅಲ್ಲೆ ಮೂರು ಪದ್ಮ ರಾಕ್ಷಸರು ಕಾವಲಿಹೋರು, ಅವರಿಗೆಲ್ಲ ಅಗ್ರೇಸರ ಮಣಿಮಂತ ದೈತ್ಯ, ಮಹಾರುದ್ರನ ವರಬಲದಿಂದ ಮಹಾ ತೀಕ್ಷ್ಣನಾಗಿಹ—ಭೀಮಸೇನನ ವ್ಯಾಲಿ ಬಾಣ ಮಳಿಗರಿಯಲಿಕ್ಕೆ, ಭೀಮಸೇನ ತನ್ನ ಬಾಣಸಮುದಾಯದಿಂದ ಸರ್ವ ರಾಕ್ಷಸರನ್ನೂ ಕೊಂದನು. ಅವರೆಲ್ಲ ತಮಸ್ಸಿಗೆ ಹೋಗಿ ಬಿದ್ದರು. ಮಣಿಮಂತ ದೈತ್ಯ ಸತ್ತು, ಕಲಿಯುಗದಲ್ಲಿ ಸಂಕರನಾಗಿ ಹುಟ್ಟಿ, ದುಶ್ಶಾಸ್ತ್ರಗಳ ಮಾಡ್ತಾನೆ. ಜೀವೇಶ್ವರ ಐಕ್ಯ, ನಾರಾಯಣ ನಿರ್ಗುಣ ನಿರಾಕಾರ, ವಿಶ್ವ ಮಿಥ್ಯ ಇಂಥಾ ಕುಶಾಸ್ತ್ರಗಳ ಮಾಡಿ, ಆ ಪಾಪವಶದಿಂದ ಘೋರವಾದ ಅಂಧಂತಮಸ್ಸಿಗೆ ಹೋಗಿ ಬಿದ್ದಾನು. ಮೂರು ಪದ್ಮ ರಾಕ್ಷಸರು ಸತ್ತರು. ತಮ್ಮ ಗೆಲಿಯ ಮಣಿಮಂತನೂ ಸತ್ತನೆಂದು ವಾರ್ತೆ ಕೇಳಿ, ಕುಬೇರ ಅಸುರಾವೇಶದಿಂದ ಕೋಪಾವಿಷ್ಟನಾಗಿ ಬರಲಿಕ್ಕೆ, ಭೀಮಸೇನ ಕೈಲಿ ಗದ ಹಿಡಕೊಂಡು ಸಿಂಹನಾದ ಮಾಡಿದನು. ಭೀಮಸೇನನ ಸಿಂಹನಾದ ಕೇಳಿ ಧರ್ಮರಾಯ, ಭೀಮಸೇನ ಮತ್ತೇನು ಅನರ್ಥ ಆರಂಭಿಸಿದನೆಂದು ಚಿಂತಾಗ್ರಸ್ಥನಾಗಿ, 'ಎಲೌ ದ್ರೌಪದೀ ಭೀಮಸೇನನ್ನ ಮತ್ತೆಲ್ಲಿ ಕಳುಹಿದಿ!' ಎಂದು ಕೇಳಲು, ಸೌಗಂಧಿಕಾ ಪುಷ್ಪ ತರಲು ಗಂದಮಾದನ ಪರ್ವತದ ವ್ಯಾಲಿ ಹೋಗ್ಯಾನೆಂದು ದ್ರೌಪದೀ ಹೇಳಲಿಕ್ಕೆ, ಧರ್ಮರಾಯ ಬ್ರಾಹ್ಮಣರಿಂದ ಯುಕ್ತನಾಗಿ ಭೀಮಸೇನನ ಸಮೀಪಕ್ಕೆ ಹೋದ.

ಕುಬೇರ ಅಸುರಾವೇಶದಿಂದ ಭೀಮಸೇನನ ಮಹಿಮ ತಿಳಿಯದೆ ಯುದ್ಧಕ್ಕೆ ಬಂದನು. ದೊಡ್ಡಾತನ ಕೂಡ ಯುದ್ಧ ಮಾಡಬಾರದೆಂದು ಹಿಂದಕ್ಕೆ ತಿರುಗಿದನು. ಏಕೆಂದರೆ, ಅಗಸ್ತ್ಯನ ಶಾಪದಿಂದ ಗೆಲಿಯ ಮಣಿಮಂತ ಸತ್ತನೆಂದು, ಭೀಮಸೇನನ ಕೈಯ ಯುದ್ಧ ಮಾಡದೆ ಹಿಂದಕ್ಕೆ ತಿರುಗಿದನು. ಅಗಸ್ತ್ಯನ ಶಾಪವಾಗಲಿಕ್ಕೆ ಕಾರಣವೇನೆಂದರೆ, ಅಗಸ್ತ್ಯಋಷಿ ತಪಸ್ಸು ಮಾಡತ ಕುಳಿತಿರಲಿಕ್ಕೆ ಮಣಿಮಂತ,

ದೈತ್ಯರ ಕೂಡಿಕೊಂಡು, ಆಕಾಶಮಾರ್ಗದಿಂದ ಹೋಗುವಾಗ ಅಗಸ್ತ್ಯನ ಕಂಡು ಅತನ ಮ್ಯಾಲೆ ಉಗುಳಿದನು. ಆದ್ದರಿಂದ ಭೀಮಸೇನನ ಕೈಯ ಮೃತನಾಗೆಂದು ಅಗಸ್ತ್ಯ ಶಾಪ ಕೊಟ್ಟದ್ದರಿಂದ, ಮಣಿಮಂತ ದೈತ್ಯ ಸತ್ತನು. ಕುಬೇರಗೆ ಅಸುರಾವೇಶ ಹೋಯಿತು. ತರುವಾಯ ಪಾಂಡವರು ದೇವಾಂಶರು ಬಂದಾರೆಂದು, ತನ್ನ ಮನಿಗೆ ಸ್ನೇಹದಿಂದ ಕರೆದುಕೊಂಡುಹೋದನು. ಪಾಂಡವರು ಕುಬೇರನ ಮನಿಯೊಳಗೆ ಬಹಳ ಸುಖದಿಂದ ಇರಹೊಕ್ಕರು. ಹೀಂಗೆ ನಾಲ್ಕು ವರುಷ ಹೋದವು.

ಅರ್ಜುನ ವಿದ್ಯಾ ಕಲಿಯಲಿಕ್ಕೆ ಹೋಗಿ, ಸ್ವರ್ಗದಲ್ಲಿ ಐದು ವರುಷ ನಿಂತು, ಅನೇಕ ವಿದ್ಯ ಸಂಪಾದಿಸಿ, ಭ್ರಾತೃಗಳ ಭೆಟ್ಟಿಗೆ ಹೋಗಬೇಕಾಗಿ ಅಪ್ಪಣಿ ಕೇಳಲಿಕ್ಕೆ, ದೇವೇಂದ್ರ ತನಗೆ ಗುರುದಕ್ಷಿಣಿ ಕೊಡೆಂದು ಕೇಳಿದನು. 'ನನ್ನ ವೈರಿಗಳು ನಿವಾತಕವಚರು, ಬ್ರಹ್ಮದೇವರ ವರಬಲದಿಂದ ಅವಧ್ಯರಾಗ್ಯಾರೆ, ನಾ ಕೊಲ್ಲಲಿಕ್ಕೆ ಶಕ್ತನಲ್ಲ. ದೇವದೈತ್ಯರಿಂದ ಸಾಯುಧಾಂಗೆ ವರವು ಪಡೆದಾರೆ. ನನಗೂ ಬ್ರಹ್ಮದೇವರ ವರವದೆ. ದೇವತಾದೇಹದಿಂದ ನಿವಾತಕವಚರ ಕೊಲ್ಲಲಾರೆ. ಮನುಷ್ಯದೇಹ ಧರಿಸಿದರೆ ಅವರನ್ನ ಕೊಲ್ಲಬಹುದೆಂದು ವರವು ಕೊಟ್ಟ್ಯಾನೆ. ಆದಕಾರಣ ನೀನು ನನ್ನ ಆವೇಶವುಳ್ಳವ. ನಿವಾತಕವಚರನ್ನ ಕೊಂದು ನನ್ನ ತುಷ್ಟಿಬಡಿಸು' ಎಂದು ದೇವೇಂದ್ರ ಬೇಡಿಕೊಳ್ಳಲಿಕ್ಕೆ, ಅರ್ಜುನ ಹಾಂಗೇ ಮಾಡುವುದಾಗಿ ಹೇಳಿ, ದೇವೇಂದ್ರನ ಅಪ್ಪಣಿ ಕೊಂಡು, ದಿವ್ಯ ರಥ ಏರಿಕೊಂಡು, ಭ್ರಾತೃ ಭೆಟ್ಟಿಗೋಸ್ಕರ ಗಂದಮಾದನ ಪರ್ವತದಲ್ಲಿ ಕುಬೇರನ ಮನಿಗೆ ಹೋದನು.

ಅರ್ಜುನ ಬಂದ ತರುವಾಯ ಕುಬೇರನ ಮನಿಯಲ್ಲಿ ಪಾಂಡವರು ನಾಲ್ಕು ವರುಷ ಇದ್ದರು. ಹ್ಯಾಂಗಿದ್ದರೆಂದರೆ, ನಾರಾಯಣಪರಾಯಣರಾಗಿ ವನವಾಸ

ಕ್ಲೇಶವಿಲ್ಲದೆ, ವಾಸುದೇವನ ಪೂಜೆ ಮಾಡುತ, ಭಕ್ತಿಯುಳ್ಳವರಾಗಿ ಬಹಳ ಸುಖದಲ್ಲಿದ್ದರು. ವನವಾಸಕ್ಕೆ ಬಂದು ಒಂಭತ್ತು ವರುಷವಾಯ್ತು. 'ಐವತ್ತು-ಸಾವಿರ ಯೋಜನ ನೆಲ ಬಹುದೂರ ಬಂದೀವಿ. ನಮ್ಮ ರಾಷ್ಟ್ರಕ್ಕೆ ಹೋಗಬೇಕು' ಎಂದು, ಧರ್ಮರಾಯನ ಕುರಿತು ಭೀಮಸೇನ ಮಾತನಾಡಥಾನೆ. 'ರಾಯ, ಕ್ಷತ್ರಿಯನಾಗಿ ಹುಟ್ಟಿದವ ವೈರಿಗಳ ಕೊಲ್ಲಬೇಕೆಂದು ವಾಸುದೇವನ ಆಜ್ಞೆ ಅಐ. ಕ್ಷತ್ರಿಯನಾದವ ಬಾಹುಬಲದಿಂದ ಯಶಸ್ಸು ಸಂಪಾದಿಸದಿದ್ದರೆ ದಿವ್ಯಗತಿ ಐದೋದಿಲ್ಲ. ಬ್ರಹ್ಮ, ವೈಶ್ಯ, ಶೂದ್ರ ಈ ಮೂರು ವರ್ಣದವರು ಬಾಹ್ಯಶತ್ರುಗಳ ಕೊಲ್ಲಬಾರದು. ಕಾಮಾದಿ ವೈರಿಗಳಾದ ಆಂತಃಶತ್ರುಗಳನ್ನು ಕೊಲ್ಲಬೇಕು. ಹ್ಯಾಂಗೆ ಕೊಲ್ಲಬೇಕೆಂದರೆ, ಜ್ಞಾನವೆಂಬ ಖಡ್ಗ, ಶ್ರುತಿಯೆಂಬ ಶ್ಯಾಣದವ್ಯಾಲೆ ಖುರ ಮಾಡಿ, ಅರಿಷಡ್ವರ್ಗಗಳನ್ನ ಕೊಲ್ಲಬೇಕು. ನಾವು ಕ್ಷತ್ರಿಯರು ಬಾಹ್ಯ ಶತ್ರುಗಳ ಅವಶ್ಯ ಕೊಲ್ಲಬೇಕು. ರಾಯ, ಇನ್ನು ಇಲ್ಲಿ ಇರಬಾರದು.' ಈ ಪ್ರಕಾರ ಯುಕ್ತಿವಾದ ಹೇಳಿ ಘಟೋತ್ಕಚನ್ನ ಸ್ಮರಿಸಲಿಕ್ಕೆ, ಆತ ಬರಲು ಅವನ ವ್ಯಾಲೆ ಕುಳಿತ್ತು, ಗಂದಮಾದನ ಪರ್ವತದಿಂದ ಹಿಮವತ್ಪರ್ವತ ದಾಟಿ ದಕ್ಷಿಣ-ಭಾಗದಲ್ಲಿ ಬಂದು ಇಳಿದರು.

ಬ್ರಾಹ್ಮಣರಿಗೆ ಮೃಗಮಾಂಸ ಭೋಜನ ಮಾಡಿಸಬೇಕೆಂದು, ಭೀಮಸೇನ ಮೃಗಬ್ಯಾಟಿಗೆ ಹೋದನು. ಆಯುರಾಯನ ಮಗ ನಹುಷರಾಯ, ಶಾಪದಿಂದ ಅಜಗರಸರ್ಪನಾಗಿ ಹುಟ್ಟಿದ್ದ. ಭೀಮಸೇನನ ಕಾಲಿಗೆ ಸುತ್ತುಹಾಕಿದ. ತನ್ನ ಪ್ರಶ್ನಕ್ಕೆ ಉತ್ತರ ಹೇಳಬೇಕೆನ್ನತಿಹ. 'ನಾನು ಕ್ಷತ್ರಿಯ, ವಿದ್ಯೋಪಜೀವನ ಮಾಡೆ' ಎಂದು ಭೀಮಸೇನ ನಿಂದರಥಾನೆ. ಬಿಟ್ಟರೆ ಬಿಡಲಿ. ತಾನಂತೂ ವಿದ್ಯೋಪಜೀವನ ಮಾಡಲಿಕ್ಕಿಲ್ಲೆಂದು ಭೀಮಸೇನ ನಿಂದರಲಿಕ್ಕೆ, ಅಜಗರದೇಹ ಮೃದು, ಭೀಮಸೇನನ ದೇಹ ಬಹಳೇ ಕಠಿಣ. ಅಜಗರ ಬಹಳೇ ಕಷ್ಟೇ ಆದ. ನಹುಷಗೆ ಅಜಗರದೇಹ ಬರಲಿಕ್ಕೆ ಕಾರಣವೇನೆಂದರೆ, ದೇವೇಂದ್ರ ವೃತ್ರಾಸುರನ ಕೊಂದ. ತನ್ನಿಮಿತ್ತ ಬ್ರಹ್ಮಹತ್ಯಪಾಪ ಬಂತು. ಬ್ರಾಹ್ಮಣರ ಕೊಂದ ಪಾಪ ಎಲ್ಲಿ ಹೋದರೂ ಬಿಡದು. ದೇವೇಂದ್ರ ಮಾನಸಸರೋವರದೊಳಗೆ ಕಮಲನಾಳಿನೊಳಗೆ ಹೊಕ್ಕನು. ಸ್ವರ್ಗಕ್ಕೆ ಅರಸು ಇಲ್ಲದಾಂಗಾಯಿತು. ತಮ್ಮೊಳಗೆ ತಾವು ಸ್ವರ್ಗಪದವಿ ಆಳಬಾರದೆಂದು, ದೇವತಿಗಳು ನಹುಷರಾಯನ ಸಮೀಪಕ್ಕೆ ಬಂದು, ಸ್ವರ್ಗಪದವೀ ಆಳಬೇಕೆಂದು ಹೇಳಿದರು. 'ನನ್ನಿಂದ ಇಂದ್ರಪದವಿ ಆಳೋಣ ಹ್ಯಾಂಗಾದೀತು?' ಎಂದು ನಹುಷರಾಯ ಮಾತನಾಡಲಿಕ್ಕೆ, 'ನಿನ್ನ ದೃಷ್ಟಿ ಯಾರ ವ್ಯಾಲೆ ಬಿದ್ದೀತು, ಅವರ ತಪಸ್ಸು, ಬಲ, ವೀರ್ಯ ಎಲ್ಲಾನೂ ನಿನಗೆ ಬರಲಿ' ಎಂದು ವರವು ಕೊಟ್ಟರು.

ನಹುಷರಾಯ ಸ್ವರ್ಗಸಿಂಹಾಸನ ಪದವಿ ಆಳಹೊಕ್ಕ. ನಹುಷರಾಯ, ಇಂದ್ರಪದವಿ ತನಗೆ ಬಂತೆಂದು ಸೊಕ್ಕಿನಿಂದ, ಇಂದ್ರಾಣಿ ತನ್ನ ಭೋಗಕ್ಕೆ ಯೂಕೆ ಬರವಲ್ಲಳೆಂದು, ಶಚೀದೇವಿಯನ್ನ ಭೋಗಕ್ಕೆ ಕರೆಕಳಿಸಿದ. ಶಚೀದೇವಿ ಉಪ-ಶ್ರೋತ್ರುವನ್ನು ತನ್ನ ಗುರು ಬೃಹಸ್ಪತಿ ಸಮೀಪಕ್ಕೆ ಕಳುಹಿದಳು. ಗುರುವಿನ ಯುಕ್ತಿ ಕೇಳಿ, ಶಚಿ ನಹುಷರಾಯಗೆ ಅಂದಳು, ' ನಾನು ನಿನ್ನ ವಶಳಾಗಿದ್ದೀನಿ. ನೀನು ಮಹರ್ಷಿಗಳ ಮ್ಯಾಲೆ ಅಂದಣ ಹೊರಸಿ ಅಂದಣದಲ್ಲಿ ಏರಿಕೊಂಡು ನನ್ನ ಮನಿಗೆ ಬಂದರೆ ಅನುಕೂಲಳಾದೇನು ' ಈ ಪ್ರಕಾರ ಶಚೀದೇವಿ ಮಾತು ಕೇಳಿ, ಮೂರ್ಖಾಂತಃಕರಣವುಳ್ಳ ನಹುಷರಾಯ, ಸಪ್ತಋಷಿಗಳನ್ನು ಬಿಟ್ಟಿ ಹಿಡದು, ಅಂದಣ ಹೊರಿಸಿ ಕಾಲು ಚಾಚಿಕೊಂಡು ಅಂದಣದೊಳಗೆ ಕುಳಿತು, ಶಚೀದೇವಿಯ ಮನಿಗೆ ನಡದನು. ಸಪ್ತಋಷಿಗಳೊಳಗೆ ಅಗಸ್ತ್ಯ, ನಹುಷನ ಕೂಡ ಮಾತ ನಾಡಿದನು. ' ಹೇ ನಹುಷ ವೇದ, ಪ್ರಮಾಣವೋ ಅಪ್ರಮಾಣವೋ? ' ಎಂದು ಕೇಳಲಾಗಿ, ವೇದ ಪ್ರಮಾಣ ಅಂದನೇ ಪರಸ್ತ್ರೀ ಭೋಗಿಸಬಾರದು. ಆದಕಾರಣ ಪರಸ್ತ್ರೀಯಲ್ಲಿ ಆಸಕ್ತನಾಗಿ, 'ವೇದ ಅಪ್ರಮಾಣ' ಎಂದನು. 'ವೇದ ಅಪ್ರಮಾಣ ಹ್ಯಾಂಗೆ?' ಎಂದು ಅಗಸ್ತ್ಯಋಷಿ ಪ್ರತಿಉತ್ತರ ನಡಿಸಲಿಕ್ಕೆ, ' ನನಗೆ ನೀನು ಪ್ರತಿ ಉತ್ತರ ಕೊಡೋವವ? ' ಎಂದು ಅಗಸ್ತ್ಯನ್ನ ಕಾಲಲಿ ಒದ್ದನು. ಅಗಸ್ತ್ಯನ ಜಟಿಯೊಳಗೆ ಭೃಗುಋಷಿ ಅಡಗಿಕೊಂಡಿದ್ದ. ಭೃಗುಋಷಿಗೆ ಶಾಪ ಕೊಡುವಷ್ಟು ಸಾಮರ್ಥ್ಯವಿಲ್ಲದ್ದರಿಂದ, ಆ ಋಷಿಯೊಳಗೆ ಬ್ರಹ್ಮದೇವರು ಹೊಕ್ಕು ' ಅಜಗರನಾಗಿ ಹುಟ್ಟು ' ಎಂದು ನಹುಷರಾಯಗೆ ಶಾಪ ಕೊಟ್ಟನು. ಆ ಕ್ಷಣವೇ ಸ್ವರ್ಗಪದದಿಂದ ಭ್ರಷ್ಟನಾಗಿ, ನಹುಷರಾಯ ಅಜಗರಸರ್ಪನಾಗಿ ಹುಟ್ಟಿದನು. ಅಜಗರವ್ರತ, ಎರಡು ಹಗಲು ಎರಡು ರಾತ್ರಿ, ಮೂರನೇ ದಿನ ಹಗಲು ಹೀಂಗೆ ಐದು ಉಪವಾಸ ಮಾಡಿ, ನಕ್ಷತ್ರ ಕಂಡು ಆಹಾರ ಕೊಳ್ಳಬೇಕು. ಹೀಂಗೆ ಅಜಗರವ್ರತದಿಂದ ನಹುಷ-ರಾಯ ಉಪವಾಸ ಇರಹೊಕ್ಕನು. ನಹುಷಗೆ ಸರ್ವದೇವತಿಗಳು ತಮ್ಮ ಅಧಿಕಾರ ಕೊಟ್ಟಿದ್ದರು. ಅದಷ್ಟೂ ಭೀಮಸೇನಗೆ ಬಂತು. ನಹುಷರಾಯ ಕೆಳಗೆ ಬೀಳುವಾಗ ಹ್ಯಾಂಗೆ ಉದ್ಧಾರವೆಂದು ದೇವತಿಗಳನ್ನೆ ಕೇಳಿದ್ದ. ' ನಿನ್ನ ವಂಶದವ ಮೃಗಬ್ಯಾಟಿಗೆ ಬಂದಾನು. ನೀನು ಅವನ ಕಾಲು ಹಿಡದೀಯ. ಆತ ವಿದ್ಯೋಪಜೀವನ ಮಾಡ. ಆತನ ಅಣ್ಣ ಬಂದು ನಿನ್ನ ಪ್ರಶ್ನಕ್ಕೆ ಉತ್ತರ ಕೊಡಲು ನಿನ್ನ ಅಜಗರಜನ್ಮ ಹೋದೀತು.' ಈ ಪ್ರಕಾರ ದೇವತಿಗಳು ವರವು ಕೊಟ್ಟಿದ್ದರು.

ಸ್ವರ್ಗಪದವಿಗೆ ಅರಸು ಇಲ್ಲದ ಕಾರಣ, ದೇವೇಂದ್ರನ ಬಳಿಗೆ ಅಗ್ನಿಯನ್ನು ಕಳುಹಿಸಿದರು. ಶೀಘ್ರ ಹೋಮ ಮಾಡಿ ದೇವೇಂದ್ರನ್ನ ಕರತಂದರು. ವೃತ್ರಾ-ಸುರನ್ನ ಕೊಂದದ್ದರಿಂದ ಧರ್ಮ ಅಭಿವೃದ್ಧಿ ಆಯಿತು. ಪಾಪ ಬಂದಿದ್ದಿಲ್ಲ. ದೇವೇಂದ್ರ ತನ್ನ ಪ್ರಾರಬ್ಧಕರ್ಮದಿಂದ ಕಮಲನಾಳಿನೊಳಗೆ ಹೊಕ್ಕು ದುಃಖ

ಅನುಭವಿಸಿದ. ಮುನಿಗಳು ಪಾಪ ಮಾಡಿದರೂ ಪುಣ್ಯವಾಗಿ ಫಲಿಸ್ತದೆ. ಮನುಷ್ಯರು ಪಾಪ ಮಾಡಿದರೆ ಪಾಪ ಫಲಿಸ್ತದೆ. ದೇವತಿಗಳು ಪುಣ್ಯ ಮಾಡಿದರೆ ಪುಣ್ಯವಾಗಿ ಫಲಿಸ್ತದೆ. ದೈತ್ಯರುಗಳು ಪುಣ್ಯ ಮಾಡಿದರೂ ಪಾಪವಾಗಿ ಫಲಿಸ್ತದೆ. ವೃತ್ರಾಸುರನ ಕೊಂದದ್ದರಿಂದ ದೇವೇಂದ್ರಗೆ ಪಾಪ ಬರಲಿಲ್ಲ. ನಹುಷರಾಯ ಅಜಗರನ್ನಾಗಿ ಹುಟ್ಟಿ ಇಪ್ಪತ್ತೇಳು ಮಹಾಯುಗಗಳು ಹೋದವು. ಇಪ್ಪತ್ತೆಂಟನೇ ಮಹಾಯುಗದ ದ್ವಾಪರದಲ್ಲಿ, ಭೀಮಸೇನ ಅಜಗರನ ಬಾಯೊಳಗೆ ಬಿದ್ದನು. ನಹುಷರಾಯನಲ್ಲಿ ಏನು ಪುಣ್ಯಸಾಮಗ್ರಿ ಇತ್ತೋ ಅಷ್ಟೂ ಕೇಳಬೇಕಾಗಿ—ಭೀಮಸೇನ ನಹುಷರಾಯನ ವಂಶದಾತ, ತನ್ನ ಬಲದಿಂದ ಸರ್ಪನ್ನ ಒರಸಿಬಿಡಲಾಪ—ಪ್ರಶ್ನಕ್ಕೆ ಉತ್ತರ ಹೇಳದೆ, ಸರ್ಪನ ಕೂಡ ಕಟ್ಟಿಸಿಕೊಂಡು ನಿಂತನು. ತಾನು ಬ್ಯಾಟಿಗೆ ಹೋಗಿ ಇನ್ನೂ ಒರಲಿಲ್ಲವೆಂದು ಭ್ರಾತೃಗಳು ಭೀತರಾದಾರೆಂದು ತಾ ಬಲ್ಲರೂ ಸರಿಯೆ, ವಿದ್ಯೋಪಜೀವನ ಮಾಡಿದ್ದಿಲ್ಲ. ತನಗೆ ತಾನೇ ಬಿಡತದೆಂದು ಭೀಮಸೇನ ಕಟ್ಟಿಸಿಕೊಂಡಿದ್ದ.

ಧರ್ಮರಾಯ ದ್ರೌಪದೀನ್ನ ಕೇಳಥಾನೆ, 'ಭೀಮಸೇನ ಎಲ್ಲಿಗೆ ಹೋಗ್ಯಾನೆ? ಎಲ್ಲಿಗೆ ಕಳುಹಿದ್ದಿ, ಬಹಳ ದುರ್ನಿಮಿತ್ತಗಳು ತೋರಥವೆ!' ಎಂದಲ್ಲಿ, 'ಮೃಗ-ಬ್ಯಾಟಿಗೆ ಹೋಗ್ಯಾನೆ' ಎಂದು ದ್ರೌಪದೀ ಹೇಳಿದಳು. ರಾಯ, ಭೀಮಸೇನ ದಾವ ದಿಕ್ಕಿಗೆ ಹೋಗಿಹಾನೆ ಆ ದಿಕ್ಕು ಬಳಿವಿಡಿದು ಹೋಗಥಾನೆ. ಭೀಮಸೇನನ ತೊಡೀ ಗಾಳಿಯಿಂದ ವೃಕ್ಷಗಳು ಭೂಮಿಗೆ ಒರಗ್ಯಾವೆ. ಇದೇ ಮಾರ್ಗದಲ್ಲಿ ಹೋಗ್ಯಾನೆಂದು ತಿಳಿದುಬರಲು, ಮುಂದಕ್ಕೆ ಹೋಗಲು, ಭೀಮಸೇನ ಅಜಗರನ ಬಾಯಿಒಳಗೆ ಕಟ್ಟಿಸಿಕೊಂಡು ನಿಂಥಾನೆ. ಧರ್ಮರಾಯ ಬಹಳ ಆಶ್ಚರ್ಯ ಉಳ್ಳವನಾದ. ಮಹಾ ಬಲಿಷ್ಠ, ಏನುಕಾರಣ ಬಿಡಿಸಿಕೊಳ್ಳಲಿಲ್ಲೆಂದು ಅಜಗರನ್ನ 'ನೀ ದಾರು?' ಎಂದು ರಾಯ ಕೇಳಲು, ತನ್ನ ವೃತ್ತಾಂತನೆಲ್ಲ ಧರ್ಮರಾಯಗೆ ಹೇಳಿದ. ರಾಯ, ಈತ ತಮ್ಮ ಪೂರ್ವಜನೆಂದು, ಈತಗೆ ಅಜಗರಜನ್ಮ ಬಂದದೆ, ವಿದ್ಯೋಪಜೀವನ ಮಾಡಿ, ತಮ್ಮ ಪೂರ್ವಜನ ಉದ್ಧಾರ ಮಾಡಿದರೆ ದೋಷವಿಲ್ಲ ಎಂದು ತಿಳದು, ಭ್ರಾತೃವಿನಮ್ಯಾಲಿನ ಸ್ನೇಹದಿಂದ, ತಾ ಕ್ಷತ್ರಿಯನಾದರೂ ಪ್ರಶ್ನಕ್ಕೆ ಉತ್ತರ ಹೇಳಿದ. ಅಜಗರನ ಪ್ರಶ್ನ 'ಕಣ್ಣು ತೆರದು ದಾವುದು ಮಲಗಿಕೊಂಡಿರತದೆ?' ಎಂದದ್ದಕ್ಕೆ, 'ಮೀನ ಮಲಗಿಕೊಂಡಿರತದೆ' ಎಂದು ಉತ್ತರ ಹೇಳಿದ. ಉತ್ತರಗಳು ಅರಣ್ಯಪರ್ವದಲ್ಲಿ ವಿಸ್ತಾರವಾಗಿ ಹೇಳೀವೆ. ಈ ಪ್ರಕಾರ ಪ್ರಶ್ನೋತ್ತರಗಳು ಆದಮ್ಯಾಲೆ, ನಹುಷರಾಯ, ಅಜಗರದೇಹ ಹೋಗಿ, ದಿವ್ಯ ದೇಹ ಧರಿಸಿ, ವಸ್ತ್ರ-ಭರಣ ಕುಂಡಲಗಳನ್ನಿಟ್ಟುಕೊಂಡು, ಪೀತಾಂಬರ ಧರಿಸಿ, ದಿವ್ಯ ವಿಮಾನ ಏರಿಕೊಂಡು ಸ್ವರ್ಗಕ್ಕೆ ಹೋದನು. ತಮ್ಮ ಪೂರ್ವಜ ನಹುಷರಾಯ ಸ್ವರ್ಗಕ್ಕೆ ಹೋದಮ್ಯಾಲೆ, ಧರ್ಮರಾಯ ಭೀಮಸೇನನಿಂದ ಸಹಿತನಾಗಿ ತಾವು ಇಳಿದ

ಸ್ಥಳಕ್ಕೆ ಬಂದನು. ಭೀಮಸೇನ ಅಜಗರಸರ್ಪದಿಂದ ಕಟ್ಟಿಸಿಕೊಂಡದ್ದು, ರಾಯನ ಮುಖದಿಂದ ಕೇಳಿ ದ್ರೌಪದೀ ಮೊದಲಾದವರು, ಋಷಿಗಳು ಸಹವಾಗಿ ಆಶ್ಚರ್ಯ ಉಳ್ಳವರಾದರು. 'ಭೀಮಸೇನ ಅದ್ಭುತ ಬಲವುಳ್ಳಾತ. ತನ್ನ ಅಂಗಾಲಿನಿಂದ ಸರ್ಪ ಒರಸಿಬಿಡಲಾಪ. ಇದೇನಾಶ್ಚರ್ಯ! ಎಲೋ ಅಪ್ಪಾ ಭೀಮಸೇನ, ಇಂಥಾ ಉದ್ಯೋಗ ಇಂಥಾ ಸಹನಶಕ್ತಿ ಮಾಡಬ್ಯಾಡ, ನೀನು ಮಹಾ ಬಲಿಷ್ಠನಿದ್ದೀ. ನಿನ್ನ ವಿಮೋಕ್ಷಣೆಗೋಸ್ಕರ ಏನುಕಾರಣ ಪ್ರಯತ್ನ ಮಾಡಿದ್ದಿಲ್ಲ? ನಾವು ನಿನ್ನ ಭಕ್ತರಿದ್ದೀವಿ. ಇಂಥಾ ಕರ್ಮದಿಂದ ನಮಗೆ ಬಹಳ ದುಃಖವಾಗತದೆ. ಇನ್ನಾದರೂ ನಾವು ಬೇಡಿಕೊಳ್ಳಥೀನಿ. ಅದ್ಭುತ ಪರಾಕ್ರಮ ತೋರಿಸಿ, ದಾವಾಗಲೂ ನಮಗೆ ದೃಷ್ಟಿಗೋಚರನಾಗಿರು. ನಿನ್ನ ವಿಯೋಗದಿಂದ ನಮಗೆ ಖೇದವಾಗತದೆ.' ಹೀಂಗೆಂದು ಮುನಿಗಳು ಆಪ್ಪಿಕೊಂಡು, 'ಬಹು ಪರಾಕ್ರಮ ಮಾಡತಾ ಬಾ' ಎಂದು ಬೇಡಿಕೊಂಡರು. ಪಾಂಡವರು ಹಿಮವತ್ಪರ್ವತದಿಂದ ತಮ್ಮ ಕುರು-ಕ್ಷೇತ್ರಕ್ಕೆ ಬಂದರು.

ಪಾಂಡವರು ವನವಾಸ ಮಾಡಿ ಕುರುಕ್ಷೇತ್ರಕ್ಕೆ ಬಂದರೆಂಬ ವಾರ್ತೆ ಕೇಳಿ, ಶ್ರೀಕೃಷ್ಣ ಸತ್ಯಭಾವಾನಿಂದ ಯುಕ್ತನಾಗಿ, ತನ್ನ ದರ್ಶನದಿಂದ ಪಾಂಡವರಿಗೆ ಸುಖ ಹೆಚ್ಚಿಸಿಕೊಡಬೇಕಾಗಿ, ದ್ವೈತವನಕ್ಕೆ ಬಂದನು. ಬಹುವರ್ಷ ಬಹಳೀ ದೂರ ಹೋಗಿದ್ದರು. ಆದ್ಯಂತ ವರ್ತಮಾನ, ತಮ್ಮ ಸುಖದುಃಖ ಹೇಳಿ-ಕೊಂಡರು. ಸತ್ಯಭಾವಾ ಸರ್ವಜ್ಞಳು ಆದರೂ, ದ್ರೌಪದೀ ಮುಖದಿಂದ ಪತಿವ್ರತಾಧರ್ಮ ಕೇಳಬೇಕಾಗಿ ಮಾತನಾಡಥಾಳೆ. 'ಎಲೌ ದ್ರೌಪದೀ, ನೀನು ರಾಜಪುತ್ರಿ, ಗಂಡಂದರ ಕೂಡ ವನವಾಸ ಮಾಡಿದ್ದೀ. ಐವತ್ತುಸಾವಿರ ಯೋಜನ ನೆಲ ಹೋಗೋಣ, ಇಳಿಯೋಣ, ಬಹಳೀ ಶ್ರಮಪಟ್ಟಿ. ಕಷ್ಟಕಾಲದಲ್ಲಿ ಪತಿಗಳ ಬಿಟ್ಟಿದ್ದಿಲ್ಲ. ಪತಿವ್ರತಾಧರ್ಮ ನನಗೋಸ್ಕರ ಹೇಳು' ಎಂದಲ್ಲಿ, 'ಕೇಳು ಸತ್ಯ-ಭಾಮಾ, ಸ್ತ್ರೀ ಎಂಬಾಕಿಗೆ ಪತಿಯೇ ಪರದೇವತಿ. ಸ್ತ್ರೀಗೆ ಗಂಡನಲ್ಲಿ ಬಹಳ ಭಕ್ತಿ ಇರಬೇಕು. ಆಪತ್ಕಾಲ ಬಂದರೆ ಗಂಡನ್ನ ಉದಾಸೀನ ಮಾಡಬಾರದು. ಗಂಡನಲ್ಲಿ ಬಹಳೇ ಸ್ನೇಹ ಉಳ್ಳಾಕಿಯಾಗಿರಬೇಕು. ಸಂಪತ್ತು ವಿಪತ್ಕಾಲದಲ್ಲಿ ಒಂದೇ ಭಕ್ತಿ ಇರಬೇಕು.' ಈ ಪ್ರಕಾರ ಪತಿವ್ರತಾಧರ್ಮ ಬಹಳ ಹೇಳಿದ್ದಾಳೆ. 'ಎಲೌ ದ್ರೌಪದೀ, ನೀ ಹೇಳಿದಹಾಂಗೆ ನನ್ನ ಗಂಡನಲ್ಲಿ ಹಾಂಗೇ ಭಕ್ತಿ ಮಾಡೇನು. ನಿನ್ನಪ್ಪಂದೆ ನಡಿಸೇನು' ಎಂದು ಸತ್ಯಭಾವಾ ಮಾತಾಡಿದಳು. ಕೃಷ್ಣ, ಪಾಂಡವರ ಸಮಾಧಾನಾರ್ಥ ಕೆಲವು ದಿವಸ ಇದ್ದು, ಅಲ್ಲಿಂದ ದ್ವಾರಾವತಿಗೆ ಹೋದನು.

ಪಾಂಡವರು ಮೃಗಬ್ಯಾಟೆಗೆ ಹೋಗಿದ್ದಾರೆ. ದ್ರೌಪದೀ ಸಮೀಪದಲ್ಲಿ ಸಂರಕ್ಷಣಾರ್ಥ ಧೌಮ್ಯಾಚಾರ್ಯನ್ನ ಇಟ್ಟು ಹೋಗಿರಲಿಕ್ಕೆ, ಧೃತರಾಷ್ಟ್ರನ ಅಳಿಯ ಜಯದ್ರಥ, ಮತ್ತೆ ಒಂದು ಮದುವಿ ಮಾಡಿಕೋಬೇಕಾಗಿ, ತನ್ನ ಪ್ರಧಾನಿ

ಕೋಟಿಕಾಶನ್ನ ಕೂಡಿಕೊಂಡು ಚತುರಂಗಸೇನಿಯಿಂದ ಯುಕ್ತನಾಗಿ ಹೋಗಥಾನೆ. ಮಾರ್ಗದಲ್ಲಿ ದ್ರೌಪದೀನ ಕಂಡ. ಪರ್ಣಶಾಲೆಯೊಳಗೆ ತನ್ನ ಮುಖಕಾಂತಿಯಿಂದ ದಿಕ್ಕುಗಳನೆಲ್ಲ ಬೆಳಕು ಮಾಡತಾ ನಿಂಥಾಳೆ. ಇಂಥಾ ಸುಂದರಸ್ತ್ರೀಯ ಬಿಟ್ಟು, ಮುಂದಕ್ಕೆ ಹೋಗುವ ಪ್ರಯೋಜನವೇನೆಂದು ಅದೇ ಕ್ಷಣದಲ್ಲಿ, 'ದ್ರೌಪದೀ ಕೂಡಿಕೊಂಡು ಬಾ' ಎಂದು ಪ್ರಧಾನಿ ಕೋಟಿಕಾಶನ್ನ ಕಳುಹಿದನು. ಪ್ರಧಾನಿ ಬಂದು ಬಲಾತ್ಕಾರ ಮಾಡತಿರಲಿಕ್ಕೆ, ದ್ರೌಪದೀ ಮಾತನಾಡಿದಳು. 'ನಾನು ಪಾಂಡವರು ಎಂಬ ಸಿಂಹನ ಹೆಂಡತಿ, ನಿನ್ನಂಥ ನರಿಗಳ ವಶಳಾಗಬ್ಲೆನೆ! ಕ್ಷೇಮ' ದಿಂದ ತಿರಿಗಿಹೋಗು' ಎನಲಿಕ್ಕೆ, ಜಯದ್ರಥ ತಾನೇ ಬಂದು ದ್ರೌಪದೀನ್ನ ಹಿಡಿದೆಳೆದನು. 'ಎಲೋ ಪಾಪಿ, ಪರಸ್ತ್ರೀಯನ್ನು ಹ್ಯಾಂಗೆ ಹಿಡದಿ! ಎಲೋ ದುರ್ಬುದ್ಧಿ!' ಎಂದು ಹಿಂದಕ್ಕೆ ನೂಕಲಿಕ್ಕೆ, ಜಯದ್ರಥ ಮೂರ್ಛಾಗತನಾಗಿ ಹಿಂದಕ್ಕೆ ಬಿದ್ದು, ತಕ್ಷಣವೇ ಎಚ್ಚರ ಉಳ್ಳವನಾಗಿ ನಾಚಿಕಿಲ್ಲದವ, ಮತ್ತೆ ದ್ರೌಪದೀ ಕೈಹಿಡದು ಎಳಿಯಲಿಕ್ಕೆ ನಿಂತನು. ಸ್ತ್ರೀ ಆದಾಕಿ ಪರಪುರುಷರ ಕೂಡ ಕೈಮೈ ಮುಟ್ಟಿ ಹೊಡದಾಡಬಾರದೆಂದು, ಸ್ತ್ರೀಧರ್ಮ ತೋರಿಸಬೇಕಾಗಿ ರಥದ ಮ್ಯಾಲೆ ಕುಳಿತಳು. ಅಗ್ನಿಪಾತ್ರಿ ಕೊಂಡುಬಾಹೋದೆಂದು ಧೌಮ್ಯಾಚಾರ್ಯರಿಗೆ ಹೇಳಿದಳು. ಆ ಕ್ಷಣವೇ ಜಯದ್ರಥನ್ನ ಕೊಲ್ಲಲಾಪಳು. ಮುಂದೆ ರಣರಂಗದಲ್ಲಿ ಅರ್ಜುನನ ಕೈಯ ಜಯದ್ರಥ ಸಾಯಬೇಕು, ಅರ್ಜುನಗೆ ಕೀರ್ತಿ ಬರಬೇಕು. ಅದಕ್ಕಾಗಿ ತಾ ಜಯದ್ರಥನ್ನ ಕೊಲ್ಲಲಿಲ್ಲ. 'ಎಲೋ ಪಾಪಿ, ನನ್ನ ಕರಕೊಂಡು ಹೋಗತಿದ್ದೀ. ನಿನಗೆ ಕ್ಷೇಮವಿಲ್ಲ. ನನ್ನ ಪತಿಗಳು ಬಂದು ನಿನ್ನ ದರ್ಪ ಭಂಗ ಮಾಡ್ಯಾರು' ಎಂದು ಹೇಳಿ ರಥದೊಳಗೆ ಕುಳಿತಳು.

ಪಾಂಡವರು ಮೃಗಬ್ಯಾಟೆ ಆಡಿ ಬರಥಾರೆ. ಮಾರ್ಗದಲ್ಲಿ ದುರ್ನಿಮಿತ್ತಗಳು ತೋರಿದವು. ದಾಸೇರು ಈ ವಾರ್ತಿ ಕೊಂಡು ಬಾಹೋ ಅಂಥಾ ಪಾಂಡವರಿಗೆ ಜಯದ್ರಥ ದ್ರೌಪದೀ ಕೊಂಡುಹೋದದ್ದು ಹೇಳಲಿಕ್ಕೆ, ಪಾಂಡವರು ಮುಂದಕ್ಕೆ ಬರೆ, ಧೌಮ್ಯಾಚಾರ್ಯರು 'ದ್ರೌಪದೀ ಕೊಂಡುಹೋಗಥಾನೆ. ಬ್ಯಾಗ ಕೂಡಿ' ಎಂದು ಹೇಳಲಿಕ್ಕೆ, ಭೀಮಾರ್ಜುನರು ಸಿಂಹನಾದ ಮಾಡತ ಬೆನ್ನಟ್ಟಿಬರಲು, ದ್ರೌಪದೀ ರಥದಿಂದ ಕೆಳಗೆ ಇಳೇಬಿದ್ದಳು. ಧೌಮ್ಯಾಚಾರ್ಯರ ಸಂಗಡ ದ್ರೌಪದೀ ಹಿಂದಕ್ಕೆ ತಿರುಗಿದಳು. ಅತ್ಯಂತ ಪಾಪಿಯಾದ ಕೋಟಿಕಾಶನ್ನ ಭೀಮಸೇನ ಕೊಂದುಬಿಟ್ಟನು. ಕೋಟಿಕಾಶ ತನುಸ್ಸಿಗೆ ಹೋಗಿ ಬಿದ್ದನು. ದ್ರೌಪದೀ ಒಬ್ಬಳೇ ಹೋಗಥಾಳೆ. ನೀವೂ ಹೋಗಿರೆಂದು ಭೀಮಾರ್ಜುನರು, ಧರ್ಮರಾಯ ನಕುಲ ಸಹದೇವರನ್ನ ಹಿಂದಕ್ಕೆ ಕಳುಹಿ, ತಾವಿಬ್ಬರೂ ಜಯದ್ರಥನ್ನ ಬೆನ್ನಟ್ಟಿಹೋಗಲು, ಅರ್ಜುನ ತನ್ನ ಬಾಣಗಳಿಂದ ಜಯದ್ರಥನ್ನ ವಿರಥನ್ನ ಮಾಡಿದ. ಜಯದ್ರಥ ವಿರಥನಾಗಿ ಓಡಿಹೋಗತಿದ್ದ. ಅವನ ತುರುಬು ಹಿಡದು ಎಳತಂದು ದ್ರೌಪದೀ

ಕಾಲಮ್ಯಾಲೆ ಹಾಕಿದ. ಆಗ 'ನಮ್ಮ ತಂಗೀಗಂಡಗೆ ಅಪಮಾನ ಮಾಡಬ್ಯಾಡಿರಿ' ಎಂದು ಧರ್ಮರಾಯ ನಿವಾರಿಸ್ತಿಹೋನು. 'ನಾನು ದ್ರೌಪದೀ ದಾಸನಿದ್ದೀನಿ. ನನಗೆ ಪ್ರಾಣೋಪಕಾರ ಮಾಡಿರಿ' ಎಂದು ಜಯದ್ರಥ ಬೇಡಿಕೊಳ್ಳತಿಹ. ಜಯದ್ರಥನ್ನ ಪಂಚಚೂಡನ್ನ ಮಾಡಿ ಬಿಟ್ಟರು. ಲೋಕದೊಳಗೆ ಅಪ್ರತಿಷ್ಠಿತನಾಗಿ, ಇನ್ನೇನು ಮಾರಿ ತೋರಿಸಲೆಂದು, ತಮ್ಮ ರಾಜಧಾನಿಗೆ ಹೋಗದೆ, ಪಾಂಡವರ ಕೊಲ್ಲೋದಕ್ಕಾಗಿ ವರವು ಸಂಪಾದಿಸಲು, ತಪಸ್ಸು ಮಾಡಲಿಕ್ಕೆ ಹೋದನು.

ಅಷ್ಟರೊಳಗೆ ಪಾಂಡವರ ಸವೀಪಕ್ಕೆ ಮಾರ್ಕಂಡೇಯಋಷಿ ಪ್ರಾಪ್ತನಾಗಲಿಕ್ಕೆ, ಆತನ ಪೂಜಿ ಮಾಡಿ ಧರ್ಮರಾಯ ಮಾರ್ಕಂಡೇಯನ್ನ ಕೇಳಿದ, ಹೇ ಮಾರ್ಕಂಡೇಯ, ನೀನು ಬಹುಕಾಲದಾತ. ಬಹಳ ಕಷ್ಟ ದುಃಖ ಕಂಡಿದ್ದಿ. ನನ್ನಂಥ ದುಃಖಿ ಎಲ್ಲಾದರೂ ಕಂಡಿದ್ಯಾ? ಮಹದೈಶ್ವರ್ಯ ಹೋಗಾಡಿಸಿಕೊಂಡು ವನವಾಸಕ್ಕೆ ಬಾಹೋಣ, ಹೆಂಡತೀನ್ನ ಪರಪುರುಷ ಹಿಡಕೊಂಡುಹೋಗೋಣ, ಇಂಥಾ ನಿರ್ಭಾಗ್ಯ ಪುರುಷನ್ನ ಎಲ್ಲಾದರೂ ಕಂಡಿದ್ಯಾ?' ಎನಲಿಕ್ಕೆ, 'ರಾಯ, ನೀನೆಂದರೇನು! ನಿನ್ನಕಿಂತ ದುಃಖಿ ಕಂಡೀನಿ. ರಾಯ, ನೀನು ತಮ್ಮಂದಿರ ಸಹವಾಗಿ ವನಭೋಗ ಕೊಳ್ಳತಿದ್ದಿ. ನಿನ್ನ ಹೆಂಡತಿ ಒಂದು ಘಳಿಗಿ ಹೋಗಿದ್ದಳು. ದಾಶರಥಿರಾಮನ ಹೆಂಡತಿ ಸೀತಾದೇವಿಯನ್ನು ರಾವಣ ಬಹುದಿವಸ ಹಿಡಕೊಂಡು ಹೋಗಿದ್ದ✓ ನಿನಗೆ ಹನ್ನೆರಡು ವರುಷ ವನವಾಸವಾದರೆ, ರಾಮಚಂದ್ರಗೆ ಹದಿನಾಲ್ಕು ವರುಷ ವನವಾಸ ಆಗೇದೆ.' ಹೀಂಗೆ ಮಾರ್ಕಂಡೇಯ, ರಾಮಾಯಣ-ಕಥ ಧರ್ಮರಾಯನಿಗೋಸ್ಕರ ಹೇಳಥಾನೆ. ಮೋಹಕಕಥ, ಅಸುರಜನ ಮೋಹಿಸಬೇಕಾಗಿ ಅರಣ್ಯಪರ್ವದಲ್ಲಿ ಹೇಳೀದೆ. ಭಾರತ ದರ್ಶನಭಾಷ, ಸಮಾಧಿಭಾಷ, ಗುಹ್ಯಭಾಷ, ಹೀಂಗೆ ಭಾಷಾತ್ರಯದಿಂದ ಅರ್ಥ ನಡದದೆ. ಲೋಕವಿಡಂಬನಾರ್ಥ ಶಿಕ್ಷಿಸಬೇಕಾಗಿ ರಘುನಾಥ ಹೆಂಡತಿಯನ್ನು ಹೋಗಾಡಿಸಿಕೊಂಡು, ಹೀಂಗೆ ಜನರು ದುಃಖಿಬಡಥಾರೆಂದು ತೋರಿಸ್ಯಾನೆ. ವಿಷ್ಣು ಸರ್ವೋತ್ತಮ, ರಮಾಬ್ರಹ್ಮಾದಿಗಳು ಪದ್ದಾಸರೆಂದು ಸಮಾಧಿಭಾಷ ಹೇಳತದೆ. ಹೀಂಗೆ ಯಥಾರ್ಥ ತಿಳೀಬೇಕು. ದರ್ಶನಭಾಷ ಎರಡು ಪ್ರಕಾರ—ಲೋಕದರ್ಶನ, ಪರದರ್ಶನ. ಶಿವ ಸರ್ವೋತ್ತಮ ಎಂದು ಎಲ್ಲಿ ಹೇಳತದೆ, ಅಲ್ಲಿ ಯಥಾರ್ಥ ತಿಳಿಯಬಾರದು. ಗುಹ್ಯಭಾಷಾದಿಂದ ಗ್ರಂಥ ನಡದದೆ 'ಉಚ್ಛಿಷ್ಟಂ ಶಿವನಿರ್ಮಾಲ್ಯಂ ವಮನಂ ಮೃತಕರ್ಪಟಮ್! ಕಾಕೋಚ್ಛಿಷ್ಟಸಮುದ್ಭೂತಂ ಪಂಚಭೂತಾನಿ ಭಾರತ!!'* ಹೀಂಗೆ ಗುಹ್ಯಭಾಷಾಗಳಿಂದ ಅನ್ಯಾರ್ಥ ತಿಳೀಬೇಕು. ಹೀಂಗೆ ಮಾರ್ಕಂಡೇಯ ರಾಮಾಯಣ ಮೊದಲಾದ್ದು ಬಹು ಕಥಾಗಳ ಹೇಳಿದ್ದಾನೆ.

---

* ಗುಹ್ಯಭಾಷೆಯಲ್ಲಿರತಕ್ಕ ಈ ಶ್ಲೋಕದ ಅರ್ಥವಿವರಣೆಗೆ ಇದೇ ಗ್ರಂಥದ ಪ್ರಥಮ ಸಂಪುಟದಲ್ಲಿ ಎರಡನೇ ಅಧ್ಯಾಯ ಪುಟ ೩೨ ನೋಡಿ.

ಜಯದ್ರಥ ತಪಸ್ಸು ಮಾಡಲಿಕ್ಕೆ ಹೋಗಿದ್ದ. ತಪಸ್ಸಿಗೆ ತುಷ್ಟನಾಗಿ ಮಹಾರುದ್ರ ಪ್ರತ್ಯಕ್ಷನಾದ. 'ಪಾಂಡವರಲ್ಲಿ ನಾಲ್ವರನ್ನ ಸೋಲಿಸೀಯ. ಅರ್ಜುನಗೆ ಪಾಶುಪತಾಸ್ತ್ರ ಕೊಟ್ಟೀನಿ. ಅರ್ಜುನನ್ನ ಸೋಲಿಸಲಾರಿ.' ಹೀಂಗಂತ ಜಯದ್ರಥಗೆ ವರವು ಕೊಟ್ಟ. ಭೀಮಸೇನ ದೊಡ್ಡ ದೇವತಿ, ಬಲಿಷ್ಠ ಆದರೂ ತನ್ನ ಪರಾಕ್ರಮ ತೋರಿಸಲಿಲ್ಲ. ಪಾಂಡವರು ವನವಾಸಕ್ಕೆ ಹೋದಮ್ಯಾಲೆ, ದುರ್ಯೋಧನ ಏಕಚಕ್ರ ರಾಜ್ಯ ಆಳತಿಹ. ಪಾಂಡವರು ವನವಾಸ ಮಾಡಿ ಕುರುದೇಶದ ಸಮೀಪಕ್ಕೆ ಬಂದಾರೆಂದು ವರ್ತಮಾನ ಕೇಳಿ ದುರ್ಯೋಧನ, 'ಪಾಂಡವರು ರಾಜಸೂಯ. ಯಾಗ ಮಾಡಿ ನಮ್ಮನ್ನು ಕರೆಕಳುಹಿದ್ದರು. ನಾವು ಪೌಂಡ್ರಕಯಜ್ಞ ಮಾಡಿ ಅವರನ್ನ ಕರೆಕಳುಹಬೇಕು. ಪಾಂಡವರು ನಾರವಸ್ತ್ರ ಉಟ್ಟು, ಬಹಳ ಬಡವರಾಗಿ ಋಷಿಗಳ ಮಧ್ಯದಲ್ಲಿ ಕುಳಿತಾಗ ನಮ್ಮ ಯಜ್ಞ 'ನಮ್ಮ ವೈಭವ ತೋರಿಸಬೇಕು.' ಈ ಉದ್ಯೋಗ ಮಾಡಿ ದುರ್ಯೋಧನ, ತನ್ನ ತಮ್ಮ ದುಶ್ಶಾಸನಗೆ ಆಜ್ಞಾಪಿಸಿದ. ಯಜ್ಞಕ್ಕೆ ಪಾಂಡವರನ್ನ ಕರಿಸೆನಲಿಕ್ಕೆ, ದುಶ್ಶಾಸನ ಪಾಂಡವರ ಬಳಿಗೆ ದೂತನನ್ನು ಕಳುಹಿದ. ಭೀಮಸೇನ ಒಂದ ದೂತನ ಕೂಡ 'ವನವಾಸ ಸ್ವಲ್ಪ ಉಳದದೆ. ಆಜ್ಞಾತವಾಸ ಮುಗಿಸಿ, ನೀವು ಕರಸದಕಿಂತ ಮೊದಲೇ ರಣಯಜ್ಞಕ್ಕೆ ಬರಥೀವಿ' ಎಂತ ತಿರಿಗಿ ಹೇಳಿ ಕಳುಹಿದ. ದುರ್ಯೋಧನ ಪೌಂಡ್ರಕಯಜ್ಞ ಮಾಡಿದರೂ ಪಾಂಡವರ ರಾಜಸೂಯಯಾಗದ ಹದಿನಾರು ಕಳಾಲಿ ಒಂದು ಭಾಗ ಕೂಡ ಹೋಲಲಿಲ್ಲ.

ದುರ್ಯೋಧನಾದಿಗಳು ತಮ್ಮ ಮಹದೈಶ್ವರ್ಯವನ್ನು ಪಾಂಡವರಿಗೆ ತೋರಿಸಿ, ಅವರನ್ನ ದುಃಖಬಡಿಸಬೇಕೆಂದು ಯೋಚನೆ ಮಾಡಿ, ಬಂಗಾರಮಯವಾದ ರಥ ಏರಿಕೊಂಡು ತಮ್ಮ ತಮ್ಮ ಹೆಂಡಂದಿರಿಂದ ಯುಕ್ತರಾಗಿ, ಚತುರಂಗ ಸೇನಿ ಕೊಂಡು, ಸುವರ್ಣರತ್ನಮಾಲಿಗಳು ಹಾಕಿಕೊಂಡು ಪರಿಮಳದ್ರವ್ಯ ಹಚ್ಚಿ ಕೊಂಡು ದಿವ್ಯ ವಸ್ತ್ರಾಭರಣಗಳು ಧರಿಸಿಕೊಂಡು, ಘೋಷ ಯಾತ್ರಿ ವ್ಯಾಜದಿಂದ ಧೃತರಾಷ್ಟ್ರನ ಅಪ್ಪಣಿಕೊಂಡು, ಶಕುನೀ ಕರ್ಣರಿಂದ ಯುಕ್ತರಾಗಿ ದ್ವೈತವನಕ್ಕೆ ಬಂದರು. ಪಾಪಿಗಳು ಪಾಂಡವರಿಗೆ ಅವಜ್ಞಾ ಮಾಡಲಿಕ್ಕೆ ಬರಥಾರೆಂದು ತಿಳಿದು, ದೇವೇಂದ್ರ ಚಿತ್ರರಥ ಗಂಧರ್ವಗೆ ಆಜ್ಞಾಪಿಸಿದ. 'ತ್ರಿರುವತ್ತು ಸಾವಿರಕೋಟಿ ಗಂಧರ್ವರನ್ನ ಕೂಡಿಕೊಂಡು ಹೋಗಿ, ದುರ್ಯೋಧನನ್ನ ಸೋಲಿಸಿ, ಕೈಸೆರಿ ಕೊಂಡು ಬಾ' ಎಂದು ಕಳುಹಿದನು. ದುರ್ಯೋಧನ ಮೂಲಕಲಿ, ಅವಗೆ ಬ್ರಹ್ಮದೇವರ ವರವಿಹೋದು. ಹ್ಯಾಂಗೆ ಚಿತ್ರಸೇನಗೆ ವಶನಾಗಥಾನೆಂದರೆ, ದುರ್ಯೋಧನನ್ನ ಸೋಲಿಸೋವಲ್ಲಿ, ಚಿತ್ರಸೇನ ಗಂಧರ್ವಗೆ ನಾರಾಯಣನ ವರವು, ಬ್ರಹ್ಮದೇವರ ವರವು, ದೇವೇಂದ್ರನ ವರವು ಹೀಂಗೆ ಮೂರು ವರವಿಹೋವು. ವರಬಲದಿಂದ ತೀಕ್ಷ್ಣನಾಗಿ ತ್ರಿರವತ್ತು ಸಾವಿರಕೋಟಿ ಗಂಧರ್ವರ ಕೂಡಿಕೊಂಡು,

ದ್ವೈತವನದಲ್ಲಿ ಸರೋವರವಿತ್ತು, ಆಲ್ಲಿ ಜಲಕ್ರೀಡಿ ಮಾಡತಿರಲಿಕ್ಕೆ, ದುರ್ಯೋ-ಧನನ ಭೃತ್ಯರು ಹೋಗಿ ಚಿತ್ರಸೇನಗಂಧರ್ವಗೆ ಹೇಳಿದರು. 'ರಾಜಾಧಿರಾಜ ದುರ್ಯೋಧನರಾಯ ಬರಥಾನೆ. ಶೀಘ್ರ ಸರೋವರ ಬಿಟ್ಟುಹೋಗಿರಿ' ಎಂದು ಆಜ್ಞಾಚಕ್ರ ತಿರಗಸ್ತಾ ಬರಲಿಕ್ಕೆ, ಗಂಧರ್ವರು ಪರಿಹಾಸವಾಡಿ ನಗಹೊಕ್ಕರು. 'ಮೂರು ಲೋಕಕ್ಕೆ ಅರಸು ದೇವೇಂದ್ರ ಅವನ ಭೃತ್ಯರು ನಾವು, ಮನುಷ್ಯನ ಆಜ್ಞೆ ನಡಸವಲ್ಲೆವು' ಎಂದು, ದುರ್ಯೋಧನನ್ನ ನಿರಾಕರಣ ಮಾಡಿ ಹಾರಿಸಿ-ಬಿಟ್ಟರು. ಈ ವಾರ್ತೆ ಭೃತ್ಯರು ಹೋಗಿ ದುರ್ಯೋಧನಗೆ ಹೇಳಿದರು.

ದುರ್ಯೋಧನ ಕೋಪಾವಿಷ್ಟನಾಗಿ, ಬಾಣದ ಮಳಿಗರೆಯತಲೇ ಬಂದನು. ದುರ್ಯೋಧನಗೆ, ಗಂಧರ್ವರಿಗೆ ಬಹಳೇ ಯುದ್ಧವಾಯಿತು. ಪಾಂಡವರ ವ್ಯಾಲೆ ಸ್ಪರ್ಧೆಯಿಂದ ಕರ್ಣ ಬಂದಕಾರಣ, ಗಂಧರ್ವನ ಕೈಯ ಸೋತು, ವಿಕರ್ಣನ ರಥ ಏರಿಕೊಂಡು ಓಡಿಹೋದನು. ಕರ್ಣ ಓಡಿಹೋದವ್ಯಾಲೆ ಚಿತ್ರಸೇನಗಂಧರ್ವ ದುರ್ಯೋಧನನ ಕೂಡ ಒಂದು ಮುಹೂರ್ತಪರಿಯಂತ ಯುದ್ಧ ಮಾಡಿ, ದುರ್ಯೋಧನನ್ನ ವಿರಥನ್ನ ಮಾಡಿ, ಅವನ ತಮ್ಮಂದರು ಅವರ ಹೆಂಡರು ಸಹವಾಗಿ ಹಿಡಕೊಂಡು ಹೊತ್ತುಕೊಂಡು ಆಕಾಶಮಾರ್ಗದಿಂದ ನಡದನು. ಪಾಶಗಳಿಂದ ಕಟ್ಟಿ ದುರ್ಯೋಧನಾದಿಗಳನ್ನ ಒಯ್ಯುಥಾರೆಂದು, ದುರ್ಯೋಧನನ ಭೃತ್ಯರು, ಧರ್ಮ-ರಾಯನ ಸಮೀಪಕ್ಕೆ ಬಂದು ಮೊರಿ ಇಟ್ಟರು. 'ರಾಯ, ಕುರುಕುಲಕ್ಕೆ ಮಾತು ಬಂತು. ಭರತಕುಲೋತ್ಪನ್ನನ್ನ ಕೈಸೆರಿ ಕೊಂಡುಹೋಗಥಾರೆ. ನಿನ್ನ ತಮ್ಮಂದರ ಕೈಸೆರಿ ಬಿಡಸಬೇಕು.' ಹೀಂಗೆಂದು ಭೃತ್ಯರು ಧರ್ಮರಾಯಗೆ ಹೇಳಲಿಕ್ಕೆ, ಆ ವ್ಯಾಳ್ಯಾದಲ್ಲಿ ಭೀಮಸೇನ ಮಾತನಾಡಿದ. 'ಅಣ್ಣಾ, ದುರ್ಯೋಧನನ ಕಪಟತನ ತಿಳದು, ದೇವೇಂದ್ರ ಈ ಪ್ರಕಾರ ಮಾಡಿದ. ನಮಗೆ ದುರ್ಯೋಧನ ಪೌಂಡ್ರಕಯಜ್ಞಕ್ಕೆ ಕರೆಕಳುಹಿದ್ದ. ನಾವು ಹೋಗದಕಾರಣ, ತನ್ನ ಮಹದೈಶ್ವರ್ಯ ನಮಗೆ ತೋರಿಸಲೋಸುಗ ಚತುರಂಗಸೇನ, ತಮ್ಮ ಹೆಂಡಂದರಿಂದ ಯುಕ್ತನಾಗಿ ನಮಗೆ ಅಪಮಾನ ಮಾಡಲು ದ್ವೈತವನಕ್ಕೆ ಬಂದನು. ದೇವೇಂದ್ರ ಕೌರವರ ಕಪಟತನ ತಿಳದು ಚಿತ್ರಸೇನಗೆ ಆಜ್ಞಾಪಿಸಲು ಕೈಸೇಕೊಂಡು ಹೋಗಥಾನೆ. ಪಾಪಿಗಳಿಗೆ ಪರಸ್ಪರ ಮಾನಭಂಗವಾದಷ್ಟೂ ಒಳಿತೇವೆ. ಚಿತ್ರಸೇನ ನಮ್ಮ ಸ್ವಾರ್ಥ ಪ್ರಭ್ಪದಿಂದ ಇವರನ್ನೆಲ್ಲ ಕೊಂಡುಹೋಗಥಾನೆ. ನಾವು ನಿವಾರಿಸಹತ್ತದು' ಎಂದು ಭೀಮಸೇನ ಹೇಳಿದನು.

ಈ ಪ್ರಕಾರ ಭೀಮಸೇನ ಮಾತನಾಡಲಿಕ್ಕೆ, ಧರ್ಮರಾಯ:, ತಮ್ಮಂದರು ಮಾತು ಕೇಳವಲ್ಲರು, ತಾ ಹೋಗಿ ಬಿಡಿಸಬೇಕಾದರೆ, ಒಂದು ದಿವಸಕ್ಕೆ ಮುಗಿಯೋ ಯಜ್ಞದಲ್ಲಿ ದೀಕ್ಷ ಕಟ್ಟಿಕೊಂಡಿಹ. ಸೀಮೋಲ್ಲಂಘನಿ ಮಾಡಲಿಕ್ಕೆ ಬಾರದು. ಆದಕಾರಣ ಭೀಮಸೇನನ್ನ ಪುನಃಪುನಃ ಬೇಡಿಕೊಳ್ಳತಿಹ. 'ಎಲೋ ಅಪ್ಪ

ಭೀಮಸೇನ, ಕುರುಕುಲಕ್ಕೆ ಮಾತು ಬರತದೆ, ಬರಬಾರದು. ನಮ್ಮೊಳಗೆ ನಾವು ಯುದ್ಧ ಮಾಡಬೇಕಾದರೆ, ಅವರು ನೂರು ಮಂದಿ, ನಾವು ಐದು ಮಂದಿ, ಹೀಂಗೆ ಪರಸ್ಪರ ಯುದ್ಧ ಮಾಡಬೇಕು. ನಮ್ಮ ಕುರುಕುಲದ ಮ್ಯಾಲೆ ದಾರುದಾರಾದರೂ ಅಗ್ಗಳಿಕೆ ಮಾಡಿದರೆ, ನಾವು ನೂರಾಐದು ಮಂದಿ ಏಕಮತ ಉಳ್ಳವರಾಗಿ ದಂಡಿಸಬೇಕು. ಈಗ್ಲೆ ದುರ್ಯೋಧನಾದಿಗಳಿಗೆ ವಿಪತ್ತು ಬಂದದೆ. ಇದರೊಳಗೆ ಅವರ ಅಹಿತ ಎಣಿಸಬಾರದು. ತನ್ನ ಕೊಂದ ವೈರಿಗಾದರೂ ಒಳ್ಳೇತನ ಮಾಡಿ ತೋರಿಸಬೇಕು.' ಹೀಂಗಂತ ಧರ್ಮರಾಯ ಬಹಳ ಪ್ರಕಾರ ಭೀಮಾರ್ಜುನರಿಗೆ ಬೇಡಿಕೊಳ್ಳತಿಹ. ಅಣ್ಣನ ಮಾತು ಮೀರಲಿಕ್ಕೆ ವಶವಲ್ಲಾದ ಕಾರಣ, ಭೀಮಾರ್ಜುನರು, ಮಾದ್ರೀಪುತ್ರರು ಹೀಂಗೆ ನಾಲ್ಕು ಮಂದಿ ಗಂಧರ್ವರ ಬೆನ್ನಟ್ಟಿಹೋಗಿ, ಬಾಣದ ಮಳಿಗರೆದರು. ಗಂಧರ್ವಗೆ ಬಹಳ ನಿರ್ಬಂಧ ಮಾಡಿದರು. ಚಿತ್ರಸೇನ ಗಂಧರ್ವ, ದುರ್ಯೋಧನ ಕೇಳುವಹಾಂಗೆ ಭೀಮಾರ್ಜುನರ ಕೂಡ ಮಾತನಾಡತಾನೆ. ' ಈ ದುರ್ಯೋಧನ, ನಿನುಗೆ ತನ್ನ ಮಹದೈಶ್ವರ್ಯ ತೋರಿಸಿ ಮಾನಭಂಗ ಮಾಡಬೇಕೆಂದು ಬಂದಿದ್ದ. ಇಂದ್ರ ತಿಳದು ಇವನ್ನ ಕೈಸೆರಿ ಕೊಂಡು ಹೋಗಲಿಕ್ಕೆ ಕಳುಹಿದ್ದಾನೆ. ನಾವು ನಿಮ್ಮ ಸ್ವಾರ್ಥಪರರಾಗಿ ಬರಲಿಕ್ಕೆ ನಮ್ಮ ಕೂಡ ಯುದ್ಧ ಮಾಡುವುದು ಯುಕ್ತವಲ್ಲ.' ಹೀಂಗೆಂದು ಚಿತ್ರಸೇನ ಉಚ್ಚರಿಸಲು, ದುರ್ಯೋಧನಗೆ ಮತ್ತಿಷ್ಟು ಅಪ್ರತಿಷ್ಠತ ಆಯಿತು. ವೈರಿಗಳೆದುರಿಗೆ ಏನು ಅಪಮಾನವಾಯಿತೆಂದು ದುಃಖಿಡಹೊಕ್ಕ.

ಆ ಹೊತ್ತು ಧರ್ಮರಾಯ ಯಜ್ಞ ಮುಗಿಸಿದ. ಚಿತ್ರಸೇನ ಸಹವಾಗಿ ಭೀಮಾರ್ಜುನರು ದುರ್ಯೋಧನಾದಿಗಳನ್ನು ಪಾಶದಿಂದ ಕಟ್ಟಿ ಒಯ್ಯುತಿದ್ದರು. ಧರ್ಮರಾಯನ ಸಮೀಪದಲ್ಲಿ ಕಟ್ಟುಸಹಿತ ಸಾಲುಹಿಡದು, ಕದ್ದಕಳ್ಳರೋಪಾದಿ ನಿಂದ್ರಸಿದರು. ಧರ್ಮರಾಯ ದೃಷ್ಟೀಲೆ ಕಂಡು ಆದ್ಯಂತ ವರ್ತಮಾನ, ದುರ್ಯೋಧನ ಮಾಡಿದ ಕಪಟತನ ಕೇಳಿ ಮಾತನಾಡಿದನು. 'ಎಲೈ ಸುಯೋಧನ, ಇನ್ನು ಇಂಥಾ ಕುಕರ್ಮ, ಇಂಥಾ ಸಾಹಸ ಮಾಡಬ್ಯಾಡ. ನಮ್ಮ ಕುರುಕ ಲಕ್ಕೆ ಅಪ್ರತಿಷ್ಠತ ಆಗಬಾರದೆಂದು ನಿನ್ನ ಬಿಡಿಸಿ ತಂದೆವು. ಇನ್ನು ಹಸ್ತಿನಾವತಿಗೆ ಹೋಗಿ ಸುಖದಲ್ಲಿರು. ಇಂಥಾ ದುರ್ಬುದ್ಧಿ ಮಾಡಬ್ಯಾಡ.' ಎಂದು ದುರ್ಯೋಧನಗೆ ಧರ್ಮರಾಯ ಹೇಳಿದ. ದುರ್ಯೋಧನ ನಾಚಿಕೆಯಿಂದ ಯುಕ್ತನಾಗಿ ಹಸ್ತಿನಾವತಿಗೆ ಹೋಗದೆ, ಸತ್ತೇನೆಂತ ಪ್ರಾಯೋಪವೇಶಕ್ಕೆ ಕುಳಿತನು. ಅಷ್ಟರೊಳಗೆ ಕರ್ಣ ದುರ್ಯೋಧನನ ಹುಡಕತಾ ಬಂದನು. ಕರ್ಣ ದುರ್ಯೋಧನನ ಪ್ರೊಗಳ. ಹೊಕ್ಕನು. ದುರ್ಯೋಧನ ಮಾತನಾಡಿದ. 'ನನ್ನ ಏನಂತ ಪ್ರೊಗಳತಿದ್ದಿ! ನನ್ನನ್ನು, ವೈರಿಗಳು ಭೀಮಾರ್ಜುನರು, ಬಿಡಿಸಿ ತಂದರು. ನನ್ನ ಮನೋವೃತ್ತಿ ವೈರಿಗಳ ಮುಂದೆ ಚಿತ್ರಸೇನಗಂಧರ್ವ ಹೇಳಿದ. ವೈರಿಗಳ ಎದುರಿಗೆ ಕಟ್ಟುಸಹಿತ

ನಿಂದರಿಸಿದರು. ಅಪ್ರತಿಷ್ಠತ ಆಯಿತು. ನಾ ಇನ್ನು ಬದುಕೋ ಹಾಂಗೆ ಇಲ್ಲ. ನೀವೆಲ್ಲ ಹಸ್ತಿನಾವತಿಗೆ ಹೋಗರಿ. ಪ್ರಾಯೋಪವೇಶಕ್ಕೆ ಕುಳಿತೇನು' ಎಂದು ನೆಲಕ್ಕೆ ಕೂಡ್ರಬಿದ್ದ. ಸಮಸ್ತರೂ ಬೇಡಿಕೊಳ್ಳತಿಹೋರು. ದುಶ್ಶಾಸನ ಕಾಲಿಗೆ ಬೀಳತಿಹ. 'ರಾಯ, ಜಯಾಪಜಯ ಉಂಟಾಗೋದು. ಸಜ್ಜನರಿಗೆ ಸುಖ ಕೊಡು, ವೈರಿಗಳಿಗೆ ದುಃಖ ಕೊಟ್ಟು ಸಾಮ್ರಾಜ್ಯ ಆಳು.' ಹೀಂಗಂತ ಹೇಳಿದರೂ ಕೇಳದೆ ಉಪವಾಸ ಕುಳಿತಿಹ.

ಪಾತಾಳಲೋಕದಲ್ಲಿ ದೈತ್ಯದಾನವರಿಗೆ ಚಿಂತಿ ಪ್ರಾಪ್ತವಾಯಿತು. ದುರ್ಯೋಧನ ಮೂಲಕಲಿ, ತಮ್ಮ ಪಕ್ಷಪಾತಿ ಪ್ರಾಯೋಪವೇಶಕ್ಕೆ ಕುಳಿತ. ದೇವತಿಗಳ ಪಕ್ಷ ಹೆಚ್ಚೀತಲ್ಲೆಂದು ತಮ್ಮ ಪುರೋಹಿತ ಶುಕ್ರಾಚಾರ್ಯನ್ನ ಮುಂದೆ ಮಾಡಿಕೊಂಡು ಒಂದು ಭೂತನ್ನ ಹುಟ್ಟಿಸಿದರು. ದುರ್ಯೋಧನನ ಹೊತ್ತುಕೊಂಡು, ಭೂತ ಪಾತಾಳಲೋಕಕ್ಕೆ ಹೋಯಿತು. ದೈತ್ಯರೆಲ್ಲ ದುರ್ಯೋಧನನ್ನ ಬೇಡಿಕೊಂಡರು. 'ನೀನು ನಮ್ಮ ಪಕ್ಷಪಾತಿ. ನಾವೆಲ್ಲ ಕೂಡಿ ಮಹಾರುದ್ರನ್ನ ಕುರಿತು ತಪಸ್ಸು ಮಾಡಿ ನಿನಗೆ ವಜ್ರಕಾಯ ಮಾಡಿದ್ದೀವಿ. ನಮ್ಮ ಪಕ್ಷ ಬಲಿಸಲೋಸುಗ ನಿನ್ನ ಹುಟ್ಟಿಸಿರಲಿಕ್ಕೆ ಸತ್ತೀನೆಂತಿ. ಇಂಥಾ ದುರ್ಬುದ್ಧಿ ನಿನಗೆ ಯಾಕೆ ಬಂತು! ಇನ್ನು ನಿನಗೆ ಜಯ ಕೊಡಥೀವಿ. ನಿನಗೆ ಸೋಲಧಾಂಗೆ ಮಾಡೇವು. ಕೃಷ್ಣ ನರಕಾಸುರನ ಕೊಂದಾನೆ. ಅವನು ಸತ್ತು ಕರ್ಣನೊಳಗೆ ಹೊಕ್ಕಾನೆ. ಕೃಷ್ಣಾರ್ಜುನರ ಕೊಲ್ಲಬೇಕೆಂದು ಮಾಡ್ಯಾನೆ. ಭೀಮಸೇನ ಪ್ರಬಲನಿದ್ದಾನೆಂದು ನಾವು ಭೀಷ್ಮಾದಿಗಳಲ್ಲಿ ಹೊಕ್ಕು ನಿನಗೆ ಜಯ ತಂದುಕೊಟ್ಟೀವು. ನಿನ್ನ ಜಯದಗೋಸ್ಕರ, ಮಹಾರುದ್ರನ್ನ ಕುರಿತು ತಪ್ಪಸ್ಸು ಮಾಡೇವು. ಈ ಗೌಪ್ಯವಾತು ದಾರ ಮುಂದೂ ಹೇಳಬ್ಯಾಡ' ಎಂದು ಮೂಲದೈತ್ಯರು ದುರ್ಯೋಧನಗೆ ಬುದ್ಧಿಯುಕ್ತಿ ಹೇಳಿ ಕಳುಹಿಸಿಕೊಟ್ಟರು. ಭೂತ ಹೊತ್ತುಕೊಂಡು ಬಂದು ಪೂರ್ವಸ್ಥಳದಲ್ಲಿಟ್ಟಿತು. ಬೆಳಗಾಯಿತು, ದುರ್ಯೋಧನ ತನ್ನ ದೇಹ ಪಾರ್ವತೀಪರಮೇಶ್ವರರಿಂದ ನಿರ್ಮಿತವಾಗೇದೆಂದು ಕೇಳಿ ಮಹಾ ಹರ್ಷವುಳ್ಳವನಾಗಿ ಕುಳಿತುಕೊಂಡಾನೆ. ಪುನಃ ಕರ್ಣ ಶಕುನಿ ಮೊದಲಾದವರು ದುರ್ಯೋಧನನ್ನ ಬೇಡಿಕೊಳ್ಳಬಂದರು. 'ರಾಯ, ಪಾಂಡವರು ನಿನ್ನ ಭೃತ್ಯರು. ಭೃತ್ಯರು ಬಿಡಸಿದ್ದು ನಿನಗೆ ಅಪಮಾನವಲ್ಲ. ಭೃತ್ಯರು ಏನು ಮಾಡಿದ್ದೂ ಒಡಿಯನ ಕೀರ್ತಿ. ರಾಯ, ಇದರಿಂದ ನಿನ್ನ ಕೀರ್ತಿ ಲೋಕದೊಳಗೆ ಬಹಳೀ ಪಸರಿಸಿತು. ದುರ್ಯೋಧನರಾಯನ ಭೃತ್ಯರು ಇಂಥಾವರೂ ಇಹರೆಂದು ಲೋಕತ್ರಯದಲ್ಲಿ ಕೀರ್ತಿ ಪಸರಿಸಿತು. ಈ ಮಾತಿಗೆ ಭೇದ ತಿಳೀಬ್ಯಾಡ. ನನ್ನ ಮುಂದೆ ಅರ್ಜುನನ ಪರಾಕ್ರಮ ಏನದೆ! ಆತನ್ನ ಕೊಂದೇನು. ಅರ್ಜುನನ್ನ ಕೊಲ್ಲದ ಹೊರ್ತು ಪರರ ಕೈಯ ಕಾಲು ತೊಳಸಿಕೊಳ್ಳದೆ ನಾನೇ ತೊಳೆದುಕೊಂಡೇನು.' ಹೀಂಗೆ ಪ್ರತಿಜ್ಞ, ಕರ್ಣ ಮಾಡಿದ. ತರುವಾಯ ಕರ್ಣ ಶಕುನೇರಿಂದ ಪ್ರಾರ್ಥಿತನಾಗಿ ದುರ್ಯೋಧನ ಹಸ್ತಿನಾವತಿಗೆ ಬಂದನು.

ಕರ್ಣ, ಅರ್ಜುನನ್ನ ಕೊಲ್ಲೋದರಗೋಸ್ಕರ ಪ್ರತಿಜ್ಞೆ ಮಾಡಿದನೆಂದು ಕೇಳಿ, ದೇವೇಂದ್ರ ವಿಪ್ರರೂಪ ಧರಿಸಿಕೊಂಡು ಕರ್ಣನ ಸಮೀಪಕ್ಕೆ ಬಂದು, ಕರ್ಣನ ಸಹಜಕವಚ-ಕುಂಡಲ ಇಸಗೊಂಡು ಹೋಗ್ಯಾನೆ. ಕುಂಡಲಾಹರಣಾಖ್ಯಾನ ಭಾರತದಲ್ಲಿ ಹೇಳೀದೆ. ಕರ್ಣ ದಾನಶೂರನೆಂದು ಮೂರು ಲೋಕದಲ್ಲಿ ಪ್ರಸಿದ್ಧಿ ಆಗೀದೆ, ಏನು ಬೇಡಿದ್ದೂ ಕೊಡಥಾನೆಂದು. ಸೂರ್ಯ ಸ್ವಪ್ನದಲ್ಲಿ ಕರ್ಣಗೆ ಹೇಳಿದ. 'ದೇವೇಂದ್ರ ಭೂಸುರವೇಷದಿಂದ ನಿನ್ನ ಕವಚ-ಕುಂಡಲಗಳ ಕೇಳಲಿಕ್ಕೆ ಬಂದಾನು, ಕೊಡಬ್ಯಾಡ. ನೀ ಕವಚ-ಕುಂಡಲಗಳಿಂದ ಮರಣರಹಿತನಾಗೀಯ, ಕೊಡಲು ಅಲ್ಪಶಕ್ತಿಯುಳ್ಳವನಾಗಿ ಮರಣ ಐದೀಯ ಕೊಡಬ್ಯಾಡ' ಎಂದು ಸ್ವಪ್ನದಲ್ಲಿ ಹೇಳಲು, ಕರ್ಣ ಸ್ವಪ್ನದಲ್ಲೇ ಉತ್ತರ ಕೊಟ್ಟ. 'ನೀನು ಏನು ಹೇಳಿದರೂ ಹೇಳು, ಬ್ರಾಹ್ಮಣರ ವಿಷಯದಲ್ಲಿ ಇಲ್ಲ ಎನಲಾರೆ. ನೀನು ನನ್ನ ತಂದಿಯಾಗಿ ಹಿತೋಪದೇಶ ಮಾಡುವುದಿಲ್ಲ. ದ್ವಿಜರಿಗೆ ಕೊಡಬ್ಯಾಡವೆಂದು ದಾರು ಹೇಳ್ಯಾರು ಅವರು ನನ್ನ ವೈರಿಗಳು. ಬ್ರಾಹ್ಮಣರು ಏನು ಬೇಡಿದ್ದೂ ಕೊಡಥೀನಿ. ಕವಚ-ಕುಂಡಲ ಏನು, ಈ ದೇಹಾನೇ ದ್ವಿಜರಿಗೋಸ್ಕರ ಕೊಟ್ಟೀನು!' ಹೀಂಗೆಂದು ಕರ್ಣ ಸೂರ್ಯಗೆ ಮಾತನಾಡಲಿಕ್ಕೆ, ಕರ್ಣನ ಆಗ್ರಹ ಕಂಡು ಸೂರ್ಯ, 'ಒಂದು ಆಯುಧನಾದರೂ ದೇವೇಂದ್ರನ ಕೈಯ ಇಸಗೊಂಡು, ಕವಚ-ಕುಂಡಲ ಕೊಡು' ಎಂದು ಹೇಳಿ, ತನ್ನ ಲೋಕಕ್ಕೆ ಹೋದನು. ಮರುದಿವಸ ದೇವೇಂದ್ರ 'ನಿನ್ನ ಸುವರ್ಣ ಕವಚ ಕುಂಡಲ ಕೊಡು' ಎಂದು ದ್ವಿಜರೂಪದಿಂದ ಬಂದು ಬೇಡಲು, ಕರ್ಣ ಸಮ್ಮುಖನಾಗಿ, ಆ ಕ್ಷಣವೇ ಆಯುಧದಿಂದ ತನ್ನ ದೇಹ ಛೇದಿಸಿ, ಕವಚ-ಕುಂಡಲ ದೇವೇಂದ್ರಗೆ ಕೊಟ್ಟನು. ದೇವೇಂದ್ರನ ಕೈಯ ಅಮೋಘ ವೀರ್ಯವುಳ್ಳ 'ಶಕ್ತಿ' ಎಂಬ ಆಯುಧ ಸಂಪಾದಿಸಿದನು. ಆಯುಧ ಕೊಡುವಾಗ ದೇವೇಂದ್ರ ಕರ್ಣಗೆ ಹೇಳಿದ. 'ಈ ಆಯುಧ ದಾರ ಮ್ಯಾಲೆ ಹಾಕೀ, ಅವರನ್ನ ನಾಶಮಾಡಿ ತಿರಿಗಿ ನನ್ನಲ್ಲಿಗೆ ಬಂದೀತು. ಅರ್ಜುನನ್ನ ಕೊಲ್ಲಲಿಕ್ಕೆ ನೀನು ಶಕ್ತನಲ್ಲ.' ಹೀಂಗಂತ ಶಕ್ತ್ಯಾಯುಧ ಕೊಟ್ಟು, ಕರ್ಣನ ಕೈಯ ಕವಚ-ಕುಂಡಲ ಕೊಂಡು, ತನ್ನ ಅಮರಾವತಿಗೆ ಹೋದನು.

ಪಾಂಡವರು ದುರ್ಯೋಧನನ್ನ ಗಂಧರ್ವರಿಂದ ಬಿಡಿಸಿ ವನವಾಸದಲ್ಲಿರಲಿಕ್ಕೆ, ಒಬ್ಬ ಬ್ರಾಹ್ಮಣ ತನ್ನ ಅಗ್ನಿಮಥನಕಾಷ್ಠ ಒಂದು ಗಿಡದಲ್ಲಿಟ್ಟಿದ್ದ, ಯಮುಧರ್ಮ ಕ್ರೋಣನ ರೂಪ ಧರಿಸಿ, ಅಗ್ನಿಮಥನಕಾಷ್ಠ ಕಂಡು ತನ್ನ ಕೋಡಿಗೆ ಸಿಗಿಸಿಕೊಂಡು ಓಡಿಹೋದನು. ಬ್ರಾಹ್ಮಣ ಪಾಂಡವರಿಗೆ ಮೊರಿ ಇಟ್ಟುಕೊಂಡು ಬೇಡಿಕೊಂಡ. 'ನನ್ನ ಅಗ್ನಿಮಥನಕಾಷ್ಠ ಮೃಗ ಕೊಂಡುಹೋಗೀದೆ. ನೀವು ಶೂರರು, ಪರಾಕ್ರಮ ಉಳ್ಳವರು, ನನ್ನ ಕಾಷ್ಠ ತಂದುಕೊಡಬೇಕು.' ಹೀಂಗೆ ಬೇಡಿಕೊಳ್ಳಲಿಕ್ಕೆ, ಧರ್ಮರಾಯನ ಆಜ್ಞದಿಂದ ಸಹದೇವ ಬೆನ್ನಟ್ಟಿಹೋಗಿ, ಬಹಳೇ ಶ್ರಾಂತನಾಗಿ ನೀರಡಿಸಿ ಉದಕಪ್ರಾಶನಿಗೆ ಸರೋವರಕ್ಕೆ ಹೋಗಲಾಗಿ, ಆ ಸರೋವರದಲ್ಲಿ

ಯಕ್ಷರೂಪಿ ಯಮಧರ್ಮ 'ಪ್ರಶ್ನಕ್ಕೆ ಉತ್ತರ ಹೇಳಿ ನೀರು ಕುಡಿ' ಎನಲಿಕ್ಕೆ, ಪ್ರಶ್ನಕ್ಕೆ ಉತ್ತರ ಕೊಡದೆ ನೀರು ಕುಡಿಯಲು, ಯಮಧರ್ಮನ ಮಾಯದಿಂದ ಸಹದೇವ ಮೂರ್ಛಿತನಾಗಿ ಬಿದ್ದನು. ಸಹದೇವ ಬರಲಿಲ್ಲೆಂದು ನಕುಲ ಹೋದ. ಯಮಧರ್ಮ ಅದೃಶ್ಯನಾಗಿ, ಪ್ರಶ್ನಕ್ಕೆ ಉತ್ತರ ಕೊಟ್ಟು ನೀರು ಕುಡಿಯಬೇಕೆನಲು, ತಾವು ಕ್ಷತ್ರಿಯರು ವಿದ್ಯೋಪಜೀವನ ಮಾಡಬಾರದೆಂದು, ಹಾಂಗೇ ನೀರು ಕೊಳ್ಳಲಿಕ್ಕೆ ನಕುಲನೂ ಮೂರ್ಛಿಯಿಂದ ಬಿದ್ದನು. ಅದರಪ್ಯಾಲೆ ಅರ್ಜುನನೂ ಪ್ರಶ್ನಕ್ಕೆ ಉತ್ತರ ಕೊಡದೆ ಬಿದ್ದಾದ ನಂತರ, ಭೀಮಸೇನ ಉತ್ತರ ಕೊಡದೇ ಬಿದ್ದ. ಪಾಂಡವರು ವಿದ್ಯಾಸಾಮರ್ಥ್ಯ ಉಳ್ಳವರಾದರೂ, ವಿದ್ಯೋಪ. ಜೀವನ ಮಾಡುವುದು ಧರ್ಮವಲ್ಲೆಂದು ನೀರು ಕುಡಿದು ಮಲಗಿದರು.

ಯಮಧರ್ಮಗಿಂತ ವಾಯುದೇವರು, ದೇವೇಂದ್ರ ದೊಡ್ಡವರು. ಮನುಷ್ಯ-ದೇಹ ಧರಿಸಿದ್ದರಿಂದ ತಾವು ದೊಡ್ಡವರಾದರೂ, ಮನುಷ್ಯದೇಹಧರ್ಮದಿಂದ ಯಮಧರ್ಮನ ಮಾಯಾಕ್ಕೆ ಒಂದು ಮುಹೂರ್ತಪರಿಯಂತವಾಗಿ ಮಲಗಿ-ಕೊಂಡರು. ಕೇಶವನ ವ್ಯತಿರಿಕ್ತ ದೇವತೆಗಳು ಮನುಷ್ಯಧರ್ಮ, ಸ್ವಭಾವ ತೋರಸ್ತಾರೆ. ಭೀಮಾರ್ಜುನರ ಬಲದಲ್ಲಿ ನೂರು ಪಾಲಿಗೆ ಒಂದು ಯಮಧರ್ಮಗೆ ಆಗದು. ಹೀಂಗೆ ಭಾರತದಲ್ಲಿ ಹೇಳತದೆ. ಇಲ್ಲಿ ಹೇಳೋದೇನೆಂದರೆ ಪದ್ಮಪುರಾಣದಲ್ಲಿ ವಾಕ್ಯ ಹೇಳತದೆ. ಧರ್ಮರಾಯಗೆ ಚಿಂತಿ ಹೊಕ್ಕಿತು. ಮಾದ್ರೀಪುತ್ರರು, ಭೀಮಾರ್ಜುನರು ಹೋಗಿ ಬಹಳೇ ಹೊತ್ತಾಯಿತೆಂದು, ತಾನೇ ಬರಥಾನೆ. ನಾಲ್ಕು ಮಂದಿ ತಮ್ಮಂದರೂ ಮೂರ್ಛಿ ಉಳ್ಳವರಾಗಿದ್ದಾರೆ. ಧರ್ಮರಾಯ ತಾನು ಬಹಳ ನೀರಡಿಸಿ ಉದಕಪ್ರಾಶನ ಮಾಡೇನೆಂದು ನೀರು ಕುಡಿಯಲಿಕ್ಕೆ ಹೋಗಲು, ಯಮಧರ್ಮ ಆ ನಾಲ್ವರಿಗೆ ಆಡಿದ ಮಾತನ್ನೇ ಆಡಿದನು. ಬಕಪಕ್ಷಿರೂಪ ಧರಿಸಿ, ಧರ್ಮರಾಯನ ಕೂಡ ಯಮಧರ್ಮ ಮಾತನಾಡಿದನು. ಪ್ರಶ್ನಕ್ಕೆ ಉತ್ತರ ಹೇಳಿ ನೀರು ಕುಡಿಯಬೇಕೆಂದನು. ತಾ ಕ್ಷತ್ರಿಯ ವಿದ್ಯೋಪಜೀವನ ಮಾಡಬಾರದು. ಆದರೂ ತಮ್ಮಂದರು ಬದುಕೋ ನಿಮಿತ್ತ ಪ್ರಶ್ನಕ್ಕೆ ಉತ್ತರ ಹೇಳಿದನು. ಭಾರತ ಅರಣ್ಯಪರ್ವದಲ್ಲಿ ಯಕ್ಷಪ್ರಶ್ನ ಹೇಳೇದೆ. ಪರಬ್ರಹ್ಮಸ್ವರೂಪ ನಿರ್ಣಯ ಹೇಳೇದೆ. ಬೆಳ್ಳಕ್ಕಿರೂಪದಿಂದ ಯಮಧರ್ಮ ಏನು ಪ್ರಶ್ನ ಮಾಡಿದ, ಅದಕ್ಕೆಲ್ಲ ಧರ್ಮರಾಯ ಉತ್ತರ ಕೊಟ್ಟಾನೆ. ವಿಸ್ತಾರದಿಂದ ಅರಣ್ಯಪರ್ವದಲ್ಲಿ ಹೇಳೇದೆ.

ಧರ್ಮರಾಯನು ತನ್ನ ಪ್ರಶ್ನಗಳಿಗೆಲ್ಲ ಉತ್ತರ ಕೊಡಲಿಕ್ಕೆ, ಯಮಧರ್ಮ ಮಾತನಾಡಥಾನೆ. 'ರಾಯ, ನನ್ನ ಪ್ರಶ್ನಕ್ಕೆ ಉತ್ತರ ಹೇಳದಿ. ಏನು ವರವು ಬೇಡತಿದ್ದಿ, ಬೇಡು. ನಿಮ್ಮ ತಮ್ಮಂದರೊಳಗೆ ದಾವಾತನ ಎಬ್ಬಿಸಲಿ?' ಎಂದಲ್ಲಿ, ಧರ್ಮರಾಯ ವಿಚಾರಮಾಡಿಕೊಂಡು 'ನಕುಲ ಏಳಲಿ' ಎಂದನು. ಯಮ ಧರ್ಮಗೆ ಬಹಳ ಸಂತೋಷವಾಯಿತು. ಧರ್ಮರಾಯ ಸ್ವಾರ್ಥ ಉಳ್ಳವನಲ್ಲ.

'ಭೀಮಾರ್ಜುನರು ಬಹಳ ಬಲಿಷ್ಠರು, ಏಕೋದರರು. ಭೀಮಾರ್ಜುನರ ಬಾಹುಬಲದಿಂದ ಸಾಮ್ರಾಜ್ಯ ಸಾಧಿಸಬೇಕಾಗೇದೆ. ಅಂಥವರ ಬಿಟ್ಟುಕೊಟ್ಟು, ಮಲತಮ್ಮನ ಎಬ್ಬಿಸೆಂದಿ, ಇದೇನಾಶ್ಚರ್ಯ!' ಎನ್ನಲು, ಧರ್ಮರಾಯ ಮಾತನಾಡಿದ. 'ಕುಂತೀಭಾಗಕ್ಕೆ ನಾಸಿದ್ದೀನಿ. ಮಾದ್ರೀಭಾಗಕ್ಕೆ ನಕುಲನಾದ.' ಹೀಂಗೆ ರಾಯ ಮಾತನಾಡಿದ. ರಾಯಗೆ ಮಲತಮ್ಮನಲ್ಲಿ ಇಂಥಾ ವಾತ್ಸಲ್ಯವೆಂದು ಯುಧರ್ಮ ಪ್ರೀತನಾಗಿ, ಭೀಮ ಅರ್ಜುನ ನಕುಲ ಸಹದೇವ ಹೀಂಗೆ ನಾಲ್ಕು ಮಂದಿಯನ್ನೂ ಎಬ್ಬಿಸಿದನು. 'ನೀವು ಪಾಂಡವರು ಐದು ಮಂದಿ ರೂಪ ಆಚ್ಛಾದಿಸಿಕೊಂಡಿರರೀ. ಅಜ್ಞಾತವಾಸದಲ್ಲಿ ದಾರೂ ಗುರ್ತು ಹಿಡಿಯಧಾಂಗೆ ರೂಪವುಳ್ಳವರಾಗಿರಿ' ಎಂದು ವರವು ಕೊಟ್ಟನು.

ಯುದಿಷ್ಠಿರನ ಯಶಸ್ಸು ಹೆಚ್ಚಿಸಬೇಕಾಗಿ ಬ್ರಾಹ್ಮಣನ ಅಗ್ನಿಮಥನಕಾಷ್ಠ ಕೊಟ್ಟನು. ಯುಧರ್ಮ ಹೋದ ತರುವಾಯ ಧರ್ಮರಾಯ, ಅಗ್ನಿಮಥನಕಾಷ್ಠ ಭೂಸುರಗೆ ಕೊಟ್ಟನು. ಪಾಂಡವರು ವಿಪ್ರನ ದುಃಖವೆಲ್ಲ ಪರಿಹರಿಸಿದರು, ಇದಿಷ್ಟೂ ಕೃಷ್ಣನ ಮಹಿಮ. ಪಾಂಡವರು ಹರ್ಯನುಗ್ರಹಕ್ಕೆ ಪಾತ್ರರಾಗಿ ಲೇಶಮಾತ್ರ ಕಷ್ಟವಿಲ್ಲದೆ, ಹನ್ನೆರಡು ವರುಷ ವನವಾಸಬಟ್ಟರು. ನಾರಾಯಣಪರಾಯಣರಾಗಿ ಸುಖದಲ್ಲಿ ಹನ್ನೆರಡು ವರುಷ ವನಭೋಗ ಕೊಂಡು, ವನವಾಸದಲ್ಲಿ ಒಂದಿಷ್ಟೂ ಕಷ್ಟ ಬಿದ್ದಿಲ್ಲ. ದೇಶಕಾಲಪರಿಚ್ಛೇದಶೂನ್ಯ ಅಚ್ಯುತನ ಮಹಿಮ ಕೊಂಡಾಡತ್ತ ಎಂಭತ್ತೆಂಟುಸಾವಿರ ಋಷಿಗಳು ಹತ್ತುಸಾವಿರ ಸನ್ಯಾಸಿಗಳು ಇವರಿಂದ ಯುಕ್ತನಾಗಿ ಧರ್ಮರಾಯ, ತನ್ನ ತಮ್ಮಂದರ ಸಹವಾಗಿ, ಬಹಳೇ ಸುಖದಲ್ಲಿ ಹನ್ನೆರಡು ವರುಷ ವನಭೋಗ ಕೊಂಡನೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಅರಣೇ ಪ್ರಾಪ್ತಿಃ' ಎಂಬ ಇಪ್ಪತ್ತೆರಡನೇ ಅಧ್ಯಾಯ ಸಂಪೂರ್ಣವು.

ಶ್ರೀಮಧ್ವೇಶಾರ್ಪಣಮಸ್ತು

ಅಧ್ಯಾಯ ೨೩

ಶ್ರೀಕೃಷ್ಣಚರಿತೇ ಅಜ್ಞಾತವಾಸ ಸಮಾಪ್ತಿಃ

ಈ ಇಪ್ಪತ್ತಮೂರನೇ ಅಧ್ಯಾಯದಲ್ಲಿ ವಿರಾಟಪರ್ವ ಭಾರತಕಥ ಹೇಳಥಾರೆ. ಪಾಂಡವರು ಹನ್ನೆರಡು ವರುಷ ಲೇಶಮಾತ್ರ ಕಷ್ಟವಿಲ್ಲದೆ, ವನಭೋಗ ಕೊಂಡು, ಇನ್ನು ಒಂದು ವರುಷ ಅಜ್ಞಾತವಾಸ ಮಾಡಬೇಕಾಗಿ, ಎಂಭತ್ತೆಂಟುಸಾವಿರ ಋಷಿಗಳಿಗೆ, ಹತ್ತುಸಾವಿರ ಸನ್ಯಾಸಿಗಳಿಗೆ, ನೀವು ಹೋಗಿರೆನಲಾಗದೆ, ರಾಯ ತನ್ನ ಪುರೋಹಿತ ಧೌಮ್ಯಾಚಾರ್ಯಗೆ ಹೇಳಿದನು. 'ಪಾಂಡವರು ರೂಪಾಚ್ಛಾದಿಸಿ-ಕೊಂಡು ಅಜ್ಞಾತವಾಸದಲ್ಲಿರಬೇಕು. ಅದರ ದೆಸಿಯಿಂದ ಋಷಿಗಳನ್ನ ಸನ್ಯಾಸಿ ಗಳನ್ನ ಅಪ್ಪಣಿ ಕೊಡಿರೆಂದು ಕೇಳಥಾರೆಂದು ಹೇಳಿ ಅಪ್ಪಣಿ ಕೊಂಡುಬಾ' ಎಂದು ಹೇಳಿದನು. ಧೌಮ್ಯಾಚಾರ್ಯರು ಋಷಿಗಳ ಬಳಿಗೆ ಹೋಗಿ ಅಪ್ಪಣಿ ಕೊಂಡು ಬಂದು, ಪಾಂಡವರ ಮುಂದೆ ಋಷಿಗಳು ಅಪ್ಪಣಿ ಕೊಟ್ಟರೆಂದು ಹೇಳಿದ. ತರುವಾಯ, ಪ್ರಸಿದ್ಧರಾಯ, ಪ್ರಸಿದ್ಧನಗರದಲ್ಲಿರಬಾರದಾದಕಾರಣ ವಿರಾಟನಗರದ ಸಮೀಪಕ್ಕೆ ಹೋಗಿ, ದುರ್ಗಾದೇವಿ ಸ್ತೋತ್ರ ಪೂಡಿ, ತಮ್ಮ ಧನುರ್ಬಾಣಗಳು ಆಯುಧಗಳನ್ನ ಶಮೀವೃಕ್ಷದಲ್ಲಿರಸಿ, ಯಮಧರ್ಮನ ವರಬಲದಿಂದ, ಧರ್ಮರಾಯ ಸನ್ಯಾಸೀವೇಷ ಕೊಂಡ. ಭೀಮಸೇನ ಸ್ವಯಂಪಾಕನ ವೇಷ, ಅರ್ಜುನ ಷಂಡ-ನಾಕಾರ ವೇಷ, ನಕುಲ ಕುದರೀ ಕುಣಿಸ್ಯಾಡುವ ಚಾಬುಕಸವಾರನ ವೇಷ, ಸಹದೇವ ಗೋಪಾಲನ ವೇಷ, ಈ ಪ್ರಕಾರ ಐದು ಮಂದಿ ಐದು ವೇಷ ಧರಿಸಿ-ಕೊಂಡರು. ದ್ರೌಪದೀ ಸೈರಂಧ್ರೀ ವೇಷ ಧರಿಸಿದಳು. ಅನಂತರ ತಮ್ಮೊಳಗೆ ತಾವು ಗೌಪ್ಯನಾಮವಿಟ್ಟುಕೊಂಡರು. ಜಯ, ಜಯಂತ, ವಿಜಯ, ಜಯತ್ಸೇನ, ಜಯದ್ಬಲ ಈ ಹೆಸರುಗಳಿಂದ ವಿರಾಟರಾಯನ ಸಮೀಪಕ್ಕೆ ಒಬ್ಬೊಬ್ಬರೇ ಹೋದರು.

ಪಾಂಡವರಲ್ಲಿ ತಾವು ಸೇವ ಮಾಡಿಕೊಂಡು ಇದ್ದರೆಂದು ಹೇಳಬೇಕಾಗಿ, ಧರ್ಮರಾಯ ಪರಮಸುಂದರ ಸನ್ಯಾಸೀರೂಪ ಧರಿಸಿಕೊಂಡಾನೆ. ಸನ್ಯಾಸಿ ದೊಡ್ಡವನೆಂದು ನಮಸ್ಕಾರ ಮಾಡತಿಹೋರು. ಭೀಮಸೇನ ಸ್ವಯಂಪಾಕನ ವೇಷ ಏನುಕಾರಣ ಧರಿಸಿದನೆಂದರೆ, ಪರಪಾಕ ಬ್ರಾಹ್ಮಣರಿಗೆ ನಿಷಿದ್ಧ; ಕ್ಷತ್ರಿಯರಿಗಂತೂ ಬಹಳೇ ನಿಷಿದ್ಧ. ಅದಕಾರಣ ಸ್ವಯಂಪಾಕ ಮಾಡುವವನ ವೇಷ ಧರಿಸಿದನು. ದ್ವಿಜರೂಪ ಧರಿಸಬೇಕಾದರೆ, ಬ್ರಾಹ್ಮಣ ದೊಡ್ಡವನೆಂದು ವೇದಗಳಲ್ಲಿ ಹೇಳೀದೆ. ಅದಕಾರಣ ಸೂದವೇಷ ಧರಿಸಿದನು. ಪಾಂಡವರು ವಿರಾಟರಾಯನ ತಿನ್ನ ಉಂಡ-ರೆಂದಲ್ಲಿ, ವೇದವೇತ್ತರಿಗೆ ಸರ್ವವೂ ಸ್ವೀಯ. ಪಾಂಡವರು ದೇವತಿಗಳಾದಕಾರಣ,

ಸರ್ವರೂ ತಮ್ಮದೇವೆ ಎಂದು ತಿಳದು ಉಂಡರು. ಪರಾನ್ನ ಉಣ್ಣಲಿಲ್ಲ. ಭೀಮ ಸೇನ ಬಲ್ಲವನೆಂತ ನಾಮುಗ್ಮೆದನು. ಅರ್ಜುನ ಊರ್ವಶೀ ಶಾಪದಿಂದ ಷಂಡವೇಷ ಧರಿಸಿದನು. ನಕುಲ ಚತುರನಾದಕಾರಣ ಸೂತವೇಷ ಧರಿಸಿದನು. ಸಹದೇವ ಗೋಪಾಲನ ವೇಷ ಧರಿಸಿದನು. ವೈಶ್ಯಜಾತಿಯೊಳಗೆ ಗೋಪಾಲ ಉತ್ತಮನಾದ ಕಾರಣ ಆ ವೇಷ ಧರಿಸಿದನು. ಈ ಪ್ರಕಾರ ಪ್ರತ್ಯೇಕಪ್ರತ್ಯೇಕ ನಾವುದಿಂದ ಕರೆಸಿ-ಕೊಂಡು ವಿರಾಟರಾಯನಲ್ಲಿದ್ದರು. ಧರ್ಮರಾಯ ಪಾಶವಿದ್ಯದಲ್ಲಿ ರತನಾಗಿಹ ಏನುಕಾರಣವೆಂದರೆ, ಅಜ್ಞಾತವಾಸ ಮುಗಿದ ಮ್ಯಾಲೆ ಶಕುನಿ ಇನ್ನೊಮ್ಮೆ ಆಡಲಿಕ್ಕೆ ಕರದಾನು, ಕಲಿತಿರಬೇಕು ಎಂದು, ವಿರಾಟರಾಯನ ಕೂಡ ಪಾಶ ಆಡತಿಹ. ದ್ರೌಪದೀ ಸೇವಾರೂಪ ಧರಿಸಿ, ವಿರಾಟರಾಯನ ಹೆಂಡತಿ ಸುದೇಷ್ಣಾಗೆ, ನೀಚಕೆಲಸ ಹೇಳಕೂಡದೆಂದು, ಅಟ್ಟಿವಾಡಿದಳು. 'ಸಣ್ಣ ಸೇವ ಹೇಳಬಾರದು, ನನ್ನವ್ಯಾಲೆ ದಾರಾದರೂ ಪರಪುರುಷರು ಕಣ್ಣಿಟ್ಟು ಅಗ್ಗಳಿಕೆ ಮಾಡಿದ ಪಕ್ಷವೇ ನನ್ನ ಗಂಡಂದರು —ಐದು ಮಂದಿ ಗಂಧರ್ವರು ಖೇಚರಮಾರ್ಗದಿಂದ ತಿರಗಥಾರೆ—ಕೊಂದು-ಬಿಟ್ಟಾರು. ನನ್ನ ಕೈಯ ಕಾಲು ತೊಳಸಿಕೊಳ್ಳಕೂಡದು.' ಈ ಪ್ರಕಾರ ಸಂಖ್ಯೆ ಮಾಡಿಕೊಂಡಿದ್ದಳು.

ಹೀಂಗಿರಲಿಕ್ಕಾಗಿ ಜೀಮೂತನೆಂಬ ಮಲ್ಲ ಮಹಾರುದ್ರನ ವರಬಲದಿಂದ ತೀಕ್ಷ್ಣನಾಗಿ ಯುದ್ಧಕ್ಕೆ ಬಂದನು. ವಿರಾಟರಾಯನ ಮಲ್ಲರು ಅವನ ಕೂಡ ಯುದ್ಧ ಮಾಡಲಾರದೆ ದೇಶದೇಶಕ್ಕೆ ಓಡಿಹೋದರು. ವಿರಾಟರಾಯಗೆ ಬಹಳ ಚಿಂತಿ ಪ್ರಾಪ್ತವಾಯಿತು. ಸನ್ಯಾಸೀರೂಪ ಧರಿಸಿದ್ದ ಧರ್ಮರಾಯ ಮಾತನಾಡಿದ. 'ರಾಯ ಏನುಕಾರಣ ಚಿಂತಿಸತಿದ್ದಿ! ಸ್ವಯಂಪಾಕ ಮಾಡುವ ಬಲ್ಲವನನ್ನು ಕರೆ-ಕಳುಹಿಸು. ನಿನಗೆ ಜಯ ತಂದುಕೊಟ್ಟಾನು' ಎಂದು ಹೇಳಲು, ಬಲ್ಲವನ ಕರೆ-ಕಳುಹಿದ. 'ಈ ಕಂಕನ ಮಾತು ಕೇಳಿ ಕರೆಕಳುಹೀನಿ. ಜೀಮೂತನ ಕೂಡ ಯುದ್ಧ ಮಾಡೀಯ?' ಎಂದಲ್ಲಿ, 'ಮಹಾದೇವ ಸನ್ಯಾಸೀ ಅನುಗ್ರಹವಿಂದ ಜೀಮೂತನ ಕೂಡ ಯುದ್ಧಮಾಡೇನು' ಎಂದನು. ಮಹಾದೇವಶಬ್ದವಾಚ್ಯ ನಾರಾಯಣನೇವೆ. ಸನ್ಯಾಸೀಶಬ್ದವಾಚ್ಯ, ವಿರಾಟರಾಯನ ಅಂತರ್ನಿಯಾಮಕ ನಾರಾಯಣನ ಅನುಗ್ರಹದಿಂದ ಕೊಂದೇನೆಂದನು. ಜೀಮೂತಗೆ ಬಲ್ಲವಗೆ ಯುದ್ಧ ವಾಯ್ತು. ಬಲ್ಲವನ ಒಂದು ಮುಷ್ಟೀಪೆಟ್ಟಿನಿಂದ ಜೀಮೂತ ಸತ್ತುಬಿದ್ದನು. ಅಂದಿಗೆ ಹತ್ತು ತಿಂಗಳಾಯಿತು.

ಸುದೇಷ್ಣಾನ ತಮ್ಮ ಕೀಚಕ ದಿಗ್ವಿಜಯಕ್ಕೆ ಹೋಗಿ ಪಟ್ಟಣಕ್ಕೆ ಬಂದನು. ಬಹುಕಾಲ ಅಕ್ಕನ ಭೆಟ್ಟಿ ಇದ್ದಿಲ್ಲಾದಕಾರಣ ದರ್ಶನಕ್ಕೆ ಬರಥಾನೆ. ಸೈರಂಧ್ರಿ ಯನ್ನ ಕಂಡ. ಈಕಿ ದಾರು! ಬಹಳೇ ಸುಂದರಳಿದ್ದಾಳೆಂದು ಕೇಳಲು, ಸೈರಂಧ್ರಿ ತನ್ನ ದಾಸಿ ಎಂದಳು. ತನ್ನ ಸಮೀಪಕ್ಕೆ ಸೈರಂಧ್ರೀನ್ನ ಕಳುಹಲು ಹೇಳಿ, ಕೀಚಕ

ತನ್ನ ಮನಿಗೆ ಹೋದನು. ಕೀಚಕ ಒಂದು ತಿಂಗಳು ದ್ರೌಪದೀ ಸಮೀಪಕ್ಕೆ ಬಂದು ಪ್ರಾರ್ಥಿಸ್ತಿಹ. 'ಎಲೋ ಪಾಪಿ, ನೀ ಬದುಕಬೇಕಿತ್ತು, ನನ್ನ ಕೂಡ ಮಾತನಾಡ ಬ್ಯಾಡ. ನನ್ನ ಗಂಡಂದರು ಗಂಧರ್ವರು, ಖೇಚರಮಾರ್ಗದಿಂದ ತಿರಗಥಾರೆ, ನಿನ್ನ ಕೊಂದಾರು. ಕ್ಷೇಮ ಇಚ್ಛೈಸಿ, ನನ್ನ ಹೆಸರುಗೊಳ್ಳದೆ ಹಿಂದಕ್ಕೆ ತಿರುಗಿಹೋಗು' ಎಂದು ಒಹುಪ್ರಕಾರದಿಂದ ದ್ರೌಪದೀ ಹೇಳಿದಳು. ಕೀಚಕ ನಾಚಿಕಿಲ್ಲದವ, ತನ್ನ ಪುರಣ ಚರಿತವನೆಲ್ಲಾದಕಾರಣ 'ಎಲೌ ಸೈರಂಧ್ರೀ, ನನ್ನ ಒಲಿಸು. ನಿನಗೆ ದೊಡ್ಡ ಭಾಗ್ಯ ಕೊಟ್ಟೀನು. ನನ್ನ ಹೆಂಡಿರನ್ನ ನಿನ್ನ ದಾಸೇರನ್ನ ಮಾಡಥೀನಿ, ನಾನು ನಿನ್ನ ಆಜ್ಞಾಧಾರಕನಾಗಿರಥೀನಿ.' ಹೀಂಗೆ ದ್ರೌಪದೀಗೆ ಪ್ರಾರ್ಥನ ಮಾಡಿ, ಮ್ಯಾಲೆ ಸುದೇಷ್ಣನ ಬೇಡಿಕೊಳ್ಳತಿಹ. 'ಸೈರಂಧ್ರೀಗೆ ಹೇಳಿ ನನ್ನ ಸಮೀಪಕ್ಕೆ ಕಳುಹು' ಎನಲಿಕ್ಕೆ, ತನ್ನ ತಮ್ಮಗೆ ಬುದ್ಧಿ ಹೇಳಿದಳು. 'ಪರಸ್ತ್ರೀಮ್ಯಾಲೆ ಕಣ್ಣಾಡ ಬಾರದು. ನನ್ನ ಗಂಡ ಈಕಿ ಮ್ಯಾಲೆ ಕಣ್ಣಿಟ್ಟರೆ ಸತ್ತಾನೆಂದು ನಾ ಬಹಳ ಅಂಜೀನಿ.' ಈ ಪ್ರಕಾರ ಅನೇಕ ವಿಧವಾಗಿ ಬುದ್ಧಿ ಹೇಳಿದಳು. ಕೀಚಕ ಕೇಳವಲ್ಲ. ನಾಚಿಕಿಲ್ಲದೆ ಪುನಃಪುನಃ ದ್ರೌಪದೀನ್ನ ಬೇಡಿಕೊಳ್ಳತಿಹ, ಅಕ್ಕನ್ನ ಪ್ರಾರ್ಥಿಸ್ತಿಹ. ತಮ್ಮನ ಭಿಡಿಯ, ನೂಕಸಲಿಕ್ಕೆ ಬಾರದಾದಕಾರಣ, ಒಂದು ದಿವಸ ದ್ರೌಪದೀಗೆ ಆಜ್ಞಾಪಿಸಿದಳು. 'ಎಲೌ ಸೈರಂಧ್ರೀ, ಕೀಚಕನ ಮನಿಯಲ್ಲಿ ದೇಶಾಂತರದ ಸುರಾ ಅದೆ. ನನಗೆ ಬಹಳೀ ನೀರಡಿಕೆ ಆಗ್ಯೇದೆ, ಕೊಂಡುಬಾ' ಎನಲಿಕ್ಕೆ, ಸೈರಂಧ್ರೀ 'ನಾನು ಹೋಗುವುದಿಲ್ಲ. ಕೀಚಕ ಕಪಟಬುದ್ಧಿಯವ' ಎಂದು ಆಡಲಿಕ್ಕೆ, ತಾನು ಹೇಳಿದ ಕೆಲಸ ಮಾಡಲಿಲ್ಲವೆಂದು ಸಣ್ಣ ಮಾತುಗಳ ಆಡಲಿಕ್ಕೆ, 'ಇನ್ನು ನನ್ನಮ್ಯಾಲೆ ಮಾತಿಲ್ಲ. ಬಲಾತ್ಕಾರದಿಂದ ಕಳುಹತಿದ್ದಿ.' ಹೀಂಗೆ ಮಾತನಾಡಿ ಸೈರಂಧ್ರೀ ಕೀಚಕನ ಮನಿಗೆ ಹೋಗಥಾಳೆ. ಕೀಚಕ ಭೋಗದ್ರವ್ಯ ಇಟ್ಟುಕೊಂಡು, ದ್ರೌಪದೀ ಬಂದಾಳೆಂದು ಮಾರ್ಗ ನೋಡಥಾನೆ. ಅಷ್ಟರೊಳಗೆ ಆಕಿ ಬರಲಿಕ್ಕೆ, ಕೈ ಹಿಡಿಯಲು, ಸೈರಂಧ್ರೀ ಕೀಚಕನ್ನ ನೂಕಿ ಓಡಿಬರಥಾಳೆ. ಕೀಚಕ ಬೆನ್ನಟ್ಟಿ ಬಂದು, ದ್ರೌಪದೀನ್ನ ಕೆಡಹಾಕಿದನು. ಇದಿಷ್ಟೂ ಭೀಮಸೇನ ದೃಷ್ಟಿಯಿಂದ ನೋಡಿದ. ಸೈರಂಧ್ರೀ ವಿರಾಟರಾಯನ ಸಭಿಗೆ ಬರಲು, ಅಷ್ಟರೊಳಗೆ ಕೃಷ್ಣ-ನಾನುಕ ನಾರಾಯಣನ ಸ್ಮರಣೆ ಮಾಡತಾ ಬರಲು, ಆಗಲೇ ಹೇತಿನಾನುಕ ರಾಕ್ಷಸ, ಅರಿಕಿಲ್ಲದೇ ಬಂದು ಕೀಚಕನ್ನ ಕೆಡಹಾಕಿದನು. ಭೀಮಸೇನ ಕೀಚಕನ ಅಗ್ಗಳಿಕೆ ಕಂಡು, ವೃಷ್ಣ ಕಿತ್ತುಕೊಂಡು ಹೋದೇನೆಂದು ಉದ್ಯುಕ್ತನಾಗಲಿಕ್ಕೆ, ಕಂಕ ಬ್ಯಾಡೆಂದು ನಿವಾರಿಸಿದನು.

ದ್ರೌಪದೀ ರಾತ್ರೀಭಾಗದಲ್ಲಿ, ಭೀಮಸೇನನ ಸಮೀಪಕ್ಕೆ ಬಂದು 'ಕೀಚಕ ಬಹಳೀ ಅಗ್ಗಳಿಕೆ ಮಾಡ್ಯಾನೆ. ನಿನ್ನಂಥ ಪರಾಕ್ರಮಿ ಗಂಡ ಇದ್ದೂ, ನನ್ನ ವೈರಿ ಒಂದು ರಾತ್ರಿ ಸಹ ಭೂಮೀಮ್ಯಾಲೆ ಇರಬಾರದು.' ಈ ಪ್ರಕಾರ ಹೇಳಲು, ಭೀಮ-

ಸೇನ ಒಂದು ಪ್ರಕಾರ ಬುದ್ಧಿ ಹೇಳಿದ. 'ಹಗಲೇ ನನ್ನ ಗಂಡಂದರು ಖೇಚರಮಾರ್ಗ ದಿಂದ ತಿರಗಥಾರೆ. ರಾತ್ರೀ ಭಾಗದಲ್ಲಿ ನೃತ್ಯಾಗಾರದಲ್ಲಿ ಬಾ' ಎಂದು ಹೇಳು. ನಾನು ಅಲ್ಲಿಗೆ ಬಂದು ಕೀಚಕನ್ನ ಕೊಂದೇನು' ಈ ಪ್ರಕಾರ ಬುದ್ಧಿ ಹೇಳಿ ಕಳುಹಿಸಿ-ಕೊಟ್ಟನು. ಈ ಮಾತು ಸೈರಂಧ್ರೀ ಕೇಳಿ ಕೀಚಕಗೆ 'ಹಗಲೇ ನನ್ನ ಪುರುಷರು ಖೇಚರಮಾರ್ಗದಿಂದ ತಿರಗಥಾರೆ. ಇಬ್ಬರನ್ನೂ ಕೊಂದುಬಿಟ್ಟಾರು. ಕಾರಣ ನೃತ್ಯಾಗಾರದಲ್ಲಿ ರಾತ್ರೀಲಿ ಬಾ' ಎಂದು ಹೇಳಲಿಕ್ಕೆ, ಕೀಚಕ ಸಂಭ್ರಮ ಉಳ್ಳವ ನಾಗಿ, ಭೋಗದ್ರವ್ಯ ಕೊಂಡು 'ನೃತ್ಯಾಗಾರದಲ್ಲಿ ಸೈರಂಧ್ರೀ ಬಂದಿದ್ದಾಳೆ, ಇವತ್ತು ಭೋಗ ದೊರಕತದೆ' ಎಂದು ಬರಥಾನೆ. ಭೀಮಸೇನನ ಸ್ಪರ್ಶವಾಯಿತು. ಮಹಾ ಕಠಿಣದೇಹ, ಸೈರಂಧ್ರೀ ಎಂದು ಬಂದರೆ, ಈಕಿ ಅಲ್ಲವೆಂದು ತಿಳಿದನು. ಭೀಮಸೇನಗೆ ಕೀಚಕಗೆ ಮುಷ್ಟೀಯುದ್ಧವಾಯಿತು. ಬಾಹುಯುದ್ಧದಿಂದ ಕೀಚಕನ ದೇಹವೆಲ್ಲ ಮರ್ದಿಸಿ ಕೀಚಕನ ಎರಡು ಕೈ ಶಿರಸ್ಸು ಕಿತ್ತಿ ಅವನ ಪೃಷ್ಠದಲ್ಲಿರಿಸಿ, ಅವನ ಎಲುವಿಗೆ ಎಲುವು ಹೊಸೆದು, ಅಗ್ನಿ ಹುಟ್ಟಿಸಿ ದ್ರೌಪದೀಗೆ ಪ್ರತ್ಯಕ್ಷ ತೋರಿದನು. ಭೀಮಸೇನ-ಕೀಚಕರ ಯುದ್ಧ ನೋಡಲು ದ್ರೌಪದೀ ಕಂಬದ ಮರಿಯಲ್ಲಿ ನಿಂತಿದ್ದಳು. 'ಎಲೌ ದ್ರೌಪದೀ ನಿನ್ನ ಮ್ಯಾಲೆ ದಾರು ಕಣ್ಣಿಟ್ಟಾರು, ಅವರಿಗೆ ಇದೇ ಗತಿ ಎಂದು ತಿಳಿ.' ಈ ರೀತಿ ಮಾತನಾಡಿ ಸ್ವಯಂಸಾಕದ ಮನಿಗೆ ಹೋದನು. ಕೀಚಕ ಹೋಗಿ ಬಹಳೀ ಹೊತ್ತಾಯಿತು. ಇನ್ನೂ ಬರಲಿಲ್ಲವೆಂದು, ಕೀಚಕನ ತಮ್ಮಂದರು ನೂರಾಐದು ಮಂದಿ ಉಪಕೀಚಕರು—ಶಂಕರನ ಬಲದಿಂದ ಅವಧ್ಯರಾಗಿದ್ದರು—ಕೀಚಕನ್ನ ಹುಡಕತಾ ನೃತ್ಯಾಗಾರಕ್ಕೆ ಬರಲು, ಕೀಚಕ ಮಾಂಸದ ಗುಳಿಗ್ಯಾಗಿ ಬಿದ್ದಾನೆ! ದ್ರೌಪದೀ ದೂರದಲ್ಲಿ ನಿಂತಾಳೆ. ಆಕೀನ್ನ ಕಂಡು, 'ಈಕಿಗೋಸ್ಕರ ನಮ್ಮ ಅಣ್ಣ ಸತ್ತಾನೆ ಈಕೀ ಸಹ ನಮ್ಮ ಅಣ್ಣನ್ನ ದಹನ ಮಾಡಬೇಕು. ಪರಲೋಕದಲ್ಲಾದರೂ ಆತಗೂ ಸೈರಂಧ್ರೀಗೂ ಭೋಗವಾಗಲಿ' ಎಂದು, ದ್ರೌಪದೀನ ಚಿತಿಗೆ ಕಟ್ಟಿದರು. ಸ್ಮಶಾನಕ್ಕೆ ಒಯ್ದಾಗ ಗೋಪ್ಯನಾಮದಿಂದ ಒದರಲಿಕ್ಕೆ, ಭೀಮಸೇನ ದೊಡ್ಡ ವೃಕ್ಷ ಕಿತ್ತುಕೊಂಡು ಬಂದು, ನೂರಾಐದು ಮಂದೀನ್ನೂ ಕೊಂದು, ಅದೇ ಚಿತೆಯೊಳಗೆ ಬಿಟ್ಟುಕೊಟ್ಟನು. ಭೀಮಸೇನ ಪಾಪಿಗಳ ಸ್ಪರ್ಶವಾಗೇದೆಂದು ಸ್ನಾನ ಮಾಡಿ, ಪಾಕಗೃಹಕ್ಕೆ ಬಂದನು.

ದ್ರೌಪದೀ ಅರುಣೋದಯ ಕಾಲದಲ್ಲಿ ಹಿಂದುಗಡಿಯಿಂದ ಬರಥಾಳೆ. ಸೈರಂಧ್ರೀ ಕಂಡು ಸಮಸ್ತ ಪಟ್ಟಣಸ್ಥರು, ಪುರುಷರು ಅಂಜಂಜಿ ಅಡಗಿಕೊಳ್ಳ-ತಿಹೋರು. ನೂರಾಳಿರು ಮಂದಿ ಕೀಚಕರು, ಮಹಾರುದ್ರನ ವರಬಲದಿಂದ ಅವಧ್ಯರಾಗಿದ್ದರೂ, ಅಷ್ಟೂ ಮಂದಿ ಭೀಮಸೇನನಿಂದ ಸತ್ತುಹೋದರು. ಕೀಚಕರಿಗೆ 'ನಾನು ಗಂಧರ್ವನಿದ್ದೀನಿ' ಎಂದು ಹೇಳಿ ಯಮುನ ಮನಿಗೆ ಕಳುಹಿದನು. ಕೀಚಕ, ಉಪಕೀಚಕರ ಕೊಂದವ್ಯಾಲೆ ದ್ರೌಪದೀ, ಭೀಮಸೇನಗೆ

ಸಂತೋಷವಾಯಿತು. ಸುದೇಷ್ಣಾ ಸಮೀಪಕ್ಕೆ ಸೈರಂಧ್ರೀ ಬಂದಳು. ಆದ್ಯಂತ ವರ್ತಮಾನ, ತನ್ನ ಗಂಡಂದರು ಬಂದು ನೂರಾಲರು ಮುಂದಿ ಕೀಚಕರನ್ನ ಕೊಂದುಬಿಟ್ಟದ್ದು, ಎಲ್ಲ ವರ್ತಮಾನ ಹೇಳಲಿಕ್ಕೆ, ಸುದೇಷ್ಣಾ ಬಹಳೀ ಅಂಜಿಕೆ ಉಳ್ಳಾಕಿಯಾಗಿ 'ಅಮ್ಮಾ, ನಿನ್ನ ಸೇವಿ ಸಾಕು. ಸ್ತ್ರೀಯರನ್ನ ಕಾಣಲಿಕ್ಕೆ ಪುರುಷರಿಗೆ ಕಾಮೋದ್ರೇಕವಾಗತದೆ. ಅದರೊಳಗೆ ನೀನು ಪರಮಸುಂದರಳು. ನನ್ನ ತಮ್ಮಂದರು ನೂರಾಲರು ಮುಂದಿ ಮೃತರಾದರು. ನನ್ನ ಗಂಡ ನಿನ್ನಲ್ಲಿ ಮನಸ್ಸು ಮಾಡಿದ ಪಕ್ಷವೇ ಸತ್ತುಹೋದಾನು. ಎಲೌ ಅಮ್ಮಾ, ನೀನು ಹೋಗು' ಎನಲಿಕ್ಕೆ, 'ಅಮ್ಮಾ ಹದಿನೂರು ವರ್ಷಕ್ಕೆ ಭರ್ತಿ ಆಗೋಣ ಅವಶ್ಯ ಹೋದೇನು' ಎಂತ ಸೈರಂಧ್ರೀ ಹೇಳಲು ಸುದೇಷ್ಣಾ, ಈಕಿ ಕೂಡ ಹೆಚ್ಚು ಮಾತನಾಡಲು ಅಂಜಿಕೊಂಡು ಸುಮ್ಮಗಾದಳು.

ಪಾಂಡವರನ್ನ ಅಜ್ಞಾತವಾಸದಲ್ಲಿ ತಿಳಿಯೋದರಗೋಸ್ಕರ, ದುರ್ಯೋಧನ ಗೂಢಚಾರರನ್ನ ದೇಶದೇಶಕ್ಕೆ ಕಳುಹಿಸಿಹ. ಭೃತ್ಯರು ದೇಶದೇಶದಲ್ಲಿ ಪಾಂಡವರನ್ನ ಹುಡುಕತಿಹೋರು, ಎಲ್ಲೂ ಸಮಾಚಾರ ಸಿಕ್ಕದು. ದುರ್ಯೋಧನನ ಆಜ್ಞೆ, ಒಂದು ವರುಷದೊಳಗೆ ಸಮಾಚಾರ ಕೊಂಡು ಬಾಹೋದಕ್ಕೆ ಇಹೋದು. ಇನ್ನೇನು ವಾರ್ತೆ ಕೊಂಡುಹೋದಾರು! ವಿರಾಟನಗರದಲ್ಲಿ ಹೆಂಗಸಿಗೆ ಆಳುಕೆ ಕೀಚಕ, ಗಂಧರ್ವರಿಂದ ಸತ್ತ ಎಂಬ ವಾರ್ತೆ ಕೊಂಡುಹೋದರು. ಕುರುಕುಲೋತ್ಪನ್ನರು ಕುರುವೃದ್ಧರು ದೂತರ ಮುಖದಿಂದ, ಗಂಧರ್ವರಿಂದ ಕೀಚಕ ಸತ್ತನೆಂದು ವಾರ್ತೆ ಕೇಳಿ, ಯುಕ್ತಿಯಮ್ಯಾಲೆ ತಿಳಿದರು. ಸ್ತ್ರೀಯರೊಳಗೆ ಪರಮ ಚಲುವಿ ದ್ರೌಪದೀ. ಕೀಚಕನ್ನ ಕೊಲ್ಲೋವಲ್ಲಿ ಭೀಮಸೇನನ ಹೊರ್ತು ದಾರೂ ಸಮರ್ಥರಿಲ್ಲ. ಈ ಕಾರ್ಯ ಅನ್ಯರಿಂದ ಆಗದೆಂದು ಯುಕ್ತಿಯ ಮ್ಯಾಲಿಂದ ತಿಳಿದರು. ತರುವಾಯ ದುರ್ಯೋಧನ, ಭೀಷ್ಮದ್ರೋಣಾದಿಗಳ ಕೂಡಿಕೊಂಡು ಉತ್ತರಗೋಗ್ರಹಣಕ್ಕೆ ಹೋಗೋದಕ್ಕೆ ಆಲೋಚನಿ ಮಾಡಿ, ಸುಶರ್ಮಗೆ ಹೇಳಿದ. 'ಹೇ ಸುಶರ್ಮ, ನೀನು ನನ್ನ ಸಮೀಪಕ್ಕೆ ಬಂದಿದಿ. ನಿನ್ನ ದೇಶ ಕೀಚಕ ಕೊಂಡಿದ್ದ. ಅವನು ಸತ್ತುಹೋದಕಾರಣ, ನೀನು ವಿರಾಟನಗರಕ್ಕೆ ಹೋಗಿ, ದಕ್ಷಿಣದಿಕ್ಕಿನಲ್ಲಿದ್ದ ಆಕಳುಗಳ ತಿರವು. ನಮ್ಮ ಕಾರ್ಯ ಮಾಡು. ಪಾಂಡವರು ವಿರಾಟನಗರದಲ್ಲಿದ್ದ ಪಕ್ಷವೇ, ಆಕಳಿಗೆ ಕರುವಿಗೆ ಕೂಡಿಸಿದ ವಿನಃ ಅನ್ನ ಕೊಂಬೋವರಲ್ಲ. ದಕ್ಷಿಣ ಗೋಗ್ರಹಣಕ್ಕೆ ನೀನು ಹೋಗು' ಎಂದು ಸುಶರ್ಮಗೆ ಹೇಳಿದ. ಸುಶರ್ಮ ದಕ್ಷಿಣದಿಕ್ಕಿನ ಗೋವುಗಳ ಕೊಂಡು ಹೋಗಥಾನೆಂದು ಪಶುಗಾವ ಬಾಲಕರು ವಾರ್ತೆ ತಂದರು. ಈ ವಾರ್ತೆ ಕೇಳಿ ವಿರಾಟರಾಯ, ತನ್ನ ಪ್ರಧಾನಿ ಕೀಚಕ ಸತ್ತಕಾರಣ ವೈರಿಗಳು ಪ್ರಬಲರಾಗ್ಯಾರೆ. ಇನ್ನೇನು ಉಪಾಯ ರಚಿಸಲಿ ಎಂದು ಚಿಂತಾತುರನಾಗಿ ಕುಳಿತಿರಲಿಕ್ಕೆ, ಕಂಕ ಮಾತನಾಡಿದ. 'ರಾಯ

ಏನುಕಾರಣ ಚಿಂತಿಸತಿದ್ದಿ ! ನಿನ್ನ ಸಂಗಡ ಬಲ್ಲವನ್ನ ಕರಕೊಂಡುಹೋಗು. ನಾನೂ ಬರಥೀನಿ. ವೈರಿಗಳನ್ನು ಗೆದ್ದು ಜಯಶೀಲನಾಗಿ ಬಂದೀಯ.' ಹೀಂಗೆಂದು ಕಂಕ ಮಾತನಾಡಲಿಕ್ಕೆ, ಬಲ್ಲವನ್ನ ಕೂಡಿಕೊಂಡು ವಿರಾಟರಾಯ ಹೋಗಲಿಕ್ಕೆ, ಸುಶರ್ಮ ಯುದ್ಧದಿಂದ ಜಯಿಸಿ, ವಿರಾಟರಾಯನ್ನ ಕೈಸೆರಿ ಕೊಂಡುಹೋಗಥಾನೆ. ಆದನ್ನ ಕಂಡು ಧರ್ಮರಾಯ ಭೀಮಸೇನನಿಗೆ ಹೇಳಿದ. 'ಸುಶರ್ಮ, ರಾಯನ್ನ ಕೈಸೆರಿಕೊಂಡು ಹೋಗಥಾನೆ. ನಾವು ಅಜ್ಞಾತವಾಸ ಸುಖದಲ್ಲಿ ಈತನ ಮನಿಯಲ್ಲಿ ಮಾಡಿದೆವು. ಈ ಸಮಯದಲ್ಲಿ ನಿನ್ನ ಪರಾಕ್ರಮ ತೋರಿಸೆನಲಿಕ್ಕೆ, ಭೀಮಸೇನ ತನ್ನ ಪರಾಕ್ರಮದಿಂದ ವಿರಾಟರಾಯನ್ನ ಕೈಸೆರಿ ಬಿಡಿಸಿ, ಸುಶರ್ಮನ ಕೈಸೆರಿ ಕೊಂಡುಬಂದನು. ಧರ್ಮರಾಯ ಮಾತನಾಡಥಾನೆ. 'ನಮ್ಮ ವಿರಾಟರಾಯ ಪ್ಲೇವದಿಂದ ಬಂದ, ಸುಶರ್ಮನ್ನ ಬಿಡು. ಜೀವದಿಂದ ಬದುಕಿಕ್ಕೊಳ್ಳಲಿ.' ಹೀಂಗೆ ಧರ್ಮರಾಯ ಹೇಳಲಿಕ್ಕೆ, ಸುಶರ್ಮನ್ನ ಬಿಟ್ಟುಕೊಟ್ಟನು.

ಕೀಚಕ ಪ್ರಬಲನಿದ್ದಾನೆಂದು ವಿರಾಟರಾಯನ ದೇಶಕ್ಕೆ ದಾರೂ ಉಪಸರ್ಗ ಮಾಡಿದ್ದಿಲ್ಲ, ಶಕ್ತರಾಗಿದ್ದಿಲ್ಲ. ಆ ಪ್ರಬಲ ಕೀಚಕ ಸತ್ತ ವರ್ತಮಾನ ಕೇಳಿ ದುರ್ಯೋಧನ ಷಡ್ರಥಿಕರಿಂದ ಕೂಡಿ, ಉತ್ತರಗೋಗ್ರಹಣ ಮಾಡಲಿಕ್ಕೆ ಬಂದನು. ದ್ರೋಣಾಚಾರ್ಯ ಬ್ರಾಹ್ಮಣ, ಈ ಕುಕರ್ಮಕ್ಕೆ ಏನುಕಾರಣ ತಾ ಬಂದನೆಂದರೆ, ಜೂಜನಾಡಿದ ಮ್ಯಾಲೆ ದುರ್ಯೋಧನಗೆ ಅಭಯ ಕೊಟ್ಟಿದ್ದನು. ಭೀಮಸೇನನ ಭಯ ಬಹಳವದೆ. ನಮ್ಮಿಂದ ರಕ್ಷಿಸೋ ಯತ್ನ ಮಾಡೇವೆಂದು ಭಾಷೆ ಕೊಟ್ಟಿದ್ದನು. ತನ್ನ ವಚನ ಸತ್ಯ ಮಾಡಬೇಕಾಗಿ, ದ್ರೋಣಾಚಾರ್ಯ ತನ್ನ ಮಗ ಅಶ್ವತ್ಥಾಮನಿಂದ ಸಹಿತನಾಗಿ ಬಂದನು. ಹಾಂಗೇ ಭೀಷ್ಮ, ಕರ್ಣ ಮೊದಲಾದವರು ಬಂದಿಹೋರು. ವಿರಾಟರಾಯ ತಮ್ಮ ಕೂಡ ಯುದ್ಧಕ್ಕೆ ಬಂದರೆ, ಕೈಸೆರಿ ಕೊಂಡುಬರಬೇಕು. ಪಾಂಡವರು ಇದ್ದ ಪಕ್ಷವೇ ನುಮ್ಮಗೆ ಇಹೋರಲ್ಲ, ಯುದ್ಧಕ್ಕೆ ಬಂದಾರು. ಅಜ್ಞಾತವಾಸದಲ್ಲಿ ಪ್ರಕಟರಾದ ಪಕ್ಷವೇ ಪುನಃ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮಾಡ್ಯಾರು. ಈ ಯುಕ್ತಿಯಿಂದ ಬಂದು, ಉತ್ತರದಿಕ್ಕೆನಲ್ಲಿದ್ದ ಗೋವು ಗ್ರಹಣ ಮಾಡಲಿಕ್ಕೆ, ಗೋಪಾಲಕರು ವಾರ್ತೆ ಕೊಂಡು ಪಟ್ಟಣಕ್ಕೆ ಹೋದರು. ವಿರಾಟರಾಯ ದಕ್ಷಿಣದಿಕ್ಕಿಗೆ ಹೋಗಿದ್ದ ಕಾರಣ, ಉತ್ತರಕುಮಾರಗೆ ಸಮಾಚಾರ ಹೇಳಿದರು. ಉತ್ತರಕುಮಾರ ತನ್ನ ತಾಯಿ ಸುದೇಷ್ಣಾ ಸಮೀಪಕ್ಕೆ ಬಂದು 'ನನಗೆ ಸಾರಥಿ ಇಲ್ಲ. ನಾನು ಹಿಂದಕ್ಕೆ ಇಪ್ಪತ್ತೆಂಟು ದಿವಸ ವೈರಿಗಳ ಕೂಡ ಯುದ್ಧ ಮಾಡಿದ್ದೆ ಆ ಯುದ್ಧದಲ್ಲಿ ಸಾರಥಿ ಸತ್ತು-ಹೋದ. ವೈರಿಗಳ ಗೆಲ್ಲೋದಕ್ಕೆ ಸಾರಥಿ ಇಲ್ಲ. ಹ್ಯಾಂಗೆ ಮಾಡಲಿ!' ಎಂದು ಚಿಂತೆಯಿಂದ ಬಳಲುತ ಕುಳಿತಿರಲಾಗಿ, ಸೈರಂಧ್ರೀ ಮಾತನಾಡಿದಳು. 'ಬೃಹನ್ನಳೀ-ಯನ್ನು ಸಾರಥಿ ಮಾಡಿಕೊಂಡು ವೈರಿಗಳ ಮ್ಯಾಲೆ ಹೋಗು' ಎನಲಿಕ್ಕೆ,

'ಬೃಹನ್ನಳೀ ಷಂಡ, ಸಾರಥೀಕರ್ಮ ಹ್ಯಾಂಗಾದೀತು!' ಎನ್ನಲು, ಅರ್ಜುನ ಖಾಂಡವವನ ದಹನಕಾಲದಲ್ಲಿ, ಈ ಬೃಹನ್ನಳೀನ್ನ ಸಾರಥಿ ಮಾಡಿಕೊಂಡು ಹೋಗಿದ್ದನು.' ಹೀಂಗೆಂದು ಸೈರಂಧ್ರೀ ಹೇಳಲಿಕ್ಕೆ, ಬೃಹನ್ನಳೀ ಕರಸಿ ತನುಗೆ ಸಾರಥಿ ಆಗೆಂದು ಕೇಳಲಿಕ್ಕೆ, ತನ್ನಿಂದ ಏನಾದೀತೆಂದು ಹೇಳಲಿಕ್ಕೆ, ಪ್ರಾರ್ಥನ ಮಾಡಿ ಕವಚ ಮುಂತಾದ್ದು ತಂದುಕೊಟ್ಟನು. ತಿರುವ್ವುಮುರುವು ಮಾಡಿ ತೊಟ್ಟಕೊಳ್ಳಲಿಕ್ಕೆ ಹೊಕ್ಕ. ನೀಟಾಗಿ ಕವಚ ತೊಡಿಸಿ, ಬೃಹನ್ನಳೀನ್ನ ಸಾರಥಿ ಮಾಡಿಕೊಂಡು, ಉತ್ತರಕುಮಾರ ಹೋಗಥಾನೆ.

ಕುರುಬಲಮಹಾರ್ಣವ ಕಂಡು ರಥದಿಂದ ಧುಮ್ಮುಕಿ, ಬೆನ್ನುಕೊಟ್ಟು ಓಡಲಿಕ್ಕೆ, ಅರ್ಜುನ ಉತ್ತರಕುಮಾರನ ಬೆನ್ನಟ್ಟಿ ಹಿಡದುತಂದು, ರಥದ ಸ್ತಂಭಕ್ಕೆ ಕಟ್ಟಹಾಕಿದನು. ಬೃಹನ್ನಳೀ ಹೆಣ್ಣು ಕಂಡು, ದ್ರೋಣಾಚಾರ್ಯ ಭೀಷ್ಮನ ಕೂಡ ಮಾತನಾಡಿದ. 'ಎಲೈ ನದೀಜ ರಾವಣನ ವೈರಿಯಾದ ಹನುಮುಂತ ದಾರ ರಥದ ಧ್ವಜದಲ್ಲಿರಥಾನೆ?' ಎಂದು ಕೇಳಲು, ಭೀಷ್ಮ ದ್ರೋಣಾಚಾರ್ಯಗೆ 'ಈತ ಅರ್ಜುನನಿದ್ದಾನೆ. ನಿನಗೆ ಆರಿಕಿರಲಿ.' ಹೀಂಗೆ ಏಕಾಂತದಲ್ಲಿ ಗೋಪ್ಯದಲ್ಲಿ ಹೇಳಿದನು. ಉತ್ತರಕುಮಾರ ಬೃಹನ್ನಳೀ ಕೂಡ ಮಾತನಾಡಿದನು. 'ನನ್ನ ಏನುಕಾರಣ ಹಿಡಕೊಂಡು ಬಂದಿ? ಆಕಳುಗಳು ಹೋದರೆ ಹೋಗಲಿ. ಹೈನ ಇಲ್ಲದಿದ್ದರೆ ಆಷ್ಟೇ ಹೋಯಿತು. ಅಂಬಲೀವಾಗರ ಉಣತ ಇದ್ದೇನು. ಬದುಕಿದ ಪಕ್ಷನೇ ಸಹಸ್ರ ಮಂಗಳಕಾರ್ಯ ಕಂಡೇನು. ನನ್ನ ಬಿಡು' ಎಂದು ಕೇಳಲಾಗಿ, ಆಗ ತಾ ಅರ್ಜುನನೆಂದು ಹೇಳಿದ. 'ಅರ್ಜುನಗೆ ಹತ್ತು ಹೆಸರು ಅವೆ, ನಾಮೋ-ಚ್ಚಾರಣೆ ಮಾಡು' ಎನಲಿಕ್ಕೆ, ಅರ್ಜುನ ತನ್ನ ಹತ್ತೂ ಹೆಸರು ಹೇಳಿದನು. 'ಬಲ್ಲವನೆಂಬಾತ ಭೀಮಸೇನ, ಕಂಕನೆಂಬಾತ ಧರ್ಮರಾಯ, ಸೈರಂಧ್ರೀ ದ್ರೌಪದೀ' ಹೀಂಗೆಂದು, ಎಲ್ಲರ ಹೆಸರು ಹೇಳಲಿಕ್ಕೆ, ಉತ್ತರಕುಮಾರ ಆಶ್ಚರ್ಯ ಉಳ್ಳವನಾಗಿ 'ನಾವು ನಿಮಗೆ ನಿಷ್ಠುರವಚನಗಳಾಡಿದೆವು. ನಮ್ಮ ತಪ್ಪು ಕ್ಷಮಾ ಮಾಡಬೇಕು' ಎಂದು ಬೇಡಿಕೊಂಡನು.

ಉತ್ತರಕುಮಾರ ಈ ಪ್ರಕಾರ ಬೇಡಿಕೊಳ್ಳಲು, 'ಯುದ್ಧಕ್ಕೆ ಗಾಂಡೀವ. ಧನುಸ್ಸು ಬೇಕಲ್ಲ, ನಮ್ಮ ಆಯುಧಗಳೆಲ್ಲ ಶಮೀವೃಕ್ಷದಲ್ಲವೆ. ಕೊಂಡು ಬಾ' ಎನಲಿಕ್ಕೆ, 'ವೃಕ್ಷದಲ್ಲಿ ಹೆಣ ಕಟ್ಟಿದೆ. ನಾನು ರಾಜಪುತ್ರ, ಸ್ಮಶಾನಕ್ಕೆ ಹೋದರೆ ಲಕ್ಷಣ ಕೊರತಿ. ಹ್ಯಾಂಗೆ ಹೋಗಲಿ?' ಎನ್ನಲು, 'ಎಲೋ ಉತ್ತರಕುಮಾರ! ಆ ವೃಕ್ಷದಲ್ಲಿ ಹೆಣ ಕಟ್ಟಿಲ್ಲ. ಗಾಂಡೀವಧನುಸ್ಸು ತಂದದ್ದರಿಂದ ನಿನಗೆ ಜಯವದೆ.' ಹೀಂಗೆ ಹೇಳಲು, ಶಮೀವೃಕ್ಷ ಏರಿ ನೋಡಥಾನೆ. ಅವೆಲ್ಲ ಪಾಂಡವರ ಆಯುಧಗಳೆಂದು ಅರ್ಜುನನ ಮುಖದಿಂದ ಕೇಳಿ, ಗಾಂಡೀವಧನುಸ್ಸು, ದೇವದತ್ತಶಂಖ ತಂದುಕೊಟ್ಟನು. ದೇವದತ್ತಶಂಖ ಊದಲಿಕ್ಕೆ, ಆಕಳ ಹಿಂಡುಗಳು ತಮ್ಮ

ಬಾಲ್ಗಳನ್ನು ನೆಗಹಿ ಹಿಂದಕ್ಕೆ ತಿರಗಿದವು. ಉತ್ತರಕುಮಾರ ಒಬ್ಬನೇ ಬಂದಾನೆಂದು ಒಬ್ಬೊಬ್ಬರೆ, ಬಹಳ ಗರ್ವಿಷ್ಟರಾಗಿ ಯುದ್ಧಕ್ಕೆ ಬಂದರು. ಅರ್ಜುನನ ಬಾಣದಿಂದ ಪೆಟ್ಟು ತಿಂದು ಹಿಂದಕ್ಕೆ ಹೋಗಲಿಕ್ಕೆ, ಷಡ್ರಥಿಕರು ಒಗ್ಗಟ್ಟಾಗಿ ಯುದ್ಧಕ್ಕೆ ಬಂದರು. ಅರ್ಜುನ ಸಮ್ಮೋಹನಾಸ್ತ್ರ ಹಾಕಿದನು. ಅಸ್ತ್ರದಿಂದ ಭೀಷ್ಮನ ಹೊರತಾಗಿ ಸಕಲರೂ ಮೂರ್ಛೆ ಉಳ್ಳವರಾಗಿ ಬಿದ್ದರು. ಉತ್ತರಾದೇವಿ ಬರುವಾಗ ಬೃಹನ್ನಳೇನ್ನ 'ಆ ಕುರುಕುಲದವರು ದಿವ್ಯವಸ್ತ್ರಾಭರಣ ಇಟ್ಟುಕೊಂಡು, ಹೊದ್ದುಕೊಂಡು ಬಂದಿದ್ದಾರು. ನನ್ನ ಗೊಂಬಿಗೆ ದಿವ್ಯವಸ್ತ್ರಾಭರಣಗಳ ಕೊಂಡು ಬಾ' ಎಂದು ಬೇಡಿಕೊಂಡಿದ್ದಳು. ಉತ್ತರಾದೇವಿ ಹೇಳಿದ ಮಾತು ನೆನಪಿಗೆ ಬಂದು, ಉತ್ತರಕುಮಾರನ್ನ ಕಳುಹಿಸಿ, ಅವರು ಉಟ್ಟ ವಸ್ತ್ರಾಭರಣ ತರಿಸಿದನು. ಭೀಷ್ಮ ವಿಜ್ಞಾನಾಸ್ತ್ರ ಪರಶುರಾಮನಿಂದ ಕಲಿತಿದ್ದನು. ದ್ರೋಣ ಕಲಿತಿದ್ದಿಲ್ಲಾದ-ಕಾರಣ, ತನ್ನ ವಸ್ತ್ರಗಳನ್ನೆಲ್ಲ ಕಳಕೊಂಡನು. ಅರ್ಜುನ ಉತ್ತರದಿಕ್ಕಿಗೆ ಹೋಗಿ ಷಡ್ರಥಿಕರ ಗೆದ್ದು ಪಟ್ಟಣಕ್ಕೆ ತಿರುಗಿದನು.

ಗೋಪಾಲಕರು ಜಯವಾರ್ತೆ ಕೊಂಡು ವಿರಾಟರಾಯಗೆ ಹೇಳಿದರು. ಉತ್ತರಕುಮಾರ ಹೋಗಿ ಕುರುಸೇನಿ ಗೆದ್ದನೆಂದು, ವಿರಾಟರಾಯ ಬಹಳ ಹರ್ಷ ವುಳ್ಳವನಾಗಿ, ಬ್ರಾಹ್ಮಣರಿಗೆ ದ್ರವ್ಯದಕ್ಷಿಣಿ ಕೊಟ್ಟು, ದೀಪೋತ್ಸಾಹ ಮಾಡಿದನು. ತರುವಾಯ ಕಂಕನ ಕೂಡ ವಿರಾಟರಾಯ ಮಾತನಾಡಿದನು. 'ನನ್ನ ಮಗ ಉತ್ತರಕುಮಾರ ಎಂಥಾ ಪರಾಕ್ರಮ ಮಾಡಿದ! ಕುರುಕುಲದವರನ್ನ ಗೆದ್ದ!' ಹೀಂಗೆಂದು ಮಾತನಾಡಲಿಕ್ಕೆ, 'ಬೃಹನ್ನಳೀ ಹೋದ ಕಾರಣ ನಿನ್ನ ಮಗ ಜಯಶೀಲನ್ನಾದ' ಎಂದು ಕಂಕ ಮಾತನಾಡಲು, ಷಂಡನ ಪರಾಕ್ರಮ ಹೇಳಥಾನೆ, ತನ್ನ ಮಗನ್ನ ಹೊಗಳೋದಿಲ್ಲೆಂದು, ಪಾಶಿ ಆಡತಿದ್ದ, ಅದೇ ಪಾಶೀಲಿ ಹೊಡದನು. ಧರ್ಮರಾಯನ ರಕ್ತ ಭೂಮೀಗ್ಯಾಲೆ ಬೀಳಬಾರದೆಂದು, ಸೈರಂಧ್ರೀ ಒಂದು ಪಾತ್ರಿಯೊಳಗೆ ನಾಸಿಕದಿಂದ ಬೀಳತಿದ್ದ ರಕ್ತ ಹಿಡಿದಳು. ಆ ವಾರ್ತೆ ಭೀಮಾರ್ಜುನರು ಕೇಳಿ, ಕೋಪಾವಿಷ್ಟರಾಗಿ ರಾಯನ ಅರಮನಿಗೆ ಹೋಗಲಿಕ್ಕೆ, ತನ್ನ ತಂದೀ ಕ್ಷೇಮಗೋಸುಗ ಉತ್ತರಕುಮಾರ ಅರ್ಜುನನ್ನ ಬೇಡಿಕೊಂಡಾನೆ. ಭೀಮಸೇನ ಹೊಡಿಯಲಿಕ್ಕೆ ಉದ್ಯುಕ್ತನಾಗಲಿಕ್ಕೆ, ಧರ್ಮರಾಯ ಬ್ಯಾಡವೆಂದು ನಿವಾರಿಸಿದನು. 'ನಮ್ಮ ಸ್ವರೂಪ ಅರಿಯದೆ ನಮ್ಮ ದ್ರೋಹ ಮಾಡ್ಯಾನೆ. ವಿರಾಟರಾಯನ ವಿನಾಶ ಮಾಡುವುದು ಧರ್ಮವಲ್ಲ, ವಿಹಿತವಲ್ಲ' ಎಂದು ಹೇಳಿ, ತಮ್ಮಂದರು ರಾಯನ ಕೊಲ್ಲೋದು ನಿವಾರಿಸಿದನು. ಅಂದಿಗೆ ಹದಿಮೂರು ವರುಷ ಮುಗಿಯಿತು.

ಮರುದಿವಸ ವಿಜಯದಶಮಿ, ಶಮೀವೃಕ್ಷದಲ್ಲಿ ಪಾಂಡವರಿಗೆ ವಿಜಯಾಂಕುರ ವಾಯಿತು. ಧರ್ಮರಾಯ ಸ್ನಾನ ಸಂಧ್ಯಾವಂದನ ಮಾಡಿ, ನಿತ್ಯಕರ್ಮಗಳ

ಮುಗಿಸಿ, ವಿರಾಟರಾಯನ ಸಿಂಹಾಸನದಲ್ಲಿ ಕುಳಿತನು. ನಾಲ್ವರು ಅತನ ತಮ್ಮಂದರು, ಧರ್ಮರಾಯನ ಅಜ್ಞಾಧಾರಕರಾಗಿ ಸೇವಿ ಮಾಡತ ನಿಂತಾರೆ. ಇದೆಲ್ಲ ವಿರಾಟರಾಯ ಕಂಡು 'ನನಗೆ ಪಾಂಡವನೆಂದು ಇಷ್ಟ ದಿವಸ ಅರಿಕಿನ್ದಿಲ್ಲ. ಇವರ ಚರಿತ್ರ ಕೇದಿದ್ದರೆ ಹೇಳು ಎಂದು ಮಗನ್ನ ಕೇಳಲು, ಉತ್ತರಕುಮಾರ, ಗೋಗ್ರಹಣದಲ್ಲಿ ಪಡ್ರಥಿಕರನ್ನ ಅರ್ಜುನ ಗೆದ್ದದ್ದು, ಅರ್ಜುನ ಏನೇನು ಪರಾಕ್ರಮ ಮಾಡಿದ ಅದನ್ನೆಲ್ಲ ಹೇಳಿದನು. ಉತ್ತರನ ಮುಖದಿಂದ ಅರ್ಜುನನ ಪರಾಕ್ರಮ ಕೇಳಿ, ಬಹಳ ಭಯವುಳ್ಳವನಾಗಿ ಧರ್ಮರಾಯನ ದ್ರೋಹ ಮಾಡಿದೆನಲ್ಲ ಎಂದು ಬರತಲೇ ಬಂದು, ನಮಸ್ಕಾರ ಸಾಷ್ಟಾಂಗದಿಂದ ಹಾಕಿ, 'ನನ್ನ ಸರ್ವಾಪರಾಧ ಕ್ಷಮಿಸಬೇಕು' ಎಂದು ವಿನ್ನಹ ಮಾಡಿ, 'ನೀವು ನನ್ನ ಕ್ಷಮಾಪಣೆ ನಿಮಿತ್ತ, ನನ್ನ ಮಗಳು ಉತ್ತರಾದೇವಿ ಕನ್ನಿಕೆ ಇದ್ದಾಳೆ, ಅರ್ಜುನ ನನ್ನ ಮಗನ್ನ ಬದುಕಿಸಿತಂದಾನೆ, ಈತನಿಗೋಸ್ಕರ ಉತ್ತರಾದೇವೀನ ಕೊಟ್ಟೀನು' ಎನಲಿಕ್ಕೆ, ಅರ್ಜುನ ಮಾತನಾಡಿದ. "ಉತ್ತರಾದೇವೀನ್ನ ನನ್ನ ಮಗಳ ಸಮಾನ ಮಾಡಿ ಸಾಕೀನಿ. ನಾನು ಮದುವಿ ಮಾಡಿಕೊಂಡ ಪಕ್ಷವೇ, 'ಕನ್ಯಾವಸ್ಥೀಲಿ ಸಂಭೋಗ ಮಾಡಿದ್ದಾನು. ಅದಕ್ಕೆ ಮದುವಿ ಮಾಡಿಕೊಂಡ' ಎಂದು ಲೋಕಾಪವಾದ ಬರತದೆ. ಅದಕಾರಣ ನನ್ನ ಮಗ ಅಭಿಮನ್ಯು, ನನ್ನ ಸಮಾನ ವೀರ, ಪರಾಕ್ರಮಿ, ಚಲುವನಿದ್ದಾನೆ, ವಾಸುದೇವನ ಸೋದರಳಿಯನಾಗಬೇಕು. ಅಭಿಮನ್ಯುಗೋಸ್ಕರ ನಿನ್ನ ಮಗಳನ್ನ ಮದುವಿ ಮಾಡಿಕೊಡು" ಎನಲಿಕ್ಕೆ, ಬಹಳ ಒಳ್ಳೇದೆಂದು ರಾಯ ಅಂಗೀಕಾರ ಮಾಡಿದ.

ಅಜ್ಞಾತವಾಸದಲ್ಲಿ ಭೀಮಸೇನ ಶ್ರೀಕೃಷ್ಣಗೆ ಪ್ರೀತಿಕರವಾದಂಥ ಅದ್ಭುತಕರ್ಮ, ಜೀಮೂತನೆಂಬ ಮಲ್ಲನ್ನ, ಮಹಾಪಾಪಿಯಾದಂಥ ಕೀಚಕನ್ನ ಅತನ ತಮ್ಮಂದರಿಂದ ಸಹವಾಗಿ ಕೊಂದು, ಶ್ರೀಕೃಷ್ಣಾರ್ಪಣ ಮಾಡಿದನು. ವಿಷ್ಣುವಿಗೆ ಪ್ರೀತಿಕರವಾದಂಥ ಅಕಳುಗಳನ್ನ ಅರ್ಜುನ ಬಿಡಿಸಿತಂದ. ಪಾಂಡವರು ವಿಜಯಾಂಕುರ ಶ್ರೀಕೃಷ್ಣಗೆ ಹೇಳಿಕಳುಹಿದರು. 'ಒಂದು ವರುಷ ಅಜ್ಞಾತವಾಸ ಮುಗಿಯಿತು. ವಿರಾಟರಾಯನ ಮನೀಲಿ ಬೀಗತನ ಮಾಡಬೇಕಾಗೇದೆ. ಕಾರಣ ಅಭಿಮನ್ಯುನ ಕೂಡಿಕೊಂಡು, ಬಲರಾಮನಿಂದ ಯುಕ್ತನಾಗಿ ಶೀಘ್ರ ಬರಬೇಕು' ಎಂದು ದೂತರನ್ನ ಶ್ರೀಕೃಷ್ಣನ ಸಮೀಪಕ್ಕೆ ಕಳುಹಿದರು. ಭಕ್ತವತ್ಸಲ, ಧರ್ಮರಾಯನ ವಿನ್ನಹ ತಾಳಿ, ಅಭಿಮನ್ಯುನ ಕರಕೊಂಡು, ಯಾದವರಿಂದ ಸಹಿತನಾಗಿ ಬಂದನು. ಮಹಾ ಅರ್ಥಿಯಿಂದ ಉತ್ಸಾಹದಿಂದ ಅಭಿಮನ್ಯುನ ಮದುವಿ ಆಯಿತು. ನಿಬ್ಬಣಕ್ಕೆ ಪಾಂಚಾಲರಾಯ ಬಂದಿದ್ದ. ಮಿಗಿಲಾದ ರಾಯರು ಪುತ್ರಮಿತ್ರ ಬಾಂಧವರಿಂದ ಸಹಿತರಾಗಿ ಬಂದಿದ್ದರು. ವಿರಾಟರಾಯ ತನ್ನ ಅಳಿಯಗೆ ಚತುರಂಗ ಸೇನಿ, ದಾಸದಾಸೇರು, ದಿವ್ಯ ರತ್ನಾಭರಣಗಳು ವಸ್ತ್ರಗಳು ಕೊಟ್ಟನು.

ಹಾಂಗೇ ತನ್ನ ಮಗಳಿಗೋಸ್ಕರ ಯಥೇಷ್ಟ ಒಡವಿಗಳು ಕೊಟ್ಟನು. ಶ್ರೀಕೃಷ್ಣ ಏನೇನು ಉಡುಗೊರಿ ತಂದಿದ್ದ ಆದಷ್ಟೂ ಸೂತ ಮಾಗಧ ವಂದಿಗಳಿಗೆ ವಿಭಾಗ ಮಾಡಿ ಕೊಟ್ಟನು. ಮಹಾ ಸಂಭ್ರಮದಿಂದ ಸಾಲ್ಕು ದಿವಸ ವಿವಾಹವಾಯಿತು.

ಷಡ್ರಥಿಕರು ಅರ್ಜುನನ ಕೈಯಿಂದ ಪೆಟ್ಟು ತಿಂದು ಹಸ್ತಿನಾವತಿಗೆ ಹೋಗಿ, ತಮ್ಮನ್ನು ಸೋಲಿಸಿದವರು ದಾರೆಂದು ವಿಚಾರಕ್ಕೆ ಬಿದ್ದರು. ಬಹಳಷ್ಟಕ್ಕೆ ಅರ್ಜುನನಾದಾನೆಂದು ತಿಳದು ಪಾಂಡವರಿಗೆ ದುರ್ಯೋಧನ ಹೇಳಿಕಳುಹಿಸಿಕೊಟ್ಟನು. 'ನೀವು ಆರುಮಂದೀ ನಡುವೆ ಅರ್ಜುನನ್ನ ಕಂಡೀವಿ. ಆದಕ್ಕಾಗಿ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಪುನಃ ಮಾಡಬೇಕು' ಎಂದು ಹೇಳಿಕಳುಹಲಿಕ್ಕಾಗಿ ದುರ್ಯೋಧನ ಉದ್ಯುಕ್ತನಾಗಿರಲಿಕ್ಕೆ, ಭೀಷ್ಮ ದ್ರೋಣಾದಿಗಳು ದುರ್ಯೋಧನಗೆ ಅಂದರು. 'ಹೀಂಗೆ ಅಗ್ಗಳಿಕೆ ಮಾಡಬ್ಯಾಡ. ಅವರು ಪೂರ್ಣವಾಗಿ ಅಜ್ಞಾತವಾಸವನ್ನು ಮುಗಿಸಿ ಪ್ರಕಟರಾಗ್ಯಾರೆ.' ಈ ಪ್ರಕಾರ ಭೀಷ್ಮ ದ್ರೋಣಾದಿಗಳು ಅಂದರೂ, ಅವರ ವಚನ ಕೇಳದೆ ಪಾಂಡವರಿಗೆ ಹೇಳಿಕಳುಹಿದ. ಅದಕ್ಕೆ ಪಾಂಡವರು ಹೇಳಿಕಳುಹಿದರು. 'ನಾವು ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮುಗಿಸಿ ಬಂದಿದ್ದೀವಿ. ನಮ್ಮ ನಿಮ್ಮಲ್ಲಿ ಕತ್ತಾಳ ಬಂದಿಲ್ಲ. ನಮಗೂ ನಿಮಗೂ ಮಧ್ಯ ವೇದವೇತ್ತರು ಬ್ರಹ್ಮರಿದ್ದಾರೆ.' ಅವರು ಹೇಳಿದರು, 'ದುರ್ಯೋಧನ ಸಂಕ್ರಮಣಕ್ಕೆ ಲೆಕ್ಕ ಹೇಳಿ ಕಳುಹಿದ್ದಾನೆ. ಈ ಲೆಕ್ಕ ಐ ಷಿಗಳಿಗೆ ಸಮ್ಮತವಲ್ಲ, ಅಸಂಪ್ರದಾಯ. ಪಾಂಡವರು ಚಾಂದ್ರಮಾನಕ್ಕೆ ಲೆಕ್ಕ ಹಿಡದು, ಒಂದು ವರುಷ ಅಜ್ಞಾತವಾಸ ಮುಗಿಸಿಹೋರು.' ದುರ್ಯೋಧನನ ಲೆಕ್ಕ ಹೆಚ್ಚು ಕೊರತಿ ಬರತಿಹೋದು. ಆದಕಾರಣ ರಾಜ್ಯ ಕೊಡೋ ಹಾಂಗೆ ಇಲ್ಲ ಎಂದು, ದುರ್ಯೋಧನ ಹಟ ಮಾಡಿಕೊಂಡು, ಉಪಪ್ಲಾವ್ಯಕ್ಕೆ ದೂತರನ್ನ ಕಳುಹತಿಹ. 'ಇನ್ನು ಮತ್ತೆ ಹನ್ನೆರಡು ವರುಷ ವನವಾಸ, ಒಂದು ವರುಷ ಅಜ್ಞಾತವಾಸ ಮಾಡಿ ಬನ್ನಿ, ರಾಜ್ಯ ಕೊಟ್ಟೀನು' ಎಂದು ದೂತರ ವ್ಯಾಲೆ ದೂತರ ಕಳುಹತಿಹ. ಪಾಂಡವರು ಬ್ರಾಹ್ಮಣರ ಕೈಯ ಹೇಳಿಕಳುಹತಿಹೋರು. ನಾವು ಮೇರಿ ಮೀರದೆ ಪೂರ್ಣವಾಗಿ ಅಜ್ಞಾತವಾಸ ಮಾಡಿಬಂದೀವಿ. ರಾಜ್ಯ ಕೊಡು ಎಂದು ಹೇಳಿಕಳುಹತಿಹೋರು.

ಧರ್ಮರಾಯಗೆ, ಈ ಪ್ರಕಾರ ರಾಜ್ಯ ಸಾಧಿಸಿ ಬರಬೇಕಾಗಿ, ಪಾಂಚಾಲರಾಯ ಮಿಗಿಲಾದ ರಾಯರು ನಿಬ್ಬಣಕ್ಕೆ ಬಂದವರು, ಕೆಲವು ದಿವಸ ಪಾಂಡವರಲ್ಲಿ ವಾಸಮಾಡಿಕೊಂಡಿದ್ದರು. ಉಪಪ್ಲಾವ್ಯಕ್ಕೆ ಸಮಸ್ತರೂ ವಸ್ತ್ರಗೃಹಗಳ ಕೊಟ್ಟು, ಧರ್ಮರಾಯನ ರಾಜ್ಯ ದಾರೂ ದಕ್ಕಿಸಿಕೊಳ್ಳಲಾರರು, ತನ್ನಿಂದ ತಾನೇ ಬಂದೀತೆಂದು, ಸಮಸ್ತರೂ ಸೇನಾನಿವೇಶ ಸ್ಥಳದಲ್ಲಿ ಇಳಕೊಂಡಿಹೋರು. ಧರ್ಮರಾಯಗೆ ಶ್ರೀಕೃಷ್ಣ ಚಿಂತಿ ಮಾಡಬ್ಯಾಡವೆಂದು ಹೇಳತಿಹ. 'ಸ್ವಲ್ಪ ದಿನದೊಳಗೇ

ನಿನಗೆ ರಾಜ್ಯ, ಸಾಮ್ರಾಜ್ಯವೈಭವಗಳು ಬಾಹೋ ಹಾಂಗೆ ಮಾಡಥೀನಿ' ಎಂದು ಪುನಃಪುನಃ ಸ್ವಾಮಿ, ಧರ್ಮರಾಯನಿಗೆ ಅಭಯ ಕೊಡತಿಹ. ಸ್ವಾಮಿಯಲ್ಲಿ ಭಕ್ತಿಯುಳ್ಳ ಹರಿಭಕ್ತರಿಗೆ, ಸಕಲ ಪುರುಷಾರ್ಥಗಳೂ ತಮ್ಮಿಂದ ತಾವೇ ಬರಥಾವೆ. ಪಾಂಡವರಿಗೆ ವಿಜಯಾಂಕುರವಾಯಿತು. ಹರಿದಾಸರಿಗೆ ಬಂದಂಥ ಆಪತ್ತು ಪರಿಹರಿಸಿ, ಇಷ್ಟಪ್ರಾಪ್ತಿ, ಅನಿಷ್ಟನಿವೃತ್ತಿ ಆಗತದೆಂಬಲ್ಲಿಗೆ, ಶ್ರೀಮದಾಚಾರ್ಯರು ಹೇಳಿದ, ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವನ್ನು ಪ್ರಾಕೃತದಿಂದ ವಿವರಿಸುವ 'ಶ್ರೀಕೃಷ್ಣಚರಿತೇ ಅಜ್ಞಾತವಾಸ ಸಮಾಪ್ತಿಃ' ಎಂಬ ಇಪ್ಪತ್ತಮೂರನೇ ಅಧ್ಯಾಯ ಸಂಪೂರ್ಣವು.

ಶ್ರೀಮದ್ವೇಶಾರ್ಪಣಮಸ್ತು

ಈ ಗ್ರಂಥದಲ್ಲಿ ಪ್ರತಿಪಾದಿತ ಹಾಗೂ ನಿರ್ಣೀತ ವಿಷಯಗಳ ಪುಟಸಂಖ್ಯಾಸೂಚಿ (ಪ್ರಥಮ ಸಂಪುಟದಿಂದ ಮುಂದುವರೆದುದು)

ವಿಷಯ	ಪುಟಸಂಖ್ಯೆ
ಪ್ರಹ್ಲಾದ ಬಾಹ್ಲೀಕರಾಯನಾಗಿ ಹುಟ್ಟಿದಾಗ ಭೂಮಿ ಎರಡು ಹೋಳಾಗಲು ಕಾರಣ	೨
ಭೂರಿ, ಭೂರಿಶ್ರವ, ಶಲ ಈ ಮೂರು ಮುಂದಿಯಲ್ಲಿ ರುದ್ರನ ಆವೇಶವಿದ್ದರೂ, ಭೂರಿಶ್ರವನಿಗೆ ಮಾತ್ರ ಅತಿಬಲತ್ವ ಹೇಳಲು ಕಾರಣ	೩
ವರುಣನು ಶಂತನುಚಕ್ರವರ್ತಿಯಾಗಿ ಅವತರಿಸಲು ಮತ್ತು ಶಂತನು ಎಂಬ ನಾನು ಪ್ರಾಪ್ತಿಯಾಗಲು ಕಾರಣ	೩-೪
ಅಷ್ಟವಸುಗಳು ವಸಿಷ್ಠನ ಆಕಳುಗಳನ್ನು ಕದ್ದುಕೊಂಡುಹೋದಾಗ ಅವರಿಗೆ ಶಾಪ ಕೊಟ್ಟವನು ವಸಿಷ್ಠನಲ್ಲ—ಈ ಶಾಪದ ವಿವರಣೆ	೪ ೫
ಕನ್ಯಾರೂಪಳಾದ ಭಾಗೀರಥೀ ಪ್ರತೀಪರಾಯನ ಬಲತೊಡೆಯ ಮೇಲೆ ಕುಳಿತುದಕ್ಕೆ ನಿಮಿತ್ತ	೬
ಶಂತನುಚಕ್ರವರ್ತಿಯ ಪತ್ನಿಯಾದ ಭಾಗೀರಥೀಯು ತನಗೆ ಹುಟ್ಟಿದ ಎಂಟು ಮಂದಿ ಮಕ್ಕಳಲ್ಲಿ ಕನಿಷ್ಠಮಗನು ದೀರ್ಘಾಯುವಾಗಲೀ ಎಂದು ವರ ಪಡೆದಿದ್ದರೂ ಆ ಮಗನನ್ನು ಸಂಹರಿಸಲು ಏಕೆ ಉದ್ಯುಕ್ತಳಾದಳು	೭
ಈಗಾಗಲೇ ಏಳು ಶಿಶುಗಳನ್ನು ಸಂಹರಿಸಿ ಈಗ ಎಂಟನೇ ಶಿಶುವನ್ನು ಕೊಲ್ಲಲು ಉದ್ಯುಕ್ತಳಾದ ಭಾಗೀರಥೀಯು ರಾಕ್ಷಸೀ ಎಂದು ಅವಳ ಈ ಕ್ರೂರ ಕರ್ಮದಿಂದ ಸಿದ್ಧವಾದರೂ, ಶಂತನು ನೀನ್ಯಾರೆಂದು ಆಕೆಯನ್ನು ಕೇಳಲು ಕಾರಣ	೮
ದೇವತೆಗಳು ದೇವತಾದೇಹದಿಂದ ಮನುಷ್ಯರೊಡನೆ ವಾಸಮಾಡುವಾಗ ಅವರು ಪಾಲಿಸಬೇಕಾದ ಧರ್ಮಗಳು	೮-೯
ಅಂಬಿಗರ ಮನೆಯಲ್ಲಿ ಬೆಳೆದಂಥ ಕಾಳೀದೇವಿಯನ್ನು ಕ್ಷತ್ರಿಯನಾದ ಶಂತನು-ಚಕ್ರವರ್ತಿಯು ಸ್ವೀಕರಿಸಿ ಲಗ್ನ ಮಾಡಿಕೊಂಡಿದ್ದು ಸಮರ್ಪಕವೇ	೧೫
ಸ್ವೇಚ್ಛಾಮರಣದ ಬಗ್ಗೆ ವಿವರಣೆ	೧೬
ಸರ್ವಶಕ್ತನಾದ ಪರಶುರಾಮದೇವರು ಭೀಷ್ಮನಿಂದ ಸೋಲಲು ಕಾರಣ	೧೮
ಅಂಬಾ ಎಂಬಾಕೆಯನ್ನು ಭೀಷ್ಮನು ವರಿಸುವಂತೆ ಮಾಡುತ್ತೇನೆಂದು ಪರಶುರಾಮ-ದೇವರು ಆಕೆಗೆ ಆಶ್ವಾಸನವಿತ್ತಿದ್ದರೂ ಭೀಷ್ಮನಿಂದ ಸೋಲಲ್ಪಡಲು, ದೇವರು ಕೊಟ್ಟ ವಚನಕ್ಕೆ ಭ್ರಷ್ಟತ್ವ ಬರಲಿಲ್ಲವೇ	೧೮-೧೯
ಸ್ವಾಭಾವಿಕ ಸ್ತ್ರೀ-ಪುರುಷ ದೇಹಗಳಿಗೆ ಪುರುಷತ್ವ-ಸ್ತ್ರೀತ ಪ್ರಾಪ್ತಿ ವಿಷಯ	೨೧
ಶಿಖಂಡಿನಿ ಮತ್ತು ತುಂಬರುಗಂಧರ್ವ ಇವರುಗಳ ಸ್ತ್ರೀತ್ವ-ಪುಂಸತ್ವ ವಿನಿಮಯ ವಿಚಾರ	೨೧-೨೨
ಸರ್ವೋತ್ತಮನಾದ ಶ್ರೀಹರಿ ವೇದವ್ಯಾಸರೂಪದಿಂದ ಪರಸ್ತ್ರೀಯರಾದ ಅಂಬಿಕಾ, ಅಂಬಾಲಿಕೆಯರ ಅಂಗಸಂಗ ಮಾಡಿದ್ದಕ್ಕೆ ನಿರ್ಣಯ	೨೪

ವಿಷಯ	ಪುಟಸಂಖ್ಯೆ
ಯವುಧವು ರಾಯನು ಶೂದ್ರಸ್ತ್ರೀಯಲ್ಲಿ ವಿದುರನಾಗಿ ಹುಟ್ಟಲು ಮತ್ತು ಮಾಂಡವ್ಯಋಷಿಯು ತಪಸ್ಸು ಹ್ರಾಸವಾಗಲು ನಿಮಿತ್ತ	೨೭ ೨೮
ಶೂದ್ರತ್ವದಿಂದ ಅನಧಿಕಾರಿಯಾಗದರೂ ವಿದುರ ವೇದಜ್ಞಾನಿಯಾದದು	೨೮
ಸಂಜಯನ ಉತ್ಪತ್ತಿ ಮತ್ತು ಸೂತನಾದರೂ ಸರ್ವವಿದ್ಯದಲ್ಲಿ ಜ್ಞಾನಿಯಾದದಕ್ಕೆ ನಿಮಿತ್ತಗಳು	೨೯
ಶಕುನಿಯು ಜನ್ಮವಾದುದಕ್ಕೆ ನಿಮಿತ್ತ ...	೩೯
ಸೂರ್ಯಾಂಶನಾಗಿ ಕುಂತಿಯ ಮಗನೇ ಆಗಿ ಕರ್ಣನು ಪಾಂಡವರ ದ್ವೇಷ ಮಾಡಿದ್ದಕ್ಕೆ ಮತ್ತು ಕರ್ಣನು ವಿಶೇಷವಾದ ನಾರಾಯಣ ಸನ್ನಿಧಾನಯುಕ್ತನಾಗಿದ್ದಕ್ಕೆ ನಿರ್ಣಯ	೪೧
ದೇವತಾಸ್ತ್ರೀಯರಿಗೆ ಪರಪುರುಷರ ಸಂಪರ್ಕವಾಗಲು ನಿಮಿತ್ತ ಹಾಗೂ ಉದಾಹರಣೆ	೪೫
ಗಾಂಧಾರಿಯು ಗರ್ಭಪತನವಾಗಿರಲು ಶ್ರೀ ವೇದವ್ಯಾಸದೇವರು ಅದನ್ನು ೀಕ್ಷಿಸಿ ಪಾಪಿ ದುರ್ಯೋಧನಾದಿಗಳ ಅವತಾರಕ್ಕೆ ಕಾರಣನಾಗಲು ನಿಮಿತ್ತನೇನು	೪೫
ದೇವಕೀದೇವಿಯಲ್ಲಿ ಪ್ರಾದುರ್ಭೂತನಾದ ಶ್ರೀಕೃಷ್ಣನ ವರ್ಣನೆ	೪೭
ಕಂಸನ ಕೈಯಿಂದ ಹಾರಿಹೋದ ದುರ್ಗಾದೇವಿ ದೇವಕೀ-ವಸುದೇವರ ಬಳಿಯಲ್ಲೇ ಇರುತ್ತಿದ್ದಳು	೪೮
ಕಂಸನಿಗೆ ದೇವತಾ ಆಶರೀರವಾಣಿಯಲ್ಲಿ ಅವಿಶ್ವಾಸ ಮತ್ತು ಅವನು ದೇವಕೀ-ವಸುದೇವರ ಕ್ಷಮೆ ಕೋರಿದ್ದು	೪೮
ತನಗೆ ಸ್ತ್ರೀಶಿಶುವೇ ಹುಟ್ಟಿದ್ದರೂ ನಂದಗೋಪ-ಯಶೋದೆಯರು ಅದು ಪುರುಷಶಿಶುವೆಂದು ಏಕೆ ತಿಳಿದರು	೪೮.೪೯
ಪೂತನಿಸ್ವರೂಪ ಮತ್ತು ಆವೇಶವೃತ್ತಾಂತ	೪೯. ೫೦
ಬೃಹಸ್ಪತಿಯು ಅಗಲೇ ಒಂದಂಶದಿಂದ ದ್ರೋಣನಾಗಿ ಹುಟ್ಟಿದ್ದರೂ ಮತ್ತೂ ಒಂದಂಶದಿಂದ ಉದ್ಧವನಾಗಿ ಅವತಾರ ಮಾಡಲು ನಿಮಿತ್ತ	೫೧
ರುದ್ರನು ದ್ರೋಣಕುವರನಾಗಿ ಜನಿಸಿದಾಗ ಅವನಿಗೆ 'ಅಶ್ವತ್ಥಾಮ'ನೆಂದು ನಾಮ ಬರಲು ಕಾರಣ	೫೧-೫೨
ಲಕ್ಷ್ಮಣನಾಗಿ ಅವತಾರ ಮಾಡಿದ್ದ ಶೇಷನೇ ಮತ್ತೆ ಬಲರಾಮನಾಗಿ ಅವತಾರ ಮಾಡಲು ನಿಮಿತ್ತ	೫೨
ಶೇಷನು ಬಲರಾಮನಾಗಿ ಹುಟ್ಟುವ ಮೊದಲು ದೇವಕೀಗರ್ಭದಲ್ಲಿ ಮೂರು ತಿಂಗಳು, ರೇವತಿ ಗರ್ಭದಲ್ಲಿ ಏಳು ತಿಂಗಳು ಇರಲು ನಿಮಿತ್ತ	೫೨
ಸರ್ವತ್ರ ವ್ಯಾಪ್ತನಾದ ವಾಯುದೇವರು ಪಾಂಡವರಲ್ಲಿದ್ದ ಬಗೆ	೪
ಶ್ರೀಕೃಷ್ಣ ಮತ್ತು ಪಾಂಡವರೆಲ್ಲರೂ ಹಿಂದಿನ ಮನ್ವಂತರಗಳಲ್ಲಿ ಇಂದ್ರಪದವಿ ಆಳಿದ್ದಾರೆ	೫೪-೫೫
ಶ್ರೀಕೃಷ್ಣನು ಕಳ್ಳತನದಿಂದ ಬೆಣ್ಣೆ ತಿಂದಿದ್ದು ಅಧರ್ಮವಲ್ಲ	೫೫
ಕುಬೇರನ ಮಕ್ಕಳಾದ ನಳಕೂಬರ-ಮಣಿಗ್ರೀವ ಇವರ ವೃತ್ತಾಂತ	೫೫
ಕಾಳೀಯಸರ್ಪನು ಯಮುನಾ ಮಡುವಿನಲ್ಲಿ ವಾಸಮಾಡಲು ಮತ್ತು ಅಲ್ಲಿಗೆ ಗರುಡನು ಬರದಿರಲು ಕಾರಣ	೫೬

ವಿಷಯ		ಪುಟಸಂಖ್ಯೆ
ಕಾಳೀಯುಮಡುವಿನಲ್ಲಿ ಕಾಳಿಂಗನ ವಿಷದಿಂದ ಯಾವ ಸಸ್ಯಗಳೂ ಬೆಳೆಯುದೆ ಕಡಹಾಲದ ವೃಕ್ಷ ಮಾತ್ರ ಬೆಳೆದಿರಲು ಹೇಗೆ ಸಾಧ್ಯ		೫೯-೬೦
ನಂದಗೋಪ ಮೊದಲಾದ ಗೋಪಾಲಕರು ಇಂದ್ರನ್ನ ಕುರಿತು ಮಾಡುತ್ತಿದ್ದ ಯಜ್ಞವನ್ನು ಶ್ರೀಕೃಷ್ಣನು ಏಕೆ ಭಂಗ ಮಾಡಿದನು		೬೨-೬೪
ಪರಸ್ತ್ರೀಯರಾದ ಗೋಪಿಕಾಸ್ತ್ರೀಯರ ಅಂಗಸಂಗ ಮಾಡಿದ್ದು ಶ್ರೀಕೃಷ್ಣನಿಗೆ ಅಧರ್ಮವಲ್ಲ		೬೫
ಹರಿಭಕ್ತನಾದ ನಾರದನು ಶ್ರೀಕೃಷ್ಣನನ್ನು ಸಂಹರಿಸುವಂತೆ ಕಂಸನನ್ನು ಏಕೆ ಪ್ರಚೋದಿಸಿದನು		೬೬
ಜೀವೇಶ್ವರೈಕ್ಯ ಹೇಳುವವರಿಗೆ ಪ್ರಾಪ್ತವಾಗುವ ದುಃಖ	....	೭೧
ಯಾರಿಗೆ ಮೋಕ್ಷದಲ್ಲಿ ಆನಂದವಾಗುತ್ತದೆ	....	೭೨
ಶ್ರೀಕೃಷ್ಣನು ಸರ್ವಜ್ಞನಾದರೂ ಸಾಂದೀಪಿನಿಯಲ್ಲಿ ವಿದ್ಯೆ ಕಲಿತನು	....	೭೩
ಶ್ರೀಕೃಷ್ಣನು ಪಾಂಚಜನ್ಯ ಶಂಖ ಸಂಪಾದಿಸಿದ್ದು	....	೭೪
ಜರಾಸಂಧ ಶ್ರೀಕೃಷ್ಣನನ್ನು ಸಂಹರಿಸಲು ಮಾಡಿದ ಪ್ರಯತ್ನ ವ್ಯರ್ಥವಾಗಲು ಕಾರಣ		೭೪-೭೫
ನಾರದನು ಸುಳ್ಳು ಹೇಳಿದ್ದರಿಂದ ಶ್ರೀಕೃಷ್ಣನಿಗೆ ಕ್ಷೇಮವಾಯಿತೆ	....	೭೫
ಶ್ರೀಕೃಷ್ಣನು ಜರಾಸಂಧನನ್ನು ಯುದ್ಧದಲ್ಲಿ ಸಂಹರಿಸದೇ ಬಿಡಲು ಕಾರಣ	....	೭
ದೇವೇಂದ್ರನಿಗೆ ಪಾಂಡುಚಕ್ರವರ್ತಿಯಿಂದ ಚಿತ್ತಕ್ಷೋಭವಾಗಲು ಕಾರಣ	....	೭೮
ಪಾಂಡುಚಕ್ರವರ್ತಿ ಮರಣದ ನಂತರ ಕುಂತೀದೇವಿ ಸಹಗಮನ ಮಾಡದೆ ಇರಲು ನಿಮಿತ್ತ		೭೯
ಪಾಂಡುಚಕ್ರವರ್ತಿ ಸ್ತ್ರೀಭೋಗಸಮಯದಲ್ಲಿ ಮೃತನಾದರೂ ಅತನಿಗೆ ದಿವ್ಯಗತಿ ಪ್ರಾಪ್ತವಾಗಲು ಕಾರಣ		೮೯
ಪಾಂಡವರ ಜನ್ಮವೃತ್ತಾಂತದ ಬಗ್ಗೆ ಆಶರೀರವಾಣಿ	....	೮೦-೮೧
ಬಾಲ್ಯದಲ್ಲಿ ಆಟಗಳಾಡುವಾಗ ಭೀಮುಸೇನ ಕೌರವರನ್ನು ಏಕೆ ದುಃಖಪಡಿಸಿದನು		೮೧
ಕಾಲಕೂಟವಿಷ ಶಕುನಿಗೆ ಹೇಗೆ ಪ್ರಾಪ್ತವಾಗಿತ್ತು	....	೮೨
ಭೀಮುಸೇನ, ಆಪತ್ಕಾಲ ಬಂದರೂ ಶ್ರೀಹರಿಯನ್ನು ರಕ್ಷಣಾರ್ಥ ಪ್ರಾರ್ಥಿಸುವುದಿಲ್ಲ		೮೩
ತಾನು ಪರಬ್ರಹ್ಮನೆಂಬುವುದನ್ನು ಶ್ರೀಕೃಷ್ಣ ಹೇಳಿದ್ದು	....	೮೫ ೬
ಕುಬ್ಜೆ ಎಂಬ ಸೈರಂಧ್ರಿಯ ಸ್ವರೂಪ	....	೮೭
ಪರಶುರಾಮದೇವರು ದ್ರೋಣನಿಗೆ ಅಸ್ತ್ರವಿದ್ಯೆ ಕಲಿಸಲು ನಿಮಿತ್ತ	....	೮೮
ದೇವತೆಗಳನ್ನೂ ನಾಶಮಾಡಬೇಕೆಂದು ಶ್ರೀಪರಶುರಾಮ ಯೋಚಿಸಿದ—ನಿರ್ಣಯ		೮೮
ಕುರುಪಾಂಡವರಿಗೆ ದ್ರೋಣನ ಮಗ ಅಶ್ವತ್ಥಾಮ ಸಹಪಾಠಿ, ಒಡನಾಡಿಯಾಗಿಯೂ ದ್ರೋಣನ ಪರಿಚಯವಿಲ್ಲ. ಭೀಷ್ಮನಿಗೆ ದ್ರೋಣನ ಪರಿಚಯವಿದೆ		೯೦
ಅರ್ಜುನ ಶ್ರೀಕೃಷ್ಣನಿಂದ ಶಸ್ತ್ರವಿದ್ಯೆ ಕಲಿತಿದ್ದರೂ, ಮತ್ತೆ ದ್ರೋಣನಿಂದಲೂ ಕಲಿಯಲು ಕಾರಣ		೯೦
ಅರ್ಜುನ ದ್ರೋಣನಿಂದ ಪ್ರತಿಜ್ಞಾಪೂರ್ವಕ ವಿದ್ಯೆ ಕಲಿತನು. ಭೀಮುಸೇನ ದ್ರೋಣನಿಂದ ವಿದ್ಯೆ ಕಲಿಯಲೇ ಇಲ್ಲ—ನಿರ್ಣಯ		೯೦

ವಿಷಯ	ಪುಟಸಂಖ್ಯೆ
ಅಸ್ತ್ರವಿದ್ಯಾಶಿಕ್ಷಣಕ್ಕೆ ಕರ್ಣ ಅನರ್ಹನೆಂದು ದ್ರೋಣ ತಿರಸ್ಕರಿಸಿರಲು, ಸರ್ವಜ್ಞನಾದ ಪರಶುರಾಮ, ಕರ್ಣನು ಅನರ್ಹನೆಂದು ತಿಳಿದೂ ಸಹ ವಿದ್ಯಾಭ್ಯಾಸ ಮಾಡಿಸಿದ —ನಿರ್ಣಯ	೯೧
ಕರ್ಣನ ತೊಡೆಯನ್ನು ಕೊರೆದ ಹುಳುವಿನ ಸ್ವರೂಪ ಮತ್ತು ಹುಳುವಿನಲ್ಲಿ ಇಂದ್ರನ ಪ್ರವೇಶಕ್ಕೆ ಕಾರಣ	೯೧
ಮಥುರಾಪಟ್ಟಣದ ಮೇಲೆ ಜರಾಸಂಧನು ಯುದ್ಧಕ್ಕಾಗಿ ಬಂದಿರಲು ಶ್ರೀಕೃಷ್ಣನು ಸರ್ವಶಕ್ತನಾಗಿದ್ದರೂ ಸ್ಥಳಾಂತರಕ್ಕೆ ಹೋದನು—ನಿರ್ಣಯ	೯೩
ಸ್ವಾಮಿಯು ಮೂಲ ಮತ್ತು ಅವತಾರರೂಪಗಳಿಗೆ ಭೇದವಿಲ್ಲೆಂದು ದೃಷ್ಟಾಂತ-ಪೂರ್ವಕ ನಿರ್ಣಯ	೯೩-೯೪
ಬಲರಾಮು ಕಾದಂಬರೀವೃಕ್ಷದ ಮದ್ಯವನ್ನು ಕುಡಿದದ್ದು	೯೪
ಶಲ್ಯ-ಬಾಹ್ಲೀಕರು ಸ್ವಾಮಿಯು ಭಕ್ತರಾದರೂ, ಜರಾಸಂಧನ ಪಕ್ಷದಲ್ಲಿದ್ದು ಸ್ವಾಮಿಯಮೇಲೆ ಯುದ್ಧ ಮಾಡಿದರು—ಏಕೆ	೯೫
ಬಲರಾಮನು ಈ ಮೊದಲು ಜರಾಸಂಧನನ್ನು ಜಯಿಸಿದ್ದರೂ ಅವನಿಂದಲೇ ಈಗ ಪರಾಜಿತನಾದನು—ನಿರ್ಣಯ	೯೫-೯೬
ಬಲರಾಮನು ಜರಾಸಂಧನನ್ನು ಕೊಲ್ಲಲು ಉದ್ಯುಕ್ತನಾಗಲು ವಾಯುದೇವರಿಂದ ಅಶರೀರವಾಣಿ	೯೬
ದನುಘೋಷರಾಯನ ಸ್ವರೂಪ, ಅವನಿಂದ ಪ್ರಾರ್ಥಿತನಾಗಿ ಶ್ರೀಕೃಷ್ಣ ಕರವೀರ-ಪುರಕ್ಕೆ ಹೋದುದು	೯೬-೯೭
ಶಿಶುಪಾಲ-ದಂತವಕ್ರರು ದೈತ್ಯರಾದರೂ ಜರಾಸಂಧನ ವಿರುದ್ಧ ಮಾತನಾಡಿದ್ದು ಏಕೆ	೯೮-೯೯
ಸಮುದ್ರರಾಜನ ಪುತ್ರಿ ಲಕ್ಷ್ಮೀ ಮತ್ತು ಜನಕರಾಯನ ಪುತ್ರಿ ಸೀತಾ ಇವರ ಸ್ವಯಂವರ ಸಂದರ್ಭಗಳಲ್ಲಿ ತೋರದಿದ್ದ ವಿಶ್ವರೂಪವನ್ನು ಸ್ವಾಮಿ, ರುಕ್ಮಿಣೀ ಸ್ವಯಂವರ ಸಮಯದಲ್ಲಿ ಭೀಷ್ಮಕರಾಯನಿಗೆ ತೋರಿಸಲು ಕಾರಣ	೧೦೧
ಶ್ರೀಕೃಷ್ಣನು, ಜರಾಸಂಧನ್ನ ಕೊಂದೇ ರುಕ್ಮಿಣಿಯನ್ನು ಏಕೆ ಕೊಂಡುಹೋಗಲಿಲ್ಲ	೧೦೧
ತಾನು ಶ್ರೀಕೃಷ್ಣನ ಭಕ್ತನಾಗಿದ್ದರೂ, ಗರ್ಗಾಚಾರ್ಯನು ಶ್ರೀಕೃಷ್ಣನ ಕೊಲ್ಲುವಂಥ ಮಗನ್ನ ಪಡೆಯುವುದಾಗಿ ಏಕೆ ಪ್ರತಿಜ್ಞೆ ಮಾಡಿದನು	೧೦೨
ಜರಾಸಂಧನ ಭಯದಿಂದ ಸ್ವಾಮಿ ದ್ವಾರಕಾಪಟ್ಟಣವನ್ನು ನಿರ್ಮಾಣ ಮಾಡಿದನೆ	೧೦೪
ಕಾಲಯವನನ ಕೂಡ ಯುದ್ಧ ಮಾಡುವಾಗ ಶ್ರೀಕೃಷ್ಣ ಓಡಿಹೋದನು—ನಿರ್ಣಯ	೧೦೫
ನಿದ್ದೆ ಮಾಡಿ ಕರ್ಮಲೋಪವಾಗಿದ್ದರೂ ಮುಚುಕುಂದರಾಯನಿಗೆ ಪಾಪದೋಷ ಬರಲಿಲ್ಲ	೧೦೫
ರೈವತರಾಯ ಮತ್ತು ಅವನ ಮಗಳು ವಾರುಣೀ ಕಳೆದುಹೋದ ಇಪ್ಪತ್ತೇಳು ಮಹಾಯುಗಗಳಲ್ಲಿ ಮೊದಲನೆ ಕೃತಯುಗಕ್ಕೆ ಸೇರಿದವರಾದರೂ, ಈ ಇಪ್ಪತ್ತೆಂಟನೇ ಮಹಾಯುಗದ ದ್ವಾಪರಯುಗದಲ್ಲಿ, ರಾಯು, ತನ್ನ ಮಗಳಾದ ವಾರುಣಿಯನ್ನು ಬಲರಾಮನಿಗೆ ಮದುವೆ ಮಾಡಿಕೊಡಲು ಕಾರಣ	೧೦೬-೧೦೮